ನುಕ್ರ ಣಿಕೆ

ಶ್ರೀ ಜ ಥರ ಮಾಲಾ

ತಂ

ಬ್ರ ಾ ಂ

(ಸಂಸ್ಕ ವರ ೂಡನೆ)

೦)

ವ್

ಪ್ರೆಸ್

ಮುನ್ನುಡಿ

ಬ್ರಹ್ಮಪುರಾಣದಲ್ಲಿ ಎಪ್ಪತ್ತನೆಯ ಅಧ್ಯಾಯದಿಂದ ನೂರ ಎಪ್ಪತ್ತ್ರೈದನೆಯ ಅಧ್ಯಾಯದವರಿಗೂ ಗೌತಮೀಮಹಾತ್ಮ್ಯೆಯೆಂಬ ಹೆಸರಿನ ಒಂದು ಭಾಗವಿರುವುದು. ಗೌತಮೀ ಎಂದರೆ ಗಂಗಾನದಿಯು. ಗಂಗೆಗೆ ಎರಡು ರೂಪಗಳು. ಇಕ್ಷ್ವಾಕುವಂಶದ ಭಗೀರಥಮಹಾರಾಜನು ತನ್ನ ವಂಶದ ಸಾಗರರೆಂಬ ಪಿತೃಗಳ ಉದ್ಧಾರಕ್ಕಾಗಿ ಮಹೇಶ್ವರನನ್ನು ಕುರಿತು ತಪಸ್ಸುಮಾಡಿ ಶಿವನ ಜಟೆಯಲ್ಲಿದ್ದ ಗಂಗೆಯನ್ನು ಭೂಮಿಗೆ ತಂದನೆಂದು ವಾಲ್ಮೀಕಿರಾಮಾಯಣವೇ ಮೊದಲಾದ ಗ್ರಂಥಗಳಲ್ಲಿ ಹೇಳಿರುವುದಷ್ಟೆ. ಆದರಿಂದ ಭಗೀರಥನು ತಂದ ಗಂಗೆಗೆ ಭಾಗೀರಥಿಯೆಂದು ಹೆಸರಾಯಿತು. ಇದರಂತೆಯೇ ಗೌತಮಮಹರ್ಷಿಯು ಲೋಕಜನಹಿತಕ್ಕಾಗಿ ಶಿವನನ್ನು ಪ್ರಾರ್ಥಿಸಿ ತಂದ ಗಂಗೆಗೆ ಗೌತಮೀ ಎಂದು ಹೆಸರಾಯಿತು. ಈ ಗೌತಮೀನದಿಯ ತೀರದಲ್ಲಿ ಕೋಟ್ಯನುಕೋಟಿ ತೀರ್ಥಗಳಿರುವುವೆಂದು ಈ ಪುರಾಣದಲ್ಲಿ ಹೇಳಲ್ಪಟ್ಟಿದೆ. ಅವುಗಳಲ್ಲಿ ಮುಖ್ಯವಾದ ತೀರ್ಥಗಳೂ ಆ ತೀರ್ಥಗಳಿಗೆ ಆಯಾ ಹೆಸರು ಹೇಗೆ ಬಂದವು? ಅವುಗಳ ಮಾಹಾತ್ಮ್ಯವೇನು? ಆ ತೀರ್ಥಗಳಲ್ಲಿ ಸ್ನಾನದಾನಾದಿಗಳನ್ನು ಮಾಡುವುದರಿಂದ ಬರುವ ಫಲವೇನು ? ಮುಂತಾದ ತೀರ್ಥಮಾಹಾತ್ಮ್ಯೆಯು ವಿಸ್ತಾರವಾಗಿ ವಿವರಿಸಲ್ಪಟ್ಟಿರುವುದು. ಗೌತಮೀ ಮಾಹಾತ್ಮ್ಯೆಯೆಂಬ ಬ್ರಹ್ಮಪುರಾಣದ ಈ ಭಾಗವನ್ನು ಎರಡು ಭಾಗಗಳಾಗಿ ಮಾಡಿ ಈ ಭಾಗದಲ್ಲಿಯೂ ಮುಂದಿನ ನಾಲ್ಕನೆಯ ಭಾಗದಲ್ಲಿಯೂ ಮುದ್ರಿಸಲಾಗಿದೆ.

ಲೋಕಜನರ ಹಿತಕ್ಕಾಗಿ ಉತ್ಕೃಷ್ಟವಾದ ಈ ಗ್ರಂಥವನ್ನು ಬರೆಸಿ ಪ್ರಕಟಿಸಲು ಅಪ್ಪಣೆಮಾಡಿದ ನಮ್ಮನ್ನಾಳುವ ಕರ್ನಾಟಕ ದಿವ್ಯರತ್ನಸಿಂಹಾಸನಾಧೀಶ್ವರರಾದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಬಿ., ಜಿ. ಸಿ. ಎಸ್. ಐ.,** ಮಹಾಪ್ರಭುವರ್ಯರವರಿಗೂ ಅವರ ಕುಟುಂಬಕ್ಕೂ ರಾಷ್ಟ್ರದ ಸಮಸ್ತ ಜನಗಳಿಗೂ ಪರಮೇಶ್ವರನು ಸಕಲ ಸನ್ಮಂಗಳಗಳನ್ನೂ ಇತೋಽಪ್ಯತಿಶಯವಾದ ಸಂಪದಾದ್ಯಭಿವೃದ್ಧಿಯನ್ನೂ ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ.

ಮೈಸೂರು.
ವ್ಯಯ ಸಂ॥ ಭಾದ್ರಪದ ಬ॥ ಪಂಚಮೀ,
16-9-46

ಅನುವಾದಕ:
ಹಾಸನದ ಪಂಡಿತ ವೆಂಕಟರಾವ್.
ಆಸ್ಥಾನ ವಿದ್ವಾನ್

ವಿಷಯಾನುಕ್ರಮಣಿಕೆ.

ಪುಟಸಂಖ್ಯೆ

ಪುಟಸಂಖ್ಯೆ

ಪುಟಸಂಖ್ಯೆ

ಪುಟಸಂಖ್ಯೆ

ಪುಟಸಂಖ್ಯೆ

ಎಂಭತ್ತಾರನೆಯ ಅಧ್ಯಾಯವು—

ವಿಶ್ವಧರನೆಂಬ ವೈಶ್ಯನು ತನ್ನ ಮಗನು ಸತ್ತುದಕ್ಕಾಗಿ ವ್ಯಥೆಪಡುವುದು. ಯಮನು ಗೌತಮೀನದಿಗೆ ತೆರಳುವುದು. ಭೂಮಿಯು ಇಂದ್ರನ ಬಳಿಗೆ ಹೋಗಿ ಅವನೊಡನೆ ಸಂಭಾಷಣೆ ಮಾಡುವುದು. ಯಮನನ್ನು ಕರೆತರುವಂತೆ ಇಂದ್ರನು ಸಿದ್ಧರನ್ನೂ ಕಿನ್ನರರನ್ನೂ ಕಳುಹಿಸುವುದು. ಯಮನು ತಪಸ್ಸಿಗಾಗಿ ಗೌತಮಿಯ ತೀರದಲ್ಲಿರುವನೆಂದು ಸೂರ್ಯನು ಹೇಳಲು, ಇಂದ್ರನು ಆ ಯಮನ ತಪೋಭಂಗಕ್ಕಾಗಿ ಅಪ್ಸರೆಯರನ್ನು ಕಳುಹಿಸಿದುದು. ಚಕ್ರತೀರ್ಥವೆಂಬ ಹೆಸರು ಬರಲು ಕಾರಣವು. ಪ್ರಜಾನಾಶರೂಪವಾದ ನಿನ್ನ ಕರ್ತವ್ಯದಲ್ಲಿ ನಿರತನಾಗೆಂದು ಸೂರ್ಯನು ಉಪದೇಶಿಸಲು) ಈ ನಿಂದ್ಯಕರ್ಮವನ್ನು ನಾನು ಮಾಡಲಾರೆನೆಂದು ಯಮನು ಹೇಳಿದುದನ್ನು ಕೇಳಿ ಸೂರ್ಯನು ಮತ್ತೊಮ್ಮೆ ಆ ವಿಷಯವಾಗಿ ಮಾತಾಡಿದನಂತರ ಅವರಿಬ್ಬರೂ ತಮ್ಮ ತಮ್ಮ ನಿವಾಸಗಳಿಗೆ ಹಿಂದಿರುಗಿದುದು. 162

ಎಂಭತ್ತೇಳನೆಯ ಅಧ್ಯಾಯವು—

ಇವಳಿಗೆ ಯೌವನವುಂಟಾಗುವವರೆಗೂ ನಿನ್ನ ಸಂರಕ್ಷಿಸಿಕೊಂಡಿದ್ದು ಬಳಿಕ ನನ್ನ ಬಳಿಗೆ ಕರೆದುತಾರೆಂದು ಹೇಳಿ ಬ್ರಹ್ಮನು ಅಹಲ್ಯೆಯನ್ನು ಗೌತಮನ ವಶಕ್ಕೆ ಇತ್ತುದು. ಪ್ರಪಂಚವನ್ನು ಯಾರು ಪ್ರದಕ್ಷಿಣೆಮಾಡಿ ನನ್ನ ಬಳಿಗೆ ಮೊದಲು ಬರುವರೋ ಅವರಿಗೆ ಈ ಕನ್ಯೆಯನ್ನು ದಾನಮಾಡುವೆನೆಂದು ಬ್ರಹ್ಮನು ಪ್ರತಿಜ್ಞೆ ಮಾಡಿದುದು. ಅಹಲ್ಯೆಯನ್ನು ಪಡೆಯಲು ಭೂಪ್ರದಕ್ಷಿಣಕ್ಕಾಗಿ ದೇವತೆಗಳೆಲ್ಲರೂ ಹೊರಟದುದು. ಗೌತಮನು ಅಹಲ್ಯೆಯನ್ನು ಪಡೆದ ಬಗೆ. ಅವರಿಬ್ಬರ ವಿವಾಹವು ಜರುಗಿದ ಮೇಲೆ ದೇವತೆಗಳು ಬಂದುದು. ಇಂದ್ರನು ಬ್ರಾಹ್ಮಣವೇಷದಿಂದ ಗೌತಮಾಶ್ರಮವನ್ನು ಸೇರಿ ಆ ಮುನಿಯಿಲ್ಲದ ವೇಳೆಯಲ್ಲಿ ಅಹಲ್ಯೆಯೊಡನೆ ಬೆರೆತುದು. ಆ ವೇಳೆಗೆ ಗೌತಮಮಹರ್ಷಿಯು ಶಿಷ್ಯರೊಡನೆ ಆಶ್ರಮಕ್ಕೆ ಬಂದುದನ್ನು ಕಂಡು ಅಹಲ್ಯೆಯು ನೀನಾ

ನೂರಹತ್ತನೆಯ ಅಧ್ಯಾಯವು--

ದಧೀಚಿ ಲೋಪಾಮುದ್ರೆಯರ ವರ್ಣನೆ. ದೇವತೆಗಳು ದಧೀಚಿಯ ಆಶ್ರಮಕ್ಕೆ ಬಂದು ಆತನ ಒಪ್ಪಿಗೆಯನ್ನು ಪಡೆದು ತಮ್ಮ ಶಸ್ತ್ರ ಗಳನ್ನು ಇಟ್ಟುಹೋದುದು. ದೈತ್ಯಭಯದಿಂದ ದಧೀಚಿಯು ಆ ಅಸ್ತ್ರಗಳ ತೇಜಸ್ಸನ್ನು ನುಂಗಿಬಿಟ್ಟುದುದರಿಂದ ದೈತ್ಯರ ಬಲವು ಹೆಚ್ಚಿದಂತಾಗಿ, ದೇವತೆಗಳು ಕಳವಳಗೊಂಡು ಅಲ್ಲಿಗೆ ಬಂದು ತಮ್ಮ ಅಸ್ತ್ರಗಳನ್ನು ಕೊಡುವಂತೆ ಪ್ರಾರ್ಥಿಸಲು, ಆ ದಧೀಚಿಯು ತನ್ನ ಮೂಳೆಗಳನ್ನೇ ಅಸ್ತ್ರಗಳನ್ನು ಮಾಡಿಕೊಳ್ಳುವಂತೆ ಕೊಟ್ಟುದು. ದೇವತೆಗಳು ಅವುಗಳಿಂದ ತಮ್ಮ ತಮ್ಮ ಅಸ್ತ್ರ ಗಳನ್ನು ಮಾಡಿಕೊಂಡುದು. ದಧೀಚಿಪತ್ನಿಯಾದ ಪ್ರಾತಿ ಥೇಯಿಯು ಆಶ್ರಮಕ್ಕೆ ಬಂದು ಗಂಡನನ್ನು ಕಾಣದೆ ಅಗ್ನಿಯಿಂದ ಸುದ್ದಿಯೆಲ್ಲವನ್ನೂ ತಿಳಿದು ಅವನೆಷ್ಟು ಸಮಾಧಾನ ಪಡಿಸಿದರೂ ಕೇಳದೆ ತನ್ನ ಬಸುರಿನೊಳಗೆ ಇದ್ದ ಮಗನನ್ನು ಬಲಾತ್ಕಾರದಿಂದ ಹೊರತೆಗೆದು ತಾನು ಅಗ್ನಿಯನ್ನು ಪ್ರವೇಶಿಸಿದುದು. ಆಗ ಆಶ್ರಮ ವೃಕ್ಷಗಳು ಗೋಳಿಟ್ಟುದು. ದಧೀಚಿಪುತ್ರನಾದ ಪಿಪ್ಪ ಲಾದನು ಅಮೃತವನ್ನು ಪ್ರಾಶನಮಾಡಿ, ಆಶ್ರಮವೃಕ್ಷಗಳಿಂದ ತನ್ನ ಮಾತಾಪಿತೃಗಳ ವೃತ್ತಾಂತವನ್ನರಿತು, ಚಂದ್ರನ ಬಳಿ ವಿದ್ಯೆಯನ್ನು ಕಲಿತು ಆತನ ಅಪ್ಪಣೆಯಂತೆ ಶಿವನನ್ನು ಸ್ತೋತ್ರ ಮಾಡಿ ದೇವತೆಗಳ ವಿನಾಶವುಂಟಾಗುವಂತೆ ವರವನ್ನು ಪ್ರಾರ್ಥಿ ಸಲು ಆಗ ಆತನ ಅಪ್ಪಣೆಯಂತೆ ತಪಸ್ಸುಮಾಡಿ, ಆ ಶಿವನ ಫಾಲನೇತ್ರವನ್ನು ಸಂದರ್ಶಿಸಿದುದು. ಆ ಫಾಲನೇತ್ರದಿಂದ ಹುಟ್ಟಿದ ಕೃತ್ಯೆಯು ದೇವತೆಗಳ ವಿನಾಶಕ್ಕೆ ಅಪ್ಪಣೆಕೊಡುವಂತೆ ಪಿಪ್ಪಲಾದನನ್ನು ಪ್ರಾರ್ಥಿಸಿದುದು. ಆ ಕೃತ್ಯೆಯ ಅಗ್ನಿಯಿಂದ ಭೀತರಾದ ದೇವತೆಗಳು ಶಿವನ ಬಳಿಗೆ ಬಂದು ಸ್ತೋತ್ರಮಾಡಿ ಆತನ ಬಳಿಯೇ ಇದ್ದುಬಿಡಲು, ಶಿವನು ಪಿಪ್ಪಲಾದನನ್ನು ಸಮಾಧಾನತಾಳುವಂತೆ ಹೇಳಿ ಅವನಿಗೆ ವರಗಳನ್ನಿತ್ತುದು.

ಪುಟಸಂಖ್ಯೆ

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಮೂರನೆಯ ಭಾಗವು

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಸರ್ವೇಷಾಂ ಚೈವ ತೀರ್ಥಾನಾಂ ಕ್ಷೇತ್ರಾಣಾಂ ಚ ದ್ವಿಜೋತ್ತಮಾಃ ।
ಜಪಹೋಮವ್ರತಾನಾಂ ಚ ತಪೋದಾನಫಲಾನಿ ಚ ॥ ೧ ॥

ನ ತತ್ಪಶ್ಯಾಮಿ ಭೋ ವಿಪ್ರಾ ಯತ್ತೇನ ಸದೃಶಂ ಭುವಿ ।
ಕಿಂ ಚಾತ್ರ ಬಹುನೋಕ್ತೇನ ಭಾಷಿತೇನ ಪುನಃ ಪುನಃ ॥ ೨ ॥

ಸತ್ಯಂ ಸತ್ಯಂ ಪುನಃ ಸತ್ಯಂ ಕ್ಷೇತ್ರಂ ತತ್ಪರಮಂ ಮಹತ್ ।
ಪುರುಷಾಖ್ಯಂ ಸಕೃದ್ದೃಷ್ಟ್ವಾ ಸಾಗರಾಂಭಃಸಮಾಪ್ಲುತಂ ॥ ೩ ॥

ಎಪ್ಪತ್ತನೆಯ ಅಧ್ಯಾಯವು

೧. ಬ್ರಹ್ಮನು ಹೇಳಲುಪಕ್ರಮಿಸಿದನು—ಎಲೈ ಮುನಿಗಳೇ, ಭೂಮಿಯಲ್ಲಿರುವ ಎಲ್ಲಾ ತೀರ್ಥಕ್ಷೇತ್ರಗಳೂ, ಜಪಹೋಮವ್ರತತಪಸ್ಸುದಾನಗಳ ಫಲಗಳೂ ಸಹ ಆ ಪುರುಷೋತ್ತಮಕ್ಷೇತ್ರಕ್ಕೆ ಸದೃಶವಾಗಲಾರವು.

೨. ಹೆಚ್ಚುಮಾತನಾಡಿ ಪ್ರಯೋಜನವೇನು ? ಆ ಪುರುಷೋತ್ತಮಕ್ಷೇತ್ರವು ಸರ್ವೋತ್ತಮವಾದುದು, ಇದು ಸತ್ಯವಾದಮಾತು. ಎಂದಿಗೂ ಸಟೆಯಲ್ಲ.

೩. ಸಮುದ್ರಜಲದಿಂದ ಸುತ್ತುವರೆಯಲ್ಪಟ್ಟ ಪುರುಷೋತ್ತಮಕ್ಷೇತ್ರವನ್ನು ಒಂದುಬಾರಿ ದರ್ಶನಮಾಡಿದವನೂ ಬ್ರಹ್ಮವಿದ್ಯೆಯುನ್ನು ತಿಳಿದವನೂ ಸಮಾನರು. ಅವರೀರ್ವರಿಗೂ ತಿರುಗಿ ಗರ್ಭವಾಸವಿಲ್ಲ. ಜನ್ಮವಿಲ್ಲ.

ಬ್ರಹ್ಮವಿದ್ಯಾಂ ಸಕೃಜ್ಜ್ಞಾತ್ವಾ ಗರ್ಭವಾಸೋ ನ ವಿದ್ಯತೇ ।
ಹರೇಃ ಸಂನಿಹಿತೇ ಸ್ಥಾನ ಉತ್ತಮೇ ಪುರುಷೋತ್ತಮೇ ॥ ೪ ॥

ಸಂವತ್ಸರಮುಪಾಸೀತ ಮಾಸಮಾತ್ರಮಥಾಪಿ ವಾ ।
ತೇನ ಜಪ್ತಂ ಹುತಂ ತೇನ ತೇನ ತಪ್ತಂ ತಪೋ ಮಹತ್ ॥ ೫ ॥

ಸ ಯಾತಿ ಪರಮಂ ಸ್ಥಾನಂ ಯತ್ರ ಯೋಗೇಶ್ವರೋ ಹರಿಃ ।
ಭುಕ್ತ್ವಾ ಭೋಗಾನ್ವಿಚಿತ್ರಾಂಶ್ಚ ದೇವಯೋಷಿತ್ಸಮನ್ವಿತಃ ॥ ೬ ॥

ಕಲ್ಪಾಂತೇ ಪುನರಾಗತ್ಯ ಮರ್ತ್ಯಲೋಕೇ ನರೋತ್ತಮಃ ।
ಜಾಯತೇ ಯೋಗಿನಾಂ ವಿಪ್ರಾ ಜ್ಞಾನಜ್ಞೇಯೋದ್ಯತೋ ಗೃಹೇ ॥ ೭ ॥

ಸಂಪ್ರಾಪ್ಯ ವೈಷ್ಣವಂ ಯೋಗಂ ಹರೇಃ ಸ್ವಚ್ಛಂದತಾಂ ವ್ರಜೇತ್ ।
ಕಲ್ಪವೃಕ್ಷಸ್ಯ ರಾಮಸ್ಯ ಕೃಷ್ಣಸ್ಯ ಭದ್ರಯಾ ಸಹ ॥ ೮ ॥

---

೪. ಹರಿಯು ಸದಾ ನೆಲಸಿರುವ ಪುರುಷೋತ್ತಮಕ್ಷೇತ್ರದಲ್ಲಿ ಒಂದು ವರ್ಷದವರೆಗೆ ವಾಸವಾಗಿರಬೇಕು, ಅಥವಾ ಒಂದು ತಿಂಗಳವರೆಗಾದರೂ ವಾಸ ಮಾಡಬೇಕು.

೫. ಹಾಗೆ ವಾಸಮಾಡಿದವನು ಇನ್ನಾವ ಜಪವನ್ನೂ ಮಾಡಬೇಕಾಗಿಲ್ಲ, ಹೋಮಮಾಡಬೇಕಾಗಿಲ್ಲ, ತಪಸ್ಸುಮಾಡಬೇಕಾಗಿಲ್ಲ, ಎಲ್ಲವನ್ನೂ ಮಾಡಿದ ಫಲವು ಲಭಿಸುವುದು. ಯೋಗರಾಜನಾದ ಹರಿಯು ಪ್ರತ್ಯಕ್ಷವಾಗಿರುವ ವಿಷ್ಣುಲೋಕವನ್ನೇ ಅವನು ಪಡೆಯುವನು.

೬–೭. ಆ ಲೋಕದಲ್ಲಿ ಆ ಭಕ್ತನು ಅಪ್ಸರೆಯರೊಡನೆ ಬೇಕಾದ ಭೋಗಗಳನ್ನನುಭವಿಸುತ್ತಾ ಒಂದು ಕಲ್ಪವು ಮುಗಿದಮೇಲೆ ಭೂಲೋಕಕ್ಕೆ ತಿರುಗಿ ಬಂದು ಯೋಗಿಗಳ ಕುಲದಲ್ಲಿ ಉತ್ತಮಪುರುಷನಾಗಿ ಜನಿಸುವನು. ಕೊನೆಯಲ್ಲಿ ವಿಷ್ಣುವಿನ ಜ್ಞಾನಯೋಗಾಭ್ಯಾಸದಿಂದ ಮುಕ್ತಿಯನ್ನು ಪಡೆಯುವನು.

೮-೧೧. ಎಲೈ ಮುನಿಗಳೇ, ಈಗ ನಿಮಗೆ ವಟವೃಕ್ಷ, ಬಲರಾಮ ಶ್ರೀಕೃಷ್ಣ ಸುಭದ್ರೆ ಇವರ ಮಾಹಾತ್ಮ್ಯವನ್ನೂ, ಮಾರ್ಕಂಡೇಯ ಇಂದ್ರದ್ಯು

ಮಾರ್ಕಂಡೇಯೇಂದ್ರದ್ಯುಮ್ನಸ್ಯ ಮಾಹಾತ್ಮ್ಯಂ ಮಾಧವಸ್ಯ ಚ ।
ಸ್ವರ್ಗದ್ವಾರಸ್ಯ ಮಾಹಾತ್ಮ್ಯಂ ಸಾಗರಸ್ಯ ವಿಧಿಃ ಕ್ರಮಾತ್ ॥ ೯ ॥

ಮಾರ್ಜನಸ್ಯ ಯಥಾಕಾಲೇ ಭಾಗೀರಥ್ಯಾಃ ಸಮಾಗಮಂ ।
ಸರ್ವಮೇತನ್ಮಯಾ ಖ್ಯಾತಂ ಯತ್ಪರಂ ಶ್ರೋತುಮಿಚ್ಛಥ ॥ ೧೦ ॥

ಇಂದ್ರದ್ಯುಮ್ನಸ್ಯ ಮಾಹಾತ್ಮ್ಯಮೇತಚ್ಚ ಕಥಿತಂ ಮಯಾ ।
ಸರ್ವಾಶ್ಚರ್ಯಂ ಸಮಾಖ್ಯಾತಂ ರಹಸ್ಯಂ ಪುರುಷೋತ್ತಮಂ ।
ಪುರಾಣಂ ಪರಮಂ ಗುಹ್ಯಂ ಧನ್ಯಂ ಸಂಸಾರಮೋಚನಂ ॥ ೧೧ ॥

॥ ಮುನಯ ಊಚುಃ ॥

ನಹಿ ನಸ್ತೃಪ್ತಿರಸ್ತೀಹ ಶೃಣ್ವತಾಂ ತೀರ್ಥವಿಸ್ತರಂ ।
ಪುನರೇವ ಪರಂ ಗುಹ್ಯಂ ವಕ್ತುಮರ್ಹಸ್ಯಶೇಷತಃ ।
ಪರಂ ತೀರ್ಥಸ್ಯ ಮಾಹಾತ್ಮ್ಯಂ ಸರ್ವತೀರ್ಥೋತ್ತಮೋತ್ತಮಂ ॥ ೧೨ ॥

ಮ್ನರ ಮಹಿಮೆಯನ್ನೂ, ಶ್ರೀಹರಿಯ ಮಹಿಮೆಯನ್ನೂ ಹೇಳಿರುವೆನು. ಸ್ವರ್ಗ ದ್ವಾರವಾದ ದೇಹತ್ಯಾಗದ ಮಾಹಾತ್ಮ್ಯವನ್ನೂ ಸಮುದ್ರಸ್ನಾನದ ವಿಧಿ, ಮತ್ತು ಮಾಹಾತ್ಮ್ಯವನ್ನೂ ಗಂಗಾಸಂಗಮದ ಮಾಹಾತ್ಮ್ಯವನ್ನೂ ಹೇಳಿರುವೆನು. ಪುರುಷೋತ್ತಮಕ್ಷೇತ್ರಕ್ಕೆ ಸಂಬಂಧಪಟ್ಟ ಇಂದ್ರದ್ಯುಮ್ನಚರಿತೆಯನ್ನೂ ಹೇಳಿರುವೆನು. ಅತಿ ರಹಸ್ಯವೂ ಅನಾದಿಯೂ ಮಂಗಳಪ್ರದವೂ ಸಂಸಾರದುಃಖವನ್ನು ಹೋಗಲಾಡಿಸುವುದೂ ಆದಂತಹ ಪುರುಷೋತ್ತಮಕ್ಷೇತ್ರದ ಮಾಹಾತ್ಮ್ಯವನ್ನು ವಿಸ್ತಾರವಾಗಿ ವರ್ಣಿಸಿರುವೆನು. ಈಗ ನೀವು ಮತ್ತೇನನ್ನು ಕೇಳಲಿಚ್ಛಿಸುವಿರಿ ? ಕೇಳಿ ಎನ್ನಲು,

೧೨. ಮುನಿಗಳಿಂತೆಂದರು—ತೀರ್ಥವರ್ಣನೆಯನ್ನು . ಕೇಳಿದಷ್ಟೂ ನಮಗೆ ತೃಪ್ತಿಯಿಲ್ಲ. ಇನ್ನೂ ಕೇಳಬೇಕೆಂದೆನಿಸುವುದು. ಆದುದರಿಂದ ಶ್ರೇಷ್ಠವಾದ ತೀರ್ಥಮಾಹಾತ್ಮ್ಯವನ್ನು ಇನ್ನೂ ವಿಸ್ತಾರವಾಗಿ ಹೇಳು ಎಂದರು.

॥ ಬ್ರಹ್ಮೋವಾಚ ॥

ಇಮಮೇವ ಪುರಾ ಪ್ರಶ್ನಂ ಪೃಷ್ಟೋಽಸ್ಮಿ ದ್ವಿಜಸತ್ತಮಾಃ ।
ನಾರದೇನ ಪ್ರಯತ್ನೇನ ತದಾ ತಂ ಪ್ರೋಕ್ತವಾನಹಂ ॥ ೧೩ ॥

॥ ನಾರದ ಉವಾಚ ॥

ತಪಸೋ ಯಜ್ಞದಾನಾನಾಂ ತೀರ್ಥಾನಾಂ ಪಾವನಂ ಸ್ಮೃತಂ ।
ಸರ್ವಂ ಶ್ರುತಂ ಮಯಾ ತ್ವತ್ತೋ ಜಗದ್ಯೋನೇ ಜಗತ್ಪತೇ ॥ ೧೪ ॥

ಕಿಯಂತಿ ಸಂತಿ ತೀರ್ಥಾನಿ ಸ್ವರ್ಗಮರ್ತ್ಯರಸಾತಲೇ ।
ಸರ್ವೇಷಾಮೇವ ತೀರ್ಥಾನಾಂ ಸರ್ವದಾ ಕಿಂ ವಿಶಿಷ್ಯತೇ ॥ ೧೫ ॥

॥ ಬ್ರಹ್ಮೋವಾಚ ॥

ಚತುರ್ವಿಧಾನಿ ತೀರ್ಥಾನಿ ಸ್ವರ್ಗೇ ಮರ್ತ್ಯೇ ರಸಾತಲೇ ।
ದೈವಾನಿ ಮುನಿಶಾರ್ದೂಲ ಆಸುರಾಣ್ಯಾರುಷಾಣಿ ಚ ॥ ೧೬ ॥

---

೧೩. ಬ್ರಹ್ಮನಿಂತೆಂದನು—ಎಲೈ ಬ್ರಾಹ್ಮಣೋತ್ತಮರೇ, ನೀವು ಕೇಳಿದ ಇದೇ ಪ್ರಶ್ನೆಯನ್ನೇ ಹಿಂದೆ ನಾರದಮುನಿಯು ಕೇಳಿದ್ದನು. ಆಗ ಪ್ರಯತ್ನದಿಂದ ಆ ಮುನಿಗೆ ಈ ವಿಷಯವನ್ನೆಲ್ಲಾ ವಿವರಿಸಿದ್ದೆನು. ಅದನ್ನೇ ನಿಮಗೆ ಹೇಳುವೆನು.

೧೪. ನಾರದನು ಕೇಳಿದನು—ಜಗತ್ಕರ್ತನೂ ಜಗದೊಡೆಯನೂ ಆದ ಓ ಬ್ರಹ್ಮದೇವ, ತಪಸ್ಸು, ಯಜ್ಞ, ದಾನ, ಇವುಗಳ ವಿಧಿಯನ್ನೂ ತೀರ್ಥ ಯಾತ್ರೆಯ ವಿಧಿಯನ್ನೂ ನಾನು ನಿನ್ನಿಂದ ಕೇಳಿ ತಿಳಿದೆನು.

೧೫. ಸ್ವರ್ಗಮರ್ತ್ಯಪಾತಾಳಗಳಲ್ಲಿ ಎಷ್ಟು ತೀರ್ಥಗಳಿರುವುವು? ಎಲ್ಲಾ ತೀರ್ಥಗಳೂ ಎಲ್ಲಾ ಕಾಲದಲ್ಲೂ ಶ್ರೇಷ್ಠವಾದುವುಗಳೇ? ಇದರ ವಿಚಾರ ವೇನು? ಹೇಳಬೇಕೆನಲು,

೧೬. ಬ್ರಹ್ಮನು ಹೇಳಿದನು—ಎಲೈ ನಾರದಮುನಿ, ಮೂರು ಲೋಕ ಗಳಲ್ಲಿ ದೈವತೀರ್ಥ, ಸುರತೀರ್ಥ, ಆರ್ಷತೀರ್ಥ, ಮಾನುಷತೀರ್ಥಗಳೆಂಬ ನಾಲ್ಕು ಬಗೆಯ ತೀರ್ಥಗಳು ಪ್ರಸಿದ್ಧವಾಗಿರುವುವು.

ಮಾನುಷಾಣಿ ತ್ರಿಲೋಕೇಷು ವಿಖ್ಯಾತಾನಿ ಸುರಾದಿಭಿಃ ।
ಮಾನುಷೇಭ್ಯಶ್ಚ ತೀರ್ಥೇಭ್ಯ ಆರ್ಷಂ ತೀರ್ಥಮನುತ್ತಮಂ ॥ ೧೭ ॥

ಆರ್ಷೇಭ್ಯಶ್ಚೈವ ತೀರ್ಥೇಭ್ಯ ಆಸುರಂ ಬಹುಪುಣ್ಯದಂ ।
ಆಸುರೇಭ್ಯಸ್ತಥಾ ಪುಣ್ಯಂ ದೈವಂ ತತ್ಸಾರ್ವಕಾಮಿಕಂ ॥ ೧೮ ॥

ಬ್ರಹ್ಮವಿಷ್ಣುಶಿವೈಶ್ಚೈವ ನಿರ್ಮಿತಂ ದೈವಮುಚ್ಯತೇ ।
ತ್ರಿಭ್ಯೋ ಯದೇಕಂ ಜಾಯೇತ ತಸ್ಮಾನ್ನಾತಃ ಪರಂ ವಿದುಃ ॥ ೧೯ ॥

ತ್ರಯಾಣಾಮಪಿ ಲೋಕಾನಾಂ ತೀರ್ಥಂ ಮೇಧ್ಯಮುದಾಹೃತಂ ।
ತತ್ರಾಪಿ ಜಾಂಬವಂ ದ್ವೀಪಂ ತೀರ್ಥಂ ಬಹುಗುಣೋದಯಂ ॥ ೨೦ ॥

ಜಾಂಬವೇ ಭಾರತಂ ವರ್ಷಂ ತೀರ್ಥಂ ತ್ರೈಲೋಕ್ಯವಿಶ್ರುತಂ ।
ಕರ್ಮಭೂಮಿರ್ಯತಃ ಪುತ್ರ ತಸ್ಮಾತ್ತೀರ್ಥಂ ತದುಚ್ಯತೇ ॥ ೨೧ ॥

೧೭-೧೮. ಮಾನುಷತೀರ್ಥಕ್ಕಿಂತಲೂ ಆರ್ಷತೀರ್ಥವು ಉತ್ತಮವಾದುದು, ಆರ್ಷತೀರ್ಥಕ್ಕಿಂತ ಆಸುರತೀರ್ಥವು ಉತ್ತಮವಾದುದು, ಆಸುರತೀರ್ಥಕ್ಕಿಂತ ದೈವತೀರ್ಥವು ಉತ್ತಮವಾದುದು, ಸಕಲಕಾಮಗಳೂ ದೈವತೀರ್ಥದಿಂದ ಲಭಿಸುವುವು.

೧೯. ಬ್ರಹ್ಮವಿಷ್ಣುಮಹೇಶ್ವರರು ನಿರ್ಮಿಸಿದ ತೀರ್ಥವು ದೈವತೀರ್ಥವು. ಆ ಮೂರು ಜನಗಳೂ ಸೇರಿ ನಿರ್ಮಿಸಿದ ತೀರ್ಥವು ಸರ್ವೋತ್ತಮವಾದುದು, ಮಹಾಪವಿತ್ರವಾದುದು.

೨೦-೨೧. ಅದರಲ್ಲಿಯೂ ಜಂಬೂದ್ವೀಪವು ಮಹಾಪವಿತ್ರವಾದ ತೀರ್ಥಕ್ಷೇತ್ರವು. ಜಂಬೂದ್ವೀಪದಲ್ಲಿ ಭರತಖಂಡವು ಮೂರು ಲೋಕಗಳಗಲ್ಲಿ ಶ್ರೇಷ್ಠವಾದ ತೀರ್ಥವು. ಅದು ಕರ್ಮಭೂಮಿಯಾದುದರಿಂದ ತೀರ್ಥಕ್ಷೇತ್ರಗಳ ನೆಲೆವೀಡಾಗಿರುವುದು.

ತತ್ರೈವ ಯಾನಿ ತೀರ್ಥಾನಿ ಯಾನ್ಯುಕ್ತಾನಿ ಮಯಾ ತವ ।
ಹಿಮವದ್ವಿಂಧ್ಯಯೋರ್ಮಧ್ಯೇ ಷಣ್ಣದ್ಯೋ ದೇವಸಂಭವಾಃ ॥ ೨೨ ॥

ತಥೈವ ದೇವಜಾ ಬ್ರಹ್ಮನ್ದಕ್ಷಿಣಾರ್ಣವವಿಂಧ್ಯಯೋಃ ।
ಏತಾ ದ್ವಾದಶ ನದ್ಯಸ್ತು ಪ್ರಾಧಾನ್ಯೇನ ಪ್ರಕೀರ್ತಿತಾಃ ॥ ೨೩ ॥

ಅಭಿಸಂಪೂಜಿತಂ ಯಸ್ಮಾದ್ಭಾರತಂ ಬಹುಪುಣ್ಯದಂ ।
ಕರ್ಮಭೂಮಿರತೋ ದೇವೈರ್ವರ್ಷಂ ತಸ್ಮಾತ್ಪ್ರಕೀರ್ತಿತಂ ॥ ೨೪ ॥

ಆರ್ಷಾಣಿ ಚೈವ ತೀರ್ಥಾನಿ ದೇವಜಾನಿ ಕ್ವಚಿತ್ಕ್ವಚಿತ್ ।
ಆಸುರೈರಾವೃತಾನ್ಯಾಸಂಸ್ತದೇವಾಸುರಮುಚ್ಯತೇ ॥ ೨೫ ॥

ದೈವೇಷ್ವೇವ ಪ್ರದೇಶೇಷು ತಪಸ್ತಪ್ತ್ವಾ ಮಹರ್ಷಯಃ ।
ದೈವಪ್ರಭಾವಾತ್ತಪಸ ಆರ್ಷಾಣ್ಯಪಿ ಚ ತಾನ್ಯಪಿ ॥ ೨೬ ॥

---

೨೨. ಆ ಭಾರತದಲ್ಲಿಯೇ ನಾನು ಹೇಳಿದ ಶ್ರೇಷ್ಠತೀರ್ಥಗಳೆಲ್ಲವೂ ಇರುವುವು. ಹಿಮಾಲಯ ವಿಂಧ್ಯಗಿರಿಗಳ ಮಧ್ಯದಲ್ಲಿರುವ ಆರು ನದಿಗಳೂ, ದೇವತೆಗಳು ನಿರ್ಮಿಸಿದ ಶ್ರೇಷ್ಠತೀರ್ಥಗಳು.

೨೩. ಮತ್ತು ದಕ್ಷಿಣಸಾಗರವಿಂಧ್ಯಗಿರಿಗಳ ಮಧ್ಯದೇಶದಲ್ಲಿ ಹರಿಯುವ ಆರು ನದಿಗಳೂ ದೇವನಿರ್ಮಿತವಾದುವುಗಳು. ಈ ಹನ್ನೆರಡು ನದಿಗಳು ಪ್ರಧಾನವಾದುವು.

೨೪. ಹೀಗೆ ಭಾರತಭೂಮಿಯು ಪವಿತ್ರವಾದುದರಿಂದಲೂ ಪುಣ್ಯಪ್ರದವಾದುದರಿಂದಲೂ ದೇವತೆಗಳು ಅದನ್ನು ಕರ್ಮಭೂಮಿಯೆಂದು ಕರೆದಿರುವರು.

೨೫. ಕೆಲವೆಡೆ ಆರ್ಷತೀರ್ಥಗಳೂ, ದೈವತೀರ್ಥಗಳೂ ಇರುವುವು. ಅಸುರರಿಂದ ತುಂಬಿರುವ ತೀರ್ಥಗಳಿಗೆ ಆಸುರತೀರ್ಥಗಳೆಂದು ಹೆಸರು.

೨೬. ದೇವತಾಸ್ಥಳಗಳಲ್ಲೂ ಮಹರ್ಷಿಗಳು ತಪಸ್ಸನ್ನು ಮಾಡಿ ಸಿದ್ಧಿಯನ್ನು ಪಡೆದಿರುವರು, ಆ ಸ್ಥಳಗಳಿಗೆ ಆರ್ಷತೀರ್ಥಗಳೆಂದು ಹೆಸರು.

ಆತ್ಮನಃ ಶ್ರೇಯಸೇ ಮುಕ್ತ್ಯೈ ಪೂಜಾಯೈ ಭೂತಯೇಽಥವಾ ।
ಆತ್ಮನಃ ಫಲಭೂತ್ಯರ್ಥಂ ಯಶಸೋಽವಾಪ್ತಯೇ ಪುನಃ ॥ ೨೭ ॥

ಮಾನುಷೈಃ ಕಾರಿತಾನ್ಯಾಹುರ್ಮಾನುಷಾಣೀತಿ ನಾರದ ।
ಏವಂ ಚತುರ್ವಿಧೋ ಭೇದಸ್ತೀರ್ಥಾನಾಂ ಮುನಿಸತ್ತಮ ॥ ೨೮ ॥

ಭೇದಂ ನ ಕಶ್ಚಿಜ್ಜಾನಾತಿ ಶ್ರೋತುಂ ಯುಕ್ತೋಽಸಿ ನಾರದ ।
ಬಹವಃ ಪಂಡಿತಂಮನ್ಯಾಃ ಶೃಣ್ವಂತಿ ಕಥಯಂತಿ ಚ ।
ಸುಕೃತೀ ಕೋಽಪಿ ಜಾನಾತಿ ವಕ್ತುಂ ಶ್ರೋತುಂ ನಿಜೈರ್ಗುಣೈಃ ॥ ೨೯ ॥

॥ ನಾರದ ಉವಾಚ ॥

ತೇಷಾಂ ಸ್ವರೂಪಂ ಭೇದಂ ಚ ಶ್ರೋತುಮಿಚ್ಛಾಮಿ ತತ್ತ್ವತಃ ।
ಯಚ್ಛ್ರುತ್ವಾ ಸರ್ವಪಾಪೇಭ್ಯೋ ಮುಚ್ಯತೇ ನಾತ್ರ ಸಂಶಯಃ ॥ ೩೦ ॥

---

೨೭. ಮನುಷ್ಯರು ತಮ್ಮ ಶ್ರೇಯಸ್ಸಿಗಾಗಿಯೂ, ಮುಕ್ತಿಗಾಗಿಯೂ ದೇವಪೂಜೆಗಾಗಿಯೂ, ಐಶ್ವರ್ಯ ಇತರ ಫಲಗಳು, ಯಶಸ್ಸು ಮುಂತಾದುವುಗಳ ಸಿದ್ಧಿಗಾಗಿ ಕೆಲವು ತೀರ್ಥಗಳನ್ನು ನಿರ್ಮಿಸಿರುವರು. ಅವು ಮಾನುಷತೀರ್ಥಗಳೆನಿಸುವುವು.

೨೮. ಎಲೈ ನಾರದ, ತೀರ್ಥಗಳು ಈರೀತಿ ನಾಲ್ಕು ವಿಧವಾಗಿರುವುವು. ಈ ಭೇದಗಳನ್ನು ಯಾರೂ ತಿಳಿದಿಲ್ಲ. ಆದುದರಿಂದ ನೀನು ಕೇಳಿ ಸರಿಯಾಗಿ ತಿಳಿದುಕೊಳ್ಳಬೇಕು.

೨೯. ತಾವು ಪಂಡಿತರೆಂದು ಗರ್ವದಿಂದ ಕೆಲವರು ಕೇಳುವರು ಅಥವಾ ಹೇಳುವರು. ಆದರೆ ಈ ಭೇದಗಳನ್ನು ಸರಿಯಾಗಿ ಕೇಳಿ ತಿಳಿದುಕೊಳ್ಳುವ ಅಥವಾ ತಿಳಿದು ಹೇಳುವ ಪುಣ್ಯಾತ್ಮನು ಯಾವನೋ ಓರ್ವನಿರುವನು. ಸರಿಯಾಗಿ ತಿಳಿದಿರುವರು ವಿರಳ.

೩೦. ನಾರದನು ಮತ್ತೆ ಪ್ರಶ್ನಿಸಿದನು—ಯಾವುದನ್ನು ಕೇಳಿದರೆ ಸಕಲ ಪಾಪಗಳೂ ನಾಶವಾಗುವವೋ ಅಂತಹ ತೀರ್ಥಗಳ ಸ್ವರೂಪವನ್ನೂ ಭೇದವನ್ನೂ ಕೇಳಲಿಚ್ಛಿಸುವೆನು, ದಯವಿಟ್ಟು ಹೇಳು.

ಬ್ರಹ್ಮನ್ಕೃತಯುಗಾದೌ ತು ಉಪಾಯೋಽನ್ಯೋ ನ ವಿದ್ಯತೇ ।
ತೀರ್ಥಸೇವಾಂ ವಿನಾ ಸ್ವಲ್ಪಾಯಾಸೇನಾಭೀಷ್ಟದಾಯಿನೀಂ ॥ ೩೧ ॥

ನ ತ್ವಯಾ ಸದೃಶೋ ಧಾತರ್ವಕ್ತಾ ಜ್ಞಾತಾಥವಾ ಕ್ವಚಿತ್ ।
ತ್ವಂ ನಾಭಿಕಮಲೇ ವಿಷ್ಣೋಃ ಸಂಜಾತೋಽಖಿಲಪೂರ್ವಜಃ ॥ ೩೨ ॥

॥ ಬ್ರಹ್ಮೋವಾಚ ॥

ಗೋದಾವರೀ ಭೀಮರಥೀ ತುಂಗಭದ್ರಾ ಚ ವೇಣಿಕಾ ।
ತಾಪೀ ಪಯೋಷ್ಣೀ ವಿಂಧ್ಯಸ್ಯ ದಕ್ಷಿಣೇ ತು ಪ್ರಕೀರ್ತಿತಾಃ ॥ ೩೩ ॥

ಭಾಗೀರಥೀ ನರ್ಮದಾ ತು ಯಮುನಾ ಚ ಸರಸ್ವತೀ ।
ವಿಶೋಕಾ ಚ ವಿತಸ್ತಾ ಚ ಹಿಮವತ್ಪರ್ವತಾಶ್ರಿತಾಃ ॥ ೩೪ ॥

ಏತಾ ನದ್ಯಃ ಪುಣ್ಯತಮಾ ದೇವತೀರ್ಥಾನ್ಯುದಾಹೃತಾಃ ।
ಗಯಃ ಕೊಲ್ಲಾಸುರೋ ವೃತ್ರಸ್ತ್ರಿಪುರೋ ಹ್ಯಂಧಕಸ್ತಥಾ ॥ ೩೫ ॥

---

೩೧. ಓ ಬ್ರಹ್ಮದೇವ, ಕೃತ ಮೊದಲಾದ ಯುಗಗಳಲ್ಲಿ ಅನಾಯಾಸದಿಂದ ಇಷ್ಟಾರ್ಥವನ್ನು ಪಡೆಯಲು ತೀರ್ಥಸೇವೆಯಹೊರತು ಬೇರೆ ಉಪಾಯವಿಲ್ಲ.

೩೨. ನಿನ್ನಂತಹ ಜ್ಞಾನಿಯೂ ವಕ್ತೃವೂ ಬೇರೊಬ್ಬನಿಲ್ಲವು. ನೀನು ಹರಿಯ ನಾಭಿಕಮಲದಲ್ಲಿ ಮೊಟ್ಟಮೊದಲು ಜನಿಸಿದವನು. ನೀನು ಎಲ್ಲರಿಗೂ ಹಿರಿಯವನು, ಆದುದರಿಂದ ಈ ತೀರ್ಥಗಳ ಮಾಹಾತ್ಮ್ಯೆಯನ್ನು ನನಗೆ ವಿವರಿಸಿ ಹೇಳೆನಲು, ಬ್ರಹ್ಮನಿಂತೆಂದನು,

೩೩. ಎಲೈ ನಾರದನೆ ಕೇಳು—ಗೋದಾವರೀ, ಭೀಮರಥೀ, ತುಂಗೆಭದ್ರಾ, ವೇಣಿಕಾ, ತಾಪೀ, ಪಯೋಷ್ಣೀ ಈ ಆರು ನದಿಗಳು ವಿಂಧ್ಯಗಿರಿಗೆ ದಕ್ಷಿಣದಲ್ಲಿರುವ ದೈವತೀರ್ಥಗಳು.

೩೪. ಭಾಗೀರಥೀ, ನರ್ಮದಾ, ಯಮುನಾ, ಸರಸ್ವತೀ, ವಿಶೋಕಾ, ವಿತಸ್ತಾ ಈ ಆರು ಪುಣ್ಯನದಿಗಳು ಹಿಮಾಲಯದಲ್ಲಿರುವ ದೇವತೀರ್ಥಗಳು.

೩೫-೩೬. ಯಮ, ಪಾತಾಲಕೇತು, ಮಯ, ಪುಷ್ಕರ, ಹಯಮೂರ್ಧಾ

ಹಯಮೂರ್ಧಾ ಚ ಲವಣೋ ನಮುಚಿಃ ಶೃಂಗಕಸ್ತಥಾ ।
ಯಮಃ ಪಾತಾಲಕೇತುಶ್ಚ ಮಯಃ ಪುಷ್ಕರ ಏವ ಚ ॥ ೩೬ ॥

ಏತೈರಾವೃತತೀರ್ಥಾನಿ ಆಸುರಾಣಿ ಶುಭಾನಿ ಚ ।
ಪ್ರಭಾಸೋ ಭಾರ್ಗವೋಽಗಸ್ತಿರ್ನರನಾರಾಯಣೌ ತಥಾ ॥ ೩೭ ॥

ವಸಿಷ್ಠಶ್ಚ ಭರದ್ವಾಜೋ ಗೋತಮಃ ಕಶ್ಯಪೋ ಮನುಃ ।
ಇತ್ಯಾದಿಮುನಿಜುಷ್ಟಾನಿ ಋಷಿತೀರ್ಥಾನಿ ನಾರದ ॥ ೩೮ ॥

ಅಂಬರೀಷೋ ಹರಿಶ್ಚಂದ್ರೋ ಮಾಂಧಾತಾ ಮನುರೇವ ಚ ।
ಕುರುಃ ಕನಖಲಶ್ಚೈವ ಭದ್ರಾಶ್ವಃ ಸಗರಸ್ತಥಾ ॥ ೩೯ ॥

ಅಶ್ವಯೂಪೋ ನಾಚಿಕೇತಾ ವೃಷಾಕಪಿರರಿಂದಮಃ ।
ಇತ್ಯಾದಿಮಾನುಷೈರ್ವಿಪ್ರ ನಿರ್ಮಿತಾನಿ ಶುಭಾನಿ ಚ ॥ ೪೦ ॥

ಲವಣ, ನಮುಚಿ ಶೃಂಗಕ, ಗಯ, ಕೊಲ್ಲಾಸುರ, ವೃತ್ರ, ತ್ರಿಪುರ, ಅಂಧಕ ಈ ತೀರ್ಥಗಳು ಅಸುರರು ಆಶ್ರಯಿಸಿದ ಆಸುರತೀರ್ಥಗಳು.

೩೭-೩೮. ಪ್ರಭಾಸ, ಭಾರ್ಗವ, ಅಗಸ್ತ್ಯ, ನರನಾರಾಯಣರು, ವಸಿಷ್ಠ ಭರದ್ವಾಜ, ಗೌತಮ, ಕಶ್ಯಪ, ಮನು ಮೊದಲಾದ ಮುನಿಗಳು ಸೇವಿಸುವ ತೀರ್ಥಗಳು, ಆರ್ಷತೀರ್ಥಗಳು.

೩೯-೪೦. ಅಂಬರೀಷ, ಹರಿಶ್ಚಂದ್ರ, ಮಾಂಧಾತ, ಮನು, ಕುರು, ಕನಖಲ, ಭದ್ರಾಶ್ವ, ಸಗರ, ಅಶ್ವಯೂಪ, ನಾಚಿಕೇತ, ವೃಷಾಕಪಿ, ಅರಿಂದಮ ಮೊದಲಾದ ಮಾನವರು ತಮ್ಮ ಯಶಸ್ಸಿಗೂ, ಇಷ್ಟಾರ್ಥಪ್ರಾಪ್ತಿಗೂ ನಿರ್ಮಿಸಿದ ತೀರ್ಥಗಳು ಮಾನುಷತೀರ್ಥಗಳು

ಯಶಸಃ ಫಲಭೋಕ್ತ್ರರ್ಥಂ ನಿರ್ಮಿತಾನೀಹ ನಾರದ ।
ಸ್ವತೋದ್ಭೂತಾನಿ ದೈವಾನಿ ಯತ್ರ ಕ್ವಾಪಿ ಜಗತ್ತ್ರಯೇ ।
ಪುಣ್ಯತೀರ್ಥಾನಿ ತಾನ್ಯಾಹುಸ್ತೀರ್ಥಭೇದೋ ಮಯೋದಿತಃ ॥ ೪೧ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ತೀರ್ಥಭೇದವರ್ಣನಂ ನಾಮ
ಸಪ್ತತಿತಮೋಽಧ್ಯಾಯಃ

---

೪೧. ಕೆಲವೆಡೆ ತೀರ್ಥಗಳು ತಾನಾಗಿಯೇ ಜನಿಸಿರುವುವು. ಅವು ದೈವತೀರ್ಥಗಳು ಮತ್ತು ಮಹಾಪುಣ್ಯಪ್ರದವಾದುವುಗಳು. ಹೀಗೆ ನಿನಗೆ ತೀರ್ಥ ಭೇದವನ್ನು ಹೇಳಿರುವೆನು ಎಂದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ತೀರ್ಥಭೇದವರ್ಣನವೆಂಬ ಎಪ್ಪತ್ತನೆಯ ಅಧ್ಯಾಯವು ಮುಗಿದುದು.

ಗೌತಮೀ ಮಾಹಾತ್ಮ್ಯೆಯಲ್ಲಿ ಒಂದನೆಯಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಏಕಸಪ್ತತಿತಮೋಽಧ್ಯಾಯಃ

॥ ನಾರದ ಉವಾಚ ॥

ತ್ರಿದೈವತ್ಯಂ ತು ಯತ್ತೀರ್ಥಂ ಸರ್ವೇಭ್ಯೋ ಹ್ಯುಕ್ತಮುತ್ತಮಂ ।
ತಸ್ಯ ಸ್ವರೂಪಭೇದಂ ಚ ವಿಸ್ತರೇಣ ಬ್ರವೀತು ಮೇ ॥ ೧ ॥

॥ ಬ್ರಹ್ಮೋವಾಚ ॥

ತಾವದನ್ಯಾನಿ ತೀರ್ಥಾನಿ ತಾವತ್ಕ್ಷೇತ್ರಾಃ ಪುಣ್ಯಭೂಮಯಃ ।
ತಾವದ್ಯಜ್ಞಾದಯೋ ಯಾವತ್ತ್ರಿದೈವತ್ಯಂ ನ ದೃಶ್ಯತೇ ॥ ೨ ॥

ಎಪ್ಪತ್ತೊಂದನೆಯ ಅಧ್ಯಾಯವು

೧. ನಾರದನು ಕೇಳುವನು—ಓ ಬ್ರಹ್ಮದೇವ, ಬ್ರಹ್ಮ, ವಿಷ್ಣು, ಮಹೇಶ್ವರರು ನಿರ್ಮಿಸಿದ ತ್ರಿದೈವತ್ಯವೆಂಬ ತೀರ್ಥವು ಸರ್ವೋತ್ತಮವೆಂದು ಹೇಳಿರುವೆ. ಆ ತೀರ್ಥದ ಸ್ವರೂಪವನ್ನೂ ಭೇದವನ್ನೂ ವಿಸ್ತಾರವಾಗಿ ಹೇಳು, ಎನಲು,

೨. ಬ್ರಹ್ಮನು ಹೇಳುವನು—ತ್ರಿದೈವತ್ಯತೀರ್ಥವನ್ನು ನೋಡದವರೆಗೆ ಮಿಕ್ಕ ತೀರ್ಥಗಳೂ, ಪುಣ್ಯಕ್ಷೇತ್ರಗಳೂ, ಯಜ್ಞಾದಿಗಳೂ ಅವಶ್ಯಕವೆನಿಸುವವು. ಆ ತೀರ್ಥದರ್ಶನ ಮಾಡಿದಮೇಲೆ ಇತರ ಯಾವ ತೀರ್ಥಗಳ ಅವಶ್ಯಕತೆಯೂ ಇಲ್ಲ. ಏಕೆಂದರೆ, ಸಮಸ್ತಫಲಗಳೂ ಆ ತ್ರಿದೈವತ್ಯತೀರ್ಥವೊಂದರಿಂದಲೇ ಲಭಿಸುವವು.

ಗಂಗೇಯಂ ಸರಿತಾಂ ಶ್ರೇಷ್ಠಾ ಸರ್ವಕಾಮಪ್ರದಾಯಿನೀ ।
ತ್ರಿದೈವತ್ಯಾ ಮುನಿಶ್ರೇಷ್ಠ ತದುತ್ಪತ್ತಿಮತಃ ಶೃಣು ॥ ೩ ॥

ವರ್ಷಾಣಾಮಯುತಾತ್ಪೂರ್ವಂ ದೇವಕಾರ್ಯ ಉಪಸ್ಥಿತೇ ।
ತಾರಕೋ ಬಲವಾನಾಸೀನ್ಮದ್ವರಾದತಿಗರ್ವಿತಃ ॥ ೪ ॥

ದೇವಾನಾಂ ಪರಮೈಶ್ವರ್ಯಂ ಹೃತಂ ತೇನ ಬಲೀಯಸಾ ।
ತತಸ್ತೇ ಶರಣಂ ಜಗ್ಮುರ್ದೇವಾಃ ಸೇಂದ್ರಪುರೋಗಮಾಃ ॥ ೫ ॥

ಕ್ಷೀರೋದಶಾಯಿನಂ ದೇವಂ ಜಗತಾಂ ಪ್ರಪಿತಾಮಹಂ ।
ಕೃತಾಂಜಲಿಪುಟಾ ದೇವಾ ವಿಷ್ಣುಮೂಚುರನನ್ಯಗಾಃ ॥ ೬ ॥

॥ ದೇವಾ ಊಚುಃ ॥

ತ್ವಂ ತ್ರಾತಾ ಜಗತಾಂ ನಾಥ ದೇವಾನಾಂ ಕೀರ್ತಿವರ್ಧನ ।
ಸರ್ವೇಶ್ವರ ಜಗದ್ಯೋನೇ ತ್ರಯೀಮೂರ್ತೇ ನಮೋಽಸ್ತು ತೇ ॥ ೭ ॥

---

೩. ಸಕಲೇಷ್ಟಾರ್ಥಗಳನ್ನೂ ಉಂಟುಮಾಡುವ ಈ ಗಂಗಾನದಿಯೇ ತ್ರಿದೈವತ್ಯತೀರ್ಥವು. ಬ್ರಹ್ಮವಿಷ್ಣುಮಹೇಶ್ವರರು ಅದನ್ನು ನಿರ್ಮಿಸಿರುವರು. ಆ ನದಿಯ ಉತ್ಪತ್ತಿಕ್ರಮವನ್ನು ಹೇಳುವೆನು ಕೇಳು.

೪. ಹತ್ತುಸಾವಿರ ವರ್ಷಗಳ ಹಿಂದೆ ದೇವಕಾರ್ಯವೊಂದು ಒದಗಿತು, ಆಗ ತಾರಕನೆಂಬ ಅಸುರನು ನನ್ನಿಂದ ವರವನ್ನು ಪಡೆದು, ಆ ವರಬಲದಿಂದ ಕೊಬ್ಬಿ ಮೆರೆಯುತ್ತಿದ್ದನು.

೫-೬. ಬಲಿಷ್ಠನಾದಾ ಅಸುರನು ದೇವತೆಗಳ ಐಶ್ವರ್ಯವೆಲ್ಲವನ್ನೂ ಅಪಹರಿಸಿದನು, ಆಗ ಇಂದ್ರನೇ ಮೊದಲಾದ ದೇವತೆಗಳು ಕ್ಷೀರಸಮುದ್ರದಲ್ಲಿ ಮಲಗಿರುವ ಜಗತ್ತಿಗೆ ತಾತನಾದ ಶ್ರೀಹರಿಯನ್ನು ಮರೆಹೊಕ್ಕರು. ಕೈಮುಗಿದುಕೊಂಡು ಭಕ್ತಿಯಿಂದ ಇಂತು ಸ್ತುತಿಸಿದರು.

೭. ಓ ಪರದೇವ, ಜಗತ್ತನ್ನು ಸಲಹುವವನೂ, ದೇವತೆಗಳ ಕೀರ್ತಿಯನ್ನು ಹೆಚ್ಚಿಸುವವನೂ, ಸರ್ವೇಶ್ವರನೂ, ಜಗತ್ಕಾರಣನೂ ನೀನೇ ಆಗಿರುವೆ. ನೀನೇ ವೇದಸ್ವರೂಪನು. ಇಂತಹ ನಿನಗೆ ನಮಸ್ಕಾರವು.

ಲೋಕಸ್ರಷ್ಟಾಸುರಾನ್ಹಂತಾ ತ್ವಮೇವ ಜಗತಾಂ ಪತಿಃ ।
ಸ್ಥಿತ್ಯುತ್ಪತ್ತಿವಿನಾಶಾನಾಂ ಕಾರಣಂ ತ್ವಂ ಜಗನ್ಮಯ ॥ ೮ ॥

ತ್ರಾತಾ ನ ಕೋಽಪ್ಯಸ್ತಿ ಜಗತ್ರಯೇಽಪಿ
ಶರೀರಿಣಾಂ ಸರ್ವವಿಪದ್ಗತಾನಾಂ ।
ತ್ವಯಾ ವಿನಾ ವಾರಿಜಪತ್ರನೇತ್ರ
ತಾಪತ್ರಯಾಣಾಂ ಶರಣಂ ನ ಚಾನ್ಯತ್ ॥ ೯ ॥

ಪಿತಾ ಚ ಮಾತಾ ಜಗತೋಽಖಿಲಸ್ಯ
ತ್ವಮೇವ ಸೇವಾಸುಲಭೋಽಸಿ ವಿಷ್ಣೋ ।
ಪ್ರಸೀದ ಪಾಹೀಶ ಮಹಾಭಯೇಭ್ಯೋ-
ಸ್ಮದಾರ್ತಿಹಂತಾ ವದ ಕಸ್ತ್ವದನ್ಯಃ ॥ ೧೦ ॥

ಆದಿಕರ್ತಾ ವರಾಹಸ್ತ್ವಂ ಮತ್ಸ್ಯಃ ಕೂರ್ಮಸ್ತಥೈವ ಚ ।
ಇತ್ಯಾದಿರೂಪಭೇದೈರ್ನೋ ರಕ್ಷಸೇ ಭಯ ಆಗತೇ ॥ ೧೧ ॥

---

೮. ಜಗತ್ತನ್ನು ಸೃಷ್ಟಿಸುವವನು ನೀನು, ಅಸುರರನ್ನು ಸಂಹರಿಸುವ ಜಗದೀಶ್ವರನು ನೀನು, ಜಗತ್ತಿನ ಸ್ಥಿತಿ ಉತ್ಪತ್ತಿನಾಶಗಳಿಗೆ ನೀನೇ ಕಾರಣನು, ಜಗದ್ರೂಪನು ನೀನು.

೯. ಪ್ರಾಣಿಗಳ ವಿಪತ್ತುಗಳನ್ನು ಪರಿಹರಿಸುವವನು ನಿನ್ನ ಹೊರತು ಜಗತ್ತಿನಲ್ಲಿ ಬೇರೆ ಯಾರೂ ಇಲ್ಲ. ಓಂ ಪುಂಡರೀಕಾಕ್ಷ, ಆಧ್ಯಾತ್ಮಿಕ ಆಧಿದೈವಿಕ ಆದಿಭೌತಿಕಗಳೆಂಬ ಮೂರು ಆಪತ್ತುಗಳನ್ನು ಪರಿಹರಿಸುವವನು ನೀನೇ.

೧೦. ಜಗತ್ತಿಗೆ ನೀನೇ ತಂದೆಯು, ನೀನೇ ತಾಯಿಯು, ಸೇವಿಸಲು ನೀನೇ ಸುಲಭನು. ಓ ದೇವ, ಪ್ರಸನ್ನನಾಗು. ಶತ್ರುಭಯದಿಂದ ನಮ್ಮನ್ನು ಕಾಪಾಡು. ನಮ್ಮ ಕಷ್ಟವನ್ನು ಹೋಗಲಾಡಿಸುವವನು ನಿನ್ನ ಹೊರತು ಇನ್ನಾರಿರುವರು ?

೧೧. ಆದಿಕರ್ತನಾದ ನೀನು ನಮಗೆ ಭಯವೊದಗಿದಾಗ ವರಾಹ, ಮತ್ಸ್ಯ, ಕೂರ್ಮ ಮೊದಲಾದ ಅವತಾರಗಳಿಂದ ಹಿಂದೆ ಎಷ್ಟೋಸಲ ನಮ್ಮನ್ನು ರಕ್ಷಿಸಿರುವೆ.

ಹೃತಸ್ವಾಮ್ಯಾಸ್ಸುರಗಣಾಸ್ಸ್ಮೃತದಾರಾಸ್ತಥಾಪದಃ ।
ಕಸ್ಮಾನ್ನ ರಕ್ಷಸೇ ದೇವ ಅನನ್ಯಶರಣಾಸ್ಸುರೇ ॥ ೧೨ ॥

॥ ಬ್ರಹ್ಮೋವಾಚ ॥

ತತಃ ಪ್ರೋವಾಚ ಭಗವಾನ್ ಶೇಷಶಾಯೀ ಜಗತ್ಪತಿಃ ।
ಕಸ್ಮಾಚ್ಚ ಭಯಮಾಪನ್ನಂ ತದ್ಬ್ರುವಂತು ಗತಜ್ವರಾಃ ।
ತತಃ ಶ್ರಿಯಃ ಪತಿಂ ಪ್ರಾಹುಸ್ತಂ ತಾರಕವಧಂ ಪ್ರತಿ ॥ ೧೩ ॥

॥ ದೇವಾ ಊಚುಃ ॥

ತಾರಕಾದ್ಭಯಮಾಪನ್ನಂ ಭೀಷಣಂ ರೋಮಹರ್ಷಣಂ ।
ನ ಯುದ್ಧೈಸ್ತಪಸಾ ಶಾಪೈರ್ಹಂತುಂ ನೈವ ಕ್ಷಮಾ ವಯಂ ॥ ೧೪ ॥

ಅರ್ವಾಗ್ದಶಾಹಾದ್ಯೋ ಬಾಲಸ್ತಸ್ಮಾನ್ಮೃತ್ಯುಮವಾಪ್ಸ್ಯತಿ ।
ತಸ್ಮಾದ್ದೇವ ನ ಚಾನ್ಯೇಭ್ಯಸ್ತತ್ರ ನೀತಿರ್ವಿಧೀಯತಾಂ ॥ ೧೫ ॥

---

೧೨. ಓ ದೇವ, ನಮ್ಮ ಅಧಿಕಾರವೆಲ್ಲವೂ ಹೋಗಿದೆ, ಸ್ತ್ರೀಯರನ್ನು ಕಳೆದುಕೊಂಡಿರುವೆವು. ಇಂತಹ ಆಪತ್ತು ನಮಗೆ ಬಂದಿರುವುದು, ನಿನ್ನ ಹೊರತು ನಮಗೆ ಬೇರೆ ಗತಿಯಿಲ್ಲ. ಹೀಗಿರಲು ನೀನು ನಮ್ಮನ್ನು ರಕ್ಷಿಸುವುದಿಲ್ಲವೇ ? ಎಂದು ಸ್ತುತಿಸಿದರು.

೧೩. ಆಗ ಜಗದೀಶ್ವರನಾದ ಭಗವಾನ್ ಹರಿಯು ದೇವತೆಗಳನ್ನು ಕುರಿತು ಎಲೈ ದೇವತೆಗಳೇ, ಈಗ ನಿಮಗೆ ಯಾರಿಂದ ಭಯವೊದಗಿರುವುದು ? ಧೈರ್ಯವಾಗಿ ಹೇಳಿರಿ ಎಂದನು.

೧೪. ಆಗ ದೇವತೆಗಳು ತಾರಕಾಸುರನನ್ನು ಕೊಲ್ಲುವ ವಿಷಯವನ್ನು ಪ್ರಸ್ತಾಪಿಸುತ್ತಾ ಓ ದೇವ, ತಾರಕಾಸುರನಿಂದ ನಮಗೆ ತುಂಬಾ ಭಯವುಂಟಾಗಿದೆ. ಯುದ್ಧ ತಪಶ್ಶಕ್ತಿ, ಶಾಪ ಇವಾವುಗಳಿಂದಲೂ ಆ ಅಸುರನನ್ನು ನಾವು ಕೊಲ್ಲಲಾರೆವು.

೧೫. ಹುಟ್ಟಿ ಹತ್ತುದಿನಗಳೂ ತುಂಬದಂತಹ ಶಿಶುವನ್ನೂ ಆ ತಾರಕಾಸುರನು ಸಂಹರಿಸುತ್ತಿರುವನು. ಆದುದರಿಂದ ಆ ಅಸುರನನ್ನು ಸಂಹರಿಸಲು ಏನಾದರೊಂದುಪಾಯವನ್ನು ಮಾಡೆಂದು ಪ್ರಾರ್ಥಿಸಿದರು.

॥ ಬ್ರಹ್ಮೋವಾಚ ॥

ಪುನರ್ನಾರಾಯಣಃ ಪ್ರಾಹ ನಾಹಂ ಬಲೋತ್ಕಟಃ ಸುರಾಃ ।
ನ ಮತ್ತೋ ಮದಪತ್ಯಾಚ್ಚ ನ ದೇವೇಭ್ಯೋ ವಧೋ ಭವೇತ್ ॥ ೧೬ ॥

ಈಶ್ವರಾದ್ಯದಿ ಜಾಯೇತ ಅಪತ್ಯಂ ಬಹುಶಕ್ತಿಮತ್ ।
ತಸ್ಮಾದ್ವಧಮವಾಪ್ನೋತಿ ತಾರಕೋ ಲೋಕದಾರುಣಃ ॥ ೧೭ ॥

ತದ್ಗಚ್ಛಾಮಃ ಸುರಾಃ ಸರ್ವೇ ಯತಿತುಮೃಷಿಭಿಃ ಸಹ ।
ಭಾರ್ಯಾರ್ಥಂ ಪ್ರಥಮೋ ಯತ್ನಃ ಕರ್ತವ್ಯಃ ಪ್ರಭವಿಷ್ಣುಭಿಃ ॥ ೧೮ ॥

ತಥೇತ್ಯುಕ್ತ್ವಾ ಸುರಗಣಾ ಜಗ್ಮುಸ್ತೇ ಚ ನಗೋತ್ತಮಂ ।
ಹಿಮವಂತಂ ರತ್ನಮಯಂ ಮೇನಾಂ ಚ ಹಿಮವತ್ಪ್ರಿಯಾಂ ॥ ೧೯ ॥

ಇದಮೂಚುಃ ಸರ್ವ ಏವ ಸಭಾರ್ಯಂ ತುಹಿನಂ ಗಿರಿಂ ॥ ೨೦ ॥

---

೧೬. ಆಗ ನಾರಾಯಣನು ಎಲೈ ದೇವತೆಗಳೇ, ನಾನು ತಾರಕನನ್ನು ಸಂಹರಿಸುವಂತಹ ಬಲಶಾಲಿಯಲ್ಲ. ನನ್ನಿಂದಲೂ ನನ್ನ ಪುತ್ರನಿಂದಲೂ ದೇವತೆಗಳಿಂದಲೂ ಆ ಅಸುರನ ವಧೆಯು ಆಗಲಾರದು.

೧೭. ಈಶ್ವರನಿಂದ ಬಲಿಷ್ಠನಾದ ಕುಮಾರನು ಜನಿಸಿದರೆ ಆ ಕುಮಾರನು ಲೋಕಭಯಂಕರನಾದ ಆ ತಾರಕಾಸುರನನ್ನು ಕೊಲ್ಲಬಹುದು.

೧೮. ಆದುದರಿಂದ ನಾವೆಲ್ಲರೂ ತೆರಳಿ ಆ ಶಿವನಿಗೆ ಮದುವೆಯಾಗುವಂತೆ ಮೊದಲು ಪ್ರಯತ್ನವನ್ನು ಮಾಡಬೇಕು, ಎಲೈ ದೇವತೆಗಳೇ ನಡೆಯಿರಿ, ಹೋಗೋಣ ಎಂದನು.

೧೯-೨೦. ಹಾಗೆಯೇ ಆಗಲೆಂದೊಪ್ಪಿ ದೇವತೆಗಳು ಹರಿಯೊಡನೆ ರತ್ನಮಯವಾದ ಹಿಮಾಲಯಕ್ಕೆ ಹೋಗಿ, ಅಲ್ಲಿ ಹಿಮವಂತ ಮತ್ತು ಮೇನಕೆಯರನ್ನು ಕಂಡು,

॥ ದೇವಾ ಊಚುಃ ॥

ದಾಕ್ಷಾಯಣೀ ಲೋಕಮಾತಾ ಯಾ ಶಕ್ತಿಃ ಸಂಸ್ಥಿತಾ ಗಿರೌ ।
ಬುದ್ಧಿಃ ಪ್ರಜ್ಞಾ ಧೃತಿರ್ಮೇಧಾ ಲಜ್ಜಾ ಪುಷ್ಟಿಃ ಸರಸ್ವತೀ ॥ ೨೧ ॥

ಏವಂ ತ್ವನೇಕಧಾ ಲೋಕೇ ಯಾ ಸ್ಥಿತಾ ಲೋಕಪಾವನೀ ।
ದೇವಾನಾಂ ಕಾರ್ಯಸಿದ್ಧ್ಯರ್ಥಂ ಯುವಯೋರ್ಗರ್ಭಮಾವಿಶತ್ ॥ ೨೨ ॥

ಸಮುತ್ಪನ್ನಾ ಜಗನ್ಮಾತಾ ಶಂಭೋಃ ಪತ್ನೀ ಭವಿಷ್ಯತಿ ।
ಅಸ್ಮಾಕಂ ಭವತಾಂ ಚಾಪಿ ಪಾಲನೀ ಚ ಭವಿಷ್ಯತಿ ॥ ೨೩ ॥

॥ ಬ್ರಹ್ಮೋವಾಚ ॥

ಹಿಮವಾನಪಿ ತದ್ವಾಕ್ಯಂ ಸುರಾಣಾಮಭಿನಂದ್ಯ ಚ ।
ಮೇನಾ ಚಾಪಿ ಮಹೋತ್ಸಾಹಾ ಅಸ್ತ್ವಿತ್ಯೇವಂ ವಚೋಽಬ್ರವೀತ್ ॥೨೪॥

ತದೋತ್ಪನ್ನಾ ಜಗದ್ಧಾತ್ರೀ ಗೌರೀ ಹಿಮವತೋ ಗೃಹೇ ।
ಶಿವಧ್ಯಾನರತಾ ನಿತ್ಯಂ ತನ್ನಿಷ್ಠಾ ತನ್ಮನೋಗತಾ ॥ ೨೫ ॥

---

೨೧. ಎಲೈ ಪರ್ವತರಾಜ, ದಾಕ್ಷಾಯಣಿಯೆಂಬ ಲೋಕಮಾತೆಯಾದ ಶಕ್ತಿಯು ಶಿವನಲ್ಲಿರುವಳು, ಅವಳೇ ಬುದ್ಧಿ, ಪ್ರಜ್ಞಾ, ಧೃತಿ, ಮೇಧಾ, ಲಜ್ಜಾ ಪುಷ್ಟಿ, ಸರಸ್ವತೀ ಎಂಬ ರೂಪಗಳಿಂದ ವಿರಾಜಿಸುವಳು.

೨೨. ಅನೇಕರೂಪದಿಂದಿರುವ ಮಹಾಪುಣ್ಯಾತ್ಮಳಾದ ಆ ಶಿವಶಕ್ತಿಯು ದೇವತೆಗಳ ಕಾರ್ಯಸಿದ್ಧಿಗಾಗಿ ನಿಮ್ಮ ಗರ್ಭವನ್ನು ಪ್ರವೇಶಿಸುವಳು.

೨೩. ಜಗನ್ಮಾತೆಯಾದ ಆ ದೇವಿಯು ನಿಮ್ಮಲ್ಲಿ ಜನಿಸಿ ಶಿವನ ಪತ್ನಿಯಾಗುವಳು. ಅದರಿಂದ ನಮ್ಮನ್ನೂ ನಿಮ್ಮನ್ನೂ ಸಲಹುವಳು ಎಂದರು

೨೪. ಹಿಮವಂತನೂ ಮೇನಾದೇವಿಯೂ ದೇವತೆಗಳ ಮಾತನ್ನು ಅಭಿನಂದಿಸಿ ಹಾಗೆಯೇ ಆಗಲಿ ಎಂದು ಅವರ ಅಭಿಪ್ರಾಯವನ್ನಂಗೀಕರಿಸಿದರು.

೨೫. ಆಮೇಲೆ ಹಿಮವಂತನ ಮನೆಯಲ್ಲಿ ಜಗನ್ಮಾತೆಯಾದ ಗೌರಿಯು ಜನಿಸಿದಳು. ಅವಳು ಸದಾಶಿವನಲ್ಲಿಯೇ ಭಕ್ತಿಯುಳ್ಳವಳಾಗಿ ಅವನನ್ನೇ ಧ್ಯಾನಿಸುತ್ತಿದ್ದಳು. ಅವನನ್ನೇ ಪ್ರೀತಿಸುತಿದ್ದಳು.

ತಾಂ ವೈ ಪ್ರೋಚುಃ ಸುರಗಣಾ ಈಶಾರ್ಥೇ ತಪ ಆವಿಶ ।
ತಥಾ ಹಿಮವತಃ ಪೃಷ್ಠೇ ಗೌರೀ ತೇಪೇ ತಪೋ ಮಹತ್ ॥ ೨೬ ॥

ಪುನಃ ಸಂಮಂತ್ರಯಾಮಾಸುರೀಶೋ ಧ್ಯಾಯತಿ ತಾಂ ಶಿವಾಂ ।
ಆತ್ಮಾನಂ ವಾ ತಥಾನ್ಯದ್ವಾ ನ ಜಾನೀಮಃ ಕಥಂ ಭವಃ ॥ ೨೭ ॥

ಮೇನಕಾಯಾಃ ಸುತಾಯಾಂ ತು ಚಿತ್ತಂ ದಧ್ಯಾತ್ಸುರೇಶ್ವರಃ ।
ತತ್ರ ನೀತಿರ್ವಿಧಾತವ್ಯಾ ತತಃ ಶ್ರೈಯಸ್ಯಮವಾಪ್ಸ್ಯಥ ।
ತತಃ ಪ್ರಾಹ ಮಹಾಬುದ್ಧಿರ್ವಾಚಸ್ಪತಿರುದಾರಧೀಃ ॥ ೨೮ ॥

॥ ಬೃಹಸ್ಪತಿರುವಾಚ ॥

ಯಸ್ತ್ವಯಂ ಮದನೋ ಧೀಮಾನ್ಕಂದರ್ಪಃ ಪುಷ್ಪಚಾಪಧೃಕ್ ।
ಸ ವಿಧ್ಯತು ಶಿವಂ ಶಾಂತಂ ಬಾಣೈಃ ಪುಷ್ಪಮಯೈಃ ಶುಭೈಃ ॥ ೨೯ ॥

---

೨೬. ಆಗ ದೇವತೆಗಳು, ಗೌರಿಯನ್ನು ಕುರಿತು ಶಿವನನ್ನು ಕುರಿತು ತಪಸ್ಸಮಾಡು ಎಂದು ಹೇಳಿದರು. ಅದರಂತೆ ಗೌರಿಯು ಹಿಮಾಲಯದ ತಪ್ಪಲಲ್ಲಿ ಘೋರತಪಸ್ಸನ್ನಾಚರಿಸಿದಳು.

೨೭. ಪುನಃ ಆ ದೇವತೆಗಳು ಹೀಗೆ ಆಲೋಚಿಸಿದರು—ಶಿವನೂ ತಪಸ್ಸುಮಾಡುತ್ತಲಿರುವನು, ಅವನು ಆತ್ಮವಸ್ತುವನ್ನು ಚಿಂತಿಸುತ್ತಿರುವನೋ, ಗೌರಿಯನ್ನು ಧ್ಯಾನಿಸುತ್ತಿರುವನೋ ಯಾವುದೂ ನಮಗೆ ತಿಳಿಯದಾಗಿದೆ.

೨೮. ಮೇನಕೆಯ ಮಗಳಾದ ಗೌರಿಯಲ್ಲಿ ಶಿವನಿಗೆ ಅನುರಾಗವುಂಟಾಗುವಂತೆ ಮಾಡಬೇಕು. ಅದರಿಂದ ನಮಗೆ ಶ್ರೇಯಸ್ಸಾಗುವುದು ಎಂದು ತಮ್ಮ ಅಭಿಪ್ರಾಯವನ್ನು ತಿಳುಹಲು,

೨೯. ಆಗ ಮಹಾಬುದ್ಧಿಶಾಲಿಯಾದ ಬೃಹಸ್ಪತಿಯಿಂತೆಂದನು. ಬುದ್ಧಿವಂತನೂ ಸಮರ್ಥನೂ ಆದ ಮನ್ಮಥನಿರುವನು. ಅವನು ಶಾಂತಮೂರ್ತಿಯಾದ ಶಿವನನ್ನು ತನ್ನ ಪುಷ್ಪಬಾಣಗಳಿಂದ ಪ್ರಹರಿಸಿ ಕಾಮವಿಕಾರವುಳ್ಳವನಾಗುವಂತೆ ಮಾಡಲಿ.

ತೇನ ವಿದ್ಧಸ್ತ್ರಿನೇತ್ರೋಽಪಿ ಈಶಾಯಾಂ ಬುದ್ಧಿಮಾದಧೇತ್ ।
ಪರಿಣೇಷ್ಯತ್ಯಸೌ ನೂನಂ ತದಾ ತಾಂ ಗಿರಿಜಾಂ ಹರಃ ॥ ೩೦ ॥

ಜಯಿನಃ ಪಂಚಬಾಣಸ್ಯ ನ ಬಾಣಾಃ ಕ್ವಾಪಿ ಕುಂಠಿತಾಃ ।
ತಥೋಢಾಯಾಂ ಜಗದ್ಧಾತ್ರ್ಯಾಂ ಶಂಭೋಃ ಪುತ್ರೋ ಭವಿಷ್ಯತಿ ॥ ೩೧ ॥

ಜಾತಃ ಪುತ್ರಸ್ತ್ರಿನೇತ್ರಸ್ಯ ತಾರಕಂ ಸ ಹನಿಷ್ಯತಿ ।
ವಸಂತಂ ಚ ಸಹಾಯಾರ್ಥಂ ಶೋಭಿಷ್ಠಂ ಕುಸುಮಾಕರಂ ॥ ೩೨ ॥

ಆಹ್ಲಾದನಂ ಚ ಮನಸಾ ಕಾಮಾಯೈನಂ ಪ್ರಯಚ್ಛಥ ॥ ೩೩ ॥

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಸುರಗಣಾ ಮದನಂ ಕುಸುಮಾಕರಂ ।
ಪ್ರೇಷಯಾಮಾಸುರವ್ಯಗ್ರಾಃ ಶಿವಾಂತಿಕಮರಿಂದಮಾಃ ॥ ೩೪ ॥

---

೩೦. ಮನ್ಮಥನ ಏಟಿಗೆ ಸಿಕ್ಕಿ ಈಶ್ವರನು ಗೌರಿಯಲ್ಲಿ ಅನುರಾಗವುಳ್ಳವನಾಗಬಹುದು. ಆಮೇಲೆ ಆ ಶಿವನು ನಿಶ್ಚಯವಾಗಿ ಗೌರಿಯನ್ನು ಮದುವೆಯಾಗುವನು.

೩೧. ಜಯಶಾಲಿಯಾದ ಮನ್ಮಥನ ಬಾಣಗಳು ಇದುವರೆಗೆ ಎಲ್ಲಿಯೂ ವ್ಯರ್ಥವಾಗಿಲ್ಲ. ಹಾಗೆ ಶಿವನು ಗೌರಿಯನ್ನು ಮದುವೆಯಾದರೆ ಮುಂದೆ ಅವನಿಗೆ ಪುತ್ರನು ಜನಿಸುವನು.

೩೨-೩೩. ಹಾಗೆ ಜನಿಸಿದ ಶಂಕರಪುತ್ರನು ತಾರಕಾಸುರನನ್ನು ನಿಶ್ಚಯವಾಗಿಯೂ ಸಂಹರಿಸುವನು. ಈ ಕೆಲಸಕ್ಕೆ ಮನ್ಮಥನಿಗೆ ಸಹಾಯಕ್ಕಾಗಿ ಆನಂದಕರನಾದ ವಸಂತನನ್ನು ಕಳುಹಿಸಿ, ಎಂದನು.

೩೪. ದೇವತೆಗಳು ಹಾಗೆಯೇ ಆಗಲಿ ಎಂದೊಪ್ಪಿ ಮನ್ಮಥನನ್ನೂ ವಸಂತನನ್ನೂ ಶಿವನಬಳಿಗೆ ಕಳುಹಿಸಿದರು.

ಸ ಜಗಾಮ ತ್ವರಾ ಕಾಮೋ ಧೃತಚಾಪೋ ಸಮಾಧವಃ ।
ರತ್ಯಾ ಚ ಸಹಿತಃ ಕಾಮಃ ಕರ್ತುಂ ಕರ್ಮ ಸುದುಷ್ಕರಂ ॥ ೩೫ ॥

ಗೃಹೀತ್ವಾ ಸಶರಂ ಚಾಪಮಿದಂ ತಸ್ಯ ಮನೋಽಭವತ್ ।
ಮಯಾ ವೇಧ್ಯಸ್ತ್ವವೇಧ್ಯೋ ವೈ ಶಂಭುರ್ಲೋಕಗುರುಃ ಪ್ರಭುಃ ॥ ೩೬ ॥

ತ್ರೈಲೋಕ್ಯಜಯಿನೋ ಬಾಣಾಃ ಶಂಭೌ ಮೇ ಕಿಂ ದೃಢಾ ನ ವಾ ।
ತೇನಾಸೌ ಚಾಗ್ನಿನೇತ್ರೇಣ ಭಸ್ಮಶೇಷಸ್ತದಾ ಕೃತಃ ॥ ೩೭ ॥

ತದೇವ ಕರ್ಮ ಸುದೃಢಮಿಕ್ಷಿತುಂ ಸುರಸತ್ತಮಾಃ ।
ಆಜಗ್ಮುಸ್ತತ್ರ ಯದ್ವೃತ್ತಂ ಶೃಣು ವಿಸ್ಮಯಕಾರಕಂ ॥ ೩೮ ॥

ಶಂಭುಂ ದೃಷ್ಟ್ವಾ ಸುರಗಣಾ ಯಾವತ್ಪಶ್ಯಂತಿ ಮನ್ಮಥಂ ।
ತಾವಚ್ಚ ಭಸ್ಮಸಾದ್ಭೂತಂ ಕಾಮಂ ದೃಷ್ಟ್ವಾ ಭಯಾತುರಾಃ ।
ತುಷ್ಟುವುಸ್ತ್ರಿದಶೇಶಾನಂ ಕೃತಾಂಜಲಿಪುಟಾಃ ಸುರಾಃ ॥ ೩೯ ॥

---

೩೫. ಆ ಕಾಮನು ತನ್ನ ಪುಷ್ಪಧನುಸ್ಸನ್ನು ಹಿಡಿದು ಶಿವನನ್ನು ಮೋಹಗೊಳಿಸುವಂತಹ ಮಹಾಕಾರ್ಯಕ್ಕೆ ರತಿವಸಂತರೊಡನೆ ತೆರಳಿದನು.

೩೬. ಶಿವನನ್ನು ಮೋಹಗೊಳಿಸಲು ಧನುಸ್ಸಿಗೆ ಬಾಣವನ್ನು ಹೂಡಿ ಮನ್ಮಥನು ಇಂತು ಯೋಚಿಸಿದನು. ಶಂಕರನು ಲೋಕಗುರುವು, ಪರಮೇಶ್ವರನು, ಅವನನ್ನು ಯಾರೂ ಪ್ರಹರಿಸಲಾರರು, ಇಂತಹ ಮಹಾನುಭಾವನನ್ನು ನಾನು ಪ್ರಹರಿಸಬೇಕಾಗಿದೆ, ಮೂರು ಲೋಕಗಳನ್ನೂ ಜಯಿಸಿದ ನನ್ನ ಬಾಣಗಳು ಶಂಕರನಿಗೆ ತಾಕಲಾರವೋ ? ಏನೋ ? ಎಂದು ಚಿಂತಿಸಿದನು.

೩೭. ಮುಂದೆ ಆ ಮನ್ಮಥನು ಶಿವನ ತೃತೀಯನೇತ್ರದ ಅಗ್ನಿಜ್ವಾಲೆಯಿಂದ ಭಸ್ಮವಾದನು.

೩೮. ಎಲೈ ನಾರದ, ಮನ್ಮಥನೇನುಮಾಡಿದನೆಂದು ನೋಡಲೋಸುಗ ದೇವತೆಗಳೂ ಸಹ ಅಲ್ಲಿಗೆ ಬಂದರು. ಆಗ ಆಶ್ಚರ್ಯಕರವಾದ ಒಂದು ಸಂಗತಿಯು ನಡೆಯಿತು.

೩೯. ಅಲ್ಲಿಗೆ ಬಂದ ದೇವತೆಗಳು ಶಿವನನ್ನು ದರ್ಶನಮಾಡಿ ಮನ್ಮಥನನ್ನು ನೋಡಿದರು. ಮನ್ಮಥನು ಭಸ್ಮವಾಗಿದ್ದನು. ಅದನ್ನು ನೋಡಿ

॥ ದೇವಾ ಊಚುಃ ॥

ತಾರಕಾದ್ಭಯಮಾಪನ್ನಂ ಕುರು ಪತ್ನೀಂ ಗಿರೇಃ ಸುತಾಂ ॥ ೪೦ ॥

॥ ಬ್ರಹ್ಮೋವಾಚ ॥

ವಿದ್ಧಚಿತ್ತೋ ಹರೋಽಪ್ಯಾಶು ಮೇನೇ ವಾಕ್ಯಂ ಸುರೋದಿತಂ ।
ಅರುಂಧತೀಂ ವಸಿಷ್ಠಂ ಚ ಮಾಂ ತು ಚಕ್ರಧರಂ ತಥಾ ॥ ೪೧ ॥

ಪ್ರೇಷಯಾಮಾಸುರಮರಾ ವಿವಾಹಾಯ ಪರಸ್ಪರಂ ।
ಸಂಬಂಧೋಽಪಿ ತಥಾಪ್ಯಾಸೀದ್ಧಿಮವಲ್ಲೋಕನಾಥಯೋಃ ॥ ೪೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ ಗಂಗೋತ್ಪತ್ತೌ ಶಂಭುವಿವಾಹಸಂಭವೋ ನಾಮೈಕಸಪ್ತತಿತಮೋಽಧ್ಯಾಯಃ

ದೇವತೆಗಳು ಭಯಗೊಂಡು ಅಂಜಲಿಯನ್ನು ಧರಿಸಿ ದೇವದೇವನಾದ ಮಹಾದೇವನನ್ನು ಕುರಿತು,

೪೦. ಓ ದೇವ, ತಾರಕನಿಂದ ನಮಗೆ ಭಯವೊದಗಿದೆ, ಅದನ್ನು ಹೋಗಲಾಡಿಸಲು ನೀನು ಗಿರಿಜೆಯನ್ನು ಮದುವೆಯಾಗಬೇಕು ಎಂದು ಪ್ರಾರ್ಥಿಸಿದರು.

೪೧. ಬ್ರಹ್ಮನು ಹೇಳಿದನು—ಶಿವನಿಗೆ ಮೊದಲೇ ಸ್ವಾಭಾವಿಕವಾಗಿ ಗಿರಿಜೆಯಲ್ಲಿ ಅನುರಾಗವಿದ್ದಿತು. ಆದುದರಿಂದ ದೇವತೆಗಳು ಮಾಡಿದ ಪ್ರಾರ್ಥನೆಯನ್ನಂಗೀಕರಿಸಿ ಅದರಂತೆ ಗಿರಿಜೆಯನ್ನು ವಿವಾಹವಾಗಲು ಒಪ್ಪಿಕೊಂಡನು.

೪೨. ಆಮೇಲೆ ದೇವತೆಗಳು ಗಿರಿಜಾಪರಮೇಶ್ವರರ ವಿವಾಹ ನಿಶ್ಚಯಕ್ಕಾಗಿ ಅರುಂಧತೀದೇವಿ, ವಸಿಷ್ಠಮುನಿ, ಹರಿ ಮತ್ತು ನಾನು ಇವರೆಲ್ಲರನ್ನೂ ಹಿಮವಂತನಬಳಿಗೆ ಕಳುಹಿಸಿದರು. ಮುಂದೆ ಪರಮೇಶ್ವರಹಿಮವಂತರಿಗೆ ಸಂಬಂಧವು ಬೆಳೆಯಿತು ಎಂದರೆ ಹಿಮವಂತನು ಗಿರಿಜೆಯನ್ನು ಶಿವನಿಗೆ ಮದುವೆಮಾಡಿ ಕೊಟ್ಟನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಗಂಗೋತ್ಪತ್ತಿಕಥಾವಿವರಣ ಸಂದರ್ಭದಲ್ಲಿ ಶಂಭುವಿವಾಹವರ್ಣನೆಯೆಂಬ ಎಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

ಗೌತಮೀ ಮಾಹಾತ್ಮ್ಯೆಯಲ್ಲಿ ಎರಡನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ದ್ವಿಸಪ್ತತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಹಿಮವತ್ಪರ್ವತೇ ಶ್ರೇಷ್ಠೇ ನಾನಾರತ್ನಪಚಿತ್ರಿತೇ ।
ನಾನಾವೃಕ್ಷಲತಾಕೀರ್ಣೇ ನಾನಾದ್ವಿಜನಿಷೇವಿತೇ ॥ ೧ ॥

ನದೀನದಸರಃಕೂಪತಡಾಗಾದಿಭಿರಾವೃತೇ ।
ದೇವಗಂಧರ್ವಯಕ್ಷಾದಿಸಿದ್ಧಚಾರಣಸೇವಿತೇ ॥ ೨ ॥

ಶುಭಮಾರುತಸಂಪನ್ನೇ ಹರ್ಷೋತ್ಕರ್ಷೈಕಕಾರಣೇ ।
ಮೇರುಮಂದರಕೈಲಾಸಮೈನಾಕಾದಿನಗೈರ್ವೃತೇ ॥ ೩ ॥

ಎಪ್ಪತ್ತೆರಡನೆಯ ಅಧ್ಯಾಯವು

೧-೩. ಬ್ರಹ್ಮನು ಹೇಳಿದನು—ಎಲೈ ನಾರದಮುನಿ, ಹಿಮಾಲಯವು ಸಾಮಾನ್ಯವಾದುದಲ್ಲ. ಅಲ್ಲಿ ನಾನಾಬಗೆಯ ರತ್ನಗಳಿರುವುವು, ನಾನಾಜಾತಿಯ ಮರಗಳಿರುವುವು. ನಾನಾಜಾತಿಯ ಹಕ್ಕಿಗಳು ವಾಸವಾಗಿದ್ದು ಇಂಪಾದ ಧ್ವನಿಗೈಯುವುವು. ನದಿಗಳು, ನದಗಳು,ಭಾವಿಗಳು ಸರೋವರಗಳು, ಇವುಗಳು ಹೇರಳವಾಗಿರುವುವು. ದೇವತೆಗಳು ಗಂಧರ್ವರು, ಯಕ್ಷರು, ಸಿದ್ಧರು, ಚಾರಣರು ಮೊದಲಾದವರು ಅಲ್ಲಿ ವಿಹರಿಸುವರು. ತಂಪಾದ ಮಂದವಾದ ಗಾಳಿಯು ಬೀಸುವುದು, ತುಂಬಾ ಆನಂದಮಯವಾಗಿರುವುದು. ಇಂತಹ ಹಿಮಾಲಯದಲ್ಲಿ ಗಿರಿಜಾಶಿವರ ಮದುವೆಯು ನಡೆಯಿತು. ಆ ಮಹೋತ್ಸವಕ್ಕೆ ಮೇರುಗಿರಿ, ಮಂದರಗಿರಿ, ಕೈಲಾಸ, ಮೈನಾಕ ಮೊದಲಾದ ಕುಲಗಿರಿಗಳು ಬಂದಿದ್ದವು.

ವಸಿಷ್ಠಾಗಸ್ತ್ಯಪೌಲಸ್ತ್ಯಲೋಮಶಾದಿಭಿರಾವೃತೇ ।
ಮಹೋತ್ಸವೇ ವರ್ತಮಾನೇ ವಿವಾಹಃ ಸಮಜಾಯತ ॥ ೪ ॥

ತತ್ರ ವೇದೀ ರತ್ನಮಯೀ ಶೋಭಿತಾ ಸ್ವರ್ಣಭೂಷಿತಾ ।
ವಜ್ರಮಾಣಿಕ್ಯವೈಢೂರ್ಯಸ್ತನ್ಮಯಸ್ತಂಭಶೋಭಿತಾ ॥ ೫ ॥

ಜಯಾಲಕ್ಷ್ಮೀಶುಭಾಕ್ಷಾಂತಿಕೀರ್ತಿಪುಷ್ಟ್ಯಾದಿಸಂವೃತಾ ।
ಮೇರುಮಂದರಕೈಲಾಸರೈವತೈಃ ಪರಿಶೋಭಿತೈಃ ॥ ೬ ॥

ಪೂಜಿತೋ ಲೋಕನಾಥೇನ ವಿಷ್ಣುನಾ ಪ್ರಭವಿಷ್ಣುನಾ ।
ಮೈನಾಕಃ ಪರ್ವತಶ್ರೇಷ್ಠೋ ರೇಜೇಽತೀವ ಹಿರಣ್ಮಯಃ ॥ ೭ ॥

ಋಷಯೋ ಲೋಕಪಾಲಾಶ್ಚ ಆದಿತ್ಯಾಃ ಸಮರುದ್ಗಣಾಃ ।
ವಿವಾಹೇ ವೇದಿಕಾಂ ಚಕ್ರುರ್ದೇವದೇವಸ್ಯ ಶೂಲಿನಃ ॥ ೮ ॥

---

೪. ವಸಿಷ್ಠಮುನಿ, ಅಗಸ್ತ್ಯಮುನಿ, ಪೌಲಸ್ತ್ಯಮುನಿ, ಲೋಮಶಮುನಿ ಮೊದಲಾದ ಮಹಾಮುನಿಗಳು ಬಂದು ವಿವಾಹಮಹೋತ್ಸವವನ್ನು ಸಾಂಗವಾಗಿ ನೆರವೇರಿಸಿದರು.

೫. ಆ ಗಿರಿಯಲ್ಲಿ ಮದುವೆಗಾಗಿ ಚಿನ್ನದಮಂಟಪವನ್ನು ನಿರ್ಮಿಸಿದ್ದರು. ಅದರ ಸುತ್ತಲೂ ರತ್ನಗಳನ್ನು ಕೆತ್ತಿದ್ದರು, ವಜ್ರಮಾಣಿಕ್ಯವೈಡೂರ್ಯಗಳ ಕಂಬಗಳನ್ನು ಆ ಮಂಟಪಕ್ಕೆ ನಿಲ್ಲಿಸಿದ್ದರು. ಜಯಲಕ್ಷ್ಮಿ, ಐಶ್ವರ್ಯಲಕ್ಷ್ಮಿ ಮಂಗಳೆ ಶಾಂತಿ, ಕೀರ್ತಿಲಕ್ಷ್ಮಿ, ಪುಷ್ಟಿ ಮೊದಲಾದ ದೇವಿಯರು ಆ ಮಂಟಪದಲ್ಲಿ ನೆಲಸಿದ್ದರು.

೬-೭. ಮೇರು. ಮಂದರ, ಕೈಲಾಸ, ರೈವತ ಈ ಗಿರಿಗಳಿಂದಲೂ ಲೋಕೇಶ್ವರನಾದ ಹರಿಯಿಂದಲೂ ಪೂಜಿಸಲ್ಪಟ್ಟು, ಗಿರಿಜೆಯ ಅಣ್ಣನಾದ ಸುವರ್ಣಮಯನಾದ ಮೈನಾಕನು ಅಲ್ಲಿ ರ್‍ಾರಾಜಿಸುತ್ತಲಿದ್ದನು.

೮. ಶಿವನು ಕುಳಿತುಕೊಳ್ಳಲು ವೇದಿಕೆಯನ್ನು ಋಷಿಗಳೂ, ಲೋಕಪಾಲಕರೂ, ಆದಿತ್ಯರೂ, ಮರುದ್ದೇವತೆಗಳೂ ನಿರ್ಮಿಸಿದರು.

ವಿಶ್ವಕರ್ಮಾ ಸ್ವಯಂ ತ್ವಷ್ಟಾ ವೇದೀಂ ಚಕ್ರೇ ಸತೋರಣಾಂ ।
ಸುರಭೀ ನಂದಿನೀ ನಂದಾ ಸುನಂದಾ ಕಾಮದೋಹಿನೀ ॥ ೯ ॥

ಆಭಿಸ್ತು ಶೋಭಿತೇಶಾನ್ಯಾ ವಿವಾಹಃ ಸಮುಜಾಯತ ।
ಸಮುದ್ರಾಃ ಸರಿತೋ ನಾಗಾ ಓಷಧ್ಯೋ ಲೋಕಮಾತರಃ ॥ ೧೦ ॥

ವನಸ್ಪತಿಬೀಜಾಶ್ಚ ಸರ್ವೇ ತತ್ರ ಸಮಾಯಯುಃ ।
ಭುವಃ ಕರ್ಮ ಇಲಾ ಚಕ್ರೇ ಓಷಧ್ಯಸ್ತ್ವನ್ನ ಕರ್ಮ ಚ ॥ ೧೧ ॥

ವರುಣಃ ಪಾನಕರ್ಮಾಣಿ ದಾನಕರ್ಮ ಧನಾಧಿಪಃ ।
ಅಗ್ನಿಶ್ಚಕಾರ ತತ್ರಾನ್ನಂ ಯಚ್ಚೇಷ್ಟಂ ಲೋಕನಾಥಯೋಃ ॥ ೧೨ ॥

ತತ್ರ ತತ್ರ ಪೃಥಕ್ಪೂಜಾಂ ಚಕ್ರೇ ವಿಷ್ಣುಃ ಸನಾತನಃ ।
ವೇದಾಶ್ಚ ಸರಹಸ್ಯಾ ವೈ ಗಾಯಂತಿ ಚ ಹಸಂತಿ ಚ ॥ ೧೩ ॥

---

೯. ವಿಶ್ವಕರ್ಮನು ತಾನೇ ವೇದಿಕೆಯನ್ನೂ, ತೋರಣವನ್ನೂ ನಿರ್ಮಿಸಿದನು. ಸುರಭಿ, ನಂದಿನೀ, ನಂದಾ, ಸುನಂದಾ, ಕಾಮಧೇನು ಮೊದಲಾದ ದೇವಧೇನುಗಳು ಅಲ್ಲಿ ನೆರದಿದ್ದುವು. ಇಂತಹ ಮಂಟಪದಲ್ಲಿ ಗಿರಿಜೆಯ ಮದುವೆಯು ನಡೆಯಿತು.

೧೦. ಸಮುದ್ರಗಳು, ನದಿಗಳು, ನಾಗಗಳು, ವನಸ್ಪತಿಗಳು, ವನಸ್ಪತಿ ಬೀಜಗಳು, ಲೋಕಮಾತೆಯರು ಇವರೆಲ್ಲರೂ ಆ ಗಿರಿಜಾಶಿವರ ವಿವಾಹಕ್ಕೆ ಬಂದಿದ್ದರು.

೧೧-೧೨. ಭೂಮಿಯಲ್ಲಾಗಬೇಕಾದ ಕೆಲಸವನ್ನು ಭೂದೇವಿಯು ಮಾಡಿದಳು. ಆಹಾರವನ್ನು ಓಷಧಿಗಳು ಸಿದ್ಧಪಡಿಸಿದುವು. ವರುಣನು ಪಾನವಸ್ತುಗಳನ್ನು ನಿರ್ಮಿಸಿದನು. ಧನಪತಿಯಾದ ಕುಬೇರನು ದಾನವನ್ನು ಮಾಡಿದನು. ಅಗ್ನಿಯು ಗಿರಿಜಾಶಿವರಿಗೆ ಮೃಷ್ಟಾನ್ನವನ್ನು ಮಾಡಿ ಬಡಿಸಿದನು.

೧೩. ಆದಿಪುರುಷನಾದ ಹರಿಯು ಗಿರಿಜಾಶಿವರನ್ನು ಅಲ್ಲಲ್ಲಿ ಬೇರೆಬೇರೆಯಾಗಿ ಪೂಜಿಸಿದನು. ವೇದಗಳೂ, ಉಪನಿಷತ್ತುಗಳೂ ಶಿವಗಿರಿಜೆಯರನ್ನು ಸ್ತುತಿಸಿ ಗಾನಮಾಡಿದುವು.

ನೃತ್ಯಂತ್ಯಪ್ಸರಸಃ ಸರ್ವಾ ಜಗುರ್ಗಂಧರ್ವಕಿಂನರಾಃ ।
ಲಾಜಾಧ್ವಕ್ಷಾಪಿ ಮೈನಾಕೋ ಬಭೂವ ಮುನಿಸತ್ತಮ ॥ ೧೪ ॥

ಪುಣ್ಯಾಹವಾಚನಂ ವೃತ್ತಮಂತರ್ವೇಶ್ಮನಿ ನಾರದ ।
ವೇದಿಕಾಯಾಮುಪಾವಿಷ್ಟೌ ದಂಪತೀ ಸುರಸತ್ತಮೌ ॥ ೧೫ ॥

ಪ್ರತಿಷ್ಠಾಪ್ಯಾಗ್ನಿಂ ವಿಧಿವದಶ್ಮಾನಂ ಚಾಪಿ ಪುತ್ರಕೆ ।
ಹುತ್ವಾ ಲಾಜಾಂಶ್ಚ ವಿಧಿವತ್ಪ್ರದಕ್ಷಿಣಮಥಾಕರೋತ್ ॥ ೧೬ ॥

ಅಶ್ಮನಃ ಸ್ಪರ್ಶಹೇತೋಶ್ಚ ದೇವ್ಯಂಗುಷ್ಠಂ ಕರೇಽಸ್ಪೃಶತ್ ।
ವಿಷ್ಣುನಾ ಪ್ರೇರಿತಃ ಶಂಭುರ್ದಕ್ಷಿಣಸ್ಯ ಪದಸ್ಯ ಚ ॥ ೧೭ ॥

ತಾಮುದರ್ಶಮಹಂ ತತ್ರ ಹೋಮಂ ಕುರ್ವನ್ಸ್ವರಾಂತಿಕೇ ।
ದೃಷ್ಟ್ವೇಽಂಗುಷ್ಠೇ ದುಷ್ಟಬುದ್ಧ್ಯಾ ವೀರ್ಯಂ ಸುಸ್ರಾವ ಮೇ ತದಾ ॥ ೧೮ ॥

---

೧೪. ಅಪ್ಸರೆಯರು ನರ್ತನಮಾಡಿದರು, ಗಂಧರ್ವರು ಗಾನಮಾಡಿದರು. ಲಾಜಾಹೋಮಕ್ಕೆ ಅರಳನ್ನು ವಧುವಿನ ಅಣ್ಣನಾದ ಮೈನಾಕನು ಸಮರ್ಪಿಸಿದನು.

೧೫. ಒಳಮನೆಯಲ್ಲಿ ಪುಣ್ಯಾಹವಾಚನವು ನಡೆಯಿತು. ಆಮೇಲೆ ದಂಪತಿಗಳು ವಿವಾಹವೇದಿಕೆಯಲ್ಲಿ ಬಂದು ಕುಳಿತರು.

೧೬. ವಿಧಿವತ್ತಾಗಿ ಅಗ್ನಿಯನ್ನು ಪ್ರತಿಷ್ಠಿಸಿ, ಅಶ್ಮಾರೋಪಣಪೂರ್ವಕವಾಗಿ ಅಗ್ನಿಯಲ್ಲಿ ವಿಧಿವತ್ತಾಗಿ ಲಾಜಹೋಮವನ್ನು ಮಾಡಿ ದಂಪತಿಗಳು ಪ್ರದಕ್ಷಿಣೆಬಂದರು.

೧೭. ವಿಷ್ಣುವು ಶಿವನನ್ನು ಪ್ರೇರಿಸಲು ಅವನು ದೇವಿಯ ಬಲಗಾಲಿನ ಅಂಗುಷ್ಠವನ್ನು ಹಿಡಿದು ವಿವಾಹಶಿಲೆಯ ಮೇಲಿರಿಸಿದನು.

೧೮. ಆಗ ನಾನಲ್ಲಿ ಹೋಮಮಾಡುತ್ತಿದ್ದೆನು, ದೇವಿಯ ಸುಂದರವಾದ ಆ ಬಲಗಾಲಿನ ಹೆಬ್ಬೆರಳು ನನಗೆ ಕಾಣಿಸಿತು, ಅದರಿಂದ ನಾನು ಕೆಟ್ಟ ಬುದ್ಧಿಯಿಂದ ಮೋಹಗೊಂಡೆನು. ಕೂಡಲೇ ನನ್ನ ರೇತಸ್ಸು ಹೊರಬಿದ್ದಿತು.

ಲಜ್ಜಯಾ ಕಲುಷೀಭೂತಃ ಸ್ಕನ್ನಂ ವೀರ್ಯಮಚೂರ್ಣಯಂ ।
ಮದ್ವೀರ್ಯಾಚ್ಚೂರ್ಣಿತಾತ್ತಸ್ಮಾತ್ ವಾಲಖಿಲ್ಯಾಸ್ತು ಜಜ್ಞಿರೇ ॥ ೧೯ ॥

ತತೋ ಮಹಾನಭೂತ್ತತ್ರ ಹಾಹಾಕಾರಃ ಸುರೋದಿತಃ ।
ಲಜ್ಜಯಾ ಪರಿಭೂತೋಽಹಂ ನಿರ್ಗತಸ್ತು ತದಾಸನಾತ್ ॥ ೨೦ ॥

ಪಶ್ಯತ್ಸು ದೇವಸಂಘೇಷು ತೂಷ್ಣೀಂಭೂತೇಷು ನಾರದ ।
ಗಚ್ಛಂತಂ ಮಾಂ ಮಹಾದೇವೋ ದೃಷ್ಟ್ವಾ ನಂದಿನಮಬ್ರವೀತ್ ॥ ೨೧ ॥

॥ ಶಿವ ಉವಾಚ ॥

ಬ್ರಹ್ಮಾಣಮಾಹ್ವಯಸ್ವೇಹ ಗತಪಾಪಂ ಕರೋಮ್ಯಹಂ ।
ಕೃತಾಪರಾಧೇಽಪಿ ಜನೇ ಸಂತಃ ಸಕೃಪಮಾನಸಾಃ ।
ಮೋಹಯಂತ್ಯಪಿ ವಿದ್ವಾಂಸಂ ವಿಷಯಾಣಾಮಿಯಂ ಸ್ಥಿತಿಃ ॥ ೨೨ ॥

---

೧೯. ಆಗ ನಾನು ಲಜ್ಜೆಗೊಂಡು ಆ ಬಿದ್ದ ರೇತಸ್ಸನ್ನು ಮರ್ದಿಸಿದೆನು, ಮರ್ದಿಸಿದ ಆ ವೀರ್ಯದಿಂದ ವಾಲಖಿಲ್ಯರೆಂಬ ಮುನಿಗಳು ಜನಿಸಿದರು.

೨೦. ಆಗ ದೇವತೆಗಳು ಆಭಾಸವಾಯಿತೆಂದು ಹಾಹಾಕಾರವನ್ನು ಮಾಡಿದರು. ಅದರಿಂದ ನಾನು ಮತ್ತೂ ಲಜ್ಜೆಗೊಂಡು ಆಸನವನ್ನು ಬಿಟ್ಟು ಹೊರಟೆನು.

೨೧. ಮಾತನಾಡದೆ ದೇವತೆಗಳು ಇದೆಲ್ಲವನ್ನೂ ನೋಡುತ್ತಿದ್ದರು. ನಾನು ಹೋಗುತ್ತಿರುವುದನ್ನು ನೋಡಿ ಮಹಾದೇವನು ನಂದಿಯನ್ನು ಕುರಿತು,

೨೨. ಎಲೈ ನಂದಿ, ಬ್ರಹ್ಮನನ್ನು ಇಲ್ಲಿಗೆ ಕರೆ, ಅವನ ಪಾಪವನ್ನು ಹೋಗಲಾಡಿಸುವೆನು. ಸುಖವಸ್ತುಗಳು ವಿದ್ವಾಂಸನನ್ನೂ ಮೋಹಗೊಳಿಸುವುವು. ಅವುಗಳ ಸ್ವಭಾವವೇ ಅಂತಹುದು. ಆದುದರಿಂದ ಸತ್ಪುರುಷರು ತಪ್ಪು ಮಾಡಿದವನನ್ನೂ ಕ್ಷಮಿಸುವರು ಎಂದನು.

॥ ಬ್ರಹ್ಮೋವಾಚ ॥

ಏವಮುಕ್ತ್ವಾ ಸ ಭಗವಾನುಮಯಾ ಸಹಿತಃ ಶಿವಃ ।
ಮಮಾನುಕಂಪಯಾ ಚೈವ ಲೋಕಾನಾಂ ಹಿತಕಾಮ್ಯಯಾ ॥ ೨೩ ॥

ಏತಚ್ಚಕಾರ ಲೋಕೇಶಃ ಶೃಣು ನಾರದ ಯತ್ನತಃ ।
ಪಾಪಿನಾಂ ಪಾಪಮೋಕ್ಷಾಯ ಭೂಮಿರಾಪೋ ಭವಿಷ್ಯತಿ ॥ ೨೪ ॥

ತಯೋಶ್ಚ ಸಾರಸರ್ವಸ್ವಮಾಹರಿಷ್ಯಾಮಿ ಪಾವನಂ ।
ಏವಂ ನಿಶ್ಚಿತ್ಯ ಭಗವಾಂಸ್ತಯೋಃ ಸಾರಂ ಸಮಾಹರತ್ ॥ ೨೫ ॥

ಭೂಮಿಂ ಕಮಂಡಲುಂ ಕೃತ್ವಾ ತತ್ರಾಪಃ ಸಂನಿವೇಶ್ಯ ಚ ।
ಪಾವಮಾನ್ಯಾದಿಭಿಃ ಸೂಕ್ತೈರಭಿಮಂತ್ರ್ಯ ಚ ಯತ್ನತಃ ॥ ೨೬ ॥

ತ್ರಿಜಗತ್ಪಾವನೀಂ ಶಕ್ತಿಂ ತತ್ರ ಸಸ್ಮಾರ ಪಾಪಹಾ ।
ಮಾಮುವಾಚ ಸ ಲೋಕೇಶೋ ಗೃಹಾಣೇಮಂ ಕಮಂಡಲುಂ ॥ ೨೭ ॥

---

೨೩. ಹೀಗೆ ಹೇಳಿ ಭಗವಂತನಾದ ಆ ಶಿವನು ನನ್ನಲ್ಲಿ ದಯೆಯಿಂದಲೂ, ಲೋಕಗಳಿಗೆ ಹಿತವಾಗಲೆಂದೂ ದೇವಿಯೊಡನೆ ಬಂದು ಕಾರ್ಯವನ್ನು ಮಾಡಿದನು, ಅದನ್ನು ಹೇಳುವೆನು, ಎಲೈ ನಾರದ, ಶ್ರದ್ಧೆಯಿಂದ ಕೇಳು.

೨೪. ಪಾಪಿಗಳ ಪಾಪವನ್ನು ನಾಶಮಾಡಲು ಭೂಮಿಯೂ ಜಲವೂ ಇರುವುವು. ಆ ಭೂಮಿಜಲಗಳ ಪವಿತ್ರವಾದ ಸಾರವನ್ನು ತೆಗೆಯುವೆನು.

೨೫–೨೬. ಎಂದು ನಿಶ್ಚಯಿಸಿ ಮಹಾದೇವನು ಭೂಮಿ ಮತ್ತು ಜಲಗಳ ಸಾರವನ್ನು ತೆಗೆದನು. ಭೂಮಿಯನ್ನು ಕಮಂಡಲವನ್ನಾಗಿ ಮಾಡಿ ಅದರಲ್ಲಿ ಜಲವನ್ನಿರಿಸಿದನು. ಆ ಜಲವನ್ನು ಪವಮಾನಸೂಕ್ತ ಮೊದಲಾದ ಮಂತ್ರಗಳಿಂದ ಅಭಿಮಂತ್ರಿಸಿ ಮೂರು ಲೋಕಗಳನ್ನೂ ಪವಿತ್ರಗೊಳಿಸುವ ಶಿವಶಕ್ತಿಯನ್ನು ಅಲ್ಲಿ ಧ್ಯಾನಿಸಿದನು.

೨೭-೨೮. ಆಮೇಲೆ ಪರಮೇಶ್ವರನು ನನ್ನನ್ನು ಕುರಿತು ಎಲೈ ಬ್ರಹ್ಮ,

ಆಪೋ ವೈ ಮಾತರೋ ದೇವ್ಯೋ ಭೂಮಿರ್ಮಾತಾ ತಥಾಪರಾ ।
ಸ್ಥಿತ್ಯುತ್ಪತ್ತಿವಿನಾಶಾನಾಂ ಹೇತುತ್ವಮುಭಯೋಃ ಸ್ಥಿತಂ ॥ ೨೮ ॥

ಅತ್ರ ಪ್ರತಿಷ್ಠಿತೋ ಧರ್ಮೋ ಹ್ಯತ್ರ ಯಜ್ಞಃ ಸನಾತನಃ ।
ಅತ್ರ ಭುಕ್ತಿಶ್ಚ ಮುಕ್ತಿಶ್ಚ ಸ್ಥಾವರಂ ಜಂಗಮಂ ತಥಾ ॥ ೨೯ ॥

ಸ್ಮರಣಾನ್ಮಾನಸಂ ಪಾಪಂ ವಚನಾದ್ವಾಚಿಕಂ ತಥಾ ।
ಸ್ನಾನಪಾನಾಭಿಷೇಕಾಚ್ಚ ಪ್ರಣಶ್ಯತ್ಯಪಿ ಕಾಯಿಕಂ ॥ ೩೦ ॥

ಏತದೇವಾಮೃತಂ ಲೋಕೇ ನೈತಸ್ಮಾತ್ಪಾವನಂ ಪರಂ ।
ಮಯಾಭಿಮಂತ್ರಿತಂ ಬ್ರಹ್ಮನ್ಗೃಹಾಣೇಮಂ ಕಮಂಡಲುಂ ॥ ೩೧ ॥

ಅತ್ರತ್ಯಂ ವಾರಿ ಯಃ ಕಶ್ಚಿತ್ಸ್ಮರೇದಪಿ ಪಠೇದಪಿ ।
ಸ ಸರ್ವಕಾಮಾನಾಪ್ನೋತಿ ಗೃಹಾಣೇಮಂ ಕಮಂಡಲುಂ ॥ ೩೨ ॥

ಈಕಮಂಡಲುವನ್ನು ತೆಗೆದುಕೋ, ಜಲವೂ, ಭೂಮಿಯೂ, ಲೋಕಮಾತೆಯರು. ಜಗತ್ತಿನ ಸ್ಥಿತಿ, ಉತ್ಪತ್ತಿ, ನಾಶಗಳಿಗೆ ಇವೆರಡೂ ಕಾರಣಗಳು.

೨೯. ಈ ಕಮಂಡಲುವಿನ ಜಲದಲ್ಲಿ ಧರ್ಮವು ಅಡಗಿರುವುದು. ಅನಾದಿಧರ್ಮವು ನೆಲಸಿರುವುದು, ಭೋಗಮೋಕ್ಷಗಳೆರಡೂ ಇದರಲ್ಲಿಯೇ ಇರುವುವು. ಸ್ಥಿರಚರರೂಪವಾದ ಪ್ರಾಣಿಗಳು ಇದರ ಆಧಾರದ ಮೇಲೆಯೇ ನಿಂತಿರುವುವು.

೩೦. ಈ ಕಮಂಡಲುಜಲವನ್ನು ಸ್ಮರಣೆಮಾಡಿದರೆ ಮನಸ್ಸಿನ ಪಾಪವು ಹೋಗುವುದು, ಸ್ತುತಿಸಿದರೆ ವಾಕ್ಕಿನ ಪಾಪವು ಹೋಗುವುದು, ಸ್ನಾನಪಾನಗಳನ್ನೂ ದೇವತಾಭಿಷೇಕವನ್ನೂ ಮಾಡಿದರೆ ಶರೀರದ ಪಾಪವೂ ನಾಶವಾಗುವುದು.

೩೧. ಈ ಕಮಂಡಲುವಿನಲ್ಲಿರುವ ಜಲವನ್ನು ಸ್ಮರಿಸಿದವನೂ, ಸ್ತುತಿಸಿದವನೂ ಸಕಲ ಮನೋರಥಗಳನ್ನೂ ಪಡೆಯುವನು, ಈ ಕಮಂಡಲುವನ್ನು ತೆಗೆದುಕೋ.

೩೨. ಈ ಕಮಂಡಲಜಲವೇ ಅಮೃತವು, ಲೋಕದಲ್ಲಿ ಇದಕ್ಕಿಂತ ಪವಿತ್ರವಾದ ವಸ್ತುವು ಮತ್ತೊಂದಿಲ್ಲ. ನಾನು ಅಭಿಮಂತ್ರಿಸಿರುವ ಈ ಕಮಂಡಲುವನ್ನು ತೆಗೆದುಕೋ.

ಭೂತೇಭ್ಯಶ್ಚಾಪಿ ಪಂಚಭ್ಯ ಆಪೋ ಭೂತಂ ಮಹೋದಿತಂ ।
ತಾಸಾಮುತ್ತಷ್ಟಮೇತಸ್ಮಾದ್ಗೃಹಾಣೇಮಂ ಕಮಂಡಲುಂ ॥ ೩೩ ॥

ಅತ್ರ ಯದ್ವಾರಿ ಶೋಭಿಷ್ಠಂ ಪುಣ್ಯಂ ಪಾವನಮೇವ ಚ ।
ಸ್ಪೃಷ್ಟ್ವಾ ಸ್ಮೃತ್ವಾ ಚ ದೃಷ್ಟ್ವಾ ಚ ಬ್ರಹ್ಮನ್ಪಾಪಾದ್ವಿಮೋಕ್ಷ್ಯಸೇ ॥ ೩೪ ॥

ಏವಮುಕ್ತ್ವಾ ಮಹಾದೇವಃ ಪ್ರಾದಾನ್ಮಮ ಕಮಂಡಲುಂ ।
ತತಃ ಸುರಗಣಾಃ ಸರ್ವೇ ಭಕ್ತ್ಯಾ ಪ್ರೋಚುಃ ಸುರೇಶ್ವರಂ ।
ಆಹ್ಲಾದಶ್ಚ ಮಹಾಂಸ್ತತ್ರ ಜಯಶಬ್ದೋ ವ್ಯವರ್ತತ ॥ ೩೫ ॥

ದೇವೋತ್ಸವೇ ಮಾತುರಜಃ ಪದಾಗ್ರಂ
ಸಮೀಕ್ಷ್ಯ ಪಾಪಾತ್ಪತಿತತ್ವಮಾಪ ।

---

೩೩. ಪಂಚಮಹಾಭೂತಗಳಲ್ಲಿ ಜಲವೇ ಶ್ರೇಷ್ಠವಾದುದು, ಅದರಲ್ಲಿಯೂ ಈ ಕಮಂಡಲುಜಲವು ಮತ್ತೂ ಶ್ರೇಷ್ಠವಾದುದು. ಆದುದರಿಂದ ಈ ಕಮಂಡಲುವನ್ನು ತೆಗೆದುಕೋ.

೩೪. ಎಲೈ ಬ್ರಹ್ಮ, ಈ ಕಮಂಡಲುವಿನಲ್ಲಿರುವ ಅತಿಪವಿತ್ರವಾದ ಜಲವನ್ನು ಸ್ಪರ್ಶಿಸಿದರೂ ಸ್ಮರಿಸಿದರೂ, ದರ್ಶನಮಾಡಿದರೂ ನಿನ್ನ ಪಾಪವು ನಾಶವಾಗುವುದು.

೩೫. ಹೀಗೆ ಹೇಳಿ ಮಹಾದೇವನು ನನಗೆ ಕಮಂಡಲುವನ್ನು ಕೊಟ್ಟನು. ಆಗ ದೇವತೆಗಳು ಸಂತಸಗೊಂಡು ಭಕ್ತಿಯಿಂದ ಶಿವನನ್ನು ಸ್ತುತಿಸಿ ಜಯಶಬ್ದವನ್ನು ಮಾಡಿದರು.

೩೬. ಹೀಗೆ ಗಿರಿಜಾಶಿವರ ವಿವಾಹಮಹೋತ್ಸವದಲ್ಲಿ ಜಗನ್ಮಾತೆಯಾದ ಪಾರ್ವತಿಯ ಬಲಗಾಲಿನ ಸುಂದರವಾದ ಹೆಬ್ಬೆರಳನ್ನು ನೋಡಿ ಬ್ರಹ್ಮನು ಕಾಮ

ಸ್ಪ್ರಾದಾತ್ಕೃಪಾಲುಃ ಸ್ಮರಣಾತ್ಪವಿತ್ರಾಂ
ಗಂಗಾಂ ಪಿತಾ ಪುಣ್ಯಕಮಂಡಲುಸ್ಥಾಂ ॥ ೩೬ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ ತೀರ್ಥಮಾಹಾತ್ಮ್ಯೇ ಗಂಗೋತ್ಪತ್ತೌ ಬ್ರಹ್ಮಕಮಂಡಲುದಾನಂ ನಾಮ ದ್ವಿಸಪ್ತತಿತಮೋಽಧ್ಯಾಯಃ

ವಿಕಾರಕ್ಕೊಳಗಾಗಿ ಪತಿತನಾದನು, ಆ ಪಾಪವನ್ನು ಹೋಗಲಾಡಿಸಲು ದಯಾಳುವಾದ ಶಿವನು ಪವಿತ್ರವಾದ ಕಮಂಡಲುವಿನಲ್ಲಿ ಗಂಗೆಯನ್ನಭಿಮಂತ್ರಿಸಿ ಬ್ರಹ್ಮನಿಗೆ ಕೊಟ್ಟನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಮಹಾದೇವನು ಬ್ರಹ್ಮನ ಪಾಪವನ್ನು ಹೋಗಲಾಡಿಸಿ ಪವಿತ್ರವಾದ ಕಮಂಡಲುವನ್ನಭಿಮಂತ್ರಿಸಿಕೊಟ್ಟವರ್ಣನವೆಂಬ ಎಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

ಗೌತಮೀ ಮಾಹಾತ್ಮ್ಯೆಯಲ್ಲಿ ಮೂರನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ತ್ರಿಸಪ್ತತಿತಮೋಽಧ್ಯಾಯಃ

॥ ನಾರದ ಉವಾಚ ॥

ಕಮಂಡಲುಸ್ಥಿತಾ ದೇವೀ ತವ ಪುಣ್ಯವಿವರ್ಧಿನೀ ।
ಯಥಾ ಮರ್ತ್ಯಂ ಗತಾ ನಾಥ ತನ್ಮೇ ವಿಸ್ತರತೋ ವದ ॥ ೧ ॥

॥ ಬ್ರಹ್ಮೋವಾಚ ॥

ಬಲಿರ್ನಾಮ ಮಹಾದೈತ್ಯೋ ದೇವಾರಿರಪರಾಜಿತಃ ।
ಧರ್ಮೇಣ ಯಶಸಾ ಚೈವ ಪ್ರಜಾಸಂರಕ್ಷಣೇನ ಚ ॥ ೨ ॥

ಗುರುಭಕ್ತ್ಯಾ ಚ ಸತ್ಯೇನ ವೀರ್ಯೇಣ ಚ ಬಲೇನ ಚ ।
ತ್ಯಾಗೇನ ಕ್ಷಮಯಾ ಚೈವ ತ್ರೈಲೋಕ್ಯೇ ನೋಪಮೀಯತೇ ॥ ೩ ॥

ಎಪ್ಪತ್ತಮೂರನೆಯ ಅಧ್ಯಾಯವು

೧. ನಾರದಮುನಿಯು ಪ್ರಶ್ನೆಮಾಡಿದನು—ಓ ಬ್ರಹ್ಮದೇವ, ನಿನ್ನ ಕಮಂಡಲುವಿನಲ್ಲಿದ್ದ ಪುಣ್ಯವನ್ನುಂಟುಮಾಡುವ ಗಂಗಾನದಿಯು ಭೂಲೋಕಕ್ಕೆ ಇಳಿದುಬಂದ ಇತಿಹಾಸವನ್ನು ವಿಸ್ತಾರವಾಗಿ ನನಗೆ ಹೇಳು ಎನ್ನಲು,

೨-೩. ಬ್ರಹ್ಮನು ಹೇಳಿದನು—ಹಿಂದೆ ಬಲಿಯೆಂಬ ಮಹಾಸುರನಿದ್ದನು. ಅವನು ಮಹಾಪರಾಕ್ರಮಿಯಾಗಿದ್ದು ದೇವತೆಗಳನ್ನೂ ಸೋಲಿಸಿದ್ದನು. ಆಗ ಮೂರುಲೋಕಗಳಲ್ಲೂ ಧರ್ಮ, ಯಶಸ್ಸು, ಪ್ರಜೆಗಳನ್ನು ರಕ್ಷಿಸುವುದು,

ತಸ್ಯರ್ಧಿಮನುನ್ನತಾಂ ದೃಷ್ಟ್ವಾ ದೇವಾಶ್ಚಿಂತಾಪರಾಯಣಾಃ ।
ಮಿಥಃ ಸಮೂಚುರಮರಾ ಜೇಷ್ಯಾಮೋ ನೈ ಕಥಂ ಬಲಿಂ ॥ ೪ ॥

ತಸ್ಮಿನ್ ಶಾಸತಿ ರಾಜ್ಯಂ ತು ತ್ರೈಲೋಕ್ಯಂ ಹತಕಂಟಕಂ ।
ನಾರಯೋ ವ್ಯಾಧಯೋ ವಾಪಿ ನಾಧಯೋ ವಾ ಕಥಂಚನ ॥ ೫ ॥

ಅನಾವೃಷ್ಟಿರಧರ್ಮೋ ವಾ ನಾಸ್ತಿಶಬ್ದೋ ನ ದುರ್ಜನಃ ।
ಸ್ವಪ್ನೇऽಪಿ ನೈವ ದೃಶ್ಯೇತ ಬಲೌ ರಾಜ್ಯಂ ಪ್ರಶಾಸತಿ ॥ ೬ ॥

ತಸ್ಯೋನ್ನತಿಶರೈರ್ಭಗ್ನಾಃ ಕೀರ್ತಿಖಡ್ಗದ್ವಿಧಾಕೃತಾಃ ।
ತಸ್ಯಾಜ್ಞಾಶಕ್ತಿಭಿನ್ನಾಂಗಾ ದೇವಾಃ ಶರ್ಮ ನ ಲೇಭಿರೇ ॥ ೭ ॥

ಗುರುಭಕ್ತಿ, ಸತ್ಯ, ವೀರ್ಯ, ಬಲ, ತ್ಯಾಗ, ಸಹನೆ ಇವುಗಳಿಂದ ಆ ಬಲಿಯನ್ನು ಸರಿಗಟ್ಟುವವರು ಯಾರೂ ಇರಲಿಲ್ಲ.

೪. ಬಲಿಚಕ್ರವರ್ತಿಯ ಅಂತಹ ಅಭಿವೃದ್ಧಿಯನ್ನೂ, ಐಶ್ವರ್ಯವನ್ನೂ ನೋಡಿ ದೇವತೆಗಳು ಅಸೂಯೆಯಿಂದ ಚಿಂತೆಗೊಳಗಾಗಿ ಈ ಬಲಿಯನ್ನು ಜಯಿಸುವ ಬಗೆ ಹೇಗೆ? ಎಂದು ಪರಸ್ಪರ ಆಲೋಚನೆಮಾಡಿದರು.

೫. ಆ ಬಲಿಯು ರಾಜ್ಯವಾಳುತ್ತಿರುವಾಗ ಮೂರು ಲೋಕಗಳಲ್ಲಿ ಅವನಿಗಿದಿರಾಗುವಂತಹ ಶತ್ರುಗಳು ಯಾರೂ ಇರಲಿಲ್ಲ. ರಾಜ್ಯದಲ್ಲಿ ಯಾವ ತೊಂದರೆಯೂ ಇರಲಿಲ್ಲ. ರೋಗರುಜಿನಗಳು, ಮನೋವ್ಯಥೆಗಳು ಜನಗಳಿಗೆ ಇರಲಿಲ್ಲ.

೬. ಬರಗಾಲ, ಅಧರ್ಮಗಳು ಸ್ವಪ್ನದಲ್ಲಿಯೂ ಇರಲಿಲ್ಲ. ದೇಹಿ ಎಂದವರಿಗೆ ಇಲ್ಲ ಎನ್ನುವ ಶಬ್ದವನ್ನು ಯಾರೂ ಹೇಳುತ್ತಿರಲಿಲ್ಲ, ದುಷ್ಟರ ಹೆಸರೇ ಇರಲಿಲ್ಲ.

೭. ದೇವತೆಗಳಿಗೆ ಆ ಬಲಿಯು ಇಂತಹ ಅಭಿವೃದ್ಧಿಯೆಂಬ ಬಾಣಗಳ ಏಟು ಸದಾ ಬೀಳುತ್ತಿತ್ತು. ಕೀರ್ತಿಯೆಂಬ ಖಡ್ಗದಿಂದಲೂ, ಆಜ್ಞೆಯೆಂಬ ಶಕ್ತ್ಯಾಯುಧದಿಂದಲೂ ದೇವತೆಗಳ ಶರೀರವು ಜರ್ಝರಿತವಾಗಿ ಅವರಿಗೆ ಕ್ಷಣಕಾಲವೂ ಸುಖವಿರಲಿಲ್ಲ.

ತತಃ ಸಂಮಂತ್ರಯಾಮಾಸುಃ ಕೃತ್ವಾ ಮಾತ್ಸರ್ಯಮಗ್ರತಃ ।
ತದ್ಯಶೋಽಗ್ನಿಪ್ರದೀಪ್ತಾಂಗಾ ವಿಷ್ಣುಂ ಜಗ್ಮುಃ ಸುವಿಹ್ವಲಾಃ ॥ ೮ ॥

॥ ದೇವಾ ಊಚುಃ ॥

ಆರ್ತಾಃ ಸ್ಮ ಗತಸತ್ತ್ವಾಃ ಸ್ಮ ಶಂಖಚಕ್ರಗದಾಧರ ।
ಅಸ್ಮದರ್ಥೇ ಭವಾನ್ನಿತ್ಯಮಾಯುಧಾನಿ ಬಿಭರ್ತಿ ಚ ॥ ೯ ॥

ತ್ವಯಿ ನಾಥೇ ಜಗನ್ನಾಥ ಅಸ್ಮಾಕಂ ದುಃಖಮೀದೃಶಂ ।
ತ್ವಾಂ ತು ಪ್ರಣಮತೀ ವಾಣೀ ಕಥಂ ದೈತ್ಯಂ ನಮಸ್ಯತಿ ॥ ೧೦ ॥

ಮನಸಾ ಕರ್ಮಣಾ ವಾಚಾ ತ್ವಾಮೇವ ಶರಣಂ ಗತಾಃ ।
ತ್ವದಂಘ್ರಿಶರಣಾಃ ಸಂತಃ ಕಥಂ ದೈತ್ಯಂ ನಮೇಮಹಿ ॥ ೧೧ ॥

---

೮. ಬಲಿರಾಜನ ಅಂತಹ ಯಶಸ್ಸನ್ನು ನೋಡಿ ಅಸೂಯೆಯಿಂದ ದೇವತೆಗಳಿಗೆ ಮೈಯೆಲ್ಲವೂ ಉರಿದಂತಾಯಿತು. ಹೀಗೆ ಅಸೂಯೆಗೊಂಡ ಆ ದೇವತೆಗಳು ತಾವೇ ಪರಸ್ಪರ ಆಲೋಚಿಸಿಗೊಂಡು ಶ್ರೀಹರಿಯ ಬಳಿಗೆ ಬಂದು ಅವನನ್ನು ಕುರಿತು,

೯. ಶಂಖಚಕ್ರಗದಾಧಾರಿಯಾದ ಓ ದೇವ, ಈಗ ನಾವು ದುಃಖಿತರೂ, ಅಶಕ್ತರೂ ಆಗಿರುವೆವು. ನಮ್ಮ ರಕ್ಷಣೆಗಾಗಿಯೇ ನೀನು ಈ ಶಂಖಚಕ್ರ ಮೊದಲಾದ ಆಯುಧಗಳನ್ನು ಧರಿಸಿರುವೆಯಷ್ಟೆ ?

೧೦. ಓ ಜಗನ್ನಾಥ, ನೀನು ನಮಗೊಡೆಯನಾಗಿದ್ದೂ ನಮಗೆ ಇಂತಹ ದುಃಖವು ಬಂದಿರುವುದು. ನಿನ್ನನ್ನು ಸ್ತುತಿಸುವ ನಮ್ಮ ವಾಣಿಯಿಂದ ಈಗ ದೈತ್ಯನನ್ನು ಸ್ತುತಿಸಬೇಕಾಗಿದೆ.

೧೧. ಮನೋವಾಕ್ಕಾಯಗಳಿಂದ ನಿನ್ನನ್ನೇ ಶರಣುಹೊಂದಿರುವೆವು. ನಿನ್ನ ಪಾದಕಮಲವೇ ನಮಗಾಶ್ರಯವು. ಹೀಗಿದ್ದು ಈಗ ದೈತ್ಯನನ್ನು ನಾವು ನಮಸ್ಕರಿಸಬೇಕಾಗಿದೆಯಲ್ಲಾ.

ಯಜಾಮಸ್ತ್ವಾಂ ಮಹಾಯಜ್ಞೈರ್ವದಾಮೋ ವಾಗ್ಭಿರಚ್ಯುತ ।
ತ್ವದೇಕಶರಣಾಃ ಸಂತಃ ಕಥಂ ದೈತ್ಯಂ ನಮೋಮಹಿ ॥ ೧೨ ॥

ತ್ವದ್ವೀರ್ಯಮಾಶ್ರಿತಾ ನಿತ್ಯಂ ದೇವಾಃ ಸೇಂದ್ರಪುರೋಗಮಾಃ ।
ತ್ವಯಾ ದತ್ತಂ ಪದಂ ಪ್ರಾಪ್ಯ ಕಥಂ ದೈತ್ಯಂ ನಮೋಮಹಿ ॥ ೧೩ ॥

ಸೃಷ್ಟ್ವಾ ತ್ವಂ ಬ್ರಹ್ಮಮೂರ್ತ್ಯಾ ತು ವಿಷ್ಣುರ್ಭೂತ್ವಾ ತು ರಕ್ಷಸಿ ।
ಸಂಹರ್ತಾ ರುದ್ರಶಕ್ತ್ಯಾ ತ್ವಂ ಕಥಂ ದೈತ್ಯಂ ನಮೋಮಹಿ ॥ ೧೪ ॥

ಐಶ್ವರ್ಯಂ ಕಾರಣಂ ಲೋಕೇ ವಿನೈಶ್ವರ್ಯಂ ತು ಕಿಂ ಫಲಂ ।
ಹತೈಶ್ವರ್ಯಾಃ ಸುರೇಶಾನ ಕಥಂ ದೈತ್ಯಂ ನಮೋಮಹಿ ॥ ೧೫ ॥

ಅನಾದಿಸ್ತ್ವಂ ಜಗದ್ಧಾತರನಂತಸ್ತ್ವಂ ಜಗದ್ಗುರುಃ ।
ಅಂತವಂತಮಮುಂ ಶತ್ರುಂ ಕಥಂ ದೈತ್ಯಂ ನಮೋಮಹಿ ॥ ೧೬ ॥

---

೧೨. ಓ ದೇವ, ಯಾಗಗಳಿಂದ ನಿನ್ನನ್ನೇ ಆರಾಧಿಸುವೆವು. ವಾಕ್ಕುಗಳಿಂದ ನಿನ್ನನ್ನೇ ಸ್ತುತಿಸುವೆವು. ನೀನೇ ನಮಗೆ ರಕ್ಷಕನು, ಹೀಗಿದ್ದು ಈಗ ದೈತ್ಯನೋರ್ವನನ್ನು ನಾವು ನಮಸ್ಕರಿಸುವುದು ಯೋಗ್ಯವೇ ?

೧೩. ಇಂದ್ರನೇ ಮೊದಲಾಗಿ ನಾವೆಲ್ಲರೂ ನಿನ್ನ ಬಲವನ್ನೇ ಆಶ್ರಯಿಸಿ ಜೀವಿಸುತ್ತಿರುವೆವು. ನೀನೇ ನಮಗೆ ಆಯಾಯ ಸ್ಥಾನಗಳನ್ನು ಕಲ್ಪಿಸಿರುವೆ. ಹೀಗಿರಲು ದೈತ್ಯನನ್ನು ನಾವು ಹೇಗೆ ನಮಸ್ಕರಿಸುವುದು ?

೧೪. ನೀನೇ ಬ್ರಹ್ಮರೂಪದಿಂದ ಸೃಷ್ಟಿಸುವೆ, ಹರಿಯಾಗಿ ಪಾಲಿಸುವೆ, ರುದ್ರನಾಗಿ ಸಂಹರಿಸುವೆ. ಇಂತಹ ನಿನ್ನನ್ನಾಶ್ರಯಿಸಿದ ನಾವು ದೈತ್ಯನನ್ನು ನಮಸ್ಕರಿಸುವುದು ಯೋಗ್ಯವೇ ?

೧೫. ಐಶ್ವರ್ಯವೇ ಸುಖವೆಲ್ಲಕ್ಕೂ ಕಾರಣವು, ಐಶ್ವರ್ಯವಿಲ್ಲದಿದ್ದರೆ ಸುಖವೇ ಇಲ್ಲ. ನಮ್ಮ ಐಶ್ವರ್ಯವೆಲ್ಲವೂ ನಷ್ಟವಾಗಿ ಈಗ ನಾವು ದೈತ್ಯನನ್ನಾಶ್ರಯಿಸಬೇಕಾಗಿದೆ.

೧೬. ಓ ಜಗತ್ಕರ್ತನೇ, ನಿನಗೆ ಆದಿಯಿಲ್ಲ, ಅಂತ್ಯವೂ ಇಲ್ಲ. ಇಂತಹ ಜಗದ್ಗುರುವನ್ನಾಶ್ರಯಿಸಿರುವ ನಾವು ಜನನಮರಣಗಳುಳ್ಳ ಮತ್ತು ಸುರಶತ್ರುವಾದ ದೈತ್ಯನನ್ನು ನಮಸ್ಕರಿಸುವುದು ಹೇಗೆ ?

ತನ್ವೈಶ್ವರ್ಯೇಣ ಪುಷ್ಟಾಂಗಾ ಜಿತ್ವಾ ತ್ರೈಲೋಕ್ಯಮೋಜಸಾ ।
ಸ್ಥಿರಾಃ ಸ್ಯಾಮಃ ಸುರೇಶಾನ ಕಥಂ ದೈತ್ಯಂ ನಮೋಮಹಿ ॥ ೧೭ ॥

॥ ಬ್ರಹ್ಮೋವಾಚ ॥

ಇತ್ಯೇತದೇವ ವಚನಂ ಶ್ರುತ್ವಾ ದೈತ್ಯೇಯಸೂದನಃ ।
ಉವಾಚ ಸರ್ವಾನಮರಾನ್ದೇವಾನಾಂ ಕಾರ್ಯಸಿದ್ಧಯೇ ॥ ೧೮ ॥

॥ ಶ್ರೀಭಗವಾನುವಾಚ ॥

ಮದ್ಭಕ್ತೋಽಸೌ ಬಲಿರ್ದೈತ್ಯೋ ಹ್ಯವಧ್ಯೋಽಸೌ ಸುರಾಸುರೈಃ ।
ಯಥಾ ಭವಂತೋ ಮತ್ಪೋಷ್ಯಾಸ್ತಥಾ ಪೋಷ್ಯೋ ಬಲಿರ್ಮಮ ॥ ೧೯ ॥

ವಿನಾ ತು ಸಂಗರಂ ದೇವಾ ಹತ್ವಾ ರಾಜ್ಯಂ ತ್ರಿವಿಷ್ಟಪೇ ।
ಬಲಿಂ ನಿಬಧ್ಯ ಮಂತ್ರೋಕ್ತ್ಯಾ ರಾಜ್ಯಂ ವಃ ಪ್ರದದಾಮ್ಯಹಂ ॥ ೨೦ ॥

---

೧೭. ಓ ದೇವದೇವ, ಮುಂದಾದರೂ ನಿನ್ನ ಐಶ್ವರ್ಯದ ಒಲದಿಂದಲೇ ನಾವು ವೀರ್ಯವಂತರಾಗಿ ಮೂರುಲೋಕಗಳನ್ನೂ ಜಯಿಸಿ ಪುನಃ ನಮ್ಮನಮ್ಮ ಸ್ಥಾನಗಳನ್ನು ಪಡೆಯುವೆವು. ಹೀಗಿರಲು ಆ ದೈತ್ಯನನ್ನು ಈಗ ನಮಸ್ಕರಿಸುವುದು ಹೇಗೆ? ಎಂದು ಮುಂತಾಗಿ ದೇವದೇವನನ್ನು ಪ್ರಾರ್ಥಿಸುತ್ತಿರಲು,

೧೮. ದೇವತೆಗಳು ಹೇಳಿದ ಮಾತನ್ನು ಕೇಳಿ, ದೈತ್ಯನಾಶಕನಾದ ಹರಿಯು ದೇವತೆಗಳ ಕಾರ್ಯಸಿದ್ಧಿಗಾಗಿ ಅವರನ್ನು ಕುರಿತು,

೧೯. ಎಲೈ ದೇವತೆಗಳೇ, ಬಲಿಚಕ್ರವರ್ತಿಯು ನನ್ನ ಭಕ್ತನು. ದೇವನಾಗಲೀ ಅಸುರನಾಗಲೀ ಅವನನ್ನು ಜಯಿಸಲಾರನು. ನಿಮ್ಮಂತೆ ಆ ಬಲಿರಾಜನೂ ನನ್ನ ಆಶ್ರಿತವರ್ಗಕ್ಕೆ ಸೇರಿದವನು.

೨೦. ಆದುದರಿಂದ ಯುದ್ಧಮಾಡದೆಯೇ ಆ ಬಲಿಯನ್ನು ಉಪಾಯಾಂತರದಿಂದ ಬಂಧಿಸಿ ನಿಮಗೆ ತ್ರೈಲೋಕ್ಯರಾಜ್ಯವನ್ನು ಕೊಡಿಸುವೆನು ಎಂದನು.

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಸುರಗಣಾಃ ಸಂಜಗ್ಮುರ್ದಿವಮೇವ ಹಿ ।
ಭಗವಾನಪಿ ದೇವೇಶೋ ಹ್ಯದಿತ್ಯಾ ಗರ್ಭಮಾವಿಶತ್ ॥ ೨೧ ॥

ತಸ್ಮಿನ್ನುತ್ಪದ್ಯಮಾನೇ ತು ಉತ್ಸವಾಶ್ಚ ಬಭೂವಿರೇ ।
ಜಾತೋಽಸೌ ವಾಮನೋ ಬ್ರಹ್ಮನ್ಯಜ್ಞೇಶೋ ಯಜ್ಞಪೂರುಷಃ ॥ ೨೨ ॥

ಏತಸ್ಮಿನ್ನಂತರೇ ಬ್ರಹ್ಮನ್ಹಯಮೇಧಾಯ ದೀಕ್ಷಿತಃ ।
ಬಲಿರ್ಬಲವತಾಂ ಶ್ರೇಷ್ಠ ಋಷಿಮುಖ್ಯೈಃ ಸಮಾಹಿತಃ ॥ ೨೩ ॥

ಪುರೋಧಸಾ ಚ ಶುಕ್ರೇಣ ವೇದವೇದಾಂಗವೇದಿನಾ ।
ಮಖೇ ತಸ್ಮಿನ್ವರ್ತಮಾನೇ ಯಜಮಾನೇ ಬಲೌ ತಥಾ ॥ ೨೪ ॥

ಆರ್ತ್ವಿಜ್ಯ ಋಷಿಮುಖ್ಯೇ ತು ಶುಕ್ರೇ ತತ್ರ ಪುರೋಧಸಿ ।
ಹವಿರ್ಭಾಗಾರ್ಥಮಾಸನ್ನ ದೇವಗಂಧರ್ವಪನ್ನಗೇ ॥ ೨೫ ॥

೨೧-೨೨. ದೇವತೆಗಳು ಅದರಂತೆ ಒಪ್ಪಿಕೊಂಡು ತಮ್ಮ ಸ್ಥಾನಕ್ಕೆ ತೆರಳಿದರು. ದೇವದೇವನಾದ ಭಗವಂತನೂ ಸಹ ಅದಿತಿದೇವಿಯ ಗರ್ಭವನ್ನು ಪ್ರವೇಶಿಸಿ ಯಜ್ಞಗಳಫಲವನ್ನು ಕೊಡುವವನೂ ಯಜ್ಞಪುರುಷನೂ ಆದ ವಾಮನ ರೂಪದಿಂದ ಅವತರಿಸಿದನು. ಅವನು ಜನಿಸುವಾಗ ತುಂಬಾ ಉತ್ಸವಗಳಾದುವು.

೨೩. ಇದೇ ಸಮಯದಲ್ಲಿ ಮಹಾಬಲಿಷ್ಠನಾದ ಬಲಿರಾಜನು ಅಶ್ವಮೇಧಯಾಗವನ್ನು ಮಾಡಲು ಋಷಿಶ್ರೇಷ್ಠರೊಡನೆ ಯಜ್ಞದೀಕ್ಷೆಯನ್ನು ಕೈಗೊಂಡಿದ್ದನು. ಅವನಿಗೆ ವೇದ ಮತ್ತು ವೇದಾಂಗಗಳನ್ನು ಬಲ್ಲ ಶುಕ್ರಾಚಾರ್ಯನು ಪುರೋಹಿತನಾಗಿದ್ದನು.

೨೪-೨೫. ಆ ಯಾಗದಲ್ಲಿ ಬಲಿಯೇ ಯಜಮಾನನು, ಮಹಾಮಹಾ ಋಷಿಗಳು ಋತ್ವಿಜರಾಗಿದ್ದರು. ಹಿಂದೆ ಹೇಳಿದಂತೆ ಶುಕ್ರಾಚಾರ್ಯನು ಪುರೋಹಿತನು. ಹವಿರ್ಭಾಗವನ್ನು ತೆಗೆದುಕೊಳ್ಳಲು ದೇವತೆಗಳು, ಗಂಧರ್ವರು ಮೊದಲಾದವರು ಬಂದಿದ್ದರು.

ದೀಯತಾಂ ಭುಜ್ಯತಾಂ ಪೂಜಾ ಕ್ರಿಯತಾಂ ಚ ಪೃಥಕ್ಪೃಥಕ್ ।
ಪರಿಪೂರ್ಣಂ ಪುನಃ ಪೂರ್ಣಮೇವಂ ವಾಕ್ಯೇ ಪ್ರವರ್ತತಿ ॥ ೨೬ ॥

ಶನೈಸ್ತದ್ದೇಶಮಭ್ಯಾಗಾದ್ವಾಮನಃ ಸಾಮುಗಾಯನಃ ।
ಯಜ್ಞವಾಟಮನುಪ್ರಾಪ್ತೋ ವಾಮನಶ್ಚಿತ್ರಕುಂಡಲಃ ॥ ೨೭ ॥

ಪ್ರಶಂಸಮಾನಸ್ತಂ ಯಜ್ಞಂ ವಾಮನಂ ಪ್ರೇಕ್ಷ್ಯ ಭಾರ್ಗವಃ ।
ಬ್ರಹ್ಮರೂಪಧರಂ ದೇವಂ ವಾಮನಂ ದೈತ್ಯಸೂದನಂ ॥ ೨೮ ॥

ದಾತಾರಂ ಯಜ್ಞತಪಸಾಂ ಫಲಂ ಹಂತಾರಂ ರಕ್ಷಸಾಂ ।
ಜ್ಞಾತಾ ತ್ವರನ್ನಥೋವಾಚ ರಾಜಾನಂ ಭೂರಿತೇಜಸಂ ॥ ೨೯ ॥

ಜೇತಾರಂ ಕ್ಷತ್ರಧರ್ಮೇಣ ದಾತಾರಂ ಭಕ್ತಿತೋ ಧನಂ ।
ಬಲಿಂ ಬಲವತಾಂ ಶ್ರೇಷ್ಠಂ ಸಭಾರ್ಯಂ ದೀಕ್ಷಿತಂ ಮಖೇ ॥ ೩೦ ॥

---

೨೬. ಬಲಿಯು ಯಜ್ಞಮಾಡುತ್ತಿದ್ದಾಗ—ಬೇಕಾದವರಿಗೆ ಬೇಕಾದುದನ್ನು ಕೊಡಿರಿ. ಬೇಕಾದುದನ್ನು ಭೋಗಿಸಿ. ಎಲ್ಲರಿಗೂ ಬೇರೆಬೇರೆಯಾಗಿ ತೃಪ್ತಿಯಾಗುವಂತೆ ಸತ್ಕಾರವನ್ನು ಮಾಡಿ ಎಂಬ ಮಾತಿನ ಕೋಲಾಹಲವು ಎಲ್ಲೆಲ್ಲಿಯೂ ಕೇಳಿಬರುತ್ತಿದ್ದಿತು.

೨೭. ಆಗ ವಾಮನಮೂರ್ತಿಯೂ ಸಹ ಸಾಮಗಾನವನ್ನು ಹಾಡುತ್ತಾ ಬಂದು ಆ ಯಜ್ಞಶಾಲೆಯನ್ನು ಪ್ರವೇಶಿಸಿವನು.

೨೮. ಆಗ ಹೋಮಮಾಡುತ್ತಿದ್ದ ಶುಕ್ರಾಚಾರ್ಯನು ವಾಮನರೂಪಧಾರಿಯಾದ ದೇವನನ್ನು ನೋಡಿ ಇವನು ನಿಜವಾಗಿ ಬ್ರಾಹ್ಮಣಕುಮಾರನಲ್ಲ. ಬ್ರಾಹ್ಮಣರೂಪದಿಂದ ದೈತ್ಯಾರಿಯೂ, ಯಜ್ಞ ಮತ್ತು ತಪಸ್ಸುಗಳಿಗೆ ಫಲವನ್ನು ಕೊಡುವವನೂ, ರಾಕ್ಷಸರನ್ನು ಕೊಲ್ಲುವವನೂ ಆದ ಹರಿಯೇ ಬಂದಿರುವನು. ಎಂದು ತಿಳಿದನು.

೨೯-೩೦. ಆ ಕೂಡಲೇ ಶುಕ್ರಾಚಾರ್ಯನು ಮಹಾ ತೇಜಸ್ವಿಯೂ ಮಹಾಪರಾಕ್ರಮಿಯೂ, ಮಹಾಉದಾರಿಯೂ, ಮಹಾಬಲಿಷ್ಠನೂ ಆದ ಬಲಿರಾಜನ, ಬಳಿಗೆ ಬಂದನು. ಆಗ ಬಲಿರಾಜನು ಹೆಂಡತಿಯೊಡನೆ ದೀಕ್ಷೆಯಲ್ಲಿ

ಧ್ಯಾಯಂತಂ ಯಜ್ಞಪುರುಷಮುತ್ಸೃಜಂತಂ ಹವಿಃ ಪೃಥಕ್ ।
ತಮಾಹ ಭೃಗುಶಾರ್ದೂಲಃ ಶುಕ್ರಃ ಪರಮಬುದ್ಧಿಮಾನ್ ॥ ೩೧ ॥

॥ ಶುಕ್ರ ಉವಾಚ ॥

ಯೋಽಸೌ ತವ ಮುಖಂ ಪ್ರಾಪ್ತೋ ಬ್ರಾಹ್ಮಣೋ ವಾಮನಾಕೃತಿಃ ।
ನಾಸೌ ವಿಪ್ರೋ ಬಲೇ ಸತ್ಯಂ ಯಜ್ಞೇಶೋ ಯಜ್ಞವಾಹನಃ ॥ ೩೨ ॥

ಶಿಶುಸ್ತ್ವಾಂ ಯಾಚಿತುಂ ಪ್ರಾಪ್ತೋ ನೂನಂ ದೇವಹಿತಾಯ ಹಿ ।
ಮಯಾ ಚ ಸಹ ಸಂಮಂತ್ರ್ಯ ಪಶ್ಚಾದ್ದೇಯಂ ತ್ವಯಾ ಪ್ರಭೋ ॥ ೩೩ ॥

॥ ಬ್ರಹ್ಮೋವಾಚ ॥

ಬಲಿಸ್ತು ಭಾರ್ಗವಂ ಪ್ರಾಹ ಪುರೋಧಸಮರಿಂದಮಃ ॥ ೩೪ ॥

ಕುಳಿತಿದ್ದು ಯಜ್ಞಪುರುಷನನ್ನು ಧ್ಯಾನಮಾಡುತ್ತಾ ಅಧ್ವರ್ಯುವು ಮಾಡುವ ಹೋಮಕ್ಕೆ ಹವಿಸ್ಸಿನ ಉದ್ದೇಶತ್ಯಾಗಗಳನ್ನು ಹೇಳುತ್ತಿದ್ದನು.

೩೧-೩೨. ಆ ಬಲಿಚಕ್ರವರ್ತಿಯನ್ನು ಕುರಿತು ಭೃಗುವಂಶೋದ್ಭವನೂ ಮಹಾಬುದ್ಧಿವಂತನೂ ಆದ ಶುಕ್ರಾಚಾರ್ಯನು—ಎಲೈ ರಾಜನೇ, ಕೇಳು. ವಾಮನರೂಪದಿಂದ ಬಂದಿರುವ ಈ ಬ್ರಾಹ್ಮಣಬಾಲಕನು ನಿಜವಾದ ಬ್ರಾಹ್ಮಣನಲ್ಲ. ಇದು ಸತ್ಯವು. ಯಜ್ಞಪತಿಯೂ ಯಜ್ಞವಾಹನನೂ ಆದ ಹರಿಯೇ ಬ್ರಾಹ್ಮಣಬಾಲಕನ ರೂಪದಿಂದ ಬಂದಿರುವನು.

೩೩. ದೇವತೆಗಳಿಗಾಗಿ ವಾಮನರೂಪವನ್ನು ಧರಿಸಿ ಹರಿಯು ನಿನ್ನನ್ನು ಯಾಚಿಸಲು ಬಂದಿರುವನು. ಅವನಿಗೆ ಏನಾದರೂ ದಾನವನ್ನು ಕೊಡುವುದಾದರೆ ನನ್ನೊಡನೆ ಆಲೋಚಿಸಿ ಆಮೇಲೆ ದಾನಮಾಡು. ಸುಮ್ಮನೆ ದುಡುಕಬೇಡ, ಎನ್ನಲು,

೩೪-೩೫. ಆಗ ಬಲಿಯು ಪುರೋಹಿತನಾದ ಶುಕ್ರನನ್ನು ಕುರಿತು ಅಯ್ಯಾ ಆಚಾರ್ಯನೇ, ಯಜ್ಞಪತಿಯು ನನ್ನ ಮನೆಗೆ ಬಂದನೆಂದರೆ ನಾನೇ

। ಬಲಿರುವಾಚ ॥

ಧನ್ಯೋಽಹಂ ಮಮ ಯಜ್ಞೇಶೋ ಗೃಹಮಾಯಾತಿ ಮೂರ್ತಿಮಾನ್ ।
ಆಗತ್ಯ ಯಾಚತೇ ಕಿಂಚಿತ್ಕಿಂ ಮಂತ್ರ್ಯಮವಶಿಷ್ಯತೇ ॥ ೩೫ ॥

॥ ಬ್ರಹ್ಮೋವಾಚ ॥

ಏವಮುಕ್ತ್ವಾ ಸಭಾರ್ಯೋಽಸೌ ಶುಕ್ರೇಣ ಚ ಪುರೋಧಸಾ ।
ಜಗಾಮ ಯತ್ರ ವಿಪ್ರೇಂದ್ರೋ ವಾಮನೋಽದಿತಿನಂದನಃ ॥ ೩೬ ॥

ಕೃತಾಂಜಲಿಪುಟೋ ಭೂತ್ವಾ ಕೇನಾರ್ಥಿತ್ವಂ ತದುಚ್ಯತಾಂ ।
ವಾಮನೋಽಪಿ ತದಾ ಪ್ರಾಹ ಪದತ್ರಯಮಿತಾಂ ಭುವಂ ॥ ೩೭ ॥

ದೇಹಿ ರಾಜೇಂದ್ರ ನಾನ್ಯೇನ ಕಾರ್ಯಮಸ್ತಿ ಧನೇನ ಕಿಂ ।
ತಥೇತ್ಯುಕ್ತ್ವಾ ತು ಕಲಶಾನ್ನಾನಾರತ್ನವಿಭೂಷಿತಾತ್ ॥ ೩೮ ॥

ಧನ್ಯನು. ಅವನೇ ಬಂದು ದಾನವನ್ನು ಕೇಳುವಾಗ ಯಾವನೊಡನೆಯೂ ಆಲೋಚಿಸಬೇಕಾದ ಅವಶ್ಯಕತೆಯಿಲ್ಲ ಎಂದನು.

೩೬. ಹೀಗೆಹೇಳಿ ಬಲಿರಾಜನು ಹೆಂಡತಿಯೊಡನೆಯೂ ಪುರೋಹಿತನಾದ ಶುಕ್ರಾಚಾರ್ಯನೊಡನೆಯೂ ವಾಮನಮೂರ್ತಿಯಬಳಿಗೆ ಬಂದು,

೩೭. ಕೈಮುಗಿದುಕೊಂಡು ವಿನಯದಿಂದ—ಎಲೈ ವಟುವೇ, ನಿನಗೇನುಬೇಕು, ಕೇಳು ಅದನ್ನು ಕೊಡುವೆನು ಎನಲು ಅದಕ್ಕೆ ವಾಮನನು ಓ ರಾಜೇಂದ್ರ, ನನಗೆ ಮೂರಿಹೆಜ್ಜೆಗಳಷ್ಟು ಭೂಮಿಯನ್ನು ಮಾತ್ರ ಕೊಡು. ನನಗಿನ್ನಾವ ಧನವೂ ಬೇಡ ಎಂದು ಹೇಳಿದನು.

೩೮. ಹಾಗೆಯೇ ಆಗಲೆಂದು ಬಲಿರಾಜನು ರತ್ನಕಲಶದಿಂದ ನೀರನ್ನು ತೆಗದುಕೊಂಡು ಧಾರಾಪೂರ್ವಕವಾಗಿ ವಾಮನನಿಗೆ ಮೂರು ಹೆಜ್ಜೆಗಳಷ್ಟು ಭೂಮಿಯನ್ನು ದಾನಮಾಡಿದನು.

ವಾರಿಧಾರಾಂ ಪುರಸ್ಕೃತ್ಯ ವಾಮನಾಯ ಭುವಂ ದದೌ ।
ಪಶ್ಯತ್ಸು ಋಷಿಮುಖ್ಯೇಷು ಶುಕ್ರೇ ಚೈವ ಪುರೋಧಸಿ ॥ ೩೯ ॥

ಪಶ್ಯತ್ಸು ಲೋಕನಾಥೇಷು ವಾಮನಾಯ ಭುವಂ ದದೌ ।
ಪಶ್ಯತ್ಸು ದೈತ್ಯಸಂಘೇಷು ಜಯಶಬ್ದೇ ಪ್ರವರ್ತತಿ ॥ ೪೦ ॥

ಶನೈಸ್ತು ವಾಮನಃ ಪ್ರಾಹ ಸ್ವಸ್ತಿ ರಾಜನ್ಸುಖೀ ಭವ ।
ದೇಹಿ ಮೇ ಸಂಮಿತಾಂ ಭೂಮಿಂ ತ್ರಿಪದಾಮಾಶು ಗಮ್ಯತೇ ॥ ೪೧ ॥

ತಥೇತ್ಯುವಾಚ ದೈತ್ಯೇಶೋ ಯಾವತ್ಪಶ್ಯತಿ ವಾಮನಂ ।
ಯಜ್ಞೇಶೋ ಯಜ್ಞಪುರುಷಶ್ಚಂದ್ರಾದಿತ್ಯೌ ಸ್ತನಾಂತರೇ ॥ ೪೨ ॥

ಯಥಾ ಸ್ಯಾತಾಂ ಸುರಾ ಮೂರ್ಧ್ನಿ ವವೃಧೇ ವಿಕ್ರಮಾಕೃತಿಃ ।
ಅನಂತಶ್ಚಾಚ್ಯುತೋ ದೇವೋ ವಿಕ್ರಾಂತೋ ವಿಕ್ರಮಾಕೃತಿಃ ।
ತಂ ದೃಷ್ಟ್ವಾ ದೈತ್ಯರಾಟ್ ಪ್ರಾಹ ಸಭಾರ್ಯೋ ವಿನಯಾನ್ವಿತಃ ॥ ೪೩ ॥

೩೯-೪೦. ಸಮಸ್ತ ಋಷಿಗಳು, ಶುಕ್ರಾಚಾರ್ಯನು, ಲೋಕಪಾಲಕರು ದೈತ್ಯರು ಮೊದಲಾದವರು ನೋಡುತ್ತಿರಲು ಬಲಿಯು ವಾಮನನಿಗೆ ಮೂರು ಪಾದಗಳಷ್ಟು ಭೂಮಿಯನ್ನು ದಾನವಾಡಿದನು, ಆಗ ಜಯಧ್ವನಿಯಾಯಿತು.

೪೧. ಆಗ ವಾಮನನು ಎಲೈ ರಾಜೇಂದ್ರ, ಒಳ್ಳೆಯದು, ನೀನು ಸುಖಿಯಾಗು. ದಾನಮಾಡಿದ ಮೂರುಪಾದ ಭೂಮಿಯನ್ನು ಈಗಲೇ ಒಪ್ಪಿಸು, ಜಾಗ್ರತೆಯಾಗಿ ನಾನು ಹೋಗಬೇಕು, ಎಂದನು.

೪೨. ಬಲಿಯು ಹಾಗೆಯೇ ಆಗಲಿ ಎಂದು ಹೇಳಿ ನೋಡುವಷ್ಟರಲ್ಲಿ ಯಜ್ಞಪುರುಷನಾದ ವಾಮನಮೂರ್ತಿಯು ಆಕಾಶದಲ್ಲಿರುವ ಚಂದಸೂರ್ಯರು ತನ್ನೆದೆಗೆ ಬರುವಷ್ಟು ಎತ್ತರವಾಗಿ ಬೆಳೆದನು. ದೇವತೆಗಳೆಲ್ಲರೂ ಆ ದೇವನ ಶಿರಸ್ಸಿನಲ್ಲಿ ಕಾಣಿಸಿದರು. ಕೊನೆಯಿಲ್ಲದವನೂ ನಾಶವಿಲ್ಲದವನೂ ಆದ ದೇವ ದೇವನು ಹೀಗೆ ಆಕೂಡಲೆ ಬೆಳೆದು ವಿಕ್ರಮಾವತಾರವನ್ನು ತೋರಿದನು.

೪೩-೪೪. ಇಂತಹ ತ್ರಿವಿಕ್ರಮನನ್ನು ದೈತ್ಯಚಕ್ರವರ್ತಿಯಾದ ಬಲಿ ರಾಜನು ಹೆಂಡತಿಯೊಡನೆ ನೋಡಿ ವಿನಯದಿಂದ ದೇವದೇವನಾದ ಓ ವಿಷ್ಣುವೇ,

॥ ಬಲಿರುವಾಚ ॥

ಕ್ರಮಸ್ವ ವಿಷ್ಣೋ ಲೋಕೇಶ ಯಾವಚ್ಛಕ್ತ್ಯಾ ಜಗನ್ಮಯ ।
ಜಿತಂ ಮಯಾ ಸುರೇಶಾನ ಸರ್ವಭಾವೇನ ವಿಶ್ವಕೃತ್ ॥ ೪೪ ॥

॥ ಬ್ರಹ್ಮೋವಾಚ ॥

ತದ್ವಾಕ್ಯಸಮಕಾಲಂ ತು ವಿಷ್ಣುಃ ಪ್ರಾಹ ಮಹಾಕ್ರತುಃ ॥ ೪೫ ॥

॥ ವಿಷ್ಣುರುವಾಚ ॥

ದೈತ್ಯೇಶ್ವರ ಮಹಾಬಾಹೋ ಕ್ರಮಿಷ್ಯೇ ಪಶ್ಯ ದೈತ್ಯರಾಟ್ ॥ ೪೬ ॥

॥ ಬ್ರಹ್ಮೋವಾಚ ॥

ಏವಂ ವದಂತಂ ಸ ಪ್ರಾಹ ಕ್ರಮ ವಿಷ್ಣೋ ಪುನಃ ಪುನಃ ॥ ೪೭ ॥

॥ ಬ್ರಹ್ಮೋವಾಚ ॥

ಕೂರ್ಮಪೃಷ್ಠೇ ಪದಂ ನ್ಯಸ್ಯ ಬಲಿಯಜ್ಞೇ ಪದಂ ನ್ಯಸತ್ ।
ದ್ವಿತೀಯಂ ತು ಪದಂ ಪ್ರಾಪ ಬ್ರಹ್ಮಲೋಕಂ ಸನಾತನಂ ॥ ೪೮ ॥

ನಾನು ಜಗತ್ತೆಲ್ಲವನ್ನೂ ಜಯಿಸಿರುವೆನು. ಈ ಜಗತ್ತನ್ನು ಜಗನ್ಮಯನಾದ ನೀನು ನಿನ್ನ ಶಕ್ತಿಯೆಲ್ಲವನ್ನೂ ಪ್ರಯೋಗಿಸಿ ಆಕ್ರಮಿಸು ಎಂದನು.

೪೫-೪೬. ಆ ಕೂಡಲೇ ಯಜ್ಞಪುರುಷನಾದ ಹರಿಯು ಆ ರಾಜನನ್ನು ಕುರಿತು ಮಹಾಪರಾಕ್ರಮಿಯಾದ ದೈತ್ಯರಾಜ, ನಾನು ಜಗತ್ತನ್ನು ಆಕ್ರಮಿಸಿರುವೆನು ನೋಡು ಎನಲು,

೪೭. ಆಗ ಬಲಿಯು—ಎಲೈ ವಿಷ್ಣುವೇ, ಪುನಃ ಪುನಃ ಮತ್ತಷ್ಟು ಆಕ್ರಮಿಸು ಎಂದು ಹೇಳಿದನು.

೪೮. ಆ ಹರಿಯು ಮೊದಲು ಆದಿಕೂರ್ಮನ ಬೆನ್ನಿನಮೇಲೆ ಒಂದು ಹೆಜ್ಜೆಯನ್ನಿಟ್ಟು ಬಲಿಯ ಯಜ್ಞಶಾಲೆಯವರೆಗಿನ ಭೂಮಿಯನ್ನು ಆಕ್ರಮಿಸಿದನು. ಅವನ ಎರಡನೆಯ ಹೆಜ್ಜೆಯು ಬ್ರಹ್ಮಲೋಕದವರೆಗಿನ ಜಗತ್ತೆಲ್ಲವನ್ನೂ ಆಕ್ರಮಿಸಿತು.

ತೃತೀಯಸ್ಯ ಪದಸ್ಯಾತ್ರ ಸ್ಥಾನಂ ನಾಸ್ತ್ಯಸುರೇಶ್ವರ ।
ಕ್ವ ಕ್ರಮಿಷ್ಯೇ ಭುವಂ ದೇಹಿ ಬಲಿಂ ತಂ ಹರಿರಬ್ರವೀತ್ ।
ವಿಹಸ್ಯ ಬಲಿರಸ್ಯಾಹ ಸಭಾರ್ಯಃ ಸ ಕೃತಾಂಜಲಿಃ ॥ ೪೯ ॥

॥ ಬಲಿರುವಾಚ ॥

ತ್ವಯಾ ಸೃಷ್ಟಂ ಜಗತ್ಸರ್ವಂ ನ ಸ್ರಷ್ಟಾಹಂ ಸುರೇಶ್ವರ ।
ತ್ವದ್ದೋಷಾದಲ್ಪಮಭವತ್ಕಿಂ ಕರೋಮಿ ಜಗನ್ಮಯ ॥ ೫೦ ॥

ತಥಾಪಿ ನಾನೃತಪೂರ್ವಂ ಕದಾಚಿದ್ವಚ್ಮಿ ಕೇಶವ ।
ಸತ್ಯವಾಕ್ಯಂ ಚ ಮಾಂ ಕುರ್ವನ್ಮತ್ಪೃಷ್ಠೇ ಹಿ ಪದಂ ನ್ಯಸ ॥ ೫೧ ॥

॥ ಬ್ರಹ್ಮೋವಾಚ ॥

ತತಃ ಪ್ರಸನ್ನೋ ಭಗವಾಂಸ್ತ್ರಯೀಮೂರ್ತಿಃ ಸುರಾರ್ಚಿತಃ ॥ ೫೨ ॥

---

೪೯. ಬಳಿಕ ಹರಿಯು—ಓ ದೈತ್ಯರಾಜ, ಮೂರನೆಯ ಹೆಜ್ಜೆಗೆ ಸ್ಥಳವೇ ಇಲ್ಲವಲ್ಲಾ, ಆ ಹೆಜ್ಜೆಯನ್ನೆ ಲ್ಲಿಡಲಿ? ಭೂಮಿಯನ್ನು ತೋರಿಸು ಎಂದು ಬಲಿಗೆ ಹೇಳಿದನು.

೫೦. ಅದನ್ನು ಕೇಳಿ, ಬಲಿರಾಜನು ನಕ್ಕು ಕೈಮುಗಿದುಕೊಂಡು ಹರಿಯನ್ನು ಕುರಿತು, ಓ ದೇವದೇವ, ಈ ಜಗತ್ತನ್ನು ಸೃಷ್ಟಿಸಿದವನು ನೀನೇ, ನಾನಲ್ಲವು. ನಿನ್ನ ದೋಷದಿಂದಲೇ ಈ ಭೂಮಿಯು ನಿನ್ನ ಆಕ್ರಮಣಕ್ಕೆ ಸಾಲದಾಯಿತು, ನಿನ್ನ ಆಕ್ರಮಣಕ್ಕೆ ಸಾಕಾಗುವಷ್ಟು ಜಗತ್ತನ್ನು ಸೃಷ್ಟಿಕರ್ತನಾದ ನೀನೇ ಸೃಷ್ಟಿಸಬೇಕಾಗಿತ್ತು. ಈಗ ನಾನೇನು ಮಾಡಲಿ?

೫೧. ಆದರೂ ನಾನು ಇದುವರೆಗೆ ಸುಳ್ಳುಹೇಳಿದವನಲ್ಲ. ಆದುದರಿಂದ ನನ್ನ ಬೆನ್ನಿನಮೇಲೆ ಮೂರನೆಯ ಹೆಜ್ಜೆಯನ್ನಿಟ್ಟು ನನ್ನನ್ನು ಸತ್ಯವಂತನನ್ನಾಗಿ ಮಾಡು ಎಂದನು.

೫೨-೫೩. ಆಗ ವೇದತ್ರಯಸ್ವರೂಪನೂ, ದೇವತೆಗಳಿಂದ ಸೇವಿಸಲ್ಪಡುವವನೂ ಆದ ಭಗವಂತನು ಪ್ರಸನ್ನನಾಗಿ ಬಲಿಯನ್ನು ಕುರಿತು, ಎಲೈ ದೈತ್ಯ

॥ ಭಗವಾನುವಾಚ ॥

ವರಂ ವೃಣೀಷ್ವ ಭದ್ರಂ ತೇ ಭಕ್ತ್ಯಾ ಪ್ರೀತೋಽಸ್ಮಿ ದೈತ್ಯರಾಟ್ ॥ ೫೩ ॥

॥ ಬ್ರಹ್ಮೋವಾಚ ॥

ಸ ತು ಪ್ರಾಹ ಜಗನ್ನಾಥಂ ನ ಯಾಚೇ ತ್ವಾಂ ತ್ರಿವಿಕ್ರಮಂ ।
ಸ ತು ಪ್ರಾದಾತ್ಸ್ವಯಂ ವಿಷ್ಣುಃ ಪ್ರೀತಃ ಸನ್ಮನಸೇಪ್ಸಿತಂ ॥ ೫೪ ॥

ರಸಾತಲಪತಿತ್ವಂ ಚ ಭಾವಿ ಚೇಂದ್ರಪದಂ ಪುನಃ ।
ಆತ್ಮಾಧಿಪತ್ಯಂ ಚ ಹರಿರವಿನಾಶಿ ಯಶೋ ವಿಭುಃ ॥ ೫೫ ॥

ಏವಂ ದತ್ವಾ ಬಲೇಃ ಸರ್ವಂ ಸಸುತಂ ಭಾರ್ಯಯಾನ್ವಿತಂ ।
ರಸಾತಲೇ ಹರಿಃ ಸ್ಥಾಪ್ಯ ಬಲಿಂ ತ್ವಮರವೈರಿಣಂ ॥ ೫೬ ॥

ಶತಕ್ರತೋಸ್ತಥಾ ಪ್ರಾದಾತ್ಸುರರಾಜ್ಯಂ ಯಥಾಭವಂ ।
ಏತಸ್ಮಿನ್ನಂತರೇ ತತ್ರ ಪದಂ ಪ್ರಾಗಾತ್ಸುರಾರ್ಚಿತಂ ॥ ೫೭ ॥

ರಾಜ, ನಿನ್ನ ಭಕ್ತಿಗೆ ಮೆಚ್ಚಿರುವೆನು, ಬೇಕಾದ ವರವನ್ನು ಕೇಳು. ನಿನಗೆ ಮಂಗಳವಾಗಲಿ ಎಂದನು.

೫೪. ಈಗ ಬಲಿಯು, ತ್ರಿವಿಕ್ರಮನಾದ ನಿನ್ನನ್ನು ಕುರಿತು ಏನನ್ನೂ ಕೇಳುವುದಿಲ್ಲ ಎಂದು ಹೇಳಿದನು. ಆದರೂ ಹರಿಯು ತಾನೇ ಆ ಬಲಿಗೆ ಈ ವರಗಳನ್ನನುಗ್ರಹಿಸಿದನು.

೫೫. ಈಗ ಪಾತಾಳದ ಒಡೆತನವನ್ನೂ, ಮುಂದಿನ ಕಲ್ಪದಲ್ಲಿ ತಿರುಗಿ ಇಂದ್ರಪದವಿಯನ್ನೂ ಅನುಗ್ರಹಿಸಿದನು ಮತ್ತು ತಾನು ಆ ಬಲಿಯ ಮನೆಯನ್ನು ಕಾಯ್ದುಕೊಂಡಿರುವಂತೆಯೂ ಬಲಿಗೆ ಸ್ಥಿರವಾಗಿ ಯಶಸ್ಸಿರುವಂತೆಯೂ ವರವನ್ನನುಗ್ರಹಿಸಿದನು.

೫೬. ಈರೀತಿ ವರವನ್ನು ಕೊಟ್ಟು ಹರಿಯು ದೇವವೈರಿಯಾದ ಬಲಿಯನ್ನು ಅವನ ಹೆಂಡತಿ ಮಕ್ಕಳೊಡನೆ ಪಾತಾಳದಲ್ಲಿ ಸ್ಥಾಪಿಸಿ, ದೇವೇಂದ್ರನಿಗೆ ದೇವರಾಜ್ಯವನ್ನು ಪುನಃ ಕೊಡಿಸಿದನು.

೫೭. ಎಲೈ ನಾರದ, ಇದೇ ಸಮಯದಲ್ಲಿ ತ್ರಿವಿಕ್ರಮಾವತಾರಿಯೂ, ದೇವವಂದ್ಯನೂ ಆದ ನನ್ನ ತಂದೆ ವಿಷ್ಣುವಿನ ಎರಡನೆಯ ಪಾದವು ಜಗತ್ತನ್ನು ವ್ಯಾಪಿಸುತ್ತಾ ನನ್ನ ಲೋಕದ ಬಳಿಗೆ ಬಂದಿತು.

ದ್ವಿತೀಯಂ ತತ್ಪದಂ ವಿಷ್ಣೋಃ ಪಿತುರ್ಮಮ ಮಹಾಮತೇ ।
ಯತ್ಪದಂ ಸಮನುಪ್ರಾಪ್ತಂ ಗೃಹಂ ದೃಷ್ಟ್ವಾಪ್ಯಚಿಂತಯಂ ॥ ೫೮ ॥

ಕಿಂ ಕೃತ್ಯಂ ಯಚ್ಛುಭಂ ಮೇ ಸ್ಯಾತ್ಪದೇ ವಿಷ್ಣೋಃ ಸಮಾಗತೇ ।
ಸರ್ವಸ್ವಂ ಚ ಸಮಾಲೋಕ್ಯ ಶ್ರೇಷ್ಠೋ ಮೇ ಸ್ಯಾತ್ಕಮಂಡಲುಃ ॥ ೫೯ ॥

ತದ್ವಾರಿ ಯತ್ಪುಣ್ಯತಮಂ ದತ್ತಂ ಚ ತ್ರಿಪುರಾರಿಣಾ ।
ವರಂ ವರೇಣ್ಯಂ ವರದಂ ವರಂ ಶಾಂತಿಕರಂ ಪರಂ ॥ ೬೦ ॥

ಶುಭಂ ಚ ಶುಭದಂ ನಿತ್ಯಂ ಭುಕ್ತಿಮುಕ್ತಿಪ್ರದಾಯಕಂ ।
ಮಾತೃಸ್ವರೂಪಂ ಲೋಕಾನಾಮಮೃತಂ ಭೇಷಜಂ ಶುಚಿ ॥ ೬೧ ॥

ಪವಿತ್ರಂ ಪಾವನಂ ಪೂಜ್ಯಂ ಜ್ಯೇಷ್ಠಂ ಶ್ರೇಷ್ಠಂ ಗುಣಾನ್ವಿತಂ ।
ಸ್ಮರಣಾದೇವ ಲೋಕಾನಾಂ ಪಾವನಂ ಕಿಂ ನು ದರ್ಶನಾತ್ ॥ ೬೨ ॥

---

೫೮. ನನ್ನ ಲೋಕಕ್ಕೆ ಬಂದ ಆ ವಿಷ್ಣುಪಾದವನ್ನು ನೋಡಿ ನಾನು ಇಂತು ಆಲೋಚಿಸಿದೆನು. ಮಂಗಳಕರವಾದ ಈ ವಿಷ್ಣುಪಾದವು ಬಂದಿರಲು ಈಗ ನಾನು ಮಾಡಬೇಕಾದುದೇನು ?

೫೯. ಮಹಾಪವಿತ್ರವೂ ಶ್ರೇಷ್ಠವೂ ಆದ ಕಮಂಡುಲವು ನನ್ನಲ್ಲಿದೆ, ಅದರಲ್ಲಿ ಪರಮೇಶ್ವರನು ಅನುಗ್ರಹಿಸಿದ ಪವಿತ್ರವಾದ ಗಂಗೆಯ ಜಲವಿದೆ.

೬೦–೬೧. ಅಲ್ಲದೆ ಆ ಜಲವು ಸರ್ವೋತ್ತಮವಾದುದು. ಬೇಕಾದ ಮನೋರಥಗಳನ್ನುಂಟುಮಾಡುವಂತಹುದು, ಶಾಂತಿಯನ್ನುಂಟುಮಾಡುವುದು, ಮಂಗಳಕರವಾದುದು, ಭೋಗಮೋಕ್ಷಗಳನ್ನುಂಟುಮಾಡುವುದು, ಲೋಕಮಾತೆಯಾದ ಗಂಗೆಯ ಸ್ವರೂಪವಾದುದು. ಆ ಜಲವನ್ನು ನೋಡಿದಮಾತ್ರದಿಂದಲೇ ಪರಿಶುದ್ಧತೆಯುಂಟಾಗುವುದು.

೬೨. ಮತ್ತು ಪವಿತ್ರವಾದುದು, ಪಾಪವನ್ನು ಹೋಗಲಾಡಿಸುವುದು. ಪೂಜ್ಯವಾದುದು, ಪವಿತ್ರವಸ್ತುಗಳಲ್ಲಿ ಉತ್ತಮವಾದುದು, ಇಂತಹ ಗುಣಗಳುಳ್ಳ ಆ ಜಲವನ್ನು ಸ್ಮರಣಮಾಡುವುದರಿಂದಲೇ ಪಾಪವು ನಾಶವಾಗುವುದು. ಅದು ಸಂಸಾರದಲ್ಲಿ ತೊಳಲುತ್ತಿರುವ ಜನಗಳಿಗೆ ಅಮೃತವೂ ಔಷಧಿಯೂ ಆಗಿರುವುದು.

ತಾದೃಗ್ವಾರಿ ಶುಚಿರ್ಭೂತ್ವಾ ಕಲ್ಪಯೇSರ್ಘ್ಯಾಯ ಮೇ ಪಿತುಃ ।
ಇತಿ ಸಂಚಿಂತ್ಯ ತದ್ವಾರಿ ಗೃಹೀತ್ವಾರ್ಘ್ಯಾಯ ಕಲ್ಪಿತಂ ॥ ೬೩ ॥

ವಿಷ್ಣೋಃ ಪಾದೇ ತು ಪತಿತಮರ್ಘ್ಯವಾರಿ ಸುಮಂತ್ರಿತಂ ।
ತದ್ವಾರಿ ಪತಿತಂ ಮೇರೌ ಚತುರ್ಧಾ ವ್ಯಗಮದ್ಭುವಂ ॥ ೬೪ ॥

ಪೂರ್ವೇ ತು ದಕ್ಷಿಣೇ ಚೈವ ಪಶ್ಚಿಮೇ ಚೋತ್ತರೇ ತಥಾ ।
ದಕ್ಷಿಣೇ ಯತ್ತು ಪತಿತಂ ಜಟಾಭಿಃ ಶಂಕರೋ ಮುನೇ, ॥ ೬೫ ॥

ಜಗ್ರಾಹ ಪಶ್ಚಿಮೇ ಯತ್ತು ಪುನಃ ಪ್ರಾಯಾತ್ಕಮಂಡಲುಂ ।
ಉತ್ತರೇ ಪತಿತಂ ಯತ್ತು ವಿಷ್ಣುರ್ಜಗ್ರಾಹ ತಜ್ಜಲಂ ॥ ೬೬ ॥

ಪೂರ್ವಸ್ಮಿನ್ನೃಷಯೋ ದೇವಾ ಪಿತರೋ ಲೋಕಪಾಲಕಾಃ ।
ಜಗೃಹುಃ ಶುಭದಂ ವಾರಿ ತಸ್ಮಾಚ್ಛ್ರೇಷ್ಠಂ ತದುಚ್ಯತೇ ॥ ೬೭ ॥

---

೬೩. ಇಂತಹ ಮಹಿಮೆಯುಳ್ಳ ಆ ಶಿವಜಲವನ್ನು ಶುಚಿಯಾಗಿ ತೆಗೆದುಕೊಂಡು ನನ್ನ ಜನಕನಾದ ಹರಿಗೆ ಅರ್ಘ್ಯವನ್ನು ಕೊಡುವೆನು ಎಂದು ಆಲೋಚಿಸಿ, ಆ ಕಮಂಡಲುಜಲದಿಂದ ಹರಿಯ ಪಾದಕ್ಕೆ ಅರ್ಘ್ಯವನ್ನು ಕೊಟ್ಟೆನು.

೬೪. ಆಗ ಮಂತ್ರಪೂತವಾದ ಆ ಜಲವು ಹರಿಯ ಎರಡನೆಯ ಪಾದದಲ್ಲಿ ಬಿದ್ದು, ಅಲ್ಲಿಂದ ಮೇರುಗಿರಿಯಲ್ಲಿ ಬಿದ್ದು, ಪೂರ್ವದಕ್ಷಿಣಪಶ್ಚಿಮೋತ್ತರಗಳಲ್ಲಿ ನಾಲ್ಕು ಭಾಗವಾಗಿ ಭೂಮಿಯನ್ನು ಸೇರಿತು.

೬೫–೬೬. ದಕ್ಷಿಣದಲ್ಲಿ ಬಿದ್ದ ನೀರನ್ನು ಶಿವನು ತನ್ನ ಜಟೆಗಳಲ್ಲಿ ಬಂಧಿಸಿದನು. ಪಶ್ಚಿಮದಲ್ಲಿ ಬಿದ್ದುದು ತಿರುಗಿ ನನ್ನ ಕಮಂಡಲುವಿಗೆ ಬಂದಿತು. ಉತ್ತರದಲ್ಲಿ ಬಿದ್ದ ಜಲವನ್ನು ಹರಿಯು ಧರಿಸಿದನು.

೬೭. ಪೂರ್ವದಿಕ್ಕಿನಲ್ಲಿ ಬಿದ್ದ ಗಂಗಾಜಲವನ್ನು ಋಷಿಗಳು ದೇವತೆಗಳು ಲೋಕಪೂಜ್ಯರಾದ ಪಿತೃದೇವತೆಗಳು ಇವರೆಲ್ಲರೂ ಸ್ವೀಕರಿಸಿದರು. ಆದುದರಿಂದ ಆ ಜಲವು ಶ್ರೇಷ್ಠವಾದುದು.

ಯಾ ದಕ್ಷಿಣಾಂ ದಿಶಂ ಪ್ರಾಪ್ತಾ ಆಪೋ ವೈ ಲೋಕಮಾತರಃ ।
ವಿಷ್ಣುಪಾದಪ್ರಸೂತಾಸ್ತಾ ಬ್ರಹ್ಮಣ್ಯಾ ಲೋಕಮಾತರಃ ॥ ೬೮ ॥

ಮಹೇಶ್ವರಜಟಾಸಂಸ್ಥಾಃ ಪರ್ವಜಾತಶುಭೋದಯಾಃ ।
ತಾಸಾಂ ಪ್ರಭಾವಸ್ಮರಣಾತ್ಸರ್ವಕಾಮಾನವಾಪ್ನುಯಾತ್ ॥ ೬೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ ತೀರ್ಥಮಾಹಾತ್ಮ್ಯೇ ಗಂಗಾಯಾ ಮಹೇಶ್ವರಜಟಾಗಮನ-ನಿರೂಪಣಂ ನಾಮ ತ್ರಿಸಪ್ತತಿತಮೋಽಧ್ಯಾಯಃ

೬೮-೬೯. ದಕ್ಷಿಣದಿಕ್ಕಿನಲ್ಲಿ ಹೊರಟ ಗಂಗೆಯು ಲೋಕಜನನಿಯು, ಜನಗಳನ್ನು ತಾಯಿಯಂತೆ ಕಾಪಾಡುವುದು. ಆ ಗಂಗೆಯು ಮೊದಲು ಬ್ರಹ್ಮನ ಕಮಂಡಲುವಿನಿಂದ ಹೊರಟು ಆಮೇಲೆ ಹರಿಯ ಪಾದದಿಂದ ಕೆಳಗೆ ಬಿದ್ದು ಕೊನೆಯಲ್ಲಿ ಶಿವನ ಜಟೆಯನ್ನು ಸೇರಿತು, ಹೀಗೆ ಶ್ರೇಷ್ಠ ಸ್ಥಳಗಳಿಂದ ಹೊರಟ ಆ ಗಂಗೆಯ ಮಹಿಮೆಯನ್ನು ಸ್ಮರಣಮಾಡಿದರೆ ಸಕಲ ಕಾಮುಗಳೂ ಸಿದ್ಧಿಸುವುವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಗಂಗೆಯ ಮಹೇಶ್ವರಜಟಾಗಮನವರ್ಣನವೆಂಬ ಎಪ್ಪತ್ತಮೂರನೆಯ ಅಧ್ಯಾಯವು ಮುಗಿದುದು.

ಗೌತಮೀಮಹಾತ್ಮ್ಯೆಯಲ್ಲಿ ನಾಲ್ಕನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಚತುಃಸಪ್ತತಿತಮೋಽಧ್ಯಾಯಃ

॥ ನಾರದ ಉವಾಚ ॥

ಕಮಂಡಲುಸ್ಥಿತಾ ದೇವೀ ಮಹೇಶ್ವರಜಟಾಗತಾ ।
ಶ್ರುತಾ ದೇವ ಯಥಾ ಮರ್ತ್ಯಮಾಗತಾ ತದ್ಬ್ರವೀತು ಮೇ ॥ ೧ ॥

॥ ಬ್ರಹ್ಮೋವಾಚ ॥

ಮಹೇಶ್ವರಜಟಾಸ್ಥಾ ಯಾ ಆಪೋ ದೇವ್ಯೋ ಮಹಾಮತೇ ।
ತಾಸಾಂ ಚ ದ್ವಿವಿಧೋ ಭೇದ ಆಹರ್ತೃದ್ವಯಕಾರಣಾತ್ ॥ ೨ ॥

ಎಪ್ಪತ್ತನಾಲ್ಕನೆಯ ಅಧ್ಯಾಯವು

೧. ನಾರದಮುನಿಯು ಹೇಳಿದನು—ಓ ಬ್ರಹ್ಮದೇವ, ನಿನ್ನ ಕಮಂಡಲುವಿನಲ್ಲಿದ್ದ ಗಂಗಾದೇವಿಯು ಹರಿಯ ಪಾದದ ಮೂಲಕ ಶಿವನ ಜಟೆಗೆ ಬಂದ ಇತಿಹಾಸವನ್ನು ಕೇಳಿದೆನು. ಈಗ ಶಿವಜಟೆಯಿಂದ ಭೂಮಿಗೆ ಬಂದುದನ್ನು ಹೇಳಿನಲು,

೨. ಬ್ರಹ್ಮನಿಂತೆಂದನು—ಎಲೈ ನಾರದನೇ, ಕೇಳು. ಮಹೇಶ್ವರನ ಜಟೆಯಲ್ಲಿದ್ದ ಗಂಗಾದೇವಿಯನ್ನು ಇರ್ವರು ಭೂಮಿಗೆ ಕರೆದುಕೊಂಡು ಬಂದುದರಿಂದ ಎರಡು ಭೇದವಾಯಿತು.

ಏಕಾಂಶೋ ಬ್ರಾಹ್ಮಣೇನಾತ್ರ ವ್ರತದಾನಸಮಾಧಿನಾ ।
ಗೋತಮೇನ ಶಿವಂ ಪೂಜ್ಯ ಆಹೃತೋ ಲೋಕವಿಶ್ರುತಃ ॥ ೩ ॥

ಅಪರಸ್ತು ಮಹಾಪ್ರಾಜ್ಞ ಕ್ಷತ್ರಿಯೇಣ ಬಲೀಯಸಾ ।
ಆರಾಧ್ಯ ಶಂಕರಂ ದೇವಂ ತಪೋಭಿರ್ನಿಯಮೈಸ್ತಥಾ ॥ ೪ ॥

ಭಗೀರಥೇನ ಭೂಪೇನ ಆಹೃತೋಽಂಶೋಽಪರಸ್ತಥಾ ।
ಏವಂ ದ್ವೈರೂಪ್ಯಮಭವದ್ಗಂಗಾಯಾ ಮುನಿಸತ್ತಮ ॥ ೫ ॥

॥ ನಾರದ ಉವಾಚ ॥

ಮಹೇಶ್ವರಜಟಾಸ್ಥಾ ಯಾ ಹೇತುನಾ ಕೇನ ಗೌತಮಃ ।
ಆಹರ್ತಾ ಕ್ಷತ್ರಿಯೇಣಾಪಿ ಆಹೃತಾ ಕೇನ ತದ್ವದ ॥ ೬ ॥

---

೩. ಒಂದು ಭಾಗವನ್ನು ಮಹಾಧರ್ಮಿಷ್ಠನೂ, ಕರ್ಮನಿಷ್ಠನೂ ಯೋಗಿಯೂ ಆದ ಗೌತಮಮುನಿಯು ಶಿವನನ್ನು ಪೂಜಿಸಿ ಭೂಮಿಗೆ ತಂದಿರುವನು, ಇದು ಪ್ರಸಿದ್ಧವಾದುದು.

೪. ಇನ್ನೊಂದು ಭಾಗವನ್ನು ಬಲಿಷ್ಠನೂ ಕ್ಷತ್ರಿಯನೂ ಆದ ಭಗೀರಥನು ಶಂಕರನನ್ನು ತಪಸ್ಸುಗಳಿಂದಲೂ ನಿಯಮಗಳಿಂದಲೂ ಆರಾಧಿಸಿ ಭೂಮಿಗೆ ಕರೆತಂದಿರುವನು.

೫. ಹೀಗೆ ಗೌತಮಮುನಿಯೂ, ಭಗೀರಥನೂ ಬೇರೆಬೇರೆಯಾಗಿ ಗಂಗೆಯನ್ನು ಕರೆದುಕೊಂಡು ಬಂದುದರಿಂದ ಎರಡು ಭಾಗವಾಯಿತು ಎಂದನು.

೬. ಓ ಬ್ರಹ್ಮದೇವ, ಮಹೇಶ್ವರನ ಜಟೆಯಲ್ಲಿದ್ದ ಗಂಗೆಯನ್ನು ಭಗೀರಥನೂ ಗೌತಮಮುನಿಯೂ ಭೂಮಿಗೆ ಕರೆದುಕೊಂಡು ಬರಲು ಕಾರಣವೇನು? ಹೇಳು ಎಂದು ಮತ್ತೆ ಕೇಳಲು,

॥ ಬ್ರಹ್ಮೋವಾಚ ॥

ಯಥಾನೀತಾ ಪುರಾ ವತ್ಸ ಬ್ರಾಹ್ಮಣೇನೇತರೇಣ ವಾ ।
ತತ್ಸರ್ವಂ ವಿಸ್ತರೇಣಾಹಂ ವದಿಷ್ಯೇ ಪ್ರೀತಯೇ ತವ ॥ ೭ ॥

ಯಸ್ಮಿನ್ಕಾಲೇ ಸುರೇಶಸ್ಯ ಉಮಾ ಪತ್ನ್ಯಭವತ್ಪ್ರಿಯಾ ।
ತಸ್ಮಿನ್ನೇವಾಭವದ್ಗಂಗಾ ಪ್ರಿಯಾ ಶಂಭೋರ್ಮಹಾಮತೇ ॥ ೮ ॥

ಮಮ ದೋಷಾಪನೋದಾಯ ಚಿಂತಯಾನಃ ಶಿವಸ್ತದಾ ।
ಉಮಯಾ ಸಹಿತಃ ಶ್ರೀಮಾನ್ದೇವೀಂ ಪ್ರೇಕ್ಷ್ಯ ವಿಶೇಷತಃ ॥ ೯ ॥

ರಸವೃತ್ತೌ ಸ್ಥಿತೋ ಯಸ್ಮಾನ್ನಿರ್ಮಮೋ ರಸಮುತ್ತಮಂ ।
ರಸಿಕತ್ವಾತ್ಪ್ರಿಯತ್ವಾಚ್ಚ ಸ್ತ್ರೈಣತ್ವಾತ್ಪಾವನತ್ವತಃ ॥ ೧೦ ॥

ಸರ್ವಾಭ್ಯೋ ಹ್ಯಧಿಕಪ್ರೀತಿರ್ಗಂಗಾಭೂದ್ದ್ವಿಜಸತ್ತಮ ।
ತಾಮೇವ ಚಿಂತಯಾನೋಽಸೌ ಸರ್ವದಾಸ್ತೇ ಮಹೇಶ್ವರಃ ॥ ೧೧ ॥

---

೭. ಬ್ರಹ್ಮನು ಹೇಳಿದನು—ಎಲೈ ನಾರದ, ಗೌತಮಮುನಿಯೂ ಭಗೀರಥನೂ ಗಂಗಾದೇವಿಯನ್ನು ಭೂಮಿಗೆ ಕರೆದುಕೊಂಡುಬಂದುದೇಕೆ? ಎಂಬುದನ್ನೂ ಇದಕ್ಕೆ ಸಂಬಂಧಪಟ್ಟ ಇತಿಹಾಸವನ್ನೂ ನಿನಗಾಗಿ ಹೇಳುವೆನು ಕೇಳು.

೮. ಉಮಾದೇವಿಯು ಶಂಕರನ ಪ್ರಿಯಪತ್ನಿಯಾಗಿರುವಾಗಲೇ ಗಂಗಾದೇವಿಯು ಶಂಕರನಿಗೆ ಪ್ರಿಯಳಾಗಿದ್ದಳು.

೯. ಪಾರ್ವತಿಯನ್ನು ಕಾಮುಕದೃಷ್ಟಿಯಿಂದ ನೋಡಿದ ನನ್ನ ದೋಷವನ್ನು ನಿವಾರಿಸಲು ಚಿಂತಿಸುತ್ತಾ ಶಿವನು ಒಂದುದಿನ ಉಮಾದೇವಿಯನ್ನು ಶೃಂಗಾರದೃಷ್ಟಿಯಿಂದ ನೋಡಿ ಆಗಲೇ ಉತ್ತಮವಾದ ರಸವೊಂದನ್ನು ನಿರ್ಮಿಸಿದನು, ಆ ರಸವೇ ಗಂಗಾದೇವಿಯು.

೧೦. ಆ ಗಂಗೆಯು ಶೃಂಗಾರರಸವನ್ನು ತಿಳಿದವಳೂ ಸುಂದರಳೂ ಪವಿತ್ರಳೂ ಆದುದರಿಂದ ಅವಳಲ್ಲಿ ಶಿವನಿಗೆ ಹೆಚ್ಚಾದ ಪ್ರೀತಿಯುಂಟಾಯಿತು.

೧೧. ಆ ಗಂಗೆಯಲ್ಲಿಯೇ ಅನುರಕ್ತನಾಗಿ ಶಿವನು ಅವಳನ್ನು ಸದಾ ಚಿಂತಿಸುತ್ತಿದ್ದನು. ಹೀಗಿರಲು ಒಂದುದಿನ ಯಾವುದೋ ಕಾರಣದಿಂದ ಗಂಗೆಯು ಜಟೆಯಿಂದ ಹೊರಗೆ ಕಾಣಿಸಿದಳು.

ಸ್ವೈವೋದ್ಭೂತಾ ಜಟಾಮಾರ್ಗಾತ್ಕಸ್ಮಿಂಶ್ಚಿತ್ಕಾರಣಾಂತರೇ ।
ಸ ತು ಸಂಗೋಪಯಾಮಾಸ ಗಂಗಾಂ ಶಂಭುರ್ಜಟಾಗತಾಂ ॥ ೧೨ ॥

ಶಿರಸಾ ಚ ಧೃತಾಂ ಜ್ಞಾತ್ವಾ ನ ಶಶಾಕ ಉಮಾ ತದಾ ।
ಸೋಢುಂ ಬ್ರಹ್ಮನ್ ಜಟಾಜೂಟೇ ಸ್ಥಿತಾಂ ದೃಷ್ಟ್ವಾ ಪುನಃ ಪುನಃ ॥ ೧೩ ॥

ಅಮರ್ಷೇಣ ಭವಂ ಗೌರೀ ಪ್ರೇರಯಸ್ವೇತ್ಯಭಾಷತ ।
ನೈವಾಸೌ ಪ್ರೈರಯಚ್ಛಂಭೂ ರಸಿಕೋ ರಸಮುತ್ತಮಂ ॥ ೧೪ ॥

ಜಟಾಸ್ವೇವ ತದಾ ದೇವೀಂ ಗೋಪಾಯಂತಂ ವಿಮೃಶ್ಯ ಸಾ ।
ವಿನಾಯಕಂ ಜಯಾಂ ಸ್ಕಂದಂ ರಹೋ ವಚನಮಬ್ರವೀತ್ ॥ ೧೫ ॥

ನೈವಾಯಂ ತ್ರಿದಶೇಶಾನೋ ಗಂಗಾಂ ತ್ಯಜತಿ ಕಾಮುಕಃ ।
ಸಾಪಿ ಪ್ರಿಯಾ ಶಿವಸ್ಯಾದ್ಯ ಕಥಂ ತ್ಯಜತಿ ತಾಂ ಪ್ರಿಯಾಂ ।
ಏವಂ ವಿಮೃಶ್ಯ ಬಹುಶೋ ಗೌರೀ ಚಾಹ ವಿನಾಯಕಂ ॥ ೧೬ ॥

---

೧೨. ಆಕೂಡಲೇ ಶಿವನು ತನ್ನ ಜಟೆಯಲ್ಲಿ ಆ ಗಂಗೆಯನ್ನು ಅಡಗಿಸಿಟ್ಟನು. ಅದನ್ನು ನೋಡಿ ಪಾರ್ವತಿಗೆ ಸಹಿಸಲಿಲ್ಲ.

೧೩-೧೪. ತನ್ನ ಪತಿಯ ಜಟೆಯಲ್ಲಿದ್ದ ಗಂಗೆಯನ್ನು ಮತ್ತೆಮತ್ತೆ ನೋಡುತ್ತಾ ಕೋಪಗೊಂಡು ಗೌರಿಯು ಓ ಶಿವ, ಈ ಗಂಗೆಯನ್ನು ಬಿಟ್ಟುಬಿಡು ಎಂದು ಹೇಳಿದಳು. ಆದರೂ ರಸಿಕನಾದ ಶಿವನು ರಸರೂಪಿಣಿಯಾದ ಗಂಗೆಯನ್ನು ಬಿಡಲಿಲ್ಲ.

೧೫. ಹೀಗೆ ಶಿವನು ಗಂಗೆಯನ್ನು ಜಟೆಯಲ್ಲಿಯೇ ಅಡಗಿಸಿಟ್ಟುಕೊಂಡಿರುವುದನ್ನು ನೋಡಿ ಗಿರಿಜೆಯು ಏಕಾಂತದಲ್ಲಿ ವಿನಾಯಕ, ಸಖಿಯಾದ ಜಯಾ, ಸ್ಕಂದ ಇವರನ್ನು ಕರೆದು,

೧೬-೧೭. ಗೌರಿಯು ಹೇಳಿದಳು—ಎಲೈ ಮಕ್ಕಳಿರಾ, ಕಾಮುಕನಾದ ಈ ಪರಮೇಶ್ವರನು ಗಂಗೆಯನ್ನು ಬಿಡುವುದಿಲ್ಲ. ಈಗ ಅವಳೇ ಶಿವನಿಗೆ ಪ್ರಿಯಳಾಗಿರುವಳು. ಇಂತಹವಳನ್ನು ಶಿವನು ಹೇಗೆ ಬಿಟ್ಟಾನು? ಹೀಗೆ ಆಲೋಚಿಸಿ ಗೌರಿಯು ವಿನಾಯಕನನ್ನು ಕುರಿತು

॥ ಪಾರ್ವತ್ಯುವಾಚ ॥

ನ ದೇವೈರ್ನಾಸುರೈರ್ಯಕ್ಷೈರ್ನ ಸಿದ್ಧೈರ್ಭವತಾಪಿ ಚ ।
ನ ರಾಜಭಿರಥಾನ್ಯೈರ್ವಾ ನ ಗಂಗಾಂ ತ್ಯಜತಿ ಪ್ರಭುಃ ॥ ೧೮ ॥

ಪುನಸ್ತಪ್ಸ್ಯಾಮಿ ವಾ ಗತ್ವಾ ಹಿಮವಂತಂ ನಗೋತ್ತಮಂ ।
ಅಥವಾ ಬ್ರಾಹ್ಮಣೈಃ ಪುಣ್ಯೈಸ್ತಪೋಭಿರ್ಹತಕಲ್ಮಷೈಃ ॥ ೧೯ ॥

ತೈರ್ವಾ ಜಟಾಸ್ಥಿತಾ ಗಂಗಾ ಪ್ರಾರ್ಥಿತಾ ಭುವಮಾಪ್ನುಯಾತ್ ॥ ೨೦ ॥

ಏತಚ್ಛ್ರುತ್ವಾ ಮಾತೃವಾಕ್ಯಂ ಮಾತರಂ ಪ್ರಾಹ ವಿಘ್ನರಾಟ್ ।
ಭ್ರಾತ್ರಾ ಸ್ಕಂದೇನ ಜಯಯಾ ಸಂಮಂತ್ರ್ಯೇಹ ಚ ಯುಜ್ಯತೇ ॥ ೨೧ ॥

ತತ್ಕುರ್ಮೋ ಮಸ್ತಕಾದ್ಗಂಗಾಂ ಯಥಾ ತ್ಯಜತಿ ಮೇ ಪಿತಾ ।
ಏತಸ್ಮಿನ್ನಂತರೇ ಬ್ರಹ್ಮನ್ನನಾವೃಷ್ಟಿರಜಾಯತ ॥ ೨೨ ॥

---

೧೮. ಮಗು, ಗಣೇಶ, ದೇವತೆಗಳು, ದೈತ್ಯರು, ಯಕ್ಷರು, ನೀನು ಮಿಕ್ಕರಾಜರು ಇವರು ಯಾರೂ ಸಹ ಆ ಶಿವನಿಂದ ಗಂಗೆಯನ್ನು ಬಿಡಿಸಲು ಅಸಮರ್ಥರು.

೧೯-೨೦. ಆದುದರಿಂದ ನಾನೇ ಹಿಮಾಲಯಕ್ಕೆ ಹೋಗಿ ತಿರುಗಿ ತಪಸ್ಸನ್ನು ಮಾಡುವೆನು ಅಥವಾ ಪುಣ್ಯಾತ್ಮರೂ ತಪಸ್ಸಿನಿಂದ ಪರಿಶುದ್ಧರೂ ಆದ ಬ್ರಾಹ್ಮಣರು ಶಿವನನ್ನು ಪ್ರಾರ್ಥಿಸಿದಲ್ಲಿ ಗಂಗೆಯನ್ನು ಭೂಮಿಗೆ ಕರೆದು ಕೊಂಡು ಹೋಗಬಹುದು ಎಂದಳು.

೨೧. ಹೀಗೆ ತನ್ನ ತಾಯಿಯು ಹೇಳಿದುದನ್ನು ಕೇಳಿ, ವಿನಾಯಕನು ಸ್ಕಂದ ಮತ್ತು ಜಯೆಯರೊಡನೆ ಆಲೋಚಿಸಿ ಓ ಮಾತೆ, ನೀನು ಹೇಳಿದುದು ನಿಜ. ನಮ್ಮ ತಂದೆಯು ಗಂಗೆಯನ್ನು ಬಿಡುವಂತೆ ನಾವು ಪ್ರಯತ್ನಿಸುತ್ತೇವೆ. ಎಂದು ಹೇಳಿದನು.

೨೨. ಇದೇ ಕಾಲದಲ್ಲಿ ಭೂಲೋಕದಲ್ಲಿ ಇಪ್ಪತ್ತನಾಲ್ಕು ವರುಷಗಳ ವರೆಗೆ ಮಳೆಯೇ ಆಗಲಿಲ್ಲ, ಭಯಂಕರವಾದ ಕ್ಷಾಮವು ತಲೆದೋರಿತು.

ದ್ವಿದ್ವಾದಶ ಸಮಾ ಪುರ್ತ್ಯೇ ಸರ್ವಪ್ರಾಣಿಭಯಾವಹಾ ।
ತತೋ ವಿನಷ್ಟಮಭವಜ್ಜಗತ್ಸ್ಥಾವರಜಂಗಮಂ ॥ ೨೩ ॥

ವಿನಾ ತು ಗೌತಮಂ ಪುಣ್ಯಮಾಶ್ರಮಂ ಸರ್ವಕಾಮದಂ ।
ಸ್ರಷ್ಟುಕಾಮಃ ಪುರಾ ಪುತ್ರ ಸ್ಥಾವರಂ ಜಂಗಮಂ ತಥಾ ॥ ೨೪ ॥

ಕೃತೋ ಯಜ್ಞೋ ಮಯಾ ಪೂರ್ವಂ ಸ ದೇವಯಜನೋ ಗಿರಿಃ ।
ಮನ್ನಾಮಾ ತತ್ರ ವಿಖ್ಯಾತಸ್ತತೋ ಬ್ರಹ್ಮಗಿರಿಃ ಸದಾ ॥ ೨೫ ॥

ತಮಾಶ್ರಿತ್ಯ ನಗಶ್ರೇಷ್ಠಂ ಸರ್ವದಾಸ್ತೇ ಸ ಗೌತಮಃ ।
ತಸ್ಯಾಶ್ರಮೋ ಮಹಾಪುಣ್ಯೇ ಶ್ರೇಷ್ಠೇ ಬ್ರಹ್ಮಗಿರೌ ಶುಭೇ ॥ ೨೬ ॥

ಆಧಯೋ ವ್ಯಾಧಯೋ ವಾಪಿ ದುರ್ಭಿಕ್ಷಂ ವಾಪ್ಯವರ್ಷಣಂ ।
ಭಯಶೋಕೌ ಚ ದಾರಿದ್ರ್ಯಂ ನ ಶ್ರೂಯಂತೇ ಕದಾಚನ ॥ ೨೭ ॥

ತದಾಶ್ರಮಂ ವಿನಾನ್ಯತ್ರ ಹವ್ಯಂ ವಾ ಕವ್ಯಮೇವ ವಾ ।
ನಾಸ್ತಿ ಪುತ್ರ ತಥಾ ದಾತಾ ಹೋತಾ ಯಷ್ಟಾ ತಥೈವ ಚ ॥ ೨೮ ॥

---

೨೩. ಆಗ ಜಗತ್ತೆಲ್ಲವೂ ನಷ್ಟವಾಯಿತು, ಆದರೆ ಗೌತಮಮುನಿಯ ಪವಿತ್ರವಾದ ಆಶ್ರಮದಲ್ಲಿ ಸಕಲವಸ್ತುಗಳೂ ಸಮೃದ್ಧವಾಗಿದ್ದವು.

೨೪-೨೫. ಹಿಂದೆ ನಾನು ಜಗತ್ತನ್ನು ಸೃಷ್ಟಿಸಲು ದೇವಗಿರಿಯಲ್ಲಿ ಯಾಗವನ್ನು ಮಾಡಿದ್ದೆನು. ಆಮೇಲೆ ನನ್ನ ಹೆಸರಿನಿಂದ ಆ ಗಿರಿಗೆ ಬ್ರಹ್ಮಗಿರಿಯೆಂದು ಹೆಸರಾಯಿತು. ಆ ಗಿರಿಯ ತಪ್ಪಲಲ್ಲಿಯೇ ಗೌತಮನು ಆಶ್ರಮವನ್ನು ಕಟ್ಟಿಕೊಂಡು ವಾಸಿಸುತ್ತಿರುವನು.

೨೬-೨೭. ಬ್ರಹ್ಮಗಿರಿಯಲ್ಲಿರುವ ಪವಿತ್ರವಾದಾ ಗೌತಮಾಶ್ರಮದಲ್ಲಿ ಮನೋವ್ಯಥೆ ರೋಗ, ಬರಗಾಲ, ಅನಾವೃಷ್ಟಿ, ಭಯ, ದುಃಖ ಬಡತನ ಇವು ಯಾವಾಗಲೂ ಇರುವುದಿಲ್ಲ.

೨೮. ಆ ಬರಗಾಲದಲ್ಲಿ ಗೌತಮಾಶ್ರಮವನ್ನುಳಿದು ಮತ್ತೆಲ್ಲಿಯೂ ದೇವಕರ್ಮ, ಪಿತೃಕರ್ಮ, ದಾನ, ಹೋಮ, ಯಾಗ ಮುಂತಾದ ಸತ್ಕರ್ಮಗಳು ನಡೆಯುತ್ತಿರಲಿಲ್ಲ.

ಯದ್ವೈವ ಗೌತಮೋ ವಿಪ್ರೋ ದದಾತಿ ಚ ಜುಹೋತಿ ಚ ।
ತದ್ವೈವಾಪ್ಯಯನಂ ಸ್ವರ್ಗೇ ಸುರಾಣಾಮಪಿ ನಾನ್ಯತಃ ॥ ೨೯ ॥

ದೇವಲೋಕೇಽಪಿ ಮರ್ತ್ಯೇ ವಾ ಶ್ರೂಯತೇ ಗೌತಮೋ ಮುನಿಃ ।
ಹೋತಾ ದಾತಾ ಚ ಭೋಕ್ತಾ ಚ ಸ ಏವೇತಿ ಜನಾ ವಿದುಃ ॥ ೩೦ ॥

ತಚ್ಛ್ರುತ್ವಾ ಮುನಯಃ ಸರ್ವೇ ನಾನಾಶ್ರಮನಿವಾಸಿನಃ ।
ಗೌತಮಾಶ್ರಮಮಾಪೃಚ್ಛನ್ನಾಗಚ್ಛಂತಸ್ತಪೋಧನಾಃ ॥ ೩೧ ॥

ತೇಷಾಂ ಮುನೀನಾಂ ಸರ್ವೇಷಾಮಾಗತಾನಾಂ ಸ ಗೌತಮಃ ।
ಶಿಷ್ಯವತ್ಪುತ್ರವದ್ಭಕ್ತ್ಯಾ ಪಿತೃವತ್ಪೋಷಕೋಽಭವತ್ ॥ ೩೨ ॥

ಯಸ್ಯ ಯಥೇಪ್ಸಿತಂ ಕಾಮಂ ಯಥಾಯೋಗ್ಯಂ ಯಥಾಕ್ರಮಂ ।
ಯಥಾನುರೂಪಂ ಸರ್ವೇಷಾಂ ಶುಶ್ರೂಷಾಮಕರೋನ್ಮುನಿಃ ॥ ೩೩ ॥

---

೨೯. ಆ ಗೌತಮಮುನಿಯು ದಾನ, ಹೋಮ, ಯಾಗಗಳನ್ನು ಮಾಡುತ್ತಿದ್ದುದರಿಂದಲೇ ಆಗ ಸ್ವರ್ಗದಲ್ಲಿನ ದೇವತೆಗಳಿಗೆ ತೃಪ್ತಿಯಾಗುತ್ತಿದ್ದಿತು.

೩೦. ಹೀಗಾಗಿ ದೇವಲೋಕದಲ್ಲಿಯೂ ಭೂಲೋಕದಲ್ಲಿಯೂ ಸಹ ಇವನೇ ಮಹಾಹೋತೃವು, ಮಹೋದಾರಿಯು, ಮಹಾಪುಣ್ಯವಂತನು ಎಂದು ಜನಗಳು ಗೌತಮನನ್ನು ಹೊಗಳತೊಡಗಿದರು. ಎಲ್ಲೆಲ್ಲಿಯೂ ಅವನ ಹೆಸರೇ ಕೇಳಬರುತ್ತಿದ್ದಿತು.

೩೧. ಗೌತಮನ ಇಂತಹ ಕೀರ್ತಿಯನ್ನುಕೇಳಿ, ತಪಸ್ವಿಗಳಾದ ಅನೇಕ ಮುನಿಗಳು ಅವನ ಆಶ್ರಮದ ಗುರುತನ್ನು ತಿಳಿದುಕೊಂಡು ಅಲ್ಲಿಗೆ ಬಂದರು.

೩೨. ತನ್ನಾಶ್ರಮಕ್ಕೆ ಬಂದ ಮುನಿಗಳೆಲ್ಲರನ್ನೂ ಅವರವರ ವಯಸ್ಸನ್ನನುಸರಿಸಿ ಗುರುಗಳನ್ನು ಶಿಷ್ಯನಂತೆಯೂ ಹಿರಿಯರನ್ನು ಪುತ್ರನಂತೆಯೂ ಚಿಕ್ಕವರನ್ನು ತಂದೆಯಂತೆಯೂ, ಪ್ರೀತಿಯಿಂದ ಉಪಚರಿಸಿದನು.

೩೩. ಯಾರ್ಯಾರಿಗೆ ಯಾವಾವುದು ಬೇಕೋ ಅದನ್ನು ಅವರವರ ಯೋಗ್ಯತೆಯನ್ನನುಸರಿಸಿ ಕೊಟ್ಟು ಎಲ್ಲರನ್ನೂ ಸತ್ಕರಿಸಿದನು.

ಆಜ್ಞಯಾ ಗೌತಮಸ್ಯಾಸನ್ನೋಷಧ್ಯೋ ಲೋಕಮಾತರಃ ।
ಆರಾಧಿತಾಃ ಪುನಸ್ತೇನ ಬ್ರಹ್ಮವಿಷ್ಣುಮಹೇಶ್ವರಾಃ ॥ ೩೪ ॥

ಜಾಯಂತೇ ಚ ತದೌಷಧ್ಯೋ ಲೂಯಂತೇ ಚ ತದೈವ ಹಿ ।
ಸಂಪತ್ಸ್ಯಂತೇ ತದೋಪ್ಯಂತೇ ಗೌತಮಸ್ಯ ತಪೋಬಲಾತ್ ॥ ೩೫ ॥

ಸರ್ವಾಃ ಸಮೃದ್ಧಯಸ್ತಸ್ಯ ಸಂಸಿಧ್ಯಂತೇ ಮನೋಗತಾಃ ।
ಪ್ರತ್ಯಹಂ ವಕ್ತಿ ವಿನಯಾದ್ಗೌತಮಸ್ತ್ವಾಗತಾನ್ಮುನೀನ್ ॥ ೩೬ ॥

ಪುತ್ರವಚ್ಛಿಷ್ಯವಚ್ಚೈವ ಪ್ರೇಷ್ಯವತ್ಕರವಾಣಿ ಕಿಂ ।
ಪಿತೃವತ್ಪೋಷಯಾಮಾಸ ಸಂವತ್ಸರಗಣಾನ್ಬಹೂನ್ ॥ ೩೭ ॥

---

೩೪. ಲೋಕಮಾತೆಯರಾದ ಓಷಧಿದೇವತೆಯರು ಗೌತಮನ ಆಜ್ಞೆಯಂತೆ ನಾನಾತರಹೆಯ ಆಹಾರಗಳನ್ನು ಸಿದ್ಧಪಡಿಸುತ್ತಿದ್ದರು. ಅವನಿಂದ ಆರಾಧಿಸಲ್ಪಟ್ಟ ಬ್ರಹ್ಮವಿಷ್ಣುಮಹೇಶ್ವರರು ಮಿಕ್ಕ ಅನುಕೂಲಗಳೆಲ್ಲವನ್ನೂ ಅನುಗ್ರಹಿಸುತ್ತಿದ್ದರು.

೩೫. ಆಹಾರಕ್ಕುಪಯೋಗಿಸುವ ಪೈರುಗಳು ಆ ಆಶ್ರಮದಲ್ಲಿ ಬೇಕಾದ ಕೂಡಲೇ ಹುಟ್ಟುತ್ತಿದ್ದುವು. ಆಗಲೇ ಕೊಯ್ಯುತ್ತಿದ್ದರು. ಪುನಃ ಫಲಭರಿತವಾಗಿ ಹುಟ್ಟುತ್ತಿದ್ದುವು, ಪುನಃ ಕೊಯ್ಯುತ್ತಿದ್ದರು. ಆ ಗೌತಮನ ತಪೋಬಲವು ಹೀಗಿತ್ತು.

೩೬. ಗೌತಮನ ಆಜ್ಞೆಯಂತೆ ಅಲ್ಲಿ ಎಲ್ಲ ಸಮೃದ್ಧಿಗಳೂ ಒದಗಿದ್ದುವು. ಪ್ರತಿದಿನವೂ ಗೌತಮನು ಅತಿಥಿಗಳಾದ ಮುನಿಗಳನ್ನು ಕುರಿತು ಪುತ್ರನಂತೆಯೂ ಶಿಷ್ಯನಂತೆಯೂ, ಸೇವಕನಂತೆಯೂ ಅವರವರ ಯೋಗ್ಯತೆಯನ್ನನುಸರಿಸಿ ನಿಮಗೇನುಬೇಕು ಎಂದು ಕೇಳಿ ಒದಗಿಸುತ್ತಿದ್ದನು.

೩೭. ಹೀಗೆ ಅಂತಹ ಬರಗಾಲದಲ್ಲಿ ಅನೇಕ ವರ್ಷಗಳಕಾಲ ಆ ಮುನಿಗಳೆಲ್ಲರನ್ನೂ ಕಾಪಾಡಿದನು. ಇದರಿಂದ ಆ ಗೌತಮನ ಖ್ಯಾತಿಯು ಮತ್ತಷ್ಟು ಹರಡಿತು.

ಏವಂ ವಸತ್ಸು ಮುನಿಷು ತ್ರೈಲೋಕ್ಯೇ ಖ್ಯಾತಿರಾಶ್ರಯಾತ್ ।
ತತೋ ವಿನಾಯಕಃ ಪ್ರಾಹ ಮಾತರಂ ಭ್ರಾತರಂ ಜಯಾಂ ॥ ೩೮ ॥

॥ ವಿನಾಯಕ ಉವಾಚ ॥

ದೇವಾನಾಂ ಸದನೇ ಮಾತರ್ಗೀಯತೇ ಗೌತಮೋ ದ್ವಿಜಃ ।
ಯನ್ನ ಸಾಧ್ಯಂ ಸುರಗಣೈರ್ಗೌತಮಃ ಕೃತವಾನಿತಿ ॥ ೩೯ ॥

ಏವಂ ಶ್ರುತಂ ಮಯಾ ದೇವಿ ಬ್ರಾಹ್ಮಣಸ್ಯ ತಪೋಬಲಂ ।
ಸ ವಿಪ್ರಶ್ಚಾಲಯೇದೇನಾಂ ಮಾತರ್ಗಂಗಾಂ ಜಟಾಗತಾಂ ॥ ೪೦ ॥

ತಪಸಾ ವಾನ್ಯತೋ ವಾಪಿ ಪೂಜಯಿತ್ವಾ ತ್ರಿಲೋಚನಂ ।
ಸ ಏವ ಚ್ಯಾವಯೇದೇನಾಂ ಜಟಾಸ್ಥಾಂ ಮೇ ಪಿತೃಪ್ರಿಯಾಂ ॥ ೪೧ ॥

ತತ್ರ ನೀತಿರ್ವಿಧಾತವ್ಯಾ ತಾಂ ವಿಪ್ರೋ ಯಾಚಯೇದ್ಯಥಾ ।
ತತ್ಪ್ರಭಾವಾತ್ಸರಿಚ್ಛ್ರೇಷ್ಠಾ ಶಿರಸೋಽವತರತ್ಯಪಿ ॥ ೪೨ ॥

---

೩೮. ಗೌತಮನ ಇಂತಹ ಮಹಿಮೆಯನ್ನು ನೋಡಿ ಇತ್ತಲಾಗಿ ವಿನಾಯಕನು ತನ್ನ ತಾಯಿಯನ್ನೂ, ಸಹೋದರನನ್ನೂ, ಜಯೆಯನ್ನೂ ಕುರಿತು,

೩೯. ಓ ಮಾತೆ, ಗೌತಮನೆಂಬ ಬ್ರಾಹ್ಮಣನನ್ನು ದೇವಲೋಕದಲ್ಲೂ ಗಾನಮಾಡುತ್ತಿರುವರು, ಅವನು ದೇವತೆಗಳಿಗೂ ಅಸಾಧ್ಯವಾದ ಕಾರ್ಯವನ್ನೆಸಗುವನಂತೆ.

೪೦. ಹೀಗೆ ನಾನೂ ಆ ಬ್ರಾಹ್ಮಣನ ತಪೋಬಲವನ್ನು ಕೇಳಿರುವೆನು, ಆ ತಪಸ್ವಿಯು ಒಂದುವೇಳೆ ತಂದೆಯ ಜಟೆಯಲ್ಲಿರುವ ಗಂಗೆಯನ್ನು ಕರೆದುಕೊಂಡು ಹೋಗಬಹುದು.

೪೧. ಆ ಗೌತಮನು ತಪಸ್ಸಿನಿಂದಾಗಲೀ ಇನ್ನಾವುದರಿಂದಲಾಗಲೀ ಶಿವನನ್ನಾರಾಧಿಸಿ, ಶಿವನ ಜಟೆಯಿಂದ ಶಿವಪ್ರಿಯಳಾದ ಗಂಗೆಯನ್ನು ಬಿಡಿಸಬಹುದು.

೪೨. ಆ ಬ್ರಾಹ್ಮಣನು ಶಿವನಲ್ಲಿ ಗಂಗೆಯನ್ನು ಪ್ರಾರ್ಥಿಸುವಂತೆ ಏನಾದರೊಂದುಪಾಯವನ್ನು ಮಾಡಬೇಕು. ಅವನ ಮಹಿಮೆಯಿಂದ ಗಂಗೆಯು ಖಂಡಿತವಾಗಿ ಶಿವಶಿರಸ್ಸಿನಿಂದ ಭೂಮಿಗಿಳಿಯುವಳು ಎಂದನು.

॥ ಬ್ರಹ್ಮೋವಾಚ ॥

ಇತ್ಯುಕ್ತ್ವಾ ಮಾತರಂ ಭ್ರಾತ್ರಾ ಜಯಯಾ ಸಹ ವಿಘ್ನರಾಟ್ ।
ಜಗಾಮ ಗೌತಮೋ ಯತ್ರ ಬ್ರಹ್ಮಸೂತ್ರಧರಃ ಕೃಶಃ ॥ ೪೩ ॥

ವಸನ್ಕತಿಪಯಾಹಃಸು ಗೌತಮಾಶ್ರಮಮಂಡಲೇ ।
ಉವಾಚ ಬ್ರಾಹ್ಮಣಾನ್ಸರ್ವಾಂಸ್ತತ್ರ ತತ್ರ ಚ ವಿಘ್ನರಾಟ್ ॥ ೪೪ ॥

ಗಚ್ಛಾಮಃ ಸ್ವಮಧಿಷ್ಠಾನಮಾಶ್ರಮಾಣಿ ಶುಚೀನಿ ಚ ।
ಪುಷ್ಟಾಃ ಸ್ಮ ಗೌತಮಾನ್ನೇನ ಪೃಚ್ಛಾಮೋ ಗೌತಮಂ ಮುನಿಂ ॥ ೪೫ ॥

ಇತಿ ಸಂಮಂತ್ರ್ಯ ಪೃಚ್ಛಂತಿ ಮುನಯೋ ಮುನಿಸತ್ತಮಾಃ ।
ಸ ತಾನ್ನಿವಾರಯಾಮಾಸ ಸ್ನೇಹಬುದ್ಧ್ಯಾ ಮುನೀನ್ಪೃಥಕ್ ॥ ೪೬ ॥

॥ ಗೌತಮ ಉವಾಚ ॥

ಕೃತಾಂಜಲಿಃ ಸವಿನಯಮಾಸಧ್ವಮಿಹ ಚೈವ ಹಿ ।
ಯುಷ್ಮಚ್ಚರಣಶುಶ್ರೂಷಾಂ ಕರೋಮಿ ಮುನಿಪುಂಗವಾಃ ॥ ೪೭ ॥

---

೪೩. ಹೀಗೆ ಹೇಳಿ ವಿನಾಯಕನು ಸ್ಕಂದ ಮತ್ತು ಜಯಾದೇವಿಯೊಡನೆ ಬ್ರಾಹ್ಮಣವೇಷವನ್ನು ಧರಿಸಿ, ಮಹಾತಪಸ್ವಿಯಾದ ಗೌತಮನ ಆಶ್ರಮಕ್ಕೆ ಬಂದನು.

೪೪. ಕೆಲವುದಿನಗಳವರೆಗೆ ಗೌತಮನ ಆಶ್ರಮದಲ್ಲಿ ವಾಸಮಾಡುತ್ತಾ ಅಲ್ಲಿ ನೆಲಸಿದ್ದ ಮಿಕ್ಕ ಬ್ರಾಹ್ಮಣರನ್ನು ಕುರಿತು.

೪೫. ಎಲೈ ಮುನಿಗಳೇ, ಇನ್ನು ನಮ್ಮ ನಮ್ಮ ಪುಣ್ಯಾಶ್ರಮಗಳಿಗೆ ತೆರಳೋಣ, ಗೌತಮನ ಅನ್ನದಿಂದ ಇದುವರೆಗೆ ಬದುಕಿರುವೆವು. ಆದಕಾರಣ ಅವನ ಅನುಮತಿಯನ್ನು ಕೇಳಿ ಹೊರಡೋಣ.

೪೬. ಹೀಗೆ ಆಲೋಚಿಸಿ ಮುನಿಗಳೆಲ್ಲರೂ ತಮ್ಮಾಶ್ರಮಗಳಿಗೆ ಹೊರಡಲು ಗೌತಮನ ಅನುಮತಿಯನ್ನು ಕೇಳಿದರು. ಆದರಾ ಗೌತಮಮುನಿಯು ಸ್ನೇಹದಿಂದ ಅವರೆಲ್ಲರನ್ನೂ ತಡೆದು ವಿನಯಪೂರ್ವಕವಾಗಿ ಇಂತೆಂದನು.

೪೭. ಓ ಮುನಿಗಳೇ, ಈ ನನ್ನಾಶ್ರಮದಲ್ಲಿಯೇ ವಾಸವಾಗಿರಿ. ನಿಮ್ಮ ಚರಣಸೇವೆಯನ್ನು ಮಾಡುವೆನು.

ಶುಶ್ರೂಷೌ ಪುತ್ರವನ್ನಿತ್ಯಂ ಮಯಿ ತಿಷ್ಠತಿ ನೋಚಿತಂ ।
ಭವತಾಂ ಭೂಮಿದೇವಾನಾಮಾಶ್ರಮಾಂತರಸೇವನಂ ॥ ೪೮ ॥

ಇದಮೇವಾಶ್ರಮಂ ಪುಣ್ಯಂ ಸರ್ವೇಷಾಮಿತಿ ಮೇ ಮತಿಃ ।
ಅಲಮನ್ಯೇನ ಮುನಯ ಆಶ್ರಮೇಣ ಗತೇನ ವಾ ॥ ೪೯ ॥

॥ ಬ್ರಹ್ಮೋವಾಚ ॥

ಇತಿ ಶ್ರುತ್ವಾ ಮುನೇರ್ವಾಕ್ಯಂ ವಿಘ್ನಕೃತ್ಯಮನುಸ್ಮರನ್ ।
ಉವಾಚ ಪ್ರಾಂಜಲಿರ್ಭೂತ್ವಾ ಬ್ರಾಹ್ಮಣಾನ್ಸ ಗಣಾಧಿಪಃ ॥ ೫೦ ॥

॥ ಗಣಾಧಿಪ ಉವಾಚ ॥

ಅನ್ನಕ್ರೀತಾ ವಯಂ ಕಿಂ ನೋ ನಿವಾರಯತ ಗೌತಮಃ ।
ಸಾಮ್ನಾ ನೈವ ವಯಂ ಶಕ್ತಾ ಗಂತುಂ ಸ್ವಂ ಸ್ವಂ ನಿವೇಶನಂ ॥ ೫೧ ॥

ನಾಯಮರ್ಹತಿ ದಂಡಂ ವಾ ಉಪಕಾರೀ ದ್ವಿಜೋತ್ತಮಃ ।
ತಸ್ಮಾದ್ಬುದ್ಧ್ಯಾ ವ್ಯವಸ್ಯಾಮಿ ತತ್ಸರ್ವೈರನುಮನ್ಯತಾಂ ॥ ೫೨ ॥

---

೪೮. ಪುತ್ರನಂತೆ ನಾನು ನಿಮ್ಮನ್ನು ಸೇವಿಸುತ್ತಿರಲು ಭೂಸುರರಾದ ನೀವು ಬೇರೆ ಆಶ್ರಮಗಳಿಗ ಹೋಗುವುದೇಕೆ?

೪೯. ಆಶ್ರಮಗಳಲ್ಲೆಲ್ಲಾ ಈ ಆಶ್ರಮವು ಪವಿತ್ರವಾದುದೆಂದು ನಾನು ತಿಳಿದಿರುವೆನು. ಆದುದರಿಂದ ಬೇರೆ ಆಶ್ರಮಗಳಿಗೆ ಹೋಗಬೇಡಿ ಎಂದನು.

೫೦. ಹೀಗೆ ಗೌತಮನು ಹೇಳಿದ ಮಾತನ್ನು ಕೇಳಿ, ಗಣೇಶನು ಆ ಮುನಿಗೆ ವಿಘ್ನವನ್ನು ತಂದೊಡ್ಡುವುದಕ್ಕಾಗಿ ಬ್ರಾಹ್ಮಣರನ್ನು ಕುರಿತು,

೫೧. ಎಲೈ ಮುನಿಗಳೇ, ಈ ಗೌತಮನ ಅನ್ನಕ್ಕೆ ನಾವು ದಾಸರಾಗಿರುವೆವೇ ? ನಮಗೆ ಇವನ ಹಂಗೇನು ? ಸಮಾಧಾನದಿಂದ ನಾವು ನಮ್ಮಾಶ್ರಮಗಳಿಗೆ ತೆರಳಬೇಕೆಂದಿದ್ದೆವು. ಈಗ ಹಾಗಾಗುವುದಿಲ್ಲವೆಂದು ತೋರುವುದು.

೫೨. ಆದರೆ ಉಪಕಾರಿಯಾದ ಈ ಮುನಿಯನ್ನು ಶಿಕ್ಷಿಸುವುದು ನ್ಯಾಯವಲ್ಲ. ಆದುದರಿಂದ ಈಗ ನಾವು ಮಾಡಬೇಕಾದುದನ್ನು ಯೋಚಿಸಿ ಮಾಡುವೆನು, ಅದನ್ನೆಲ್ಲವನ್ನೂ ಒಪ್ಪಿಕೊಳ್ಳಿ ಎನಲು,

॥ ಬ್ರಹ್ಮೋವಾಚ ॥

ತತಃ ಸರ್ವೇ ದ್ವಿಜಶ್ರೇಷ್ಠಾಃ ಕ್ರಿಯತಾಮಿತ್ಯನುಬ್ರುವನ್ ।
ಏತಸ್ಯ ತೂಪಕಾರಾಯ ಲೋಕಾನಾಂ ಹಿತಕಾಮ್ಯಯಾ ॥ ೫೩ ॥

ಬ್ರಾಹ್ಮಣಾನಾಂ ಚ ಸರ್ವೇಷಾಂ ಶ್ರೇಯೋ ಯತ್ಸ್ಯಾತ್ತಥಾ ಕುರು ।
ಬ್ರಾಹ್ಮಣಾನಾಂ ವಚಃ ಶ್ರುತ್ವಾ ಮೇನೇ ವಾಕ್ಯಂ ಗಣಾಧಿಪಃ ॥ ೫೪ ॥

॥ ವಿನಾಯಕ ಉವಾಚ ॥

ಕ್ರಿಯತೇ ಗುಣರೂಪಂ ಯದ್ಗೌತಮಸ್ಯ ವಿಶೇಷತಃ ॥ ೫೫ ॥

॥ ಬ್ರಹ್ಮೋವಾಚ ॥

ಅನುಮಾನ್ಯ ದ್ವಿಜಾನ್ಸರ್ವಾನ್ಪುನಃ ಪುನರುದಾರಧೀಃ ।
ಸ್ವಯಂ ಚ ಬ್ರಾಹ್ಮಣೋ ಭೂತ್ವಾ ಪ್ರಣಮ್ಯ ಬ್ರಾಹ್ಮಣಾನ್ಪುನಃ ।
ಮಾತುರ್ಮತೇ ಸ್ಥಿತೋ ವಿದ್ವಾನ್ ಜಯಾಂ ಪ್ರಾಹ ಗಣೇಶ್ವರಃ ॥ ೫೬ ॥

---

೫೩. ಆಗ ಮುನಿಗಳೆಲ್ಲರೂ—ಆಗಲಿ, ಹಾಗೆಯೇ ಮಾಡು, ಈ ಮುನಿಗೂ ಒಳ್ಳೆಯದಾಗಬೇಕು, ಲೋಕಕ್ಕೂ ಕ್ಷೇಮವಾಗಬೇಕು, ಬ್ರಾಹ್ಮಣರಿಗೂ ಹಿತವಾಗಬೇಕು, ಅದಕ್ಕನುಕೂಲವಾಗಿ ಕಾರ್ಯವನ್ನು ಮಾಡು ಎಂದು ಹೇಳಿದರು.

೫೪-೫೫. ಆಗ ಗಣೇಶನು ಆಗಲಿ, ಈ ಗೌತಮುನಿಗೆ ಅನುಕೂಲವಾಗುವಂತಹ ಕಾರ್ಯವನ್ನೇ ಮಾಡುವೆನು ಎಂದು ಹೇಳಿದನು.

೫೬. ಹೀಗೆ ಬ್ರಾಹ್ಮಣರ ಮಾತನ್ನಂಗೀಕರಿಸಿ ಬ್ರಾಹ್ಮಣರೂಪಿಯಾದಾ ಗಣೇಶನು ಆ ಬ್ರಾಹ್ಮಣರನ್ನು ಪುನಃಪುನಃ ನಮಸ್ಕರಿಸಿ ಅವರಿಂದ ತನ್ನ ಕಾರ್ಯಕ್ಕೆ ಒಪ್ಪಿಗೆಯನ್ನು ಪಡೆದು ತಾಯಿಯಾದ ಉಮಾದೇವಿಗೆ ಹಿತವಾಗುವುದಕ್ಕಾಗಿ ಏಕಾಂತದಲ್ಲಿ ಜಯೆಯನ್ನು ಕುರಿತು,

॥ ವಿನಾಯಕ ಉವಾಚ ॥

ಯಥಾ ನಾನ್ಯೋ ವಿಜಾನೀತೇ ತಥಾ ಕುರು ಶುಭಾನನೇ ।
ಗೋರೂಪಧಾರಿಣೀ ಗಚ್ಛ ಗೌತಮೋ ಯತ್ರ ತಿಷ್ಠತಿ ॥ ೫೭ ॥

ಶಾಲೀನ್ವಾದ ವಿನಾಶ್ಯಾಥ ವಿಕಾರಂ ಕುರು ಭಾಮಿನಿ ।
ಕೃತೇ ಪ್ರಹಾರೇ ಹುಂಕಾರೇ ಪ್ರೇಕ್ಷಿತೇ ಚಾಪಿ ಕಿಂಚನ ।
ಪತ ದೀನಂ ಸ್ವನಂ ಕೃತ್ವಾ ನ ಮ್ರಿಯಸ್ವ ನ ಜೀವ ಚ ॥ ೫೮ ॥

॥ ಬ್ರಹ್ಮೋವಾಚ ॥

ತಥಾ ಚಕಾರ ವಿಜಯಾ ವಿಘ್ನೇಶ್ವರಮತೇ ಸ್ಥಿತಾ ।
ಯತ್ರಾಸೀದ್ಗೌತಮೋ ವಿಪ್ರೋ ಜಯಾ ಗೋರೂಪಧಾರಿಣೀ ॥ ೫೯ ॥

ಜಗಾಮ ಶಾಲೀನ್ವಾದಂತೀ ತಾಂ ದದರ್ಶ ಸ ಗೌತಮಃ ।
ಗಾಂ ದೃಷ್ಟ್ವಾ ವಿಕೃತಾಂ ವಿಪ್ರಸ್ತಾಂ ತೃಣೇನ ನ್ಯವಾರಯತ್ ॥ ೬೦ ॥

---

೫೭. ಎಲೌ ಜಯೆ, ಯಾರಿಗೂ ತಿಳಿಯದಂತೆ ಹಸುವಿನ ರೂಪವನ್ನು ಧರಿಸಿ ಗೌತಮನ ಬಳಿಗೆ ಹೋಗಿ,

೫೮. ಅವನಾಶ್ರಮದಲ್ಲಿರುವ ನವಣೆಗಳನ್ನು ತಿನ್ನುವುದಲ್ಲದೆ ಮಿಕ್ಕ ಸಸ್ಯಗಳನ್ನೆಲ್ಲಾ ಹಾಳುಮಾಡಿ ಕೆಡಿಸು. ಆಗ ಗೌತಮನು ಹೊಡೆದರಾಗಲೀ ಇಲ್ಲವೇ ಹೆದರಿಸಿದರಾಗಲೀ ಅಥವಾ ಕ್ರೂರದೃಷ್ಟಿಯಿಂದ ನೋಡಿದರಾಗಲೀ ಆಕೂಡಲೇ ನೀನು ದೀನವಾಗಿ ಕೂಗಿ ಬಿದ್ದುಬಿಡು. ಆದರೆ ಸಾಯಬೇಡ, ಬದುಕಿದಂತೆಯೂ ಇರಬೇಡ, ಎಂದನು.

೫೯. ಹಾಗೆಯೇ ಆಗಲೆಂದು ವಿಜಯೆಯು ವಿನಾಯಕನು ಹೇಳಿದಂತೆ ಹಸುವಿನ ರೂಪವನ್ನು ಧರಿಸಿ ಗೌತಮನ ಬಳಿಗೆ ತೆರಳಿ ಅಲ್ಲಿದ್ದ ನವಣೆಧಾನ್ಯಗಳನ್ನು ತಿನ್ನುತ್ತಿರಲು ಗೌತಮನು ಅದನ್ನು ನೋಡಿ,

೬೦-೬೧. ಹಸುವು ಬಂದು ಧಾನ್ಯಗಳನ್ನು ತಿಂದು ಹಾಳುಮಾಡುತ್ತಿರುವುದಲ್ಲಾ ಎಂದು ಒಂದು ಸಣ್ಣ ಹುಲ್ಲುಕಡ್ಡಿಯಿಂದ ಆ ಹಸುವನ್ನು ಅಟ್ಟಿದನು.

ನಿವಾರ್ಯಮಾಣಾ ಸಾ ತೇನ ಸ್ವನಂ ಕೃತ್ವಾ ಪಪಾತ ಗೌಃ ।
ತಸ್ಯಾಂ ತು ಪತಿತಾಯಾಂ ಚ ಹಾಹಾಕಾರೋ ಮಹಾನಭೂತ್ ॥ ೭೧ ॥

ಸ್ವನಂ ಶ್ರುತ್ವಾ ಚ ದೃಷ್ಟ್ವಾ ಚ ಗೌತಮಸ್ಯ ವಿಚೇಷ್ಟಿತಂ ।
ವ್ಯಥಿತಾ ಬ್ರಾಹ್ಮಣಾಃ ಪ್ರಾಹುರ್ವಿಘ್ನರಾಜಪುರಸ್ಕೃತಾಃ ॥ ೭೨ ॥

॥ ಬ್ರಾಹ್ಮಣಾ ಊಚುಃ ॥

ಇತೋ ಗಚ್ಛಾಮಹೇ ಸರ್ವೇ ನ ಸ್ಥಾತವ್ಯಂ ತವಾಶ್ರಮೇ ।
ಪುತ್ರವತ್ಪೋಷಿತಾಃ ಸರ್ವೇ ತ್ವಯಾಽಸಿ ಮುನಿಪುಂಗವ ॥ ೭೩ ॥

॥ ಬ್ರಹ್ಮೋವಾಚ ॥

ಇತಿ ಶ್ರುತ್ವಾ ಮುನಿರ್ವಾಕ್ಯಂ ವಿಪ್ರಾಣಾಂ ಗಚ್ಛತಾಂ ತದಾ ।
ವಜ್ರಾಹತ ಇವಾಸೀತ್ಸ ವಿಪ್ರಾಣಾಂ ಪುರತೋಽಪತತ್ ॥ ೭೪ ॥

ಹಾಗೆ ತಡೆಯಲು ಆ ಹಸುವು ಗಟ್ಟಿಯಾಗಿ ದೀನಸ್ವರದಿಂದ ಕೂಗಿ ಭೂಮಿಯಲ್ಲಿ ಬಿದ್ದು ಬಿಟ್ಟಿತು. ಅಗ ಅಲ್ಲಿ ತುಂಬಾ ಹಾಹಾಕಾರವೆದ್ದಿತು.

೭೨. ಆ ಶಬ್ದವನ್ನು ಕೇಳಿ ಮುನಿಗಳೆಲ್ಲರೂ ಅಲ್ಲಿಗೆ ಓಡಿ ಬಂದರು ಮತ್ತು ಗೌತಮನು ಗೋಹತ್ಯವನ್ನು ಮಾಡಿದನೆಂದು ವ್ಯಥೆಗೊಂಡು ಆಗ್ರಹದಿಂದ,

೭೩. ಎಲೈ ಗೌತಮ, ಇದೇನು ಅನುಚಿತಕಾರ್ಯವನ್ನು ಮಾಡಿರುವೆ? ಇನ್ನು ನಿನ್ನಾಶ್ರಮದಲ್ಲಿರಲಾರೆವು, ನಾವು ಹೊರಡುವೆವು. ಕಷ್ಟಕಾಲದಲ್ಲಿ ಮಕ್ಕಳಂತೆ ನಮ್ಮನ್ನು ಕಾಪಾಡಿರುವೆ. ಇದಕ್ಕಾಗಿ ನಾವು ಕೃತಜ್ಞರಾಗಿರುವೆವು. ಒಳ್ಳೆಯದು, ಹೋಗಿಬರುವೆವು. ಪ್ರೀತಿಯಿರಲಿ ಎಂದು ಹೇಳಿ ಹೊರಡಲುದ್ಯುಕ್ತರಾದರು.

೭೪. ಮುನಿಗಳು ಹೇಳಿದ ಮಾತನ್ನು ಕೇಳಿ ಗೌತಮನು ವಜ್ರಾಯುಧದ ಏಟನ್ನು ತಿಂದವನಂತೆ ಆ ಬ್ರಾಹ್ಮಣರೆದುರಿಗೆ ದುಃಖದಿಂದ ಬಿದ್ದನು.

ತಮೂಚುರ್ಬ್ರಾಹ್ಮಣಾಃ ಸರ್ವೇ ಪಶ್ಯೇಮಾಂ ಪತಿತಾಂ ಭುವಿ ।
ರುದ್ರಾಣಾಂ ಮಾತರಂ ದೇವೀಂ ಜಗತಾಂ ಪಾವನೀಂ ಪ್ರಿಯಾಂ ॥ ೬೫ ॥

ತೀರ್ಥದೇವಸ್ವರೂಪಿಣ್ಯಾಮಸ್ಯಾಂ ಗವಿ ವಿಧೇರ್ಬಲಾತ್ ।
ಪತಿತಾಯಾಂ ಮುನಿಶ್ರೇಷ್ಠ ಗಂತವ್ಯಮವಶಿಷ್ಯತೇ ॥ ೬೬ ॥

ಚೀರ್ಣಂ ವ್ರತಂ ಕ್ಷಯಂ ಯಾತಿ ಯಥಾ ವಾಸಸ್ತ್ವದಾಶ್ರಮೇ ।
ವಯಂ ನಾನ್ಯಧನಾ ಬ್ರಹ್ಮನ್ಕೇವಲಂ ತು ತಪೋಧನಾಃ ॥ ೬೭ ॥

॥ ಬ್ರಹ್ಮೋವಾಚ ॥

ವಿಪ್ರಾಣಾಂ ಪುರತಃ ಸ್ಥಿತ್ವಾ ವಿನೀತಃ ಪ್ರಾಹ ಗೌತಮಃ ॥ ೬೮ ॥

॥ ಗೌತಮ ಉವಾಚ ॥

ಭವಂತ ಏವ ಶರಣಂ ಪೂತಂ ಮಾಂ ಕರ್ತುಮರ್ಹಥ ॥ ೬೯ ॥

---

೬೫. ಹಾಗೆ ಅಡ್ಡಬಿದ್ದ ಗೌತಮನನ್ನು ಕುರಿತು ಬ್ರಾಹ್ಮಣರು ಓ ಗೌತಮ, ಇಲ್ಲಿ ನೋಡು ನಿನ್ನ ದುರಾಚಾರದಿಂದ ರುದ್ರರಿಗೆ ಮಾತೆಯೂ, ಜಗತ್ತಿನಲ್ಲಿ ಮಹಾಪವಿತ್ರವೂ, ಪ್ರಾಣಿಗಳಿಗೆ ಸೌಖ್ಯವನ್ನುಂಟುಮಾಡುವಂತಹುದೂ ಆದ ಈ ಹಸುವು ನೆಲದಲ್ಲಿ ಬಿದ್ದು ಪ್ರಾಣವನ್ನು ಬಿಡುತ್ತಿರುವುದು.

೬೬. ದೇವಸ್ವರೂಪವೂ ತೀರ್ಥಸ್ವರೂಪವೂ ಆದ ಈ ಹಸುವು ಅದೃಷ್ಟವಶಾತ್ ನಿನ್ನಿಂದ ಕೊಲ್ಲಲ್ಪಟ್ಟಿರುವುದರಿಂದ ಈ ಆಶ್ರಮವಲ್ಲಿ ನಾವಿರುವುದು ಸರಿಯಲ್ಲ, ಹೊರಡುವೆವು.

೬೭. ಈಗ ನಿನ್ನಾಶ್ರಮದಲ್ಲಿ ವಾಸಮಾಡಿದರೆ ನಮ್ಮ ತಪಸ್ಸೆಲ್ಲವೂ ನಾಶವಾಗುವುದು. ನಮಗೆ ಬೇರೆ ಧನವಿಲ್ಲ. ತಪಸ್ಸೇ ನಮಗೆ ಧನವು ಎಂದರು.

೬೮-೬೯. ಬಳಿಕ ಗೌತಮನು ಆ ಬ್ರಾಹ್ಮಣರೆದುರಿಗೆ ನಿಂತುಕೊಂಡು ವಿನಯದಿಂದ ಓ ಬ್ರಾಹ್ಮಣೋತ್ತಮರೇ, ನೀವೇ ನನಗೆ ಶರಣು, ಈ ಪಾಪದಿಂದ ನನ್ನನ್ನು ಪರಿಶುದ್ಧನನ್ನಾಗಿ ಮಾಡಿ ಕಾಪಾಡಬೇಕೆಂದು ಪ್ರಾರ್ಥಿಸಲು,

॥ ಬ್ರಹ್ಮೋವಾಚ ॥

ತತಃ ಪ್ರೋವಾಚ ಭಗವಾನ್ವಿಘ್ನರಾಡ್ಬ್ರಾಹ್ಮಣೈರ್ವೃತಃ ॥ ೭೦ ॥

॥ ವಿಘ್ನರಾಜ ಉವಾಚ ॥

ನೈವೇಯಂ ಮ್ರಿಯತೇ ತತ್ರ ನೈವ ಜೀವತಿ ತತ್ರ ಕಿಂ ।
ವದಾಮೋಽಸ್ಮಿನ್ನಸಂದಿಗ್ಧೇ ನಿಷ್ಕೃತಿಂ ಗತಿಮೇವ ವಾ ॥ ೭೧ ॥

॥ ಗೌತಮ ಉವಾಚ ॥

ಕಥಮುತ್ಥಾಸ್ಯತೀಯಂ ಗೌರಥ ಚಾಸ್ಮಿಂಶ್ಚ ನಿಷ್ಕೃತಿಂ ।
ವಕ್ತುಮರ್ಹಥ ತತ್ಸರ್ವಂ ಕರಿಷ್ಯೇಽಹಮಸಂಶಯಂ ॥ ೭೨ ॥

॥ ಬ್ರಾಹ್ಮಣಾ ಊಚುಃ ॥

ಸರ್ವೇಷಾಂ ಚ ಮತೇನಾಯಂ ವದಿಷ್ಯತಿ ಚ ಬುದ್ಧಿಮಾನ್ ।
ಏತದ್ವಾಕ್ಯಮಥಾಸ್ಮಾಕಂ ಪ್ರಮಾಣಂ ತವ ಗೌತಮ ॥ ೭೩ ॥

೭೦-೭೧. ಆಗ ಬ್ರಾಹ್ಮಣರೊಡನಿದ್ದ ಭಗವಂತನಾದ ವಿನಾಯಕನು ಗೌತಮನನ್ನು ಕುರಿತು ಎಲೈ ಗೌತಮ, ಈ ಹಸುವು ಸತ್ತೂ ಇಲ್ಲ ಬದುಕಿದಂತೆಯೂ ಇಲ್ಲ. ಇಂತಹ ಸಂದಿಗ್ಧ ವಿಷಯದಲ್ಲಿ ನಾವು ಪ್ರಾಯಶ್ಚಿತ್ತವನ್ನಾಗಲೀ ಉಪಾಯವನ್ನಾಗಲೀ ಹೇಳುವುದು ಹೇಗೆ? ಎಂದನು.

೭೨. ಗೌತಮನು ಹೇಳಿದನು—ಎಲೈ ಮುನಿಗಳೇ, ಈ ಹಸುವು ಬದುಕಿ ಏಳುವುದು ಹೇಗೆ? ಇದಕ್ಕಾಗಿ ನಾನು ಯಾವ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು? ದಯವಿಟ್ಟು ಹೇಳಿರಿ. ಖಂಡಿತವಾಗಿ ಅದನ್ನು ಮಾಡುವೆನು ಎಂದು ಮತ್ತೆ ಪ್ರಾರ್ಥಿಸಲು ಬ್ರಾಹ್ಮಣರಿಂತೆಂದರು.

೭೩. ಎಲೈ ಗೌತಮ, ಬುದ್ಧಿವಂತನಾದೀ ಬ್ರಾಹ್ಮಣನು ನಮ್ಮೆಲ್ಲರಿಗೂ ಸಮ್ಮತವಾದುದನ್ನು ಹೇಳುವನು, ಇವನಮಾತೇ ನಮಗೂ ನಿನಗೂ ಪ್ರಮಾಣವು. ಆದುದರಿಂದ ಈ ಬ್ರಾಹ್ಮಣನು (ವಿನಾಯಕನು) ಹೇಳಿದಂತೆ ಮಾಡು ಎಂದರು.

॥ ಬ್ರಹ್ಮೋವಾಚ ॥

ಬ್ರಾಹ್ಮಣೈಃ ಪ್ರೇರ್ಯಮಾಣೋಽಸೌ ಗೌತಮೇನ ಬಲೀಯಸಾ ।
ವಿಘ್ನಕೃದ್ಬ್ರಹ್ಮವಪುಷಾ ಪ್ರಾಹ ಸರ್ವಾನಿದಂ ವಚಃ ॥ ೭೪ ॥

॥ ವಿಘ್ನರಾಜ ಉವಾಚ ॥

ಸರ್ವೇಷಾಂ ಚ ಮತೇನಾಹಂ ವದಿಷ್ಯಾಮಿ ಯಥಾರ್ಥವತ್ ।
ಅನುಮನ್ಯಂತು ಮುನಯೋ ಮದ್ವಾಕ್ಯಂ ಗೌತಮೋಽಪಿ ಚ ॥ ೭೫ ॥

ಮಹೇಶ್ವರಜಟಾಜೂಟೇ ಬ್ರಹ್ಮಣೋಽವ್ಯಕ್ತಜನ್ಮನಃ ।
ಕಮಂಡಲುಸ್ಥಿತಂ ವಾರಿ ತಿಷ್ಠತೀತಿ ಹಿ ಶುಶ್ರುಮ ॥ ೭೬ ॥

ತದಾನಯಸ್ವ ತರಸಾ ತಪಸಾ ನಿಯಮೇನ ಚ ।
ತೇನಾಭಿಷಿಂಚ ಗಾಮೇತಾಂ ಭಗವನ್ಭುವಮಾಶ್ರಿತಾಂ ।
ತತೋ ವತ್ಸ್ಯಾಮಹೇ ಸರ್ವೇ ಪೂರ್ವವತ್ತವ ವೇಶ್ಮನಿ ॥ ೭೭ ॥

---

೭೪. ಹೀಗೆ ಬ್ರಾಹ್ಮಣರೂ ತಪಸ್ವಿಯಾದ ಗೌತಮನೂ ತನ್ನನ್ನು ಕೇಳಲು ವಿಪ್ರರೂಪಿಯಾದ ವಿನಾಯಕನು ಎಲ್ಲರನ್ನೂ ಕುರಿತು,

೭೫. ಓ ಮಹನೀಯರೇ, ಎಲ್ಲರ ಅಭಿಪ್ರಾಯವನ್ನೂ ಅನುಸರಿಸಿ ನಾನು ಹೇಳುವೆನು, ನನ್ನ ಮಾತನ್ನು ಮುನಿಗಳಾದ ನೀವೂ ಗೌತಮನೂ ಒಪ್ಪಿಕೊಳ್ಳಬೇಕು.

೭೬. ಆದಿಪುರುಷನಾದ ಬ್ರಹ್ಮನ ಕಮಂಡಲುವಿನಲ್ಲಿದ್ದ ಗಂಗೆಯು ಮಹೇಶ್ವರನ ಜಟೆಯಲ್ಲಿ ಇರುವುದೆಂದು ಕೇಳಿರುವೆವು,

೭೭. ಪೂಜ್ಯನಾದ ಎಲೈ ಗೌತಮ, ಆ ಗಂಗೆಯನ್ನು ತಪಸ್ಸುಮಾಡಿ ಶಿವನನ್ನಾರಾಧಿಸಿ ಜಾಗ್ರತೆಯಾಗಿ ಇಲ್ಲಿಗೆ ಕರೆದುಕೊಂಡು ಬಾ, ಆ ಗಂಗೆಯಿಂದ ಭೂಮಿಯಲ್ಲಿ ಬಿದ್ದಿರುವ ಈ ಹಸುವನ್ನು ಪ್ರೋಕ್ಷಿಸು. ಅದರಿಂದ ಈ ಹಸುವು ಬದುಕಿಕೊಳ್ಳುವುದು. ಆಮೇಲೆ ನಾವು ನಿನ್ನ ಆಶ್ರಮದಲ್ಲಿ ಮೊದಲಿನಂತೆ ವಾಸಮಾಡುವೆವು ಎಂದನು.

॥ ಬ್ರಹ್ಮೋವಾಚ ॥

ಇತ್ಯುಕ್ತವತಿ ವಿಪ್ರೇಂದ್ರೇ ಬ್ರಾಹ್ಮಣಾನಾಂ ಚ ಸಂಸದಿ ।
ತತ್ರಾಪತತ್ಪುಷ್ಪವೃಷ್ಟಿರ್ಜಯಶಬ್ದೋ ವ್ಯವರ್ಧತ ।
ತತಃ ಕೃತಾಂಜಲಿರ್ನಮ್ರೋ ಗೌತಮೋ ವಾಕ್ಯಮಬ್ರವೀತ್ ॥ ೭೮ ॥

॥ ಗೌತಮ ಉವಾಚ ॥

ತಪಸಾಗ್ನಿಪ್ರಸಾದೇನ ದೇವಬ್ರಹ್ಮಪ್ರಸಾದತಃ ।
ಭವತಾಂ ಚ ಪ್ರಸಾದೇನ ಮತ್ಸಂಕಲ್ಪೋಽನುಸಿಧ್ಯತಾಂ ॥ ೭೯ ॥

॥ ಬ್ರಹ್ಮೋವಾಚ ॥

ಏವಮಸ್ತ್ವಿತಿ ತಂ ವಿಪ್ರಾ ಆಪೃಚ್ಛ್ಯಮುನಿಪುಂಗವಂ ।
ಸ್ವಾನಿ ಸ್ಥಾನಾನಿ ತೇ ಜಗ್ಮುಃ ಸಮೃದ್ಧಾನ್ಯನ್ನವಾರಿಭಿಃ ॥ ೮೦ ॥

ಯಾತೇಷು ತೇಷು ವಿಪ್ರೇಷು ಭ್ರಾತ್ರಾ ಸಹ ಗಣೇಶ್ವರಃ ।
ಜಯಯಾ ಸಹ ಸುಪ್ರೀತಃ ಕೃತಕೃತ್ಯೋ ನ್ಯವರ್ತತ ॥ ೮೧ ॥

---

೭೮. ಹೀಗೆ ಬ್ರಾಹ್ಮಣರೂಪಿಯಾದ ವಿನಾಯಕನು ಬ್ರಾಹ್ಮಣರ ಸಭೆಯಲ್ಲಿ ಹೇಳಲು, ಆಗ ಪುಷ್ಪವೃಷ್ಟಿಯಾಯಿತು. ಜಯಧ್ವನಿಯು ಕೇಳಿಸಿತು.

೭೯. ಆಗ ಗೌತಮನು ಅಂಜಲಿಯನ್ನು ಧರಿಸಿ ವಿನಯದಿಂದ ಓ ಮುನಿಗಳೇ, ನನ್ನ ತಪಸ್ಸಿನ ಮಹಿಮೆಯಿಂದಲೂ, ಅಗ್ನಿಯ ಅನುಗ್ರಹದಿಂದಲೂ ದೇವತೆಗಳ ಮತ್ತು ಬ್ರಾಹ್ಮಣರ ಅನುಗ್ರಹದಿಂದಲೂ ನಿಮ್ಮೆಲ್ಲರ ಪ್ರಸಾದದಿಂದಲೂ ನನ್ನ ಪ್ರಯತ್ನವು ಸಿದ್ಧಿಸಲಿ ಎಂದು ಬೇಡಿಕೊಂಡನು.

೮೦. ಹಾಗೇ ಆಗಲೆಂದು ಹೇಳಿ ಮುನಿಗಳೆಲ್ಲರೂ ಹೇಳಿಗೌತಮನ ಅನುಮತಿಯನ್ನು ಪಡೆದು ಅನ್ನನೀರುಗಳಿಂದ ಸಮೃದ್ಧಿಯಾದ ತಮ್ಮ ಆಶ್ರಮಗಳಿಗೆ ತೆರಳಿದರು.

೮೧. ಮುನಿಗಳೆಲ್ಲರೂ ಹೊರಟುಹೋಗಲು, ವಿನಾಯಕನು ತನ್ನ ಕಾರ್ಯವು ಸಫಲವಾದುದಕ್ಕೆ ಸಂತೋಷಗೊಂಡು ಷಣ್ಮುಖ ಮತ್ತು ಜಯಾದೇವಿಯೊಡನೆ ತಾನೂ ಹೊರಟುಹೋದನು.

ಗತೇಷು ಬ್ರಹ್ಮವೃಂದೇಷು ಗಣೇಶೇ ಚ ಗತೇ ತಥಾ ।
ಗೌತಮೋಽಪಿ ಮುನಿಶ್ರೇಷ್ಠಸ್ತಪಸಾ ಹತಕಲ್ಮಷಃ ॥ ೮೨ ॥

ಧ್ಯಾಯಂಸ್ತದರ್ಥಂ ಸ ಮುನಿಃ ಕಿಮಿದಂ ಮಮ ಸಂಸ್ಥಿತಂ ।
ಇತ್ಯೇವಂ ಬಹುಶೋ ಧ್ಯಾಯನ್ ಜ್ಞಾನೇನ ಜ್ಞಾತವಾನ್ದ್ವಿಜ ॥ ೮೩ ॥

ನಿಶ್ಚಿತ್ಯ ದೇವಕಾರ್ಯಾರ್ಥಮಾತ್ಮನಃ ಕಿಲ್ಬಿಷಾಂ ಗತಿಂ ।
ಲೋಕಾನಾಮುಪಕಾರಂ ಚ ಶಂಭೋಃ ಪ್ರೀಣನಮೇವ ಚ ॥ ೮೪ ॥

ಉಮಾಯಾಃ ಪ್ರೀಣನಂ ಚಾಪಿ ಗಂಗಾನಯನಮೇವ ಚ ।
ಸರ್ವಂ ಶ್ರೇಯಸ್ಕರಂ ಮನ್ಯೇ ಮಯಿ ನೈವ ಚ ಕಿಲ್ಬಿಷಂ ॥ ೮೫ ॥

ಇತ್ಯೇವಂ ಮನಸಾ ಧ್ಯಾಯನ್ಸುಪ್ರೀತೋಽಭೂದ್ದ್ವಿಜೋತ್ತಮಃ ।
ಆರಾಧ್ಯ ಜಗತಾಮೀಶಂ ತ್ರಿನೇತ್ರಂ ವೃಷಭಧ್ವಜಂ ॥ ೮೬ ॥

೮೨-೮೩. ಇತ್ತ ಮುನಿಶ್ರೇಷ್ಠನೂ ತಪಸ್ಸಿನಿಂದ ಪರಿಶುದ್ಧನೂ ಆದ ಗೌತಮನು ಇದೇನು? ಈರೀತಿ ಸಂಭವಿಸಲು ಕಾರಣವೇನು? ಎಂದು ಚಿಂತಿಸುತ್ತಾ ಜ್ಞಾನದೃಷ್ಟಿಯಿಂದ ನಿಜಾಂಶವನ್ನು ತಿಳಿದನು.

೮೪-೮೫. ದೇವತೆಗಳ ಕಾರ್ಯಕ್ಕಾಗಿ ಗಂಗೆಯನ್ನು ಭೂಮಿಗೆ ತರಬೇಕು, ಅದರಿಂದ ಜನಗಳಿಗೆ ಉಪಕಾರವಾಗುವುದು, ಶಂಕರನನ್ನು ಅದಕ್ಕಾಗಿ ಆರಾಧಿಸಬೇಕು, ಹಾಗೆ ಆರಾಧಿಸಿದ ಗಂಗೆಯನ್ನು ಕರೆದುಕೊಂಡುಬಂದರೆ ಉಮಾದೇವಿಗೂ ಸಂತೋಷವಾಗುವುದು, ನನಗೂ ಶ್ರೇಯಸ್ಸಾಗುವುದು, ಈ ಉದ್ದೇಶದಿಂದಲೇ ಗೋಹಿಂಸೆಯಂತಹ ಕಾರ್ಯವು ನನ್ನಿಂದ ಘಟಿಸಿತು ವಸ್ತುತಃ ನನ್ನಲ್ಲಿ ಪಾಪವಿಲ್ಲ.

೮೬-೮೭. ಹೀಗೆ ಮನಸ್ಸಿನಲ್ಲಿ ಚಿಂತಿಸಿ ಸಂತಸಗೊಂಡು ಆ ಗೌತಮ ಮುನಿಯು ಜಗನ್ಮಾತೆಗೆ ಸವತಿಯಾಗಿ ಗಂಗೆಯು ಮಹೇಶ್ವರನ ಜಟೆಯಲ್ಲಿರುವಳು. ತ್ರಿಲೋಚನನೂ, ನಂದಿವಾಹನನೂ, ಜಗದೊಡಯನೂ ಆದ ಮಹಾ

ಆನಯಿಷ್ಯೇ ಸರಿಚ್ಛ್ರೇಷ್ಠಾಂ ಪ್ರೀತಾಸ್ತು ಗಿರಿಜಾ ಮಮ ।
ಸಪತ್ನೀ ಜಗದಂಬಾಯಾ ಮಹೇಶ್ವರಜಟಾಸ್ಥಿತಾ ॥ ೮೭ ॥

ಏವಂ ಹಿ ಸಂಕಲ್ಪ್ಯ ಮುನಿಪ್ರವೀರಃ
ಸ ಗೌತಮೋ ಬ್ರಹ್ಮಗಿರೇರ್ಜಗಾಮ ।
ಕೈಲಾಸಮಾಧಿಷ್ಠಿತಮುಗ್ರಧನ್ವನಾ ।
ಸುರಾರ್ಚಿತಂ ಪ್ರಿಯಯಾ ಬ್ರಹ್ಮವೃನ್ದೈಃ ॥ ೮೮ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ ತೀರ್ಥಮಾಹಾತ್ಮ್ಯೇ ವಿನಾಯಕಗೌತಮವ್ಯಾಪಾರನಿರೂಪಣಂ ನಾಮ ಚತುಃಸಪ್ತತಿತಮೋಽಧ್ಯಾಯಃ

ದೇವನನ್ನು ಆರಾಧಿಸಿ ಆ ಗಂಗೆಯನ್ನು ಭೂಮಿಗೆ ಕರೆದುಕೊಂಡುಬರುವೆನು, ಅದರಿಂದ ಗಿರಿಜೆಯೂ ನನ್ನಲ್ಲಿ ಅನುಗ್ರಹಮಾಡುವಳು.

೮೮. ಹೀಗೆ ನಿಶ್ಚಯಿಸಿ ಮುನಿಶ್ರೇಷ್ಠನಾದಾ ಗೌತಮನು ಬ್ರಹ್ಮಗಿರಿಯಿಂದ ಹೊರಟು ಶಿವನ ವಾಸಸ್ಥಾನವೂ, ದೇವತೆಗಳಿಂದಲೂ ಮುನಿಗಳಿಂದಲೂ ಸೇವಿಸಲ್ಪಡುವುದೂ ಆದ ಕೈಲಾಸಗಿರಿಗೆ ಶಿವನನ್ನಾರಾಧಿಸಲು ತೆರಳಿದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ವಿನಾಯಕಗೌತಮವ್ಯಾಪಾರ ನಿರೂಪಣವೆಂಬ ಎಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ಐದನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಪಂಚಸಪ್ತತಿತಮೋಽಧ್ಯಾಯಃ

॥ ನಾರದ ಉವಾಚ ॥

ಕೈಲಾಸಶಿಖರಂ ಗತ್ವಾ ಗೌತಮೋ ಭಗವಾನೃಷಿಃ ।
ಕಿಂ ಚಕಾರ ತಪೋ ವಾಪಿ ಕಾಂ ಚಕ್ರೇ ಸ್ತುತಿಮುತ್ತಮಾಂ ॥ ೧ ॥

॥ ಬ್ರಹ್ಮೋವಾಚ ॥

ಗಿರಿಂ ಗತ್ವಾ ತತೋ ವತ್ಸ ವಾಚಂ ಸಂಯಮ್ಯ ಗೌತಮಃ ।
ಆಸ್ತೀರ್ಯ ಸ ಕುಶಾನ್ಪ್ರಾಜ್ಞಃ ಕೈಲಾಸೇ ಪರ್ವತೋತ್ತಮೇ ॥ ೨ ॥

ಉಪವಿಶ್ಯ ಶುಚಿರ್ಭೂತ್ವಾ ಸ್ತೋತ್ರಂ ಚೇದಂ ತತೋ ಜಗೌ ।
ಅಪತತ್ಪುಷ್ಪವೃಷ್ಟಿಶ್ಚ ಸ್ತೂಯಮಾನೇ ಮಹೇಶ್ವರೇ ॥ ೩ ॥

ಎಪ್ಪತ್ತೈದನೆಯ ಅಧ್ಯಾಯವು

೧. ನಾರದನು ಪ್ರಶ್ನಿಸಿದನು—ಓ ಬ್ರಹ್ಮದೇವ, ಕೈಲಾಸಗಿರಿಗೆ ತೆರಳಿ ಪೂಜ್ಯನಾದಾ ಗೌತಮಮುನಿಯು ಏನುಮಾಡಿದನು ? ತಪಸ್ಸನ್ನು ಮಾಡಿದನೆ ? ಅಥವಾ ಶಿವನನ್ನು ಸ್ತೋತ್ರಮಾಡಿದನೇ ? ಅದನ್ನು ಹೇಳು ಎನಲು,

೨-೩. ಬ್ರಹ್ಮನು ಹೇಳಿದನು—ಎಲೈ ನಾರದ, ಕೈಲಾಸಗಿರಿಗೆ ಹೋಗಿ ಆ ಗೌತಮನು ಮೌನವ್ರತವನ್ನು ಕೈಗೊಂಡು ಶುದ್ಧಭೂಮಿಯಲ್ಲಿ ದರ್ಭೆಗಳನ್ನು ಹಾಸಿ ಕುಳಿತು, ಪರಿಶುದ್ಧತೆಯಿಂದಲೂ, ಭಕ್ತಿಪೂರ್ವಕವಾಗಿಯೂ ಶಿವನನ್ನು ಸ್ತುತಿಸಿದನು. ಮಹೇಶ್ವರನನ್ನು ಸ್ತುತಿಸುತ್ತಿರಲು ದೇವಲೋಕದಿಂದ ಪುಷ್ಪವೃಷ್ಟಿಯಾಯಿತು.

॥ ಗೌತಮ ಉವಾಚ ॥

ಭೋಗಾರ್ಥಿನಾಂ ಭೋಗಮಭೀಪ್ಸಿತಂ ಚ
ದಾತುಂ ಮಹಾಂತ್ಯಷ್ಟವಪೂಂಷಿ ಧತ್ತೇ ।
ಸೋಽಸೋ ಜನಾನಾಂ ಗುಣವಂತಿ ನಿತ್ಯಂ
ದೇವಂ ಮಹಾದೇವಮಿತಿ ಸ್ತುವಂತಿ ॥ ೪ ॥

ಕರ್ತುಂ ಸ್ವಕೀಯೈರ್ವಿಷಯೈಃ ಸುಖಾನಿ
ಭರ್ತುಂ ಸಮಸ್ತಂ ಸಚರಾಚರಂ ಚ ।
ಸಂಪತ್ತಯೇ ಹ್ಯಸ್ಯ ವಿವೃದ್ಧಯೇ ಚ
ಮಹೀಮಯಂ ರೂಪಮಿತೀಶ್ವರಸ್ಯ ॥ ೫ ॥

ಸೃಷ್ಟೇಃ ಸ್ಥಿತೇಃ ಸಂಹರಣಾಯ ಭೂಮೇ-
ರಾಧಾರಮಾಧಾತುಮಪಾಂ ಸ್ವರೂಪಂ ।
ಭೇಜೇ ಶಿವಃ ಶಾಂತತನುರ್ಜನಾನಾಂ
ಸುಖಾಯ ಧರ್ಮಾಯ ಜಗತ್ಪ್ರತಿಷ್ಠಿತಂ ॥ ೬ ॥

---

೪. ಗೌತಮನು ಇಂತು ಸ್ತುತಿಸಿದನು— ಭೋಗಾಪೇಕ್ಷಿಗಳಾದ ಜನಗಳಿಗೆ ಭೋಗಾನುಭವವನ್ನುಂಟುಮಾಡಲು ಮಹಾದೇವನು ಅಷ್ಟಮೂರ್ತ್ಯಾತ್ಮಕವಾದ ಎಂಟು ರೂಪಗಳನ್ನು ಧರಿಸಿರುವನು ಎಂದು ತಿಳಿದವರು ಪರಮೇಶ್ವರನನ್ನು ಸ್ತುತಿಸುವರು.

೫. ಭೂಮಿಯಲ್ಲಿನ ಸುಖವಸ್ತುಗಳಿಂದ ಜನಗಳಿಗೆ ಸುಖವನ್ನುಂಟುಮಾಡಲೂ, ಪ್ರಾಣಿಗಳೆಲ್ಲವನ್ನೂ ಧರಿಸಿರಲೂ, ಐಶ್ವರ್ಯ ಮತ್ತು ಅಭಿವೃದ್ಧಿಗಳಿಗಾಗಿಯೂ ಪರಮೇಶ್ವರನು ಪೃಥಿವೀರೂಪವನ್ನು ಧರಿಸಿರುವನು.

೬. ವಸ್ತುತಃ ಶರೀರವಿಲ್ಲದ ನಿರಾಕಾರಸ್ವರೂಪನಾದರೂ ಶಿವನು ಸೃಷ್ಟಿ ಪಾಲನೆ, ಪ್ರಳಯಗಳಿಗೆ ಸಹಾಯವಾಗಿಯೂ, ಭೂಮಿಗೆ ಆಧಾರವಾಗಿಯೂ ಸುಖ ಮತ್ತು ಧರ್ಮಗಳ ವೃದ್ಧಿಗಾಗಿಯೂ ಜಲರೂಪವನ್ನು ಧರಿಸಿರುವನು.

ಕಾಲವ್ಯವಸ್ಥಾಮಮೃತಸ್ರವಂ ಚ
ಜೀವಸ್ಥಿತಿಂ ಸೃಷ್ಟಿಮಥೋ ವಿನಾಶನಂ ।
ಮುದಂ ಪ್ರಜಾನಾಂ ಸುಖಮುನ್ನತಿಂ ಚ
ಚಕ್ರೇಽರ್ಕಚಂದ್ರಾಗ್ನಿಮಯಂ ಶರೀರಂ ॥ ೭ ॥

ವೃದ್ಧಿಂ ಗತಿಂ ಶಕ್ತಿಮಥಾಕ್ಷರಾಣಿ
ಜೀವವ್ಯವಸ್ಥಾಂ ಮುದಮಪ್ಯನೇಕಾಂ ।
ಸ್ರಷ್ಟುಂ ಕೃತಂ ವಾಯುರಿತೀಶರೂಪಂ
ತ್ವಂ ವೇತ್ಸಿ ನೂನಂ ಭಗವನ್ಭವಂತಂ ॥ ೮ ॥

ಭೇದೈರ್ವಿನಾ ನೈವ ಕೃತಿರ್ನ ಧರ್ಮೋ
ನಾತ್ಮೀಯಮನ್ಯನ್ನ ದಿಶೋಽಂತರಿಕ್ಷಂ ।
ದ್ಯಾವಾಪೃಥಿವ್ಯೌ ನ ಚ ಭುಕ್ತಿಮುಕ್ತೀ
ತಸ್ಮಾದಿದಂ ವ್ಯೋಮವಪುಸ್ತ್ವಮೀಶ ॥ ೯ ॥

---

೭. ಕಾಲವ್ಯವಸ್ಥೆಯನ್ನು ಮಾಡುವುದಕ್ಕೂ, ಪೈರುಗಳ ಮತ್ತು ಓಷಧಿಗಳ ಬೆಳವಣಿಗೆಗೆ ಸಹಾಯವಾಗಿ ಅಮೃತಕಿರಣವನ್ನು ಸುರಿಸುವುವಕ್ಕೂ, ಪ್ರಾಣಿಗಳ ಉತ್ಪತ್ತಿ, ಪಾಲನೆ, ನಾಶ ಇವುಗಳನ್ನು ಮಾಡಲು ಸಹಾಯವಾಗಿಯೂ, ಜನಗಳಿಗೆ ಸಂತೋಷ, ಸುಖ, ಅಭಿವೃದ್ಧಿಗಳನ್ನುಂಟುಮಾಡುವುದಕ್ಕಾಗಿಯೂ ಪರಮೇಶ್ವರನು ಚಂದ್ರಸೂರ್ಯರ ಸ್ವರೂಪವನ್ನು ಧರಿಸಿರುವನು.

೮. ಓ ಭಗವಂತ—ಪ್ರಾಣಿಗಳ ವೃದ್ಧಿಯನ್ನೂ ಗಮನವನ್ನೂ ಶಬ್ದಗಳನ್ನೂ ಜೀವವ್ಯವಸ್ಥೆಯನ್ನೂ ಸಂತೋಷವನ್ನೂ ಕಲ್ಪಿಸಲು ನೀನು ವಾಯುರೂಪವನ್ನು ಧರಿಸಿರುವೆ. ಓ ದೇವ, ನಿನ್ನ ಸ್ವರೂಪವನ್ನು ನೀನೊಬ್ಬನೇ ತಿಳಿದಿರುವೆ, ಇನ್ನಾರೂ ತಿಳಿಯಲಾರರು.

೯. ಓ ದೇವ, ಆಕಾಶದಂತಹ ಅವಕಾಶವಿಲ್ಲದಿದ್ದರೆ ಯಾವ ಕಾರ್ಯವನ್ನೂ ಮಾಡಲಾಗುವುದಿಲ್ಲ, ಧರ್ಮವನ್ನಾಚರಿಸಲಾಗುವುದಿಲ್ಲ. ಜೀವನವೂ ನಡೆಯುವುದಿಲ್ಲ. ದಿಕ್ಕು, ಅಂತರಿಕ್ಷ, ಇವುಗಳ ಭೇದವೂ ಸ್ವರ್ಗಭೂಮಿಗಳ ಭೇದವೂ ಸಿದ್ಧಿಸುವುದಿಲ್ಲ, ಭೋಗಮೋಕ್ಷಗಳೂ ಸಿದ್ಧಿಸುವುದಿಲ್ಲ. ಈ ಎಲ್ಲಾ ಕಾರ್ಯಗಳಿಗಾಗಿ ನೀನು ಆಕಾಶರೂಪವನ್ನು ಧರಿಸಿರುವೆ.

ಧರ್ಮಂ ವ್ಯವಸ್ಥಾಪಯಿತುಂ ವ್ಯವಸ್ಯ
ಋಕ್ಸಾಮಶಾಸ್ತ್ರಾಣಿ ಯಜುಶ್ಚ ಶಾಖಾಃ ।
ಲೋಕೇ ಚ ಗಾಥಾಃ ಸ್ಮೃತಯಃ ಪುರಾಣ-
ಮಿತ್ಯಾದಿಶಬ್ದಾತ್ಮಕತಾಮುಪೈತಿ ॥ ೧೦ ॥

ಯಸ್ಮಾತ್ ಕ್ರತುರ್ಯಾನ್ಯಪಿ ಸಾಧನಾನಿ
ಋತ್ವಿಕ್ಪ್ರದೇಶಂ ಫಲದೇಶಕಾಲಾಃ ।
ತ್ವಮೇವ ಶಂಭೋ ಪರಮಾರ್ಥತತ್ತ್ವಂ
ವದಂತಿ ಯಜ್ಞಾಂಗಮಯಂ ವಪುಸ್ತೇ ॥ ೧೧ ॥

ಕರ್ತಾ ಪ್ರದಾತಾ ಪ್ರತಿಭೂಃ ಪ್ರದಾನಂ
ಸರ್ವಜ್ಞಸಾಕ್ಷೀ ಪುರುಷಃ ಪರಶ್ಚ ।
ಪ್ರತ್ಯಾತ್ಮಭೂತಃ ಪರಮಾರ್ಥರೂಪ-
ಸ್ತ್ವಮೇವ ಸರ್ವಂ ಕಿಮು ವಾಗ್ವಿಲಾಸೈಃ ॥ ೧೨ ॥

---

೧೦. ಓ ದೇವ, ನೀನು ಧರ್ಮವ್ಯವಸ್ಥೆಗಾಗಿ ಋಗ್ವೇದ, ಯಜುರ್ವೇದ ಸಾಮವೇದ, ಅಥರ್ವವೇದ, ಇತಿಹಾಸಗಳು, ಗಾದೆಗಳು, ಸ್ಮೃತಿಗಳು, ಪುರಾಣಗಳು ಮುಂತಾದ ಶಬ್ದಸ್ವರೂಪವನ್ನು ಧರಿಸುವೆ. ಇಂತಹ ನಿನಗೆ ನಮಸ್ಕಾರವು.

೧೧. ಓ ಶಂಭು, ಯಜಮಾನ, ಯಾಗ, ಸಾಧನಗಳು, ದಕ್ಷಿಣೆ, ಯಜ್ಞದ ಫಲ, ಯೋಗ್ಯವಾದ ಕಾಲದೇಶಗಳು ಮುಂತಾದ ಯಜ್ಞಾಂಗಗಳೂ ಯಜ್ಞಗಳೂ ನೀನೇ ಎಂದೂ, ಪರವಸ್ತುವು ನೀನೇ ಎಂದೂ ಜ್ಞಾನಿಗಳು ಹೇಳುವರು.

೧೨. ಓ ದೇವ, ನೀನೇ ಕರ್ತೃವು, ದಾತೃವು. ದಾನಫಲವನ್ನನುಭವಿಸುವವನೂ ನೀನು. ಹೊಣೆಗಾರನೂ, ದಾನವೂ, ಸಾಕ್ಷಿಯೂ, ಸರ್ವಜ್ಞನೂ, ಪುರುಷೋತ್ತಮನೂ, ಪ್ರತಿಶರೀರದಲ್ಲಿಯೂ ಇರುವ ಜೀವಾತ್ಮನೂ, ಪರಮಾತ್ಮನೂ ನೀನು. ಹೆಚ್ಚೇನು? ಜಗತ್ತೆಲ್ಲವೂ ನೀನೇ.

ನ ವೇದಶಾಸ್ತ್ರೈರ್ಗುರುಭಿಃ ಪ್ರದಿಷ್ಟೋ
ನ ನಾಸ್ತಿ ಬುದ್ಧ್ಯಾದಿಭಿರಪ್ರಧೃಷ್ಯಃ ।
ಅಜೋಽಪ್ರಮೇಯಃ ಶಿವಶಬ್ದವಾಚ್ಯ-
ಸ್ತ್ವಮಸ್ತಿ ಸತ್ಯಂ ಭಗವನ್ನಮಸ್ತೇ ॥ ೧೩ ॥

ಆತ್ಮೈಕತಾಂ ಸ್ವಪ್ರಕೃತಿಂ ಕದಾಚಿ-
ದೈಕ್ಷಚ್ಛಿವಃ ಸಂಪದಿಯಂ ಮಮೇತಿ ।
ಪೃಥಕ್ತದೈವಾಭವದಪ್ರತರ್ಕ್ಯಾ-
ಚಿಂತ್ಯಪ್ರಭಾವೋ ಬಹುವಿಶ್ವಮೂರ್ತಿಃ ॥ ೧೪ ॥

ಭಾವೇಽಭಿವೃದ್ಧಾ ಚ ಭವೇ ಭವೇ ಚ
ಸ್ವಕಾರಣಂ ಕಾರಣಮಾಸ್ಥಿತಾ ಚ ।
ನಿತ್ಯಾ ಶಿವಾ ಸರ್ವಸುಲಕ್ಷಣಾ ವಾ
ವಿಲಕ್ಷಣಾ ವಿಶ್ವಕರಸ್ಯ ಶಕ್ತಿಃ ॥ ೧೫ ॥

---

೧೩. ಓ ಭಗವಂತ, ವೇದಶಾಸ್ತ್ರಗಳಿಂದಲೂ, ಗುರೂಪದೇಶದಿಂದಲೂ ನಿನ್ನನ್ನು ತಿಳಿಯಲು ಸಾಧ್ಯವಿಲ್ಲ. ಬುದ್ಧಿ ಮೊದಲಾದ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಗೆ ನೀನು ಅಗೋಚರನು, ನಿನಗೆ ಉತ್ಪತ್ತಿಯಿಲ್ಲ, ನಿತ್ಯವಾದ ಸತ್ಯಸ್ವರೂಪನು. ಶಿವನೆಂಬ ಶಬ್ದದಿಂದ ನಿನ್ನನ್ನು ಕರೆಯುವರು. ಇಂತಹ ನಿನಗೆ ನಮಸ್ಕಾರವು.

೧೪. ಅದ್ವಿತೀಯನಾದ ಶಿವನು ಒಂದಾನೊಂದು ಕಾಲದಲ್ಲಿ ತನ್ನಲ್ಲಿಯೇ ಐಕ್ಯವಾಗಿರುವ ಪ್ರಕೃತಿಯನ್ನುದ್ದೇಶಿಸಿ ಈ ದೇವಿಯು ನನ್ನ ಶಕ್ತಿಯು. (ಲಕ್ಷ್ಮಿಯು) ಎಂದು ಚಿಂತಿಸಿದ ಕೂಡಲೇ ಪ್ರಕೃತಿಯು ಈಶ್ವರನಿಂದ ಹೊರಹೊರಟು ಬೇರೆಯಾಗಿರುವಂತೆ ಗೋಚರವಾಯಿತು. ವಸ್ತುತಃ ಅವನು ಏಕರೂಪನು, ಚಿಂತಿಸಲೂ ಊಹಿಸಲೂ ಅಸಾಧ್ಯವಾದ ನಿರ್ವಿಕಾರಸ್ವರೂಪನು. ಆದರೂ ಜಗತ್ಕಲ್ಪನೆಗಾಗಿ ನಾನಾ ರೂಪಗಳನ್ನು ಧರಿಸುವನು.

೧೫. ಆ ಮಾಯಾಶಕ್ತಿಯು ಸೃಷ್ಟಿಗೆ ಆದಿಕಾರಣನಾದ ನಿನಗೆ ಸಹಾಯಕಳು, ನಿತ್ಯಳು, ಮಂಗಳರೂಪೆಯು, ಸಕಲಲಕ್ಷಣಗಳುಳ್ಳವಳು, ಊಹಿಸಲು

ಉತ್ಪಾದನಂ ಸಂಸ್ಥಿತಿರನ್ನವೃದ್ಧಿ-
ಲಯೋಃ ಸತಾಂ ಯತ್ರ ಸನಾತನಾಸ್ತೇ ।
ಏಕೈವ ಮೂರ್ತಿರ್ನ ಸಮಸ್ತಿ ಕಿಂಚಿ-
ದಸಾಧ್ಯಮಸ್ಯಾ ದಯಿತಾ ಹರಸ್ಯ ॥ ೧೬ ॥

ಯದರ್ಥಮನ್ನಾನಿ ಧನಾನಿ ಜೀವಾ
ಯಚ್ಛಂತಿ ಕುರ್ವಂತಿ ತಪಾಂಸಿ ಧರ್ಮಾನ್ ।
ಸಾಪೀಯಮಂಬಾ ಜಗತೋ ಜನಿತ್ರೀ
ಪ್ರಿಯಾ ತು ಸೋಮಸ್ಯ ಮಹಾಸುಕೀರ್ತಿಃ ॥ ೧೭ ॥

ಯದೀಕ್ಷಿತಂ ಕಾಂಕ್ಷತಿ ವಾಸವೋಽಪಿ
ಯನ್ನಾಮತೋ ಮಂಗಲಮಾಪ್ನುಯಾಚ್ಚ ।
ಯಾ ವ್ಯಾಪ್ಯ ವಿಶ್ವಂ ವಿಮಲೀ ಕರೋತಿ
ಸೋಮಾ ಸದಾ ಸೋಮಸಮಾನರೂಪಾ ॥ ೧೮ ॥

ಅಸಾಧ್ಯಳು. ನಾನಾಬಗೆಯ ಮಾಯೆಗಳನ್ನು ಸೃಜಿಸುವಳು. ಅವಳಿಗೆ ಆದಿಯೂ ಅಂತ್ಯವೂ ಇಲ್ಲ. ಅವಳ ಶಕ್ತಿಯು ಅಪ್ರತಿಹತವಾದುದು.

೧೬. ಜಗತ್ತಿನ ಉತ್ಪತ್ತಿ, ಪಾಲನೆ, ಅನ್ನ, ವೃದ್ಧಿ, ನಾಶ ಇವೆಲ್ಲವುಗಳನ್ನೂ ಅನಾದಿಯಾಗಿ ಆ ಶಿವಶಕ್ತಿಯು ನಡೆಸುತ್ತಿರುವಳು, ಅವಳಿಗೆ ಅಸಾಧ್ಯವಾದುದು ಯಾವುದೂ ಇಲ್ಲ, ಪರಮೇಶ್ವರನ ಮಡದಿಯವಳು.

೧೭. ಶಿವಮಾಯೆಯಾದಾ ಉಮಾದೇವಿಯನ್ನೇ ಉದ್ದೇಶಿಸಿ ಜನಗಳು ಅನ್ನ ಮತ್ತು ಧನಗಳನ್ನು ದಾನಮಾಡುವರು. ತಪಸ್ಸನ್ನಾಚರಿಸುವರು, ಧರ್ಮವನ್ನಾಚರಿಸುವರು. ಅವಳೇ ಜಗನ್ಮಾತೆಯು, ಚಂದ್ರಶೇಖರನ ಭಾರ್ಯೆಯವಳು, ಮಹಾಪ್ರಸಿದ್ಧಳು.

೧೮. ದೇವೇಂದ್ರನೂ ಸಹ ಆ ದೇವಿಯ ಕೃಪಾದೃಷ್ಟಿಯನ್ನೇ ಹಾರೈಸುವನು. ಆ ದೇವಿಯ ನಾಮಗಳನ್ನೇ ಉಚ್ಚರಿಸಿ ಅವನು ಮಂಗಳವನ್ನು ಹೊಂದಿದನು. ಚಂದ್ರನಂತೆ ಸುಂದರವದನೆಯಾದಾ ದೇವಿಯು ಜಗತ್ತೆಲ್ಲವನ್ನೂ ವ್ಯಾಪಿಸಿ ಪರಿಶುದ್ಧಿಗೊಳಿಸುವಳು.

ಬ್ರಹ್ಮಾದಿಜೀವಸ್ಯ ಚರಾಚರಸ್ಯ
ಬುದ್ಧ್ಯಕ್ಷಿಚೈತನ್ಯಮನಃಸುಖಾನಿ ।
ಯಸ್ಯಾಃ ಪ್ರಸಾದಾತ್ಫಲವಂತಿ ನಿತ್ಯಂ
ವಾಗೀಶ್ವರೀ ಲೋಕಗುರೋಃ ಸುರಮ್ಯಾ ॥ ೧೯ ॥

ಚತುರ್ಮುಖಸ್ಯಾಪಿ ಮನೋ ಮಲೀನಂ
ಕಿಮನ್ಯಜಂತೋರಿತಿ ಚಿಂತ್ಯ ಮಾತಾ ।
ಗಂಗಾವತಾರಂ ವಿವಿಧೈರುಪಾಯೈಃ
ಸರ್ವಂ ಜಗತ್ಪಾವಯಿತುಂ ಚಕಾರ ॥ ೨೦ ॥

ಶ್ರುತೀಃ ಸಮಾಲಕ್ಷ್ಯ ಹರಪ್ರಭುತ್ವಂ
ವಿಶ್ವಸ್ಯ ಲೋಕಃ ಸಕಲೈಃ ಪ್ರಮಾಣೈಃ ।
ಕೃತ್ವಾ ಚ ಧರ್ಮಾನ್ಭುಜೀ ಚ ಭೋಗಾ-
ನ್ವಿಭೂತಿರೇಷಾ ತು ಸದಾಶಿವಸ್ಯ ॥ ೨೧ ॥

---

೧೯. ಬ್ರಹ್ಮನೇ ಮೊದಲಾದ ಪ್ರಾಣಿಗಳಿಗೆ ಬುದ್ಧಿ, ದೃಷ್ಟಿ, ಚೈತನ್ಯ, ಮನಸ್ಸು, ಸುಖ ಮುಂತಾದುವುಗಳು ಆ ದೇವಿಯ ಅನುಗ್ರಹದಿಂದಲೇ ಸಿದ್ಧಿಸುವುವು. ಜಗದ್ಗುರುವಾದ ಶಿವನ ಪ್ರಿಯಭಾರ್ಯೆಯಾದ ಅವಳೇ ವಿದ್ಯೆಗಳಿಗೆ ಅಧಿದೇವತೆಯು.

೨೦. ಬ್ರಹ್ಮನ ಮನಸ್ಸೂ ಸಹ ಮಲಿನವಾದುದು, ಇನ್ನು ಮಿಕ್ಕ ಜಂತುಗಳ ಮಾತೇನು? ಎಂದು ಆಲೋಚಿಸಿ ಜಗನ್ಮಾತೆಯಾದಾ ಉಮಾದೇವಿಯು ಜಗತ್ತೆಲ್ಲವನ್ನೂ ಪರಿಶುದ್ಧಗೊಳಿಸಲು ನಾನಾ ಉಪಾಯಗಳನ್ನು ಕಲ್ಪಿಸಿ ಗಂಗಾನದಿಯನ್ನು ಶಿವನ ಜಟೆಯಿಂದ ಭೂಮಿಗಿಳಿಯುವಂತೆ ಮಾಡಿರುವಳು.

೨೧. ಪಂಡಿತರಾದ ಜನಗಳು ವೇದಗಳನ್ನು ಪರಿಶೀಲಿಸಿ ಸಾಕಷ್ಟು ಪ್ರಮಾಣಗಳಿಂದ ಶಿವನೇ ಜಗತ್ತಿಗೆ ಒಡೆಯನು, ಸ್ವಾಮಿಯು, ಎಂದು ತಿಳಿದು ಆ ಶಿವನನ್ನುದ್ದೇಶಿಸಿ ಧರ್ಮಕರ್ಮಗಳನ್ನಾಚರಿಸುತ್ತಾ ಬೇಕಾದ ಭೋಗಗಳನ್ನು ಅನುಭವಿಸುವರು. ಇದೆಲ್ಲವೂ ಆ ಸದಾಶಿವನ ಮಹಿಮೆಯಿಂದಲೇ ನಡೆಯುತ್ತಿರುವುದು.

ಕಾರ್ಯಕ್ರಿಯಾಕಾರಕಸಾಧನಾನಾಂ
ವೇದೋದಿತಾನಾಮಥ ಲೌಕಿಕಾನಾಂ ।
ಯತ್ಸಾಧ್ಯಮುತ್ಕೃಷ್ಟತಮಂ ಪ್ರಿಯಂ ಚ
ಪ್ರೋಕ್ತಾ ಚ ಸಾ ಸಿದ್ಧಿರನಾದಿಕರ್ತುಃ ॥ ೨೨ ॥

ಧ್ಯಾತ್ವಾ ವರಂ ಬ್ರಹ್ಮ ಪರಂ ಪ್ರಧಾನಂ
ಯತ್ಸಾರಭೂತಂ ಯದುಪಾಸಿತವ್ಯಂ ।
ಯತ್ಪ್ರಾಪ್ಯ ಮುಕ್ತಾ ನ ಪುನರ್ಭವಂತಿ
ಸದ್ಯೋಗಿನೋ ಮುಕ್ತಿರುಮಾಪತಿಃ ಸಃ ॥ ೨೩ ॥

ಯಥಾ ಯಥಾ ಶಂಭುರಮೇಯಮಾಯಾ-
ರೂಪಾಣಿ ಧತ್ತೇ ಜಗತೋ ಹಿತಾಯ ।
ತದ್ಯೋಗಯೋಗ್ಯಾನಿ ತಥೈವ ಧತ್ಸೇ
ಪತಿವ್ರತಾತ್ವಂ ತ್ವಯಿ ಮಾತರೇವಂ ॥ ೨೪ ॥

---

೨೨. ಲೌಕಿಕಕಾರ್ಯಗಳು, ವೈದಿಕಕರ್ಮಗಳು, ಕರ್ತೃ, ಸಾಧನ ಇವುಗಳಿಂದ ಲಭಿಸಬಹುದಾದವಂತಹ ಲೌಕಿಕಫಲಗಳೂ ಮತ್ತು ಸ್ವರ್ಗಮೋಕ್ಷಗಳೂ ಸಹ ಅನಾದಿಕರ್ತೃವಾದ ಆ ಪರಮೇಶ್ವರನ ಸಿದ್ಧಿರೂಪವಾದುವು ಎಂದರೆ ಅವೆಲ್ಲವೂ ಪರಮೇಶ್ವರನ ಅನುಗ್ರಹದಿಂದಲೇ ಸಿದ್ಧಿಸುವುವು.

೨೩. ಯೋಗಿಗಳು ಧ್ಯಾನಿಸುವ ಪರಬ್ರಹ್ಮವಸ್ತುವೇ ಆ ಪರಮೇಶ್ವರನು. ಅದು ಸರ್ವೋತ್ತಮವಾದುದು, ಅದೇ ನಿತ್ಯವಸ್ತುವು. ಆ ಬ್ರಹ್ಮವಸ್ತುವನ್ನೇ ಎಲ್ಲರೂ ಸೇವಿಸಬೇಕು, ಅದೇ ಮುಕ್ತಿಸ್ವರೂಪವಾದುದು. ಧ್ಯಾನಜ್ಞಾನಗಳಿಂದ ಚಿಂತಿಸಿ ಆ ಬ್ರಹ್ಮವಸ್ತುವನ್ನು ಪಡೆದವರಿಗೆ ಪುನಃ ಜನ್ಮವಿಲ್ಲ. ಸಂಸಾರವಿಲ್ಲ, ಅಂತಹ ಪರವಸ್ತುವು ಆ ಪರಮೇಶ್ವರನಲ್ಲದೇ ಮತ್ತಾರೂ ಅಲ್ಲ.

೨೪. ಓ ದೇವಿ, ಆ ಶಂಕರನು ಜಗತ್ತಿನ ಹಿತಕ್ಕಾಗಿ ತನ್ನ ಮಾಯೆಯಿಂದ ಅನೇಕರೂಪಗಳನ್ನು ಧರಿಸುವನು. ನಾನಾ ರೂಪವಾಗಿ ಅವತರಿಸುವನು. ಆಗ ನೀನೂ ಸಹ ಆ ಶಿವನೊಡನೆ ವಿಹರಿಸಲು ಆಯಾಯ ಅವತಾರಕ್ಕನು

॥ ಬ್ರಹ್ಮೋವಾಚ ॥

ಇತ್ಯೇವಂ ಸ್ತುವತಸ್ತಸ್ಯ ಪುರಸ್ತಾದ್ವೃಷಭಧ್ವಜಃ ।
ಉಮಯಾ ಸಹಿತಃ ಶ್ರೀಮಾನ್ಗಣೇಶಾದಿಗಣೈರ್ವೃತಃ ॥ ೨೫ ॥

ಸಾಕ್ಷಾದಾಗತ್ಯ ತಂ ಶಂಭುಃ ಪ್ರಸನ್ನೋ ವಾಕ್ಯಮಬ್ರವೀತ್ ॥ ೨೬ ॥

॥ ಶಿವ ಉವಾಚ ॥

ಕಿಂ ತೇ ಗೌತಮ ದಾಸ್ಯಾಮಿ ಭಕ್ತಿಸ್ತೋತ್ರವ್ರತೈಃ ಶುಭೈಃ ।
ಪರಿತುಷ್ಟೋಽಸ್ಮಿ ಯಾಚಸ್ವ ದೇವಾನಾಮಪಿ ದುಷ್ಕರಂ ॥ ೨೭ ॥

॥ ಬ್ರಹ್ಮೋವಾಚ ॥

ಇತಿ ಶ್ರುತ್ವಾ ಜಗನ್ಮೂರ್ತೇರ್ವಾಕ್ಯಂ ವಾಕ್ಯವಿಶಾರದಃ ।
ಹರ್ಷಬಾಷ್ಪಪರೀತಾಂಗೋ ಗೌತಮಃ ಪರ್ಯಚಿಂತಯತ್ ॥ ೨೮ ॥

ಗುಣವಾದ ರೂಪವನ್ನು ಧರಿಸುವೆ. ಓ ಮಾತೆ, ಹೀಗೆ ಜನ್ಮಾಂತರದಲ್ಲೂ ಪತಿಯನ್ನು ಬಿಡದಂತಹ ಪಾತಿವ್ರತ್ಯವು ನಿನ್ನದು ಎಂದು ಮುಂತಾಗಿ ಸ್ತೋತ್ರ ಮಾಡಿದನು.

೨೫-೨೬. ಹೀಗೆ ಗೌತಮಮುನಿಯು ಸ್ತುತಿಸಲು ಮಹೇಶ್ವರನು ಪ್ರಸನ್ನನಾಗಿ ಉಮಾದೇವಿಯೊಡನೆಯೂ ವಿನಾಯಕ ಮೊದಲಾದ ಗಣಗಳಿಂದಲೂ ಕೂಡಿ ಆ ಮುನಿಯ ಎದುರಿಗೆ ಪ್ರತ್ಯಕ್ಷನಾಗಿ ಪ್ರೀತಿಯಿಂದ ಅವನನ್ನು ಕುರಿತು,

೨೭. ಎಲೈ ಗೌತಮನೇ, ನಿನ್ನ ಭಕ್ತಿಪೂರ್ವಕವಾದ ಸ್ತೋತ್ರದಿಂದಲೂ ವ್ರತಗಳಿಂದಲೂ ನಾನು ಸಂತುಷ್ಟನಾಗಿರುವೆನು, ಬೇಕಾದ ವರವನ್ನು ಕೇಳು. ದೇವತೆಗಳಿಗೂ ಲಭಿಸದಂತಹ ವರವನ್ನು ನಿನಗೆ ಅನುಗ್ರಹಿಸುವೆನು ಎಂದನು.

೨೮. ಜಗನ್ಮಯನಾದ ಶಿವನ ಆ ಮಾತನ್ನು ಕೇಳಿ ಮಹಾವಾಗ್ಮಿಯಾದಾ ಗೌತಮುನಿಗೆ ಸಂತೋಷರಸವುಕ್ಕಿ ಆನಂದಬಾಷ್ಪವು ಹರಿಯಿತು. ಆಗ ಅವನು ಹೀಗೆ ಆಲೋಚಿಸಿದನು.

ಅಹೋ ದೈವಮಹೋ ಧರ್ಮೋ ಹ್ಯಹೋ ವೈ ನಿಷ್ಪ್ರಯೋಜನಂ ।
ಅಹೋ ಲೋಕಗತಿಶ್ಚಿತ್ರಾ ಅಹೋ ಧಾತರ್ನಮೋಽಸ್ತು ತೇ ॥ ೨೯ ॥

॥ ಗೌತಮ ಉವಾಚ ॥

ಜಟಾಸ್ಥಿತಾಂ ಶುಭಾಂ ಗಂಗಾಂ ದೇಹಿ ಮೇ ತ್ರಿದಶಾರ್ಚಿತ ।
ಯದಿ ತುಷ್ಟೋಽಸಿ ದೇವೇಶ ತ್ರಯೀಧಾಮ ನಮೋಽಸ್ತು ತೇ ॥ ೩೦ ॥

॥ ಈಶ್ವರ ಉವಾಚ ॥

ತ್ರಯಾಣಾಮುಪಕಾರಾರ್ಥಂ ಲೋಕಾನಾಂ ಯಾಚಿತಂ ತ್ವಯಾ ।
ಆತ್ಮನಸ್ತೂಪಕಾರಾಯ ತದ್ಯಾಚಸ್ವಾಕುತೋಭಯಃ ॥ ೩೧ ॥

॥ ಗೌತಮ ಉವಾಚ ॥

ಸ್ತೋತ್ರೇಣಾನೇನ ಯೇ ಭಕ್ತ್ಯಾಸ್ತ್ವಾಂ ಚ ದೇವೀಂ ಸ್ತುವಂತಿ ವೈ ।
ಸರ್ವಕಾಮಸಮೃದ್ಧಾಃ ಸ್ಯುರೇತದ್ಧಿ ವರಯಾಮ್ಯಹಂ ॥ ೩೨ ॥

---

೨೯. ಅಹಾ ! ನಾನು ಎಷ್ಟು ಭಾಗ್ಯಶಾಲಿಯು, ನನ್ನ ಅದೃಷ್ಟವೇ ಅದೃಷ್ಟವು. ನಾನು ಮಾಡಿದ ಧರ್ಮವೂ, ಬ್ರಾಹ್ಮಣಸತ್ಕಾರವೂ ಸಫಲವಾದುವು. ಲೋಕಗತಿಯು ತುಂಬಾ ಆಶ್ಚರ್ಯವಾಗಿರುವುದು. ಇಂತಹ ಆಶ್ಚರ್ಯಕರವಾದ ಲೋಕವನ್ನು ಸೃಷ್ಟಿಸಿದ ಓ ಬ್ರಹ್ಮನೇ, ನಿನಗೆ ನಮಸ್ಕಾರವು ಎಂದು ಮನಸ್ಸಿನಲ್ಲಿಯೇ ಆ ದೇವನನ್ನು ನಮಸ್ಕರಿಸಿ,

೩೦. ಓ ದೇವ, ನೀನು ವೇದಸ್ವರೂಪನು, ದೇವದೇವನು. ದೇವತೆಗಳು ನಿನ್ನನ್ನು ಅರ್ಚಿಸುವರು. ಇಂತಹ ನೀನು ನನ್ನಲ್ಲಿ ಅನುಗ್ರಹವುಳ್ಳವನಾಗಿದ್ದರೆ ನಿನ್ನ ಜಟೆಯಲ್ಲಿರುವ ಪವಿತ್ರಳಾದ ಗಂಗೆಯನ್ನು ನನಗೆ ಕೊಡು. ಇದೋ ನಿನಗೆ ನಮಸ್ಕಾರವು ಎಂದು ಪ್ರಾರ್ಥಿಸಲು,

೩೧. ಈಶ್ವರನಿಂತೆಂದನು—ಎಲೈ ಮುನಿ, ಮೂರು ಲೋಕಗಳ ಉಪಕಾರಕ್ಕಾಗಿ ನೀನು ಈ ವರವನ್ನು ಕೇಳಿರುವೆ. ನಿನ್ನ ಉಪಕಾರಕ್ಕಾಗಿ ಬೇರೇ ವರವನ್ನೂ ಧೈರ್ಯದಿಂದ ಕೇಳು, ಕೊಡುವೆನು ಎಂದನು.

೩೨. ಗೌತಮನು ಕೇಳಿದನು—ಓ ದೇವ, ನಾನು ಮಾಡಿದ ಈ ಸ್ತೋತ್ರದಿಂದ ಯಾವ ಪುರುಷನು ನಿನ್ನನ್ನೂ ದೇವಿಯನ್ನೂ ಭಕ್ತಿಯಿಂದ ಸ್ತುತಿಸುವನೋ ಅವನಿಗೆ ಸಕಲ ಮನೋರಥಗಳೂ ಸಿದ್ಧಿಸಬೇಕು, ಈ ವರವನ್ನೂ ಅನುಗ್ರಹಿಸಬೇಕು ಎಂದನು.

॥ ಬ್ರಹ್ಮೋವಾಚ ॥

ಏವಮುಕ್ತ್ವೇತಿ ದೇವೇಶಃ ಪರಿತುಷ್ಟೋಽಬ್ರವೀದ್ವಚಃ ।
ಅನ್ಯಾನಪಿ ವರಾನ್ಮತ್ತೋ ಯಾಚಸ್ವ ವಿಗತಜ್ವರಃ ॥ ೩೩ ॥

ಏವಮುಕ್ತಸ್ತು ಹರ್ಷೇಣ ಗೌತಮಃ ಪ್ರಾಹ ಶಂಕರಂ ॥ ೩೪ ॥

॥ ಗೌತಮ ಉವಾಚ ॥

ಇಮಾಂ ದೇವೀಂ ಜಟಾಸಂಸ್ಥಾಂ ಪಾವನೀಂ ಲೋಕಪಾವನೀಂ ।
ತವ ಪ್ರಿಯಾಂ ಜಗನ್ನಾಥ ಉತ್ಸೃಜ ಬ್ರಹ್ಮಣೋ ಗಿರೌ ॥ ೩೫ ॥

ಸರ್ವಾಸಾಂ ತೀರ್ಥಭೂತಾ ತು ಯಾವದ್ಗಚ್ಛತಿ ಸಾಗರಂ ।
ಬ್ರಹ್ಮಹತ್ಯಾದಿಪಾಪಾನಿ ಮನೋವಾಕ್ಕಾಯಿಕಾನಿ ಚ ॥ ೩೬ ॥

ಸ್ನಾನಮಾತ್ರೇಣ ಸರ್ವಾಣಿ ವಿಲಯಂ ಯಾಂತು ಶಂಕರ ।
ಚಂದ್ರಸೂರ್ಯೋಪರಾಗೇ ಚ ಅಯನೇ ವಿಷುವೇ ತಥಾ ॥ ೩೭ ॥

---

೩೩. ಹಾಗೇ ಆಗಲಿ ಎಂದು ಹೇಳಿ ಪರಮೇಶ್ವರನು ಪುನಃ ಪ್ರೀತಿಯಿಂದ ಎಲೈ ಮುನಿ, ನಿನಗಿನ್ನಾವ ವರಗಳು ಬೇಕು? ಧೈರ್ಯವಾಗಿ ಕೇಳು ಕೊಡುವೆನು ಎಂದು ಹೇಳಿದನು.

೩೪-೩೫. ಆ ಮಾತನ್ನು ಕೇಳಿ ಗೌತಮನು ಹರ್ಷದಿಂದ ಶಂಕರನನ್ನು ಕುರಿತು ಓ ಪರಮೇಶ್ವರ, ನಿನ್ನ ಜಟೆಯಲ್ಲಿರುವ ನಿನ್ನ ಪ್ರಿಯಳಾದ ಮತ್ತು ಪವಿತ್ರಳಾದ ಈ ಗಂಗಾದೇವಿಯನ್ನು ಬ್ರಹ್ಮಗಿರಿಯಲ್ಲಿ ಬಿಡು.

೩೬. ಈ ನದಿಯು ಮಹಾಪವಿತ್ರವಾದುದು, ಇದು ಸಮುದ್ರಕ್ಕೆ ಸೇರುವುದರೊಳಗೆ ಇದು ಹರಿಯುವ ಸ್ಥಳಗಳಲ್ಲಿ ಈ ನದಿಯಲ್ಲಿ ಸ್ನಾನಮಾಡಿದರೆ ಬ್ರಹ್ಮಹತ್ಯೆ ಮೊದಲಾದ ಮಹಾಪಾಪಗಳೂ ಮನೋವಾಕ್ಕಾಯಗಳಿಂದ ಮಾಡಿದ ಉಪಪಾತಕಗಳೂ ನಾಶವಾಗುವಂತೆ ಅನುಗ್ರಹಿಸು.

೩೭-೩೮. ಸೂರ್ಯಚಂದ್ರಗ್ರಹಣಗಳು, ದಕ್ಷಿಣಾಯನ ಉತ್ತರಾಯಣಗಳು, ವಿಷುವಪುಣ್ಯಕಾಲ, ಸಂಕ್ರಾಂತಿ, ವೈಧೃತಿಯೋಗವಿರುವ ದಿನ, ಈ ಕಾಲ

ಸಂಕ್ರಾಂತೌ ವೈಧೃತೌ ಪುಣ್ಯತೀರ್ಥೇಷ್ವನ್ಯೇಷು ಯತ್ಫಲಂ ।
ಅಸ್ಯಾಸ್ತು ಸ್ಮರಣಾದೇವ ತತ್ಪುಣ್ಯಂ ಜಾಯತಾಂ ಹರ ॥ ೩೮ ॥

ಶ್ಲಾಘ್ಯಂ ಕೃತೇ ತಪಃ ಪ್ರೋಕ್ತಂ ತ್ರೇತಾಯಾಂ ಯಜ್ಞಕರ್ಮ ಚ ।
ದ್ವಾಪರೇ ಯಜ್ಞದಾನೇ ಚ ದಾನಮೇವ ಕಲೌ ಯುಗೇ ॥ ೩೯ ॥

ಯುಗಧರ್ಮಾಶ್ಚ ಯೇ ಸರ್ವೇ ದೇಶಧರ್ಮಾಸ್ತಥೈವ ಚ ।
ದೇಶಕಾಲಾದಿಸಂಯೋಗೇ ಯೋ ಧರ್ಮೋ ಯತ್ರ ಶಸ್ಯತೇ ॥ ೪೦ ॥

ಯದನ್ಯತ್ರ ಕೃತಂ ಪುಣ್ಯಂ ಸ್ನಾನದಾನಾದಿಸಂಯುತೈಃ ।
ಅಸ್ಯಾಸ್ತು ಸ್ಮರಣಾದೇವ ತತ್ಪುಣ್ಯಂ ಜಾಯತಾಂ ಹರ ॥ ೪೧ ॥

ಯತ್ರ ಯತ್ರ ತ್ವಿಯಂ ಯಾತಿ ಯಾವತ್ಸಾಗರಗಾಮಿನೀ ।
ತತ್ರ ತತ್ರ ತ್ವಯಾ ಭಾವ್ಯಮೇಷ ಚಾಸ್ತು ವರೋ ವರಃ ॥ ೪೨ ॥

ಗಳಲ್ಲಿ ಮಿಕ್ಕ ತೀರ್ಥಗಳಲ್ಲಿ ಸ್ನಾನಮಾಡಿದರೆ ಬರುವ ಫಲವು ಈ ಗಂಗಾನದಿಯ ಸ್ಮರಣಮಾತ್ರದಿಂದಲೇ ಲಭಿಸಬೇಕು.

೩೯. ಕೃತಯುಗದಲ್ಲಿ ತಪಸ್ಸೇ ಶ್ರೇಷ್ಠವಾದುದು, ತ್ರೇತಾಯುಗದಲ್ಲಿ ಯಜ್ಞವು ಶ್ರೇಷ್ಠವಾದುದು, ದ್ವಾಪರಯುಗದಲ್ಲಿ ಯಜ್ಞದಾನಗಳೆರಡೂ ಶ್ರೇಷ್ಠವಾದುವು, ಕಲಿಯುಗದಲ್ಲಿ ದಾನವೇ ಶ್ರೇಷ್ಠವಾದುದು.

೪೦-೪೧. ಇಂತಹ ಯುಗಧರ್ಮಗಳು, ದೇಶಧರ್ಮಗಳು, ಪುಣ್ಯಕ್ಷೇತ್ರಗಳಲ್ಲಿಯೂ, ಪುಣ್ಯಕಾಲಗಳಲ್ಲಿಯೂ ಮಾಡಬೇಕಾದ ಪ್ರಶಸ್ತಧರ್ಮಗಳು ಮಿಕ್ಕ ಕ್ಷೇತ್ರಗಳಲ್ಲಿ ಸ್ನಾನದಾನ ಮೊದಲಾದುವುಗಳನ್ನುಮಾಡುವುದು, ಇವೆಲ್ಲವುಗಳಿಂದಲೂ ಬರತಕ್ಕ ಪುಣ್ಯವು ಈ ಗಂಗೆಯ ಸ್ಮರಣಮಾತ್ರದಿಂದಲೇ ಬರುವಂತೆ ಅನುಗ್ರಹಿಸು.

೪೨. ಓ ಮಹಾದೇವ, ಸಮುದ್ರವನ್ನು ಸೇರುವುದರೊಳಗೆ ಈ ನದಿಯು ಯಾವಯಾವ ಸ್ಥಳದಲ್ಲಿ ಹರಿದರೂ ನೀನು ಅಲ್ಲೆಲ್ಲಾ ನೆಲಸಿರಬೇಕು, ಇದು ನನಗೆ ಅತಿ ಪ್ರಿಯವಾದ ವರವು.

ಯೋಜನಾನಾಂ ತೂಪರಿ ತು ದಶ ಯಾವಚ್ಚ ಸಂಖ್ಯಯಾ ।
ತದಂತರಪ್ರವಿಷ್ಟಾನಾಂ ಮಹಾಪಾತಕಿನಾಮಪಿ ॥ ೪೩ ॥

ತತ್ಪಿತೃಣಾಂ ಚ ತೇಷಾಂ ಚ ಸ್ನಾನಾಯಾಗಚ್ಛತಾಂ ಶಿವ ।
ಸ್ನಾನೇ ಚಾಪ್ಯಂತರೇ ಮೃತ್ಯೋರ್ಮುಕ್ತಿಭಾಜೋ ಭವಂತು ವೈ ॥ ೪೪ ॥

ಏಕತಃ ಸರ್ವತೀರ್ಥಾನಿ ಸ್ವರ್ಗಮರ್ತ್ಯರಸಾತಲೇ ।
ಏಷಾ ತೇಭ್ಯೋ ವಿಶಿಷ್ಟಾ ತು ಅಲಂ ಶಂಭೋ ನಮೋಽಸ್ತು ತೇ ॥ ೪೫ ॥

॥ ಬ್ರಹ್ಮೋವಾಚ ॥

ತದ್ಗೌತಮವಚಃ ಶ್ರುತ್ವಾ ತಥಾಸ್ತ್ವಿತ್ಯಬ್ರವೀಚ್ಛಿವಃ ।
ಅಸ್ಯಾಃ ಪರತರಂ ತೀರ್ಥಂ ನ ಭೂತಂ ನ ಭವಿಷ್ಯತಿ ॥ ೪೬ ॥

ಸತ್ಯಂ ಸತ್ಯಂ ಪುನಃ ಸತ್ಯಂ ವೇದೇ ಚ ಪರಿನಿಷ್ಠಿತಂ ।
ಸರ್ವೇಷಾಂ ಗೌತಮೀ ಪುಣ್ಯಾ ಇತ್ಯುಕ್ತ್ವಾಂತರಧೀಯತ ॥ ೪೭ ॥

೪೩-೪೪. ಈ ಗಂಗಾನದಿಯಿಂದ ಹತ್ತುಗಾವುದದೂರದ ಒಳಗೆ ವಾಸಿಸುವವರು ಮಹಾಪಾಪಿಗಳಾಗಿದ್ದರೂ ಸಹ ಗಂಗಾನದಿಯಲ್ಲಿ ಸ್ನಾನಮಾಡಿದುದರಿಂದ ಪರಿಶುದ್ಧರಾಗಿ ಕೊನೆಯಲ್ಲಿ ಅವರೂ ಅವರ ಪಿತೃಗಳೂ ಮುಕ್ತಿಯನ್ನು ಪಡೆಯುವಂತಾಗಲಿ.

೪೫. ಸ್ವರ್ಗ, ಮರ್ತ್ಯಲೋಕ, ಪಾತಾಳಲೋಕ ಇವುಗಳಲ್ಲಿನ ತೀರ್ಥಗಳೆಲ್ಲವನ್ನೂ ತಕ್ಕಡಿಯ ಒಂದುಕಡೆಯಲ್ಲಿಟ್ಟು ಈ ಗಂಗೆಯನ್ನು ಮತ್ತೊಂದೆಡೆಯಲ್ಲಿಟ್ಟು ತೂಗಿದರೆ ಈ ಗಂಗೆಯೇ ತೂಕದಲ್ಲಿ ಎಷ್ಟೋಪಾಲು ಹೆಚ್ಚಾಗುವಳು. ಓ ಶಂಕರನೇ, ಇದು ನಿನ್ನ ಮಹಿಮೆಯು. ಇದೋ ನಿನಗೆ ನಮಸ್ಕಾರವು ಎಂದನು.

೪೬-೪೭. ಗೌತಮನ ಆಮಾತನ್ನು ಕೇಳಿ ಶಿವನು ಹಾಗೆಯೇ ಆಗಲಿ ಎಂದು ಹೇಳಿ ಮತ್ತಿಂತೆಂದನು–ಎಲೈ ಗೌತಮ, ಈ ಗಂಗೆಗಿಂತ ಶ್ರೇಷ್ಠವಾದ ತೀರ್ಥವು ಹಿಂದೂ ಇರಲಿಲ್ಲ ಮುಂದೆಯೂ ಇರುವುದಿಲ್ಲ. ಇದು ಸತ್ಯವಾದುದು ಸಟೆಯಲ್ಲ. ವೇದವೂ ಹಾಗೆ ಗಂಗೆಯನ್ನು ಸ್ತುತಿಸುತ್ತದೆ. ನೀನು ತಂದ ಈ ಗಂಗೆಯು ಲೋಕದಲ್ಲಿ ಗೌತಮೀ ಎಂದು ಪ್ರಸಿದ್ಧವಾಗುವುದು. ಇದು ತೀರ್ಥಗಳಲ್ಲಿ ಮಹಾಪವಿತ್ರವಾದುದು, ಶ್ರೇಷ್ಠವಾದುದು ಎಂದು ಹೇಳಿ ಶಿವನು ಅಲ್ಲಿಯೇ ಅಂತರ್ಧಾನನಾದನು.

ತತೋ ಗತೇ ಭಗವತಿ ಲೋಕಪೂಜಿತೇ
ತದಾಜ್ಞಯಾ ಪೂರ್ಣಬಲಃ ಸ ಗೌತಮಃ
ಜಟಾಂ ಸಮಾದಾಯ ಸರಿದ್ವರಾಂ ತಾಂ
ಸುರೈರ್ವೃತೋ ಬ್ರಹ್ಮಗಿರಿಂ ವಿವೇಶ ಸಃ ॥ ೪೮ ॥

ತತಸ್ತು ಗೌತಮೇ ಪ್ರಾಪ್ತೇ ಜಟಾಮಾದಾಯ ನಾರದ ।
ಪುಷ್ಪವೃಷ್ಟಿರಭೂತ್ತತ್ರ ಸಮಾಜಗ್ಮುಸ್ಸುರೇಶ್ವರಾಃ ॥ ೪೯ ॥

ಋಷಯಶ್ಚ ಮಹಾಭಾಗಾ ಬ್ರಾಹ್ಮಣಾಃ ಕ್ಷತ್ರಿಯಾಸ್ತಥಾ ।
ಜಯಶಬ್ದೇನ ತಂ ವಿಪ್ರಂ ಪೂಜಯಂತೋ ಮುದಾನ್ವಿತಾಃ ॥ ೫೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ತೀರ್ಥಮಾಹಾತ್ಮ್ಯೇ ಗೌತಮ್ಯಾನಯನಂ ನಾಮ
ಪಂಚಸಪ್ತತಿತಮೋಽಧ್ಯಾಯಃ

---

೪೮. ಜಗದ್ವಂದ್ಯನಾದ ಶಿವನು ಅಂತರ್ಧಾನನಾದಮೇಲೆ ಗೌತಮ ಮುನಿಯು ಆ ದೇವನ ಅಪ್ಪಣೆಯಿಂದ ಶಕ್ತಿಸಾಮರ್ಥ್ಯಗಳು ಬಹಳವಾಗಿ ಲಭಿಸಲು, ಆ ಗೌತಮಮುನಿಯು ಗಂಗಾನದಿಯು ನೆಲಸಿರುವ ಶಿವಜಟೆಯ ಒಂದು ಭಾಗವನ್ನು ತೆಗೆದುಕೊಂಡು ದೇವತೆಗಳೊಡನೆ ಬ್ರಹ್ಮಗಿರಿಗೆ ತೆರಳಿದನು.

೪೯-೫೦. ಗೌತಮನು ಬ್ರಹ್ಮಗಿರಿಗೆ ಬಂದಕೂಡಲೇ ಅಲ್ಲಿ ದೇವಲೋಕದ ಹೂವಿನ ಸುರಿಮಳೆಯಾಯಿತು. ದೇವತೆಗಳೂ, ಋಷಿಗಳೂ, ಬ್ರಾಹ್ಮಣರೂ ಕ್ಷತ್ರಿಯರೂ ಅಲ್ಲಿಗೆ ಬಂದರು. ಹರ್ಷದಿಂದ ಅವರೆಲ್ಲರೂ ಗೌತಮನನ್ನು ಪೂಜಿಸಿ ಜಯಶಬ್ದಗಳಿಂದ ಗೌರವಿಸಿದರು, ಹೊಗಳಿದರು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಗೌತಮ್ಯಾನಯನವೆಂಬ ಎಪ್ಪತ್ತೈದನೆಯ ಅಧ್ಯಾಯವು ಮುಗಿದುದು.

ಗೌತಮೀ ಮಾಹಾತ್ಮ್ಯೆಯಲ್ಲಿ ಆರನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಷಟ್‌ಸಪ್ತತಿತಮೋಽಧ್ಯಾಯಃ

॥ ನಾರದ ಉವಾಚ ॥

ಮಹೇಶ್ವರಜಟಾಜೂಟಾದ್ಗಂಗಾಮಾದಾಯ ಗೌತಮಃ ।
ಆಗತ್ಯ ಬ್ರಹ್ಮಣಃ ಪುಣ್ಯೇ ತತಃ ಕಿಮಕರೋದ್ಗಿರೌ ॥ ೧ ॥

॥ ಬ್ರಹ್ಮೋವಾಚ ॥

ಆದಾಯ ಗೌತಮೋ ಗಂಗಾಂ ಶುಚಿಃ ಪ್ರಯತಮಾನಸಃ ।
ಪೂಜಿತೋ ದೇವಗಂಧರ್ವೈಸ್ತಥಾ ಗಿರಿನಿವಾಸಿಭಿಃ ॥ ೨ ॥

ಗಿರೇರ್ಮೂರ್ಧ್ನಿ ಜಟಾಂ ಸ್ಥಾಪ್ಯ ಸ್ಮರನ್ದೇವಂ ತ್ರಿಲೋಚನಂ ।
ಉವಾಚ ಪ್ರಾಂಜಲಿರ್ಭೂತ್ವಾ ಗಂಗಾಂ ಸ ದ್ವಿಜಸತ್ತಮಃ ॥ ೩ ॥

ಎಪ್ಪತ್ತಾರನೆಯ ಅಧ್ಯಾಯವು

೧. ನಾರದಮುನಿಯು ಪ್ರಶ್ನಿಸಿದನು—ಓ ಬ್ರಹ್ಮದೇವ, ಮಹೇಶ್ವರನ ಜಟಾಸಮೂಹದಿಂದ ಗಂಗೆಯನ್ನು ಕರೆದುಕೊಂಡು ಬಂದಮೇಲೆ ಗೌತಮನು ಪವಿತ್ರವಾದಾ ಬ್ರಹ್ಮಗಿರಿಯಲ್ಲೇನು ಮಾಡಿದನು? ಹೇಳೆನಲು,

೨-೩. ಬ್ರಹ್ಮನು ಹೇಳಿದನು—ಎಲೈ ನಾರದ, ಶುಚಿಯಾಗಿಯೂ ಜಿತೇಂದ್ರಿಯನೂ ಆದ ಆ ಗೌತಮನು ಗಂಗೆಯನ್ನು ಕರೆದುಕೊಂಡುಬಂದು ದೇವತೆಗಳಿಂದಲೂ, ಗಿರಿವಾಸಿಗಳಾದ ಮುನಿಗಳಿಂದಲೂ, ಗಂಧರ್ವರಿಂದಲೂ

|| ಗೌತಮ ಉವಾಚ ||

ತ್ರಿಲೋಚನಜಟೋದ್ಭೂತೇ ಸರ್ವಕಾಮಪ್ರದಾಯಿನಿ ।
ಕ್ಷಮಸ್ವ ಮಾತಃ ಶಾಂತಾಸಿ ಸುಖಂ ಯಾಹಿ ಹಿತಂ ಕುರು || ೪ ||

|| ಬ್ರಹ್ಮೋವಾಚ ||

ಏವಮುಕ್ತಾ ಗೌತಮೇನ ಗಂಗಾ ಪ್ರೋವಾಚ ಗೌತಮಂ ।
ದಿವ್ಯರೂಪಧರಾ ದೇವೀ ದಿವ್ಯಸ್ರಗನುಲೇಪನಾ || ೫ ||

|| ಗಂಗೋವಾಚ ||

ಗಚ್ಛೇಯಂ ದೇವಸದನಮಥವಾಪಿ ಕಮಂಡಲುಂ ।
ರಸಾತಲಂ ವಾ ಗಚ್ಛೇಯಂ ಜಾತಸ್ತ್ವಂ ಸತ್ಯವಾಗಸಿ || ೬ ||

ಗೌರವಿಸಲ್ಪಟ್ಟು ಆ ಬ್ರಹ್ಮಗಿರಿಯ ಮೇಲುಶಿಖರದಲ್ಲಿ ಗಂಗಾಜಟೆಯನ್ನು ಸ್ಥಾಪಿಸಿ ತ್ರಿಲೋಚನನನ್ನು ಧ್ಯಾನಿಸುತ್ತಾ ಗಂಗೆಯನ್ನು ಕುರಿತು ಇಂತೆಂದನು.

೪. ಪರಮೇಶ್ವರನ ಜಟೆಯಿಂದ ಜನಿಸಿದವಳೂ, ಸಕಲೇಷ್ಟಾರ್ಥಗಳನ್ನು ಕೊಡುವವಳೂ ಆದ ಓ ಗಂಗೆ, ಕ್ಷಮಿಸು, ಓ ಮಾತೆ, ಶಾಂತಳಾಗಿಯೂ ಸುಖವಾಗಿಯೂ ಹರಿದುಕೊಂಡು ಹೋಗುತ್ತಾ ಜನಗಳಿಗೆ ಹಿತವನ್ನು ಮಾಡುತ್ತಿರು.

೫. ಹೀಗೆ ಗೌತಮನು ಹೇಳಲು ಆಗ ಗಂಗೆಯು ದಿವ್ಯರೂಪವನ್ನು ಧರಿಸಿ ದಿವ್ಯಹಾರ, ದಿವ್ಯಗಂಧ, ದಿವ್ಯಪೀತಾಂಬರಗಳಿಂದೊಪ್ಪುತ್ತಾ ಪ್ರತ್ಯಕ್ಷಳಾಗಿ ಆ ಮುನಿಯನ್ನು ಕುರಿತು,

೬. ಎಲೈ ಮುನಿ, ನೀನು ಸತ್ಯವಂತನು. ನಾನು ದೇವಲೋಕಕ್ಕೆ ಹರಿದುಹೋಗಲೇ ? ಪುನಃ ಬ್ರಹ್ಮಕಮಂಡಲುವಿಗೆ ಹೋಗಲೇ ? ಅಥವಾ ಪಾತಾಳಕ್ಕೆ ಹರಿದುಹೋಗಲೇ ? ಏನುಮಾಡಲಿ ಹೇಳೆನಲು.

॥ ಗೌತಮ ಉವಾಚ ॥

ತ್ರಯಾಣಾಮುಪಕಾರಾರ್ಥಂ ಲೋಕಾನಾಂ ಯಾಚಿತಾ ಮಯಾ ।
ಶಂಭುನಾ ಚ ತಥಾ ದತ್ತಾ ದೇವಿ ತನ್ನಾನ್ಯಥಾ ಭವೇತ್ ॥ ೭ ॥

॥ ಬ್ರಹ್ಮೋವಾಚ ॥

ತದ್ಗೌತಮವಚಃ ಶ್ರುತ್ವಾ ಗಂಗಾಂ ಮೇನೇ ದ್ವಿಜೇರಿತಂ ।
ತ್ರೇಧಾತ್ಮಾನಂ ವಿಭಜ್ಯಾಥ ಸ್ವರ್ಗಮರ್ತ್ಯರಸಾತಲೇ ॥ ೮ ॥

ಸ್ವರ್ಗೇ ಚತುರ್ಧಾ ವ್ಯಗಮತ್ಸಪ್ತಧಾ ಮರ್ತ್ಯಮಂಡಲೇ ।
ರಸಾತಲೇ ಚತುರ್ಧೈವ ಸೈವಂ ಪಂಚದಶಾಕೃತಿಃ ॥ ೯ ॥

ಸರ್ವತ್ರ ಸರ್ವಭೂತೈವ ಸರ್ವಪಾಪವಿನಾಶಿನೀ ।
ಸರ್ವಕಾಮಪ್ರದಾ ನಿತ್ಯಂ ಸೈವ ವೇದೇ ಪ್ರಗೀಯತೇ ॥ ೧೦ ॥

---

೭. ಗೌತಮನು ಹೇಳಿದನು—ಓ ದೇವಿ, ಮೂರುಲೋಕಗಳಿಗೂ ಕ್ಷೇಮವಾಗಲೆಂದು ನಾನು ಶಿವನನ್ನು ಆರಾಧಿಸಿ ಪ್ರಾರ್ಥಿಸಿ ನಿನ್ನನ್ನು ಕರೆದು ಕೊಂಡು ಬಂದಿರುವೆನು. ಶಿವನೂ ಆ ಉದ್ದೇಶದಿಂದಲೇ ನಿನ್ನನ್ನು ಕಳುಹಿಸಿ ಕೊಟ್ಟಿರುವನು, ಈ ನನ್ನ ಪ್ರಯತ್ನವು ವ್ಯರ್ಥವಾಗಬಾರದು ಅದರಂತೆ ಮಾಡು ಎಂದನು.

೮. ಗೌತಮನ ಆ ಮಾತನ್ನು ಕೇಳಿ ದೇವಿಯು ಅದರಂತೆ ಒಪ್ಪಿ ತನ್ನನ್ನು ಮೂರು ಭಾಗಗಳಾಗಿ ವಿಭಾಗಿಸಿ ಸ್ವರ್ಗಲೋಕ, ಭೂಲೋಕ, ಪಾತಾಳಗಳಲ್ಲಿ ಹರಿಯುವಂತೆ ಮಾಡಿದಳು.

೯. ಸ್ವರ್ಗದಲ್ಲಿ ನಾಲ್ಕುಭಾಗವಾಗಿ ಹರಿದಳು. ಭೂಮಿಯಲ್ಲಿ ಏಳು ಭಾಗವಾಗಿ ಹರಿದಳು, ಪಾತಾಳದಲ್ಲಿ ನಾಲ್ಕುಭಾಗಗಳಾಗಿ ಹರಿದಳು, ಹೀಗೆ ಆ ಗಂಗೆಯು ಹದಿನೈದುಭಾಗಗಳಾಗಿ ಬೇರೆಬೇರೆ ಹೆಸರುಗಳಿಂದ ಹರಿದಳು.

೧೦. ಎಲ್ಲಾ ಸ್ಥಳಗಳಲ್ಲೂ ಗಂಗೆಯು ಏಕರೂಪಿಣಿಯು, ಸಕಲಪಾಪಗಳನ್ನೂ ಹೋಗಲಾಡಿಸುವಳು, ಸಕಲ ಫಲಗಳನ್ನೂ ಕರುಣಿಸುವವಳು, ವೇದವೂ ಗಂಗೆಯನ್ನು ಸ್ತುತಿಸುವುದು.

ಮರ್ತ್ಯಾ ಮರ್ತ್ಯಗತಾಮೇವ ಪಶ್ಯಂತಿ ನ ತಲಂ ಗತಾಂ ।
ನೈವ ಸ್ವರ್ಗಗತಾಂ ಮರ್ತ್ಯಾಃ ಪಶ್ಯಂತ್ಯಜ್ಞಾನಬುದ್ಧಯಃ ॥ ೧೧ ॥

ಯಾವತ್ಸಾಗರಗಾ ದೇವೀ ತಾವದ್ದೇವಮಯೀ ಸ್ಮೃತಾ ।
ಉತ್ಸೃಷ್ಟಾ ಗೌತಮೇನೈವ ಪ್ರಾಯಾತ್ಪೂರ್ವಾರ್ಣವಂ ಪ್ರತಿ ॥ ೧೨ ॥

ತತೋ ದೇವರ್ಷಿಭಿರ್ಜುಷ್ಟಾಂ ಮಾತರಂ ಜಗತಃ ಶುಭಾಂ ।
ಗೌತಮೋ ಮುನಿಶಾರ್ದೂಲಃ ಪ್ರದಕ್ಷಿಣಮಥಾಕರೋತ್ ॥ ೧೩ ॥

ತ್ರಿಲೋಚನಂ ಸುರೇಶಾನಂ ಪ್ರಥಮಂ ಪೂಜ್ಯ ಗೌತಮಃ ।
ಉಭಯೋಸ್ತೀರಯೋಃ ಸ್ನಾನಂ ಕರೋಮೀತಿ ದಧೇ ಮತಿಂ ॥ ೧೪ ॥

ಸ್ಮೃತಮಾತ್ರಸ್ತದಾ ತತ್ರಾವಿರಾಸೀತ್ಕರುಣಾರ್ಣವಃ ।
ತತ್ರ ಸ್ನಾನಂ ಕಥಂ ಸಿಧ್ಯೇದಿತ್ಯೇವಂ ಶರ್ವಮಬ್ರವೀತ್ ॥ ೧೫ ॥

---

೧೧. ತಿಳಿವಳಿಕೆಯಿಲ್ಲದ ಮಾನವರು ಭೂಲೋಕದಲ್ಲಿರುವ ಗಂಗೆ ಯೊಂದೇ ಎಂದು ತಿಳಿಯುವರು, ಇದೇಗಂಗೆಯು ಸ್ವರ್ಗಪಾತಾಳಗಳಲ್ಲಿಯೂ ಇರುವಳೆಂದು ತಿಳಿಯುವುದಿಲ್ಲ.

೧೨. ಸಮುದ್ರವನ್ನು ಸೇರುವವರೆಗೂ ಗಂಗೆಯು ದೇವತಾಸ್ವರೂಪಳು. ಗೌತಮನಿಂದ ಬಿಡಲ್ಪಟ್ಟು ಬ್ರಹ್ಮಗಿರಿಯಿಂದ ಹರಿದು ಪೂರ್ವಸಮುದ್ರವನ್ನು ಸೇರುವಳು.

೧೩. ಆಮೇಲೆ ದೇವಮುನಿಗಳಿಂದ ಸೇವಿಸಲ್ಪಡುವ ಜಗನ್ಮಾತೆಯಾದ ಗಂಗೆಯನ್ನು ಗೌತಮಮುನಿಯು ಪ್ರದಕ್ಷಿಣೆಮಾಡಿ ನಮಸ್ಕರಿಸಿದನು.

೧೪. ದೇವದೇವನಾದ ಮಹೇಶ್ವರನನ್ನು ಮೊದಲು ಪೂಜಿಸಿ ಆ ಗೌತಮನು ಗಂಗೆಯ ಎರಡು ತೀರಗಳಲ್ಲೂ ಸ್ನಾನಮಾಡುವೆನೆಂದು ಸಂಕಲ್ಪ ಮಾಡಿದನು.

೧೫-೧೬. ಸ್ಮರಿಸಿದೊಡನೆಯೇ ಕರುಣಾಮಯನಾದಾ ಮಹಾದೇವನು ಅಲ್ಲಿ ಪ್ರತ್ಯಕ್ಷನಾದನು. ಆಗ ಗೌತಮನು ಭಕ್ತಿಯಿಂದ ಶಿರವನ್ನು ಬಗ್ಗಿಸಿ

ಕೃತಾಂಜಲಿಪುಟೋ ಭೂತ್ವಾ ಭಕ್ತಿನಮ್ರಸ್ತ್ರಿಲೋಚನಂ ॥ ೧೬ ॥

॥ ಗೌತಮ ಉವಾಚ ॥

ದೇವದೇವ ಮಹೇಶಾನ ತೀರ್ಥಸ್ನಾನವಿಧಿಂ ಮಮ ।
ಬ್ರೂಹಿ ಸಮ್ಯಙ್ಮಹೇಶಾನ ಲೋಕಾನಾಂ ಹಿತಕಾಮ್ಯಯಾ ॥ ೧೭ ॥

॥ ಶಿವ ಉವಾಚ ॥

ಮಹರ್ಷೇ ಶೃಣು ಸರ್ವಂ ಚ ವಿಧಿಂ ಗೋದಾವರೀಭವತ್ ।
ಪೂರ್ವಂ ನಾಂದೀಮುಖಂ ಕೃತ್ವಾ ದೇಹಶುದ್ಧಿಂ ವಿಧಾಯ ಚ ॥ ೧೮ ॥

ಬ್ರಾಹ್ಮಣಾನ್ಭೋಜಯಿತ್ವಾ ಚ ತೇಷಾಮಾಜ್ಞಾಂ ಪ್ರಗೃಹ್ಯ ಚ ।
ಬ್ರಹ್ಮಚರ್ಯೇಣ ಗಚ್ಛಂತಿ ಪತಿತಾಲಾಪವರ್ಜಿತಾಃ ॥ ೧೯ ॥

ಯಸ್ಯ ಹಸ್ತೌ ಚ ಪಾದೌ ಚ ಮನಶ್ಚೈವ ಸುಸಂಯತಂ ।
ವಿದ್ಯಾ ತಪಶ್ಚ ಕೀರ್ತಿಶ್ಚ ಸ ತೀರ್ಥಫಲಮಶ್ನುತೇ ॥ ೨೦ ॥

ವಿನಯದಿಂದ ಓ ದೇವ, ಗಂಗಾ ತೀರದಲ್ಲಿ ಯಾವ ವಿಧಿಯಿಂದ ಸ್ನಾನಮಾಡಿದರೆ ಫಲಸಿದ್ಧಿಯಾಗಬಹುದೆಂದು ಯೋಚಿಸಿ ಈಶ್ವರನನ್ನು ಕುರಿತು,

೧೭. ದೇವದೇವನಾದ ಓ ಮಹೇಶ್ವರ, ಲೋಕದ ಹಿತದೃಷ್ಟಿಯಿಂದ ನನಗೆ ತೀರ್ಥಸ್ನಾನದ ವಿಧಿಯನ್ನು ದಯವಿಟ್ಟು ಹೇಳಬೇಕೆಂದು ಪ್ರಾರ್ಥಿಸಲು,

೧೮-೧೯. ಶಿವನಿಂತೆಂದನು—ಎಲೈ ಮಹರ್ಷಿ, ಗಂಗಾಸ್ನಾನದ ಮತ್ತು ಯಾತ್ರೆಯ ವಿಧಿಯೆಲ್ಲವನ್ನೂ ಹೇಳುವೆನು ಕೇಳು. ಯಾತ್ರೆಗೆ ಹೊರಡುವ ಮೊದಲು ನಾಂದೀಮುಖ ಮೊದಲಾದ ಮಂಗಳಕರ್ಮವನ್ನು ಮಾಡಿ, ದೇಹ ಶುದ್ಧಿಯನ್ನು ಮಾಡಿಕೊಂಡು ಆದಿನ ಬ್ರಾಹ್ಮಣರಿಗೆ ಭೋಜನಮಾಡಿಸಬೇಕು. ಆಮೇಲೆ ಅವರ ಆಜ್ಞೆಯನ್ನು ಪಡೆದು ಜಿತೇಂದ್ರಿಯನಾಗಿ ಯಾತ್ರೆಯನ್ನು ಮಾಡಬೇಕು, ಮಧ್ಯದಲ್ಲಿ ಪಾಪಿಗಳ ಸಹವಾಸವನ್ನು ಬೆಳೆಸಬಾರದು.

೨೦. ಯಾವನ ಕೈಕಾಲು ಮನಸ್ಸು ಇವು ಪರಿಶುದ್ಧವಾಗಿದ್ದು ವಿದ್ಯಾವಂತನಾಗಿಯೂ, ತಪಸ್ವಿಯಾಗಿಯೂ, ಕೀರ್ತಿಶಾಲಿಯಾಗಿಯೂ ಇರುವನೋ ಅವನ ತೀರ್ಥಯಾತ್ರೆಯ ಫಲವನ್ನು ಸಂಪೂರ್ಣವಾಗಿ ಪಡೆಯುವನು.

ಭಾವದುಷ್ಟಿಂ ಪರಿತ್ಯಜ್ಯ ಸ್ವಧರ್ಮಪರಿನಿಷ್ಠಿತಃ ।
ಶ್ರಾಂತಸಂವಾಹನಂ ಕುರ್ವನ್ದದ್ಯಾದನ್ನಂ ಯಥೋಚಿತಂ ॥ ೨೧ ॥

ಅಕಿಂಚನೇಭ್ಯಃ ಸಾಧುಭ್ಯೋ ದದ್ಯಾದ್ವಸ್ತ್ರಾಣಿ ಕಂಬಲಾನ್ ।
ಶೃಣ್ವನ್ಹರಿಕಥಾಂ ದಿವ್ಯಾಂ ತಥಾ ಗಂಗಾಸಮುದ್ಭವಾಂ ।
ಅನೇನ ವಿಧಿನಾ ಗಚ್ಛನ್ಸಮ್ಯಕ್ತೀರ್ಥಫಲಂ ಲಭೇತ್ ॥ ೨೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ ತೀರ್ಥಮಾಹಾತ್ಮ್ಯೇ ಷಟ್ಸಪ್ತತಿತಮೋಽಧ್ಯಾಯಃ

---

೨೧. ಕೋಪತಾಪದ್ವೇಷ ಮೊದಲಾದ ದುಷ್ಟ ಭಾವಗಳಿಲ್ಲದೆ ಸ್ವಧರ್ಮವನ್ನಾಚರಿಸುತ್ತಾ, ದಾರಿಯಲ್ಲಿ ಬಳಲಿದವರಿಗೆ ಸಹಾಯಮಾಡುತ್ತಾ, ದರಿದ್ರರಾದ ಸಾಧುಗಳಿಗೆ ಉಚಿತವಾಗಿ ಅನ್ನದಾನವನ್ನು ಮಾಡಿ ಬಟ್ಟೆ ಕಂಬಳಿ ಮೊದಲಾದುವುಗಳನ್ನು ಕೊಡಬೇಕು.

೨೨. ಹರಿಕಥೆಯನ್ನೂ ಗಂಗೆಯು ಜನಿಸಿದ ದಿವ್ಯಕಥೆಯನ್ನೂ ಕೇಳುತ್ತಾ ತೀರ್ಥಯಾತ್ರೆಯನ್ನು ಮಾಡಬೇಕು. ಈ ವಿಧಿಯಿಂದ ಯಾತ್ರೆ ಮಾಡಿದರೆ ಸಂಪೂರ್ಣವಾದ ತೀರ್ಥಯಾತ್ರಾಫಲವು ಲಭಿಸುವುದು ಎಂದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ತೀರ್ಥಮಹಾತ್ಮ್ಯನಿರೂಪಣವೆಂಬ ಎಪ್ಪತ್ತಾರನೆಯ ಅಧ್ಯಾಯವು ಮುಗಿದುದು.

ಗೌತಮೀ ಮಾಹಾತ್ಮ್ಯೆಯಲ್ಲಿ ಏಳನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತಸಪ್ತತಿತಮೋಽಧ್ಯಾಯ

॥ ಬ್ರಹ್ಮೋವಾಚ ॥

ತ್ರ್ಯಂಬಕೇಶ್ವ ಇತಿ ಪ್ರಾಹ ಗೌತಮಂ ಮುನಿಭಿರ್ವೃತಂ ॥ ೧ ॥

॥ ಶಿವ ಉವಾಚ ॥

ದ್ವಿಹಸ್ತಮಾತ್ರೇ ತೀರ್ಥಾನಿ ಸಂಭವಿಷ್ಯಂತಿ ಗೌತಮ ।
ಸರ್ವತ್ರಾಹಂ ಸಂನಿಹಿತಃ ಸರ್ವಕಾಮಪ್ರದಸ್ತಥಾ ॥ ೨ ॥

॥ ಬ್ರಹ್ಮೋವಾಚ ॥

ಗಂಗಾದ್ವಾರೇ ಪ್ರಯಾಗೇ ಚ ತಥಾ ಸಾಗರಸಂಗಮೇ ।
ಏತೇಷು ಪುಣ್ಯದಾ ಪುಂಸಾಂ ಮುಕ್ತಿದಾ ಸಾ ಭಗೀರಥೀ ॥ ೩ ॥

ಎಪ್ಪತ್ತೇಳನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಶಿವನು ಮುನಿಗಳೊಡನೆ ಕೂಡಿರುವ ಗೌತಮನನ್ನು ಕುರಿತು ಎಲೈ ಗೌತಮನೇ, ಎರಡುಮೂರು ಪ್ರಮಾಣದ ಸ್ಥಳದಲ್ಲಿ ತೀರ್ಥಗಳು ಸಂಭವಿಸುವುವು. ತೀರ್ಥಗಳಲ್ಲೆಲ್ಲಾ ನಾನು ನೆಲೆಸಿದ್ದು ಜನರಿಗೆ ಸಕಲಫಲಗಳನ್ನೂ ಕರುಣಿಸುವೆನು.

೨. ಗಂಗಾದ್ವಾರ, ಪ್ರಯಾಗ, ಸಮುದ್ರಸಂಗಮ ಈ ಸ್ಥಳಗಳಲ್ಲಿ, ಭಗೀರಥನು ಕರೆದುಕೊಂಡು ಬಂದ ಭಾಗೀರಥಿಯು ಜನರಿಗೆ ವಿಶೇಷವಾಗಿ ಪುಣ್ಯವನ್ನೂ ಮುಕ್ತಿಯನ್ನೂ ಉಂಟುಮಾಡುವಳು.

೩. ನರ್ಮದಾನದಿಯು ಅಮರಕಂಟಗಿರಿಯಲ್ಲಿ ಹರಿಯುತ್ತಿರುವಾಗ ವಿಶೇಷ ಪುಣ್ಯಕರಳು. ಯಮುನೆಯು ಗಂಗೆಯೊಡನೆ ಸೇರಿದ ಪ್ರಯಾಗದಲ್ಲಿ

ನರ್ಮದಾ ತು ಸರಿಚ್ಛ್ರೇಷ್ಠಾ ಪರ್ವತೇಽಮರಕಂಟಕೇ ।
ಯಮುನಾ ಸಂಗತಾ ತತ್ರ ಪ್ರಭಾಸೇ ತು ಸರಸ್ವತೀ　　॥ ೪ ॥

ಕೃಷ್ಣಾ ಭೀಮರಥೀ ಚೈವ ತುಂಗಭದ್ರಾ ತು ನಾರದ ।
ತಿಸೃಣಾಂ ಸಂಗಮೋ ಯತ್ರ ತತ್ತೀರ್ಥಂ ಮುಕ್ತಿದಂ ನೃಣಾಂ　　॥ ೫ ॥

ಪಯೋಷ್ಣೀ ಸಂಗತಾ ಯತ್ರ ತತ್ರತ್ಯಾ ತಚ್ಚ ಮುಕ್ತಿದಂ ।
ಇಯಂ ತು ಗೌತಮೀ ವತ್ಸ ಯತ್ರ ಕ್ವಾಪಿ ಮಮಾಜ್ಞಯಾ　　॥ ೬ ॥

ಸರ್ವೇಷಾಂ ಸರ್ವದಾ ನೃಣಾಂ ಸ್ನಾನಾನ್ಮುಕ್ತಿಂ ಪ್ರದಾಸ್ಯತಿ ।
ಕಿಂಚಿತ್ಕಾಲೇ ಪುಣ್ಯತಮಂ ಕಿಂಚಿತ್ತೀರ್ಥಂ ಸುರಾಗಮೇ　　॥ ೭ ॥

ಸರ್ವೇಷಾಂ ಸರ್ವದಾ ತೀರ್ಥಂ ಗೌತಮೀ ನಾತ್ರ ಸಂಶಯಃ ।
ತಿಸ್ರಃ ಕೋಟ್ಯೋಽರ್ಧಕೋಟೀ ಚ ಯೋಜನಾನಾಂ ಶತದ್ವಯೇ　　॥ ೮ ॥

ಪುಣ್ಯಕರಳು. ಸರಸ್ವತೀನದಿಯು ಪ್ರಭಾಸತೀರ್ಥದಲ್ಲಿ ವಿಶೇಷವಾಗಿ ಪುಣ್ಯವನ್ನುಂಟುಮಾಡುವಳು.

೪-೫. ಕೃಷ್ಣಾನದಿ, ಭೀಮರಥೀ, ತುಂಗಭದ್ರೆ ಈ ಮೂರು ನದಿಗಳು ಸೇರಿದ ಸಂಗಮಸ್ಥಳವು ಮಹಾಪುಣ್ಯಕರವಾದುದು, ಮುಕ್ತಿಕರವಾದ ತೀರ್ಥಕ್ಷೇತ್ರವದು. ಪಯೋಷ್ಣೀನದಿಯು ತಪತೀನದಿಯೊಡನೆ ಸೇರಿದ ಸಂಗಮಸ್ಥಳವು ಮುಕ್ತಿದಾಯಕವು.

೬. ಎಲೈ ಗೌತಮ, ಈ ಗೌತಮೀನದಿಯು ನನ್ನಾಜ್ಞೆಯಂತೆ ಸ್ನಾನಮಾಡಿದ ಜನಗಳಿಗೆ ಎಲ್ಲಾ ಸ್ಥಳಗಳಲ್ಲೂ ಮುಕ್ತಿಯನ್ನುಂಟುಮಾಡುವುದು.

೭. ಕೆಲವುತೀರ್ಥಗಳು ಕೆಲವುಕಾಲಗಳಲ್ಲಿ ಮಾತ್ರ ಪುಣ್ಯಪ್ರದವಾಗಿರುವುವು. ಕೆಲವು ಸಂಗಮದಲ್ಲಿ ಮಾತ್ರ ಪುಣ್ಯಪ್ರದಗಳಾಗಿರುವುವು. ಈ ಗೌತಮೀನದಿಯು ಎಲ್ಲಾ ಕಾಲಗಳಲ್ಲೂ ಎಲ್ಲಾ ಸ್ಥಳಗಳಲ್ಲೂ ಪುಣ್ಯಪ್ರದವಾದುದು, ಇದರಲ್ಲಿ ಸಂಶಯವಿಲ್ಲ.

೮. ಈ ಗೌತಮೀನದಿಯ ತೀರದಲ್ಲಿ ಇನ್ನೂರುಗಾವುದದೊಳಗೆ ಮೂರೂವರೆಕೋಟಿ ತೀರ್ಥಕ್ಷೇತ್ರಗಳು ಇರುವುವು.

ತೀರ್ಥಾನಿ ಮುನಿಶಾರ್ದೂಲ ಸಂಭವಿಷ್ಯಂತಿ ಗೌತಮ ।
ಇಯಂ ಮಹೇಶ್ವರೀ ಗಂಗಾ ಗೌತಮೀ ವೈಷ್ಣವೀತಿ ಚ ॥ ೯ ॥

ಬ್ರಾಹ್ಮೀ ಗೋದಾವರೀ ನಂದಾ ಸುನಂದಾ ಕಾಮದಾಯಿನೀ ।
ಬ್ರಹ್ಮತೇಜಃಸಮಾನೀತಾ ಸರ್ವಪಾಪಪ್ರಣಾಶನೀ ॥ ೧೦ ॥

ಸ್ಮರಣಾದೇವ ಪಾಪೌಘಹಂತ್ರೀ ಮಮ ಸದಾ ಪ್ರಿಯಾ ।
ಪಂಚಾನಾಮಪಿ ಭೂತಾನಾಮಾಪಃ ಶ್ರೇಷ್ಠತ್ವಮಾಗತಾಃ ॥ ೧೧ ॥

ತತ್ರಾಪಿ ತೀರ್ಥಭೂತಾಸ್ತು ತಸ್ಮಾದಾಪಃ ಪರಾಃ ಸ್ಮೃತಾಃ ।
ತಾಸಾಂ ಭಾಗೀರಥೀ ಶ್ರೇಷ್ಠಾ ತಾಭ್ಯೋಽಪಿ ಗೌತಮೀ ತಥಾ ॥ ೧೨ ॥

ಆನೀತಾ ಸಜಟಾ ಗಂಗಾ ಅಸ್ಯಾ ನಾನ್ಯಚ್ಛುಭಾವಹಂ ।
ಸ್ವರ್ಗೇ ಭುವಿ ತಲೇ ವಾಪಿ ತೀರ್ಥಂ ಸರ್ವಾರ್ಥದಂ ಮುನೇ ॥ ೧೩ ॥

೯-೧೦. ಈ ನದಿಯನ್ನು, ಮಹೇಶ್ವರನ ಜಟೆಯಿಂದ ಬಂದುದರಿಂದ ಮಾಹೇಶ್ವರೀ ಎಂದೂ, ಗೌತಮನು ತನ್ನ ತೇಜಸ್ಸಿನಿಂದ ಶಿವನನ್ನಾರಾಧಿಸಿ ಕರೆದುಕೊಂಡು ಬಂದುದರಿಂದ ಗೌತಮೀಯೆಂದೂ, ವಿಷ್ಣುವಿನ ಪಾದದಿಂದ ಹೊರಟುದುದರಿಂದ ವೈಷ್ಣವೀಯೆಂದೂ, ಬ್ರಹ್ಮನ ಕಮಂಡಲುವಿನಿಂದ ಜನಿಸಿ ದುದರಿಂದ ಬ್ರಾಹ್ಮಿಯೆಂದೂ ಗೋದಾವರೀ, ನಂದಾ, ಸುನಂದಾನದೀ ಎಂಬ ಹೆಸರುಗಳಿಂದಲೂ ಕರೆಯುವರು. ಬ್ರಹ್ಮತೇಜಸ್ಸಿನಿಂದ ಭೂಮಿಗೆ ಬಂದು ದರಿಂದ ಈ ನದಿಯು ಪಾಪಗಳೆಲ್ಲವನ್ನೂ ನಾಶಮಾಡುವಳು. ಬೇಕಾದ ಇಷ್ಟಾರ್ಥಗಳನ್ನುಂಟುಮಾಡುವಳು. ನನಗೆ (ಶಿವನಿಗೆ) ತುಂಬಾ ಪ್ರಿಯಳು. ಈ ನದಿಯ ನಾಮಸ್ಮರಣವನ್ನು ಮಾಡಿದಮಾತ್ರದಿಂದ ಪಾಪಗಳೆಲ್ಲವೂ ನಾಶ ವಾಗುವುವು.

೧೧. ಪಂಚಭೂತಗಳಲ್ಲಿ ಜಲವು ಶ್ರೇಷ್ಠವಾದುದು, ಅದರಲ್ಲಿಯೂ ತೀರ್ಥರೂಪವಾದ ಜಲವು ಮತ್ತೂ ಶ್ರೇಷ್ಠವಾದುದು.

೧೨-೧೩. ಆ ಜಲತೀರ್ಥಗಳಲ್ಲೂ ಭಾಗೀರಥಿಯು ಶ್ರೇಷ್ಠವಾದುದು, ತೀರ್ಥಜಲ, ಭಾಗೀರಥೀ ಇವೆಲ್ಲವುಗಳಿಗಿಂತಲೂ ಶಿವನ ಜಟೆಯೊಡನೆ ಬಂದ ಗೌತಮೀ ನದಿಯು ಅತ್ಯಂತ ಶ್ರೇಷ್ಠವಾದುದು. ಸ್ವರ್ಗ, ಭೂಮಿ, ಪಾತಾಳ ಗಳಲ್ಲಿ ಗೌತಮಿಯಂತಹ ಸರ್ವಫಲದಾಯಕವಾದ ತೀರ್ಥವು ಬೇರೊಂದಿಲ್ಲ ಎಂದನು.

॥ ಬ್ರಹ್ಮೋವಾಚ ॥

ಇತ್ಯೇತತ್ಕಥಿತಂ ಪುತ್ರ ಗೌತಮಾಯ ಮಹಾತ್ಮನೇ ।
ಸಾಕ್ಷಾದ್ಧರೇಣ ತುಷ್ಟೇನ ಮಯಾ ತವ ನಿವೇದಿತಂ ॥ ೧೪ ॥

ಏವಂ ಸಾ ಗೌತಮೀ ಗಂಗಾ ಸರ್ವೇಭ್ಯೋಽಪ್ಯಧಿಕಾ ಮತಾ ।
ತತ್ಸ್ವರೂಪಂ ಚ ಕಥಿತಂ ಕುತೋಽನ್ಯಾ ಶ್ರವಣಸ್ಪೃಹಾ ॥ ೧೫ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ತೀರ್ಥಮಾಹಾತ್ಮ್ಯೇ ಸಪ್ತಸಪ್ತತಿತಮೋಽಧ್ಯಾಯಃ

---

೧೪. ಎಲೈ ನಾರದ, ಹೀಗೆ ಗೌತಮನ ಭಕ್ತಿಗೆ ಸಂತುಷ್ಟನಾದ ಹರನು ಸಾಕ್ಷಾತ್ತಾಗಿ ತಾನೇ ಆ ಮಹಾತ್ಮನಾದ ಮುನಿಗೆ ಈ ವಿಷಯವನ್ನೆಲ್ಲಾ ಹೇಳಿದನು, ಅದನ್ನು ನಿನಗೆ ನಾನು ಹೇಳಿರುವೆನು.

೧೫. ಗೌತಮಿಯೆಂಬ ಪ್ರಸಿದ್ಧವಾದ ಗಂಗಾನದಿಯು ಸರ್ವಶ್ರೇಷ್ಠವಾದುದು. ಈರೀತಿಯಾಗಿ ಆ ನದಿಯ ಸ್ವರೂಪವನ್ನೂ ನಿನಗೆ ಹೇಳಿರುವೆನು, ಇನ್ನೇನನ್ನು ಕೇಳಬೇಕೆಂದಿರುವೆ ? ಎಂದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ತೀರ್ಥಮಹಾತ್ಮ್ಯವೆಂಬ ಎಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

ಗೌತಮೀ ಮಾಹಾತ್ಮ್ಯಯಲ್ಲಿ ಎಂಟನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಅಷ್ಟಸಪ್ತತಿತಮೋಽಧ್ಯಾಯಃ

॥ ನಾರದ ಉವಾಚ ॥

ದ್ವಿವಿಧಾ ಸ್ಯೈವ ಗದಿತಾ ಏಕಾಪಿ ಸುರಸತ್ತಮ ।
ಏಕೋ ಭೇದಸ್ತು ಕಥಿತೋ ಬ್ರಾಹ್ಮಣೇನಾಹೃತೋ ಯತಃ ॥ ೧ ॥

ಕ್ಷತ್ರಿಯೇಣಾಪರೋಽಸ್ಯಂಶೋ ಜಟಾಸ್ವೇವ ವ್ಯವಸ್ಥಿತಃ ।
ಭವಸ್ಯ ದೇವದೇವಸ್ಯ ಆಹೃತಸ್ತದ್ವದಸ್ವ ಮೇ ॥ ೨ ॥

ಎಪ್ಪತ್ತೆಂಟನೆಯ ಅಧ್ಯಾಯವು

೧. ನಾರದಮುನಿಯು ಕೇಳಿದನು—ಓ ದೇವೋತ್ತಮನಾದ ಬ್ರಹ್ಮ ದೇವ, ಏಕರೂಪಳಾದ ಗಂಗೆಯು ಎರಡು ಭಾಗವಾಗಿರುವುದೆಂದು ಹಿಂದೆ ಹೇಳಿರುವೆ. ಅದರಲ್ಲಿ ಬ್ರಾಹ್ಮಣನು (ಗೌತಮನು) ಕರೆದುತಂದ ಒಂದುಭಾಗದ ಕಥೆಯನ್ನು ಮಾತ್ರ ಈಗ ಹೇಳಿರುವೆ.

೨. ಶಿವನ ಜಟೆಯಲ್ಲಿದ್ದ ಗಂಗೆಯ ಎರಡನೆಯ ಭಾಗವನ್ನು ಕ್ಷತ್ರಿಯನು (ಭಗೀರಥನು) ಭೂಮಿಗೆ ಕರೆದುಕೊಂಡುಬಂದ ಇತಿಹಾಸವನ್ನು ಈಗ ಹೇಳು ಎನಲು,

॥ ಬ್ರಹ್ಮೋವಾಚ ॥

ವೈವಸ್ವತಾನ್ವಯೇ ಜಾತ ಇಕ್ಷ್ವಾಕುಕುಲಸಂಭವಃ ।
ಪುರಾ ವೈ ಸಗರೋ ನಾಮ ರಾಜಾಸೀದತಿಧಾರ್ಮಿಕಃ ॥ ೩ ॥

ಯಜ್ವಾ ದಾನಪರೋ ನಿತ್ಯಂ ಧರ್ಮಾಚಾರವಿಚಾರವಾನ್ ।
ತಸ್ಯ ಭಾರ್ಯಾದ್ವಯಂ ಚಾಸೀತ್ಪತಿಭಕ್ತಿಪರಾಯಣಂ ॥ ೪ ॥

ತಸ್ಯ ವೈ ಸಂತತಿರ್ನಾಭೂದಿತಿ ಚಿಂತಾಪರೋಽಭವತ್ ।
ವಸಿಷ್ಠಂ ಗೃಹಮಾಹೂಯ ಸಂಪೂಜ್ಯ ವಿಧಿವತ್ತತಃ ॥ ೫ ॥

ಉವಾಚ ವಚನಂ ರಾಜಾ ಸಂತತೇಃ ಕಾರಣಂ ಪ್ರತಿ ।
ಇತಿ ತದ್ವಚನಂ ಶ್ರುತ್ವಾ ಧ್ಯಾತ್ವಾ ರಾಜಾನಮಬ್ರವೀತ್ ॥ ೬ ॥

॥ ವಸಿಷ್ಠ ಉವಾಚ ॥

ಸಪತ್ನೀಕಃ ಸದಾ ರಾಜನ್ನೃಷಿಪೂಜಾಪರೋ ಭವ ॥ ೭ ॥

---

೩. ಬ್ರಹ್ಮನಿಂತೆಂದನು—ಎಲೈ ನಾರದ, ಹಿಂದೆ ಸಗರನೆಂಬ ಧಾರ್ಮಿಕ ನಾದ ರಾಜನೋರ್ವನಿದ್ದನು, ಅವನು ಸೂರ್ಯವಂಶದಲ್ಲಿನ ಇಕ್ಷ್ವಾಕುಕುಲ ದಲ್ಲಿ ಜನಿಸಿದ ಅರಸನು.

೪. ಆ ಸಗರನು ಅನೇಕ ಯಾಗಗಳನ್ನು ಮಾಡಿದ್ದನು, ಮಹಾ ಉದಾರಿಯು. ಧರ್ಮಾಚರಣೆಯಲ್ಲಾಸಕ್ತನು, ಧರ್ಮವನ್ನು ಪರಿಶೀಲಿಸು ತ್ತಿದ್ದನು. ಅವನಿಗೆ ಪತಿವ್ರತೆಯರಾದ ಹೆಂಡಿರು ಈರ್ವರು ಇದ್ದರು.

೫. ಆ ಸಗರನಿಗೆ ಬಹಳಕಾಲದವರೆಗೆ ಮಕ್ಕಳಾಗಲಿಲ್ಲ. ಅದರಿಂದ ಚಿಂತೆಗೊಳಗಾಗಿ ಆ ರಾಜನು ಕುಲಗುರುವಾದ ವಸಿಷ್ಠಮುನಿಯನ್ನು ಅರಮನೆಗೆ ಕರೆಸಿ, ವಿಧಿವತ್ತಾಗಿ ಪೂಜಿಸಿ ತನಗೆ ಮಕ್ಕಳಾಗಲು ಏನುಮಾಡಬೇಕೆಂದು ಪ್ರಶ್ನಿಸಿದನು.

೬-೮. ರಾಜನ ಆ ಮಾತನ್ನು ಕೇಳಿ ವಸಿಷ್ಠಮುನಿಯು ಧ್ಯಾನದೃಷ್ಟಿ ಯಿಂದ ಅರಿತು ಎಲೈರಾಜ, ಇನ್ನು ಮುಂದೆ ಸದಾ ಋಷಿಗಳನ್ನು ಭಕ್ತಿಯಿಂದ

॥ ಬ್ರಹ್ಮೋವಾಚ ॥

ಇತ್ಯುಕ್ತ್ವಾ ಸ ಮುನಿರ್ವಿಪ್ರ ಯಥಾಸ್ಥಾನಂ ಜಗಾಮ ಹ ।
ಏಕದಾ ತಸ್ಯ ರಾಜರ್ಷೇರ್ಗೃಹಮಾಗಾತ್ತಪೋನಿಧಿಃ ॥ ೮ ॥

ತಸ್ಯರ್ಷೇಃ ಪೂಜನಂ ಚಕ್ರೇ ಸ ಸಂತುಷ್ಟೋಽಬ್ರವೀದ್ವಚಃ ।
ವರಂ ಬ್ರೂಹಿ ಮಹಾಭಾಗೇತ್ಯುಕ್ತೇ ಪುತ್ರಾನ್ಸ ಚಾವೃಣೋತ್ ॥ ೯ ॥

ಸ ಮುನಿಃ ಪ್ರಾಹ ರಾಜಾನಮೇಕಸ್ಯಾಂ ವಂಶಧಾರಕಃ ।
ಪುತ್ರೋ ಭೂಯಾತ್ತಥಾನ್ಯಸ್ಯಾಂ ಷಷ್ಟಿಸಾಹಸ್ರಕಂ ಸುತಾಃ ॥ ೧೦ ॥

ವರಂ ದತ್ವಾ ಮುನೌ ಯಾತೇ ಪುತ್ರಾ ಜಾತಾಃ ಸಹಸ್ರಶಃ ।
ಸ ಯಜ್ಞಾನ್ಸುಬಹೂಂಶ್ಚಕ್ರೇ ಹಯಮೇಧಾನ್ಸುದಕ್ಷಿಣಾನ್ ॥ ೧೧ ॥

ಪೂಜಿಸುತ್ತಿರು, ಆದರಿಂದ ನಿನಗೆ ಮಕ್ಕಳಾಗುವುದು ಎಂದು ಹೇಳಿ ವಸಿಷ್ಠನು ತನ್ನಾಶ್ರಮಕ್ಕೆ ಹೊರಟುಹೋದನು. ಆಮೇಲೊಂದುದಿನ ತಪಸ್ವಿಯಾದ ಮಹರ್ಷಿಯು ಸಗರರಾಜನ ಅರಮನೆಗೆ ಬಂದನು.

೯. ಆ ಮಹರ್ಷಿಯನ್ನು ಭಕ್ತಿಯಿಂದ ಸಗರರಾಜನು ಅರ್ಚಿಸಿದನು. ಆ ಮುನಿಯು ಸಂತುಷ್ಟನಾಗಿ ಬೇಕಾದ ವರವನ್ನು ಕೇಳು ಎನ್ನಲು, ಆಗ ಸಗರರಾಜನು ನನಗೆ ಮಕ್ಕಳಾಗುವಂತೆ ಅನುಗ್ರಹಿಸು ಎಂದು ಕೇಳಿಕೊಂಡನು.

೧೦. ಆ ಮುನಿಯು—ಎಲೈ ರಾಜ, ನಿನ್ನ ಹೆಂಡತಿಯೋರ್ವಳಲ್ಲಿ ವಂಶವನ್ನು ಉದ್ಧರಿಸುವ ಮಗನೋರ್ವನೂ, ಮತ್ತೋರ್ವ ಹೆಂಡತಿಯಲ್ಲಿ ಅರವತ್ತುಸಾವಿರ ಮಕ್ಕಳೂ ಜನಿಸುವರು ಎಂದನು.

೧೧. ಹೀಗೆ ವರವನ್ನು ಕೊಟ್ಟು ಆ ಮುನಿಯು ತೆರಳಲು, ಸಗರರಾಜನಿಗೆ ಮುಂದೆ ಕೆಲವುಕಾಲದಮೇಲೆ ಅರವತ್ತುಸಾವಿರದೊಂದುಜನ ಮಕ್ಕಳು ಜನಿಸಿದರು. ಆ ರಾಜನು ಅನೇಕ ಅಶ್ವಮೇಧಯಾಗಗಳನ್ನು ಮಾಡಿ ಬ್ರಾಹ್ಮಣರಿಗೆ ತುಂಬ ದಕ್ಷಿಣೆಯನ್ನು ಕೊಟ್ಟನು.

ಏಕಸ್ಮಿನ್ಹಯಮೇಧೇ ವೈ ದೀಕ್ಷಿತೋ ವಿಧಿವನ್ನೃಪಃ ।
ಪುತ್ರಾನ್ನ್ಯಯೋಜಯದ್ರಾಜಾ ಸಸೈನ್ಯಾನ್ಹಯರಕ್ಷಣೇ ॥ ೧೨ ॥

ಕ್ವಚಿದಂತರಮಾಸಾದ್ಯ ಹಯಂ ಜಹ್ರೇ ಶತಕ್ರತುಃ ।
ಮಾರ್ಗಮಾಣಾಶ್ಚ ತೇ ಪುತ್ರಾ ನೈವಾಪಶ್ಯನ್ಹಯಂ ತದಾ ॥ ೧೩ ॥

ಸಹಸ್ರಾಣಾಂ ತಥಾ ಷಷ್ಟಿರ್ನಾನಾಯುದ್ಧವಿಶಾರದಾಃ ।
ತೇಷು ಪಶ್ಯತ್ಸು ರಕ್ಷಾಂಸಿ ಪುತ್ರೇಷು ಸಗರಸ್ಯ ಹಿ ॥ ೧೪ ॥

ಪ್ರೋಕ್ಷಿತಂ ತದ್ಧಯಂ ನೀತ್ವಾ ತೇ ರಸಾತಲಮಾಗಮನ್ ।
ರಾಕ್ಷಸಾನ್ಮಾಯಯಾ ಯುಕ್ತಾನ್ನೈವಾಪಶ್ಯಂತ ಸಾಗರಾಃ ॥ ೧೫ ॥

ನ ದೃಷ್ಟ್ವಾ ತೇ ಹಯಂ ಪುತ್ರಾಃ ಸಗರಸ್ಯ ಬಲೀಯಸಃ ।
ಇತಶ್ಚೇತಶ್ಚರಂತಸ್ತೇ ನೈವಾಪಶ್ಯನ್ಹಯಂ ತದಾ ॥ ೧೬ ॥

---

೧೨. ಹೀಗಿರಲು ಒಂದು ಅಶ್ವಮೇಧವನ್ನು ಪ್ರಾರಂಭಿಸಿ, ವಿಧಿವತ್ತಾಗಿ ದೀಕ್ಷೆಯನ್ನು ಕೈಗೊಂಡು, ಆ ಸಗರರಾಜನು ಯಜ್ಞದ ಕುದುರೆಯನ್ನು ರಕ್ಷಿಸಲು ಸೈನ್ಯದೊಡನೆ ತನ್ನ ಅರವತ್ತುಸಾವಿರಮಕ್ಕಳನ್ನೂ ಕಳುಹಿಸಿದನು.

೧೩. ಆಗ ಸಗರಪುತ್ರರು ಮೈಮರೆತಿರುವ ಸಮಯವನ್ನು ನೋಡಿ ಇಂದ್ರನು (ರಾಕ್ಷಸರ ಸಹಾಯದಿಂದ) ಯಜ್ಞಾಶ್ವವನ್ನು ಅಪಹರಿಸಿದನು. ಸಗರ ಪುತ್ರರು ಕುದುರೆಯನ್ನು ಅಲ್ಲಲ್ಲಿ ಹುಡುಕಿದರು, ಎಲ್ಲಿಯೂ ಸಿಕ್ಕಲಿಲ್ಲ.

೧೪. ಸಗರನ ಅರವತ್ತುಸಾವಿರಜನ ಮಕ್ಕಳೂ ಮಹಾಪರಾಕ್ರಮಿಗಳು ಯುದ್ಧವಿಶಾರದರು, ಅವರು ರಕ್ಷಿಸುತ್ತಿದ್ದ ಕುದುರೆಯನ್ನು ದೇವೇಂದ್ರನಿಂದ ಪ್ರೇರಿತರಾದ ರಾಕ್ಷಸರು ಮಾಯೆಯಿಂದ ಅಪಹರಿಸಿ ಪಾತಾಳಕ್ಕೆ ಒಯ್ದರು.

೧೫-೧೬. ಮಾಯಾಮಯರಾದ ಆ ರಾಕ್ಷಸರು ಸಗರನ ಬಲಿಷ್ಠರಾದ ಮಕ್ಕಳಿಗೆ ಕಾಣಿಸಲೇ ಇಲ್ಲ. ಕುದುರೆಯನ್ನು ಕಾಣದೆ ಆ ರಾಜಕುಮಾರರು ಅಲ್ಲಲ್ಲಿ ಹುಡುಕಿದರು, ಎಲ್ಲಿಯೂ ಕಾಣಿಸಲಿಲ್ಲ.

ದೇವಲೋಕಂ ತದಾ ಜಗ್ಮುಃ ಪರ್ವತಾಂಶ್ಚ ಸರಾಂಸಿ ಚ ।
ವನಾನಿ ಚ ವಿಚಿನ್ವಂತೋ ನೈವಾಪಶ್ಯಂಸ್ತುಯಂ ತದಾ ॥ ೧೭ ॥

ಕೃತಸ್ವಸ್ತ್ಯಯನೋ-ರಾಜಾ ಋತ್ವಿಗ್ಭಿಃ ಕೃತಮಂಗಲಃ ।
ಅದೃಷ್ಟ್ವಾ ತು ಪಶುಂ ರಮ್ಯಂ ರಾಜಾ ಚಿಂತಾಮುಪೇಯಿವಾನ್ ॥ ೧೮ ॥

ಅಟಂತಃ ಸಾಗರಾಃ ಸರ್ವೇ ದೇವಲೋಕಮುಪಾಗಮನ್ ।
ಹಯಂ ತಮನುಚಿನ್ವಂತಸ್ತತ್ರಾಪಿ ನ ಹಯೋಽಭವತ್ ॥ ೧೯ ॥

ತತೋ ಮಹೀಂ ಸಮಾಜಗ್ಮುಃ ಪರ್ವತಾಂಶ್ಚ ವನಾನಿ ಚ ।
ತತ್ರಾಪಿ ಚ ಹಯಂ ನೈವ ದೃಷ್ಟವಂತೋ ನೃಪಾತ್ಮಜಾಃ ॥ ೨೦ ॥

ಏತಸ್ಮಿನ್ನಂತರೇ ತತ್ರ ದೈವೀ ತತ್ರ ವಾಗಭವತ್ತದಾ ।
ರಸಾತಲೇ ಹಯೋ ಬದ್ಧ ಆಸ್ತೇ ನಾನ್ಯತ್ರ ಸಾಗರಾಃ ॥ ೨೧ ॥

---

೧೭. ಬೆಟ್ಟಗಳು, ಗುಹೆಗಳು, ಕಾಡುಮೇಡುಗಳು ಎಲ್ಲವನ್ನೂ ಹುಡುಕಿದರೂ, ಕುದುರೆಯು ಸಿಕ್ಕಲಿಲ್ಲ.

೧೮. ಇತ್ತ ಸಗರರಾಜನು ಮಂಗಳಸ್ನಾನವನ್ನು ಮಾಡಿ ಗುರುಹಿರಿಯರ ಆಶೀರ್ವಾದವನ್ನು ಪಡೆದು ಋತ್ವಿಜರೊಡನೆ ಯಾಗಕ್ಕೆ ಸಿದ್ಧನಾದನು, ಅದರೂ ಯಜ್ಞಾಶ್ವವು ಬರದಿರುವುದನ್ನು ನೋಡಿ ಆ ರಾಜನು ಚಿಂತೆಗೊಳಗಾದನು.

೧೯. ಅತ್ತ ಯಾಗದ ಕುದುರೆಯನ್ನು ಹುಡುಕುತ್ತಾ ಸಗರಪುತ್ರರು ಊರೂರುಗಳನ್ನಲೆದು ದೇವಲೋಕಕ್ಕೆ ಬಂದರು, ಅಲ್ಲಿಯೂ ಆ ಯಜ್ಞಾಶ್ವವು ಇರಲಿಲ್ಲ.

೨೦. ಆಮೇಲೆ ಭೂಲೋಕಕ್ಕೆ ಬಂದು ಪುನಃ ಬೆಟ್ಟಗುಡ್ಡಗಳು, ಕಾಡುಮೇಡುಗಳು ಎಲ್ಲವನ್ನೂ ಹುಡುಕಿದರು, ಅಲ್ಲಿಯೂ ಯಜ್ಞಾಶ್ವವು ಸಿಕ್ಕಲಿಲ್ಲ.

೨೧. ಆ ಸಮಯ್ಯದಲ್ಲಿ—ಎಲೈ ಸಗರಪುತ್ರರೇ, ಪಾತಾಳದಲ್ಲಿ ನಿಮ್ಮ ಯಜ್ಞಾಶ್ವವು ಬಂಧನಕ್ಕೆ ಸಿಲುಕಿರುವುದು. ಇನ್ನೆಲ್ಲಿಯೂ ಇಲ್ಲ ಎಂಬ ಅಶರೀರವಾಣಿಯು ಕೇಳಿಸಿತು.

ಇತಿ ಶ್ರುತ್ವಾ ತತೋ ವಾಕ್ಯಂ ಗಂತುಕಾಮಾ ರಸಾತಲಂ ।
ಅಖನನ್ಪೃಥಿವೀಂ ಸರ್ವಾಂ ಪರಿತಃ ಸಾಗರಾಸ್ತತಃ ॥ ೨೨ ॥

ತೇ ಕ್ಷುಧಾರ್ತಾ ಮೃದಂ ಶುಷ್ಕಾಂ ಭಕ್ಷಯಂತಸ್ತ್ವಹರ್ನಿಶಂ ।
ನ್ಯಖನಂಶ್ಚಾಪಿ ಜಗ್ಮುಶ್ಚ ಸತ್ವರಾಸ್ತೇ ರಸಾತಲಂ ॥ ೨೩ ॥

ತಾನಾಗತಾನ್ಸೋಪಸುತಾನ್ಸಾಗರಾನ್ಬಲಿನಃ ಕೃತೀನ್ ।
ಶ್ರುತ್ವಾ ರಕ್ಷಾಂಸಿ ಸಂತ್ರಸ್ತಾ ನ್ಯಗಮನ್ಕಪಿಲಾಂತಿಕಂ ॥ ೨೪ ॥

ಕಪಿಲೋಽಪಿ ಮಹಾಪ್ರಾಜ್ಞಸ್ತತ್ರ ಶೇತೇ ರಸಾತಲೇ ।
ಪುರಾ ಚ ಸಾಧಿತಂ ತೇನ ದೇವಾನಾಂ ಕಾರ್ಯಮುತ್ತಮಂ ॥ ೨೫ ॥

ವಿನಿದ್ರೇಣ ತತಃ ಶ್ರಾಂತಃ ಸಿದ್ಧೇ ಕಾರ್ಯೇ ಸುರಾನ್ಪ್ರತಿ ।
ಅಬ್ರವೀತ್ಕಪಿಲಃ ಶ್ರೀಮಾನ್ನಿದ್ರಾಸ್ಥಾನಂ ಪ್ರಯಚ್ಛಥ ॥ ೨೬ ॥

---

೨೨. ಆ ಅಶರೀರವಾಣಿಯನ್ನು ಕೇಳಿ ಸಗರಕುಮಾರರು ಪಾತಾಳಕ್ಕೆ ಹೋಗಲೋಸುಗ ಭೂಮಿಯನ್ನು ಅಗೆಯತೊಡಗಿದರು.

೨೩. ಹೀಗೆ ಅಗೆಯುತ್ತಾ ಆ ಸಗರಕುಮಾರರು ಹಸಿವು ಬಾಯಾರಿಕೆಗಳನ್ನು ಲಕ್ಷಿಸದೆ ಒಣಗಿದ ಮಣ್ಣನ್ನೇ ತಿನ್ನುತ್ತಾ ಭೂಮಿಯನ್ನಗೆದಗೆದು ಪಾತಾಳವನ್ನು ಪ್ರವೇಶಿಸಿದರು.

೨೪. ಮಹಾಬಲಿಷ್ಠರಾದಾ ಸಗರಕುಮಾರರು ಬರುತ್ತಿರುವುದನ್ನು ಕೇಳಿ ಪಾತಾಳದಲ್ಲಿದ್ದ ರಾಕ್ಷಸರೆಲ್ಲಾ ಹೆದರಿ ಕಪಿಲಋಷಿಯ ಬಳಿಗೆ ಹೋದರು.

೨೫. ಆಗ ಮಹಾಮೇಧಾವಿಯಾದ ಕಪಿಲಮುನಿಯು ಪಾತಾಳದಲ್ಲಿ ಮಲಗಿ ನಿದ್ರಿಸುತ್ತಿದ್ದನು. ಅವನು ಹಿಂದೆ ಬಹುದಿನ ನಿದ್ರೆಕೆಟ್ಟು ತಪಸ್ಸು ಮಾಡಿ ದೇವತೆಗಳ ಮಹಾಕಾರ್ಯವೊಂದನ್ನು ಸಾಧಿಸಿದ್ದನು.

೨೬. ದೇವತೆಗಳ ಕಾರ್ಯವು ಸಿದ್ಧಿಸಿದ ಮೇಲೆ ಆ ಕಪಿಲನು ನನಗೆ ನಿದ್ರಿಸುವುದಕ್ಕೆ ಯೋಗ್ಯವಾದ ಸ್ಥಾನವನ್ನು ಕಲ್ಪಿಸಿ ಎಂದು ಕೇಳಿದನು.

ರಸಾತಲಂ ದದುಸ್ತಸ್ಮೈ ಪುನರಾಹ ಸುರಾನ್ಮುನಿಃ ।
ಯೋ ಮಾಮುತ್ಥಾಪಯೇನ್ಮಂದೋ ಭಸ್ಮೀ ಭೂಯಾಚ್ಚ ಸತ್ವರಂ ॥ ೨೭ ॥

ತತಃ ಶಯೇ ತಲಗತೋ ನೋ ಚೇನ್ನ ಸ್ವಪ್ನ ಏವ ಹಿ ।
ತಥೇತ್ಯುಕ್ತಃ ಸುರಗಣೈಸ್ತತ್ರ ಶೇತೇ ರಸಾತಲೇ ॥ ೨೮ ॥

ತಸ್ಯ ಪ್ರಭಾವಂ ತೇ ಜ್ಞಾತ್ವಾ ರಾಕ್ಷಸಾ ಮಾಯಯಾ ಯುತಾಃ ।
ಸಾಗರಾಣಾಂ ಚ ಸರ್ವೇಷಾಂ ವಧೋಪಾಯಂ ಪ್ರಚಕ್ರಿರೇ ॥ ೨೯ ॥

ವಿನಾ ಯುದ್ಧೇನ ತೇ ಭೀತಾ ರಾಕ್ಷಸಾಃ ಸತ್ವರಾಸ್ತದಾ ।
ಆಗತ್ಯ ಯತ್ರ ಸ ಮುನಿಃ ಕಪಿಲಃ ಕೋಪನೋ ಮಹಾನ್ ॥ ೩೦ ॥

ಶಿರೋದೇಶೇ ಹಯಂ ತೇ ವೈ ಬದ್ಧ್ವಾಥ ತ್ವರಯಾನ್ವಿತಾಃ ।
ದೂರೇ ಸ್ಥಿತ್ವಾ ಮೌನಿನಶ್ಚ ಪ್ರೇಕ್ಷಂತಃ ಕಿಂ ಭವೇದಿತಿ ॥ ೩೧ ॥

೨೭-೨೮. ಆಗ ದೇವತೆಗಳು ಕಪಿಲನು ನಿದ್ರಿಸಲು ಪಾತಾಳವನ್ನು ಕಲ್ಪಿಸಿದರು. ಪುನಃ ಆ ಮುನಿಯು ದೇವತೆಗಳನ್ನು ಕುರಿತು ಇಲ್ಲಿ ಮಲಗಿರುವ ನನ್ನನ್ನು ಯಾರೂ ಎಚ್ಚರಿಸಬಾರದು, ಹಾಗೆ ಎಚ್ಚರಿಸಿದ ಮೂಢನು ಆ ಕೂಡಲೇ ಭಸ್ಮವಾಗಬೇಕು. ಹಾಗಾಗುವುದಾದರೆ ನಿದ್ರಿಸುವೆನು, ಇಲ್ಲದಿದ್ದರೆ ಇಲ್ಲ ಎಂದು ಹೇಳಿದನು. ದೇವತೆಗಳು ಹಾಗೆಯೇ ಆಗಲೆಂದು ಹೇಳಿದರು. ಆಮೇಲೆ ಆ ಮುನಿಯು ಸುಖವಾಗಿ ಅಲ್ಲಿ ನಿದ್ರಿಸುತ್ತಿದ್ದನು.

೨೯. ಕಪಿಲನ ಆ ಪ್ರಭಾವವನ್ನು ತಿಳಿದಿದ್ದ ಮಾಯಾವಿಗಳಾದ ರಾಕ್ಷಸರು ಸಗರ ಕುಮಾರರೆಲ್ಲರನ್ನೂ ಸಂಹರಿಸಲು ಈ ಉಪಾಯವನ್ನು ಕೈಗೊಂಡರು.

೩೦-೩೧. ಕುದುರೆಯನ್ನಪಹರಿಸಿದ ಆ ರಾಕ್ಷಸರು ಸಗರಕುಮಾರರೊಡನೆ ಯುದ್ಧಮಾಡಲು ಹೆದರಿ ಪಾತಾಳದಲ್ಲಿ ಮಲಗಿರುವ ಕಪಿಲಮುನಿಯ ಶಿರಸ್ಸಿನ ಹಿಂಭಾಗದಲ್ಲಿ ಆ ಯಜ್ಞಾಶ್ವವನ್ನು ಕಟ್ಟಿ ತಾವು ಮುಂದೇನಾಗುವುದು ಎಂದು ನೋಡುತ್ತಾ ದೂರದಲ್ಲಿ ಮೌನವಾಗಿದ್ದರು.

ತತಸ್ತು ಸಾಗರಾಃ ಸರ್ವೇ ನಿರ್ವಿಶಂತೋ ರಸಾತಲಂ ।
ದದೃಶುಸ್ತೇ ಹಯಂ ಬದ್ಧಂ ಶಯಾನಂ ಪುರುಷಂ ತಥಾ ॥ ೩೨ ॥

ತಂ ಮೇನಿರೇ ಚ ಹರ್ತಾರಂ ಕ್ರತುಹಂತಾರಮೇವ ಚ ।
ಏನಂ ಹತ್ವಾ ಮಹಾಪಾಪಂ ನಯಾಮೋಽಶ್ವಂ ನೃಪಾಂತಿಕಂ ॥ ೩೩ ॥

ಕೇಚಿದೂಚುಃ ಪಶುಂ ಬದ್ಧಂ ನಯಾಮೋಽನೇನ ಕಿಂ ಫಲಂ ।
ತದಾಹುರಪರೇ ಶೂರಾ ರಾಜಾನಃ ಶಾಸಕಾ ವಯಂ ॥ ೩೪ ॥

ಉತ್ಥಾಪ್ಯೈನಂ ಮಹಾಪಾಪಂ ಹನ್ಮಃ ಕ್ಷಾತ್ರೇಣ ವರ್ಚಸಾ ।
ತೇ ತಂ ಜಘ್ನುರ್ಮುನಿಂ ಪಾದೈರ್ಬ್ರುವಂತೋ ನಿಷ್ಠುರಾಣಿ ಚ ॥ ೩೫ ॥

ತತಃ ಕೋಪೇನ ಮಹತಾ ಕಪಿಲೋ ಮುನಿಸತ್ತಮಃ ।
ಸಾಗರಾನೀಕ್ಷಯಾಮಾಸ ತಾನ್ಸೋಽಪಾದ್ಭಸ್ಮಸಾತ್ಕರೋತ್ ॥ ೩೬ ॥

---

೩೨. ಇಷ್ಟರಲ್ಲಿ ಸಗರಕುಮಾರರು ಪಾತಳವನ್ನು ಪ್ರವೇಶಿಸಿ ಅಲ್ಲಿ ತಮ್ಮ ಕುದುರೆಯು ಕಟ್ಟಲ್ಪಟ್ಟಿರುವುದನ್ನೂ ಅದರಬಳಿಯಲ್ಲಿ ಪುರುಷನೋರ್ವನು ಮಲಗಿ ನಿದ್ರಿಸುತ್ತಿರುವುದನ್ನೂ ನೋಡಿದರು.

೩೩. ಆ ಪುರುಷನೇ ಕುದುರೆಯನ್ನಪಹರಿಸಿ ಯಜ್ಞಕ್ಕೆ ವಿಘ್ನವನ್ನಾಚರಿಸಿದನೆಂದು ತಿಳಿದು ಆ ಸಗರಪುತ್ರರಲ್ಲಿ ಕೆಲವರು ಈ ಅಧಮನನ್ನು ಕೊಂದು ಕುದುರೆಯನ್ನು ಸಗರನ ಬಳಿಗೆ ತೆಗೆದುಕೊಂಡು ಹೋಗೋಣವೆಂದರು. ಕೆಲವರು—ಇವನಿಂದ ನಮಗೇನು? ಹೀಗೆಯೇ ಇವನು ನಿದ್ರಿಸುತ್ತಿರಲಿ. ಈ ಕುದುರೆಯನ್ನು ಮಾತ್ರ ಬಿಡಿಸಿಕೊಂಡು ಹೋಗೋಣವೆಂದರು.

೩೪-೩೫. ಆಗ ಮತ್ತೆ ಕೆಲವರು ಶೂರರು, ನಾವು ರಾಜರು, ದುಷ್ಟರನ್ನು ಶಿಕ್ಷಿಸುವುದು ತಮ್ಮ ಕರ್ತವ್ಯವು. ಈ ಪಾಪಿಷ್ಠನನ್ನು ಎಚ್ಚರಿಸಿ, ನಮ್ಮ ಪರಾಕ್ರಮದಿಂದ ಸಂಹರಿಸೋಣವೆಂದರು. ಹೀಗೆ ನಿಶ್ಚಯಿಸಿ ಅವರೆಲ್ಲರೂ ಕಪಿಲಮುನಿಯನ್ನು ಕೆಟ್ಟಮಾತುಗಳಿಂದ ಬೈಯುತ್ತಾ ಕಾಲಿನಿಂದ ಒದ್ದರು.

೩೬. ಆಗ ಕಪಿಲಮುನಿಯು ಎಚ್ಚರಗೊಂಡು ಕೋಪದಿಂದ ಆ ಸಗರಕುವರರನ್ನು ನೋಡಿದನು, ಅದರಿಂದ ಅವರೆಲ್ಲರೂ ಸುಟ್ಟು ಬೂದಿಯಾದರು.

ಜಜ್ವಲುಸ್ತೇ ತತಸ್ತತ್ರ ಸಾಗರಾಃ ಸರ್ವ ಏವ ಹಿ ।
ತತ್ತು ಸರ್ವಂ ನ ಜಾನಾತಿ ದೀಕ್ಷಿತಃ ಸಗರೋ ನೃಪಃ ॥ ೩೭ ॥

ನಾರದಃ ಕಥಯಾಮಾಸ ಸಗರಾಯ ಮಹಾತ್ಮನೇ ।
ಕಪಿಲಸ್ಯ ತು ಸಂಸ್ಥಾನಂ ಹಯಸ್ಯಾಪಿ ತು ಸಂಸ್ಥಿತಿಂ ॥ ೩೮ ॥

ರಾಕ್ಷಸಾನಾಂ ತು ವಿಕೃತಿಂ ಸಾಗರಾಣಾಂ ಚ ನಾಶನಂ ।
ತತಶ್ಚಿಂತಾಪರೋ ರಾಜಾ ಕರ್ತವ್ಯಂ ನಾವಬುಧ್ಯತ ॥ ೩೯ ॥

ಅಪರೋಽಪಿ ಸುತಶ್ಚಾಸೀದಸಮಂಜಾ ಇತಿ ಶ್ರುತಃ ।
ಸ ತು ಬಾಲಾಂಸ್ತಥಾ ಪೌರಾನ್ಮೌರ್ಖ್ಯಾತ್ಕ್ಷಿಪತಿ ಚಾಂಭಸಿ । ॥ ೪೦ ॥

ಸಗರೋಽಪ್ಯಥ ವಿಜ್ಞಪ್ತಃ ಪೌರೈಃ ಸಂಮಿಲಿತೈಸ್ತದಾ ।
ದುರ್ನಯಂ ತಸ್ಯ ತಂ ಜ್ಞಾತ್ವಾ ತತಃ ಕ್ರುದ್ಧೋಽಬ್ರವೀನ್ನೃಪಃ ॥ ೪೧ ॥

---

೩೭. ಹೀಗೆ ಸಗರಕುಮಾರರೆಲ್ಲರೂ ಸುಟ್ಟು ಬೂದಿಯಾದರು, ಇತ್ತ ದೀಕ್ಷಿತನಾದ ಸಗರರಾಜನಿಗೆ ಇದೊಂದೂ ತಿಳಿಯಲಿಲ್ಲ,

೩೮-೩೯. ಆಗ ನಾರದಮುನಿಯು ಬಂದು ಸಗರರಾಜನಿಗೆ—ಕುದುರೆಯನ್ನು ರಾಕ್ಷಸರು ಅಪಹರಿಸಿ ಕಪಿಲಮುನಿಯ ಬಳಿಯಲ್ಲಿರಿಸುದುದನ್ನೂ ಕಪಿಲಮುನಿಯಕೋಪದಿಂದ ಸಗರಕುವರರು ನಾಶವಾದುದನ್ನೂ ತಿಳಿಸಿದನು, ಅದನ್ನು ಕೇಳಿ ಆ ರಾಜನು ಮುಂದೇನುಮಾಡಬೇಕೆಂದು ತಿಳಿಯದೆ ಚಿಂತಿಸತೊಡಗಿದನು.

೪೦. ಆ ಸಗರನಿಗೆ ಅಸಮುಂಜನೆಂಬ ಮತ್ತೊಬ್ಬ ಮಗನಿದ್ದನು. ಅವನು ಮೂರ್ಖನಾಗಿದ್ದು ಪಟ್ಟಣದ ಬಾಲಕರನ್ನು ಹಿಡಿದು ನದಿಗೆ ತಳ್ಳಿಬಿಟ್ಟು ತಮಾಷೆನೋಡುತ್ತಿದ್ದನು.

೪೧-೪೨. ಆಗ ಪಟ್ಟಣಿಗರೆಲ್ಲರೂ ಸೇರಿ ಸಗರರಾಜನಲ್ಲಿ ತಮ್ಮ ಕಷ್ಟವನ್ನು ಹೇಳಿಕೊಂಡರು. ಆ ರಾಜನೂ ವಿಚಾರಣೆಮಾಡಿ ಅಸಮುಂಜನ ದುಷ್ಟತನವನ್ನು ತಿಳಿದು ಕೋಪದಿಂದ ಮಂತ್ರಿಗಳನ್ನು ಕರೆದು ಕ್ಷತ್ರಿಯಧರ್ಮಕ್ಕೆ

ಸ್ವಾನಮಾತ್ಯಾಂಸ್ತದಾ ರಾಜಾ ದೇಶತ್ಯಾಗಂ ಕರೋತ್ವಯಂ ।
ಅಸಮಂಜಾಃ ಕ್ಷತ್ರಧರ್ಮತ್ಯಾಗೀ ವೈ ಬಾಲಘಾತಕಃ ॥ ೪೨ ॥

ಸಗರಸ್ಯ ತು ತದ್ವಾಕ್ಯಂ ಶ್ರುತ್ವಾಮಾತ್ಯಾಸ್ತ್ವರಾನ್ವಿತಾಃ ।
ತತ್ಯಜುರ್ನೃಪತೇಃ ಪುತ್ರಮಸಮಂಜಾ ಗತೋ ವನಂ ॥ ೪೩ ॥

ಸಾಗರಾ ಬ್ರಹ್ಮಶಾಪೇನ ನಷ್ಟಾಃ ಸರ್ವೇ ರಸಾತಲೇ ।
ಏಕೋಽಪಿ ಚ ವನಂ ಪ್ರಾಪ್ತ ಇದಾನೀಂ ಕಾ ಗತಿರ್ಮಮ ॥ ೪೪ ॥

ಅಂಶುಮಾನಿತಿ ವಿಖ್ಯಾತಃ ಪುತ್ರಸ್ತಸ್ಯಾಸಮಂಜಸಃ ।
ಆನಾಯ್ಯ ಬಾಲಕಂ ರಾಜಾ ಕಾರ್ಯಂ ತಸ್ಮೈ ನ್ಯವೇದಯತ್ ॥ ೪೫ ॥

ಕಪಿಲಂ ಚ ಸಮಾರಾಧ್ಯ ಅಂಶುಮಾನಪಿ ಬಾಲಕಃ ।
ಸಗರಾಯ ಹಯಂ ಪ್ರಾದಾತ್ತತಃ ಪೂರ್ಣೋಽಭವತ್ಕ್ರತುಃ ॥ ೪೬ ॥

ವಿರುದ್ಧವಾಗಿ ಬಾಲಕರನ್ನು ಹಿಂಸಿಸುವ ಈ ಅಸಮಂಜನನ್ನು ಈ ದೇಶದಿಂದ ಹೊರಡಿಸಿರಿ, ಎಂದಪ್ಪಣೆಮಾಡಲು,

೪೩. ಸಗರನ ಆ ಮಾತನ್ನು ಕೇಳಿ ಮಂತ್ರಿಗಳು ಆಕೂಡಲೇ ಅಸಮಂಜನನ್ನು ಊರುಬಿಟ್ಟು ಹೊರಡಿಸಿದರು, ಅಸಮಂಜನು ಕಾಡಿಗೆ ಹೋಗಬೇಕಾಯಿತು.

೪೪. ಹೀಗಿರಲು ಸಗರನು—ಸಾಗರರೆಲ್ಲರೂ ಬ್ರಹ್ಮರ್ಷಿಯಾದ ಕಪಿಲನ ಶಾಪದಿಂದ ನಾಶವಾದರು, ಉಳಿದೊಬ್ಬಮಗನು ಅರಣ್ಯವನ್ನು ಸೇರಿದನು. ಈಗ ನನ್ನ ಗತಿಯೇನು ? ಎಂದು ಚಿಂತಿಸಿದನು.

೪೫. ಆ ಅಸಮಂಜನಿಗೆ ಅಂಶುಮಾನನೆಂಬ ಮಗನಿದ್ದನು, ಅವನನ್ನು ಕರೆಯಿಸಿ ಸಗರನು ಯಜ್ಞಾಶ್ವವನ್ನು ತರಲು ಕಳುಹಿಸಿದನು.

೪೬. ಬಾಲಕನಾದರೂ ಆ ಅಂಶುಮಂತನು ಪಾತಾಳಕ್ಕೆ ಹೋಗಿ ಕಪಿಲ ಮುನಿಯನ್ನಾರಾಧಿಸಿ ಯಜ್ಞಾಶ್ವವನ್ನು ತಂದನು, ಆಮೇಲೆ ಯಜ್ಞವನ್ನು ಪೂರಯಿಸಿದನು.

ತಸ್ಯಾಪಿ ಪುತ್ರಸ್ತೇಜಸ್ವೀ ದಿಲೀಪ ಇತಿ ಧಾರ್ಮಿಕಃ ।
ತಸ್ಯಾಪಿ ಪುತ್ರೋ ಮತಿಮಾನ್ಭಗೀರಥ ಇತಿ ಶ್ರುತಃ ॥ ೪೭ ॥

ಪಿತಾಮಹಾನಾಂ ಸರ್ವೇಷಾಂ ಗತಿಂ ಶ್ರುತ್ವಾ ಸುದುಃಖಿತಃ ।
ಸಗರಂ ನೃಪಶಾರ್ದೂಲಂ ಪಪ್ರಚ್ಛ ವಿನಯಾನ್ವಿತಃ ॥ ೪೮ ॥

ಸಾಗರಾಣಾಂ ತು ಸರ್ವೇಷಾಂ ನಿಷ್ಕೃತಿಸ್ತು ಕಥಂ ಭವೇತ್ ।
ಭಗೀರಥಂ ನೃಪಃ ಪ್ರಾಹ ಕಪಿಲೋ ವೇತ್ತಿ ಪುತ್ರಕ ॥ ೪೯ ॥

ತಸ್ಯ ತದ್ವಚನಂ ಶ್ರುತ್ವಾ ಬಾಲಃ ಪ್ರಾಯಾದ್ರಸಾತಲಂ ।
ಕಪಿಲಂ ಚ ನಮಸ್ಕೃತ್ವಾ ಸರ್ವಂ ತಸ್ಮೈ ನ್ಯವೇದಯುಶ್ ॥ ೫೦ ॥

ಸ ಮುನಿಸ್ತು ಚಿರಂ ಧ್ಯಾತ್ವಾ ತಪಸಾರಾಧ್ಯ ಶಂಕರಂ ।
ಜಟಾಜಲೇನ ಸ್ವಪಿತೄನಾಪ್ಲಾವ್ಯ ನೃಪಸತ್ತಮ ॥ ೫೧ ॥

---

೪೭. ಮುಂದೆ ಆ ಅಂಶುಮಂತನಿಗೆ ದಿಲೀಪನೆಂಬ ತೇಜಸ್ವಿಯಾದ ಪುತ್ರನು ಜನಿಸಿದನು. ಆ ದಿಲೀಪನಿಗೆ ಭಗೀರಥನೆಂಬ ಸುತನು ಜನಿಸಿದನು.

೪೮-೪೯. ತನ್ನ ತಾತಂದಿರಾದ ಸಾಗರರ ದುರ್ಮರಣವನ್ನು ಕೇಳಿ ಬುದ್ಧಿವಂತನಾದ ಆ ಭಗೀರಥನು ದುಃಖಗೊಂಡು ಸಗರರಾಜನನ್ನು ಕುರಿತು ವಿನಯದಿಂದ ಓ ಆರ್ಯನೇ, ಸಾಗರರಿಗೆಲ್ಲರಿಗೂ ಉತ್ತಮಗತಿಯು ಹೇಗೆ ಲಭಿಸುವುದು? ಎನ್ನಲು, ಆಗ ಸಗರನು ಎಲೈ ಪುತ್ರನೇ, ಸಾಗರರಿಗೆ ಉತ್ತಮ ಗತಿಯು ಲಭಿಸುವ ಬಗೆಯನ್ನು ಕಪಿಲಮುನಿಯೇ ಬಲ್ಲನು. ಅವನನ್ನೇ ಕೇಳು ಎಂದು ಭಗೀರಥನಿಗೆ ಹೇಳಿದನು.

೫೦. ಸಗರನ ಆ ಮಾತನ್ನು ಕೇಳಿ, ಭಗೀರಥನು ಪಾತಾಳಕ್ಕೆ ತೆರಳಿ ಅಲ್ಲಿ ಕಪಿಲಮುನಿಯನ್ನು ನಮಸ್ಕರಿಸಿ ತನ್ನ ಅಭಿಪ್ರಾಯವನ್ನು ತಿಳಿಸಿದನು.

೫೧. ಆ ಕಪಿಲಮುನಿಯು ಬಹುಕಾಲ ಧ್ಯಾನಿಸಿ ಜ್ಞಾನದೃಷ್ಟಿಯಿಂದ ತಿಳಿದು ಎಲೈ ಕುಮಾರನೆ, ನೀನು ಶಂಕರನನ್ನು ತಪಸ್ಸಿನಿಂದಾರಾಧಿಸಿ ಅವನ ಜಟೆಯಲ್ಲಿರುವ ಗಂಗೆಯನ್ನು ಪಾತಾಳಕ್ಕೆ ತಂದು ನಿನ್ನ ಪಿತೃಗಳ ಬೂದಿಯನ್ನು ತೊಳೆದರೆ ಅದರಿಂದ ಅವರಿಗೆ ಉತ್ತಮಗತಿಯು ಲಭಿಸುವುದು. ನೀನೂ ಕೃತಾರ್ಥನಾಗುವೆ ಎಂದು ಹೇಳಿದನು.

ತತಃ ಕೃತಾರ್ಥೋಽ ಭವಿತಾ ತ್ವಂ ಚ ತೇ ಪಿತರಸ್ತಥಾ ।
ತಥಾ ಕರೋಮೀತಿ ಮುನಿಂ ಪ್ರಣಮ್ಯ ಪುನರಬ್ರವೀತ್ ॥ ೫೨ ॥

ಕ್ವ ಗಚ್ಛೇಽಹಂ ಮುನಿಶ್ರೇಷ್ಠ ಕರ್ತವ್ಯಂ ಚಾಪಿ ತದ್ವದ ॥ ೫೩ ॥

॥ ಕಪಿಲ ಉವಾಚ ॥

ಕೈಲಾಸಂ ಶಂ ನರಶ್ರೇಷ್ಠ ಗತ್ವಾ ಸ್ತುಹಿ ಮಹೇಶ್ವರಂ ।
ತಪಃ ಕುರು ಯಥಾಶಕ್ತಿ ತತಶ್ಚೇಪ್ಸಿತಮಾಪ್ಸ್ಯಸಿ ॥ ೫೪ ॥

॥ ಬ್ರಹ್ಮೋವಾಚ ॥

ತಚ್ಛ್ರುತ್ವಾ ಸ ಮುನೇರ್ವಾಕ್ಯಂ ಮುನಿಂ ನತ್ವಾ ತ್ವಗಾನ್ನಗಂ ।
ಕೈಲಾಸಂ ಸ ಶುಚಿರ್ಭೂತ್ವಾ ಬಾಲೋ ಬಾಲಕ್ರಿಯಾನ್ವಿತಃ ।
ತಪಸೇ ನಿಶ್ಚಯಂ ಕೃತ್ವಾ ಉವಾಚ ಸ ಭಗೀರಥಃ ॥ ೫೫ ॥

೫೨-೫೩. ಹಾಗೆಯೇ ಮಾಡುವೆನೆಂದು ಹೇಳಿ ಭಗೀರಥನು ಪುನಃ ನಮಸ್ಕರಿಸಿ ಓ ಮುನಿಶ್ರೇಷ್ಠ, ಈ ಕಾರ್ಯಸಾಧನೆಗೆ ನಾನೆಲ್ಲಿಗೆ ಹೋಗಬೇಕು? ನನ್ನ ಕರ್ತವ್ಯವೇನು? ಅದನ್ನೂ ದಯವಿಟ್ಟು ಹೇಳಬೇಕೆನಲು,

೫೪. ಕಪಿಲಮುನಿಯಿಂತೆಂದನು—ನರಶ್ರೇಷ್ಠನಾದ ಎಲೈ ಕುಮಾರನೆ, ನೀನು ಕೈಲಾಸಗಿರಿಗೆ ಹೋಗಿ, ಅಲ್ಲಿ ಶಿವನನ್ನು ಸ್ತುತಿಸು. ಶಕ್ತಿಮೀರಿ ತಪಸ್ಸನ್ನಾಚರಿಸು. ಅದರಿಂದ ನಿನ್ನ ಇಷ್ಟಾರ್ಥವು ಸಿದ್ಧಿಸುವುದು ಎಂದನು.

೫೫. ಕಪಿಲಮುನಿಯ ಆ ಮಾತನ್ನು ಕೇಳಿ ಭಗೀರಥನು ಆ ಮುನಿಗೆ ನಮಸ್ಕರಿಸಿ, ಕೈಲಾಸಗಿರಿಗೆ ಹೋದನು. ಬಾಲಕನಾದರೂ ಅವನು ಆ ಗಿರಿಯಲ್ಲಿ ಬಾಲಕರಿಗಸಾಧ್ಯವಾದ ತಪಸ್ಸನ್ನು ಮಾಡಲುದ್ಯುಕ್ತನಾಗಿ ಪರಿಶುದ್ಧತೆಯಿಂದ ಶಿವನನ್ನು ಕುರಿತು ಹೀಗೆ ಸ್ತುತಿಸಿದನು.

॥ ಭಗೀರಥ ಉವಾಚ ॥

ಬಾಲೋಽಹಂ ಬಾಲಬುದ್ಧಿಶ್ಚ ಬಾಲಚಂದ್ರಧರ ಪ್ರಭೋ ।
ನಾಹಂ ಕಿಮಪಿ ಜಾನಾಮಿ ತತಃ ಪ್ರೀತೋ ಭವ ಪ್ರಭೋ ॥ ೫೬ ॥

ವಾಗ್ಭಿರ್ಮನೋಭಿಃ ಕೃತಿಭಿಃ ಕದಾಚಿ-
ನ್ಮಮೋಪಕುರ್ವಂತಿ ಹಿತೇ ರತಾ ಯೇ ।
ತೇಭ್ಯೋ ಹಿತಾರ್ಥಂ ತ್ವಿಹ ಚಾಮರೇಶ
ಸೋಮಂ ನಮಸ್ಯಾಮಿ ಸುರಾದಿಪೂಜ್ಯಂ ॥ ೫೭ ॥

ಉತ್ಪಾದಿತೋ ಯೈರಭಿವರ್ಧಿತಶ್ಚ
ಸಮಾನಗೋತ್ರಶ್ಚ ಸಮಾನಧರ್ಮಾ ।
ತೇಷಾಮಭೀಷ್ಟಾನಿ ಶಿವಃ ಕರೋತು
ಬಾಲೇಂದುಮೌಲಿಂ ಪ್ರಣತೋಽಸ್ಮಿ ನಿತ್ಯಂ ॥ ೫೮ ॥

॥ ಬ್ರಹ್ಮೋವಾಚ ॥

ಏವಂ ತು ಬ್ರುವತಸ್ತಸ್ಯ ಪುರಸ್ತಾದಭವಚ್ಛಿವಃ ।
ವರೇಣ ಚ್ಛಂದಯಾನೋ ವೈ ಭಗೀರಥಮುವಾಚ ಹ ॥ ೫೯ ॥

---

೫೬. ಬಾಲಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿರುವ ಓ ಸ್ವಾಮಿ, ನಾನಿನ್ನೂ ಬಾಲಕನು, ನನ್ನ ಬುದ್ಧಿಯೂ ಬಾಲಕನಂತೆ ಎಳೆಯದಾಗಿದೆ, ಏನನ್ನೂ ಹೇಳಲು ತೋರುವುದಿಲ್ಲ, ಆದುದರಿಂದ ನನ್ನಲ್ಲಿ ಪ್ರಸನ್ನನಾಗು.

೫೭. ಮನೋವಾಕ್ಕಾಯಗಳಿಂದ ನನಗೆ ಯಾರು ಯಾವಾಗಲಾದರೂ ಉಪಕಾರಮಾಡುವರೋ ಅವರಿಗೆ ಕ್ಷೇಮವಾಗಲೆಂದು ಬಯಸಿ ದೇವತೆಗಳಿಂದಲೂ ಪೂಜಿಸಲ್ಪಡುವ ಪರಮೇಶ್ವರನಾದ ದೇವದೇವನಾದ ಚಂದ್ರಶೇಖರನನ್ನು ನಮಸ್ಕರಿಸುವೆನು.

೫೮. ಉತ್ತಮಕುಲದಲ್ಲಿ ಉತ್ತಮಧರ್ಮವುಳ್ಳವನನ್ನಾಗಿ ನನ್ನನ್ನು ಯಾರು ಹಡೆದಿರುವರೋ, ಯಾರು ಪೋಷಿಸುವರೋ ಅವರೆಲ್ಲರ ಇಷ್ಟಾರ್ಥವನ್ನೂ ಶಿವನು ಕರುಣಿಸಲಿ. ಚಂದ್ರಶೇಖರನನ್ನು ನಿತ್ಯವೂ ನಮಿಸುವೆನು.

೫೯. ಹೀಗೆ ಭಗೀರಥನು ಸ್ತುತಿಸುತ್ತಿರಲು ಶಿವನು ಪ್ರಸನ್ನನಾಗಿ ಆ ಕುಮಾರನಿಗೆ ವರವನ್ನು ಕೊಡಲು ಎದುರಿಗೆ ಪ್ರತ್ಯಕ್ಷನಾದನು.

॥ ಶಿವ ಉವಾಚ ॥

ಯನ್ನ ಸಾಧ್ಯಂ ಸುರಗಣೈರ್ದೇಯಂ ತತ್ತೇ ಮಯಾ ಧ್ರುವಂ ।
ವದಸ್ವ ನಿರ್ಭಯೋ ಭೂತ್ವಾ ಭಗೀರಥ ಮಹಾಮತೇ ॥ ೬೦ ॥

॥ ಬ್ರಹ್ಮೋವಾಚ ॥

ಭಗೀರಥಃ ಪ್ರಣಮ್ಯೇಶಂ ಹೃಷ್ಟಃ ಪ್ರೋವಾಚ ಶಂಕರಂ ॥ ೬೧ ॥

॥ ಭಗೀರಥ ಉವಾಚ ॥

ಜಟಾಸ್ಥಿತಾಂ ಪಿತೄಣಾಂ ಮೇ ಪಾವನಾಯ ಸರಿದ್ವರಾಂ ।
ತಾಮೇವ ದೇಹಿ ದೇವೇಶ ಸರ್ವಮಾಪ್ತಂ ತತೋ ಭವೇತ್ ॥ ೬೨ ॥

॥ ಬ್ರಹ್ಮೋವಾಚ ॥

ಮಹೇಶೋಽಪಿ ವಿಹಸ್ಯಾಥ ಭಗೀರಥಮುವಾಚ ಹ ॥ ೬೩ ॥

॥ ಶಿವ ಉವಾಚ ॥

ದತ್ತಾ ಮಯೇಯಂ ತೇ ಪುತ್ರ ಪುನಸ್ತಾಂ ಸ್ತುಹಿ ಸುವ್ರತ ॥ ೬೪ ॥

---

೬೦. ಶಿವನು ಹೇಳಿದನು—ಬುದ್ಧಿಶಾಲಿಯಾದ ಎಲೈ ಭಗೀರಥನೆ, ದೇವತೆಗಳೂ ಪಡೆಯದಂತಹ ವರವನ್ನು ನಿನಗೆ ಕೊಡುವೆನು, ಧೈರ್ಯದಿಂದ ಕೇಳು ಎನಲು,

೬೧-೬೨. ಭಗೀರಥನು ಸಂತಸಗೊಂಡು ಶಿವನನ್ನು ನಮಸ್ಕರಿಸಿ ಓ ಮಹಾದೇವ, ನಿನ್ನ ಜಟೆಯಲ್ಲಿರುವ ಗಂಗೆಯನ್ನು ನನ್ನ ಪಿತೃಗಳ ಉದ್ಧಾರಕ್ಕಾಗಿ ಕೊಡು, ಅದರಿಂದ ನನ್ನ ಇಷ್ಟಾರ್ಥವೆಲ್ಲವೂ ಪೂರ್ಣವಾಗುವುದು ಎಂದನು.

೬೩-೬೪. ಆಗ ಶಿವನು ನಕ್ಕು ಭಗೀರಥನನ್ನು ಕುರಿತು ಎಲೈ ಕುಮಾರ, ಹಾಗೆಯೇ ಆಗಲಿ. ಈ ಗಂಗೆಯನ್ನು ನಿನಗೆ ಕೊಟ್ಟಿರುವೆನು, ಇವಳನ್ನೂ ನೀನು ಸ್ತುತಿಸು ಎಂದನು.

॥ ಬ್ರಹ್ಮೋವಾಚ ॥

ತದ್ದೇವವಚನಂ ಶ್ರುತ್ವಾ ತದರ್ಥಂ ತು ತಪೋ ಮಹತ್ ।
ಸ್ತುತಿಂ ಚಕಾರ ಗಂಗಾಯಾ ಭಕ್ತ್ಯಾ ಪ್ರಯತಮಾನಸಃ ॥ ೬೫ ॥

ತಸ್ಯಾ ಅಪಿ ಪ್ರಸಾದಂ ಚ ಪ್ರಾಪ್ಯ ಬಾಲೋಽಪ್ಯಬಾಲವತ್ ।
ಗಂಗಾಂ ಮಹೇಶ್ವರಾತ್ಪ್ರಾಪ್ಯ ಮಾದಾಯಾಗಾದ್ರಸಾತಲಂ ॥ ೬೬ ॥

ನ್ಯವೇದಯತ್ಸ ಮುನಯೇ ಕಪಿಲಾಯ ಮಹಾತ್ಮನೇ ।
ಯಥೋದಿತಪ್ರಕಾರೇಣ ಗಂಗಾಂ ಸಂಸ್ಥಾಪ್ಯ ಯತ್ನತಃ ॥ ೬೭ ॥

ಪ್ರದಕ್ಷಿಣಮಥಾವರ್ತ್ಯ ಕೃತಾಂಜಲಿಪುಟೋಽಬ್ರವೀತ್ ॥ ೬೮ ॥

॥ ಭಗೀರಥ ಉವಾಚ ॥

ದೇವಿ ಮೇ ಪಿತರಃ ಶಾಪಾತ್ಕಪಿಲಸ್ಯ ಮಹಾಮುನೇಃ ।
ಪ್ರಾಪ್ತಾಸ್ತೇ ವಿಗತಿಂ ಮಾತಸ್ತಸ್ಮಾತ್ತಾನ್ಪಾತುಮರ್ಹಸಿ ॥ ೬೯ ॥

---

೬೫. ಮಹಾದೇವನ ಆ ಮಾತನ್ನು ಕೇಳಿ ಭಗೀರಥನು ಗಂಗೆಯನ್ನೂ ಕುರಿತು ತಪಸ್ಸುಮಾಡಿ ಭಕ್ತಿಯಿಂದ ಸ್ತುತಿಸಿ,

೬೬. ಗಂಗಾದೇವಿಯ ಅನುಗ್ರಹವನ್ನೂ ಸಂಪಾದಿಸಿ, ಬಾಲಕನಾದರೂ ಬಲ್ಲಿದನಂತೆ ತನ್ನ ಸಾಮರ್ಥ್ಯದಿಂದ ಗಂಗೆಯನ್ನು ಶಿವನಿಂದ ಪಡೆದು ಪಾತಾಳಕ್ಕೆ ಕರೆದೊಯ್ದನು.

೬೭-೬೮. ಅಲ್ಲಿ ನಡೆದ ಸಮಾಚಾರವನ್ನು ಮಹಾತ್ಮನಾದ ಕಪಿಲ ಮುನಿಗೆ ನಿವೇದಿಸಿದನು. ಆಮೇಲೆ ಅಲ್ಲಿ ಗಂಗೆಯನ್ನು ಸ್ಥಾಪಿಸಿ ಪ್ರದಕ್ಷಿಣೆ ಬಂದು ನಮಸ್ಕರಿಸಿ ಕೈಜೋಡಿಸಿ,

೬೯. ಓ ದೇವಿ, ನನ್ನ ಪಿತೃಗಳು ಕಪಿಲಮಹಾಮುನಿಯ ಶಾಪದಿಂದ ದುರ್ಗತಿಯನ್ನು ಹೊಂದಿರುವರು. ಓ ಮಾತೆ, ಆ ನನ್ನ ಪಿತೃಗಳನ್ನು ಕರುಣೆಯಿಂದ ಉದ್ಧರಿಸಿ ಸಲಹು ಎಂದು ಪ್ರಾರ್ಥಿಸಿದನು.

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಸುರನದೀ ಸರ್ವೇಷಾಮುಪಕಾರಿಕಾ ।
ಲೋಕಾನಾಮುಪಕಾರಾರ್ಥಂ ಪಿತೄಣಾಂ ಪಾವನಾಯ ಚ ॥ ೭೦ ॥

ಅಗಸ್ತ್ಯಪೀತಸ್ಯಾಂಭೋಧೇಃ ಪೂರಣಾಯ ವಿಶೇಷತಃ ।
ಸ್ಮರಣಾದೇವ ಪಾಪಾನಾಂ ನಾಶಾಯ ಸುರನಿಮ್ನಗಾ ॥ ೭೧ ॥

ಭಗೀರಥೋದಿತಂ ಚಕ್ರೇ ರಸಾತಲತಲೇ ಸ್ಥಿತಾನ್ ।
ಭಸ್ಮೀಭೂತಾನ್ನೃಪಸುತಾನ್ಸಾಗರಾಂಶ್ಚ ವಿಶೇಷತಃ ॥ ೭೨ ॥

ವಿನಿರ್ದಗ್ಧಾನಥಾಪ್ಲಾವ್ಯ ಖಾತಪೂರ್ಣಮಥಾಕರೋತ್ ।
ತತೋ ಮೇರುಂ ಸಮಾಪ್ಲಾವ್ಯ ಸ್ಥಿತಾಂ ಬಾಲೋಽಬ್ರವೀನ್ನೃಪಃ ॥ ೭೩ ॥

ಕರ್ಮಭೂಮೌ ತ್ವಯಾ ಭಾವ್ಯಂ ತಥೇತ್ಯಾಗಾದ್ಧಿಮಾಲಯಂ ।
ಹಿಮವತ್ಪರ್ವತಾತ್ಪುಣ್ಯಾದ್ಭಾರತಂ ವರ್ಷಮಭ್ಯಗಾತ್ ॥ ೭೪ ॥

೭೦-೭೨. ದೇವಗಂಗೆಯು ಹಾಗೇ ಆಗಲೆಂದಂಗೀಕರಿಸಿ ಲೋಕಕ್ಷೇಮಕ್ಕಾಗಿಯೂ, ಭಗೀರಥನ ಪಿತೃಗಳ ಉದ್ಧಾರಕ್ಕಾಗಿಯೂ, ಅಗಸ್ತ್ಯಮುನಿಯು ಕುಡಿದ ಸಮುದ್ರವನ್ನು ತುಂಬುವುದಕ್ಕಾಗಿಯೂ, ಸ್ಮರಿಸಿದ ಮಾತ್ರದಿಂದಲೇ ಪಾಪಗಳನ್ನು ನಾಶಮಾಡುವುದಕ್ಕಾಗಿಯೂ ಪಾತಾಳಕ್ಕಿಳಿದು ಭಗೀರಥನ ಭಸ್ಮವಾದ ಪಿತೃಗಳ ಭಸ್ಮವನ್ನು ತೊಳೆದು ಅವರಿಗೆ ಉತ್ತಮಗತಿಯನ್ನುಂಟುಮಾಡಿದಳು.

೭೩. ಆಮೇಲೆ ಮೇರುಗಿರಿಗೆ ಬಂದು ಆ ಗಂಗೆಯು ನಿಂತಳು. ಅವಳನ್ನು ಕುರಿತು ಭಗೀರಥನು ಕರ್ಮಭೂಮಿಯಾದ ಭಾರತದಲ್ಲಿ ನೀನು ಹರಿಯಬೇಕು ಎಂದು ಕೇಳಿಕೊಳ್ಳಲು, ಗಂಗೆಯು ಹಾಗೆಯೇ ಆಗಲೆಂದೊಪ್ಪಿ ಹಿಮಾಲಯಕ್ಕೆ ಬಂದಳು.

೭೪. ಪವಿತ್ರವಾದ ಹಿಮಾಲಯದಿಂದ ಭರತಖಂಡಕ್ಕೆ ಬಂದಳು, ಅಲ್ಲಿ ಹರಿದು ಕೊನೆಗೆ ಪೂರ್ವಸಮುದ್ರವನ್ನು ಸೇರಿದಳು.

ತನ್ಮಧ್ಯತಃ ಪುಣ್ಯನದೀ ಪ್ರಾಯಾತ್ಪೂರ್ವಾರ್ಣವಂ ಪ್ರತಿ ।
ಏವಮೇಷಾಪಿ ತೇ ಪ್ರೋಕ್ತಾ ಗಂಗಾ ಕ್ಷಾತ್ರಾ ಮಹಾಮುನೇ ॥ ೭೫ ॥

ಮಾಹೇಶ್ವರೀ ವೈಷ್ಣವೀ ಚ ಸೈವ ಬ್ರಾಹ್ಮೀ ಚ ಪಾವನೀ ।
ಭಾಗೀರಥೀ ದೇವನದೀ ಹಿಮವಚ್ಛಿಖರಾಶ್ರಯಾ ॥ ೭೬ ॥

ಮಹೇಶ್ವರಜಟಾವಾರಿ ಏವಂ ದ್ವೈವಿಧ್ಯಮಾಗತಂ ।
ವಿಂಧ್ಯಸ್ಯ ದಕ್ಷಿಣೇ ಗಂಗಾ ಗೌತಮೀ ಸಾ ನಿಗದ್ಯತೇ ।
ಉತ್ತರೇ ಸಾಪಿ ವಿಂಧ್ಯಸ್ಯ ಭಾಗೀರಥ್ಯಭಿಧೀಯತೇ ॥ ೭೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ ಭಾಗೀರಥ್ಯವತರಣಂ ನಾಮಾಷ್ಟಸಪ್ತತಿತಮೋಽಧ್ಯಾಯಃ

---

೭೫. ಎಲೈ ನಾರದಮುನಿ, ಹೀಗೆ ನಿನಗೆ ಕ್ಷತ್ರಿಯನು (ಭಗೀರಥನು) ಭೂಲೋಕಕ್ಕೆ ತಂದ ಗಂಗೆಯ ಕಥೆಯನ್ನು ಹೇಳಿದೆನು. ಈ ಗಂಗೆಯೇ ಶಿವನ ಜಟೆಯಿಂದ ಬಂದವಳು, ಹರಿಯ ಪಾದದಿಂದಿಳಿದವಳು, ಬ್ರಹ್ಮಕಮಂಡಲುವಿನಿಂದ ಹೊರಟವಳು.

೭೬. ಹಿಮಾಲಯದಿಂದ ಮುಂದೆ ಹರಿದ ಗಂಗೆಗೆ ಭಾಗೀರಥಿಯೆಂದು ಹೆಸರು, ಮಹೇಶ್ವರನ ಜಟೆಯಲ್ಲಿನ ಗಂಗೆಗೆ ದೇವನದಿಯೆಂದು ಹೆಸರು, ಹೀಗೆ ಎರಡು ಹೆಸರುಗಳಿರುವುವು.

೭೭. ವಿಂಧ್ಯಗಿರಿಯಿಂದ ದಕ್ಷಿಣಕ್ಕೆ ಹರಿಯುವ ಗಂಗೆಗೆ ಗೌತಮೀ ಎಂದು ಹೆಸರು, ಉತ್ತರಕ್ಕೆ ಹರಿಯುವ ಗಂಗೆಗೆ ಭಾಗೀರಥೀ ಎಂದು ಹೆಸರು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಭಾಗೀರಥ್ಯವತರಣವೆಂಬ ಎಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ಒಂಭತ್ತನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಊನಾಶೀತಿತಿತಮೋಽಧ್ಯಾಯಃ

॥ ನಾರದ ಉವಾಚ ॥

ನ ಮನಸ್ತೃಪ್ತಿಮಾಧತ್ತೇ ಕಥಾಃ ಶೃಣ್ವತ್ತ್ವಯೇರಿತಾಃ ।
ಪೃಥಕ್ತೀರ್ಥಫಲಂ ಶ್ರೋತುಂ ಪ್ರವೃತ್ತಂ ಮಮ ಮಾನಸಂ ॥ ೧ ॥

ಕ್ರಮಶೋ ಬ್ರಾಹ್ಮಣಾನೀತಾಂ ಗಂಗಾಂ ಮೇ ಪ್ರಥಮಂ ವದ ।
ಪೃಥಕ್ತೀರ್ಥಫಲಂ ಪುಣ್ಯಂ ಸೇತಿಹಾಸಂ ಯಥಾಕ್ರಮಂ ॥ ೨ ॥

॥ ಬ್ರಹ್ಮೋವಾಚ ॥

ತೀರ್ಥಾನಾಂ ಚ ಪೃಥಗ್ಭಾವಂ ಫಲಂ ಮಾಹಾತ್ಮ್ಯಮೇವ ಚ ।
ಸರ್ವಂ ವಕ್ತುಂ ನ ಶಕ್ನೋಮಿ ನ ಚ ತ್ವಂ ಶ್ರವಣೇ ಕ್ಷಮಃ ॥ ೩ ॥

ಎಪ್ಪತ್ತೊಂಭತ್ತನೆಯ ಅಧ್ಯಾಯವು

೧-೨. ನಾರದಮುನಿಯು ಪ್ರಶ್ನಿಸಿದನು—ಓ ಬ್ರಹ್ಮದೇವ, ನಿನ್ನಿಂದ ಕಥೆಯನ್ನು ಕೇಳಿದಷ್ಟೂ ನನಗೆ ತೃಪ್ತಿಯಿಲ್ಲ. ಇನ್ನೂ ಕೇಳಬೇಕೆನಿಸುತ್ತೆ. ಬೇರೆ ತೀರ್ಥಗಳ ಬೇರೆಬೇರೆ ಫಲಗಳನ್ನು ಕೇಳಬೇಕೆಂಬ ಕುತೂಹಲವಿದೆ, ಬ್ರಾಹ್ಮಣನಾದ ಗೌತಮಮುನಿಯು ಕರೆದುತಂದ ಗಂಗಾನದಿಯ ತೀರ್ಥಗಳನ್ನೂ ಅವುಗಳ ಮಾಹಾತ್ಮ್ಯವನ್ನೂ ಈಗ ಹೇಳು ಎನ್ನಲು,

೩. ಬ್ರಹ್ಮನು ಹೇಳಿದನು—ಎಲೈ ನಾರದ, ಎಲ್ಲ ತೀರ್ಥಗಳ ಭೇದವನ್ನೂ, ಫಲವನ್ನೂ ಮಾಹಾತ್ಮ್ಯವನ್ನೂ ವಿಸ್ತಾರವಾಗಿ ಹೇಳಲು ನನಗೆ ಸಾಧ್ಯವಿಲ್ಲ, ನೀನೂ ಕೇಳಿ ತಿಳಿಯಲಾರೆ.

ತಥಾಪಿ ಕಿಂಚಿದ್ವಕ್ಷ್ಯಾಮಿ ಶೃಣು ನಾರದ ಯತ್ನತಃ ।
ಯಾನ್ಯುಕ್ತಾನಿ ಚ ತೀರ್ಥಾನಿ ಶ್ರುತಿವಾಕ್ಯಾನಿ ಯಾನಿ ಚ ॥ ೪ ॥

ತಾನಿ ವಕ್ಷ್ಯಾಮಿ ಸಂಕ್ಷೇಪಾನ್ನಮಸ್ಕೃತ್ವಾ ತ್ರಿಲೋಚನಂ ।
ಯತ್ರಾಸೌ ಭಗವಾನಾಸೀತ್ಪ್ರತ್ಯಕ್ಷಸ್ತ್ರ್ಯಂಬಕೋ ಮುನೇ ॥ ೫ ॥

ತ್ರ್ಯಂಬಕಂ ನಾಮ ತತ್ತೀರ್ಥಂ ಭುಕ್ತಿಮುಕ್ತಿಪ್ರದಾಯಕಂ ।
ವಾರಾಹಮಪರಂ ತೀರ್ಥಂ ತ್ರಿಷು ಲೋಕೇಷು ವಿಶ್ರುತಂ ॥ ೬ ॥

ತಸ್ಯ ರೂಪಂ ಪ್ರವಕ್ಷ್ಯಾಮಿ ನಾಮ ವಿಷ್ಣೋರ್ಯಥಾಭವತ್ ।
ಪುರಾ ದೇವಾನ್ಪರಾಭೂಯ ಯಜ್ಞಮಾದಾಯ ರಾಕ್ಷಸಃ ॥ ೭ ॥

---

೪. ಆದರೂ ಪ್ರಸಿದ್ಧವಾದಂತಹ, ವೇದಗಳಲ್ಲಿ ಹೇಳಿದ ಕೆಲವು ತೀರ್ಥಗಳನ್ನು ಮಾತ್ರ ಮಹಾದೇವನನ್ನು ಸ್ಮರಿಸಿ ಸಂಕ್ಷೇಪವಾಗಿ ಹೇಳುವೆನು.

೫. ತ್ರ್ಯಂಬಕವೆಂಬೊಂದು ತೀರ್ಥವಿರುವುದು. ಅಲ್ಲಿ ಹಿಂದೆ ಭಗವಾನ್ ಪರಮೇಶ್ವರನು ಭಕ್ತನೊಬ್ಬನಿಗೆ ಪ್ರತ್ಯಕ್ಷನಾಗಿದ್ದನು. ಆದುದರಿಂದ ಆ ತೀರ್ಥಕ್ಕೆ ತ್ರ್ಯಂಬಕವೆಂದು ಹೆಸರು. ಅದು ಭೋಗಮೋಕ್ಷಗಳೆರಡನ್ನೂ ಉಂಟುಮಾಡುವಂತಹ ಮಹಿಮೆಯುಳ್ಳದುದು.

೬. ವಾರಾಹತೀರ್ಥವೆಂಬುದು ಮೂರುಲೋಕಗಳಲ್ಲಿ ಪ್ರಸಿದ್ಧವಾಗಿರುವುದು. ಆ ತೀರ್ಥಕ್ಕೆ ವಿಷ್ಣುವಿನ ವರಾಹವೆಂಬ ಹೆಸರು ಬಂದಿರುವ ಇತಿಹಾಸವನ್ನು ಹೇಳುವೆನು.

೭. ಹಿಂದೆ ಸಿಂಧುಸೇನನೆಂಬ ಓರ್ವ ರಾಕ್ಷಸನಿದ್ದನು, ಅವನು ದೇವತೆಗಳನ್ನು ಜಯಿಸಿ ಯಜ್ಞಪುರುಷನನ್ನು ಹಿಡಿದುಕೊಂಡು ಪಾತಾಳಕ್ಕೆ ಹೋದನು.

ರಸಾತಲಮನುಪ್ರಾಪ್ತಃ ಸಿಂಧುಸೇನ ಇತಿ ಶ್ರುತಃ ।
ಯಜ್ಞೇ ತಲಮನುಪ್ರಾಪ್ತೇ ನಿರ್ಯಜ್ಞಾ ಹ್ಯಭವನ್ಮಹೀ ॥ ೮ ॥

ನಾಯಂ ಲೋಕೋಽಸ್ತಿ ನ ಪರೋ ಯಜ್ಞೇ ನಷ್ಟ ಇತೀತ್ವರಾಃ ।
ಸುರಾಸ್ತಮೇವ ವಿವಿಶೂ ರಸಾತಲಮನುದ್ವಿಷಂ ॥ ೯ ॥

ನಾಶಕ್ನುವಂಸ್ತು ತಂ ಜೇತುಂ ದೇವಾ ಇಂದ್ರಪುರೋಗಮಾಃ ।
ವಿಷ್ಣುಂ ಪುರಾಣಪುರುಷಂ ಗತ್ವಾ ತಸ್ಮೈ ನ್ಯವೇದಯನ್ ॥ ೧೦ ॥

ರಾಕ್ಷಸಸ್ಯ ತು ತತ್ಕರ್ಮ ಯಜ್ಞಭ್ರಂಶಮಶೇಷತಃ ।
ತತಃ ಪ್ರೋವಾಚ ಭಗವಾನ್ವಾರಾಹಂ ವಪುರಾಸ್ಥಿತಃ ॥ ೧೧ ॥

ಶಂಖಚಕ್ರಗದಾಪಾಣಿರ್ಗತ್ವಾ ಚೈವ ರಸಾತಲಂ ।
ಆನಯಿಷ್ಯೇ ಮಖಂ ಪುಣ್ಯಂ ಹತ್ವಾ ರಾಪುಸಪುಂಗವಾನ್ ॥ ೧೨ ॥

೮-೯. ಯಜ್ಞಪುರುಷನು ಪಾತಾಳವನ್ನು ಸೇರಿದರೆ ಭೂಮಿಯಲ್ಲಿ ಯಜ್ಞವೇ ನಡೆಯಲಾರದು. ಜನಗಳಿಗೆ ಇಹಪರಲೋಕಗಳೆರಡರಲ್ಲೂ ಸುಖವು ಲಭಿಸುವುದಿಲ್ಲ—ಎಂದು ದೇವನಾಯಕರು ವ್ಯಥೆಗೊಂಡು ಆ ತಮ್ಮ ಶತ್ರುವನ್ನು ಹಿಂಬಾಲಿಸಿ ತಾವೂ ಪಾತಾಳಕ್ಕೆ ಹೋದರು.

೧೦. ಆದರೆ ಬಲಿಷ್ಠನಾದ ಆ ಸಿಂಧುಸೇನನ್ನು ದೇವೇಂದ್ರಾದಿಗಳು ಜಯಿಸಲಾರದೆ ಹೋದರು. ಆಗ ಪುರಾಣಪುರುಷನಾದ ಹರಿಗೆ ರಾಕ್ಷಸನು ಯಜ್ಞವನ್ನಪಹರಿಸಿದ ಸಮಾಚಾರವನ್ನು ತಿಳಿಸಲು,

೧೧-೧೨. ಆಗ ಭಗವಾನ್ ಹರಿಯು ದೇವತೆಗಳನ್ನು ಕುರಿತು ನಾನೇ ವರಾಹ (ಹಂದಿಯು) ರೂಪವನ್ನು ಧರಿಸಿ, ಶಂಖಚಕ್ರಗದೆಗಳನ್ನು ಹಿಡಿದು, ಪಾತಾಳಕ್ಕೆ ಹೋಗಿ ರಾಕ್ಷಸರೆಲ್ಲರನ್ನೂ ಸಂಹರಿಸಿ ಯಜ್ಞಪುರುಷನನ್ನು ತರುವೆನು. ನೀವೆಲ್ಲರೂ ನಿಶ್ಚಿಂತರಾಗಿ ಸ್ವರ್ಗಕ್ಕೆ ತೆರಳಿರಿ ಎಂದು ಹೇಳಿ,

ಸ್ವಃ ಪ್ರಯಾಂತು ಸುರಾಃ ಸರ್ವೇ ವ್ಯೇತು ವೋ ಮಾನಸೋ ಜ್ವರಃ ।
ಯೇನ ಗಂಗಾ ತಲಂ ಪ್ರಾಪ್ತಾ ಪಥಾ ತೇನೈವ ಚಕ್ರಧೃಕ್ ॥ ೧೩ ॥

ಜಗಾಮ ತರಸಾ ಪುತ್ರ ಭುವಂ ಭಿತ್ತ್ವಾ ರಸಾತಲಂ ।
ಸ ವರಾಹವಪುಃ ಶ್ರೀಮಾನ್ರಸಾತಲನಿವಾಸಿನಃ ॥ ೧೪ ॥

ರಾಕ್ಷಸಾನ್ದಾನವಾನ್ಹತ್ವಾ ಮುಖೇ ಧೃತ್ವಾ ಮಹಾಧ್ವರಂ ।
ವಾರಾಹರೂಪೀ ಭಗವಾನ್ಮಖಮಾದಾಯ ಯಜ್ಞಭುಕ್ ॥ ೧೫ ॥

ಯೇನ ಪ್ರಾಪ ತಲಂ ವಿಷ್ಣುಃ ಪಥಾ ತೇನೈವ ಶತ್ರುಜಿತ್ ।
ಮುಖೇ ನ್ಯಸ್ಯ ಮಹಾಯಜ್ಞಂ ನಿಶ್ಚಕ್ರಾಮ ರಸಾತಲಾತ್ ॥ ೧೬ ॥

ತತ್ರ ಬ್ರಹ್ಮಗಿರೌ ದೇವಾಃ ಪ್ರತೀಕ್ಷಾಂ ಚಕ್ರಿರೇ ಹರೇಃ ।
ಪಥಸ್ತಸ್ಮಾದ್ವಿನಿಃಸೃತ್ಯ ಗಂಗಾಸ್ರವಣಮಭ್ಯಗಾತ್ ॥ ೧೭ ॥

---

೧೩. ಗಂಗೆಯು ಪಾತಾಳಕ್ಕೆ ತೆರಳಿದ ದಾರಿಯಿಂದಲೇ ಭೂಮಿಯನ್ನು ಭೇದಿಸಿ ಪಾತಾಳಕ್ಕೆ ಹೋದನು.

೧೪-೧೬. ವರಾಹರೂಪವನ್ನು ಧರಿಸಿದ ಆ ಹರಿಯು ಪಾತಾಳದಲ್ಲಿದ್ದ ಯಜ್ಞಶತ್ರುಗಳಾದ ರಾಕ್ಷಸರನ್ನೆಲ್ಲಾ ಸಂಹರಿಸಿದನು. ಅಮೇಲೆ ಆ ಭಗವಂತನು ಮುಖದಲ್ಲಿ ಯಜ್ಞಪುರುಷನನ್ನು ಧರಿಸಿಕೊಂಡು ಬಂದದಾರಿಯಲ್ಲಿಯೇ ಪಾತಾಳದಿಂದ ಹಿಂತಿರುಗಿ ಬಂದನು.

೧೭. ಆಗ ಬ್ರಹ್ಮಗಿರಿಯಲ್ಲಿ ದೇವತೆಗಳು ಹರಿಯನ್ನು ನಿರೀಕ್ಷಿಸಿಕೊಂಡಿದ್ದರು. ಹರಿಯು ಆ ದಾರಿಯಿಂದ ಹೊರಟು ಗಂಗಾಜಲಪಾತಕ್ಕೆ ಬಂದನು.

ಪ್ರಾಕ್ಷಾಲಯಚ್ಚ ಸ್ವಾಂಗಾನಿ ಅಸೃಗ್ಲಿಪ್ತಾನಿ ನಾರದ ।
ಗಂಗಾಂಭಸಾ ತತ್ರ ಕುಂಡಂ ವಾರಾಹಮಭವತ್ತತಃ ॥ ೧೮ ॥

ಮುಖೇ ನ್ಯಸ್ತಂ ಮಹಾಯಜ್ಞಂ ದೇವಾನಾಂ ಪುರತೋ ಹರಿಃ ।
ದತ್ತವಾಂಸ್ತ್ರಿದಶಶ್ರೇಷ್ಠೋ ಮುಖಾದ್ಯಜ್ಞೋಽಭ್ಯಜಾಯತ ॥ ೧೯ ॥

ತತಃ ಪ್ರಭೃತಿ ಯಜ್ಞಾಂಗಂ ಪ್ರಧಾನಂ ಸ್ರುವ ಉಚ್ಯತೇ ।
ವಾರಾಹರೂಪಮಭದೇವಂ ವೈ ಕಾರಣಾಂತರಾತ್ ॥ ೨೦ ॥

ತಸ್ಮಾತ್ಪುಣ್ಯತಮಂ ತೀರ್ಥಂ ವಾರಾಹಂ ಸರ್ವಕಾಮದಂ ।
ತತ್ರ ಸ್ನಾನಂ ಚ ದಾನಂ ಚ ಸರ್ವಕ್ರತುಫಲಪ್ರದಂ ॥ ೨೧ ॥

---

೧೮. ಆ ಜಲಾಶಯದಲ್ಲಿ ಗಂಗೆಯ ನೀರಿನಿಂದ ಹರಿಯು ತನ್ನ ವರಾಹಶರೀರಕ್ಕೆ ಅಂಟಿದ ರಕ್ತವೆಲ್ಲವನ್ನೂ ತೊಳೆದುಕೊಂಡನು. ಆದುದರಿಂದ ಆ ಜಲಾಶಯಕ್ಕೆ ವಾರಾಹತೀರ್ಥವೆಂದು ಹೆಸರಾಯಿತು.

೧೯. ಆಮೇಲೆ ಹರಿಯು ಮುಖದಲ್ಲಿ ಧರಿಸಿದ್ದ ಯಜ್ಞಪುರುಷನನ್ನು ದೇವತೆಗಳಿಗೆ ಕೊಟ್ಟನು. ಆದುದರಿಂದ ವೇದವು ಭಗವಂತನ ಮುಖದಿಂದ ಯಜ್ಞವು ಜನಿಸಿತೆಂದು ಸ್ತುತಿಸುತ್ತಿರುವುದು. ಹೀಗೆ ಯಜ್ಞವು ಹರಿಯ ಮುಖ ದಿಂದ ಬಂದಿತು.

೨೦. ಅದುಮೊದಲುಗೊಂಡು ಸ್ರುವವೆಂಬುದು (ವರಾಹಮುಖದ ಆಕಾರವುಳ್ಳ ಹೋಮಮಾಡುವ ಪಾತ್ರೆ) ಯಜ್ಞಕ್ಕೆ ಪ್ರಧಾನವಾದ ಅಂಗವಾಯಿತು, ಎಲೈ ನಾರದ, ಈ ಕಾರಣದಿಂದ ಹರಿಯು ವರಾಹರೂಪವನ್ನು ಧರಿಸಿದನು.

೨೧. ಆದುದರಿಂದ ವರಾಹತೀರ್ಥವು ಮಹಾಪುಣ್ಯಪ್ರದವಾದುದು. ಆ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ಸಕಲಯಜ್ಞಗಳ ಫಲವೂ ಲಭಿಸುವುದು.

ತತ್ರ ಸ್ಥಿತೋऽಪಿ ಯಃ ಕಶ್ಚಿತ್ಪಿತೄನ್ಸ್ಮರತಿ ಪುಣ್ಯಕೃತ್ ।
ವಿಮುಕ್ತಾಃ ಸರ್ವಪಾಪೇಭ್ಯಃ ಪಿತರಃ ಸ್ವರ್ಗಮಾಪ್ನುಯುಃ ೨೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ತೀರ್ಥಮಾಹಾತ್ಮ್ಯೇ ವರಾಹತೀರ್ಥವರ್ಣನಂ
ನಾಮೋನಾಶೀತಿತಮೋऽಧ್ಯಾಯಃ

---

೨೨. ಆ ತೀರ್ಥದ ಬಳಿಯಲ್ಲಿ ನಿಂತು ತನ್ನ ಪಿತೃಗಳನ್ನು ಸ್ಮರಿಸಿದರೂ ಸಾಕು, ಅಂತಹವನ ಪಿತೃಗಳೆಲ್ಲರೂ ಪರಿಶುದ್ಧರಾಗಿ ಸ್ವರ್ಗವನ್ನು ಪಡೆಯುವರು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ವರಾಹತೀರ್ಥವರ್ಣನವೆಂಬ ಎಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ಹತ್ತನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಅಶೀತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಕುಶಾವರ್ತಸ್ಯ ಮಾಹಾತ್ಮ್ಯಮಹಂ ವಕ್ತುಂ ನ ತೇ ಕ್ಷಮಃ ।
ತಸ್ಯ ಸ್ಮರಣಮಾತ್ರೇಣ ಕೃತಕೃತ್ಯೋ ಭವೇನ್ನರಃ ॥ ೧ ॥

ಕುಶಾವರ್ತಮಿತಿ ಖ್ಯಾತಂ ನರಾಣಾಂ ಸರ್ವಕಾಮದಂ ।
ಕುಶೇನಾವರ್ತಿತಂ ಯತ್ರ ಗೌತಮೇನ ಮಹಾತ್ಮನಾ ॥ ೨ ॥

ಕುಶೇನಾವರ್ತಯಿತ್ವಾ ತು ಆನಯಾಮಾಸ ತಾಂ ಮುನಿಃ ।
ತತ್ರ ಸ್ನಾನಂ ಚ ದಾನಂ ಚ ಪಿತೄಣಾಂ ತೃಪ್ತಿದಾಯಕಂ ॥ ೩ ॥

ಎಂಭತ್ತನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು–ಕುಶಾವರ್ತವೆಂಬ ತೀರ್ಥಕ್ಷೇತ್ರವಿರುವುದು. ಅದರ ಮಹಿಮೆಯನ್ನು ಸಂಪೂರ್ಣವಾಗಿ ನಾನೂ ವರ್ಣಿಸಲಾರೆನು. ಆ ತೀರ್ಥವನ್ನು ಸ್ಮರಿಸಿದ ಮಾತ್ರದಿಂದಲೇ ಮಾನವನು ಕೃತಕೃತ್ಯನಾಗುವನು.

೨. ಕುಶಾವರ್ತತೀರ್ಥವು ಮಾನವರಿಗೆ ಸಕಲೇಷ್ಟಾರ್ಥಗಳನ್ನೂ ಉಂಟು ಮಾಡುವುದು. ಮಹಾತ್ಮನಾದ ಗೌತಮಮುನಿಯು ಆ ತೀರ್ಥವನ್ನು ಕುಶಗಳಿಂದ ನಿರ್ಮಿಸಿರುವನು.

೩. ಆ ತೀರ್ಥಕ್ಕೆ ಗೌತಮಮಹಾಮುನಿಯು ದರ್ಭೆಗಳಿಂದ ಆಕರ್ಷಿಸಿ ಗಂಗೆಯನ್ನು ತಂದನು. ಆದುದರಿಂದ ಅದಕ್ಕೆ ಕುಶಾವರ್ತವೆಂದು ಹೆಸರಾಯಿತು. ಆ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ಪಿತೃಗಳಿಗೆ ತೃಪ್ತಿಯಾಗುವುದು.

ನೀಲಗಂಗಾ ಸರಿಚ್ಛ್ರೇಷ್ಠಾ ನಿಃಸೃತಾ ನೀಲಪರ್ವತಾತ್ ।
ತತ್ರ ಸ್ನಾನಾದಿ ಯತ್ಕಿಂಚಿತ್ಕರೋತಿ ಪ್ರಯತೋ ನರಃ ॥ ೪ ॥

ಸರ್ವಂ ತದಕ್ಷಯಂ ವಿದ್ಯಾತ್ಪಿತೄಣಾಂ ತೃಪ್ತಿದಾಯಕಂ ।
ವಿಶ್ರುತಂ ತ್ರಿಷು ಲೋಕೇಷು ಕಪೋತಂ ತೀರ್ಥಮುತ್ತಮಂ ॥ ೫ ॥

ತಸ್ಯ ರೂಪಂ ಚ ವಕ್ಷ್ಯಾಮಿ ಮುನೇ ಶೃಣು ಮಹಾಫಲಂ ।
ತತ್ರ ಬ್ರಹ್ಮಗಿರೌ ಕಶ್ಚಿದ್ವ್ಯಾಧಃ ಪರಮದಾರುಣಃ ॥ ೬ ॥

ಹಿನಸ್ತಿ ಬ್ರಾಹ್ಮಣಾನ್ಸಾಧೂನ್ಯತೀನ್ಗೋಪಕ್ಷಿಣೋ ಮೃಗಾನ್ ।
ಏವಂಭೂತಃ ಸ ಪಾಪಾತ್ಮಾ ಕ್ರೋಧನೋಽನೃತಭಾಷಣಃ ॥ ೭ ॥

---

೪. ನೀಲಗಂಗೆಯೆಂಬ ಶ್ರೇಷ್ಠನದಿಯು ನೀಲಗಿರಿಯಿಂದ ಹೊರಟಿರುವುದು. ಆ ನದಿಯಲ್ಲಿ ಸ್ನಾನಮೊದಲಾದುವುಗಳನ್ನು ಶ್ರದ್ಧೆಯಿಂದ ಮಾಡಿದರೆ ಅಕ್ಷಯವಾದ ಪುಣ್ಯವು ಲಭಿಸುವುದು, ಪಿತೃಗಳಿಗೂ ತೃಪ್ತಿಯಾಗುವುದು.

೫. ಕಪೋತವೆಂಬ ತೀರ್ಥವು ಜಗತ್ತಿನಲ್ಲಿ ಪ್ರಸಿದ್ಧವಾಗಿರುವುದು. ಎಲೈ ನಾರದಮುನಿ, ಆ ತೀರ್ಥದ ಇತಿಹಾಸವನ್ನು ಹೇಳುವೆನು ಕೇಳು, ಅದರಿಂದ ಮಹಾಫಲವುಂಟಾಗುವುದು.

೬. ಬ್ರಹ್ಮಗಿರಿಯಲ್ಲಿ ಒಬ್ಬ ಬೇಡನಿದ್ದನು. ಅವನು ಬಹುಕ್ರೂರನಾಗಿದ್ದು ಬ್ರಾಹ್ಮಣರನ್ನೂ, ಸತ್ಪುರುಷರನ್ನೂ, ಯತಿಗಳನ್ನೂ ಗೋವು ಮತ್ತು ಪಕ್ಷಿಗಳನ್ನೂ ಮೃಗಗಳನ್ನೂ ಹಿಂಸಿಸುತ್ತಿದ್ದನು.

೭-೮. ಇಂತಹ ಪಾಪಿಷ್ಠನಾದ ಆ ಬೇಡನು ಮಹಾಕೋಪಿಷ್ಠನಾಗಿದ್ದನು. ಸದಾ ಸುಳ್ಳುಮಾತುಗಳನ್ನೇ ಆಡುತ್ತಿದ್ದನು. ಅವನ ಆಕಾರವು ಅತಿ ಭಯಂಕರವಾಗಿದ್ದಿತು. ಕಣ್ಣುಗಳು ಕಪ್ಪಾಗಿದ್ದವು, ತೋಳುಗಳು ಮೊಟಕಾಗಿದ್ದುವು, ಹಲ್ಲುಗಳು ಉದ್ದುದ್ದವಾಗಿದ್ದುವು, ಒಂದು ಕಣ್ಣು ಹೋಗಿದ್ದಿತು,

ಭೀಷಣಾಕೃತಿರತ್ಯುಗ್ರೋ ನೀಲಾಕ್ಷೋ ಹ್ರಸ್ವಬಾಹುಕಃ ।
ದಂತುರೋ ನಷ್ಟನಾಸಾಕ್ಷೋ ಹ್ರಸ್ವಪಾತ್ಪೃಥುಕುಕ್ಷಿಕಃ ॥ ೮ ॥

ಹ್ರಸ್ವೋದರೋ ಹ್ರಸ್ವಭುಜೋ ವಿಕೃತೋ ಗರ್ದಭಸ್ವನಃ ।
ಪಾಶಹಸ್ತಃ ಪಾಪಚಿತ್ತಃ ಪಾಪಿಷ್ಠಃ ಸಧನುಃ ಸದಾ ॥ ೯ ॥

ತಸ್ಯ ಭಾರ್ಯಾ ತಥಾಭೂತಾ ಅಪತ್ಯಾನ್ಯಪಿ ನಾರದ ।
ತಯಾ ತು ಪ್ರೇರ್ಯಮಾಣೋಽಸೌ ವಿವೇಶ ಗಹನಂ ವನಂ ॥ ೧೦ ॥

ಸ ಜಘಾನ ಮೃಗಾನ್ಪಾಪಃ ಪಕ್ಷಿಣೋ ಬಹುರೂಪಿಣಃ ।
ಪಂಜರೇ ಪ್ರಾಕ್ಷಿಪತ್ಕಾಂಶ್ಚಿಜ್ಜೀವಮಾನಾಂಸ್ತಥೇತರಾನ್ ॥ ೧೧ ॥

ಕ್ಷುಧಯಾ ಪರಿತಪ್ತಾಂಗೋ ವಿಹ್ವಲಸ್ತೃಷಯಾ ತಥಾ ।
ಭ್ರಾಂತದೇಶೋ ಬಹುತರಂ ನ್ಯವರ್ತತ ಗೃಹಂ ಪ್ರತಿ ॥ ೧೨ ॥

ಮೂಗು ಮುರಿದಿದ್ದಿತು, ಕಾಲುಗಳೂ ಗಿಡ್ಡವಾಗಿದ್ದುವು, ಹೊಟ್ಟೆಯು ದೊಡ್ಡದಾಗಿದ್ದಿತು.

೯. ಇಂತಹ ವಿಕಾರವಾದ ಆಕಾರವುಳ್ಳ ಆ ಬೇಡನ ಧ್ವನಿಯು ಕತ್ತೆಯಕೂಗಿನಂತೆ ಕಠೋರವಾಗಿದ್ದಿತು. ಕತ್ತೆಯಂತಹ ಧ್ವನಿಯುಳ್ಳವನಾಗಿದ್ದು ಸದಾ ಒಂದು ಹಗ್ಗ, ಒಂದು ಕೋಲು, ಒಂದು ಧನಸ್ಸು ಇವುಗಳನ್ನು ಹಿಡಿದು ತಿರುಗುತ್ತಿದ್ದನು.

೧೦. ಆ ಬೇಡನ ಹೆಂಡತಿಯೂ ಮಕ್ಕಳೂ ಅವನಂತೆ ದುರಾತ್ಮರೂ ವಿಕಾರರೂಪವುಳ್ಳವರೂ ಆಗಿದ್ದರು. ಆ ದುರಾತ್ಮನೊಂದುದಿನ ಹೆಂಡತಿಯಮಾತಿನಂತೆ ಆಹಾರವನ್ನು ತರಲು ಕಾಡಿಗೆ ಹೋಗಿ,

೧೧. ಅನೇಕ ಮೃಗಗಳನ್ನು ಕೊಂದನು, ಅನೇಕ ಪಕ್ಷಿಗಳನ್ನು ಕೊಂದನು. ಕೆಲವು ಪಕ್ಷಿಗಳನ್ನು ಜೀವವಿದ್ದಂತೆ ಹಿಡಿದು ಪಂಜರದಲ್ಲಿರಿಸಿದನು.

೧೨. ಬೇಟೆಗಾಗಿ ಬಹಳವಾಗಿ ಓಡಾಡಿದುದರಿಂದ ಅವನಿಗೆ ಹಸಿವು ನೀರಡಿಕೆಗಳುಂಟಾದುವು. ಆದರಿಂದ ಅವನು ಮನೆಗೆ ಹಿಂತಿರುಗಿದನು.

ತತೋಽಪರಾಹ್ಣೇ ಸಂಪ್ರಾಪ್ತೇ ನಿವೃತ್ತೇ ಮಧುಮಾಧವೇ ।
ಕ್ಷಣಾತ್ತಡಿದ್ಗರ್ಜಿತಂ ಚ ಸಾಭ್ರಂ ಚೈವಾಭವತ್ತದಾ ॥ ೧೩ ॥

ವವೌ ವಾಯುಃ ಸಾಶ್ಮವರ್ಷೋ ವಾರಿಧಾರಾತಿಭೀಷಣಃ ।
ಸ ಗಚ್ಛನ್ ಲುಬ್ಧಕಃ ಶ್ರಾಂತಃ ಪಂಥಾನಂ ನಾವಬುಧ್ಯತ ॥ ೧೪ ॥

ಜಲಂ ಸ್ಥಲಂ ಗರ್ತಮಥೋ ಪಂಥಾನಮಥವಾ ದಿಶಃ ।
ನ ಬುಬೋಧ ತದಾ ಪಾಪಃ ಶ್ರಾಂತಃ ಶರಣಮೈಚ್ಛತ ॥ ೧೫ ॥

ಕ್ವ ಗಚ್ಛಾಮಿ ಕ್ವ ತಿಷ್ಠೇಯಂ ಕಿಂ ಕರೋಮೀತ್ಯಚಿಂತಯತ್ ।
ಸರ್ವೇಷಾಂ ಪ್ರಾಣಿನಾಂ ಪ್ರಾಣಾನಾಹರ್ತಾಹಂ ಯಥಾಂತಕಃ ॥ ೧೬ ॥

ಮಮಾಪ್ಯಂತಕರಂ ಭೂತಂ ಸಂಪ್ರಾಪ್ತಂ ಚಾಶ್ಮವರ್ಷಣಂ ।
ತ್ರಾತಾರಂ ನೈವ ಪಶ್ಯಾಮಿ ಶಿಲಾಂ ವಾ ವೃಕ್ಷಮಂತಿಕೇ ॥ ೧೭ ॥

---

೧೩. ಆಗ ಸೂರ್ಯನು ಗಗನಮಧ್ಯವನ್ನು ಬಿಟ್ಟು ಕೆಳಮುಖನಾಗಿದ್ದನು. ಅಪರಾಹ್ಣವಾಗಿತ್ತು. ವಸಂತಋತುವಿನ (ಅಥವಾ ಚೈತ್ರಮಾಸದ) ಕೊನೆಯದಿನಗಳಾಗಿದ್ದುವು. ಇಂತಹ ಸಮಯದಲ್ಲಿ ಅಕಸ್ಮಾತ್ ಆಕಾಶದಲ್ಲಿ ಮೋಡಗಳು ಕಾಣಿಸಿಕೊಂಡುವು, ಮಿಂಚುಸಿಡಿಲುಗಳುಂಟಾದುವು.

೧೪. ಬಿರುಗಾಳಿಯು ಬೀಸಿತು, ಹಿಮದ ಕಲ್ಲುಗಳು ಬಿದ್ದುವು, ಜಡಿಮಳೆಯು ಸುರಿಯತೊಡಗಿತು. ದಾರಿಯಲ್ಲಿ ಹೋಗುತ್ತಿರುವ ಆ ಬೇಡನಿಗೆ ಮಾರ್ಗವೇ ತೋರಲಿಲ್ಲ.

೧೫. ನೀರಾವುದು, ನೆಲವಾವುದು, ಹಳ್ಳವಾವುದು, ದಿಕ್ಕಾವುದು, ದಾರಿಯಾವುದು ಎಂದು ಆ ಬೇಡನಿಗೆ ತಿಳಿಯಲೇ ಇಲ್ಲ. ಎಲ್ಲೆಲ್ಲೂ ನೀರೇ ನೀರು, ವಿಶ್ರಮಿಸಿಕೊಳ್ಳಲೂ ಸಹ ಒಂದು ಸ್ಥಳವು ಸಿಕ್ಕಲಿಲ್ಲ.

೧೬-೧೭. ಎಲ್ಲಿಗೆ ಹೋಗಲಿ, ಎಲ್ಲಿ ನಿಲ್ಲಲಿ, ಏನುಮಾಡಲಿ? ನಾನು ಮೃತ್ಯುವಿನಂತೆ ಪ್ರಾಣಿಗಳೆಲ್ಲವನ್ನೂ ಹಿಂಸಿಸತಕ್ಕವನು. ಇಂತಹ ನನಗೂ ಮೃತ್ಯುವನ್ನುಂಟುಮಾಡುವಂತೆ ಮಳೆಯು ಸುರಿಯುತ್ತಿರುವುದು. ತಲೆಯಮೇಲೆ ದೊಡ್ಡದೊಡ್ಡ ಹಿಮಶಿಲೆಗಳು ಬೀಳುತ್ತಿರುವುವು. ಹತ್ತಿರದಲ್ಲಿ ವಿಶ್ರಮಿಸಿಕೊಳ್ಳಲು ಅನುಕೂಲವಾದ ಕಲ್ಲುಬಂಡೆಯಾಗಲಿ, ಮರವಾಗಲಿ ಇಲ್ಲವಲ್ಲಾ.

ಏವಂ ಬಹುವಿಧಂ ವ್ಯಾಧೋ ವಿಚಿಂತ್ಯಾಪಶ್ಯದಂತಿಕೇ ।
ವನೇ ವನಸ್ಪತಿಮಿವ ನಕ್ಷತ್ರಾಣಾಂ ಯಥಾತ್ರಿಜಂ ॥ ೧೮ ॥

ಮೃಗಾಣಾಂ ಚ ಯಥಾ ಸಿಂಹಮಾಶ್ರಮಾಣಾಂ ಗೃಹಾಧಿಪಂ ।
ಇಂದ್ರಿಯಾಣಾಂ ಮನ ಇವ ತ್ರಾತಾರಂ ಪ್ರಾಣಿನಾಂ ನಗಂ ॥ ೧೯ ॥

ಶ್ರೇಷ್ಠಂ ವಿಟಪಿನಂ ಶುಭ್ರಂ ಶಾಖಾಪಲ್ಲವಮುಂಡಿತಂ ।
ತಮಾಶ್ರಿತ್ಯೋಪವಿಷ್ಟೋಽಭೂತ್ಕ್ಲಿನ್ನವಾಸಾ ಸ ಲುಬ್ಧಕಃ ॥ ೨೦ ॥

ಸ್ಮರನ್ಭಾರ್ಯಾಮಪತ್ಯಾನಿ ಜೀವೇಯುರಥವಾ ನ ವಾ ।
ಏತಸ್ಮಿನ್ನಂತರೇ ತತ್ರ ಚಾಸ್ತಂ ಪ್ರಾಪ್ತೋ ದಿವಾಕರಃ ॥ ೨೧ ॥

ತಮೇವ ನಗಮಾಶ್ರಿತ್ಯ ಕಪೋತೋ ಭಾರ್ಯಯಾ ಸಹ ।
ಪುತ್ರಪೌತ್ರೈಃ ಪರಿವೃತೋ ಹ್ಯಾಸ್ತೇ ತತ್ರ ನಗೋತ್ತಮೇ ॥ ೨೨ ॥

---

೧೮. ಎಂದು ಚಿಂತಿಸುತ್ತಾ ಆ ಬೇಡನು ಹೋಗುತ್ತಿರಲು ಅವನಿಗೆ ದೊಡ್ಡದೊಂದು ಮರವು ದೂರದಲ್ಲಿ ಕಾಣಿಸಿತು. ಅದು ನಕ್ಷತ್ರಗಳ ಮಧ್ಯದಲ್ಲಿರುವ ಚಂದ್ರನಂತೆ ಮರಗಳಲ್ಲಿ ಮಹಾವೃಕ್ಷವಾಗಿದ್ದಿತು.

೧೯. ಆ ವೃಕ್ಷವು ಮೃಗಗಳಲ್ಲಿ ಸಿಂಹದಂತೆಯೂ, ಆಶ್ರಮಗಳಲ್ಲಿ ಗೃಹಸ್ಥಾಶ್ರಮದಂತೆಯೂ, ಇಂದ್ರಿಯಗಳಲ್ಲಿ ಮನಸ್ಸಿನಂತೆಯೂ ಶ್ರೇಷ್ಠವಾಗಿದ್ದಿತು. ಎಲ್ಲಾ ಪ್ರಾಣಿಗಳಿಗೆ ಆಶ್ರಯವಾಗಿದ್ದಿತು. ಕೊಂಬೆ ಎಲೆಗಳಿಂದ ಅದು ಶೋಭಿಸುತ್ತಿದ್ದಿತು.

೨೦. ಅಂತಹ ಆ ಆಲದಮರವನ್ನಾಶ್ರಯಿಸಿ ಆ ಬೇಡನು ಕುಳಿತುಕೊಂಡನು. ಅವನ ಬಟ್ಟೆಯೆಲ್ಲವೂ ಒದ್ದೆಮುದ್ದೆಯಾಗಿದ್ದಿತು. ಅಲ್ಲಿ ಕುಳಿತು ಅವನು ನನ್ನ ಹೆಂಡರು ಮಕ್ಕಳು ಬದುಕಿರುವರೋ ಇಲ್ಲವೊ? ಎಂದು ಚಿಂತಿಸುತ್ತಿದ್ದನು.

೨೧–೨೨. ಹೀಗಿರಲು ಸೂರ್ಯನು ಮುಳುಗಿದನು, ಅದೇ ಆಲದಮರವನ್ನಾಶ್ರಯಿಸಿ ಒಂದು ಪಾರಿವಾಳವು ತನ್ನ ಹೆಂಡಿರುಮಕ್ಕಳೊಡನೆ ಅಲ್ಲಿ ವಾಸವಾಗಿದ್ದಿತು.

ಸುಖೇನ ನಿರ್ಭಯೋ ಭೂತ್ವಾ ಸುತೃಪ್ತಃ ಪ್ರೀತ ಏವ ಚ ।
ಬಹವೋ ವತ್ಸರಾ ಯಾತಾ ವಸತಸ್ತಸ್ಯ ಪಕ್ಷಿಣಃ ॥ ೨೩ ॥

ಪತಿವ್ರತಾ ತಸ್ಯ ಭಾರ್ಯಾ ಸುಪ್ರೀತಾ ತೇನ ಚೈವ ಹಿ ।
ಕೋಟರೇ ತನ್ನಗೇ ಶ್ರೇಷ್ಠೇ ಜಲವಾಯ್ವಗ್ನಿವರ್ಜಿತೇ ॥ ೨೪ ॥

ಭಾರ್ಯಾಪುತ್ರೈಃ ಪರಿವೃತಃ ಸರ್ವದಾಸ್ತೇ ಕಪೋತಕಃ ।
ತಸ್ಮಿನ್ದಿನೇ ದೈವಶಾತ್ಕಪೋತಶ್ಚ ಕಪೋತಕೀ ॥ ೨೫ ॥

ಭಕ್ಷ್ಯಾರ್ಥಂ ತು ಉಭೌ ಯಾತೌ ಕಪೋತೋ ನಗಮಭ್ಯಗಾತ್ ।
ಸಾಪಿ ದೈವವಶಾತ್ಪತ್ರ ಪಂಜರಸ್ಥೈವ ವರ್ತತೇ ॥ ೨೬ ॥

ಗೃಹೀತಾ ಲುಬ್ಧಕೇನಾಥ ಜೀವಮಾನೇವ ವರ್ತತೇ ।
ಕಪೋತಕೋಽಪ್ಯಪತ್ಯಾನಿ ಮಾತೃಹೀನಾನ್ಯುದೀಕ್ಷ್ಯ ಚ ॥ ೨೭ ॥

---

೨೩. ಆ ಮರದಲ್ಲಿ ಯಾವ ಭಯವೂ ಇಲ್ಲದೇ ಸುಖವಾಗಿ ತೃಪ್ತಿಯಿಂದ ಬಹುಕಾಲದಿಂದ ಆ ಪಾರಿವಾಳವು ವಾಸವಾಗಿದ್ದಿತು. ಆ ಪಾರಿವಾಳದ ಹೆಂಡತಿಯು ಪತಿವ್ರತೆಯಾಗಿದ್ದಿತು, ಆ ಕಪೋತನಲ್ಲಿಯೇ ಹೆಚ್ಚಾದ ಪ್ರೀತಿಯನ್ನಿಟ್ಟಿತ್ತು.

೨೪. ಆ ಆಲದಮರದ ಪೊಟರೆಯಲ್ಲಿ ನೀರುಗಾಳಿಬೆಂಕಿಗಳ ಭಯವಿಲ್ಲದೆ ಆ ಪಾರಿವಾಳವು ತನ್ನ ಹೆಂಡಿರುಮಕ್ಕಳೊಡನೆ ವಾಸವಾಗಿದ್ದಿತು.

೨೫. ಆದಿನ ಅದೃಷ್ಟವಶಾತ್ ಆ ಕಪೋತಗಳೆರಡೂ ಆಹಾರವನ್ನು ಸಂಗ್ರಹಿಸಲು ಸ್ಥಳಾಂತರಕ್ಕೆ ಹೋಗಿದ್ದುವು, ಅವುಗಳಲ್ಲಿ ಗಂಡುಪಾರಿವಾಳವು ಮೊದಲು ಬಂದು ತನ್ನ ಗೂಡಿನಲ್ಲಿ ಕುಳಿತಿತ್ತು.

೨೬. ಹೆಣ್ಣುಕಪೋತವನ್ನು ದುರದೃಷ್ಟವಶಾತ್ ಆ ಬೇಡನು ಜೀವಸಹಿತವಾಗಿ ಹಿಡಿದು ಪಂಜರದಲ್ಲಿರಿಸಿ ಅಲ್ಲಿಯೇ ಕುಳಿತಿದ್ದನು.

೨೭-೨೮. ಗಂಡುಕಪೋತವು ಮೊದಲು ಗೂಡಿಗೆ ಬಂದು ತಾಯಿಯಿಲ್ಲದ ತನ್ನ ಮರಿಗಳನ್ನು ನೋಡಿ, ಸೂರ್ಯನು ಮುಳುಗಿಕತ್ತಲೆಯಾಗಿ

ವರ್ಷಂ ಚ ಭೀಷಣಂ ಪ್ರಾಸ್ತಮಸ್ತಂ ಯಾತೋ ದಿವಾಕರಃ ।
ಸ್ವಕೋಟರಂ ತಯಾ ಹೀನಮಾಲೋಕ್ಯ ವಿಲಲಾಪ ಸಃ ॥ ೨೮ ॥

ತಾಂ ಬದ್ಧಾಂ ಪಂಚರಸ್ಥಾಂ ವಾ ನ ಬುಬೋಧ ಕಪೋತರಾಟ್ ।
ಅನ್ವಾರೇಭೇ ಕಪೋತೋ ನ್ವೈ ಪ್ರಿಯಾಯಾ ಗುಣಕೀರ್ತನಂ ॥ ೨೯ ॥

ನಾದ್ಯಾಪ್ಯಾಯಾತಿ ಕಲ್ಯಾಣೀ ಮಮ ಹರ್ಷವಿವರ್ಧಿನೀ ।
ಮಮ ಧರ್ಮಸ್ಯ ಜನನೀ ಮಮ ದೇಹಸ್ಯ ಚೇಶ್ವರೀ ॥ ೩೦ ॥

ಧರ್ಮಾರ್ಥಕಾಮಮೋಕ್ಷಾಣಾಂ ಸೈವ ನಿತ್ಯಂ ಸಹಾಯಿನೀ ।
ತುಷ್ಟೇ ಹಸಂತೀ ರುಷ್ಟೇ ಚ ಮಮ ದುಃಖಪ್ರಮಾರ್ಜನೀ ॥ ೩೧ ॥

ಸಖೀ ಮಂತ್ರೇಷು ಸಾ ನಿತ್ಯಂ ಮಮ ವಾಕ್ಯರತಾ ಸದಾ ।
ನಾದ್ಯಾಪ್ಯಾಯಾತಿ ಕಲ್ಯಾಣೀ ಸಂಪ್ರಯಾತೇಽಪಿ ಭಾಸ್ಕರೇ ॥ ೩೨ ॥

ದ್ದರೂ ತನ್ನ ಹೆಂಡತಿಯು ಗೂಡಿಗೆ ಬಾರದಿದ್ದುದರಿಂದ ಬಹಳವಾಗಿ ವಿಲಾಪಿಸಿತು.

೨೯. ಹೆಣ್ಣುಪಾರಿವಾಳವು ಪಂಜರಕ್ಕೆ ಸಿಕ್ಕಿರುವುದು ಆ ಕಪೋತಕ್ಕೆ ತಿಳಿಯಲಿಲ್ಲ. ಆಗ ಅದು ತನ್ನ ಹೆಂಡತಿಯ ಸುಗುಣಗಳನ್ನು ಹೊಗಳುತ್ತಾ ಹೀಗೆ ವಿಲಾಪಿಸಿತು.

೩೦. ನನಗೆ ಸಂತಸವನ್ನುಂಟುಮಾಡುವ ಮಂಗಳರೂಪೆಯಾದ ಪ್ರಿಯೆಯು ಇದುವರೆಗೂ ಬಂದಿಲ್ಲ. ಅವಳು ನನ್ನ ಧರ್ಮಕ್ಕೆ ಸಹಾಯಕಳು, ನನ್ನ ಶರೀರದ ಒಡತಿಯು.

೩೧. ನನಗೆ ಧರ್ಮಾರ್ಥಕಾಮಮೋಕ್ಷಗಳಲ್ಲಿ ನಿತ್ಯವೂ ಸಹಾಯಕಳಾಗಿದ್ದಳು. ನನ್ನ ಸಂತೋಷದಿಂದ ಅವಳೂ ಸಂತಸಗೊಳ್ಳುತ್ತಿದ್ದಳು. ಕೋಪ ಕಾಲದಲ್ಲಿ ಇಂಪಾದ ಮಾತುಗಳಿಂದ ಸಮಾಧಾನಮಾಡುತ್ತಿದ್ದಳು.

೩೨. ಸಂದಿಗ್ಧಸಮಯಗಳಲ್ಲಿ ಸ್ನೇಹಿತಳಂತೆ ಸಲಹೆಯನ್ನು ಕೊಡುತ್ತಿದ್ದಳು, ಯಾವಾಗಲೂ ನನ್ನ ಮಾತಿನಂತೆಯೇ ನಡೆಯುತ್ತಿದ್ದಳು, ಇಂತಹ ಗುಣವತಿಯಾದ ಪ್ರಿಯೆಯು ಇನ್ನೂ ಬರಲಿಲ್ಲವಲ್ಲಾ ? ಸೂರ್ಯನೂ ಮುಳುಗಿದನು.

ನ ಜಾನಾತಿ ವ್ರತಂ ಮಂತ್ರಂ ದೈವಂ ಧರ್ಮಾರ್ಥಮೇವ ಚ ।
ಪತಿವ್ರತಾ ಪತಿಪ್ರಾಣಾ ಪತಿಮಂತ್ರಾ ಪತಿಪ್ರಿಯಾ ॥ ೩೩ ॥

ನಾದ್ಯಾಪ್ಯಾಯಾತಿ ಕಲ್ಯಾಣೀ ಕಿಂ ಕರೋಮಿ ಕ್ವ ಯಾಮಿ ವಾ ।
ಕಿಂ ಮೇ ಗೃಹಂ ಕಾನನಂ ಚ ತಯಾ ಹೀನಂ ಹಿ ದೃಶ್ಯತೇ ॥ ೩೪ ॥

ತಯಾ ಯುಕ್ತಂ ಶ್ರಿಯಾ ಯುಕ್ತಂ ಭೀಷಣಂ ವಾಪಿ ಶೋಭನಂ ।
ನಾದ್ಯಾಪ್ಯಾಯಾತಿ ಮೇ ಕಾಂತಾ ಯಯಾ ಗೃಹಮುದೀರಿತಂ ॥ ೩೫ ॥

ವಿನಾನಯಾ ನ ಜೀವಿಷ್ಯೇ ತ್ಯಜೇ ವಾಪಿ ಪ್ರಿಯಾಂ ತನುಂ ।
ಕಿಂ ಕುರ್ವಂತು ತ್ವಪತ್ಯಾನಿ ಲುಪ್ತಧರ್ಮಸ್ತ್ವಹಂ ಪುನಃ ॥ ೩೬ ॥

ಏವಂ ವಿಲಪತಸ್ತಸ್ಯ ಭರ್ತುರ್ವಾಕ್ಯಂ ನಿಶಮ್ಯ ಸಾ ।
ಪಂಜರಸ್ಥೈವ ಸಾ ವಾಕ್ಯಂ ಭರ್ತಾರಮಿದಮಬ್ರವೀತ್ ॥ ೩೭ ॥

---

೩೩. ಅವಳಿಗೆ ಇನ್ನಾವ ಮಂತ್ರವೂ ತಿಳಿಯದು. ದೇವರೂ ತಿಳಿಯದು ಧರ್ಮಾರ್ಥಗಳೂ ತಿಳಿಯದು, ಪಾತಿವ್ರತ್ಯವೇ ಅವಳ ವ್ರತವು, ಪತಿಯೇ ಅವಳ ದೈವವು, ಪತಿಯೇ ಅವಳ ಮಂತ್ರವು.

೩೪. ಇಂತಹ ಗುಣವತಿಯಾದ ನನ್ನ ಪ್ರಿಯೆಯು ಇನ್ನೂ ಬರಲಿಲ್ಲ. ಈಗೇನುಮಾಡಲಿ? ಎಲ್ಲಿಗೆ ಹೋಗಲಿ? ಅವಳಿಲ್ಲದ ಈ ಮನೆಯು ಕಾಡಿನಂತೆ ಶೂನ್ಯವಾಗಿ ತೋರುತ್ತಿದೆ.

೩೫. ಅವಳಿದ್ದರೆ ಎಂತಹ ಭಯಂಕರವಾದ ಅರಣ್ಯವೂ ನನಗೆ ಸುಂದರವಾಗಿ ತೋರುತ್ತಿತ್ತು, ಇಂತಹ ನನ್ನ ಕಾಂತೆಯು ಇನ್ನೂ ಬರಲಿಲ್ಲ, ಕಾಂತೆ ಇದ್ದರೆ ಮನೆಯು ಸೊಗಸು, ಕಾಂತೆಯಿಲ್ಲದ ಮನೆಯು ಮನೆಯಲ್ಲ.

೩೬. ಕಾಂತೆಯಿಲ್ಲದೆ ನಾನು ಜೀವಿಸಲಾರೆನು, ಆದರೇನುಮಾಡಲಿ ? ಪ್ರಾಣವನ್ನು ಬಿಟ್ಟರೆ ಈ ಚಿಕ್ಕಮಕ್ಕಳ ಗತಿಯೇನು? ಒಟ್ಟಿನಲ್ಲಿ ನನ್ನ ಧರ್ಮವೇ ಹಾಳಾಯಿತು.

೩೭. ಎಂದು ಪರಿಪರಿಯಾಗಿ ಪ್ರಲಾಪಿಸುವ ಪತಿಯ ಮಾತನ್ನು ಕೇಳಿ ಕೆಳಗೆ ಪಂಜರದಲ್ಲಿದ್ದ ಹೆಣ್ಣುಪಾರಿವಾಳವು ಅಲ್ಲಿಂದಲೇ ಹೀಗೆ ಹೇಳಿತು.

॥ ಕಪೋತಕ್ಯುವಾಚ ॥

ಅತ್ರಾಹಮಸ್ಮಿ ಬದ್ಧೈವ ವಿವಶಾಸ್ಮಿ ಖಗೋತ್ತಮ ।
ಆನೀತಾಹಂ ಲುಬ್ಧಕೇನ ಬದ್ಧಾ ಪಾಶೈರ್ಮಹಾಮತೇ ॥ ೩೮ ॥

ಧನ್ಯಾಸ್ಮ್ಯನುಗೃಹೀತಾಸ್ಮಿ ಪತಿರ್ವಕ್ತಿ ಗುಣಾನ್ಮಮ ।
ಸತೋ ವಾಪ್ಯಸತೋ ವಾಪಿ ಕೃತಾರ್ಥಾಹಂ ನ ಸಂಶಯಃ ॥ ೩೯ ॥

ತುಷ್ಟೇ ಭರ್ತರಿ ನಾರೀಣಾಂ ತುಷ್ಟಾಃ ಸ್ಯುಃ ಸರ್ವದೇವತಾಃ ।
ವಿಪರ್ಯಯೇ ತು ನಾರೀಣಾಮವಶ್ಯಂ ನಾಶಮಾಪ್ನುಯಾತ್ ॥ ೪೦ ॥

ತ್ವಂ ದೈವಂ ತ್ವಂ ಪ್ರಭುರ್ಮಹ್ಯಂ ತ್ವಂ ಸುಹೃತ್ತ್ವಂ ಪರಾಯಣಂ ।
ತ್ವಂ ವ್ರತಂ ತ್ವಂ ಪರಂ ಬ್ರಹ್ಮ ಸ್ವರ್ಗೋ ಮೋಕ್ಷಸ್ತ್ವಮೇವ ಚ ॥ ೪೧ ॥

---

೩೮. ಓ ಆರ್ಯನೇ, ನಾನು ಇಲ್ಲಿ ಬಂಧಿಸಲ್ಪಟ್ಟಿರುವೆನು. ಈ ಬೇಡನು ನನ್ನನ್ನು ಹಿಡಿದು ಕಟ್ಟಿ ಪಂಜರದಲ್ಲಿರಿಸಿರುವನು.

೩೯. ನಾನು ಧನ್ಯಳಾದೆನು, ಇಲ್ಲದಿರುವುದನ್ನೂ, ಇರುವುದನ್ನೂ ಸೇರಿಸಿ ನನ್ನ ಗುಣಗಳನ್ನು ನನ್ನ ಪತಿಯೇ ಹೊಗಳುತ್ತಿರುವನು. ನಾನು ಕೃತಾರ್ಥಳಾದೆನು.

೪೦. ಪತಿಯನ್ನು ಸಂತೋಷಗೊಳಿಸುವ ಸ್ತ್ರೀಯಲ್ಲಿ ದೇವತೆಗಳೂ ಅನುಗ್ರಹವುಳ್ಳವರಾಗುವರು. ಅದಿಲ್ಲದೇ ಪತಿಯು ಕೋಪಗೊಂಡರೆ ನಮಗ ಶ್ರೇಯಸ್ಸೇ ಆಗಲಾರದು.

೪೧. ಓ ಸ್ವಾಮಿ, ನೀನೇ ನನಗೆ ದೇವರು, ನೀನೇ ಸ್ವಾಮಿ, ನೀನೇ ಸ್ನೇಹಿತ, ನೀನೇ ಗತಿ, ನೀನೇ ನನ್ನ ವ್ರತವು, ನೀನೇ ನನಗೆ ಪರವಸ್ತುವು. ಸ್ವರ್ಗವೂ ಮೋಕ್ಷವೂ ನೀನೇ.

ಮಾ ಚಿಂತಾಂ ಕುರು ಕಲ್ಯಾಣ ಧರ್ಮೇ ಬುದ್ಧಿಂ ಸ್ಥಿರಾಂ ಕುರು ।
ತ್ವತ್ಪ್ರಸಾದಾಚ್ಚ ಭುಕ್ತಾ ಹಿ ಭೋಗಾಶ್ಚ ವಿವಿಧಾ ಮಯಾ । ॥ ೪೨ ॥

ಅಲಂ ಖೇದೇನ ಮಜ್ಞೇನ ಧರ್ಮೇ ಬುದ್ಧಿಂ ಕುರು ಸ್ಥಿರಾಂ ॥ ೪೩ ॥

॥ ಬ್ರಹ್ಮೋವಾಚ ॥

ಇತಿ ಶ್ರುತ್ವಾ ಪ್ರಿಯಾವಾಕ್ಯಮುತ್ತತಾರ ನಗೋತ್ತಮಾತ್ ।
ಯತ್ರ ಸಾ ಪಂಜರಸ್ಥಾ ತು ಕಪೋತೀ ವರ್ತತೇ ತ್ವರಂ ॥ ೪೪ ॥

ತಾಮಾಗತ್ಯ ಪ್ರಿಯಾಂ ದೃಷ್ಟ್ವಾ ಮೃತವಚ್ಚಾಪಿ ಲುಬ್ಧಕಂ ।
ಮೋಚಯಾಮೀತಿ ತಾಮಾಹ ನಿಶ್ಚೇಷ್ಟೋ ಲುಬ್ಧಕೋಽಧುನಾ ॥ ೪೫ ॥

ಮಾ ಮುಂಚಸ್ವ ಮಹಾಭಾಗ ಜ್ಞಾತ್ವಾ ಸಂಬಂಧಮಸ್ಥಿರಂ ।
ಲುಬ್ಧಾನಾಂ ಖೇಚರಾ ಹ್ಯನ್ನಂ ಜೀವೋ ಜೀವಸ್ಯ ಚಾಶನಂ ॥ ೪೬ ॥

೪೨-೪೩. ಓ ಕಾಂತ, ವ್ಯಥೆಪಡಬೇಡ, ಧರ್ಮದಲ್ಲಿ ಸ್ಥಿರವಾದ ನಂಬಿಕೆಯನ್ನಿಡು. ನಿನ್ನ ಅನುಗ್ರಹದಿಂದ ನಾನು ಬೇಕಾದ ಸುಖಗಳನ್ನು ಅನುಭವಿಸಿದೆನು. ನನಗಾಗಿ ನೀನು ವ್ಯಥೆಪಡಬೇಡ, ನಿನ್ನ ಕರ್ತವ್ಯವನ್ನು ಆಚರಿಸಿ, ಧರ್ಮಬುದ್ಧಿಯುಳ್ಳವನಾಗು ಎಂದಿತು.'

೪೪. ಕಾಂತೆಯ ಆ ಮಾತನ್ನುಕೇಳಿ ತ್ವರೆಯಿಂದ ಗಂಡುಪಾರಿವಾಳವು ಮರದಿಂದ ಹಾರಿ ಕೆಳಗೆ ಬಂದು ಕಪೋತಿಯಿದ್ದ ಪಂಜರದೆಡೆಗೆ ಬಂದು,

೪೫. ತನ್ನ ಹೆಂಡತಿಯನ್ನು ನೋಡಿತು. ಬೇಡನು ಎಚ್ಚರತಪ್ಪಿ ಬಿದ್ದಿದ್ದನು. ಆಗ ಆ ಕಪೋತವು ಎಲೌ ಕಾಂತೆ, ಬೇಡನು ಎಚ್ಚರತಪ್ಪಿ ಬಿದ್ದಿರುವನು ಈ ಸಮಯವನ್ನು ಸಾಧಿಸಿ ನಿನ್ನನ್ನು ಬಿಡಿಸುವೆನು ಎಂದು ಹೇಳಿತು.

೪೬. ಆಗ ಹೆಣ್ಣುಪಾರಿವಾಳವು ಹೇಳಿತು—ಓ ಕಾಂತ, ನನ್ನನ್ನು ಬಿಡಿಸಬೇಡ, ಈ ಪತಿಪತ್ನೀರೂಪವಾದ ಸಂಬಂಧವು ಸ್ಥಿರವಾದುದಲ್ಲ. ಧರ್ಮವೇ ಸ್ಥಿರವಾದುದು. ಬೇಡರಿಗೆ ಪಕ್ಷಿಗಳು ಆಹಾರವು. ಜೀವನಿಗೆ ಜೀವವೇ ಆಹಾರವೆಂದು ವಿಧಿನಿಯಮವಿರುವುದು (ಅದ್ಯತೇಽತ್ತಿ ಚ ಭೂತಾನಿ । ತಸ್ಮಾದನ್ನಂ ತದುಚ್ಯತ ಇತಿ—ತೈ.ಉ.)

ನಾಪರಾಧಂ ಸ್ಮರಾಮ್ಯಸ್ಯ ಧರ್ಮಬುದ್ಧಿಂ ಸ್ಥಿರಾಂ ಕುರು ।
ಗುರುರಗ್ನಿರ್ದ್ವಿಜಾತೀನಾಂ ವರ್ಣಾನಾಂ ಬ್ರಾಹ್ಮಣೋ ಗುರುಃ ॥ ೪೭ ॥

ಪತಿರೇವ ಗುರುಃ ಸ್ತ್ರೀಣಾಂ ಸರ್ವಸ್ಯಾಭ್ಯಾಗತೋ ಗುರುಃ ।
ಅಭ್ಯಾಗತಮನುಪ್ರಾಪ್ತಂ ವಚನೈಸ್ತೋಷಯಂತಿ ಯೇ ॥ ೪೮ ॥

ತೇಷಾಂ ವಾಗೀಶ್ವರೀ ದೇವೀ ತೃಪ್ತಾ ಭವತಿ ನಿಶ್ಚಿತಂ ।
ತಸ್ಯಾನ್ನಸ್ಯ ಪ್ರದಾನೇನ ಶಕ್ರಸ್ತೃಪ್ತಿಮವಾಪ್ನುಯಾತ್ ॥ ೪೯ ॥

ಪಿತರಃ ಪಾದಶೌಚೇನ ಅನ್ನಾದ್ಯೇನ ಪ್ರಜಾಪತಿಃ ।
ತಸ್ಯೋಪಚಾರಾದ್ವೈ ಲಕ್ಷ್ಮೀರ್ವಿಷ್ಣುನಾ ಪ್ರೀತಿಮಾಪ್ನುಯಾತ್ ॥ ೫೦ ॥

ಶಯನೇ ಸರ್ವದೇವಾಸ್ತು ತಸ್ಮಾತ್ಪೂಜ್ಯತಮೋಽತಿಥಿಃ ।
ಅಭ್ಯಾಗತಮನುಶ್ರಾಂತಂ ಸೂರ್ಯೋಢಂ ಗೃಹಮಾಗತಂ ।
ತಂ ವಿದ್ಯಾದ್ದೇವರೂಪೇಣ ಸರ್ವಕ್ರತುಫಲೋ ಹ್ಯಸೌ ॥ ೫೧ ॥

---

೪೭. ಆದುದರಿಂದ ಈ ಬೇಡನದು ತಪ್ಪಿಲ್ಲ, ಧರ್ಮವನ್ನು ಯೋಚಿಸು. ಬ್ರಾಹ್ಮಣರಿಗೆ ಅಗ್ನಿಯೇ ಗುರುವು. ನಾಲ್ಕುವರ್ಣದವರಿಗೂ ಬ್ರಾಹ್ಮಣನು ಗುರುವು. ಸ್ತ್ರೀಯರಿಗೆ ಪತಿಯೇ ಗುರುವು, ಅತಿಥಿಯು ಎಲ್ಲರಿಗೂ ಗುರುವು.

೪೮. ಮನೆಗೆ ಬಂದಿರುವ ಅತಿಥಿಯನ್ನು ಮಾತಿನಿಂದಲಾದರೂ ಸಂತೋಷಪಡಿಸಿದರೆ ವಾಕ್ಕಿಗಧಿಪತಿಯಾದ ಸರಸ್ವತಿಯು ಪ್ರಸನ್ನಳಾಗುವಳು.

೪೯. ಅತಿಥಿಯ ಕಾಲನ್ನು ತೊಳೆದರೆ ಪಿತೃದೇವತೆಗಳು ತೃಪ್ತಿಹೊಂದುವರು, ಅನ್ನವನ್ನಿಕ್ಕಿದರೆ ಇಂದ್ರಬ್ರಹ್ಮರು ಪ್ರಸನ್ನರಾಗುವರು.

೫೦. ಅತಿಥಿಯನ್ನುಪಚರಿಸಿದರೆ ಲಕ್ಷ್ಮೀನಾರಾಯಣರು ಪ್ರಸನ್ನರಾಗುವರು. ಅತಿಥಿಗೆ ಸುಖಶಯನವನ್ನು ಕಲ್ಪಿಸಿದರೆ ದೇವತೆಗಳೆಲ್ಲರೂ ಪ್ರಸನ್ನರಾಗುವರು. ಆದುದರಿಂದ ಅತಿಥಿಯನ್ನು ಸರ್ವವಿಧದಿಂದಲೂ ಪೂಜಿಸಬೇಕು.

೫೧. ಮಾರ್ಗಾಯಾಸದಿಂದಲೂ ಸೂರ್ಯನ ತಾಪದಿಂದಲೂ ಬಳಲಿ ಬಂದಿರುವ ಅತಿಥಿಯು ದೇವತಾಸ್ವರೂಪನು. ಅವನನ್ನುಪಚರಿಸಿದರೆ ಯಜ್ಞಮಾಡಿದ ಫಲವು ಲಭಿಸುವುದು.

ಅಭ್ಯಾಗತಂ ಶ್ರಾಂತಮನುವ್ರಜಂತಿ
ದೇವಾಶ್ಚ ಸರ್ವೇ ಪಿತರೋಗ್ನಯಶ್ಚ ।
ತಸ್ಮಿನ್ಹಿ ತೃಪ್ತೇ ಮುದಮಾಪ್ನುವಂತಿ
ಗತೇ ನಿರಾಶೇಽಪಿ ಚ ತೇ ನಿರಾಶಾಃ ॥ ೫೨ ॥

ತಸ್ಮಾತ್ಸರ್ವಾತ್ಮನಾ ಕಾಂತ ದುಃಖಂ ತ್ಯಕ್ತ್ವಾ ಶಮಂ ವ್ರಜ ।
ಕೃತ್ವಾ ತಿಷ್ಠ ಶುಭಾಂ ಬುದ್ಧಿಂ ಧರ್ಮಕೃತ್ಯಂ ಸಮಾಚರ ॥ ೫೩ ॥

ಉಪಕಾರೋಽಪಕಾರಶ್ಚ ಪ್ರವರಾವಿತಿ ಸಂಮತೌ ।
ಉಪಕಾರಿಷು ಸರ್ವೋಽಪಿ ಕರೋತ್ಯುಪಕೃತಿಂ ಪುನಃ ॥ ೫೪ ॥
ಅಪಕಾರಿಷು ಯಃ ಸಾಧುಃ ಪುಣ್ಯಭಾಕ್ಸ ಉದಾಹೃತಃ । ॥ ೫೫ ॥

॥ ಕಪೋತ ಉವಾಚ ॥

ಆವಯೋರನುರೂಪಂ ಚ ತ್ವಯೋಕ್ತಂ ಸಾಧು ಮನ್ಯಸೇ ।
ಕಿಂತು ವಕ್ತವ್ಯಮಪ್ಯಸ್ತಿ ತಚ್ಛೃಣುಷ್ವ ವರಾನನೇ ॥ ೫೬ ॥

---

೫೨. ಆಯಾಸದಿಂದ ಬಳಲಿರುವ ಅತಿಥಿಯನ್ನು ದೇವತೆಗಳೂ, ಪಿತೃದೇವತೆಗಳೂ, ಅಗ್ನಿಗಳೂ ಅನುಸರಿಸಿಬರುವರು. ಅಂತಹ ಅತಿಥಿಯನ್ನುಪಚರಿಸಿ ತೃಪ್ತಿಪಡಿಸಿದರೆ ಆ ದೇವತೆಗಳು ಮೊದಲಾದವರೂ ತೃಪ್ತಿಪಡುವರು. ಅತಿಥಿಯು ಸತ್ಕಾರಹೊಂದದೆ ನಿರಾಶನಾಗಿ ಹೊರಟರೆ ಅವರೆಲ್ಲರೂ ನಿರಾಶರಾಗುವರು.

೫೩. ಆದುದರಿಂದ ಓ ಕಾಂತ, ದುಃಖವನ್ನು ಬಿಡು, ಸಮಾಧಾನವನ್ನು ಹೊಂದು. ಬೇಡನಾದ ಈ ಅತಿಥಿಯ ವಿಷಯದಲ್ಲೂ ಧರ್ಮಬುದ್ಧಿಯನ್ನು ತಳೆದು ಉಪಚರಿಸು.

೫೪-೫೫. ಉಪಕಾರ ಮತ್ತು ಅಪಕಾರಗಳೆರಡೂ ಶ್ರೇಷ್ಠವಾದುವು. ಉಪಕಾರಮಾಡಿದವರಿಗೆ ಎಲ್ಲರೂ ಪ್ರತ್ಯುಪಕಾರಮಾಡುವರು. ಆದರೆ ಅಪಕಾರಿಗಳಿಗೆ ಉಪಕಾರವನ್ನು ಮಾಡುವವನು ಮಹಾತ್ಮನು. ಅಂತವನು ಮಹಾಪುಣ್ಯವಂತವಾಗುವನು, ಎಂದಿತು.

೫೬. ಅದನ್ನು ಕೇಳಿ ಗಂಡು ಕಪೋತವು—ಎಲೌ ಕಾಂತೆ, ನೀನು ಯುಕ್ತವಾದುದನ್ನೇ ಹೇಳಿರುವೆ. ನಮ್ಮಿರ್ವರಿಗೂ ನಿನ್ನ ಮಾತು ಯೋಗ್ಯವಾಗಿದೆ. ಆದರೆ ನಾನೂ ಒಂದು ವಿಷಯವನ್ನು ಹೇಳುವೆನು ಕೇಳು.

ಸಹಸ್ರಂ ಭರತೇ ಕಶ್ಚಿಚ್ಛತಮನ್ಯೋ ದಶಾಪರಃ ।
ಆತ್ಮಾನಂ ಚ ಸುಖೇನಾನ್ಯೋ ವಯಂ ಕಷ್ಟೋದರಂಭರಾಃ ॥ ೫೭ ॥

ಗರ್ತಧಾನ್ಯಧನಾಃ ಕೇಚಿತ್ಕುಶೂಲಧನಿನೋಽಪರೇ ।
ಘಟಕ್ಷಿಪ್ತಧನಾಃ ಕೇಚಿಚ್ಚಂಚುಕ್ಷಿಪ್ತಧನಾ ವಯಂ ॥ ೫೮ ॥

ಪೂಜಯಾಮಿ ಕಥಂ ಶ್ರಾಂತಮಭ್ಯಾಗತಮಿಮಂ ಶುಭೇ ॥ ೫೯ ॥

॥ ಕಪೋತ್ಯುವಾಚ ॥

ಅಗ್ನಿರಾಪಃ ಶುಭಾ ವಾಣಿ ತೃಣಕಾಷ್ಠಾದಿಕಂ ಚ ಯತ್ ।
ಏತದಪ್ಯರ್ಥಿನೇ ದೇಯಂ ಶೀತಾರ್ತೋ ಲುಬ್ಧಕಸ್ತ್ವಯಂ ॥ ೬೦ ॥

---

೫೭. ಭೂಮಿಯಲ್ಲಿ ಕೆಲವರು ಸಾವಿರಾರು ಜನಗಳನ್ನು ಸಲಹುವರು ಕೆಲವರು ನೂರಾರು ಜನಗಳನ್ನು ಸಲಹುವರು, ಕೆಲವರು ಹೇಗಾದರೂ ತಮ್ಮನ್ನು ಮಾತ್ರ ಪೋಷಿಸಿಕೊಳ್ಳುವರು. ಅದರಂತೆ ನಾವೂ ಕಷ್ಟದಿಂದ ಜೀವನಮಾಡುವವರು.

೫೮-೫೯. ಕೆಲವರು ಹೂತಿಟ್ಟ (ಕೂಡಿಟ್ಟ) ಧನಧಾನ್ಯಗಳಿಂದ ಜೀವಿಸುವರು. ಕಣಜಹಗೇವುಗಳಲ್ಲಿರಿಸಿದ ಧಾನ್ಯಗಳಿಂದ ಕೆಲವರು ಜೀವಿಸುವರು, ಕೆಲವರು ಮಡಕೆಯಲ್ಲಿರಿಸಿದ ಧನಧಾನ್ಯಗಳಿಂದ ಜೀವಿಸುವರು. ಆದರೆ ಹಕ್ಕಿಗಳಾದ ನಾವು ಕೊಕ್ಕಿನಿಂದ ಆಹಾರವನ್ನು ಆಗಾಗ ಸಂಗ್ರಹಿಸಿ ಜೀವಿಸಬೇಕಾಗಿರುವುದು. ಹೀಗಿರುವುದರಿಂದ ಬಳಲಿದ ಆ ಅತಿಥಿಯನ್ನು ನಾನು ಹೇಗೆ ಉಪಚರಿಸಲಿ? ಎನ್ನಲು

೬೦. ಹೆಣ್ಣುಪಾರಿವಾಳವು ಹೇಳಿತು—ಈ ಬೇಡನು ಮಳೆಯ ಶೀತದಿಂದ ಎಚ್ಚರತಪ್ಪಿರುವನು. ಬೆಂಕಿ, ನೀರು, ಮೃದುವಾದ ಮಾತು, ಹುಲ್ಲು, ಸೌದೆ ಮುಂತಾದುವುಗಳನ್ನು ಈ ಅತಿಥಿಗೆ ಕೊಟ್ಟು ಉಪಚರಿಸಬಹುದು.

॥ ಬ್ರಹ್ಮೋವಾಚ ॥

ಏತಚ್ಛ್ರುತ್ವಾ ಪ್ರಿಯಾವಾಕ್ಯಂ ವೃಕ್ಷಮಾರುಹ್ಯ ಪಕ್ಷಿರಾಟ್ ।
ಆಲೋಕಯಾಮಾಸ ತದಾ ವಹ್ನಿಂ ದೂರಂ ದದರ್ಶ ಹ ॥ ೬೧ ॥

ಸ ತು ಗತ್ವಾ ವಹ್ನಿದೇಶಂ ಚಂಚುನೋಲ್ಮುಕಮಾಹರತ್ ।
ಪುರೋಽಗ್ನಿಂ ಜ್ವಾಲಯಾಮಾಸ ಲುಬ್ಧಕಸ್ಯ ಕಪೋತಕಃ ॥ ೬೨ ॥

ಶುಷ್ಕಕಾಷ್ಠಾನಿ ಪರ್ಣಾನಿ ತೃಣಾನಿ ಚ ಪುನಃ ಪುನಃ ।
ಅಗ್ನೌ ನಿಕ್ಷೇಪಯಾಮಾಸ ನಿಶೀಥೇ ಸ ಕಪೋತರಾಟ್ ॥ ೬೩ ॥

ತಮಗ್ನಿಂ ಜ್ವಲಿತಂ ದೃಷ್ಟ್ವಾ ಲುಬ್ಧಕಃ ಶೀತದುಃಖಿತಃ ।
ಅವಶಾನಿ ಸ್ವಕಾಂಗಾನಿ ಪ್ರತಾಪ್ಯ ಸುಖಮಾಪ್ತವಾನ್ ॥ ೬೪ ॥

ಕ್ಷುಧಾಗ್ನಿನಾ ದಹ್ಯಮಾನಂ ವ್ಯಾಧಂ ದೃಷ್ಟ್ವಾ ಕಪೋತಕೀ ।
ಮಾ ಮುಂಚಸ್ವ ಮಹಾಭಾಗ ಇತಿ ಭರ್ತಾರಮಬ್ರವೀತ್ ॥ ೬೫ ॥

---

೬೧. ಪತ್ನಿಯ ಆ ಮಾತನ್ನು ಕೇಳಿ ಕಪೋತವು ಮರವೊಂದನ್ನೇರಿ ಸುತ್ತಲೂ ನೋಡಿತು, ದೂರದಲ್ಲಿ ಬೆಂಕಿಯು ಅದಕ್ಕೆ ಕಾಣಿಸಿತು.

೬೨. ಅಮೇಲಾ ಕಪೋತವು ಬೆಂಕಿಯಿದ್ದ ಬಳಿಗೆ ಹೋಗಿ ಬೆಂಕಿಕೆಂಡ ವೊಂದನ್ನು ಕೊಕ್ಕಿನಿಂದ ಕಚ್ಚಿಕೊಂಡು ತಂದು ಆ ಬೇಡನ ಎದುರಿನಲ್ಲಿ ಬೆಂಕಿ ಯನ್ನು ಹತ್ತಿಸಿ ಉರಿಸಿತು.

೬೩. ಆ ಕಪೋತವು ಮತ್ತೆಮತ್ತೆ ಒಣಗಿದ ಕಟ್ಟಿಗೆ ಚೂರುಗಳು, ಎಲೆಗಳು, ಹುಲ್ಲುಗಳನ್ನು ಬೆಂಕಿಗೆ ಹಾಕಿ ಚೆನ್ನಾಗಿ ಉರಿಸಿತು, ಆಗ ಅರ್ಧ ರಾತ್ರಿಯಾಗಿದ್ದಿತು.

೬೪. ಬೆಂಕಿಯು ಚನ್ನಾಗಿ ಉರಿಯುತ್ತಿರಲು ಆ ಬೇಡನು ಎಚ್ಚರ ಗೊಂಡು ತಣ್ಣಗಿದ್ದ ತನ್ನಂಗಗಳನ್ನು ಬೆಂಕಿಯಿಂದ ಕಾಸಿಕೊಂಡು ಸುಖಿತ ನಾದನು.

೬೫. ಆದರೆ ಆ ಜೇಡನು ಹಸಿವಿನಿಂದ ಬಳಲಿದ್ದನು, ಅದನ್ನು ನೋಡಿ ಹೆಣ್ಣುಪಾರಿವಾಳವು ಪತಿಯನ್ನು ಕುರಿತು ಓ ಪುಣ್ಯಾತ್ಮ , ನನ್ನನ್ನು ಪಂಜರದಿಂದ ಬಿಡಿಸು.

ಸ್ವಶರೀರೇಣ ದುಃಖಾರ್ತಂ ಲುಬ್ಧಕಂ ಪ್ರೀಣಯಾಮಿ ತಂ ।
ಇಷ್ಟಾತಿಥೀನಾಂ ಯೇ ಲೋಕಾಸ್ತಾಂಸ್ತ್ವಂ ಪ್ರಾಪ್ನುಹಿ ಸುವ್ರತ ॥ ೬೬ ॥

॥ ಕಪೋತ ಉವಾಚ ॥

ಮಯಿ ತಿಷ್ಠತಿ ನೈವಾಯಂ ತವ ಧರ್ಮೋ ವಿಧೀಯತೇ ।
ಇಷ್ಟಾತಿಥಿರ್ಭವಾಮ್ಯಾಹ ಅನುಜಾನೀಹಿ ಮಾಂ ಶುಭೇ ॥ ೬೭ ॥

॥ ಬ್ರಹ್ಮೋವಾಚ ॥

ಇತ್ಯುಕ್ತ್ವಾಗ್ನಿಂ ತ್ರಿರಾವರ್ತ್ಯ ಸ್ಮರನ್ದೇವಂ ಚತುರ್ಭುಜಂ ।
ವಿಶ್ವಾತ್ಮಕಂ ಮಹಾವಿಷ್ಣುಂ ಶರಣ್ಯಂ ಭಕ್ತವತ್ಸಲಂ ॥ ೬೮ ॥

ಯಥಾಸುಖಂ ಜುಷಸ್ವೇತಿ ವದನ್ನಗ್ನಿಂ ತಥಾವಿಶತ್ ।
ತಂ ದೃಷ್ಟ್ವಾಗ್ನೌ ಕ್ಷಿಪ್ತಜೀವಂ ಲುಬ್ಧಕೋ ವಾಕ್ಯಮಬ್ರವೀತ್ ॥ ೬೯ ॥

॥ ಲುಬ್ಧಕ ಉವಾಚ ॥

ಅಹೋ ಮಾನುಷದೇಹಸ್ಯ ಧಿಗ್ಜೀವಿತಮಿದಂ ಮಮ ।
ಯದಿದಂ ಪಕ್ಷಿರಾಜೇನ ಮದರ್ಥೇ ಸಾಹಸಂ ಕೃತಂ ॥ ೭೦ ॥

---

೬೬. ನನ್ನ ಶರೀರವನ್ನು ಬಡಿಸಿ, ಈ ಬೇಡನ ಹಸಿವನ್ನು ತಣಿಸುವೆನು, ಅತಿಥಿಗಳನ್ನು ಪಚರಿಸುವವರಿಗೆ ಲಭಿಸುವ ಪುಣ್ಯಲೋಕವು ನಿನಗೆ ಲಭಿಸಲಿ ಎಂದಿತು.

೬೭. ಗಂಡು ಕಪೋತವು ಹೇಳಿತು—ಎಲೌ ಕಾಂತೆ, ನಾನಿರಲು ನೀನು ಅತಿಥಿಯನ್ನು ಪಚರಿಸುವುದು ನ್ಯಾಯವಲ್ಲ. ನಾನೇ ಶರೀರವನ್ನರ್ಪಿಸಿ ಅತಿಥಿಯನ್ನು ಪಚರಿಸುವೆನು, ನನಗೆ ಅನುಮತಿಯನ್ನು ಕೊಡು.

೬೮-೬೯. ಹೀಗೆ ಹೇಳಿ ಗಂಡು ಕಪೋತವು ಚತುರ್ಬಾಹುಯುಕ್ತನೂ ಜಗನ್ಮಯನೂ, ರಕ್ಷಕನೂ, ಭಕ್ತವತ್ಸಲನೂ ಆದ ಮಹಾವಿಷ್ಣುವನ್ನು ಸ್ಮರಿಸಿ, ಓ ಅತಿಥಿ, ಸುಖವಾಗಿ ಭೋಜನಮಾಡು ಎಂದು ಹೇಳಿ ಬೇಡನೆದುರಿಗೆ ಉರಿಯುತ್ತಿದ್ದ ಆ ಬೆಂಕಿಯಲ್ಲಿ ಬಿದ್ದಿತು. ಕಪೋತನು ಬೆಂಕಿಯಲ್ಲಿ ಬಿದ್ದುದನ್ನು ನೋಡಿ ಬೇಡನು ತನ್ನಲ್ಲಿಯೇ ಇಂತು ಯೋಚಿಸಿದನು.

೭೦-೭೧. ಹಾ ! ನನ್ನ ಈ ಮನುಷ್ಯಶರೀರಕ್ಕೆ ಧಿಕ್ಕಾರವಿರಲಿ, ನನಗಾಗಿ ಈ ಪಕ್ಷಿಯು ಎಂತಹ ಸಾಹಸವನ್ನು ಮಾಡಿರುವುದು ? ಇದಕ್ಕಿರುವ

॥ ಬ್ರಹ್ಮೋವಾಚ ॥

ಏವಂ ಬ್ರುವಂತಂ ತಂ ಲುಬ್ಧಂ ಪಕ್ಷಿಣೀ ವಾಕ್ಯಮಬ್ರವೀತ್ ॥ ೭೧ ॥

॥ ಕಪೋತಕ್ಯುವಾಚ ॥

ಮಾಂ ತ್ವಂ ಮುಂಚ ಮಹಾಭಾಗ ದೂರಂ ಯಾತ್ಯೇಷ ಮೇ ಪತಿಃ ॥ ೭೨ ॥

॥ ಬ್ರಹ್ಮೋವಾಚ ॥

ತಸ್ಯಾಸ್ತದ್ವಚನಂ ಶ್ರುತ್ವಾ ಪಂಜರಸ್ಥಾಂ ಕಪೋತಕೀಂ ।
ಲುಬ್ಧಕೋ ಮೋಚಯಾಮಾಸ ತರಸಾ ಭೀತವತ್ತದಾ ॥ ೭೩ ॥

ಸಾಽಪಿ ಪ್ರದಕ್ಷಿಣಂ ಕೃತ್ವಾ ಪತಿಮಗ್ನಿಂ ತದಾ ಜಗೌ ॥ ೭೪ ॥

॥ ಕಪೋತ್ಯುವಾಚ ॥

ಸ್ತ್ರೀಣಾಮಯಂ ಪರೋ ಧರ್ಮೋ ಯದ್ಭರ್ತುರನುವೇಶನಂ ।
ವೇದೇ ಚ ವಿಹಿತೋ ಮಾರ್ಗಃ ಸರ್ವಲೋಕೇಷು ಪೂಜಿತಃ ॥ ೭೫ ॥

ಧರ್ಮಬುದ್ಧಿಯು ? ನನಗಿಲ್ಲವಲ್ಲಾ ಎಂದು ತನ್ನನ್ನೇ ನಿಂದಿಸಿಕೊಳ್ಳುತ್ತಿರಲು, ಹೆಣ್ಣುಪಾರಿವಾಳವು ಆ ಬೇಡನನ್ನು ಕುರಿತು,

೭೨. ಓ ಪುಣ್ಯಾತ್ಮ, ನನ್ನನ್ನು ಬಿಡು, ನನ್ನ ಪತಿಯು ದೂರ ಹೋಗುತ್ತಲಿರುವನು, ಅವನನ್ನು ನಾನು ಅನುಸರಿಸುವೆನು ಎಂದಿತು.

೭೩. ಕಪೋತಿಯ ಆ ಮಾತನ್ನು ಕೇಳಿ ಬೇಡನು ಹೆದರಿದವನಂತೆ ಆಕೂಡಲೇ ಪಂಜರದಿಂದ ಆ ಹಕ್ಕಿಯನ್ನು ಬಿಡಿಸಿದನು.

೭೪. ಆಮೇಲಾ ಕಪೋತಿಯು ಪತಿಶರೀರಕ್ಕೂ ಅಗ್ನಿಗೂ ಪ್ರದಕ್ಷಿಣೆ ಮಾಡಿ ಇಂತೆಂದಿತು.

೭೫. ಮೃತನಾದ ಪತಿಯೊಡನೆ ಸಹಗಮನಮಾಡುವುದು ಸ್ತ್ರೀಯರಿಗೆ ಶ್ರೇಷ್ಠವಾದ ಮಾರ್ಗವು. ವೇದವೂ ಈ ಮಾರ್ಗವನ್ನು ಪ್ರಶಂಸಿಸಿರುವುದು, ಲೋಕದಲ್ಲಿಯೂ ಶ್ರೇಷ್ಠವಾಗಿದೆ.

ವ್ಯಾಲಗ್ರಾಹೀ ಯಥಾ ವ್ಯಾಲಂ ಬಿಲಾದುದ್ಧರತೇ ಬಲಾತ್ ।
ಏವಂ ತ್ವನುಗತಾ ನಾರೀ ಸಹ ಭರ್ತ್ರಾ ದಿವಂ ವ್ರಜೇತ್ ॥ ೭೬ ॥

ತಿಸ್ರಃ ಕೋಟ್ಯೋಽರ್ಧಕೋಟೀ ಚ ಯಾನಿ ರೋಮಾಣಿ ಮಾನುಷೇ ।
ತಾವತ್ಕಾಲಂ ವಸೇತ್ಸ್ವರ್ಗೇ ಭರ್ತಾರಂ ಯಾಽನುಗಚ್ಛತಿ ॥ ೭೭ ॥

ನಮಸ್ಕೃತ್ವಾ ಭುವಂ ದೇವಾನ್ಗಂಗಾಂ ಚಾಪಿ ವನಸ್ಪತೀನ್ ।
ಆಶ್ವಾಸ್ಯ ತಾನ್ಯಪತ್ಯಾನಿ ಲುಬ್ಧಕಂ ವಾಕ್ಯಮಬ್ರವೀತ್ ॥ ೭೮ ॥

॥ ಕಪೋತ್ಯುವಾಚ ॥

ತ್ವತ್ಪ್ರಸಾದಾನ್ಮಹಾಭಾಗ ಉಪಪನ್ನಂ ಮಮೇದೃಶಂ ।
ಅಪತ್ಯಾನಾಂ ಕ್ಷಮಸ್ವೇಹ ಭರ್ತ್ರಾ ಯಾಮಿ ತ್ರಿವಿಷ್ಟಪಂ ॥ ೭೯ ॥

---

೭೬. ಹಾವು ಹಿಡಿಯುವವನು ಬಿಲದಿಂದ ಹಾವನ್ನು ಬಲಾತ್ಕಾರವಾಗಿ ಎಳೆಯುವಂತೆ ಪತಿಯಪ್ರೇಮದಿಂದೆಳೆಯಲ್ಪಟ್ಟ ಪತ್ನಿಯು ಮೃತನಾದ ಪತಿಯೊಡನೆ ಸಹಗಮನವನ್ನು ಮಾಡಿದರೆ ಉತ್ತಮವಾದ ಸ್ವರ್ಗಲೋಕವು ಲಭಿಸುವುದು.

೭೭. ಹಾಗೆ ಸಹಗಮನವನ್ನು ಮಾಡಿ ಸ್ವರ್ಗವನ್ನು ಪಡೆದ ನಾರಿಯು ಆಲ್ಲಿ ಮನಷ್ಯಶರೀರದಲ್ಲಿ ರೋಮಗಳಿರುವಷ್ಟು ಕಾಲ ಎಂದರೆ ಮೂರೂವರೆ ಕೋಟಿ ವರ್ಷಕಾಲ ಸ್ವರ್ಗದಲ್ಲಿ ಸುಖವನ್ನನುಭವಿಸುತ್ತಾ ವಿಹರಿಸುವಳು.

೭೮. ಹೀಗೆ ಹೇಳಿ ಆ ಕಪೋತಿಯು ಭೂಮಿಯನ್ನೂ, ದೇವತೆಗಳನ್ನೂ ಗಂಗಾನದಿಯನ್ನೂ, ವನಸ್ಪತಿಗಳನ್ನೂ ನಮಸ್ಕರಿಸಿ ತನ್ನ ಮರಿಗಳನ್ನು ಸಂತಯಿಸಿ ಬೇಡನನ್ನು ಕುರಿತು,

೭೯. ಎಲೈ ಪುಣ್ಯಾತ್ಮ, ನಿನ್ನ ಅನುಗ್ರಹದಿಂದ ನನಗೆ ಇಂತಹ ಸುಯೋಗವು ಲಭಿಸಿತು. ನನ್ನ ಮರಿಗಳನ್ನು ಕ್ಷಮಿಸು, ಪತಿಯೊಡನೆ ನಾನು ಸ್ವರ್ಗಕ್ಕೆ ತೆರಳುವೆನು.

॥ ಬ್ರಹ್ಮೋವಾಚ ॥

ಇತ್ಯುಕ್ತ್ವಾ ಪಕ್ಷಿಣೀ ಸಾಧ್ವೀ ಪ್ರವಿವೇಶ ಹುತಾಶನಂ ।
ಪ್ರವಿಷ್ಟಾಯಾಂ ಹುತವಹೇ ಜಯಶಬ್ದೋ ನ್ಯವರ್ತತ ॥ ೮೦ ॥

ಗಗನೇ ಸೂರ್ಯಸಂಕಾಶಂ ವಿಮಾನಮತಿಶೋಭನಂ ।
ತದಾರೂಢೌ ಸುರನಿಭೌ ದಂಪತೀ ದದೃಶೇ ತತಃ ॥ ೮೧ ॥

ಹರ್ಷೇಣ ಪ್ರೋಚತುರುಭೌ ಲುಬ್ಧಕಂ ವಿಸ್ಮಯಾನ್ವಿತಂ ॥ ೮೨ ॥

॥ ದಂಪತೀ ಊಚತುಃ ॥

ಗಚ್ಛಾವಸ್ತ್ರಿದಶಸ್ಥಾನಮಾಪೃಷ್ಟೋಽಸಿ ಮಹಾಮತೇ ।
ಆವಯೋಃ ಸ್ವರ್ಗಸೋಪಾನಮತಿಥಿಸ್ತ್ವಂ ನಮೋಽಸ್ತು ತೇ ॥ ೮೩ ॥

॥ ಬ್ರಹ್ಮೋವಾಚ ॥

ವಿಮಾನವರಮಾರೂಢೌ ತೌ ದೃಷ್ಟ್ವಾ ಲುಬ್ಧಕೋಽಪಿ ಸಃ ।
ಸಧನುಃ ಪಂಜರಂ ತ್ಯಕ್ತ್ವಾ ಕೃತಾಂಜಲಿರಭಾಷತ ॥ ೮೪ ॥

---

೮೦. ಎಂದು ಹೇಳಿ ಪತಿವ್ರತೆಯಾದಾ ಹೆಣ್ಣುಪಾರಿವಾಳವು ಬೆಂಕಿಗೆ ಹಾರಿತು. ಅದು ಬೆಂಕಿಗ ಹಾರಿದೊಡನೆಯೇ ಜಯಧ್ವನಿಯು ಕೇಳಿಸಿತು.

೮೧. ಆಮೇಲೆ ಆ ಕಪೋತದಂಪತಿಗಳು ಸುಂದರರೂಪವುಳ್ಳವರಾಗಿ ದೇವತೆಗಳಂತೆ ದಿವ್ಯವಿಮಾನವನ್ನೇರಿ ಪ್ರಕಾಶಿಸಿದರು.

೮೨. ಆ ಬೇಡನು ಇದೆಲ್ಲವನ್ನೂ ಆಶ್ಚರ್ಯದಿಂದ ನೋಡುತ್ತಿರಲು ಆ ಕಪೋತಗಳು ಅವನನ್ನು ಕುರಿತು,

೮೩. ಎಲೈ ಪುಣ್ಯಾತ್ಮ, ನಾವು ಈಗ ಸ್ವರ್ಗಕ್ಕೆ ತೆರಳುವೆವು. ಅನುಮತಿಯನ್ನು ಕೊಡು, ನಮ್ಮಿಬ್ಬರಿಗೆ ಸ್ವರ್ಗದ ಮೆಟ್ಟಿಲಿನಂತೆ ನೀನು ಅತಿಥಿಯಾಗಿ ಬಂದಿರುವೆ. ಇದೋ ನಿನಗೆ ನಮಸ್ಕಾರವು ಎಂದು ಹೇಳಿ ಸ್ವರ್ಗದ ದಾರಿಯನ್ನು ಹಿಡಿದವು.

೮೪. ವಿಮಾನವನ್ನೇರಿದ ಆ ಕಪೋತದಂಪತಿಗಳನ್ನು ನೋಡಿ ಆ ಬೇಡನು ತನ್ನ ಬಿಲ್ಲು ಮತ್ತು ಪಂಜರಗಳನ್ನು ಅಲ್ಲಿಯೇ ಬಿಟ್ಟು ಕೈಗಳನ್ನು ಜೋಡಿಸಿ,

॥ ಲುಬ್ಧಕ ಉವಾಚ ॥

ನ ತ್ಯಕ್ತವ್ಯೋ ಮಹಾಭಾಗೌ ದೇಯಂ ಕಿಂಚಿದಜಾನತೇ ।
ಅಹಮತ್ರಾತಿಥಿರ್ಮಾನ್ಯೋ ನಿಷ್ಕೃತಿಂ ವಕ್ತುಮರ್ಹಥಃ ॥ ೮೫ ॥

॥ ದಂಪತೀ ಊಚತುಃ ॥

ಗೌತಮೀಂ ಗಚ್ಛ ಭದ್ರಂ ತೇ ತಸ್ಯಾಃ ಪಾಪಂ ನಿವೇದಯ ।
ತತ್ರೈವಾಪ್ಲವನಾತ್ಪಕ್ಷಂ ಸರ್ವಪಾಪೈರ್ವಿಮೋಕ್ಷ್ಯಸೇ ॥ ೮೬ ॥

ಮುಕ್ತಪಾಪಃ ಪುನಸ್ತತ್ರ ಗಂಗಾಯಾಮವಗಾಹನೇ ।
ಅಶ್ವಮೇಧಫಲಂ ಪುಣ್ಯಂ ಪ್ರಾಪ್ಯ ಪುಣ್ಯೋ ಭವಿಷ್ಯಸಿ ॥ ೮೭ ॥

ಸರಿದ್ವರಾಯಾಂ ಗೌತಮ್ಯಾಂ ಬ್ರಹ್ಮವಿಷ್ಣ್ವೀಶಸಂಭುವಿ ।
ಪುನರಾಪ್ಲವನಾದೇವ ತ್ಯಕ್ತ್ವಾ ದೇಹಂ ಮಲೀಮಸಂ ॥ ೮೮ ॥
ವಿಮಾನವರಮಾರೂಢಃ ಸ್ವರ್ಗಂ ಗಂತಾಸ್ಯಸಂಶಯಂ ॥ ೮೯ ॥

---

೮೫. ಓ ಪುಣ್ಯಾತ್ಮರಾದ ದಂಪತಿಗಳೇ, ತಿಳಿವಳಿಕೆಯಿಲ್ಲದ ನನ್ನನ್ನು ಕೈಬಿಡಬೇಡಿ, ನನ್ನನ್ನೂ ಅನುಗ್ರಹಿಸಿ. ಅಲ್ಲದೇ ನಾನೀಗ ನಿಮಗೆ ಅತಿಥಿಯಾಗಿದ್ದೇನು. ನನ್ನನ್ನು ಮಾನಿಸಬೇಕಾದುದು ನಿಮ್ಮ ಧರ್ಮವಷ್ಟೆ? ಆದಕಾರಣ ನನ್ನ ಪಾಪಕ್ಕೆ ಪ್ರಾಯಶ್ಚಿತ್ತವನ್ನು ಹೇಳಿ ನನ್ನನ್ನನುಗ್ರಹಿಸಿ ಎಂದು ಬೇಡಿಕೊಳ್ಳಲು,

೮೬. ಕಪೋತದಂಪತಿಗಳು—ಎಲೈ ಬೇಡ, ಗೌತಮಿಯೆಂಬ ಗಂಗಾನದಿಯಲ್ಲಿ ಸ್ನಾನಮಾಡಿ ನಿನ್ನ ಪಾಪವನ್ನು ತೊಳೆದುಕೋ. ಆ ನದಿಯಲ್ಲಿ ಹದಿನೈದುದಿನಗಳವರೆಗೆ ಸ್ನಾನಮಾಡಿದರೆ ನಿನ್ನ ಪಾಪವೆಲ್ಲವೂ ನಾಶವಾಗುವುದು.

೮೭. ಪಾಪವೆಲ್ಲವೂ ಹೋದಮೇಲೆ ಪುನಃ ಆ ಗೌತಿಮಿನದಿಯಲ್ಲಿ ಸ್ನಾನಮಾಡಿದರೆ ಅಶ್ವಮೇಧಯಾಗದ ಪುಣ್ಯವು ಲಭಿಸುವುದು, ಆಗ ನೀನು ಪುಣ್ಯಾತ್ಮನಾಗುವೆ.

೮೮–೮೯. ಗೌತಮೀನದಿಯು ಬ್ರಹ್ಮವಿಷ್ಣುಮಹೇಶ್ವರರಿಂದ ಜನಿಸಿದ ಪುಣ್ಯನದಿಯು. ಅಂತಹ ನದಿಯಲ್ಲಿ ನೀನು ಪುನಃ ಸ್ನಾನಮಾಡಿದರೆ ಪಾಪಮಯವಾದ ಈ ದೇಹವನ್ನು ಬಿಟ್ಟು ದಿವ್ಯಶರೀರವುಳ್ಳವನಾಗಿ ದಿವ್ಯವಿಮಾನವನ್ನೇರಿ ಸ್ವರ್ಗವನ್ನು ಪಡೆಯುವೆ. ಇದರಲ್ಲಿ ಸಂಶಯವಿಲ್ಲ ಎಂದವು.

॥ ಬ್ರಹ್ಮೋವಾಚ ॥

ತಚ್ಛ್ರುತ್ವಾ ವಚನಂ ತಾಭ್ಯಾಂ ತಥಾ ಚಕ್ರೇ ಸ ಲುಬ್ಧಕಃ ।
ವಿಮಾನವರಮಾರೂಢೋ ದಿವ್ಯರೂಪಧರೋಽಭವತ್ ॥ ೯೦ ॥

ದಿವ್ಯಮಾಲ್ಯಾಂಬರಧರಃ ಪೂಜ್ಯಮಾನೋಽಪ್ಸರೋಗಣೈಃ ।
ಕಪೋತಶ್ಚ ಕಪೋತೀ ಚ ತೃತೀಯೋ ಲುಬ್ಧಕಸ್ತಥಾ ।
ಗಂಗಾಯಾಶ್ಚ ಪ್ರಭಾವೇಣ ಸರ್ವೇ ವೈ ದಿವಮಾಕ್ರಮನ್ ॥ ೯೧ ॥

ತತಃ ಪ್ರಭೃತಿ ತತ್ತೀರ್ಥಂ ಕಾಪೋತಮಿತಿ ವಿಶ್ರುತಂ ।
ತತ್ರ ಸ್ನಾನಂ ಚ ದಾನಂ ಚ ಪಿತೃಪೂಜನಮೇವ ಚ ॥ ೯೨ ॥

ಜಪಯಜ್ಞಾದಿಕಂ ಕರ್ಮ ತದಾನಂತ್ಯಾಯ ಕಲ್ಪತೇ । ॥ ೯೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ ತೀರ್ಥಮಾಹಾತ್ಮ್ಯೇ ಕಪೋತತೀರ್ಥವರ್ಣನಂ ನಾಮಾಶೀತಿತಮೋಽಧ್ಯಾಯಃ

---

೯೦. ಕಪೋತದಂಪತಿಗಳ ಮಾತನ್ನು ಕೇಳಿ ಆ ಬೇಡನು ಅದರಂತೆಯೇ ಮಾಡಿದನು. ಮುಂದೆ ಅವನು ದಿವ್ಯರೂಪವನ್ನು ಧರಿಸಿ ಮಾಲ್ಯಾದ್ಯಾಭರಣಗಳಿಂದಲಂಕೃತನಾಗಿ ದೇವತೆಗಳಂತೆ ವಿಮಾನವನ್ನೇರಿದನು.

೯೧. ಮುಂದೆ ಗಂಗೆಯ ಪ್ರಭಾವದಿಂದ ಆ ಬೇಡನೂ ಕಪೋತದಂಪತಿಗಳೂ ಸಹ ಅಪ್ಸರೆಯರಿಂದ ಪೂಜಿಸಲ್ಪಡುತ್ತಾ ವಿಮಾನದಲ್ಲಿ ಸ್ವರ್ಗಕ್ಕೆ ತೆರಳಿದರು.

೯೨-೯೩. ಅದುಮೊದಲುಗೊಂಡು ಗೌತಮೀನದಿಯ ಆ ತೀರ್ಥಕ್ಕೆ ಕಾಪೋತತೀರ್ಥವೆಂದು ಹೆಸರಾಗಿರುವುದು. ಆ ತೀರ್ಥದಲ್ಲಿ ಸ್ನಾನದಾನ ಪಿತೃಶ್ರಾದ್ಧ ಜಪಯಾಗ ಮೊದಲಾದುವುಗಳನ್ನು ಮಾಡಿದರೆ ಮಹಾಪುಣ್ಯವು ಲಭಿಸುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಕಪೋತತೀರ್ಥವರ್ಣನವೆಂಬ ಎಂಭತ್ತನೆಯ ಅಧ್ಯಾಯವು ಮುಗಿದುದು.

ಗೌತಮೀ ಮಾಹಾತ್ಮ್ಯೆಯಲ್ಲಿ ಹನ್ನೊಂದನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಏಕಾಶೀತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಕಾರ್ತಿಕೇಯಂ ಪರಂ ತೀರ್ಥಂ ಕೌಮಾರಮಿತಿ ವಿಶ್ರುತಂ ।
ಯನ್ನಾಮಶ್ರವಣಾದೇವ ಕುಲವಾನ್ರೂಪವಾನ್ಭವೇತ್ ॥ ೧ ॥

ನಿಹತೇ ತಾರಕೇ ದೈತ್ಯೇ ಸ್ವಸ್ಥೇ ಜಾತೇ ತ್ರಿವಿಷ್ಟಪೇ ।
ಕಾರ್ತಿಕೇಯಂ ಸುತಂ ಜ್ಯೇಷ್ಠಂ ಪ್ರೀತ್ಯಾ ಪ್ರೋವಾಚ ಪಾರ್ವತೀ ॥ ೨ ॥

ಎಂಭತ್ತೊಂದನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಕಾರ್ತಿಕೇಯವೆಂಬ ಇನ್ನೊಂದು ತೀರ್ಥವಿರುವುದು. ಕೌಮಾರವೆಂದೂ ಅದು ಪ್ರಸಿದ್ಧವಾಗಿರುವುದು. ಆ ತೀರ್ಥದ ಹೆಸರನ್ನು ಸ್ಮರಿಸಿದರೂ ಮುಂದಿನ ಜನ್ಮದಲ್ಲಿ ಉತ್ತಮಕುಲದಲ್ಲಿ ರೂಪವಂತನಾಗಿ ಮಾನವನು ಜನಿಸುವನು.

೨. ತಾರಕಾಸುರನ ಸಂಹಾರವಾಗಿ ಸ್ವರ್ಗದಲ್ಲಿ ಶಾಂತಿಸುಖಗಳು ನೆಲಸಲು ಮುಂದೊಂದುದಿನ ಪಾರ್ವತಿಯು ಹಿರಿಯ ಮಗನಾದ ಷಣ್ಮುಖನನ್ನು ಕುರಿತು,

ಯಥಾಸುಖಂ ಭುಂಕ್ಷ್ವ ಭೋಗಾಂಸ್ತ್ರೈಲೋಕ್ಯೇ ಮನಸಃ ಪ್ರಿಯಾನ್ ।
ಮಮಾಜ್ಞಯಾ ಪ್ರೀತಮನಾಃ ಪಿತುಶ್ಚೈವ ಪ್ರಸಾದತಃ ॥ ೩ ॥

ಏವಮುಕ್ತಃ ಸ ವೈ ಮಾತ್ರಾ ನಿಶಾಖೋ ದೇವತಾಸ್ತ್ರಿಯಃ ।
ಯಥಾಸುಖಂ ಬಲಾದ್ರೇಮೇ ದೇವಪತ್ನ್ಯೋಽಪಿ ರೇಮಿರೇ ॥ ೪ ॥

ತತಃ ಸಂಭುಜ್ಯಮಾನಾಸು ದೇವಪತ್ನೀಷು ನಾರದ ।
ನಾಶಕ್ನುವನ್ವಾರಯಿತುಂ ಕಾರ್ತಿಕೇಯಂ ದಿವೌಕಸಃ ॥ ೫ ॥

ತತೋ ನಿವೇದಯಾಮಾಸುಃ ಪಾರ್ವತ್ಯೈ ಪುತ್ರಕರ್ಮ ತತ್ ।
ಅಸಕೃದ್ವಾರ್ಯಮಾಣೋಽಪಿ ಮಾತ್ರಾ ದೈವೈಃ ಸ ಶಕ್ತಿಧೃಕ್ ॥ ೬ ॥

---

೩. ಎಲೈ ಕುಮಾರ, ನೀನು ನನ್ನಪ್ಪಣೆಯಿಂದಲೂ ನಿನ್ನ ತಂದೆಯ (ಈಶ್ವರನ) ಅನುಗ್ರಹದಿಂದಲೂ ಜಗತ್ತಿನಲ್ಲಿ ಬೇಕಾದ ಭೋಗಗಳನ್ನು ಅನುಭವಿಸು, ಎನ್ನಲು,

೪. ತಾಯಿಯ ಆ ಮಾತನ್ನು ಕೇಳಿ ಷಣ್ಮುಖನು ಬಲಾತ್ಕಾರದಿಂದ ದೇವಸುಂದರಿಯರೊಡನೆ ವಿಹರಿಸಿದನು, ದೇವಸ್ತ್ರೀಯರೂ ಸಹ ಅವನೊಡನೆ ಅನುರಾಗದಿಂದ ವಿಹರಿಸಿದರು.

೫. ಹೀಗೆ ಷಣ್ಮುಖನು ದೇವಸ್ತ್ರೀಯರೊಡನೆ ವಿಹರಿಸಿದರೂ ದೇವತೆಗಳು ಅವನನ್ನು ತಡೆಯಲು ಸಮರ್ಥರಾಗಲಿಲ್ಲ.

೬. ಆಗ ದೇವತೆಗಳು ಪಾರ್ವತಿಯ ಬಳಿಗೆ ಬಂದು ಅವಳ ಮಗನ (ಷಣ್ಮುಖನ) ಆ ದುಷ್ಕಾರ್ಯವನ್ನು ವಿಜ್ಞಾಪನೆಮಾಡಲು, ಪಾರ್ವತಿಯು ವ್ಯಥೆಗೊಂಡು ಮಗನನ್ನು ತಡೆದಳು. ದೇವತೆಗಳೂ ಬೇಡವೆಂದು ಕೇಳಿಕೊಂಡರು. ಆದರೂ ಸ್ತ್ರೀಯರಲ್ಲಿ ಅತ್ಯಾಸಕ್ತನಾದ ಷಣ್ಮುಖನು ತಾಯಿಯ ಮಾತನ್ನೂ ದೇವತೆಗಳ ಮಾತನ್ನೂ ಕೇಳಲಿಲ್ಲ.

ನೈವಾಸಾವಕರೋದ್ವಾಕ್ಯಂ ಸ್ತ್ರೀಷ್ವಾಸಕ್ತಸ್ತು ಷಣ್ಮುಖಃ ।
ಅಭಿಶಾಪಭಯಾದ್ಭೀತಾ ಪಾರ್ವತೀ ಪರ್ಯಚಿಂತಯತ್ ॥ ೭ ॥

ಪುತ್ರಸ್ನೇಹಾತ್ತಥೈವೇಶಾ ದೇವಾನಾಂ ಕಾರ್ಯಸಿದ್ಧಯೇ ।
ದೇವಪತ್ನ್ಯಶ್ಚಿರಂ ರಕ್ಷ್ಯಾ ಇತಿ ಮತ್ವಾ ಪುನಃ ಪುನಃ ॥ ೮ ॥

ಯಸ್ಯಾಂ ತು ರಮತೇ ಸ್ಕಂದಃ ಪಾರ್ವತೀ ತ್ವಪಿ ತಾದೃಶೀ ।
ತದ್ರೂಪಮಾತ್ಮನಃ ಕೃತ್ವಾ ವರ್ತಯಾಮಾಸ ಪಾರ್ವತೀ ॥ ೯ ॥

ಇಂದ್ರಸ್ಯ ವರುಣಸ್ಯಾಪಿ ಭಾರ್ಯಾಮಾಹೂಯ ಷಣ್ಮುಖಃ ।
ಯಾವತ್ಪಶ್ಯತಿ ತಸ್ಯಾಂ ತು ಮಾತೃರೂಪಮಪಶ್ಯತ ॥ ೧೦ ॥

ತಾಮುಪಾಸ್ಯ ನಮಸ್ಯಾಥ ಪುನರನ್ಯಾಮಥಾಹ್ವಯತ್ ।
ತಸ್ಯಾಂ ತು ಮಾತೃರೂಪಂ ಸ ಪ್ರೇಕ್ಷ್ಯ ಲಜ್ಜಾಮುಪೇಯಿವಾನ್ ॥ ೧೧ ॥

ಏವಂ ಬಹ್ವೀಷು ತದ್ರೂಪಂ ದೃಷ್ಟ್ವಾ ಮಾತೃಮಯಂ ಜಗತ್ ।
ಇತಿ ಸಂಚಿಂತ್ಯ ಗಾಂಗೇಯೋ ವೈರಾಗ್ಯಮಗಮತ್ತದಾ ॥ ೧೨ ॥

೭-೯. ದೇವತೆಗಳಿಂದ ತನ್ನ ಮಗನಿಗೆ ಶಾಪವೆಲ್ಲಿ ಬರುವುದೋ ಎಂದು ಚಿಂತಿಸಿ ಪಾರ್ವತಿಯು ದೇವತೆಗಳ ಕಾರ್ಯಸಿದ್ಧಿಯೂ ಆಗಬೇಕು, ನನ್ನ ಮಗನಿಗೂ ಕೆಡಕಾಗಬಾರದು, ದೇವಸ್ತ್ರೀಯರನ್ನೂ ರಕ್ಷಿಸಬೇಕು ಎಂದು ಯೋಚಿಸಿ—ಷಣ್ಮುಖನು ಕ್ರೀಡೆಗಾಗಿ ಯಾವ ದೇವಸುಂದರಿಯನ್ನು ಕರೆಯುವನೋ ಅವಳಲ್ಲಿ ತನ್ನ (ಪಾರ್ವತಿಯ) ರೂಪವು ತೋರುವಂತೆ ಮಾಡಿದಳು.

೧೦. ಇಂದ್ರನ ಅಥವಾ ವರುಣನ ಹೆಂಡತಿಯನ್ನು ಕ್ರೀಡೆಗಾಗಿ ಷಣ್ಮುಖನು ಕರೆದರೆ ಅವನಿಗೆ ಅವಳು ತನ್ನ ತಾಯಿಯಂತೆ ತೋರುತ್ತಿದ್ದಳು.

೧೧. ತಾಯಿಯೆಂದು ಅವಳನ್ನು ನಮಸ್ಕರಿಸಿ ಷಣ್ಮುಖನು ಮತ್ತೊರ್ವ ದೇವಸುಂದರಿಯನ್ನು ಕರೆದರೆ ಅವಳೂ ತನ್ನ ತಾಯಿಯಂತೆಯೇ ತೋರಿದಳು, ಪುನಃ ತಾಯಿಯನ್ನು ನೋಡಿ ಷಣ್ಮುಖನು ನಾಚಿಕೆಗೊಂಡನು.

೧೨. ಹೀಗೆ ಅನೇಕ ಸ್ತ್ರೀಯರಲ್ಲಿ ತನ್ನ ತಾಯಿಯ ರೂಪವನ್ನು ನೋಡಿ ಷಣ್ಮುಖನು ಸ್ತ್ರೀಯರೆಲ್ಲರೂ ಮಾತೃಸ್ವರೂಪರು ಎಂದು ತಿಳಿದು ಸ್ತ್ರೀಸುಖದಲ್ಲಿ ವೈರಾಗ್ಯವುಳ್ಳವನಾದನು.

ಸ ತು ಮಾತೃಕೃತಂ ಜ್ಞಾತ್ವಾ ಪ್ರವೃತ್ತಸ್ಯ ನಿವರ್ತನಂ ।
ನಿವಾರ್ಯಶ್ಚೇದಹಂ ಭೋಗಾತ್ಕಿಂತು ಪೂರ್ವಂ ಪ್ರವರ್ತಿತಃ ॥ ೧೩ ॥

ತಸ್ಮಾನ್ಮಾತೃಕೃತಂ ಸರ್ವಂ ಮಮ ಹಾಸ್ಯಾಸ್ಪದಂ ತ್ವಿತಿ ।
ಲಜ್ಜಯಾ ಪರಯಾ ಯುಕ್ತೋ ಗೌತಮೀಮಗಮತ್ತದಾ ॥ ೧೪ ॥

ಇಯಂ ಚ ಮಾತೃರೂಪಾ ಮೇ ಶೃಣೋತು ಮಮ ಭಾಷಿತಂ ।
ಇತಃ ಸ್ತ್ರೀನಾಮಧೇಯಂ ಯನ್ಮಮ ಮಾತೃಸಮಂ ಮತಂ ॥ ೧೫ ॥

ಏವಂ ಜ್ಞಾತ್ವಾ ಲೋಕನಾಥಃ ಪಾರ್ವತ್ಯಾ ಸಹ ಶಂಕರಃ ।
ಪುತ್ರಂ ನಿವಾರಯಾಮಾಸ ವೃತ್ತಮಿತ್ಯಬ್ರವೀದ್ಗುರುಃ ॥ ೧೬ ॥

ತತಃ ಸುರಪತಿಃ ಪ್ರೀತಃ ಕಿಂ ದದಾಮೀತಿ ಚಿಂತಯನ್ ।
ಕೃತಾಂಜಲಿಪುಟಃ ಸ್ಕಂದಃ ಪಿತರಂ ಪುನರಬ್ರವೀತ್ ॥ ೧೭ ॥

---

೧೩. ತಾನು ಭೋಗದಿಂದ ನಿವೃತ್ತನಾಗುವಂತೆ ಮಾಡಿದುದು ತನ್ನ ತಾಯಿಯೇ ಎಂದು ತಿಳಿದು ಆ ಸ್ಕಂದನು ಭೋಗದಿಂದ ನಾನು ನಿವೃತ್ತನಾಗುವುದು ನನ್ನ ತಾಯಿಯ ಇಷ್ಟವಾದರೆ ಅವಳು ಮೊದಲು ಭೋಗವನ್ನನುಭವಿಸುವಂತೆ ಪ್ರೇರಿಸಿದುದೇಕೆ?

೧೪. ಆದುದರಿಂದ ಮಾತೆಯು ಮಾಡಿದುದೆಲ್ಲಾ ನನ್ನ ಹಾಸ್ಯಕ್ಕೇ ಆಗಿದೆ ಎಂದು ಯೋಚಿಸಿ ಆ ಷಣ್ಮುಖನು ತುಂಬಾ ಲಜ್ಜೆಗೊಂಡು ಗೌತಮೀ ನದಿಯ ಬಳಿಗೆ ಬಂದನು.

೧೫. ಈ ಗೌತಮೀನದಿಯು ಮಾತೃಸ್ವರೂಪಳು. ಇವಳು ನನ್ನ ಪ್ರತಿಜ್ಞೆಯನ್ನು ಕೇಳಲಿ, ಇದುಮೊದಲುಗೊಂಡು ಸ್ತ್ರೀಯೆಂಬ ಹೆಸರೇ ನನಗೆ ಮಾತೃಸಮಾನವಾದುದು ಎಂದು ಪ್ರತಿಜ್ಞೆಮಾಡಲು,

೧೬. ಷಣ್ಮುಖನ ಆ ಪ್ರತಿಜ್ಞೆಯನ್ನು ತಿಳಿದು ಪರಮೇಶ್ವರನು ಪಾರ್ವತಿಯೊಡನೆ ಬಂದು ಮಗನನ್ನು ತಡೆದನು. ಷಣ್ಮುಖನು ತಂದೆಗೆ, ನಾನು ಪ್ರತಿಜ್ಞೆಯನ್ನು ಮಾಡಿಯಾಯಿತು, ಅದನ್ನು ಮೀರಲಾರೆ, ಎಂದನು.

೧೭. ಆಗ ಪರಮೇಶ್ವರನು ಸಂತುಷ್ಟನಾಗಿ ಮಗನನ್ನು ಕುರಿತು ನಿನಗೆ ಏನು ವರವನ್ನು ಕೊಡಲಿ? ಎಂದು ಕೇಳಿದನು. ಸ್ಕಂದನು ಕೈಜೋಡಿಸಿ ತಂದೆಯನ್ನು ಕುರಿತು,

॥ ಸ್ಕಂದ ಉವಾಚ ॥

ಸೇನಾಪತಿಃ ಸುರಪತಿಸ್ತವ ಪುತ್ರೋऽಹಮಿತ್ಯಪಿ ।
ಅಲಮೇತೇನ ದೇವೇಶ ಕಿಂ ವರೈಃ ಸುರಪೂಜಿತ ॥ ೧೮ ॥

ಅಥವಾ ದಾತುಕಾಮೋऽಸಿ ಲೋಕಾನಾಂ ಹಿತಕಾಮ್ಯಯಾ ।
ಯಾಚೇऽಹಂ ನಾತ್ಮನಾ ದೇವ ತದನುಜ್ಞಾತುಮರ್ಹಸಿ ॥ ೧೯ ॥

ಮಹಾಪಾತಕಿನಃ ಕೇಚಿದ್ಗುರುದಾರಾಭಿಗಾಮಿನಃ ।
ಅತ್ರಾಪ್ಲವನಮಾತ್ರೇಣ ಧೌತಪಾಪಾ ಭವಂತು ತೇ ॥ ೨೦ ॥

ಆಪ್ನುವಂತೂತ್ತಮಾಂ ಜಾತಿಂ ತಿರ್ಯಂಚೋऽಪಿ ಸುರೇಶ್ವರ ।
ಕುರೂಪೋ ರೂಪಸಂಪತ್ತಿಮತ್ರ ಸ್ನಾನಾದವಾಪ್ನುಯಾತ್ ॥ ೨೧ ॥

---

೧೮. ಓ ಮಹಾದೇವ, ನಾನು ದೇವಸೇನಾಪತಿಯಾಗಿರುವೆನು, ದೇವನಾಯಕನಾಗಿರುವೆನು. ಇದಲ್ಲದೆ ನಾನು ನಿನ್ನ ಪುತ್ರನಾಗಿರುವೆನು. ಇವಿಷ್ಟೇ ನನಗೆ ಸಾಕು, ಬೇರೆ ವರಗಳಿಂದ ಏನು ಪ್ರಯೋಜನ ?

೧೯. ಅಥವಾ ನೀನು ವರವನ್ನು ಕೇಳಲೇಬೇಕೆಂದರೆ, ಲೋಕಕ್ಷೇಮಕ್ಕಾಗಿ ವರವನ್ನು ಕೇಳುವೆನು. ನನಗಾಗಿ ಯಾವ ವರವೂ ಬೇಡ ಅದನ್ನು ಮನ್ನಿಸು.

೨೦. ಮಹಾಪಾಪವನ್ನು ಮಾಡಿದವರೂ ಗುರುಪತ್ನಿಯ ಸಂಗವನ್ನು ಮಾಡಿದ ಮಹಾಪಾಪಿಗಳೂ ಸಹ ಈ ಗೌತಮೀನದಿಯ ತೀರ್ಥದಲ್ಲಿ ಸ್ನಾನ ಮಾಡಿದ ಮಾತ್ರದಿಂದ ಪರಿಶುದ್ಧರಾಗಲಿ, ಪಾಪವಿಲ್ಲದವರಾಗಲಿ.

೨೧. ಈ ತೀರ್ಥದಲ್ಲಿ ಸ್ನಾನಮಾಡಿದರೆ ಪಶುಪ್ರಾಣಿಯೂ ಸಹ ಉತ್ತಮಜನ್ಮವನ್ನು ಪಡೆಯಲಿ. ಕುರೂಪಿಯು ರೂಪಸಂಪನ್ನನಾಗಲಿ. ಈರೀತಿ ವರವನ್ನನುಗ್ರಹಿಸಬೇಕು ಎಂದು ಕೇಳಿಕೊಂಡನು.

॥ ಬ್ರಹ್ಮೋವಾಚ ॥

ಏವಮಸ್ತ್ವಿತಿ ತಂ ಶಂಭುಃ ಪ್ರತ್ಯನನ್ದತ್ಸುತೇರಿತಂ ।
ತತಃ ಪ್ರಭೃತಿ ತತ್ತೀರ್ಥಂ ಕಾರ್ತಿಕೇಯಮಿತಿ ಶ್ರುತಂ ।
ತತ್ರ ಸ್ನಾನಂ ಚ ದಾನಂ ಚ ಸರ್ವಕ್ರತುಫಲಪ್ರದಂ ॥ ೨೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಕುಮಾರತೀರ್ಥವರ್ಣನಂ ನಾಮೈಕಾಶೀತಿತಮೋಽಧ್ಯಾಯಃ

---

೨೨. ಹಾಗೆಯೇ ಆಗಲಿ ಎಂದು ಶಿವನು ಮಗನಿಗೆ ಆ ವರವನ್ನನು ಗ್ರಹಿಸಿದನು. ಅದು ಮೊದಲುಗೊಂಡು ಗೌತಮಿಯ ತೀರ್ಥವು ಕಾರ್ತಿಕೇಯ ತೀರ್ಥವೆಂದು ಪ್ರಸಿದ್ಧವಾಗಿರುವುದು. ಆ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ಸಕಲಯಾಗಗಳ ಫಲವೂ ಲಭಿಸುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಕುಮಾರತೀರ್ಥವರ್ಣನವೆಂಬ ಎಂಭತ್ತೊಂದ
ನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ಹನ್ನೆರಡನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ದ್ವ್ಯಶೀತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಯತ್ರಾಖ್ಯಾತಂ ಕೃತ್ತಿಕಾತೀರ್ಥಂ ಕಾರ್ತಿಕೇಯಾದನಂತರಂ ।
ತಸ್ಯ ಶ್ರವಣಮಾತ್ರೇಣ ಸೋಮಪಾನಫಲಂ ಲಭೇತ್ ॥ ೧ ॥

ಪುರಾ ತಾರಕನಾಶಾಯ ಭವರೇತೋಽಪಿಬತ್ಕವಿಃ ।
ರೇತೋಗರ್ಭಂ ಕವಿಂ ದೃಷ್ಟ್ವಾ ಋಷಿಪತ್ನ್ಯೋಽಸ್ಪೃಹನ್ಮುನೇ ॥ ೨ ॥

ಸಪ್ತರ್ಷೀಣಾಮೃತುಸ್ನಾತಾಂ ವರ್ಜಯಿತ್ವಾ ತ್ವರುಂಧತೀಂ ।
ತಾಸು ಗರ್ಭಃ ಸಮಭವತ್ಷಟ್ಸು ಸ್ತ್ರೀಷು ತದಾಗ್ನಿತಃ ॥ ೩ ॥

ಎಂಭತ್ತೆರಡನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಕಾರ್ತಿಕೇಯತೀರ್ಥದಿಂದ ಮುಂದಕ್ಕೆ ಕೃತ್ತಿಕಾ ತೀರ್ಥವಿರುವುದು. ಆ ತೀರ್ಥದ ಹೆಸರನ್ನು ಸ್ಮರಿಸಿದರೆ ಸೋಮಪಾನ (ಯಾಗ) ಮಾಡಿದ ಫಲವು ಲಭಿಸುವುದು.

೨. ಹಿಂದೆ ತಾರಕಾಸುರನ ನಾಶಕ್ಕಾಗಿ ಬಿದ್ದ ಶಿವನ ರೇತಸ್ಸನ್ನು ಅಗ್ನಿಯು ಪಾನಮಾಡಿದನಷ್ಟೆ? ಶಿವನ ವೀರ್ಯದಿಂದ ಶೋಭಿಸುವ ಅಗ್ನಿಯನ್ನು ನೋಡಿ ಕೆಲವರು ಋಷಿಪತ್ನಿಯರು ಅಗ್ನಿಯನ್ನು ಕಾಮಿಸಿದರು.

೩. ಅರುಂಧತಿಯನ್ನು ಬಿಟ್ಟು ಮಿಕ್ಕ ಆರುಜನ ಋಷಿಪತ್ನಿಯರಲ್ಲಿ ಆಗ ಅಗ್ನಿಯಿಂದ ಗರ್ಭವಾಯಿತು.

ತಸ್ಯ ಮಾನಾಸ್ತು ಶೋಭಿಷ್ಣಾ ಋತುಸ್ನಾತಾಸ್ತು ತಾ ಮುನೇ ।
ಕಿಂ ಕುರ್ಮಃ ಕ್ವ ನು ಗಚ್ಛಾಮಃ ಕಿಂ ಕೃತ್ವಾ ಸುಕೃತಂ ಭವೇತ್ ॥ ೪ ॥

ಇತ್ಯುಕ್ತ್ವಾ ತಾ ಮಿಥೋ ಗಂಗಾಂ ವ್ಯಗ್ರಾ ಗತ್ವಾ ವ್ಯಪೀಡಯನ್ ।
ತಾಭ್ಯಸ್ತೇ ನಿಃಸೃತಾ ಗರ್ಭಾಃ ಫೇನರೂಪಾಸ್ತದಾಂಭಸಿ ॥ ೫ ॥

ಅಂಭಸಾ ತ್ವೇಕತಾಂ ಪ್ರಾಪ್ತಾ ವಾಯುನಾ ಸರ್ವ ಏವ ಹಿ ।
ಏಕರೂಪಸ್ತದಾ ತಾಭ್ಯಃ ಷಣ್ಮುಖಃ ಸಮಜಾಯತ ॥ ೬ ॥

ಸ್ರಾವಯಿತ್ವಾ ತು ತಾನ್ಗರ್ಭಾನೃಷಿಪತ್ನ್ಯೋ ಗೃಹಾನ್ಯಯುಃ ।
ತಾಸಾಂ ವಿಕೃತರೂಪಾಣಿ ದೃಷ್ಟ್ವಾ ತೇ ಋಷಯೋಽಬ್ರುವನ್ ॥ ೭ ॥

ಗಮ್ಯತಾಂ ಗಮ್ಯತಾಂ ಶೀಘ್ರಂ ಸ್ವೈರೀ ವೃತ್ತಿರ್ನ ಯುಜ್ಯತೇ ।
ಸ್ತ್ರೀಣಾಮಿತಿ ತತೋ ವತ್ಸ ನಿರಸ್ತಾಃ ಪತಿಭಿಸ್ತು ತಾಃ ॥ ೮ ॥

---

೪. ಆ ಋಷಿಪತ್ನಿಯರು ತಮ್ಮ ದುಷ್ಕಾರ್ಯಕ್ಕಾಗಿ ವ್ಯಥೆಪಡುತ್ತಾ ಈಗೇನು ಮಾಡೋಣ? ಎಲ್ಲಿಗೆ ಹೋಗೋಣ? ಏನುಮಾಡಿದರೆ ನಮ್ಮ ಪಾಪವು ನಾಶವಾದೀತು ಎಂದು ಚಿಂತಿಸುತ್ತಾ ಗೌತಮೀನದಿಗೆ ತೆರಳಿ ಆ ನದಿಯಲ್ಲಿ ತಮ್ಮ ಶರೀರವನ್ನು ಚೆನ್ನಾಗಿ ತೊಳೆದುಕೊಂಡರು.

೫. ಹಾಗೆ ತೊಳೆದುಕೊಂಡದ್ದರಿಂದ ಆ ಋಷಿಪತ್ನಿಯರ ಶರೀರದಿಂದ ಗರ್ಭವು ಹೊರಬಂದು ನದಿಯ ನೀರಿನಲ್ಲಿ ನೊರೆನೊರೆಯಾಗಿ, ಆರು ಗರ್ಭಗಳೂ ಒಂದಾದವು.

೬–೭. ಆ ನೊರೆರೂಪವಾದ ಗರ್ಭದಿಂದ ಷಣ್ಮುಖನು ಜನಿಸಿದನು. ಹೀಗೆ ಗರ್ಭವನ್ನು ಸ್ರವಿಸಿ ಋಷಿಪತ್ನಿಯರು ತಮ್ಮ ಮನೆಗಳಿಗೆ ಹೊರಟು ಹೋದರು. ಗರ್ಭವನ್ನು ಧರಿಸಿದುದರಿಂದ ಕೃಶರಾದ ಆ ಸ್ತ್ರೀಯರನ್ನು ನೋಡಿ ಅವರ ಪತಿಗಳಾದ ಋಷಿಗಳು ಕೋಪಗೊಂಡು ಅವರನ್ನು ಕುರಿತು,

೮. ಎಲೈ ದುಷ್ಟಸ್ತ್ರೀಯರೇ, ಹೋಗಿ, ಹೊರಟುಹೋಗಿ. ಸ್ತ್ರೀಯರಿಗೆ ಇಂತಹ ಸ್ವೇಚ್ಛಾವಿಹಾರವು ಯೋಗ್ಯವಲ್ಲ ಎಂದು ಆ ಋಷಿಗಳು ಆ ತಮ್ಮ ಪತ್ನಿಯರನ್ನು ಹೊರದೂಡಿದರು.

ತತೋ ದುಃಖಂ ಸಮಾವಿಷ್ಟಾಸ್ತ್ಯಕ್ತಾಃ ಸ್ವಪತಿಭಿಶ್ಚ ಷಟ್ ।
ತಾ ದೃಷ್ಟ್ವಾ ನಾರದಃ ಪ್ರಾಹ ಕಾರ್ತಿಕೇಯೋ ಹರೋದ್ಭವಃ ॥ ೯ ॥

ಗಾಂಗೇಯೋಽಗ್ನಿಭವಶ್ಚೇತಿ ವಿಖ್ಯಾತಸ್ತಾರಕಾಂತಕಃ ।
ತಂ ಯಾಂತು ನ ಚಿರಾದೇವ ಪ್ರೀತೋ ಭೋಗಂ ಪ್ರದಾಸ್ಯತಿ ॥ ೧೦ ॥

ದೇವರ್ಷೇರ್ವಚನಾದೇವ ಸಮಭ್ಯೇತ್ಯ ಚ ಷಣ್ಮುಖಂ ।
ಕೃತ್ತಿಕಾಃ ಸ್ವಯಮೇನ್ಯೈತದ್ಯಥಾವೃತ್ತಂ ನ್ಯವೇದಯನ್ ॥ ೧೧ ॥

ತಾಭ್ಯೋ ವಾಕ್ಯಂ ಕೃತ್ತಿಕಾಭ್ಯಃ ಕಾರ್ತಿಕೇಯೋಽನುಮನ್ಯ ಚ ।
ಗೌತಮೀಂ ಯಾಂತು ಸರ್ವಾಶ್ಚ ಸ್ನಾತ್ವಾಪೂಜ್ಯ ಮಹೇಶ್ವರಂ ॥ ೧೨ ॥

ಏಷ್ಯಾಮಿ ಚಾಹಂ ತತ್ರೈವ ಯಾಸ್ಯಾಮಿ ಸುರಮಂದಿರಂ ।
ತಥೇತ್ಯುಕ್ತ್ವಾ ಕೃತ್ತಿಕಾಶ್ಚ ಸ್ನಾತ್ವಾ ಗಂಗಾಂ ಚ ಗೌತಮೀಂ ॥ ೧೩ ॥

---

೯. ಹೀಗೆ ಪತಿಯರಿಂದ ಬಿಡಲ್ಪಟ್ಟ ಆ ಸ್ತ್ರೀಯರು ತುಂಬಾ ದುಃಖಗೊಂಡರು, ಅವರನ್ನು ಕುರಿತು ನಾರದಮುನಿಯು,

೧೦. ಎಲೌ ಋಷಿಪತ್ನಿಯರೇ, ಹರನ ಕುಮಾರನು ಕಾರ್ತಿಕೇಯನೆಂದೂ, ಗಾಂಗೇಯನೆಂದೂ, ಅಗ್ನಿಪುತ್ರನೆಂದೂ ಪ್ರಸಿದ್ಧನಾಗಿರುವನು. ಅವನು ತಾರಕಾಸುರನನ್ನು ಸಂಹರಿಸುವನು. ಅವನನ್ನು ಶರಣುಹೊಂದಿರಿ, ಅವನು ನಿಮಗೆ ಭೋಗವನ್ನನುಗ್ರಹಿಸುವನು ಎನ್ನಲು,

೧೧. ನಾರದಮುನಿಯ ಆ ಮಾತನ್ನು ಕೇಳಿ ಋಷಿಪತ್ನಿಯರಾದ ಆ ಆರುಜನ ಕೃತ್ತಿಕೆಯರು ಷಣ್ಮುಖನ ಬಳಿಗೆ ಬಂದು ಅವನಲ್ಲಿ ನಡೆದ ಸಮಾಚಾರವನ್ನು ತಿಳಿಸಿದರು.

೧೨. ಕೃತ್ತಿಕೆಯರ ಮಾತನ್ನು ಕೇಳಿ ಷಣ್ಮುಖನು ನೀವೆಲ್ಲರೂ ಗೌತಮೀನದಿಗೆ ಹೋಗಿ ಆ ನದಿಯಲ್ಲಿ ಸ್ನಾನಮಾಡಿ ಮಹೇಶ್ವರನನ್ನರ್ಚಿಸಿ. ನಾನೂ ಅಲ್ಲಿಗೆ ಬರುವೆನು, ಆದರಿಂದ ನಿಮಗೆ ದೇವಲೋಕವು ಲಭಿಸುವುದು ಎಂದನು.

೧೩-೧೪. ಷಣ್ಮುಖನ ಆ ಮಾತಿನಂತೆ ಕೃತ್ತಿಕೆಯರು ಗೌತಮೀನದಿಗೆ

ದೇವೇಶ್ವರಂ ಚ ಸಂಪೂಜ್ಯ ಕಾರ್ತಿಕೇಯಾನುಶಾಸನಾತ್ ।
ದೇವೇಶ್ವರಪ್ರಸಾದೇನ ಪ್ರಯಯುಃ ಸುರಮಂದಿರಂ ॥ ೧೪ ॥

ತತಃ ಪ್ರಭೃತಿ ತತ್ತೀರ್ಥಂ ಕೃತ್ತಿಕಾತೀರ್ಥಮುಚ್ಯತೇ ।
ಕಾರ್ತಿಕ್ಯಾಂ ಕೃತ್ತಿಕಾಯೋಗೇ ತತ್ರ ಯಃ ಸ್ನಾನಮಾಚರೇತ್ ॥ ೧೫ ॥

ಸರ್ವಕ್ರತುಫಲಂ ಪ್ರಾಪ್ಯ ರಾಜಾ ಭವತಿ ಧಾರ್ಮಿಕಃ ।
ತತ್ತೀರ್ಥಸ್ಮರಣಂ ವಾಪಿ ಯಃ ಕರೋತಿ ಶೃಣೋತಿ ಚ ।
ಸರ್ವಪಾಪವಿನಿರ್ಮುಕ್ತೋ ದೀರ್ಘಮಾಯುರವಾಪ್ನುಯಾತ್ ॥ ೧೬ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಕೃತ್ತಿಕಾತೀರ್ಥವರ್ಣನಂ ನಾಮ ದ್ವ್ಯಶೀತಿತಮೋಽಧ್ಯಾಯಃ

ತೆರಳಿ ಅಲ್ಲಿ ಸ್ನಾನಮಾಡಿ ಪರಮೇಶ್ವರನನ್ನು ಪೂಜಿಸಿ ಅವನ ಅನುಗ್ರಹದಿಂದ ಸ್ವರ್ಗವನ್ನು ಪಡೆದರು.

೧೫. ಅದುಮೊದಲುಗೊಂಡು ಆ ತೀರ್ಥವು ಕೃತ್ತಿಕಾತೀರ್ಥವೆಂದು ಪ್ರಸಿದ್ಧವಾಯಿತು. ಆ ತೀರ್ಥದಲ್ಲಿ ಕಾರ್ತಿಕಮಾಸದಲ್ಲಿ ಕೃತ್ತಿಕಾನಕ್ಷತ್ರವಿರುವ ದಿನದಲ್ಲಿ ಸ್ನಾನಮಾಡಿದವನು ಎಲ್ಲ ಯಜ್ಞಗಳ ಫಲವನ್ನು ಪಡೆದು ಮುಂದಿನ ಜನ್ಮದಲ್ಲಿ ಧಾರ್ಮಿಕನಾದ ರಾಜನಾಗಿ ಜನಿಸುವನು.

೧೬. ಆ ಕೃತ್ತಿಕಾತೀರ್ಥವನ್ನು ಸ್ಮರಿಸುವವನೂ, ಅದರ ಮಹಿಮೆಯನ್ನು ಕೇಳುವವನೂ ಸಹ ಸಕಲ ಪಾಪಗಳಿಂದಲೂ ಬಿಡಲ್ಪಟ್ಟವನಾಗಿ ದೀರ್ಘಾಯುಸ್ಸನ್ನು ಪಡೆಯುವನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಕೃತ್ತಿಕಾತೀರ್ಥವರ್ಣನವೆಂಬ
ಎಂಭತ್ತೆರಡನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ಹದಿಮೂರನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ತ್ರ್ಯಶೀತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ದಶಾಶ್ವಮೇಧಿಕಂ ತೀರ್ಥಂ ತಚ್ಛೃಣುಷ್ವ ಮಹಾಮುನೇ ।
ಯಸ್ಯ ಶ್ರವಣಮಾತ್ರೇಣ ಹಯಮೇಧಫಲಂ ಲಭೇತ್ ॥ ೧ ॥

ವಿಶ್ವಕರ್ಮಸುತಃ ಶ್ರೀಮಾನ್ವಿಶ್ವರೂಪೋ ಮಹಾಬಲಃ ।
ತಸ್ಯಾಪಿ ಪ್ರಥಮಃ ಪುತ್ರಸ್ತತ್ಪುತ್ರೋ ಭೌವನೋ ವಿಭುಃ ॥ ೨ ॥

ಪುರೋಧಾಃ ಕಶ್ಯಪಸ್ತಸ್ಯ ಸರ್ವಜ್ಞಾನವಿಶಾರದಃ ।
ತಮಪೃಚ್ಛನ್ಮಹಾಬಾಹುರ್ಭೌವನಃ ಸಾರ್ವಭೌವನಃ ॥ ೩ ॥

ಎಂಭತ್ತಮೂರನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದಮುನಿ, ಅಲ್ಲಿಂದ ಮುಂದೆ ದಶಾಶ್ವಮೇಧಿಕವೆಂಬ ತೀರ್ಥವಿರುವುದು, ಆ ತೀರ್ಥವನ್ನು ಶ್ರವಣಮಾಡಿದ ಮಾತ್ರಕ್ಕೆ ಅಶ್ವಮೇಧಯಾಗದ ಫಲವು ಲಭಿಸುವುದು.

೨. ವಿಶ್ವಕರ್ಮನಿಗೆ ವಿಶ್ವರೂಪನೆಂಬ ಬಲಿಷ್ಠನಾದ ಮಗನಿದ್ದನು. ಆ ವಿಶ್ವರೂಪನ ಮಗನ ಹೆಸರು ಭೌವನನೆಂದು.

೩. ಆ ಭೌವನನಿಗೆ ಮಹಾಜ್ಞಾನಿಯಾದ ಕಶ್ಯಪಮುನಿಯು ಪುರೋಹಿತನು. ಆ ಕಶ್ಯಪನನ್ನು ಕುರಿತು ಒಂದುದಿನ ಭೌವನನು,

ಯಕ್ಷ್ಯೇಽಹಂ ಹಯಮೇಧೈಶ್ಚ ಯುಗಪದ್ದಶಭಿರ್ಮುನೇ ।
ಇತ್ಯಪೃಚ್ಛದ್ಗುರುಂ ವಿಪ್ರಂ ಕ್ವ ಯಕ್ಷ್ಯಾಮಿ ಸುರಾನಿತಿ ॥ ೪ ॥

ಸೋಽವದದ್ದೇವಯಜನಂ ತತ್ರ ತತ್ರ ನೃಪೋತ್ತಮ ।
ಯತ್ರ ಯತ್ರ ದ್ವಿಜಶ್ರೇಷ್ಠಾಃ ಪ್ರಾವರ್ತಂತ ಮಹಾಕ್ರತೂನ್ ॥ ೫ ॥

ತತ್ರಾಭವನ್ನೃಷಿಗಣಾ ಆರ್ತ್ವಿಜ್ಯೇ ಮಖಮಂಡಲೇ ।
ಯುಗಪದ್ದಶಮೇಧಾನಿ ಪ್ರವೃತ್ತಾನಿ ಪುರೋಧಸಾ ॥ ೬ ॥

ಪೂರ್ಣತಾಂ ನಾಯಯುಸ್ತಾನಿ ದೃಷ್ಟ್ವಾ ಚಿಂತಾಪರೋ ನೃಪಃ ।
ವಿಹಾಯ ದೇವಯಜನಂ ಪುನರನ್ಯತ್ರ ತಾನ್ಕ್ರತೂನ್ ॥ ೭ ॥

ಉಪಾಕ್ರಾಮತ್ತಥಾ ತತ್ರ ವಿಘ್ನದೋಷಾಸ್ತಮಾಯಯುಃ ।
ದೃಷ್ಟ್ವಾಪೂರ್ಣಾಂಸ್ತತೋ ಯಜ್ಞಾನ್ರಾಜಾ ಗುರುಮಭಾಷತ ॥ ೮ ॥

---

೪. ಓ ಗುರುವೇ, ನಾನು ಒಂದೇಸಾರಿ ಹತ್ತು ಅಶ್ವಮೇಧಯಾಗಗಳನ್ನು ಮಾಡಬೇಕೆಂದಿರುವೆನು. ಎಲ್ಲಿ ಯಾಗವನ್ನು ಮಾಡಲಿ? ಎಂದು ಪ್ರಶ್ನಿಸಿದನು.

೫. ಭೌವನನ ಮಾತನ್ನಂಗೀಕರಿಸಿ ಕಶ್ಯಪನು ಯಾಗಗಳನ್ನು ಮಾಡಲು ಯೋಗ್ಯವಾದ ದೇವಯಜನವೆಂಬ ಸ್ಥಳಗಳನ್ನು ತೋರಿಸಿದನು, ಆ ಸ್ಥಳಗಳಲ್ಲಿ ಬ್ರಾಹ್ಮಣರು ಯಜ್ಞಗಳನ್ನು ಪ್ರಾರಂಭಿಸಿದರು.

೬. ಆ ಯಾಗಗಳಲ್ಲಿ ಮಹಾಮುನಿಗಳೆಲ್ಲರೂ ಋತ್ವಿಕ್ಕುಗಳಾಗಿದ್ದರು. ಹೀಗೆ ಒಂದೇ ಕಾಲದಲ್ಲಿ ಹತ್ತು ಅಶ್ವಮೇಧಯಾಗಗಳು ಪ್ರಾರಂಭವಾದುವು.

೭. ಆದರೆ ಯಾವುದೋ ವಿಘ್ನದಿಂದ ಆ ಯಾಗಗಳೊಂದೂ ಪೂರ್ಣವಾಗಲಿಲ್ಲ. ಆಗ ಆ ಭೌವನರಾಜನು ಆ ದೇವಯಜನಸ್ಥಳವನ್ನು ಬಿಟ್ಟು ಬೇರೆಡೆಯಲ್ಲಿ ಯಾಗಗಳನ್ನು ಪ್ರಾರಂಭಿಸಿದನು.

೮. ಆ ಸ್ಥಳಗಳಲ್ಲಿಯೂ ಅನೇಕ ವಿಘ್ನಗಳೊದಗಿ ಯಾಗಗಳು ಪೂರ್ಣವಾಗಲಿಲ್ಲ. ಆಗ ರಾಜನು ತನ್ನ ಗುರುವಾದ ಕಶ್ಯಪನನ್ನು ಕುರಿತು,

॥ ರಾಜೋವಾಚ ॥

ದೇಶದೋಷಾತ್ಕಾಲದೋಷಾನ್ಮಮ ದೋಷಾತ್ತವಾಪಿ ವಾ ।
ಪೂರ್ಣತಾಂ ನಾಪ್ನುವಂತಿ ಸ್ಮ ದಶಮೇಧಾನಿ ವಾಜಿನಃ ॥ ೯ ॥

॥ ಬ್ರಹ್ಮೋವಾಚ ॥

ತತಶ್ಚ ದುಃಖಿತೋ ರಾಜಾ ಕಶ್ಯಪೇನ ಪುರೋಧಸಾ ।
ಗೀಷ್ಪತೇರ್ಭ್ರಾತರಂ ಜ್ಯೇಷ್ಠಂ ಗತ್ವಾ ಸಂವರ್ತಮೂಚತುಃ ॥ ೧೦ ॥

॥ ಕಶ್ಯಪಭೌವನಾವೂಚತುಃ ॥

ಭಗವನ್ಯುಗಪತ್ಕಾರ್ಯಾಣ್ಯಶ್ವಮೇಧಾನಿ ಮಾನದ ।
ದಶ ಸಂಪೂರ್ಣತಾಂ ಯಾಂತಿ ತಂ ದೇಶಂ ತಂ ಗುರುಂ ವದ ॥ ೧೧ ॥

॥ ಬ್ರಹ್ಮೋವಾಚ ॥

ತತೋ ಧ್ಯಾತ್ವಾ ಋಷಿಶ್ರೇಷ್ಠಃ ಸಂವರ್ತೋ ಭೌವನಂ ತದಾ ।
ಅಬ್ರವೀದ್ಗಚ್ಛ ಬ್ರಹ್ಮಾಣಂ ಗುರುಂ ದೇಶಂ ವದಿಷ್ಯತಿ ॥ ೧೨ ॥

---

೯. ಓ ಗುರುವೆ, ದೇಶದೋಷದಿಂದಲಾಗಲಿ, ಕಾಲದೋಷದಿಂದಲಾಗಲಿ ನಿನ್ನ ಅಥವಾ ನನ್ನದೋಷಗಳಿಂದಲಾಗಲಿ ಯಾವುದರಿಂದಲೋ ಈ ಅಶ್ವಮೇಧ ಯಾಗಗಳು ಪೂರ್ಣವಾಗುತ್ತಿಲ್ಲ ಎಂದನು.

೧೦. ಹೀಗೆ ದುಃಖಿತನಾದಾ ರಾಜನು ಕಶ್ಯಪಮುನಿಯೊಡನೆ ಬೃಹಸ್ಪತಿಯ ಅಣ್ಣನಾದ ಸಂವರ್ತಮುನಿಯ ಬಳಿಗೆ ಹೋಗಿ,

೧೧. ಓ ಭಗವನ್, ಒಂದೇಕಾಲದಲ್ಲಿ ಹತ್ತು ಅಶ್ವಮೇಧಗಳನ್ನು ಮಾಡಬೇಕೆಂದಿರುವೆವು. ಆ ಯಾಗಗಳು ಪೂರ್ಣವಾಗುವಂತಹ ಸ್ಥಳವನ್ನೂ, ಪುರೋಹಿತನನ್ನೂ ನಮಗೆ ತೋರಿಸು, ಎನ್ನಲು,

೧೨. ಆಗ ಆ ಸಂವರ್ತಮುನಿಯು ಸ್ವಲ್ಪಹೊತ್ತು ಧ್ಯಾನಿಸಿ, ಭೌವನನನ್ನು ಕುರಿತು—ಎಲೈ ರಾಜ, ನೀನು ಬ್ರಹ್ಮದೇವನ ಬಳಿಗೆ ಹೋಗು, ಅವನು ದಶಾಶ್ವಮೇಧಗಳಿಗೆ ಯೋಗ್ಯವಾದ ಸ್ಥಳವನ್ನೂ, ಗುರುವನ್ನೂ ನಿನಗೆ ತಿಳಿಸುವನು, ಎಂದನು.

ಭೌವನೋಽಪಿ ಮಹಾಪ್ರಾಜ್ಞಃ ಕಶ್ಯಪೇನ ಮಹಾತ್ಮನಾ ।
ಆಗತ್ಯ ಮಾಮಬ್ರವೀಚ್ಚ ಗುರುಂ ದೇಶಾದಿಕಂ ಚ ಯತ್ ॥ ೧೩ ॥

ತತೋಽಹಮಬ್ರವಂ ಪುತ್ರ ಭೌವನಂ ಕಶ್ಯಪಂ ತಥಾ ।
ಗೌತಮೀಂ ಗಚ್ಛ ರಾಜೇಂದ್ರ ಸ ದೇಶಃ ಕ್ರತುಪುಣ್ಯವಾನ್ ॥ ೧೪ ॥

ಅಯಮೇವ ಗುರುಃ ಶ್ರೇಷ್ಠಃ ಕಶ್ಯಪೋ ವೇದಪಾರಗಃ ।
ಗುರೋರಸ್ಯ ಪ್ರಸಾದೇನ ಗೌತಮ್ಯಾಶ್ಚ ಪ್ರಸಾದತಃ ॥ ೧೫ ॥

ಏಕೇನ ಹಯಮೇಧೇನ ತತ್ರ ಸ್ನಾನೇನ ವಾ ಪುನಃ ।
ಸೇತ್ಸ್ಯಂತಿ ತತ್ರ ಯಜ್ಞಾಶ್ಚ ದಶಮೇಧಾನಿ ವಾಜಿನಃ ॥ ೧೬ ॥

ತಚ್ಛ್ರುತ್ವಾ ಭೌವನೋ ರಾಜಾ ಗೌತಮೀತೀರಮಭ್ಯಗಾತ್ ।
ಕಶ್ಯಪೇನ ಸಹಾಯೇನ ಹಯಮೇಧಾಯ ದೀಕ್ಷಿತಃ ॥ ೧೭ ॥

---

೧೩. ಆಮೇಲೆ ಮಹಾಬುದ್ಧಿವಂತನಾದ ಆ ಭೌವನರಾಜನು ಮಹಾತ್ಮನಾದ ಕಶ್ಯಪನೊಡನೆ ನನ್ನ ಬಳಿಗೆ ಬಂದು ಯಾಗಗಳಿಗೆ ಯೋಗ್ಯವಾದ ದೇಶ ಮತ್ತು ಪುರೋಹಿತರನ್ನು ತೋರಿಸಬೇಕೆಂದು ಕೇಳಲು,

೧೪. ಆಗ ನಾನು ಆ ಭೌವನಕಶ್ಯಪರನ್ನು ಕುರಿತು ಈಗ ನೀವು ಗೌತಮೀನದಿಯ ತೀರಕ್ಕೆ ಹೋಗಿ. ಆ ಸ್ಥಳವಲ್ಲಿ ನಿಮ್ಮ ಯಾಗಗಳು ಪೂರ್ಣವಾಗುವುವು.

೧೫-೧೬. ವೇದಪಂಡಿತನಾದ ಈ ಕಶ್ಯಪಮುನಿಯೇ ಪುರೋತನಾಗಲು ತಕ್ಕವನು. ಈ ಕಶ್ಯಪನ ಆಶೀರ್ವಾದದಿಂಲೂ ಗೌತಮೀನದಿಯ ಮಹಿಮೆಯಿಂದಲೂ ಆ ಸ್ಥಳದಲ್ಲಿ ನಿನ್ನ ಯಾಗಗಳೆಲ್ಲವೂ ಪೂರ್ತಿಯಾಗುವುವು. ಆ ಗೌತಮಿಯ ತೀರದಲ್ಲಿ ಒಂದು ಯಾಗವನ್ನು ಮಾಡಿದರೂ, ನೀರಿನಲ್ಲಿ ಸ್ನಾನ ಮಾಡಿದರೂ ಹತ್ತು ಅಶ್ವಮೇಧಗಳ ಫಲವು ಲಭಿಸುವುದು ಎಂದೆನು.

೧೭. ನನ್ನ ಆ ಮಾತನ್ನು ಕೇಳಿ ಭೌವನರಾಜನು ಗೌತಮೀನದಿಯ ತೀರಕ್ಕೆ ತೆರಳಿ ಅಲ್ಲಿ ಕಶ್ಯಪಮುನಿಯ ಸಹಾಯದಿಂದ ಯಾಗಗಳನ್ನು ಪ್ರಾರಂಭಿಸಿದನು.

ತತಃ ಪ್ರವೃತ್ತೇ ಯಜ್ಞೇಶೇ ಹಯಮೇಧೇ ಮಹಾಕ್ರತೌ ।
ಸಂಪೂರ್ಣೇ ತು ತದಾ ರಾಜಾ ಪೃಥಿವೀಂ ದಾತುಮುದ್ಯತಃ ॥ ೧೮ ॥

ತತೋಽಂತರಿಕ್ಷೇ ವಾಗುಚ್ಚೈರುವಾಚ ನೃಪಸತ್ತಮಂ ।
ಪೂಜಯಿತ್ವಾ ಸ್ಥಿತಂ ವಿಪ್ರಾನೃತ್ವಿಜೋಽಥ ಸದಸ್ಪತೀನ್ ॥ ೧೯ ॥

॥ ಆಕಾಶವಾಗುವಾಚ ॥

ಪುರೋಧಸೇ ಕಶ್ಯಪಾಯ ಸಶೈಲವನಕಾನನಾಂ ।
ಪೃಥಿವೀಂ ದಾತುಕಾಮೇನ ದತ್ತಂ ಸರ್ವಂ ತ್ವಯಾ ನೃಪ ॥ ೨೦ ॥

ಭೂಮಿದಾನಸ್ಪೃಹಂ ತ್ಯಕ್ತ್ವಾ ಅನ್ನಂ ದೇಹಿ ಮಹಾಫಲಂ ।
ನಾನ್ನದಾನಸಮಂ ಪುಣ್ಯಂ ತ್ರಿಷು ಲೋಕೇಷು ವಿದ್ಯತೇ ॥ ೨೧ ॥

---

೧೮. ಹಾಗೆ ಪ್ರಾರಂಭವಾದ ಆ ಯಾಗಗಳು ವಿಘ್ನವಿಲ್ಲದೆ ಪೂರ್ಣವಾದುವು. ಆಗ ರಾಜನು ಯಜ್ಞದ ದಕ್ಷಿಣೆಗಾಗಿ ಭೂಮಿಯನ್ನೇ ದಾನಮಾಡಲು ಸಿದ್ಧನಾದನು.

೧೯. ದಾನಕೊಡಲು ಬ್ರಾಹ್ಮಣರನ್ನೂ ಋತ್ವಿಕ್ಕುಗಳನ್ನೂ ಸದಸ್ಯರನ್ನೂ ಪೂಜಿಸಿ ರಾಜನು ಕೈಮುಗಿದುಕೊಂಡು ನಿಂತಿರಲು ಆಗ ಆಕಾಶವಾಣಿಯೊಂದು ಗಟ್ಟಿಯಾಗಿ ಕೇಳಿಸಿತು.

೨೦. ಪುರೋಹಿತನಾದ ಕಶ್ಯಪನಿಗೆ ಭೂಮಿಯೆಲ್ಲವನ್ನೂ ದಾನಮಾಡಲು ನೀನಿಷ್ಟಪಟ್ಟಿರುವುದರಿಂದಲೇ ಎಲ್ಲವನ್ನೂ ಕೊಟ್ಟಂತಾಗಿರುವುದು. ಭೂಮಿಯನ್ನು ದಾನಮಾಡಿದ ಪುಣ್ಯವು ಸಂಕಲ್ಪಮಾತ್ರದಿಂದಲೇ ಬಂದಿರುವುದು.

೨೧. ಆದುದರಿಂದ ಎಲೈ ರಾಜನೆ, ಭೂದಾನದ ಸಂಕಲ್ಪವನ್ನು ಬಿಟ್ಟು ಅನ್ನದಾನವನ್ನು ಮಾಡು. ಅನ್ನದಾನದಂತಹ ಪುಣ್ಯಕಾರ್ಯವು ಪ್ರಪಂಚದಲ್ಲಿ ಮತ್ತೊಂದಿಲ್ಲ.

ವಿಶೇಷತಸ್ತು ಗಂಗಾಯಾಃ ಶ್ರದ್ಧಯಾ ಪುಲಿನೇ ಮುನೇ ।
ತ್ವಯಾ ತು ಹಯಮೇಧೋಽಯಂ ಕೃತಃ ಸಬಹುದಕ್ಷಿಣಃ ।
ಕೃತಕೃತ್ಯೋಽಸಿ ಭದ್ರಂ ತೇ ನಾತ್ರ ಕಾರ್ಯಾ ವಿಚಾರಣಾ ॥ ೨೨ ॥

॥ ಬ್ರಹ್ಮೋವಾಚ ॥

ತಥಾಪಿ ದಾತುಕಾಮಂ ತಂ ಮಹೀ ಪ್ರೋವಾಚ ಭೌವನಂ ॥ ೨೩ ॥

॥ ಪೃಥಿವ್ಯುವಾಚ ॥

ವಿಶ್ವಕರ್ಮಜ ಸಾರ್ವಭೌಮ ಮಾ ಮಾಂ ದೇಹಿ ಪುನಃ ಪುನಃ ।
ನಿಮಜ್ಜೇಽಹಂ ಸಲಿಲಸ್ಯ ಮಧ್ಯೇ ತಸ್ಮಾನ್ನ ದೀಯತಾಂ ॥ ೨೪ ॥

॥ ಬ್ರಹ್ಮೋವಾಚ ॥

ತತಶ್ಚ ಭೌವನೋ ಭೀತಃ ಕಿಂ ದೇಯಮಿತಿ ಚಾಬ್ರವೀತ್ ।
ಪುನಶ್ಚೋವಾಚ ಸಾ ಪೃಥ್ವೀ ಭೌವನಂ ಬ್ರಾಹ್ಮಣೈರ್ವೃತಂ ॥ ೨೫ ॥

---

೨೨. ಈಗ ನೀನು ಗೌತಮೀತೀರದಲ್ಲಿ ಶ್ರದ್ಧೆಯಿಂದ ಉದಾರವಾಗಿ ದಕ್ಷಿಣೆಯನ್ನು ಕೊಟ್ಟು ಅಶ್ವಮೇಧಯಾಗವನ್ನು ಮಾಡಿರುವೆ. ಅದರಿಂದಲೇ ನೀನು ಕೃತಾರ್ಥನಾಗಿರುವೆ, ಇದರಲ್ಲಿ ಸಂಶಯವಿಲ್ಲ ನಿನಗೆ ಮಂಗಳವಾಗುವುದು. ಎಂದು ಹೇಳಿತು.

೨೩. ಆಕಾಶವಾಣಿಯು ಹೀಗೆ ಹೇಳಿದರೂ ಭೌವನನು ಭೂದಾನವನ್ನು ಮಾಡದಿರಲಿಷ್ಟವುಳ್ಳವನಾಗಲಿಲ್ಲ. ಆಗ ಭೂದೇವಿಯೇ ಪ್ರತ್ಯಕ್ಷಳಾಗಿ ಆ ರಾಜನನ್ನು ಕುರಿತು,

೨೪. ವಿಶ್ವಕರ್ಮಸುತನಾದ ಎಲೈ ಭೌವನ ಚಕ್ರವರ್ತಿಯೇ, ಕೇಳು ಪುನಃಪುನಃ ನನ್ನನ್ನು ದಾನಮಾಡಬೇಡ, ಅದರಿಂದ ನಾನು ನೀರಿನಲ್ಲಿ ಮುಳುಗಿ ಹೋಗುವೆನು. ಖಂಡಿತವಾಗಿಯೂ ನನ್ನನ್ನು ದಾನಮಾಡಬೇಡ ಎಂದಳು.

೨೫. ಆಗ ಭೌವನನು ಭೀತನಾಗಿ ಭೂಮಿದೇವಿಯನ್ನು ಕುರಿತು— ಹಾಗಾದರೆ ನಾನು ಏನನ್ನು ದಾನಮಾಡಲಿ? ಎಂದು ಪ್ರಶ್ನಿಸಲು, ಆ ಭೂಮಿಯು ತಿರುಗಿ ಆ ರಾಜನನ್ನು ಕುರಿತು,

॥ ಭೂಮ್ಯುವಾಚ ॥

ತಿಲಾ ಗಾವೋ ಧನಂ ಧಾನ್ಯಂ ಯತ್ಕಿಂಚಿದ್ಗೌತಮೀತಟೇ ।
ಸರ್ವಂ ತದಕ್ಷಯಂ ದಾನಂ ಕಿಂ ಮಾಂ ಭೌವನ ದಾಸ್ಯಸಿ ॥ ೨೬ ॥

ಗಂಗಾತೀರಂ ಸಮಾಶ್ರಿತ್ಯ ಗ್ರಾಸಮೇಕಂ ದದಾತಿ ಯಃ ।
ತೇನಾಹಂ ಸಕಲಾ ದತ್ತಾ ಕಿಂ ಮಾಂ ಭೌವನ ದಾಸ್ಯಸಿ ॥ ೨೭ ॥

॥ ಬ್ರಹ್ಮೋವಾಚ ॥

ಇದ್ಭುವೋ ವಚನಂ ಶ್ರುತ್ವಾ ಭೌವನಃ ಸಾರ್ವಭೌವನಃ ।
ತಥೇತಿ ಮತ್ವಾ ವಿಪ್ರೇಭ್ಯೋ ಹ್ಯನ್ನಂ ಪ್ರಾದಾತ್ಸುವಿಸ್ತರಂ ॥ ೨೮ ॥

---

೨೬. ಎಲೈ ಭೌವನರಾಜ, ಎಳ್ಳು, ಗೋವು, ಧನ, ಧಾನ್ಯ ಮೊದಲಾದುವುಗಳಾವುದನ್ನು ಗೌತಮೀನದಿಯತೀರದಲ್ಲಿ ದಾನಮಾಡಿದರೆ ಎಲ್ಲವೂ ಅಕ್ಷಯಪುಣ್ಯವನ್ನುಂಟುಮಾಡುವುವು. ಹೀಗಿದ್ದರೂ ನನ್ನನ್ನೂ ನೀನು ದಾನ ಮಾಡಬೇಕೆ?

೨೭. ಗೌತಮೀನದಿಯ ತೀರದಲ್ಲಿ ಒಂದು ಹಿಡಿಯಷ್ಟು ಅನ್ನವನ್ನು ದಾನಮಾಡಿದರೆ ಭೂಮಿಯೆಲ್ಲವನ್ನೂ ದಾನಮಾಡಿದಂತಾಗುವುದು, ಹೀಗಿದ್ದರೂ ನನ್ನನ್ನು ದಾನಮಾಡಬೇಕೆ ? ಎನ್ನಲು,

೨೮. ಬ್ರಹ್ಮನು ಹೇಳಿದನು – ಭೂಮಿಯ ಆ ಮಾತನ್ನು ಕೇಳಿ ಭೌವನ ಚಕ್ರವರ್ತಿಯು ಹಾಗೆಯೇ ಆಗಲೆಂದೊಪ್ಪಿ ವಿಜೃಂಭಣೆಯಾಗಿ ಅನ್ನದಾನವನ್ನು ಮಾಡಿದನು.

ತತಃ ಪ್ರಭೃತಿ ತತ್ತೀರ್ಥಂ ದಶಾಶ್ವಮೇಧಿಕಂ ವಿದುಃ ।
ದಶಾನಾಮಶ್ವಮೇಧಾನಾಂ ಫಲಂ ಸ್ನಾನಾದವಾಪ್ಯತೇ ॥ ೨೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ದಶಾಶ್ವಮೇಧತೀರ್ಥವರ್ಣನಂ ನಾಮ
ತ್ರ್ಯಶೀತಿತಮೋಽಧ್ಯಾಯಃ

---

೨೯. ಆ ಮೊದಲುಗೊಂಡು ಆ ತೀರ್ಥಕ್ಕೆ ದಶಾಶ್ವಮೇಧತೀರ್ಥವೆಂದು ಹೆಸರಾಯಿತು. ಆ ತೀರ್ಥದಲ್ಲಿ ಸ್ನಾನಮಾಡಿದರೆ ಹತ್ತು ಅಶ್ವಮೇಧಯಾಗವನ್ನು ಮಾಡಿದ ಫಲವು ಲಭಿಸುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ದಶಾಶ್ವಮೇಧತೀರ್ಥವರ್ಣನವೆಂಬ ಎಂಭತ್ತ ಮೂರನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ಹದಿನಾಲ್ಕನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಚತುರಶೀತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಪೈಶಾಚಂ ತೀರ್ಥಮುಪರಂ ಪೂಜಿತಂ ಬ್ರಹ್ಮವಾದಿಭಿಃ ।
ತಸ್ಯ ಸ್ವರೂಪಂ ವಕ್ಷ್ಯಾಮಿ ಗೌತಮ್ಯಾ ದಕ್ಷಿಣೇ ತಟೇ ॥ ೧ ॥

ಗಿರಿರ್ಬ್ರಹ್ಮಗಿರೇಃ ಪಾರ್ಶ್ವೇ ಅಂಜನಾ ನಾಮ ನಾರದ ।
ತಸ್ಮಿನ್ ಶೈಲೇ ಮುನಿವರ ಶಾಪಭ್ರಷ್ಟಾ ವರಾಪ್ಸರಾ ॥ ೨ ॥

ಎಂಭತ್ತನಾಲ್ಕನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಅಲ್ಲಿಂದ ಮುಂದೆ ಪೈಶಾಚವೆಂಬ ತೀರ್ಥವಿರುವುದು. ಅದನ್ನು ಮಹಾಮಹಾಜ್ಞಾನಿಗಳು ಸೇವಿಸುವರು. ಆ ತೀರ್ಥವು ಗೌತಮೀನದಿಯ ದಕ್ಷಿಣತೀರದಲ್ಲಿರುವುದು. ಈಗ ಅದರ ಮಾಹಾತ್ಮ್ಯವನ್ನು ಹೇಳುವೆನು.

೨. ಬ್ರಹ್ಮಗಿರಿಯ ಪಕ್ಕದಲ್ಲಿ ಅಂಜನವೆಂಬ ಗಿರಿಯಿರುವುದು. ಆ ಬೆಟ್ಟದಲ್ಲಿ ಶಾಪಗ್ರಸ್ತಳಾದ ಅಪ್ಸರೆಯೋರ್ವಳು ವಾಸಿಸುತ್ತಿದ್ದಳು. ಅವಳ ಹೆಸರು ಅಂಜನಾದೇವಿಯೆಂದು, ಅವಳ ಮುಖವು ಕಪಿಯಂತಿದ್ದಿತು.

ಅಂಜನಾ ನಾಮ ತತ್ರಾಸೀದುತ್ತಮಾಂಗೇನ ವಾನರೀ ।
ಕೇಸರೀ ನಾಮ ತದ್ಭರ್ತಾ ಅದ್ರಿಕೇತಿ ತಥಾಪರಾ ॥ ೩ ॥

ಸಾಪಿ ಕೇಸರಿಣೋ ಭಾರ್ಯಾ ಶಾಪಭ್ರಷ್ಟಾ ವರಾಪ್ಸರಾ ।
ಉತ್ತಮಾಂಗೇನ ಮಾರ್ಜಾರೀ ಸಾಪ್ಯಾಸ್ತೇಂಜನಪರ್ವತೇ ॥ ೪ ॥

ದಕ್ಷಿಣಾರ್ಣವಮಭ್ಯಾಗಾತ್ಕೇಸರೀ ಲೋಕವಿಶ್ರುತಃ ।
ಏತಸ್ಮಿನ್ನಂತರೇಽಗಸ್ತ್ಯೋಽಂಜನಂ ಪರ್ವತಮಭ್ಯಗಾತ್ । ೫ ॥

ಅಂಜನಾ ಚಾದ್ರಿಕಾ ಚೈವ ಅಗಸ್ತ್ಯಮೃಷಿಸತ್ತಮಂ ।
ಪೂಜಯಾಮಾಸತುರುಭೇ ಯಥಾನ್ಯಾಯಂ ಯಥಾಸುಖಂ ॥ ೬ ॥

ತತಃ ಪ್ರಸನ್ನೋ ಭಗವಾನಾಹೋಭೇ ವ್ರಿಯತಾಂ ವರಃ ।
ತೇ ಆಹತುರುಭೇಽಗಸ್ತ್ಯಂ ಪುತ್ರೌ ದೇಹಿ ಮುನೀಶ್ವರ ॥ ೭ ॥

೩-೪. ಅಂಜನಾದೇವಿಯ ಪತಿಯು ಕೇಸರಿಯೆಂಬ ಕಪಿಯು. ಅದ್ರಿಕೆಯೆಂಬ ಮತ್ತೋರ್ವಳು ಅವನಿಗೆ ಹೆಂಡತಿಯಾಗಿದ್ದಳು. ಅವಳೂ ಶಾಪಗ್ರಸ್ತಳಾದ ಅಪ್ಸರೆಯು. ಅವಳ ಮುಖವು ಬೆಕ್ಕಿನಂತಿತ್ತು. ಅವಳೂ ಅಂಜನಗಿರಿಯಲ್ಲಿ ವಾಸಿಸುತ್ತಿದ್ದಳು.

೫. ಒಂದುದಿನ ಪ್ರಸಿದ್ಧನಾದ ಕೇಸರಿಯು ದಕ್ಷಿಣಸಮುದ್ರದಕಡೆಗೆ ಹೋಗಿದ್ದನು. ಆ ಸಮಯದಲ್ಲಿ ಅಗಸ್ತ್ಯಮಹಾಮುನಿಯು ಅಂಜನಪರ್ವತಕ್ಕೆ ಬಂದನು.

೬. ಆಗ ಅಂಜನಾದೇವಿ ಅದ್ರಿಕಾದೇವಿಯರೀರ್ವರೂ ಅಗಸ್ತ್ಯಮುನಿಯನ್ನು ವಿಧಿವತ್ತಾಗಿ ಭಕ್ತಿಯಿಂದ ಪೂಜಿಸಿ ಉಪಚರಿಸಿದರು.

೭-೮. ಅದರಿಂದ ಭಗವಾನ್ ಅಗಸ್ತ್ಯನು ಪ್ರಸನ್ನನಾಗಿ ಆ ಕೇಸರಿಪತ್ನಿಯರನ್ನು ಕುರಿತು ಎಲೌ ಸ್ತ್ರೀಯರೇ, ನಿಮಗೆ ಬೇಕಾದ ವರವನ್ನು ಕೇಳಿರಿ ಎಂದನು, ಅವರೀರ್ವರೂ—ಓ ಮುನೀಶ್ವರ, ನಮಗೆ ಪುತ್ರರನ್ನು ಅನುಗ್ರಹಿಸು. ಆ ಪುತ್ರರು ಮಹಾಬಲಿಷ್ಠರಾಗಿರಬೇಕು, ಜಗತ್ತಿಗೆ ಉಪಕಾರಿಗಳಾಗಿರಬೇಕು,

ಸರ್ವೇಭ್ಯೋ ಬಲಿನೌ ಶ್ರೇಷ್ಠೌ ಸರ್ವಲೋಕೋಪಕಾರಕೌ ।
ತಥೇತ್ಯುಕ್ತ್ವಾ ಮುನಿಶ್ರೇಷ್ಠೋ ಜಗಾಮಾಶಾಂ ಸ ದಕ್ಷಿಣಾಂ ॥ ೮ ॥

ತತಃ ಕದಾಚಿತ್ಕಾಲೇ ಅಂಜನಾ ಚಾದ್ರಿಕಾ ತಥಾ ।
ಗೀತಂ ನೃತ್ಯಂ ಚ ಹಾಸ್ಯಂ ಚ ಕುರ್ವತ್ಯೌ ಗಿರಿಮೂರ್ಧನಿ ॥ ೯ ॥

ವಾಯುಶ್ಚ ನಿರ್‍ಋತಿಶ್ಚಾಪಿ ತೇ ದೃಷ್ಟ್ವಾ ಸಸ್ಮಿತೌ ಸುರೌ ।
ಕಾಮಾಕ್ರಾಂತಧಿಯೌ ಚೋಭೌ ತದಾ ಸತ್ವರಮಾಯತುಃ ॥ ೧೦ ॥

ಭಾರ್ಯೇ ಭವೇತಾಮುಭಯೋರಾವಾಂ ದೇವೌ ವರಪ್ರದೌ ।
ತೇ ಅಪ್ಯೂಚತುರಸ್ತ್ವೇತದ್ರೇಮಾತೇ ಗಿರಿಮೂರ್ಧನಿ ॥ ೧೧ ॥

ಅಂಜನಾಯಾಂ ತಥಾ ವಾಯೋರ್ಹನುಮಾನ್ಸಮಜಾಯತ ।
ಅದ್ರಿಕಾಯಾಂ ಚ ನಿರ್‍ಋತೇರದ್ರಿರ್ನಾಮ ಪಿಶಾಚರಾಟ್ ॥ ೧೨ ॥

ಇಂತಹ ಪುತ್ರರೀರ್ವರನ್ನು ಅನುಗ್ರಹಿಸು ಎಂದು ಕೇಳಲು ಅಗಸ್ತ್ಯಮುನಿಯು ಹಾಗೆಯೇ ಆಗಲೆಂದು ವರವನ್ನು ಕೊಟ್ಟು ದಕ್ಷಿಣದಿಕ್ಕಿಗೆ ಹೊರಟುಹೋದನು.

೯. ಆಮೇಲೊಂದುದಿನ ಅಂಜನಾದೇವಿ ಅದ್ರಿಕಾದೇವಿಯರಿಬ್ಬರೂ ಆ ಗಿರಿಯಲ್ಲಿ ಗಾನ, ನರ್ತನ, ಆಟಗಳಿಂದ ವಿಹರಿಸುತ್ತಿದ್ದರು.

೧೦. ಆಗ ವಾಯುವೂ ನಿರ್‍ಋತಿಯೂ ಆ ಸುಂದರಿಯರನ್ನು ನೋಡಿ ಮೋಹಗೊಂಡು ಅವರಬಳಿಗೆ ಬಂದು,

೧೧. ಎಲೌ ಸುಂದರಿಯರೇ, ನಾವು ವರವನ್ನು ಕೊಡಬಲ್ಲ ದೇವತೆಗಳು. ನಮ್ಮೊಡನೆ ವಿಹರಿಸಿ ಎಂದರು. ಆ ಅಂಜನೆ ಮತ್ತು ಅದ್ರಿಕೆಯರು ಅವರ ಮಾತಿನಂತೆ ವಾಯು ಮತ್ತು ನಿರ್‍ಋತಿಗಳೊಡನೆ ಬೆಟ್ಟದಲ್ಲಿ ವಿಹರಿಸಿದರು.

೧೨. ಆಗ ಅಂಜನಾದೇವಿಯಲ್ಲಿ ವಾಯುವಿನಿಂದ ಹನುಮಂತನು ಜನಿಸಿದನು. ಅದ್ರಿಕಾದೇವಿಯಲ್ಲಿ ನಿರ್‍ಋತಿಯಿಂದ ಅದ್ರಿಯೆಂಬ ಪಿಶಾಚರಾಜನು ಜನಿಸಿದನು.

ಪುನಸ್ತೇ ಆಹತುರುಭೇ ಪುತ್ರೌ ಜಾತೌ ಮುನೇರ್ವರಾತ್ ।
ಆವಯೋರ್ವಿಕೃತಂ ರೂಪಮುತ್ತಮಾಂಗೇನ ದೂಷಿತಂ ॥ ೧೩ ॥

ಶಾಪಾಚ್ಛಚೀಪತೇಸ್ತತ್ರ ಯುವಾಮಾಜ್ಞಾತುಮರ್ಹಥಃ ।
ತತಃ ಪ್ರೋವಾಚ ಭಗವಾನ್ವಾಯುಶ್ಚ ನಿರ್ಋತಿಸ್ತಥಾ ॥ ೧೪ ॥

ಗೌತಮ್ಯಾಂ ಸ್ನಾನದಾನಾಭ್ಯಾಂ ಶಾಪಮೋಕ್ಷೋ ಭವಿಷ್ಯತಿ ।
ಇತ್ಯುಕ್ತ್ವಾ ತಾವುಭೌ ಪ್ರೀತೌ ತತ್ರೈವಾಂತರಧೀಯತಾಂ ॥ ೧೫ ॥

ತತೋಽಂಜನಾಂ ಸಮಾದಾಯ ಅದ್ರಿಃ ಪೈಶಾಚಮೂರ್ತಿಮಾನ್ ।
ಭ್ರಾತುರ್ಹನುಮತಃ ಪ್ರೀತ್ಯೈ ಸ್ನಾಪಯಾಮಾಸ ಮಾತರಂ ॥ ೧೬ ॥

ತಥೈವ ಹನುಮಾನ್ಗಂಗಾಮಾದಾಯಾದ್ರಿಮತಿತ್ವರನ್ ।
ಮಾರ್ಜಾರರೂಪಿಣೀಂ ನೀತ್ವಾ ಗೌತಮ್ಯಾಸ್ತೀರಮಾಪ್ತವಾನ್ ॥ ೧೭ ॥

---

೧೩. ಪುನಃ ಆ ಕಪಿಪತ್ನಿಯರು ಓ ದೇವಶ್ರೇಷ್ಠರೇ, ಅಗಸ್ತ್ಯ ಮುನಿಯ ಅನುಗ್ರಹದಿಂದ ನಮಗೆ ನಿಮ್ಮಿಂದ ಮಕ್ಕಳು ಜನಿಸಿದರು. ಆದರೆ ಇಂದ್ರನ ಶಾಪದಿಂದ ನಮ್ಮ ಶಿರಸ್ಸು ವಿಕಾರವಾಗಿರುವುದು, ಆ ಶಾಪವು ಹೋಗುವಂತೆ ಅನುಗ್ರಹಿಸು ಎಂದು ಕೇಳಿಕೊಳ್ಳಲು,

೧೪-೧೫. ಆಗ ವಾಯುನಿರ್ಋತಿಗಳು, ಗೌತಮೀನದಿಯಲ್ಲಿ ನೀವು ಸ್ನಾನದಾನಗಳನ್ನು ಮಾಡಿದರೆ ನಿಮ್ಮ ಶಾಪವು ಹೋಗುವುದು ಎಂದು ಹೇಳಿ ಆ ವಾಯುನಿರ್ಋತಿಗಳು ಸಂತೋಷದಿಂದ ಅಲ್ಲಿಯೇ ಅಂತರ್ಧಾನರಾದರು.

೧೬. ಆಮೇಲೆ ಪಿಶಾಚರೂಪವುಳ್ಳ ಅದ್ರಿಯು ಅಣ್ಣನಾದ ಹನುಮಂತನಮೇಲಿನ ಪ್ರೀತಿಯಿಂದ ಅಂಜನಾದೇವಿಯನ್ನು ಕರೆದುಕೊಂಡುಹೋಗಿ ಗೌತಮೀನದಿಯಲ್ಲಿ ಸ್ನಾನಮಾಡಿಸಿದನು.

೧೭. ಅದರಂತೆಯೇ ಹನುಮಂತನೂ ಬೆಕ್ಕಿನಮುಖವುಳ್ಳ ಅದ್ರಿಕಾದೇವಿಯನ್ನು ಕರೆದುಕೊಂಡುಹೋಗಿ ಗೌತಮೀನದಿಯಲ್ಲಿ ಸ್ನಾನಮಾಡಿಸಿ ಕರೆದುಕೊಂಡುಬಂದನು. ಅದರಿಂದ ಆ ಅಪ್ಸರೆಯರಿರ್ವರ ಶಾಪವೂ ನಾಶವಾಗಿ ಅವರಿಗೆ ಪೂರ್ವರೂಪವುಂಟಾಯಿತು.

ತತಃ ಪ್ರಭೃತಿ ತತ್ತೀರ್ಥಂ ಪೈಶಾಚಂ ಚಾಂಜನಂ ತಥಾ ।
ಬ್ರಹ್ಮಣೋ ಗಿರಿಮಾಸಾದ್ಯ ಸರ್ವಕಾಮಪ್ರದಂ ಶುಭಂ ॥ ೧೮ ॥

ಯೋಜನಾನಾಂ ತ್ರಿಪಂಚಾಶನ್ಮಾರ್ಜಾರಂ ಪೂರ್ವತೋ ಭವೇತ್ ।
ಮಾರ್ಜಾರಸಂಜ್ಞಿತಾತ್ತಸ್ಮಾದ್ಧನೂಮಂತಂ ವೃಷಾಕಪಿಂ ॥ ೧೯ ॥

ಫೇನಾಸಂಗಮಮಾಖ್ಯಾತಂ ಸರ್ವಕಾಮಪ್ರದಂ ಶುಭಂ ।
ತಸ್ಯ ಸ್ವರೂಪಂ ವ್ಯಷ್ಟಿಶ್ಚ ತತ್ರೈವ ಪ್ರೋಚ್ಯತೇ ಶುಭಾ ॥ ೨೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಪೈಶಾಚತೀರ್ಥವರ್ಣನಂ ನಾಮ
ಚತುರಶೀತಿತಮೋಽಧ್ಯಾಯಃ

---

೧೮. ಆ ಮೊದಲುಗೊಂಡು ಗೌತಮಿಯ ಆ ತೀರ್ಥಕ್ಕೆ ಪೈಶಾಚತೀರ್ಥವೆಂದೂ ಅಂಜನತೀರ್ಥವೆಂದೂ ಹೆಸರಾಯಿತು. ಬ್ರಹ್ಮಗಿರಿಯಿಂದ ಪೂರ್ವಕ್ಕೆ ಐವತ್ತುಮೂರುಗಾವುದ ದೂರದಲ್ಲಿ ಮಾರ್ಜಾರತೀರ್ಥ (ಪೈಶಾಚತೀರ್ಥ) ವಿರುವುದು.

೧೯-೨೦. ಮಾರ್ಜಾರತೀರ್ಥದ ಮುಂದೆ ಹನೂಮತ್ತೀರ್ಥ (ಅಂಜನತೀರ್ಥ) ವಿರುವುದು, ಅಲ್ಲಿಂದಮುಂದೆ ಪುಣ್ಯಕರವಾದ ವೃಷಾಕಪಿಯೆಂಬ ತೀರ್ಥವೂ ಕಾರ್ತಿಕೇಯತೀರ್ಥವೂ ಇರುವುವು. ಅವುಗಳ ಸ್ವರೂಪವನ್ನೂ ಮಹಾತ್ಮ್ಯವನ್ನೂ ಅಲ್ಲಿಯೇ ಹೇಳಿರುವೆನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಪೈಶಾಚತೀರ್ಥವರ್ಣನವೆಂಬ ಎಂಭತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಹದಿನೈದನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಪಂಚಾಶೀತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಕ್ಷುಧಾತೀರ್ಥಮಿತಿ ಖ್ಯಾತಂ ಶೃಣು ನಾರದ ತನ್ಮನಾಃ ।
ಕಥ್ಯಮಾನಂ ಮಹಾಪುಣ್ಯಂ ಸರ್ವಕಾಮಪ್ರದಂ ನೃಣಾಂ ॥ ೧ ॥

ಋಷಿರಾಸೀತ್ಪುರಾ ಕಣ್ವಸ್ತಪಸ್ವೀ ವೇದವಿತ್ತಮಃ ।
ಪರಿಭ್ರಮನ್ನಾಶ್ರಮಾಣಿ ಕ್ಷುಧಯಾ ಪರಿಪೀಡಿತಃ ॥ ೨ ॥

ಎಂಭತ್ತೈದನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಕ್ಷುಧಾತೀರ್ಥವೆಂದು ಪುಣ್ಯಪ್ರದವಾದ ತೀರ್ಥವಿರುವುದು. ಅದು ಜನಗಳಿಗೆ ಸಕಲೇಷ್ಟಾರ್ಥಗಳನ್ನೂ ಉಂಟುಮಾಡುವುದು. ಎಲೈ ನಾರದ, ಅದನ್ನು ವರ್ಣಿಸುವೆನು ಕೇಳು,

೨. ಹಿಂದೆ ಕಣ್ವನೆಂಬ ಋಷಿಯಿದ್ದನು. ಅವನು ಮಹಾತಪಸ್ವಿಯೂ, ವೇದಪಾರಂಗತನೂ ಆಗಿದ್ದನು. ಹೀಗಿರಲು ಅವನಿರುವ ದೇಶದಲ್ಲಿ ಬರಗಾಲವು ಬಂದಿತು. ಆ ಮುನಿಯು ಆಹಾರವಿಲ್ಲದೇ ಹಸುವಿನಿಂದ ಬಳಲಿ ಆಹಾರಕ್ಕಾಗಿ ಅಲೆದಲೆದು ಗೌತಮಮುನಿಯ ಪುಣ್ಯಾಶ್ರಮಕ್ಕೆ ಬಂದನು. ಆ ಆಶ್ರಮದಲ್ಲಿ ನೀರು ಅನ್ನ ಮೊದಲಾದುವುಗಳು ಸಮೃದ್ಧವಾಗಿದ್ದುವು.

ಗೌತಮಸ್ಯಾಶ್ರಮಂ ಪುಣ್ಯಂ ಸಮೃದ್ಧಂ ಚಾನ್ನವಾರಿಣಾ ।
ಆತ್ಮಾನಂ ಚ ಕ್ಷುಧಾಯುಕ್ತಂ ಸಮೃದ್ಧಂ ಚಾಪಿ ಗೌತಮಂ ॥ ೩ ॥

ವೀಕ್ಷ್ಯ ಕಣ್ವೋಽಥ ವೈಷಮ್ಯಂ ವೈರಾಗ್ಯಮುಗಮತ್ತದಾ ।
ಗೌತಮೋಽಪಿ ದ್ವಿಜಶ್ರೇಷ್ಠೋ ಹ್ಯಹಂ ತಪಸಿ ನಿಷ್ಠಿತಃ ॥ ೪ ॥

ಸಮೇನ ಯಾಚ್ಞಾಯುಕ್ತಾ ಸ್ಯಾತ್ತಸ್ಮಾತ್ಗೌತಮವೇಶ್ಮನಿ ।
ನ ಭೋಕ್ಷ್ಯೇಽಹಂ ಕ್ಷುಧಾರ್ತೋಽಪಿ ಪೀಡಿತೇಽಪಿ ಕಲೇವರೇ ॥ ೫ ॥

ಗಚ್ಛೇಯಂ ಗೌತಮೀಂ ಗಂಗಾಮುರ್ಜಯೇಯಂ ಚ ಸಂಪದಂ ।
ಇತಿ ನಿಶ್ಚಿತ್ಯ ಮೇಧಾವೀ ಗತ್ವಾ ಗಂಗಾಂ ಚ ಪಾವನೀಂ ॥ ೬ ॥

ಸ್ನಾತ್ವಾ ಶುಚಿರ್ಯತಮನಾ ಉಪವಿಶ್ಯ ಕುಶಾಸನೇ ।
ತುಷ್ಟಾವ ಗೌತಮೀಂ ಗಂಗಾಂ ಕ್ಷುಧಾಂ ಚ ಪರಮಾಪದಂ ॥ ೭ ॥

---

೩. ತಾನು (ಕಣ್ವನು) ಹಾಗೆ ಹಸಿವಿನಿಂದ ಬಳಲಿರುವುದನ್ನೂ ಗೌತಮನು ಸಮೃದ್ಧನಾಗಿರುವುದನ್ನೂ ನೋಡಿ ಆ ಕಣ್ವಮುನಿಯು ವಿರಕ್ತಿಯಿಂದ ಹೀಗೆ ಚಿಂತಿಸಿದನು.

೪-೫. ಗೌತಮನೂ ನನ್ನಂತೆ ಬ್ರಾಹ್ಮಣನು ಮತ್ತು ತಪಸ್ವಿಯು. ಸಮಾನರಲ್ಲಿ ಯಾಚನೆಯನ್ನು ಮಾಡಬಾರದು. ಆದುದರಿಂದ ಹಸಿವಿನಿಂದ ಬಳಲಿದ್ದರೂ ನಾನು ಗೌತಮನ ಆಶ್ರಮದಲ್ಲಿ ಊಟಮಾಡಲಾರೆನು,

೬. ಗೌತಮೀನದಿಗೆಹೋಗಿ ಅಲ್ಲಿ ಆಹಾರಸಂಪತ್ತನ್ನು ಸಂಪಾದಿಸುವೆನು ಎಂದು ನಿಶ್ಚಯಿಸಿ,

೭. ಆ ನದಿಯಲ್ಲಿ ಸ್ನಾನಮಾಡಿ ಪರಿಶುದ್ಧನಾಗಿ ದರ್ಭಾಸನದಲ್ಲಿ ಕುಳಿತು ಸ್ಥಿರಮನಸ್ಸಿನಿಂದ ಗೌತಮೀನದಿಯನ್ನೂ ಕಷ್ಟಕರವಾದ ಕ್ಷುಧೆಯ (ಹಸಿವ) ನ್ನೂ ಹೀಗೆ ಸ್ತುತಿಸಿದನು.

॥ ಕಣ್ವ ಉವಾಚ ॥

ನಮೋಽಸ್ತು ಗಂಗೇ ಪರಮಾರ್ತಿಹಾರಿಣಿ
ನಮಃ ಕ್ಷುಧೇ ಸರ್ವಜನಾರ್ತಿಕಾರಿಣಿ ।
ನಮೋ ಮಹೇಶಾನಜಟೋದ್ಭವೇ ಶುಭೇ
ನಮೋ ಮಹಾಮೃತ್ಯುಮುಖಾದ್ವಿನಿಸೃತೇ ॥ ೮ ॥

ಪುಣ್ಯಾತ್ಮನಾಂ ಶಾಂತರೂಪೇ ಕ್ರೋಧರೂಪೇ ದುರಾತ್ಮನಾಂ ।
ಸರಿದ್ರೂಪೇಣ ಸರ್ವೇಷಾಂ ತಾಪಪಾಪಾಪಹಾರಿಣಿ ॥ ೯ ॥

ಕ್ಷುಧಾರೂಪೇಣ ಸರ್ವೇಷಾಂ ತಾಪಪಾಪಪ್ರದೇ ನಮಃ ।
ನಮಃ ಶ್ರೇಯಸ್ಕರಿ ದೇವಿ ನಮಃ ಪಾಪಪ್ರತರ್ದಿನಿ ।
ನಮಃ ಶಾಂತಿಕರಿ ದೇವಿ ನಮೋ ದಾರಿದ್ರ್ಯನಾಶಿನಿ ॥ ೧೦ ॥

---

೮. ಮಹಾದುಃಖವನ್ನೂ ಹೋಗಲಾಡಿಸುವ ಓ ಗೌತಮಿ, ನಿನಗೆ ನಮಸ್ಕಾರವು, ಸಕಲಮಾನವರಿಗೂ ದುಃಖವನ್ನುಂಟುಮಾಡುವ ಓ ಕ್ಷುಧೆ, ನಿನಗೂ ನಮಸ್ಕಾರವು, ಮಹೇಶ್ವರನ ಜಟೆಯಿಂದುದ್ಭವಿಸಿದ ಓ ಗೌತಮಿ, ನಿನಗೆ ನಮಸ್ಕಾರವು, ಮಹಾಮೃತ್ಯುವಿನ ಮುಖದಿಂದ ಹೊರಟ ಓ ಕ್ಷುಧೆ ನಿನಗೂ ನಮಸ್ಕಾರ.

೯. ಓ ಗಂಗೆ, ನೀನು ಪುಣ್ಯಾತ್ಮರಿಗೆ ಶಾಂತರೂಪಳು, ದುರಾತ್ಮರಿಗೆ ಕ್ರೋಧರೂಪಳು. ನದಿಯ ರೂಪದಿಂದ ನೀನು ಎಲ್ಲರ ದುಃಖಪಾಪಗಳನ್ನೂ ಹೋಗಲಾಡಿಸುವೆ.

೧೦. ಹಸಿವಿನ ರೂಪದಿಂದ ಎಲ್ಲರನ್ನೂ ಪೀಡಿಸುವ ಓ ಕ್ಷುಧೆಯೇ, ನಿನಗೆ ನಮಸ್ಕಾರವು. ಶ್ರೇಯಸ್ಸನ್ನುಂಟುಮಾಡುವವಳೂ ಪಾಪನಾಶಕಳೂ ಆದ ಓ ದೇವಿ (ಗಂಗೆ) ನಿನಗೆ ನಮಸ್ಕಾರ, ಓ ಗೌತಮಿ (ನೀನು) ಶಾಂತಿಯನ್ನುಂಟುಮಾಡುವವಳು, ಬಡತನವನ್ನು ಹೋಗಲಾಡಿಸುವವಳು, ನಿನಗೆ ನಮಸ್ಕಾರವು.

॥ ಬ್ರಹ್ಮೋವಾಚ ॥

ಇತ್ಯೇವಂ ಸ್ತುವತಸ್ತಸ್ಯ ಪುರಸ್ತಾದಭವದ್ದ್ವಯಂ ।
ಏಕಂ ಗಾಂಗಂ ಮನೋಹಾರಿ ಹ್ಯಪರಂ ಭೀಷಣಾಕೃತಿ ।
ಪುನಃ ಕೃತಾಂಜಲಿರ್ಭೂತ್ವಾ ನಮಸ್ಕೃತ್ವಾ ದ್ವಿಜೋತ್ತಮಃ ॥ ೧೧ ॥

॥ ಕಣ್ವ ಉವಾಚ ॥

ಸರ್ವಮಂಗಲಮಾಂಗಲ್ಯೇ ಬ್ರಾಹ್ಮಿ ಮಾಹೇಶ್ವರಿ ಶುಭೇ ।
ವೈಷ್ಣವಿ ತ್ರ್ಯಂಬಕೇ ದೇವಿ ಗೋದಾವರಿ ನಮೋಽಸ್ತು ತೇ ॥ ೧೨ ॥

ತ್ರ್ಯಂಬಕಸ್ಯ ಜಟೋದ್ಭೂತೇ ಗೌತಮಸ್ಯಾಘನಾಶಿನಿ ।
ಸಪ್ತಧಾ ಸಾಗರಂ ಯಾಂತಿ ಗೋದಾವರಿ ನಮೋಽಸ್ತು ತೇ ॥ ೧೩ ॥

ಸರ್ವಪಾಪಕೃತಾಂ ಪಾಪೇ ಧರ್ಮಕಾಮಾರ್ಥನಾಶಿನಿ ।
ದುಃಖಲೋಭಮಯಿ ದೇವಿ ಕ್ಷುಧೇ ತುಭ್ಯಂ ನಮೋ ನಮಃ ॥ ೧೪ ॥

---

೧೧. ಹೀಗೆ ಕಣ್ವನು ಸ್ತುತಿಸಲು ಎದುರಿಗೆ ಎರಡುರೂಪಗಳು ಪ್ರತ್ಯಕ್ಷವಾದುವು ಒಂದು ಗೌತಮಿಯ ಮನೋಹರವಾದ ರೂಪವು. ಮತ್ತೊಂದು ಕ್ಷುಧೆಯ ಭಯಂಕರವಾದ ರೂಪವು.

೧೨–೧೩. ಆಗ ಕಣ್ವನು ಕೈಜೋಡಿಸಿ ನಮಸ್ಕರಿಸಿ ಓ ಗೋದಾವರಿ ನೀನು ಸರ್ವಮಂಗಳವಸ್ತುಗಳಿಗೂ ಮಂಗಳರೂಪಳು, ಬ್ರಹ್ಮನ ಕಮಂಡಲುವಿನಿಂದ ಬಂದವಳು, ಶಿವನ ಜಡೆಯಿಂದ ಹೊರಟವಳು, ಹರಿಯ ಪಾದದಿಂದ ಬಿದ್ದವಳು. ಶಿವನಿಂದ ಜನಿಸಿದವಳೂ, ಪರಮೇಶ್ವರರೂಪಳೂ, ಇಂತಹ ನಿನಗೆ ನಮಸ್ಕಾರವು.

೧೪. ಶಿವನ ಜಟೆಯಿಂದ ಹೊರಟು ಗೌತಮಮುನಿಯ ಗೋಹತ್ಯಾಪಾಪವನ್ನು ಹೋಗಲಾಡಿಸಿದ ಗಂಗೆಗೆ ನಮಸ್ಕಾರವು. ದುಃಖದುರಾಸೆಗಳ ಸ್ವರೂಪಳಾದ ಕ್ಷುಧೆಗೆ ನಮಸ್ಕಾರವು.

॥ ಬ್ರಹ್ಮೋವಾಚ ॥

ತತ್ಕಣ್ವವಚನಂ ಶ್ರುತ್ವಾ ಸುಪ್ರೀತೇ ಆಹತುರ್ದ್ವಿಜಂ ॥ ೧೫ ॥

॥ ಗಂಗಾಕ್ಷುಧೇ ಊಚತುಃ ॥

ಅಭೀಷ್ಟಂ ವದ ಕಲ್ಯಾಣ ವರಾನ್ವರಯ ಸುವ್ರತ ॥ ೧೬ ॥

॥ ಬ್ರಹ್ಮೋವಾಚ ॥

ಪ್ರೋವಾಚ ಪ್ರಣತೋ ಗಂಗಾಂ ಕಣ್ವಃ ಕ್ಷುಧಾಂ ಯಥಾಕ್ರಮಂ ॥ ೧೭ ॥

॥ ಕಣ್ವ ಉವಾಚ ॥

ದೇಹಿ ದೇವಿ ಮನೋಜ್ಞಾನಿ ಕಾಮಾನಿ ವಿಭವಂ ಮಮ ।
ಆಯುರ್ವಿತ್ತಂ ಚ ಭುಕ್ತಿಂ ಚ ಮುಕ್ತಿಂ ಗಂಗೇ ಪ್ರಯಚ್ಛ ಮೇ ॥ ೧೮ ॥

॥ ಬ್ರಹ್ಮೋವಾಚ ॥

ಇತ್ಯುಕ್ತ್ವಾ ಗೌತಮೀಂ ಗಂಗಾಂ ಕ್ಷುಧಾಂ ಚಾಹ ದ್ವಿಜೋತ್ತಮಃ ॥ ೧೯ ॥

॥ ಕಣ್ವ ಉವಾಚ ॥

ಮಯಿ ಮದ್ವಂಶಜೇ ಚಾಪಿ ಕ್ಷುಧೇ ತೃಷ್ಣೇ ದರಿದ್ರಿಣಿ ।
ಯಾಹಿ ಪಾಪತರೇ ರೂಕ್ಷೇ ನ ಭೂಯಾಸ್ತ್ವಂ ಕದಾಚನ ॥ ೨೦ ॥

೧೫-೧೬. ಕಣ್ವನ ಆ ಸ್ತುತಿಯನ್ನು ಕೇಳಿ ಆ ದೇವಿಯರೀರ್ವರೂ ಪ್ರಸನ್ನರಾಗಿ ಆ ಮುನಿಯನ್ನು ಕುರಿತು ಎಲೈ ಮುನಿಯೇ, ನಿನಗೆ ಬೇಕಾದ ವರಗಳನ್ನು ಕೇಳು ಕೊಡುವೆವು ಎನ್ನಲು,

೧೭. ಆಗ ಕಣ್ವನು ಗಂಗೆಯನ್ನೂ ಕ್ಷುಧೆಯನ್ನೂ ಕುರಿತು ವಿನಯದಿಂದ ಇಂತೆಂದನು.

೧೮. ಓ ಗೌತಮೀದೇವಿ, ದಿವ್ಯವರಗಳನ್ನು ನನಗೆ ಕೊಡು. ದೀರ್ಘಾಯುಸ್ಸು, ಧನ, ಭೋಗ, ಮುಕ್ತಿ ಇವುಗಳನ್ನು ನನಗೆ ಅನುಗ್ರಹಿಸು.

೧೯-೨೦. ಹೀಗೆ ಗೌತಮಿಗೆ ಬಿನ್ನವಿಸಿ ಕ್ಷುಧೆಯನ್ನು ಕುರಿತು, ಪಾಪಕರಳೂ ಭಯಂಕರಳೂ ಆದ ಓ ಕ್ಷುಧೆ, ಇಲ್ಲಿಂದ ಹೊರಡು. ನನ್ನಲ್ಲಿಯೂ ನನ್ನ ವಂಶದಲ್ಲಿಯೂ ನೀನು ದಾರಿದ್ರ್ಯರೂಪದಿಂದ ಯಾವಾಗಲೂ ನೆಲಸಬೇಡ.

ಅನೇನ ಸ್ತವೇನ ಯೇ ವೈ ತ್ವಾಂ ಸ್ತುವಂತಿ ಕ್ಷುಧಾತುರಾಃ ।
ತೇಷಾಂ ದಾರಿದ್ರ್ಯದುಃಖಾನಿ ನ ಭವೇಯುರ್ವರೋಽಪರಃ ॥ ೨೧ ॥

ಅಸ್ಮಿಂಸ್ತೀರ್ಥೇ ಮಹಾಪುಣ್ಯೇ ಸ್ನಾನದಾನಜಪಾದಿಕಂ ।
ಯೇ ಕುರ್ವಂತಿ ನರಾ ಭಕ್ತ್ಯಾ ಲಕ್ಷ್ಮೀಭಾಜೋ ಭವಂತು ತೇ ॥ ೨೨ ॥

ಯಸ್ತ್ವಿದಂ ಪಠತೇ ಸ್ತೋತ್ರಂ ತೀರ್ಥೇ ವಾ ಯದಿ ವಾ ಗೃಹೇ ।
ತಸ್ಯ ದಾರಿದ್ರ್ಯದುಃಖೇಭ್ಯೋ ನ ಭಯಂ ಸ್ಯಾದ್ವರೋಽಪರಃ ॥ ೨೩ ॥

॥ ಬ್ರಹ್ಮೋವಾಚ ॥

ಏವಮಸ್ತ್ವಿತಿ ಚೋಕ್ತ್ವಾ ತೇ ಕಣ್ವಂ ಯಾತೇ ಸ್ವಮಾಲಯಂ ।
ತತಃ ಪ್ರಭೃತಿ ತತ್ತೀರ್ಥಂ ಕಾಣ್ವಂ ಗಾಂಗಂ ಕ್ಷುಧಾಭಿಧಂ । ॥ ೨೪ ॥
ಸರ್ವಪಾಪಹರಂ ವತ್ಸ ಪಿತೄಣಾಂ ಪ್ರೀತಿವರ್ಧನಂ ॥ ೨೫ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಕ್ಷುಧಾತೀರ್ಥವರ್ಣನಂ ನಾಮ ಪಂಚಾಶೀತಿತಮೋಽಧ್ಯಾಯಃ

---

೨೧. ಮತ್ತು ಹಸಿವಿನಿಂದ ಬಳಲಿದವರು ನಿನ್ನನ್ನು ಈ ಸ್ತೋತ್ರದಿಂದ ಸ್ತುತಿಸಿದರೆ ಅವರಿಗೆ ದಾರಿದ್ರ್ಯದುಃಖವು ಬರದಿರಲಿ, ಇದು ಎರಡನೆಯ ವರವು.

೨೨. ಮಹಾಪುಣ್ಯವಾದೀ ತೀರ್ಥದಲ್ಲಿ ಸ್ನಾನ, ದಾನ, ಜಪ ಮೊದಲಾದುವುಗಳನ್ನು ಭಕ್ತಿಯಿಂದ ಮಾಡಿದವರು ಐಶ್ವರ್ಯವಂತರಾಗಲಿ.

೨೩. ಈ ಸ್ತೋತ್ರವನ್ನು ತೀರ್ಥದಲ್ಲಾಗಲೀ, ಮನೆಯಲ್ಲಾಗಲೀ ಹೇಳುವವನಿಗೆ ಎಂದಿಗೂ ದಾರಿದ್ರ್ಯದುಃಖವು ಬರದಿರಲಿ ಎಂದು ವರವನ್ನು ಬೇಡಿದನು.

೨೪. ಹಾಗೆಯೇ ಆಗಲೆಂದು ವರವನ್ನು ಕೊಟ್ಟು, ಆ ಗೌತಮೀಕ್ಷುಧೆಯರು ಹೊರಟುಹೋದರು. ಅದುಮೊದಲುಗೊಂಡು ಆ ತೀರ್ಥವು ಕಣ್ವತೀರ್ಥವೆಂದೂ ಕ್ಷುಧಾತೀರ್ಥವೆಂದೂ ಪ್ರಸಿದ್ಧವಾಯಿತು.

೨೫. ಎಲೈ ನಾರದ, ಆ ಕ್ಷುಧಾತೀರ್ಥವು ಸಕಲ ಪಾಪವನ್ನೂ ಹೋಗಲಾಡಿಸುವುದು, ಪಿತೃದೇವತೆಗಳಿಗೆ ಅದು ಬಹು ಪ್ರಿಯವಾದುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಕ್ಷುಧಾತೀರ್ಥವರ್ಣನವೆಂಬ ಎಂಭತ್ತೈದನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಹದಿನಾರನೆಯ ಅಧ್ಯಾಯ

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಷಡಶೀತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಅಸ್ತಿ ಬ್ರಹ್ಮನ್ಮಹಾತೀರ್ಥಂ ಚಕ್ರತೀರ್ಥಮಿತಿ ಶ್ರುತಂ ।
ತತ್ರ ಸ್ನಾನಾನ್ನರೋ ಭಕ್ತ್ಯಾ ಹರೇರ್ಲೋಕಮವಾಪ್ನುಯಾತ್ ॥ ೧ ॥

ಏಕಾದಶ್ಯಾಂ ತು ಶುಕ್ಲಾಯಾಮುಪೋಷ್ಯ ಪೃಥಿವೀಪತೇ ।
ಗಣಿಕಾಸಂಗಮೇ ಸ್ನಾತ್ವಾ ಪ್ರಾಪ್ನುಯಾದವ್ಯಯಂ ಪದಂ ॥ ೨ ॥

ಪುರಾ ತತ್ರ ಯಥಾ ವೃತ್ತಂ ತನ್ಮೇ ನಿಗದತಃ ಶೃಣು ।
ಆಸೀದ್ವಿಶ್ವಧರೋ ನಾಮ ವೈಶ್ಯೋ ಬಹುಧನಾನ್ವಿತಃ ॥ ೩ ॥

ಎಂಭತ್ತಾರನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಅಲ್ಲಿಂದ ಮುಂದೆ ಚಕ್ರತೀರ್ಥವೆಂಬ ಮಹಾತೀರ್ಥವಿರುವುದು, ಆ ತೀರ್ಥದಲ್ಲಿ ಭಕ್ತಿಯಿಂದ ಸ್ನಾನಮಾಡಿದರೆ ವಿಷ್ಣುಲೋಕವು ಲಭಿಸುವುದು.

೨. ಏಕಾದಶಿಯದಿನ ಉಪವಾಸವಿದ್ದು ಗಣಿಕಾಸಂಗಮವೆಂದು ಮತ್ತೊಂದು ಹೆಸರುಳ್ಳ ಆ ಚಕ್ರತೀರ್ಥದಲ್ಲಿ ಸ್ನಾನಮಾಡಿದರೆ ಅಕ್ಷಯವಾದ ಪದವಿ (ಮುಕ್ತಿ) ಯು ಲಭಿಸುವುದು.

೩. ಆ ತೀರ್ಥದಲ್ಲಿ ನಡೆದ ಮಹಾತ್ಮ್ಯವನ್ನು ಹೇಳುವೆನು, ಕೇಳು, ಹಿಂದೆ ವಿಶ್ವಧರನೆಂಬ ಬಹುಧನಿಕನಾದ ವೈಶ್ಯನಿದ್ದನು. ಅವನಿಗೆ ಅಪರವಯಸ್ಸಿನಲ್ಲಿ ಸತ್ಪುತ್ರನೊರ್ವನು ಜನಿಸಿದನು.

ಉತ್ತರೇ ವಯಸಿ ಶ್ರೇಷ್ಠಸ್ತಸ್ಯ ಪುತ್ರೋಽಭವದ್ವೃಷೇ ।
ಗುಣವಾನ್ರೂಪಸಂಪನ್ನೋ ವಿಲಾಸೀ ಶುಭದರ್ಶನಃ ॥ ೪ ॥

ಪ್ರಾಣೇಭ್ಯೋಽಪಿ ಪ್ರಿಯಃ ಪುತ್ರಃ ಕಾಲೇ ಪಂಚತ್ವಮಾಗತಃ ।
ತಥಾ ದೃಷ್ಟ್ವಾ ತು ತಂ ಪುತ್ರಂ ದಂಪತೀ ದುಃಖಪೀಡಿತೌ ॥ ೫ ॥

ಕುರ್ವಾತೇ ಸ್ಮ ತದಾ ತೇನ ಸಹೈವ ಮರಣೇ ಮತಿಂ ।
ಹಾ ಪುತ್ರ ಹಂತ ಕಾಲೇನ ಪಾಪೇನ ಸುದುರಾತ್ಮನಾ ॥ ೬ ॥

ಯೌವನೇ ವರ್ತಮಾನೋಽಪಿ ನೀತೋಽಸಿ ಗುಣಸಾಗರ ।
ಆವಯೋಶ್ಚ ತಥೈವ ತ್ವಂ ಪ್ರಾಣೇಭ್ಯೋಽಪಿ ಸುದುರ್ಲಭಃ ॥ ೭ ॥

ಇತ್ಥಂ ತು ರುದಿತಂ ಶ್ರುತ್ವಾ ದಂಪತ್ಯೋಃ ಕರುಣಂ ಯಮಃ ।
ತ್ಯಕ್ತ್ವಾ ನಿಜಪುರಂ ತೂರ್ಣಂ ಕೃಪಯಾವಿಷ್ಟಮಾನಸಃ ॥ ೮ ॥

ಗೋದಾವರ್ಯಾಃ ಶುಭೇ ತೀರೇ ಸ್ಥಿತೋ ಧ್ಯಾಯನ್ ಜನಾರ್ದನಂ ।
ಅಪಿ ಸ್ವಲ್ಪೇನ ಕಾಲೇನ ಪ್ರಜಾ ವೃದ್ಧಾಃ ಸಮಂತತಃ ॥ ೯ ॥

---

೪. ಆ ಕುಮಾರನು ಗುಣವಂತನೂ, ರೂಪವಂತನೂ, ವಿಲಾಸಿಯೂ ತಂದೆಗೆ ಅತ್ಯಂತ ಪ್ರಿಯನೂ ಆಗಿದ್ದನು. ಇಂತಹವನು ಅದೃಷ್ಟವಶದಿಂದ ಮರಣಹೊಂದಿದನು.

೫-೭. ಪುತ್ರನು ಮರಣಹೊಂದಲು ಅವನ ತಂದೆತಾಯಿಗಳು ತುಂಬಾ ದುಃಖಿತರಾಗಿ ಅಯ್ಯೋ ಮಗನೇ! ನೀನಿನ್ನೂ ತರುಣನಾಗಿದ್ದರೂ ದುರಾತ್ಮನಾದ ಮೃತ್ಯುವು ನಿನ್ನನ್ನು ಸೆಳೆದೊಯ್ದನೆ? ಗುಣವಂತನಾಗಿದ್ದೆ, ನಮ್ಮಿಬ್ಬರಿಗೆ ತುಂಬಾ ಪ್ರೀಯನಾಗಿದ್ದೆ ಎಂದು ಪ್ರಲಾಪಿಸುತ್ತಿರಲು,

೮. ಆ ದಂಪತಿಗಳು ಪ್ರಲಾಪಿಸುವುದನ್ನು ಕೇಳಿ ಯಮನು ಕನಿಕರದಿಂದ ಅವರ ಕುಮಾರನನ್ನು ಬಿಟ್ಟು ತನ್ನ ಲೋಕಕ್ಕೆ ತೆರಳಿದನು.

೯-೧೦. ಆ ಯಮನು ಗೋದಾವರೀತೀರದಲ್ಲಿ ನಿಂತು ಹರಿಯನ್ನು ಧ್ಯಾನಿಸತೊಡಗಿದನು. ಕೆಲವು ಕಾಲದಲ್ಲಿಯೇ ಪ್ರಜೆಗಳೆಲ್ಲರೂ ಮುದುಕರಾದರು

ಇಯುತ ಇತಿ ಮೇ ಪೃಥ್ವೀ ಕಥ್ಯತಾಂ ಕೇನ ಪೂರಿತಾ ।
ನ ಕಶ್ಚಿನ್ಮ್ರಿಯತೇ ಜಂತುರ್ಭಾರಾಕ್ರಾಂತಾ ವಸುಂಧರಾ ॥ ೧೦ ॥

ತತೋ ದೇವೀ ಗತಾ ತೂರ್ಣಂ ವಸುಧಾ ಮುನಿಸತ್ತಮ ।
ಯತ್ರಾಸ್ತಿ ಸುರಸಂಯುಕ್ತಃ ಶಕ್ರಃ ಪರಪುರಂಜಯಃ ।
ದೃಷ್ಟ್ವಾ ವಸುಂಧರಾಮಿಂದ್ರಃ ಪ್ರಣಿಪತ್ಯೇದಮಬ್ರವೀತ್ ॥ ೧೧ ॥

॥ ಇಂದ್ರ ಉವಾಚ ॥

ಕಿಮಾಗಮನಕಾರ್ಯಂ ತ ಇತಿ ಮೇ ಪೃಥ್ವಿ ಕಥ್ಯತಾಂ ॥ ೧೨ ॥

॥ ಧರೋವಾಚ ॥

ಭಾರೇಣ ಗುರುಣಾ ಶಕ್ರ ಪೀಡಿತಾಹಂ ವಿನಾ ವಧಂ ।
ಕಾರಣಂ ಪ್ರಷ್ಟುಮಾಯಾತಾ ಕಿಮಿದಂ ಕಥ್ಯತಾಂ ಮಮ ॥ ೧೩ ॥

॥ ಬ್ರಹ್ಮೋವಾಚ ॥

ಇತಿ ಶ್ರುತ್ವಾ ಮಹೀವಾಕ್ಯಮಿಂದ್ರೋ ವಚನಮಬ್ರವೀತ್ ॥ ೧೪ ॥

ಒಬ್ಬರೂ ಮೃತರಾಗದೆ ಭೂಮಿಯು ಜನಗಳಿಂದ ತುಂಬಿಹೋಯಿತು. ಒಂದು ಪ್ರಾಣಿಯೂ ಸಾಯದೇ ಇದ್ದುದರಿಂದ ಭೂಮಿಯ ಭಾರವು ಹೆಚ್ಚಾಯಿತು.

೧೧. ಆಗ ಭೂದೇವಿಯು ಕೂಡಲೇ ದೇವಲೋಕದಲ್ಲಿರುವ ಇಂದ್ರನ ಬಳಿಗೆ ಹೋಗಲು ಭೂದೇವಿಯನ್ನು ನೋಡಿ ಇಂದ್ರನು ನಮಸ್ಕರಿಸಿ,

೧೨ ಓ ಭೂದೇವಿ, ನೀನು ಇಲ್ಲಿಗೆ ಬಂದುದರ ಕಾರಣವೇನು! ಹೇಳೆನಲು,

೧೩. ಭೂಮಿಯಿಂತೆಂದಳು—ಎಲೈ ದೇವೇಂದ್ರ, ಪ್ರಪಂಚದಲ್ಲಿ ಒಬ್ಬರೂ ಮರಣಹೊಂದುತ್ತಿಲ್ಲ. ಆದರಿಂದ ನನ್ನ ಭಾರವು ಹೆಚ್ಚಾಗಿದೆ, ಇದರ ಕಾರಣ ವನ್ನು ತಿಳಿಯಲು ಬಂದಿರುವೆನು ಹೇಳು ಎಂದಳು.

೧೪-೧೫. ಭೂದೇವಿಯ ಆ ಮಾತನ್ನು ಕೇಳಿ ಇಂದ್ರನು ಓ ಭೂದೇವಿ,

॥ ಇಂದ್ರ ಉವಾಚ ॥
ಕಾರಣಂ ಯದಿ ನಾಮ ಸ್ಯಾತ್ತದಾನೀಂ ಜ್ಞಾಯತೇ ಮಯಾ ।
ಸುರಾಣಾಂ ಹಿ ಪತಿರ್ಯಸ್ಮಾದಹಂ ಸರ್ವಾಸು ಮೇದಿನಿ ॥ ೧೫ ॥

॥ ಬ್ರಹ್ಮೋವಾಚ ॥
ಅಥ ಪೃಥ್ವೀ ತದಾ ವಾಕ್ಯಂ ಶ್ರುತ್ವಾ ಚಾಹ ಶಚೀಪತಿಂ ।
ಯಮ ಆದಿಶ್ಯತಾಂ ತರ್ಹಿ ಯಥಾ ಸಂಹರತೇ ಪ್ರಜಾಃ ॥ ೧೬ ॥

ಇತಿ ಶ್ರುತ್ವಾ ವಚೋ ಮಹ್ಯಾ ಆದಿಷ್ಟಾಃ ಸಿದ್ಧಕಿಂನರಾಃ ।
ಯಮಸ್ಯಾನಯನೇ ಶೀಘ್ರಂ ಮಹೇಂದ್ರೇಣ ಮಹಾಮುನೇ ॥ ೧೭ ॥

ತತಸ್ತೇ ಸತ್ವರಂ ಯಾತಾಃ ಸರ್ವೇ ವೈವಸ್ವತಂ ಪರಂ ।
ನೈವಾಪಶ್ಯನ್ಯಮಂ ತತ್ರ ತೇ ಸಿದ್ಧಾಃ ಸಹ ಕಿಂನರೈಃ ।
ತಥಾಗತ್ಯ ಪುನರ್ವೇಗಾದ್ವಾರ್ತಾ ಶಕ್ರೇ ನಿವೇದಿತಾ ॥ ೧೮ ॥

॥ ಸಿದ್ಧಕಿಂನರಾ ಊಚುಃ ॥
ಯಮೋ ಯಮಪುರೇ ನಾಥ ಅಸ್ಮಾಭಿರ್ನಾವಲೋಕಿತಃ ।
ಮಹತಾಪಿ ಸುಯತ್ನೇನ ವೀಕ್ಷ್ಯಮಾಣಃ ಸಮಂತತಃ ॥ ೧೯ ॥

ಇದಕ್ಕೆ ಕಾರಣವಿದ್ದರೆ ನಾನು ತಿಳಿಯುವೆನು, ನಾನು ದೇವೇಂದ್ರನಲ್ಲವೆ ? ಎಂದನು.

೧೬-೧೭. ಆಗ ಭೂಮಿಯು ಆ ಮಾತನ್ನು ಕೇಳಿ ಪುನಃ ಇಂದ್ರನನ್ನು ಕುರಿತು, ಎಲೈ ದೇವೇಂದ್ರ, ಯಮನು ಪ್ರಜೆಗಳನ್ನು ಸಂಹರಿಸುತ್ತಿರುವನೇ ಇಲ್ಲವೇ ಇದನ್ನು ತಿಳಿದು ಹೇಳು ಎನ್ನಲು, ಆ ಮಾತನ್ನು ಕೇಳಿ, ದೇವೇಂದ್ರನು ಯಮನನ್ನು ಕರೆಸಲು ಸಿದ್ಧಕಿನ್ನರರನ್ನು ಕಳುಹಿಸಿದನು. ಸಿದ್ಧಕಿನ್ನರರು ಕೂಡಲೇ ಯಮನ ನಗರಿಗೆ ತೆರಳಿದರು.

೧೮. ಆದರೆ ಸಿದ್ಧಕಿನ್ನರರಿಗೆ ಅಲ್ಲಿ ಯಮನು ಸಿಕ್ಕದೆ ತಿರುಗಿ ಸ್ವರ್ಗಕ್ಕೆ ಬಂದು ದೇವೇಂದ್ರನಿಗೆ ಇಂತು ಬಿನ್ನವಿಸಿದರು.

೧೯. ಓ ದೇವ, ಯಮನು ತನ್ನ ನಗರದಲ್ಲಿಲ್ಲ, ಎಷ್ಟು ಪ್ರಯತ್ನಪಟ್ಟು ಹುಡುಕಿದರೂ ಅವನು ಕಾಣಿಸಲಿಲ್ಲ ಎನ್ನಲು,

॥ ಬ್ರಹ್ಮೋವಾಚ ॥
ಇತಿ ಶ್ರುತ್ವಾ ವಚಸ್ತೇಷಾಂ ಪೃಷ್ಟಃ ಶಕ್ರೇಣ ವೈ ತದಾ ।
ಸವಿತಾ ಸ ಪಿತಾ ತಸ್ಯ ಯಮಃ ಕುತ್ರಾಸ್ತ ಇತ್ಯಥ ॥ ೨೦ ॥

॥ ಸೂರ್ಯ ಉವಾಚ ॥
ಶಕ್ರ ಗೋದಾವರೀತೀರೇ ಕೃತಾಂತೋ ವರ್ತತೇಽಧುನಾ ।
ಚರಂಸ್ತತ್ರ ತಪಸ್ತೀವ್ರಂ ನ ಜಾನೇ ಕಿಂ ನು ಕಾರಣಂ ॥ ೨೧ ॥

॥ ಬ್ರಹ್ಮೋವಾಚ ॥
ಇತಿ ಶ್ರುತ್ವಾ ವಚೋ ಭಾನೋಃ ಶಕ್ರಃ ಶಂಕಾಮುಪಾವಿಶತ್ ॥ ೨೨ ॥

॥ ಶಕ್ರ ಉವಾಚ ॥
ಅಹೋ ಕಷ್ಟಂ ಮಹಾಕಷ್ಟಂ ನಷ್ಟಾ ಮೇ ಸುರನಾಥತಾ ।
ಗೋದಾವರ್ಯಾಂ ತಪಃ ಕುರ್ಯಾದ್ಯಮೋ ವೈ ದುಷ್ಟಚೇಷ್ಟಿತಃ ।
ಜಿಘೃಕ್ಷುರ್ಮತ್ಪದಂ ನೂನಂ ದೇವಾ ಇತಿ ಮತಿರ್ಮಮ ॥ ೨೩ ॥

॥ ಬ್ರಹ್ಮೋವಾಚ ॥
ಇತ್ಯುಕ್ತ್ವಾ ಸಹಸೇಂದ್ರೇಣ ಆಹೂತಶ್ಚಾಪ್ಸರೋಗಣಃ ॥ ೨೪ ॥

---

೨೦. ಸಿದ್ಧಕಿನ್ನರರ ಆ ಮಾತನ್ನು ಕೇಳಿ ಇಂದ್ರನು ಯಮನ ತಂದೆಯಾದ ಸೂರ್ಯನನ್ನು ಕುರಿತು ಯಮನೆಲ್ಲಿರುವನು ? ಎಂದು ಪ್ರಶ್ನಿಸಿದನು.

೨೧. ಆಗ ಸೂರ್ಯನು—ಎಲೈ ಇಂದ್ರ, ಯಮನು ಗೋದಾವರೀ ತೀರದಲ್ಲಿ ತಪಸ್ಸನ್ನು ಮಾಡುತ್ತಲಿರುವನು, ಕಾರಣವೇನೋ ನನಗೆ ತಿಳಿಯದು ಎಂದನು.

೨೨. ಸೂರ್ಯನ ಮಾತನ್ನು ಕೇಳಿ ಇಂದ್ರನು ತನ್ನಲ್ಲಿಯೇ ಇಂತು ಯೋಚಿಸಿದನು.

೨೩.೨೪. ಅಯ್ಯೋ, ಕಷ್ಟವು. ನನ್ನ ಇಂದ್ರಪದವಿಯು ಹಾಳಾಯಿತು, ಆ ದುಷ್ಟಯಮನು ನನ್ನ ಇಂದ್ರಪದವಿಯನ್ನು ಪಡೆಯಲೋಸುಗವೇ ಗೋದಾವರೀತೀರದಲ್ಲಿ ತಪಸ್ಸನ್ನು ಮಾಡುತ್ತಿರಬಹುದು ಎಂದು ನಿಶ್ಚಯಿಸಿ ಕೂಡಲೇ ಅಪ್ಸರೆಯರನ್ನು ಕರೆಸಿ,

॥ ಇಂದ್ರ ಉವಾಚ ॥

ಕಾ ಭವತೀಷು ಕಾಲಸ್ಯ ಸ್ಥಿತಸ್ಯ ತಪಸಿ ದ್ವಿಷಃ ।
ತಪಃಪ್ರಣಾಶನೇ ಶಕ್ತಾ ಇತಿ ಮೇ ಶೀಘ್ರಮುಚ್ಯತಾಂ ॥ ೨೫ ॥

॥ ಬ್ರಹ್ಮೋವಾಚ ॥

ಇತಿ ಶಕ್ರವಚಃ ಶ್ರುತ್ವಾ ನೋಚೇ ಕಾಪಿ ಮಹಾಮುನೇ ।
ಅಥ ಶಕ್ರಃ ಪ್ರಕೋಪೇಣ ಪ್ರತ್ಯುವಾಚಾಪ್ಸರೋಗಣಂ ॥ ೨೬ ॥

॥ ಇಂದ್ರ ಉವಾಚ ॥

ಉತ್ತರಂ ನಾಬ್ರವೀತ್ಕಿಂಚಿದ್ಯಾಮುಸ್ತರ್ಹಿ ವಯಂ ಸ್ವಯಂ ।
ಸಜ್ಜಾ ಭವಂತು ವಿಬುಧಾಃ ಸೈನ್ಯೈರಾಯಾಂತು ಮಾ ಚಿರಂ ।
ಘಾತಯಾಮೋ ವಯಂ ಶತ್ರುಂ ತಪಸಾ ಸ್ವರ್ಗಕಾಮುಕಂ ॥ ೨೭ ॥

॥ ಬ್ರಹ್ಮೋವಾಚ ॥

ಇತ್ಯುಕ್ತೇ ಸತಿ ದೇವಾನಾಂ ಸೇನಾ ಪ್ರಾದುರ್ಬಭೂವ ಹ ।
ಇತೀಂದ್ರಹೃದಯಂ ಜ್ಞಾತ್ವಾ ಹರಿಣಾ ಲೋಕಧಾರಿಣಾ ॥ ೨೮ ॥

---

೨೫. ಎಲೌ ಸುಂದರಿಯರೇ, ತಪಸ್ಸುಮಾಡುತ್ತಲಿರುವ ಯಮುನ ತಪಸ್ಸನ್ನು ನಿಮ್ಮಲ್ಲಿ ಯಾವು ನಾಶಮಾಡಬಲ್ಲಿರಿ ? ಜಾಗ್ರತೆ ಹೇಳಿರಿ ಎಂದನು.

೨೬. ಇಂದ್ರನ ಆ ಮಾತನ್ನು ಕೇಳಿ ಅಪ್ಸರೆಯರು ಯಾರೂ ಉತ್ತರವನ್ನು ಹೇಳಲಿಲ್ಲ. ಆಗ ಇಂದ್ರನು ಕೋಪಗೊಂಡು,

೨೭. ಎಲೈ ಸ್ತ್ರೀಯರೇ, ನೀವಾರೂ ಉತ್ತರವನ್ನು ಹೇಳದಿದ್ದರೆ ನಾನೇ ಸ್ವಯಂ ಹೊರಡುವೆನು, ದೇವತೆಗಳೆಲ್ಲರೂ ಸೈನ್ಯದೊಡನೆ ಜಾಗ್ರತೆಯಾಗಿ ಸಿದ್ಧರಾಗಲಿ. ತಪಸ್ಸಿನಿಂದ ಇಂದ್ರಪದವಿಯನ್ನಪೇಕ್ಷಿಸುವ ಆ ನನ್ನ ಶತ್ರುವಾದ ಯಮುನನ್ನು ನಾನೇ ನಾಶಮಾಡುವೆನು.

೨೮-೨೯. ಹೀಗೆ ಇಂದ್ರನು ಹೇಳಲು ದೇವಸೇನೆಯು ಸಿದ್ಧವಾಯಿತು. ಇಂದ್ರನ ಈ ಸಿದ್ಧತೆಯನ್ನು ತಿಳಿದು ಲೋಕೇಶ್ವರನಾದ ಹರಿಯು ತನ್ನ ಭಕ್ತ

ಪ್ರೇಷಿತಂ ಚಕ್ರಿಣಾ ಚಕ್ರಂ ರಕ್ಷಣಾಯ ಯಮಸ್ಯ ಹಿ ।
ಚಕ್ರಂ ಯತ್ರಾಭವತ್ತತ್ರ ಚಕ್ರತೀರ್ಥಮನುತ್ತಮಂ ॥ ೨೯ ॥
ಅಥೇಂದ್ರಂ ಮೇನಕಾ ಪ್ರಾಹ ಶಂಕಿತೇತಿ ವಚಸ್ತದಾ ॥ ೩೦ ॥

॥ ಮೇನಕೋವಾಚ ॥

ಕಾಲಾವಲೋಕನೇ ನಾಲಂ ಕಾಚಿದಸ್ತಿ ಸುರೇಶ್ವರ ।
ಮರಣಂ ಚ ವರಂ ದೇವ ಭವತೋ ನ ಯಮಾತ್ಮನಃ ॥ ೩೧ ॥

ರೂಪಯೌವನಮತ್ತೇಯಂ ಗಣಿಕಾಯಾಚನಂ ಪ್ರಭೋ ।
ಪ್ರೇಷಣಂ ತತ್ಪ್ರಯಚ್ಛೈಷಾ ಸ್ವಾಮಿತ್ವಂ ಮನ್ಯತೇ ತ್ವಯಾ ॥ ೩೨ ॥

॥ ಬ್ರಹ್ಮೋವಾಚ ॥

ಇತಿ ಶ್ರುತ್ವಾ ವಚಸ್ತಸ್ಯಾಃ ಶಕ್ರಃ ಸುರವರೇಶ್ವರಃ ।
ಆದಿದೇಶಾಬಲಾಂ ಕ್ಷಾಮಾಂ ಸತ್ಕೃತ್ಯ ಗಣಿಕಾಂ ತಥಾ ॥ ೩೩ ॥

ನಾದ ಯಮನನ್ನು ರಕ್ಷಿಸಲು ಅವನ ಬಳಿಗೆ ಚಕ್ರವನ್ನು ಕಳುಹಿಸಿದನು. ಗೋದಾವರೀತೀರದಲ್ಲಿ ಆ ಚಕ್ರವು ನೆಲಸಿದ್ದ ಸ್ಥಳಕ್ಕೆ ಚಕ್ರತೀರ್ಥವೆಂದು ಹೆಸರಾಯಿತು.

೩೦-೩೧. ಆಗ ಮೇನಕೆಯೆಂಬುವಳು ಭಯದಿಂದ ಇಂದ್ರನನ್ನು ಕುರಿತು ಓ ದೇವ, ಯಾವ ಅಪ್ಸರೆಯೂ ಯಮನನ್ನು ನೋಡಲೂ ಸಮರ್ಥಳಲ್ಲ. ನಿನ್ನಿಂದ ನಮಗೆ ಮರಣವಾದರೂ ಚಿಂತೆಯಿಲ್ಲ, ಆದರೆ ಯಮನಿಂದ ನಮಗೆ ಮರಣವಾಗಬಾರದು.

೩೨. ಗಣಿಕೆಯೆಂಬ ಈ ಸುಂದರಿಯು ರೂಪಯೌವನಸಂಪನ್ನಳಾಗಿರುವಳು. ನಿನ್ನ ಪ್ರಣೆಯನ್ನು ಇವಳು ನಡೆಸುವಳು. ಇವಳನ್ನು ಯಮನೆಡೆಗೆ ಕಳುಹಿಸು ಎಂದಳು.

೩೩. ಮೇನಕೆಯ ಆ ಮಾತನ್ನು ಕೇಳಿ ಇಂದ್ರನು ಸುಂದರಿಯಾದ ಗಣಿಕೆಯನ್ನು ಗೌರವಿಸಿ,

॥ ಶಕ್ರ ಉವಾಚ ॥

ಗಣಿಕೇ ಗಚ್ಛ ಮೇ ಕಾರ್ಯಂ ಕುರು ಸುಂದರಿ ಮಾ ಚಿರಂ ।
ಕೃತಕೃತ್ಯಾಗತಾ ಭೂಯೋ ವಲ್ಲಭಾ ಮೇ ಯಥಾ ಶಚೀ ॥ ೩೪ ॥

॥ ಬ್ರಹ್ಮೋವಾಚ ॥

ಇತ್ಯಾಕರ್ಣ್ಯ ವಚಃ ಶಕ್ರಾದುತ್ಪತ್ಯ ಗಣಿಕಾ ದಿಶಃ ।
ಕ್ಷಣೇನ ಯಮಸಾಂನಿಧ್ಯಮಾಯಾತಾ ಚಾರುರೂಪಿಣೀ ॥ ೩೫ ॥

ಯಮಾಂತಿಕಮನುಪ್ರಾಪ್ತಾ ದ್ಯೋತಯಂತೀ ದಿಶೋ ದಶ ।
ಸಲೀಲಂ ಲಲಿತಂ ಬಾಲಾ ಜಗೌ ಹಿನ್ದೋಲಕಂಕಲಂ ॥ ೩೬ ॥

ತತಶ್ಚಚಾಲ ಕಾಲಸ್ಯ ಮನೋ ಲೋಲಂ ಚಲಾಚಲಂ ।
ಅಥೋನ್ಮೀಲ್ಯ ಯಮೋ ನೇತ್ರೇ ಕಾಮಪಾವಕಪೂರಿತೇ ॥ ೩೭ ॥

---

೩೪. ಸುಂದರಿಯಾದ ಎಲೌ ಗಣಿಕೆ, ಜಾಗ್ರತೆಯಾಗಿ ಹೊರಟು ನನ್ನ ಕಾರ್ಯವನ್ನು ಸಾಧಿಸು, ಕಾರ್ಯವನ್ನು ಸಾಧಿಸಿ ಬಂದರೆ ಶಚೀದೇವಿಯಂತೆ ನೀನು ನನಗೆ ಪ್ರಿಯಳಾಗುವೆ' ಎಂದಪ್ಪಣೆಮಾಡಿದನು.

೩೫-೩೬. ಇಂದ್ರನ ಮಾತನ್ನು ಕೇಳಿ ಸುಂದರಿಯಾದಾ ಗಣಿಕೆಯು ಆ ಕೂಡಲೇ ಗಗನಕ್ಕೆ ಹಾರಿ ದಿಕ್ಕುಗಳನ್ನು ಬೆಳಗುತ್ತಾ ಯಮನ ಬಳಿಗೆ ಬಂದು ವಿಲಾಸದಿಂದಲೂ ಮೃದುವಾಗಿಯೂ ಶೃಂಗಾರಗೀತೆಯನ್ನು ಹಾಡುತ್ತಿದ್ದಳು.

೩೭. ಅದರಿಂದ ಯಮನ ಮನಸ್ಸು ಸ್ವಲ್ಪ ಚಂಚಲವಾಯಿತು. ಆಮೇಲೆ ಯಮನು ಕಣ್ಣುಗಳನ್ನು ತೆರೆದು, ಕಾಮದೃಷ್ಟಿಯಿಂದ ಆ ಗಣಿಕೆಯನ್ನು ನೋಡಿದನು. ಅದರಿಂದ ಅವನ ಶತ್ರುವಾದ ಇಂದ್ರನ ಇಷ್ಟವು ಸಿದ್ಧಿಸಿದಂತಾಯಿತು.

ತಸ್ಯಾಂ ವ್ಯಾಪಾರಯಾಮಾಸ ಶ್ರೇಯಃಶತ್ರೌ ಮಹಾಮುನೇ ।
ತತೋ ವಿಲೀಯ ಸಾ ಸದ್ಯಃ ಸರಿತ್ತ್ವಮಗಮತ್ತದಾ ॥ ೩೮ ॥

ಗೌತಮ್ಯಾಂ ತು ಸಮಾಗಮ್ಯ ಗಣಿಕಾಗಣಕಿಂಕರೈಃ ।
ಗೀಯಮಾನಾ ಗತಾ ಸ್ವರ್ಗೇ ತಸ್ಯ ತೀರ್ಥಪ್ರಭಾವತಃ ॥ ೩೯ ॥

ಗಚ್ಛಂತೀಂ ಗಣಿಕಾಂ ದೃಷ್ಟ್ವಾ ವಿಮಾನಸ್ಥಾಂ ದಿವಂ ಪ್ರತಿ ।
ವಿಸ್ಮಯಂ ಪರಮಂ ಪ್ರಾಪ್ತಃ ಕಾಲಸ್ತರಲಲೋಚನಃ ।
ಅಥಾದಿತ್ಯೇನ ಚಾಗತ್ಯ ಏವಮುಕ್ತೋ ಯಮಸ್ತದಾ ॥ ೪೦ ॥

॥ ಸೂರ್ಯ ಉವಾಚ ॥

ಕುರು ಪುತ್ರ ನಿಜಂ ಕರ್ಮ ಪ್ರಜಾನಾಂ ತ್ವಂ ಪರಿಕ್ಷಯಂ ।
ಪಶ್ಯ ವಾತಂ ಸದಾ ವಾಂತಂ ಸೃಜಂತಂ ವೇಧಸಂ ಪ್ರಜಾಃ ।
ಪರ್ಯಟಂತಂ ತ್ರಿಲೋಕೀಂ ಮಾಂ ವಹಂತೀಂ ವಸುಧಾಂ ಪ್ರಜಾಃ ॥೪೧॥

೩೮–೩೯. ಯಮನ ಆ ದೃಷ್ಟಿಯಿಂದ ಕರಗಿ ಗಣಿಕೆಯು ಆ ಕೂಡಲೇ ನದಿಯಾದಳು. ಆಮೇಲಾನದಿಯು ಗೌತಮೀನದಿಯಲ್ಲಿ ಸೇರಿ ಅಪ್ಸರೆಯರು ಕಿನ್ನರರು ಇವರಿಂದ ಹೊಗಳಿಸಿಕೊಳ್ಳುತ್ತಾ ಆ ತೀರ್ಥದ ಮಹಿಮೆಯಿಂದ ಸ್ವರ್ಗಕ್ಕೆ ತೆರಳಿದಳು.

೪೦. ವಿಮಾನವನ್ನೇರಿ ಗಣಿಕೆಯು ಸ್ವರ್ಗಕ್ಕೆ ತೆರಳುತ್ತಿರುವುದನ್ನು ನೋಡಿ ಯಮನು ತುಂಬಾ ಆಶ್ಚರ್ಯಗೊಂಡಿರಲು, ಆಗ ಸೂರ್ಯನು ಯಮನ ಬಳಿಗೆ ಬಂದು,

೪೧. ಎಲೈ ಪುತ್ರ, ನಿನ್ನ ಕರ್ತವ್ಯವಾದ ಪ್ರಜಾಸಂಹಾರವನ್ನು ಮಾಡು. ನೋಡು, ವಾಯುವು ಸದಾ ಬೀಸುತ್ತಿರುವನು. ಬ್ರಹ್ಮನೂ ತನ್ನ ಕಾರ್ಯವಾದ ಪ್ರಜಾಸೃಷ್ಟಿಯನ್ನು ಮಾಡುತ್ತಲೇ ಇರುವನು. ನಾನೂ ಕರ್ತವ್ಯವೆಂದು ಮೂರು ಲೋಕಗಳನ್ನು ಸಂಚರಿಸುತ್ತಿರುವೆನು. ಭೂಮಿಯೂ ಪ್ರಜೆಗಳು ಸದಾ ಧರಿಸುತ್ತಿರುವಳು ಎಂದನು.

॥ ಬ್ರಹ್ಮೋವಾಚ ॥

ಇತಿ ಶ್ರುತ್ವಾ ಯಮೋ ವಾಕ್ಯಂ ಪಿತುರ್ವಚನಮಬ್ರವೀತ್ ॥ ೪೨ ॥

॥ ಯಮ ಉವಾಚ ॥

ಏತನ್ನ ಗರ್ಹಿತಂ ಕರ್ಮ ಕುರ್ಯಾಮಹಮಿದಂ ಧ್ರುವಂ ।
ಕರ್ಮಣ್ಯಸ್ಮಿನ್ಮಹಾಕ್ರೂರೇ ಸಮಾದೇಷ್ಟುಂ ನ ವಾರ್ಹಸಿ ॥ ೪೩ ॥

ಇತಿ ಶ್ರುತ್ವಾ ಚ ತದ್ವಾಕ್ಯಂ ಭಾನುರ್ವಚನಮಬ್ರವೀತ್ ।
ಕಿಂ ನಾಮ ಗರ್ಹಿತಂ ಕರ್ಮ ತವ ಕರ್ತುಮಲಂ ಯಮ ॥ ೪೪ ॥

ಕಿಂ ನ ದೃಷ್ಟಾ ತ್ವಯಾ ಯಾಂತೀ ಗಣಿಕಾ ಗಣಕಿಂಕರೈಃ ।
ಗೀಯಮಾನಾ ದಿವಂ ಸದ್ಯೋ ಗೌತಮೀತೋಯಮಾಪ್ಲುತಾ ॥ ೪೫ ॥

ತ್ವಯಾ ಚಾತ್ರ ತಪಸ್ತೀವ್ರಂ ಕೃತಂ ಪುತ್ರ ಸುದುಷ್ಕರಂ ।
ನೈವಾಂತಂ ತಸ್ಯ ಪಶ್ಯಾಮಿ ತಸ್ಮಾದ್ಗಚ್ಛ ನಿಜಂ ಪುರಂ ॥ ೪೬ ॥

೪೨-೪೪. ತಂದೆಯ ಆ ಮಾತನ್ನು ಕೇಳಿ ಯಮನು ಓ ತಂದೆ, ಈಗ ನಾನು ಮಾಡುತ್ತಿರುವ ಕರ್ಮವು (ತಪಸ್ಸು) ನಿಂದಿತವಾದುದಲ್ಲ, ಆದರೆ ಮಹಾ ಕ್ರೂರವಾದ ಪ್ರಜಾಸಂಹಾರವೆಂಬ ಕರ್ಮದಲ್ಲಿ ನನ್ನನ್ನು ಪುನಃ ನಿಯಮಿಸ ಬೇಡ ಎನ್ನಲು, ಯಮನ ಆ ಮಾತನ್ನು ಕೇಳಿ ಸೂರ್ಯನು,

೪೫. ನನ್ನ ಕುಮಾರನಾದ ನೀನು ಮಾಡುತ್ತಲಿರುವ ಈ ಕಾರ್ಯವು ಎಂದಿಗೂ ನಿಂದಿತವಾದುದಲ್ಲ, ನೀನು ನೋಡಲಿಲ್ಲವೇ? ಈ ಗಣಿಕೆಯೂ ಸಹ ಗೌತಮೀನದಿಯಲ್ಲಿ ಸೇರಿ ಅದರ ಮಹಿಮೆಯಿಂದ ಕಿನ್ನರ ಮೊದಲಾದವರಿಂದ ಹೊಗಳಿಸಿಕೊಳ್ಳುತ್ತಾ ವಿಮಾನವನ್ನೇರಿ ಸ್ವರ್ಗಕ್ಕೆ ತೆರಳುತ್ತಿರುವಳು.

೪೬. ನೀನಾದರೋ ಈ ಗೌತಮೀತೀರದಲ್ಲಿ ಘೋರತಪಸ್ಸನ್ನಾಚರಿಸುತ್ತಲಿರುವೆ. ನಿನ್ನ ಪುಣ್ಯಕ್ಕೆ ಕೊನೆಯೇ ಇಲ್ಲ, ಆದುದರಿಂದ ನಿನ್ನ ಪಟ್ಟಣಕ್ಕೆ ತೆರಳು ಎಂದು,

ಇತ್ಯುಕ್ತ್ವಾ ಭಗವಾನ್ಭಾನುಸ್ತತ್ರ ಸ್ನಾತ್ವಾ ಗತೋ ದಿವಂ ।
ಯಮೋಽಪಿ ಸಂಗಮೇ ಸ್ನಾತ್ವಾ ತತೋ ನಿಜಪುರಂ ಯಯೌ ॥ ೪೭ ॥

ಭೂತಹಾಪಿ ತತಃ ಶಂಕಾಂ ತತ್ಯಾಜ ಚ ಮಹಾಮುನೇ ।
ತಥಾ ದೃಷ್ಟ್ವಾ ಯಮಂ ಯಾಂತಂ ಚಕ್ರೇ ಚಕ್ರಂ ಪ್ರಯಾಣಕಂ ॥ ೪೮ ॥

ಭಗವಾನ್ಯತ್ರ ಗೋವಿಂದೋ ವನಮಾಲಾವಿಭೂಷಿತಃ ।
ಇತಿ ಯಃ ಶೃಣುಯಾನ್ಮರ್ತ್ಯಃ ಪಠೇದ್ವಾಪಿ ಸಮಾಹಿತಃ ॥ ೪೯ ॥

ಆಪದಸ್ತಸ್ಯ ನಶ್ಯಂತಿ ದೀರ್ಘಮಾಯುರವಾಪ್ನುಯಾತ್ ॥ ೫೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಚಕ್ರತೀರ್ಥಗಣಿಕಾಸಂಗಮವರ್ಣನಂ ನಾಮ ಷಡಶೀತಿತಮೋಽಧ್ಯಾಯಃ

---

೪೭. ಹೀಗೆ ಹೇಳಿ ಭಗವಾನ್ ಸೂರ್ಯನು ಆ ಗೌತಮೀನದಿಯಲ್ಲಿ ಸ್ನಾನ ಮಾಡಿ ತನ್ನ ಲೋಕಕ್ಕೆ ತೆರಳಿದನು. ಮುಂದೆ ಯಮನೂ, ಗಣಿಕೆಯು ನದಿಯಾಗಿ ಸೇರಿದ ಸಂಗಮಸ್ಥಳದಲ್ಲಿ ಸ್ನಾನಮಾಡಿ ತನ್ನ ಪಟ್ಟಣಕ್ಕೆ ತೆರಳಿದನು. ಪ್ರಾಣಿಗಳನ್ನು ಸಂಹರಿಸುವವನಾದರೂ ಯಮನು ಆಮೇಲೆ ಗೌತಮೀಪುಣ್ಯದಿಂದ ಪಾಪದ ಭಯವನ್ನು ಬಿಟ್ಟನು.

೪೮. ಯಮನು ತನ್ನ ನಗರಿಗೆ ಹೊರಟುಹೋದಮೇಲೆ ವಿಷ್ಣುಚಕ್ರವೂ ಸಹ ವನಮಾಲೆಯಿಂದ ಶೋಭಿಸುವ ಭಗವಾನ್ ಗೋವಿಂದನ ಬಳಿಗೆ ತೆರಳಿತು.

೪೯-೫೦. ಈ ಮಹಾತ್ಮ್ಯವನ್ನು ಕೇಳಿದರೂ ಹೇಳಿದರೂ ಆಪತ್ತುಗಳೆಲ್ಲವೂ ನಾಶವಾಗುವುವು, ದೀರ್ಘವಾದ ಆಯುಸ್ಸು ಲಭಿಸುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಚಕ್ರತೀರ್ಥಗಣಿಕಾಸಂಗಮವರ್ಣನವೆಂಬ ಎಂಭತ್ತಾರನೆಯ ಅಧ್ಯಾಯವು ಮುಗಿದುದು.

ಗೌತಮೀಮಹಾತ್ಮ್ಯೆಯಲ್ಲಿ ಹದಿನೇಳನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತಾಶೀತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಅಹಲ್ಯಾಸಂಗಮಂ ಚೇಹ ತೀರ್ಥಂ ತ್ರೈಲೋಕ್ಯಪಾವನಂ ।
ಶೃಣು ಸಮ್ಯಙ್ಮುನಿಶ್ರೇಷ್ಠ ತತ್ರ ವೃತ್ತಮಿದಂ ಯಥಾ ॥ ೧ ॥

ಕೌತುಕೇನಾತಿಮಹತಾ ಮಯಾ ಪೂರ್ವಂ ಮುನೀಶ್ವರ ।
ಸೃಷ್ಟಾ ಕನ್ಯಾ ಬಹುವಿಧಾ ರೂಪವತ್ಯೋ ಗುಣಾನ್ವಿತಾಃ ॥ ೨ ॥

ತಾಸಾಮೇಕಂ ಶ್ರೇಷ್ಠತಮಾಂ ನಿರ್ಮಮೇ ಶುಭಲಕ್ಷಣಾಂ ।
ತಾಂ ಬಾಲಾಂ ಚಾರುಸರ್ವಾಂಗೀಂ ದೃಷ್ಟ್ವಾ ರೂಪಗುಣಾನ್ವಿತಾಂ ॥ ೩ ॥

ಎಂಭತ್ತೇಳನೆಯ ಅಧ್ಯಾಯವು

೧. ಬ್ರಹ್ಮನು ಹೇಳಿಧನು:—ಎಲೈ ನಾರದ, ಅಹಲ್ಯಾಸಂಗಮವೆಂಬ ಮಹಾಪವಿತ್ರವಾದ ತೀರ್ಥವಿರುವುದು. ಅದರ ಮಾಹಾತ್ಮ್ಯವನ್ನು ಹೇಳುವೆನು ಕೇಳು.

೨. ಹಿಂದೆ ನಾನು ಕುತೂಹಲದಿಂದ ರೂಪವತಿಯರೂ, ಗುಣವತಿಯರೂ ಆದ ಅನೇಕ ಕನ್ಯೆಯರನ್ನು ಸೃಷ್ಟಿಸಿದೆನು.

೩. ಅವರಲ್ಲಿ ಅತಿಸುಂದರಿಯೂ, ಲಕ್ಷಣವತಿಯೂ, ಆದ ಉತ್ತಮಸ್ತ್ರೀಯೊಬ್ಬಳನ್ನು ಸೃಷ್ಟಿಸಿದೆನು. ಅಷ್ಟು ರೂಪವತಿಯೂ, ಗಣವತಿಯೂ ಆದ ಅವಳನ್ನು ನೋಡಿ ಇವಳನ್ನು ಸಲಹುವವರು ಯಾರು? ಎಂದು ಚಿಂತಿಸಿದೆನು.

ಕೋ ವಾಸ್ಯಾಃ ಪೋಷಣೇ ಶಕ್ತ ಇತಿ ಮೇ ಬುದ್ಧಿರಾವಿಶತ್ ।
ನ ದೈತ್ಯಾನಾಂ ಸುರಾಣಾಂ ಚ ನ ಮುನೀನಾಂ ತಥೈವ ಚ ॥ ೪ ॥

ನಾಸ್ತ್ಯಸ್ಯಾಃ ಪೋಷಣೇ ಶಕ್ತಿರಿತಿ ಮೇ ಬುದ್ಧಿರನ್ವಭೂತ್ ।
ಗುಣಜ್ಯೇಷ್ಠಾಯ ವಿಪ್ರಾಯ ತಪೋಯುಕ್ತಾಯ ಧೀಮತೇ ॥ ೫ ॥

ಸರ್ವಲಕ್ಷಣಯುಕ್ತಾಯ ವೇದವೇದಾಂಗವೇದಿನೇ ।
ಗೌತಮಾಯ ಮಹಾಪ್ರಾಜ್ಞಾಮದದಾಂ ಪೋಷಣಾಯ ತಾಂ ॥ ೬ ॥

ಪಾಲಯಸ್ವ ಮುನಿಶ್ರೇಷ್ಠ ಯಾವದಾಪ್ಸ್ಯತಿ ಯೌವನಂ ।
ಯೌವನಸ್ಥಾಂ ಪುನಃ ಸಾಧ್ವೀಮಾನಯೇಥಾ ಮಮಾಂತಿಕಂ ॥ ೭ ॥

ಏವಮುಕ್ತ್ವಾ ಗೌತಮಾಯ ಪ್ರಾದಾಂ ಕನ್ಯಾಂ ಸುಮಧ್ಯಮಾಂ ।
ತಾಮಾದಾಯ ಮುನಿಶ್ರೇಷ್ಠ ತಪಸಾ ಹತಕಲ್ಮಷಃ ॥ ೮ ॥

ತಾಂ ಪೋಷಯಿತ್ವಾ ವಿಧಿವದಲಂಕೃತ್ಯ ಮಮಾಂತಿಕಂ ।
ನಿರ್ವಿಕಾರೋ ಮುನಿಶ್ರೇಷ್ಠೋ ಹ್ಯಹಲ್ಯಾಮಾನಯತ್ತದಾ ॥ ೯ ॥

---

೪. ರಾಕ್ಷಸರೂ ದೇವತೆಗಳೂ ದೇವಮುನಿಗಳೂ ಈ ಸುಂದರಿಯನ್ನು ಸಲಹಲು ಸಮರ್ಥರಲ್ಲ ಎಂದು ನಾನು ನಿಶ್ಚಯಿಸಿದೆನು.

೫-೬. ಆಮೇಲೆ ಸುಗುಣಿಯೂ, ತಪಸ್ವಿಯೂ, ಜ್ಞಾನಿಯೂ, ಮಹಾತ್ಮನೂ, ವೇದವೇದಾಂಗಗಳನ್ನು ಬಲ್ಲವನೂ, ಆದ ಗೌತಮಮುನಿಗೆ ಆ ಕನ್ಯೆಯನ್ನು ಪೋಷಿಸಲು ಕೊಟ್ಟು,

೭. ಎಲೈ ಮುನೀಂದ್ರ—ಯೌವನವತಿಯಾಗುವವರೆಗೆ ಈ ಕನ್ಯೆಯನ್ನು ಪೋಷಿಸು. ಯೌವನವತಿಯಾದಮೇಲೆ ಇವಳನ್ನು ನನ್ನ ಬಳಿಗೆ ಕರೆದುಕೊಂಡುಬಾ ಎಂದು ಅವನಿಗೆ ಹೇಳಿ ಆ ಕನ್ಯಾರತ್ನವನ್ನು ಕೊಟ್ಟೆನು.

೮-೯. ಗೌತಮಮುನಿಯು ಆ ಕನ್ಯೆಯನ್ನು ಕರೆದುಕೊಂಡು ಹೋಗಿ ಅವಳು ಯೌವನವತಿಯಾಗುವವರೆಗೂ ಪೋಷಿಸಿದನು. ಆಮೇಲೆ ತಪಸ್ಸಿನಿಂದ ಪರಿಶುದ್ಧನಾದ ಆ ಮುನಿಯು ಯಾವ ವಿಕಾರವೂ ಇಲ್ಲದೆ ಆ ಕನ್ಯೆಯನ್ನು ನನ್ನ ಬಳಿಗೆ ಕರೆತಂದನು. ಆಕೆಳೇ ಅಹಲ್ಯೆಯು.

ತಾಂ ದೃಷ್ಟ್ವಾ ವಿಬುಧಾಃ ಸರ್ವೇ ಶಕ್ರಾಗ್ನಿ ವರುಣಾದಯಃ ।
ಮಮ ದೇಯಾ ಸುರೇಶಾನ ಇತ್ಯೂಚುಸ್ತೇ ಪೃಥಕ್ಪೃಥಕ್ ॥ ೧೦ ॥

ತಥೈವ ಮುನಯಃ ಸಾಧ್ಯಾ ದಾನವಾ ಯಕ್ಷರಾಕ್ಷಸಾಃ ।
ತಾನ್ಸರ್ವಾನಾಗತಾನ್ದೃಷ್ಟ್ವಾ ಕನ್ಯಾರ್ಥಮಥ ಸಂಗತಾನ್ ॥ ೧೧ ॥

ಇಂದ್ರಸ್ಯ ತು ವಿಶೇಷೇಣ ಮಹಾಂಶ್ಚಾಭೂತ್ತದಾ ಗ್ರಹಃ ।
ಗೌತಮಸ್ಯ ತು ಮಾಹಾತ್ಮ್ಯಂ ಗಾಂಭೀರ್ಯಂ ಧೈರ್ಯಮೇವ ಚ ॥ ೧೨ ॥

ಸ್ಮೃತ್ವಾ ಸುವಿಸ್ಮಿತೋ ಭೂತ್ವಾ ಮನ್ಯೈವಮಭವತ್ಸುಧೀಃ ।
ದೇಯೇಯಂ ಗೌತಮಾಯೈವ ನಾನ್ಯಯೋಗ್ಯಾ ಶುಭಾನನಾ ॥ ೧೩ ॥

ತಸ್ಮಾ ಏವ ತು ತಾಂ ದಾಸ್ಯೇ ತಥಾಸ್ಯೇವಮಚಿಂತಯಂ ।
ಸರ್ವೇಷಾಂ ಚ ಮತಿರ್ಧೈರ್ಯಂ ಮಥಿತಂ ಬಾಲಯಾನಯಾ ॥ ೧೪ ॥

---

೧೦. ಸುಂದರಿಯಾದ ಆ ಕನ್ಯೆಯನ್ನು ನೋಡಿ ಇಂದ್ರ, ಅಗ್ನಿ, ವರುಣ, ಮೊದಲಾದವರೆಲ್ಲರೂ ಓ ಬ್ರಹ್ಮದೇವ, ಇವಳನ್ನು ನನಗೆ ಕೊಡು ಎಂದು ಪ್ರತಿಯೊಬ್ಬರೂ ಕೇಳಿದರು. ಅದರಂತೆ ಮುನಿಗಳೂ, ಸಾಧ್ಯರೂ, ದಾನವರೂ, ಯಕ್ಷರಾಕ್ಷಸರೂ ಕೇಳಿದರು.

೧೧-೧೨. ಆ ಕನ್ಯೆಯನ್ನು ವರಿಸಲು ಬಂದವರೆಲ್ಲರ ಪೈಕಿ ದೇವೇಂದ್ರನಿಗೆ ತಾನೇ ಅವಳನ್ನು ವರಿಸಬೇಕೆಂದು ತುಂಬಾ ಆಶೆಯಿದ್ದಿತು. ಆಗ ನಾನು ಗೌತಮನ ಮಾಹಾತ್ಮ್ಯವನ್ನೂ ಗಾಂಭೀರ್ಯವನ್ನೂ ಜಿತೇಂದ್ರಿಯತೆಯನ್ನೂ ನೋಡಿ,

೧೩. ಗೌತಮನಿಗೇ ಈ ಸುಂದರಿಯನ್ನು ಕೊಡುವೆನು, ಅವನಿಗೇ ಇವಳು ಯೋಗ್ಯಳು ಎಂದು ನಿಶ್ಚಯಿಸಿ,

೧೪. ಈ ಸುಂದರಿಯು ಎಲ್ಲರ ಬುದ್ಧಿಯನ್ನೂ, ಧೈರ್ಯವನ್ನೂ ಅಪಹರಿಸಿರುವಳು. ಆದುದರಿಂದ ಇವಳಿಗೆ ಅಹಲ್ಯೆ (ಚಂಚಲಗೊಳಿಸುವಳು,) ಎಂಬ ಹೆಸರು ಯೋಗ್ಯವಾದುದು ಎಂದು ಚಿಂತಿಸಿ, ನಾನೂ ಋಷಿಗಳೂ ಅವಳಿಗೆ ಅಹಲ್ಯೆ ಎಂದು ಹೆಸರಿಟ್ಟೆವು.

ಅಹಲ್ಯೇತಿ ಸುರೈಃ ಪ್ರೋಕ್ತಾಂ ಮಯಾ ಚ ಋಷಿಭಿಸ್ತದಾ ।
ದೇವಾನೃಷೀಂಸ್ತದಾ ವೀಕ್ಷ್ಯ ಮಯಾ ತತ್ರೋಕ್ತಮುಚ್ಚಕೈಃ ॥ ೧೫ ॥

ತಸ್ಮೈ ಸಾ ದೀಯತೇ ಸುಭ್ರೂರ್ಯಃ ಪೃಥಿವ್ಯಾಃ ಪ್ರದಕ್ಷಿಣಾಂ ।
ಕೃತ್ವೋಪತಿಷ್ಠತೇ ಪೂರ್ವಂ ನ ಚಾನ್ಯಸ್ಮೈ ಪುನಃ ಪುನಃ ॥ ೧೬ ॥

ತತಃ ಸರ್ವೇ ಸುರಗಣಾಃ ಶ್ರುತ್ವಾ ವಾಕ್ಯಂ ಮಯೇರಿತಂ ।
ಅಹಲ್ಯಾರ್ಥಂ ಸುರಾ ಜಗ್ಮುಃ ಪೃಥಿವ್ಯಾಶ್ಚ ಪ್ರದಕ್ಷಿಣೇ ॥ ೧೭ ॥

ಗತೇಷು ಸುರಸಂಘೇಷು ಗೌತಮೋಽಪಿ ಮುನೀಶ್ವರ ।
ಪ್ರಯತ್ನಮಕರೋತ್ಕಿಂಚಿದಹಲ್ಯಾರ್ಥಮಿಮಂ ತಥಾ ॥ ೧೮ ॥

ಏತಸ್ಮಿನ್ನಂತರೇ ಬ್ರಹ್ಮನ್ಸುರಭಿಃ ಸರ್ವಕಾಮಧುಕ್ ।
ಅರ್ಧಪ್ರಸೂತಾ ಹ್ಯಭವತ್ತಾಂ ದದರ್ಶ ಸ ಗೌತಮಃ ॥ ೧೯ ॥

೧೫–೧೬. ಆ ಮೇಲೆ ದೇವತೆಗಳನ್ನೂ, ಋಷಿಗಳನ್ನೂ ಕುರಿತು ಯಾರು ಮೊದಲು ಈ ಭೂಮಿಯೆಲ್ಲವನ್ನೂ ಈಗಲೇ ಪ್ರದಕ್ಷಿಣೆಮಾಡಿ ಬರುವರೋ ಅವರಿಗೆ ಈ ಸುಂದರಿಯನ್ನು ಕೊಡುವೆನು ಇನ್ನಾರಿಗೂ ಕೊಡುವುದಿಲ್ಲ ಎಂದು ಸ್ಪಷ್ಟವಾಗಿ ನುಡಿದೆನು.

೧೭. ದೇವತೆಗಳೆಲ್ಲರೂ ಆ ನನ್ನಮಾತನ್ನು ಕೇಳಿ ಅಹಲ್ಯೆಯನ್ನು ಪಡೆಯಲು ಆ ಕೂಡಲೇ ಭೂಪ್ರದಕ್ಷಿಣೆಗೆ ಹೊರಟರು.

೧೮. ದೇವತೆಗಳೆಲ್ಲರೂ ಭೂಪ್ರದಕ್ಷಿಣೆಗೆ ಹೊರಡಲು ಗೌತಮಮುನಿಯು ಅಹಲ್ಯೆಯನ್ನು ಪಡೆಯಲು ಈ ಪ್ರಯತ್ನವನ್ನು ಸಾಧಿಸಿದನು.

೧೯. ಈ ಸಮಯದಲ್ಲಿ ದೇವಪಶುವಾದ ಕಾಮಧೇನುವು ಕರುವನ್ನು ಈಯುವ ಸ್ಥಿತಿಯಲ್ಲಿದ್ದು ಅಲ್ಲಿಗೆ ಬಂದಿತು ಆ ಹಸುವನ್ನು ಗೌತಮನು ನೋಡಿದನು.

ತಸ್ಯಾಃ ಪ್ರದಕ್ಷಿಣಂ ಚಕ್ರೇ ಇಯಮುರ್ವೀತಿ ಸಂಸ್ಮರನ್ ।
ಲಿಂಗಸ್ಯ ಚ ಸುರೇಶಸ್ಯ ಪ್ರದಕ್ಷಿಣಮಥಾಕರೋತ್ ॥ ೨೦ ॥

ತಯೋಃ ಪ್ರದಕ್ಷಿಣಂ ಕೃತ್ವಾ ಗೌತಮೋ ಮುನಿಸತ್ತಮಃ ।
ಸರ್ವೇಷಾಂ ಚೈವ ದೇವಾನಾಮೇಕಂ ಚಾಪಿ ಪ್ರದಕ್ಷಿಣಂ ॥ ೨೧ ॥

ನೈವಾಭವದ್ಭುವೋ ಗಂತುಃ ಸಂಜಾತಂ ದ್ವಿತಯಂ ಮಮ ।
ಏವಂ ನಿಶ್ಚಿತ್ಯ ಸ ಮುನಿರ್ಮಮಾಂತಿಕಮಥಾಭ್ಯಗಾತ್ ॥ ೨೨ ॥

ನಮಸ್ಕೃತ್ವಾಬ್ರವೀದ್ವಾಕ್ಯಂ ಗೌತಮೋ ಮಾಂ ಮಹಾಮತಿಃ ।
ಕಮಲಾಸನ ವಿಶ್ವಾತ್ಮನ್ನಮಸ್ತೇಽಸ್ತು ಪುನಃ ಪುನಃ ॥ ೨೩ ॥

ಪ್ರದಕ್ಷಿಣೀಕೃತಾ ಬ್ರಹ್ಮನ್ಮಯೇಯಂ ವಸುಧಾಖಿಲಾ ।
ಯದತ್ರ ಯುಕ್ತಂ ದೇವೇಶ ಜಾನೀತೇ ತದ್ಭವಾನ್ಸ್ವಯಂ ॥ ೨೪ ॥

---

೨೦. ಗೌತಮನು ಆ ಕಾಮಧೇನುವೇ ಭೂಮಿಯೆಂದು ಸ್ಮರಿಸಿ, ಅದನ್ನು ಪ್ರದಕ್ಷಿಣೆಮಾಡಿ ನಮಸ್ಕರಿಸಿದನು. ಮತ್ತೂ ಪರಮೇಶ್ವರನ ಲಿಂಗವನ್ನೂ ಪ್ರದಕ್ಷಿಣೆಮಾಡಿ ನಮಸ್ಕರಿಸಿದನು.

೨೧–೨೨. ಹೀಗೆ ಪ್ರದಕ್ಷಿಣೆಮಾಡಿ ಗೌತಮನು—ಭೂಪ್ರದಕ್ಷಿಣೆಗೆ ಹೊರಟ ದೇವತೆಗಳು ಇನ್ನೂ ಒಂದು ಪ್ರದಕ್ಷಿಣೆಯನ್ನೂ ಮಾಡಿಲ್ಲ, ನನಗಾದರೋ ಎರಡುಬಾರಿ ಭೂಪ್ರದಕ್ಷಿಣೆಯಾಯಿತು ಎಂದು ನಿಶ್ಚಯಿಸಿ, ಆ ಗೌತಮಮುನಿಯು ನನ್ನ ಬಳಿಗೆ ಬಂದು ನಮಸ್ಕರಿಸಿ,

೨೩–೨೪. ಜಗನ್ಮಯನಾದ ಓ ಬ್ರಹ್ಮದೇವ, ನಿನಗೆ ಪುನಃಪುನಃ ನಮಸ್ಕಾರವು. ನಾನು ಈ ಭೂಮಿಯೆಲ್ಲವನ್ನೂ ಪ್ರದಕ್ಷಿಣೆಮಾಡಿರುವೆನು. ಮುಂದಿನಕಾರ್ಯವನ್ನು ನೀನೇ ತಿಳಿದಿರುವೆ ಎನ್ನಲು,

ಮಯಾ ತು ಧ್ಯಾನಯೋಗೇನ ಜ್ಞಾತ್ವಾ ಗೌತಮಮಬ್ರವಂ ।
ತವೈವ ದೀಯತೇ ಸುಭ್ರೂಃ ಪ್ರದಕ್ಷಿಣಮಿದಂ ಕೃತಂ ॥ ೨೫ ॥

ಧರ್ಮಂ ಜಾನೀಹಿ ವಿಪ್ರರ್ಷೇ ದುರ್ಜ್ಞೇಯಂ ನಿಗಮೈರಪಿ ।
ಅರ್ಧಪ್ರಸೂತಾ ಸುರಭಿಃ ಸಪ್ತದ್ವೀಪವತೀ ಮಹೀ ॥ ೨೬ ॥

ಕೃತಾ ಪ್ರದಕ್ಷಿಣಾ ತಸ್ಯಾಃ ಪೃಥಿವ್ಯಾಃ ಸಾ ಕೃತಾ ಭವೇತ್ ।
ಲಿಂಗಂ ಪ್ರದಕ್ಷಿಣೀಕೃತ್ಯ ತದೇವ ಫಲಮಾಪ್ನುಯಾತ್ ॥ ೨೭ ॥

ತಸ್ಮಾತ್ಸರ್ವಪ್ರಯತ್ನೇನ ಮುನೇ ಗೌತಮ ಸುವ್ರತ ।
ತುಷ್ಟೋಽಹಂ ತವ ಧೈರ್ಯೇಣ ಜ್ಞಾನೇನ ತಪಸಾ ತಥಾ ॥ ೨೮ ॥

ದತ್ತೇಯಮೃಷಿಶಾರ್ದೂಲ ಕನ್ಯಾ ಲೋಕವರಾ ಮಯಾ ।
ಇತ್ಯುಕ್ತ್ವಾಹಂ ಗೌತಮಾಯ ಅಹಲ್ಯಾಮದದಾಂ ಮುನೇ ॥ ೨೯ ॥

---

೨೫. ನಾನು ಜ್ಞಾನದೃಷ್ಟಿಯಿಂದ ಅದೆಲ್ಲವನ್ನೂ ವಿಮರ್ಶಿಸಿ ಆಗ ಗೌತಮನನ್ನು ಕುರಿತು ಎಲೈ ಬ್ರಹ್ಮರ್ಷಿ, ನೀನು ಭೂಪ್ರದಕ್ಷಿಣೆಯನ್ನು ಮಾಡಿದುದು ನಿಜವು, ನಿನಗೇ ಅಹಲ್ಯೆಯನ್ನು ಕೊಡುವೆನು. ಶಾಸ್ತ್ರಗಳಲ್ಲೂ ತಿಳಿಯಲಾರವಂತಹ ಧರ್ಮವನ್ನು ಹೇಳುವೆನು ಕೇಳು.

೨೬–೨೭. ಕರುವನ್ನು ಈಯುವ ಸ್ಥಿತಿಯಲ್ಲಿರುವ ಕಾಮಧೇನುವು ಸಪ್ತದ್ವೀಪಸಹಿತವಾದ ಭೂಮಿಗೆ ಸಮಾನವಾದುದು. ಅಂತಹ ಧೇನುವನ್ನು ನೀನು ಪ್ರದಕ್ಷಿಣೆಮಾಡಿದುದರಿಂದ ಭೂಪ್ರದಕ್ಷಿಣೆಯನ್ನೇ ಮಾಡಿದಂತಾಯಿತು. ಶಿವಲಿಂಗಪ್ರದಕ್ಷಿಣೆಯನ್ನು ಮಾಡಿದರೂ ಭೂಪ್ರದಕ್ಷಿಣೆಮಾಡಿದಂತಾಗುವುದು.

೨೮–೨೯. ಆದುದರಿಂದ ನಿನ್ನ ಈ ಧೈರ್ಯದಿಂದಲೂ, ತತ್ತ್ವಜ್ಞಾನದಿಂದಲೂ, ತಪಸ್ಸಿನಿಂದಲೂ ನಾನು ಸಂತುಷ್ಟನಾಗಿರುವೆನು. ಲೋಕಸುಂದರಿಯಾದೀ ಅಹಲ್ಯೆಯನ್ನು ನಿನಗೇ ಕೊಟ್ಟಿರುವೆನು ಎಂದು ಹೇಳಿ ನಾನು ಗೌತಮಮುನಿಗೆ ಅಹಲ್ಯೆಯನ್ನು ಮದುವೆಮಾಡಿಕೊಟ್ಟೆನು.

ಜಾತೇ ವಿವಾಹೇ ತೇ ದೇವಾಃ ಕೃತ್ವೇಲಾಯಾಃ ಪ್ರದಕ್ಷಿಣಂ ।
ಶನೈಃ ಶನೈರಥಾಗತ್ಯ ದದೃಶುಃ ಸರ್ವ ಏವ ತೇ ॥ ೩೦ ॥

ತಂ ಗೌತಮಮಹಲ್ಯಾಂ ಚ ದಾಂಪತ್ಯಂ ಪ್ರೀತಿವರ್ಧನಂ ।
ತೇ ಚಾಗತ್ಯಾಥ ಪಶ್ಯಂತೋ ವಿಸ್ಮಿತಾಶ್ಚಾಭವನ್ಸುರಾಃ ॥ ೩೧ ॥

ಅತಿಕ್ರಾಂತೇ ವಿವಾಹೇ ತು ಸುರಾಃ ಸರ್ವೇ ದಿವಂ ಯಯುಃ ।
ಸಮುತ್ಸರಃ ಶಚೀಭರ್ತಾ ತಾಮಿಾಕ್ಷ್ಯ ಚ ದಿವಂ ಯಯೌ ॥ ೩೨ ॥

ತತಃ ಪ್ರೀತಮನಾಸ್ತಸ್ಮೈ ಗೌತಮಾಯ ಮಹಾತ್ಮನೇ ।
ಪ್ರಾದಾಂ ಬ್ರಹ್ಮಗಿರಿಂ ಪುಣ್ಯಂ ಸರ್ವಕಾಮಪ್ರದಂ ಶುಭಂ ॥ ೩೩ ॥

ಅಹಲ್ಯಾಯಾಂ ಮುನಿಶ್ರೇಷ್ಠೋ ರೇಮೇ ತತ್ರ ಸ ಗೌತಮಃ ।
ಗೌತಮಸ್ಯ ಕಥಾಂ ಪುಣ್ಯಾಂ ಶ್ರುತ್ವಾ ಶಕ್ರಸ್ತ್ರಿವಿಷ್ಟಪೇ ॥ ೩೪ ॥

ತಮಾಶ್ರಮಂ ತಂ ಚ ಮುನಿಂ ತಸ್ಯ ಭಾರ್ಯಾಮನಿಂದಿತಾಂ ।
ಭೂತ್ವಾ ಬ್ರಾಹ್ಮಣವೇಷೇಣ ದ್ರಷ್ಟುಮಾಗಾಚ್ಛತಕ್ರತುಃ ॥ ೩೫ ॥

---

೩೦. ಅಹಲ್ಯಾಗೌತಮರ ವಿವಾಹವು ಮುಗಿದಮೇಲೆ ದೇವತೆಗಳು ಭೂಪ್ರದಕ್ಷಿಣೆಯನ್ನು ಮಾಡಿ ಒಬ್ಬೊಬ್ಬರಾಗಿ ಅಲ್ಲಿಗೆ ಬಂದು ನೋಡಿದರು.

೩೧. ದೇವತೆಗಳು ಅಲ್ಲಿಗೆಬಂದು ಗೌತಮಅಹಲ್ಯೆಯರ ಪ್ರೀತಿಮಯವಾದ ದಾಂಪತ್ಯವನ್ನು ನೋಡಿ ತುಂಬಾ ಆಶ್ಚರ್ಯಗೊಂಡರು.

೩೨. ಗೌತಮಾಹಲ್ಯೆಯರ ವಿವಾಹವು ಮುಗಿದಮೇಲೆ ದೇವತೆಗಳೆಲ್ಲರೂ ಸ್ವರ್ಗಕ್ಕೆ ಹೊರಟುಹೋದರು. ಇಂದ್ರನಿಗೆ ಮಾತ್ರ—ಅಹಲ್ಯೆಯು ತನಗೆ ಸಿಕ್ಕಲಿಲ್ಲವಲ್ಲಾ ಎಂದು ಮನಸ್ಸಿನಲ್ಲಿ ಅಸೂಯೆಯು ಇದ್ದೇ ಇದ್ದಿತು.

೩೩. ಆಗ ನಾನು ಮಹಾತ್ಮನಾದ ಗೌತಮಮುನಿಗೆ ವಾಸಮಾಡಲು ಸಕಲಸಂಪತ್ತುಗಳಿಂದ ಕೂಡಿದ ಪುಣ್ಯಪ್ರದವಾದ ಬ್ರಹ್ಮಗಿರಿಯನ್ನು ಸಂತೋಷದಿಂದ ಕೊಟ್ಟೆನು. ಆ ಗಿರಿಯಲ್ಲಿ ಗೌತಮಮುನಿಯು ಅಹಲ್ಯೆಯೊಡನೆ ವಿಹರಿಸುತ್ತಿದ್ದನು.

೩೪–೩೫. ಗೌತಮನ ಆ ಪುಣ್ಯಪ್ರಭಾವವನ್ನು ಕೇಳಿ ದೇವೇಂದ್ರನು ಸ್ವರ್ಗದಿಂದ ಬ್ರಾಹ್ಮಣವೇಷವನ್ನು ಧರಿಸಿ ಆ ಮುನಿಯನ್ನೂ ಪತಿವ್ರತೆಯಾದ ಅವನ ಹೆಂಡತಿಯನ್ನೂ ಅವನಾಶ್ರಮವನ್ನೂ ನೋಡಲು ಬಂದು,

ಸ ದೃಷ್ಟ್ವಾ ಭವನಂ ತಸ್ಯ ಭಾರ್ಯಾಂ ಚ ವಿಭವಂ ತಥಾ ।
ಪಾಪೀಯಸೀಂ ಮತಿಂ ಕೃತ್ವಾ ಅಹಲ್ಯಾಂ ಸಮುದೈಕ್ಷತ ॥ ೩೬ ॥

ನಾತ್ಮಾನಂ ನ ಪರಂ ದೇಶಂ ಕಾಲಂ ಶಾಪಾದೃಷೇರ್ಭಯಂ ।
ನ ಬುಬೋಧ ತದಾ ವತ್ಸ ಕಾಮಾಕೃಷ್ಟಃ ಶತಕ್ರತುಃ ॥ ೩೭ ॥

ತದ್ಧ್ಯಾನಪರಮೋ ನಿತ್ಯಂ ಸುರರಾಜ್ಯೇನ ಗರ್ವಿತಃ ।
ಸಂತಪ್ತಾಂಗಃ ಕಥಂ ಕುರ್ಯಾಂ ಪ್ರವೇಶೋ ಮೇ ಕಥಂ ಭವೇತ್ ॥೩೮॥

ಏವಂ ವಸನ್ವಿಪ್ರರೂಪೋ ನಾಂತರಂ ತ್ವಧ್ಯಗಚ್ಛತ ।
ಸ ಕದಾಚಿನ್ಮಹಾಪ್ರಾಜ್ಞಃ ಕೃತ್ವಾ ಪೌರ್ವಾಹ್ಣಿಕೀಂ ಕ್ರಿಯಾಂ ॥ ೩೯ ॥

ಸಹಿತೋ ಗೌತಮಃ ಶಿಷ್ಯೈರ್ನಿರ್ಗತಶ್ಚಾಶ್ರಮಾದ್ಬಹಿಃ ।
ಆಶ್ರಮಂ ಗೌತಮೀಂ ವಿಪ್ರಾನ್ಧಾನ್ಯಾನಿ ವಿವಿಧಾನಿ ಚ ॥ ೪೦ ॥

---

೩೬. ಗೌತಮನ ಆಶ್ರಮವನ್ನೂ ಅವನ ಪತ್ನಿಯನ್ನೂ ವೈಭವವನ್ನೂ ನೋಡಿ ಪಾಪಬುದ್ಧಿಯಿಂದ ಅಹಲ್ಯೆಯಲ್ಲಿ ಕಾಮದೃಷ್ಟಿಯನ್ನಿರಿಸಿದನು.

೩೭. ಕಾಮಮೋಹಿತನಾದಾ ಇಂದ್ರನಿಗೆ ತನ್ನ ಗತಿಯೂ ದೇಶಕಾಲಗಳೂ ಋಷಿಶಾಪವೂ ತಿಳಿಯಲೇ ಇಲ್ಲ. ಯಾವುದನ್ನೂ ಅವನು ಲೆಕ್ಕಿಸಲಿಲ್ಲ.

೩೮. ದೇವೇಂದ್ರವೈಭವದಿಂದ ಗರ್ವಿತನಾದಾ ಇಂದ್ರನು ಸದಾ ಅಹಲ್ಯೆಯನ್ನೇ ಚಿಂತಿಸುತ್ತಾ ವ್ಯಥೆಪಡುತ್ತಾ—ಏನು ಮಾಡಲಿ? ನನಗೆ ಅಹಲ್ಯೆಯೊಡನೆ ಸೇರುವ ಅವಕಾಶವು ಲಭಿಸುವುದು ಹೇಗೆ? ಎಂದು ಯೋಚಿಸುತ್ತಾ ಬ್ರಾಹ್ಮಣರೂಪದಿಂದ ಗೌತಮಾಶ್ರಮದಲ್ಲಿದ್ದನು. ಅವನಿಗೆ ಕೆಲವುಕಾಲದ ವರೆಗೆ ಅವಕಾಶವೇ ಲಭಿಸಲಿಲ್ಲ.

೩೯. ಒಂದುದಿನ ಮಹಾಪಂಡಿತನಾದಾ ಗೌತಮನು ಪ್ರಾತಃಕಾಲದ ಕರ್ಮಗಳನ್ನು ಮುಗಿಸಿ ಶಿಷ್ಯರೊಡನೆ,

೪೦–೪೧. ಬೇರೆ ಆಶ್ರಮಗಳಲ್ಲಿರುವ ಋಷಿಗಳನ್ನೂ ಗೌತಮೀನದಿಯನ್ನೂ ನೋಡಲು ಮತ್ತು ಧಾನ್ಯಗಳನ್ನು ಸಂಗ್ರಹಿಸಲು ತನ್ನ ಆಶ್ರಮದಿಂದ

ದ್ರಷ್ಟುಂ ಗತೋ ಮುನಿವರ ಇಂದ್ರಸ್ತಂ ಸಮುದ್ವೈಕ್ಷತ ।
ಇದಮಂತರಮಿತ್ಯುಕ್ತ್ವಾ ಚಕ್ರೇ ಕಾರ್ಯಂ ಮನಃಪ್ರಿಯಂ ॥ ೪೧ ॥

ರೂಪಂ ಕೃತ್ವಾ ಗೌತಮಸ್ಯ ಪ್ರಿಯೇಪ್ಸುಃ ಸ ಶತಕ್ರತುಃ ।
ತಾಂ ದೃಷ್ಟ್ವಾ ಚಾರುಸರ್ವಾಂಗೀಮಹಲ್ಯಾಂ ವಾಕ್ಯಮಬ್ರವೀತ್ ॥ ೪೨ ॥

॥ ಇಂದ್ರ ಉವಾಚ ॥

ಆಕೃಷ್ಟೋಽಹಂ ತವ ಗುಣೈ ರೂಪಂ ಸ್ಮೃತ್ವಾ ಸ್ಖಲತ್ಪದಃ ।
ಇತಿ ಬ್ರುವನ್ಹಸನ್ಹಸ್ತಮಾದಾಯಾಂತಃ ಸಮಾವಿಶತ್ ॥ ೪೩ ॥

ನ ಬುಬೋಧ ತ್ವಹಲ್ಯಾ ತಂ ಜಾರಂ ಮೇನೇ ತು ಗೌತಮಂ ।
ರಮಮಾಣಾ ಯಥಾಸೌಖ್ಯಂ ಪ್ರಾಗಾಚ್ಛಿಷ್ಯೈಃ ಸ ಗೌತಮಃ ॥ ೪೪ ॥

ಆಗಚ್ಛಂತಂ ನಿತ್ಯಮೇವ ಅಹಲ್ಯಾ ಪ್ರಿಯವಾದಿನೀ ।
ಪ್ರತಿಯಾತಿ ಪ್ರಿಯಂ ವಕ್ತಿ ತೋಷಯಂತೀ ಚ ತಂ ಗುಣೈಃ ॥ ೪೫ ॥

ಹೊರಡಲು ಇಂದ್ರನು ಅದನ್ನು ನೋಡಿ, ಇದೇ ಸಮಯವೆಂದು ತಿಳಿದು ತನ್ನ ಕಾರ್ಯವನ್ನು ಸಾಧಿಸಲುದ್ಯುಕ್ತನಾದನು-

೪೨. ಆಮೇಲೆ ಆ ಇಂದ್ರನು ಗೌತಮಮುನಿಯ ರೂಪವನ್ನು ಧರಿಸಿ ಬಂದು ಸುಂದರಿಯದಾ ಅಹಲ್ಯೆಯನ್ನು ನೋಡಿ ಇಂತೆಂದನು.—

೪೩. ಎಲೌ ಪ್ರಿಯಳೇ, ನಿನ್ನ ಗುಣಕ್ಕೆ ನಾನು ಮರುಳಾಗಿರುವೆನು. ನಿನ್ನ ರೂಪವನ್ನು ಸ್ಮರಿಸಿ ಮುಂದೆ ಹೋಗಲಾರದೆ ಹಿಂತಿರುಗಿ ಬಂದಿರುವೆನು. ಎಂದು ಹೇಳುತ್ತಾ ಅಹಲ್ಯೆಯ ಕೈಯನ್ನು ಹಿಡಿದುಕೊಂಡು ಒಳಗೆ ಪ್ರವೇಶಿಸಿದನು.

೪೪. ಅವನು ಜಾರನಾದ ಇಂದ್ರನೆಂದು ತಿಳಿಯದೆ ಗೌತಮಮುನಿಯೇ ಎಂದು ತಿಳಿದು ಅಹಲ್ಯೆಯು ಇಂದ್ರನೊಡನೆ ಸುಖವಾಗಿ ವಿಹರಿಸಿದಳು. ಅಷ್ಟರಲ್ಲಿ ಶಿಷ್ಯರೊಡನೆ ಗೌತಮಮುನಿಯೂ ಆಶ್ರಮಕ್ಕೆ ಬಂದನು.

೪೫. ಗೌತಮನು ಆಶ್ರಮಕ್ಕೆ ಹೊರಗಿನಿಂದ ಬರುತ್ತಿದ್ದಾಗಲೆಲ್ಲಾ ನಿತ್ಯವೂ ಅಹಲ್ಯೆಯು ಅವನನ್ನು ಎದುರುಗೊಂಡು ಸವಿಮಾತುಗಳಿಂದ ಸಂತೋಷಗೊಳಿಸುತ್ತಿದ್ದಳು.

ತಾಮದೃಷ್ಟ್ವಾ ಮಹಾಪ್ರಾಜ್ಞೋಽಮನ್ಯೇ ತನ್ಮಹದದ್ಭುತಂ ।
ದ್ವಾರಸ್ಥಿತಂ ಮುನಿಶ್ರೇಷ್ಠಂ ಸರ್ವೇ ಪಶ್ಯಂತಿ ನಾರದ ॥ ೪೬ ॥

ಅಗ್ನಿಹೋತ್ರಸ್ಯ ಶಾಲಾಯಾ ರಕ್ಷಿಣೋ ಗೃಹಕರ್ಮಿಣಃ ।
ಊಚುರ್ಮುನಿವರಂ ಭೀತಾ ಗೌತಮಂ ವಿಸ್ಮಯಾನ್ವಿತಾಃ ॥ ೪೭ ॥

॥ ರಕ್ಷಿಣ ಊಚುಃ ॥

ಭಗವನ್ಕಿಮಿದಂ ಚಿತ್ರಂ ಬಹಿರಂತಶ್ಚ ದೃಶ್ಯಸೇ ।
ಪ್ರಿಯಯಾಂತಃ ಪ್ರವಿಷ್ಟೋಽಸಿ ತಥೈವ ಚ ಬಹಿರ್ಭವಾನ್ ।
ಅಹೋ ತಪಃಪ್ರಭಾವೋಽಯಂ ನಾನಾರೂಪಧರೋ ಭವಾನ್ ॥ ೪೮ ॥

॥ ಬ್ರಹ್ಮೋವಾಚ ॥

ತಚ್ಛ್ರುತ್ವಾ ವಿಸ್ಮಿತಸ್ತ್ವಂತಃ ಪ್ರವಿಷ್ಟಃ ಕೋ ನು ತಿಷ್ಠತಿ ।
ಪ್ರಿಯೇ ಅಹಲ್ಯೇ ಭವತಿ ಕಿಂ ಮಾಂ ನ ಪ್ರತಿಭಾಷಸೇ । ॥ ೪೯ ॥

ಇತ್ಯೃಷೇರ್ವಚನಂ ಶ್ರುತ್ವಾ ಅಹಲ್ಯಾ ಜಾರಮಬ್ರವೀತ್ ॥ ೫೦ ॥

---

೪೬. ಇಂದು ಅಹಲ್ಯೆಯು ಎದುರಿಗೆ ಬಾರದಿರುವುದನ್ನು ನೋಡಿ ಬುದ್ಧಿವಂತನಾದ ಆ ಗೌತಮನು ಏನೋ ಅನಿಷ್ಟವೊದಗಿರುವುದೆಂದು ತಿಳಿದು ಚಿಂತಿಸುತ್ತಿರಲು, ಬಾಗಿಲಿನಲ್ಲಿ ಗೌತಮಮುನಿಯು ನಿಂತಿರುವುದನ್ನು ಮಿಕ್ಕ ಆಶ್ರಮವಾಸಿಗಳೆಲ್ಲರೂ ನೋಡುತ್ತಿದ್ದರು.

೪೭. ಅಗ್ನಿಹೋತ್ರಶಾಲೆಯನ್ನು ಕಾಯುವ ಪರಿಚಾರಕರು ಆಶ್ಚರ್ಯಗೊಂಡು ಭಯದಿಂದ ಗೌತಮಮುನಿಯನ್ನು ಕುರಿತು

೪೮. ಓ ಭಗವನ್, ಇದೇನಾಶ್ಚರ್ಯವು? ಒಳಗೂ ಹೊರಗೂ ಏಕಕಾಲದಲ್ಲಿ ನೀನು ಕಾಣಿಸುತ್ತಲಿರುವೆ, ಈಗತಾನೇ ಅಹಲ್ಯೆಯೊಡನೆ ಒಳಗೆ ಪ್ರವೇಶಿಸಿರುವೆ, ಪುನಃ ಹೊರಗಿನಿಂದ ಬರುತ್ತಲಿರುವೆ, ನಿನ್ನ ತಪಸ್ಸಿನ ಮಹಿಮೆಯು ಆಶ್ಚರ್ಯಕರವಾದುದು. ನಾನಾರೂಪಗಳನ್ನು ನೀನು ಧರಿಸಬಲ್ಲೆ ಎನ್ನಲು,

೪೯-೫೦. ಸೇವಕರ ಆ ಮಾತನ್ನು ಕೇಳಿ ಗೌತಮನು ಆಶ್ಚರ್ಯಗೊಂಡು ಒಳಗೆ ಯಾರಿರಬಹುದು? ಎನ್ನುತ್ತಾ, ಅಹಲ್ಯೆಯನ್ನು ಕುರಿತು ಪ್ರಿಯಳಾದ ಅಹಲ್ಯೆ, ಇದೇನು? ನೀನು ನನ್ನನ್ನು ಮಾತನಾಡಿಸುವುದಿಲ್ಲವೆ?

॥ ಅಹಲ್ಯೋವಾಚ ॥

ಕೋ ಭವಾನ್ಮುನಿರೂಪೇಣ ಪಾಪಂ ತ್ವಂ ಕೃತವಾನಸಿ ।
ಇತಿ ಬ್ರುವಂತೀ ಶಯನಾದುತ್ಥಿತಾ ಸತ್ವರಂ ಭಯಾತ್ ॥ ೫೧ ॥

ಸ ಚಾಪಿ ಪಾಪಕೃಚ್ಛಕ್ರೋ ಬಿಡಾಲೋऽಭೂನ್ಮುನೇರ್ಭಯಾತ್ ।
ತ್ರಸ್ತಾಂ ಚ ವಿಕೃತಾಂ ದೃಷ್ಟ್ವಾ ಸ್ವಪ್ರಿಯಾಂ ದೂಷಿತಾಂ ತದಾ ॥ ೫೨ ॥

ಉವಾಚ ಸ ಮುನಿಃ ಕೋಪಾತ್ಕಿಮಿದಂ ಸಾಹಸಂ ಕೃತಂ ।
ಇತಿ ಬ್ರುವಂತಂ ಭರ್ತಾರಂ ಸಾಪಿ ನೋವಾಚ ಲಜ್ಜಿತಾ ॥ ೫೩ ॥

ಅನ್ವೇಷಯಂಸ್ತು ತಂ ಜಾರಂ ಬಿಡಾಲಂ ದದೃಶೇ ಮುನಿಃ ।
ಕೋ ಭವಾನಿತಿ ತಂ ಪ್ರಾಹ ಭಸ್ಮೀ ಕುರ್ಯಾಂ ಮೃಷಾವದನ್ ॥ ೫೪ ॥

ಎಂದು ಕೂಗಿ ಕೇಳಿದನು, ಗೌತಮನ ಆ ಮಾತನ್ನು ಕೇಳಿ ಅಹಲ್ಯೆಯು ಜಾರನಾದ ಇಂದ್ರನನ್ನು ಕುರಿತು.

೫೧. ಎಲೋ ದುಷ್ಟನೇ, ಮುನಿರೂಪದಿಂದ ಪಾಪವನ್ನಾಚರಿಸಿದ ನೀನು ಯಾರು? ಎಂದು ಹೇಳಿ ಭಯದಿಂದ ಕೂಡಲೇ ಹಾಸಿಗೆಯಿಂದೆದ್ದಳು. ಪಾಪಕಾರಿಯಾದಾ ಇಂದ್ರನೂ ಗೌತಮನಿಗೆ ಹೆದರಿ ಬೆಕ್ಕಿನ ರೂಪನನ್ನು ಧರಿಸಿ ಅಲ್ಲಿಯೇ ಮರೆಯಾಗಿದ್ದನು.

೫೨-೫೩. ಪಾತಿವ್ರತ್ಯವನ್ನು ಕಳೆದುಕೊಂಡು ಭಯದಿಂದ ನಡುಗುತ್ತಿರುವವಳೂ ವಿಕಾರವುಳ್ಳವಳೂ ಆದ ತನ್ನ ಪ್ರಿಯೆಯನ್ನು ನೋಡಿ ಗೌತಮನು ಕೋಪದಿಂದ ಎಲೌ, ಇದೇನು ಅವಿವೇಕವನ್ನು ಮಾಡಿರುವೆ? ಎಂದು ಕೇಳುತ್ತಿದ್ದರೂ ಅಹಲ್ಯೆಯು ಲಜ್ಜೆಯಿಂದ ಉತ್ತರವನ್ನು ಹೇಳಲಿಲ್ಲ.

೫೪. ಜಾರನಾರೆಂದು ಹುಡುಕುತ್ತಾ ಗೌತಮನು ಎದುರಿನಲ್ಲಿ ಬೆಕ್ಕೊಂದನ್ನು ನೋಡಿದನು, ಅದನ್ನು ಕುರಿತು, ನೀನಾರು? ಸುಳ್ಳು ಹೇಳಿದರೆ ಇಲ್ಲಿಯೇ ಸುಟ್ಟು ಭಸ್ಮಮಾಡುವೆನು ಎಂದನು.

॥ ಇಂದ್ರ ಉವಾಚ ॥

ಕೃತಾಂಜಲಿಪುಟೋ ಭೂತ್ವಾ ಚೈವಮಾಹ ಶಚೀಪತಿಃ ।
ಶಚೀಭರ್ತಾ ಪುರಾಂ ಭೇತ್ತಾ ತಪೋಧನ ಪುರುಷ್ಟುತಃ ॥ ೫೫ ॥

ಮಮೇದಂ ಪಾಪಮಾಪನ್ನಂ ಸತ್ಯಮುಕ್ತಂ ಮಯಾನಘ ।
ಮಹದ್ವಿಗರ್ಹಿತಂ ಕರ್ಮ ಕೃತವಾನಸ್ಮ್ಯಹಂ ಮುನೇ ॥ ೫೬ ॥

ಸ್ಮರಸಾಯಕನಿರ್ಭಿನ್ನಹೃದಯಾಃ ಕಿಂ ನ ಕುರ್ವತೇ ।
ಬ್ರಹ್ಮನ್ಮಯಿ ಮಹಾಪಾಪೇ ಕ್ಷಮಸ್ವ ಕರುಣಾನಿಧೇ ॥ ೫೭ ॥

ಸಂತಃ ಕೃತಾಪರಾಧೇಽಪಿ ನ ರೌಕ್ಷ್ಯಂ ಜಾತು ಕುರ್ವತೇ ।
ನಿಶಮ್ಯ ತದ್ವಚೋ ವಿಪ್ರೋ ಹರಿಮಾಹ ರುಷಾನ್ವಿತಃ ॥ ೫೮ ॥

॥ ಗೌತಮ ಉವಾಚ ॥

ಭಗಭಕ್ತ್ಯಾ ಕೃತಂ ಪಾಪಂ ಸಹಸ್ರಭಗವಾನ್ಭವ ।
ತಾಮಪ್ಯಾಹ ಮುನಿಃ ಕೋಪಾತ್ತ್ವಂ ಚ ಶುಷ್ಕನದೀ ಭವ ॥ ೫೯ ॥

---

೫೫. ಬಳಿಕ ಇಂದ್ರನು ಕೈಮುಗಿದುಕೊಂಡು—ಓ ಮುನಿ, ನಾನು ಶಚೀದೇವಿಯ ಪತಿಯು. ವೇದಗಳಲ್ಲಿ ಸ್ತುತಿಸಲ್ಪಡುವ ಮತ್ತು ಶತ್ರುಗಳನ್ನು ಜಯಿಸುವ ದೇವೇಂದ್ರನು ನಾನು.

೫೬. ಓ ಪುಣ್ಯಾತ್ಮ, ನಾನೇ ಈ ಪಾಪವನ್ನಾಚರಿಸಿರುವೆನು, ಮಹಾ ನಿಂದಿತವಾದ ಕೆಲಸವು ನನ್ನಿಂದ ಘಟಿಸಿರುವುದು.

೫೭-೫೮. ಮನ್ಮಥನ ಬಾಣಗಳಿಗೆ ಮನಸ್ಸು ಈಡಾದರೆ ಕಾಮುಕರು ಏನುತಾನೆಮಾಡುವುದಿಲ್ಲ ? ಎಂತೆಂತಹ ಅಕಾರ್ಯವನ್ನಾದರೂ ಮಾಡುವರು. ಓ ಭಗವನ್, ಕರುಣಾಶಾಲಿಯಾದ ನೀನು ಪಾಪಿಯಾದ ನನ್ನನ್ನು ಕ್ಷಮಿಸು. ಸಜ್ಜನರು ತಪ್ಪುಮಾಡಿದವರಲ್ಲಿಯೂ ಕ್ಷಮೆಯನ್ನು ತೋರಿಸುವರು ಎಂದು ಪ್ರಾರ್ಥಿಸುತ್ತಿರಲು, ಆ ಮಾತನ್ನುಕೇಳಿ ಗೌತಮನು ಕೋಪದಿಂದ ಇಂದ್ರನನ್ನು ಕುರಿತು

೫೯-೬೦. ಎಲೈ ಇಂದ್ರ, ನೀನು ಭಗದ (ಯೋನಿ) ಮೋಹದಿಂದ ಪಾಪ ವನ್ನಾಚರಿಸಿರುವೆ, ಆದುದರಿಂದ ನಿನ್ನ ಮೈಯಲ್ಲಿ ಸಾವಿರಾರು ಭಗ (ಸ್ತ್ರೀಜನ

ತತಃ ಪ್ರಸಾದಯಾಮಾಸ ಕಥಯಂತೀ ತದಾಕೃತಿಂ ॥ ೬೦ ॥

॥ ಅಹಲ್ಯೋವಾಚ ॥

ಮನಸಾಪ್ಯನ್ಯಪುರುಷಂ ಪಾಪಿಷ್ಠಾಃ ಕಾಮಯಂತಿ ಯಾಃ ।
ಅಕ್ಷಯಾನ್ಯಾಂತಿ ನರಕಾಂಸ್ತಾಸಾಂ ಸರ್ವೇಽಪಿ ಪೂರ್ವಜಾಃ ॥ ೬೧ ॥

ಭೂತ್ವಾ ಪ್ರಸನ್ನೋ ಭಗವನ್ನವಧಾರಯ ಮದ್ವಚಃ ।
ತವ ರೂಪೇಣ ಚಾಗತ್ಯ ಮಾಮುಗಾತ್ಸಾಕ್ಷಿಣಸ್ತ್ವಮೀ ॥ ೬೨ ॥

ತಥೇತಿ ರಕ್ಷಿಣಃ ಪ್ರೋಚುರಹಲ್ಯಾ ಸತ್ಯವಾದಿನೀ ।
ಧ್ಯಾನೇನಾಪಿ ಮುನಿರ್ಜ್ಞಾತ್ವಾ ಶಾಂತಃ ಪ್ರಾಹ ಪತಿವ್ರತಾಂ ॥ ೬೩ ॥

॥ ಗೌತಮ ಉವಾಚ ॥

ಯದಾ ತು ಸಂಗತಾ ಭದ್ರೇ ಗೌತಮ್ಯಾ ಸರಿದೀಶಯಾ ।
ನದೀ ಭೂತ್ವಾ ಪುನಾ ರೂಪಂ ಪ್ರಾಪ್ಯಸೇ ಪ್ರಿಯಕೃನ್ಮಮ ॥ ೬೪ ॥

ನೇಂದ್ರಿಯ) ಗಳಾಗಲಿ, ಎಂದು ಶಪಿಸಿ ಅಹಲ್ಯೆಯನ್ನುದ್ದೇಶಿಸಿ ನೀನೂ ಒಣಗಿದ ನದಿಯಾಗು ಎಂದು ಶಪಿಸಿದನು. ಆಗ ಅಹಲ್ಯೆಯು ಗೌತಮನನ್ನು ಪ್ರಾರ್ಥಿಸುತ್ತಾ,

೬೧. ಮನಸ್ಸಿನಿಂದಲಾದರು ಯಾವ ಪಾಪಿಷ್ಠರಾದ ಸ್ತ್ರೀಯರು ಪರ ಪುರುಷನನ್ನು ಕಾಮಿಸುವರೋ ಅವರು ಸದಾ ನರಕದಲ್ಲಿ ವಾಸಿಸುವರು, ಅವರ ಪಿತೃಗಳೂ ನರಕವನ್ನು ಪಡೆಯುವರು.

೬೨. ಓ ಭಗರ್ವ, ಪ್ರಸನ್ನನಾಗಿ ನನ್ನ ಮಾತನ್ನು ಕೇಳು. ನಿನ್ನ ರೂಪದಿಂದಲೇ ಬಂದು ಈ ಇಂದ್ರನು ನನ್ನ ಸಂಗವನ್ನು ಮಾಡಿದನು, ಕೇಳು, ಈ ಸೇವಕರೇ ಸಾಕ್ಷಿಗಳು, ಎನ್ನಲು,

೬೩. ಆಗ ಸೇವಕರು ಅಹಲ್ಯೆಯು ನಿಜವನ್ನೇ ಹೇಳಿರುವಳು, ಎಂದು ಹೇಳಿದರು. ಆಮೇಲೆ ಗೌತಮನು ಜ್ಞಾನದೃಷ್ಟಿಯಿಂದ ನೋಡಿ ನಡೆದ ವಿಷಯವನ್ನು ತಿಳಿದು ಪ್ರಸನ್ನನಾಗಿ ಪತಿವ್ರತೆಯಾದ ಅಹಲ್ಯೆಯನ್ನು ಕುರಿತು,

೬೪. ಎಲೌ ಅಹಲ್ಯೆ, ಪುಣ್ಯನದಿಯಾದ ಗೌತಮೀನದಿಯೊಡನೆ ನದಿಯಾಗಿ ನೀನು ಸೇರಿದರೆ ಪುನಃ ನಿನ್ನ ಈಗಿನ ರೂಪವು ಬರುವುದು, ಎಂದನು.

ಇತ್ಯೃಷೇರ್ವಚನಂ ಶ್ರುತ್ವಾ ತಥಾ ಚಕ್ರೇ ಪತಿವ್ರತಾ ।
ತಯಾ ತು ಸಂಗತಾ ದೇವ್ಯಾ ಅಹಲ್ಯಾ ಗೌತಮುಪ್ರಿಯಾ ॥ ೬೫ ॥

ಪುನಸ್ತದ್ರೂಪಮುಭವದ್ಯನ್ಮಯಾ ನಿರ್ಮಿತಂ ಪುರಾ ।
ತತಃ ಕೃತಾಂಜಲಿಪುಟಃ ಸುರರಾಟ್ಪ್ರಾಹ ಗೌತಮುಂ ॥ ೬೬ ॥

॥ ಇಂದ್ರ ಉವಾಚ ॥

ಮಾಂ ಪಾಹಿ ಮುನಿಶಾರ್ದೂಲ ಪಾಪಿಷ್ಠಂ ಗೃಹಮಾಗತಂ ।
ಪಾದಯೋಃ ಪತಿತಂ ದೃಷ್ಟ್ವಾ ಕೃಪಯಾ ಪ್ರಾಹ ಗೌತಮಃ ॥ ೬೭ ॥

॥ ಗೌತಮ ಉವಾಚ ॥

ಗೌತಮೀಂ ಗಚ್ಛ ಭದ್ರಂ ತೇ ಸ್ನಾನಂ ಕುರು ಪುರಂದರ ।
ಕ್ಷಣಾನ್ನಿರ್ಧೂತಪಾಪಸ್ತ್ವಂ ಸಹಸ್ರಾಕ್ಷೋ ಭವಿಷ್ಯಸಿ ॥ ೬೮ ॥

---

೬೫. ಗೌತಮನ ಆ ಮಾತನ್ನು ಕೇಳಿ ಪತಿವ್ರತೆಯಾದಾ ಅಹಲ್ಯೆಯು ನದಿಯಾಗಿ ಹರಿಯುತ್ತಾ ಕೆಲವುಕಾಲದಮೇಲೆ ಗೌತಮೀನದಿಯೊಡನೆ ಸೇರಿದಳು. ಆದರಿಂದ ನಾನು (ಬ್ರಹ್ಮನು) ಹಿಂದೆ ನಿರ್ಮಿಸಿದ ಅವಳ ಸುಂದರ ರೂಪವು ಪುನಃ ಲಭಿಸಿತು.

೬೬-೬೭. ಆಮೇಲೆ ದೇವೇಂದ್ರನು ಅಂಜಲಿಯನ್ನು ಧರಿಸಿ ಗೌತಮನನ್ನು ಕುರಿತು ವಿನಯದಿಂದ ಓ ಮುನಿಶ್ರೇಷ್ಠನೆ, ನಾನು ಮಹಾಪಾಪಿಷ್ಠನು. ನಿನ್ನನ್ನೇ ಶರಣುಹೊಂದಿರುವೆನು, ನನ್ನನ್ನು ಕಾಪಾಡು, ಎಂದು ಬಾರಿಬಾರಿಗೂ ಪ್ರಾರ್ಥಿಸುತ್ತಾ ಕಾಲುಗಳಲ್ಲಿ ಬಿದ್ದಿರುವ ಇಂದ್ರನನ್ನು ನೋಡಿ ಗೌತಮ ಮುನಿಯು ಕೃಪೆಯಿಂದ

೬೮. ಎಲೈ ಇಂದ್ರ, ನಿನಗೆ ಮಂಗಳವಾಗಲಿ, ಗೌತಮೀನದಿಗೆ ಹೋಗಿ ಸ್ನಾನಮಾಡು, ಅದರಿಂದ ನಿನ್ನ ಪಾಪವೆಲ್ಲವೂ ಹೋಗಿ ಸಾವಿರ ಭಗಗಳ ಬದಲು ಸಾವಿರ ಕಣ್ಣುಗಳು ನಿನಗುಂಟಾಗುವುವು, ಹೋಗು ಎಂದನು.

॥ ಬ್ರಹ್ಮೋವಾಚ ॥

ಉಭಯಂ ವಿಸ್ಮಯಕರಂ ದೃಷ್ಟವಾನಸ್ಮಿ ನಾರದ ।
ಅಹಲ್ಯಾಯಾಃ ಪುನರ್ಭಾವಂ ಶಚೀಭರ್ತಾ ಸಹಸ್ರದೃಕ್ ॥ ೭೯ ॥

ತತಃ ಪ್ರಭೃತಿ ತತ್ತೀರ್ಥಮಹಲ್ಯಾಸಂಗಮಂ ಶುಭಂ ।
ಇಂದ್ರತೀರ್ಥಮಿತಿ ಖ್ಯಾತಂ ಸರ್ವಕಾಮಪ್ರದಂ ನೃಣಾಂ ॥ ೭೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಅಹಲ್ಯಾಸಂಗಮೇಂದ್ರತೀರ್ಥವರ್ಣನಂ ನಾಮ
ಸಪ್ತಾಶೀತಿತಮೋಽಧ್ಯಾಯಃ

---

೬೯. ಎಲೈ ನಾರದ, ಅಹಲ್ಯೆಯು ಪುನಃ ಪೂರ್ವರೂಪವನ್ನು ಪಡೆದುದನ್ನೂ ಇಂದ್ರನಿಗೆ ಸಾವಿರ ಕಣ್ಣುಗಳಾದುದನ್ನೂ ನಾನೇ ನೋಡಿ ಆಶ್ಚರ್ಯಗೊಂಡಿರುವೆನು.

೭೦. ಅದುಮೊದಲುಗೊಂಡು ಅಹಲ್ಯೆಯು ನದಿಯಾಗಿ ಸೇರಿದ ಗೌತಮೀಸಂಗಮಸ್ಥಳಕ್ಕೆ ಅಹಲ್ಯಾಸಂಗಮತೀರ್ಥವೆಂದೂ, ಇಂದ್ರನು ಸ್ನಾನ ಮಾಡಿದ ಸ್ಥಳಕ್ಕೆ ಇಂದ್ರತೀರ್ಥವೆಂದೂ ಹೆಸರಾದುವು. ಆ ತೀರ್ಥಗಳು ಮಾನವರಿಗೆ ಸಕಲೇಷ್ಟಾರ್ಥಗಳನ್ನೂ ಉಂಟುಮಾಡುವುವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಅಹಲ್ಯಾಸಂಗಮ ಮತ್ತು ಇಂದ್ರತೀರ್ಥವರ್ಣನವೆಂಬ ಎಂಭತ್ತೇಳನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಹದಿನೆಂಟನೆಯ ಅಧ್ಯಾಯ

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಅಷ್ಟಾಶೀತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ತಸ್ಮಾದಪ್ಯಪರಂ ತೀರ್ಥಂ ಜನಸ್ಥಾನಮಿತಿ ಶ್ರುತಂ ।
ಚತುರ್ಯೋಜನವಿಸ್ತೀರ್ಣಂ ಸ್ಮರಣಾನ್ಮುಕ್ತಿದಂ ನೃಣಾಂ ॥ ೧ ॥

ವೈವಸ್ವತಾನ್ವಯೇ ಜಾತೋ ರಾಜಾಭೂಜ್ಜನಕಃ ಪುರಾ ।
ಸೋಽಪಾಂ ಪತೇಸ್ತು ತನುಜಾಮುಪಯೇಮೇ ಗುಣಾರ್ಣವಾಂ ॥ ೨ ॥

ಧರ್ಮಾರ್ಥಕಾಮಮೋಕ್ಷಾಣಾಂ ಜನಕೋ ಜನಕಾಂ ನೃಪಃ ।
ಅನುರೂಪಗುಣತ್ವಾಚ್ಚ ತಸ್ಯ ಭಾರ್ಯಾ ಗುಣಾರ್ಣವಾ ॥ ೩ ॥

ಎಂಭತ್ತೆಂಟನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಜನಸ್ಥಾನವೆಂಬ ಮತ್ತೊಂದು ತೀರ್ಥವಿರುವುದು. ಅದು ನಾಲ್ಕುಗಾವುದ ವಿಸ್ತಾರವಾಗಿರುವುದು. ಆ ತೀರ್ಥವನ್ನು ಸ್ಮರಿಸಿದ ಮಾತ್ರಕ್ಕೆ ಮುಕ್ತಿಯುಂಟಾಗುವುದು.

೨. ಹಿಂದೆ ಸೂರ್ಯವಂಶದಲ್ಲಿ ಜನಿಸಿದ ಜನಕನೆಂಬ ರಾಜನಿದ್ದನು. ಆ ರಾಜನು ವರುಣನ ಮಗಳಾದ ಗುಣಾರ್ಣವಾದೇವಿಯನ್ನು ಮದುವೆಯಾಗಿದ್ದನು.

೩. ಆ ಗುಣಾರ್ಣವಾದೇವಿಯು ಜನಕನ ಧರ್ಮಾರ್ಥಕಾಮಮೋಕ್ಷಗಳಿಗೆ ಸಹಾಯಕಳಾಗಿದ್ದಳು. ಹೆಸರಿಗೆ ತಕ್ಕಂತೆ ಅನುರೂಪಗುಣಗಳುಳ್ಳವಳಾದುದರಿಂದ ಅವಳು ನಿಜವಾಗಿಯೂ ಗುಣಾರ್ಣವಳಾಗಿದ್ದಳು.

ಯಾಜ್ಞವಲ್ಕ್ಯಶ್ಚ ವಿಪ್ರೇಂದ್ರಸ್ತಸ್ಯ ರಾಜ್ಞಃ ಪುರೋಹಿತಃ ।
ತಮಪೃಚ್ಛನ್ನೃಪಶ್ರೇಷ್ಠೋ ಯಾಜ್ಞವಲ್ಕ್ಯಂ ಪುರೋಹಿತಂ ॥ ೪ ॥

॥ ಜನಕ ಉವಾಚ ॥

ಭುಕ್ತಿಮುಕ್ತೀ ಉಭೇ ಶ್ರೇಷ್ಠೇ ನಿರ್ಣೀತೇ ಮುನಿಸತ್ತಮೈಃ ।
ದಾಸೀದಾಸೇಭತುರಗರಥಾದ್ಯೈರ್ಭುಕ್ತಿರುತ್ತಮಾ ॥ ೫ ॥

ಕಿಂತ್ವಂತವಿರಸಾ ಭುಕ್ತಿರ್ಮುಕ್ತಿರೇಕಾ ನಿರತ್ಯಯಾ ।
ಭುಕ್ತೇರ್ಮುಕ್ತಿಃ ಶ್ರೇಷ್ಠತಮಾ ಭುಕ್ತ್ಯಾ ಮುಕ್ತಿಂ ಕಥಂ ವ್ರಜೇತ್ ॥ ೬ ॥

ಸರ್ವಸಂಗಪರಿತ್ಯಾಗಾನ್ಮುಕ್ತಿಪ್ರಾಪ್ತಿಃ ಸುದುಃಖತಃ ।
ತದ್ಬ್ರೂಹಿ ದ್ವಿಜಶಾರ್ದೂಲ ಸುಖಾನ್ಮುಕ್ತಿಃ ಕಥಂ ಭವೇತ್ ॥ ೭ ॥

---

೪. ಮಹಾಜ್ಞಾನಿಯಾದ ಯಾಜ್ಞವಲ್ಕ್ಯಮುನಿಯು ಆ ರಾಜನ ಪುರೋಹಿತನು. ಒಂದುದಿನ ಜನಕರಾಜನು ಯಾಜ್ಞವಲ್ಕ್ಯನನ್ನು ಕುರಿತು,

೫. ಓ ಯಾಜ್ಞವಲ್ಕ್ಯ, ಭೋಗಮೋಕ್ಷಗಳೆರಡೂ ಶ್ರೇಷ್ಠವಾದುವುಗಳೆಂದು ಜ್ಞಾನಿಗಳಾದ ಮುನಿಗಳು ನಿಶ್ಚಯಿಸಿರುವರು. ಸೇವಕಸೇವಕಿಯರು, ಸುಂದರಸ್ತ್ರೀಯರು, ಆನೆ, ಕುದುರೆ, ರಥ, ಮೊದಲಾದುವುಗಳಿಂದ ಉತ್ತಮ ಭೋಗವು ಲಭಿಸುವುದು.

೬. ಆದರೆ ಭೋಗವು ಸ್ಥಿರವಾದುದಲ್ಲ. ಮುಕ್ತಿಯೇ ಸ್ಥಿರವಾದುದು, ಭೋಗಕ್ಕಿಂತ ಶ್ರೇಷ್ಠವಾದುದು. ಆದರೆ ಭೋಗದಿಂದ ಮುಕ್ತಿಯು ಲಭಿಸುವುದು ಹೇಗೆ ?

೭. ಸಂಸಾರಸಂಗವೆಲ್ಲವನ್ನೂ ಬಿಟ್ಟು ಮಹಾಪ್ರಯಾಸದಿಂದ ಮುಕ್ತಿಯನ್ನು ಪಡೆಯಬೇಕಾಗಿದೆಯಷ್ಟೆ ? ಹೀಗಿರುವಲ್ಲಿ ಸುಖಾನುಭವದಿಂದ ಮುಕ್ತಿಯನ್ನು ಪಡೆಯಲು ಸಾಧ್ಯವೇ ? ಅದನ್ನು ಹೇಳಿನಲು,

॥ ಯಾಜ್ಞವಲ್ಕ್ಯ ಉವಾಚ ॥

ಅಪಾಂಪತಿಸ್ತವ ಗುರುಃ ಶ್ವಶುರಃ ಪ್ರಿಯಕೃತ್ತಥಾ ।
ತಂ ಗತ್ವಾ ಪೃಚ್ಛ ನೃಪತೇ ಉಪದೇಕ್ಷ್ಯತಿ ತೇ ಹಿತಂ ॥ ೮ ॥

ಯಾಜ್ಞವಲ್ಕ್ಯಶ್ಚ ಜನಕೋ ರಾಜಾನಂ ವರುಣಂ ತದಾ ।
ಗತ್ವಾ ಚೋಚತುರವ್ಯಗ್ರೌ ಮುಕ್ತಿಮಾರ್ಗಂ ಯಥಾಕ್ರಮಂ ॥ ೯ ॥

॥ ವರುಣ ಉವಾಚ ॥

ದ್ವಿಧಾ ತು ಸಂಸ್ಥಿತಾ ಮುಕ್ತಿಃ ಕರ್ಮದ್ವಾರೇಽಸ್ಯಕರ್ಮಣಿ ।
ವೇದೇ ಚ ನಿಶ್ಚಿತೋ ಮಾರ್ಗಃ ಕರ್ಮ ಜ್ಯಾಯೋ ಹ್ಯಕರ್ಮಣಃ ॥ ೧೦ ॥

ಸರ್ವಂ ಚ ಕರ್ಮಣಾ ಬದ್ಧಂ ಪುರುಷಾರ್ಥಚತುಷ್ಟಯಂ ।
ಅಕರ್ಮಣೈವಾಪ್ಯತ ಇತಿ ಮುಕ್ತಿಮಾರ್ಗೋ ವೃಥೋಚ್ಯತೇ ॥ ೧೧ ॥

---

೮. ಯಾಜ್ಞವಲ್ಕ್ಯಮುನಿ ಇಂತೆಂದನು—ವರುಣನು ನಿನಗೆ ತಕ್ಕ ಗುರುವು. ಅದಲ್ಲದೆ ಅವನು ನಿನಗೆ ಮಾವನಾದುದರಿಂದ ನಿನಗೆ ಹಿತವನ್ನೇ ಬಯಸುವವನು. ಅವನನ್ನು ಹೋಗಿ ಕೇಳು, ನಿನಗೆ ಅದರ ರಹಸ್ಯವನ್ನು ಉಪದೇಶಿಸುವನು ಎಂದನು.

೯. ಆಮೇಲೆ ಯಾಜ್ಞವಲ್ಕ್ಯಜನಕರು ವರುಣನ ಬಳಿಗೆ ಹೋಗಿ ವಿನಯದಿಂದ ಮುಕ್ತಿಮಾರ್ಗವನ್ನು ಕುರಿತು ಪ್ರಶ್ನಿಸಲು,

೧೦. ವರುಣನು ಹೇಳಿದನು—ಮುಕ್ತಿಯು ಕರ್ಮಮಾರ್ಗದಿಂದಲೂ ಲಭಿಸುವುದು. ಸನ್ಯಾಸಮಾರ್ಗದಿಂದಲೂ ಲಭಿಸುವುದು, ಆದರೆ ಕರ್ಮರಹಿತ ಮಾರ್ಗಕ್ಕಿಂತಲೂ ಕರ್ಮಮಾರ್ಗವನ್ನನುಸರಿಸುವುದೇ ಉತ್ತಮವಾದುದು-

೧೧. ನಾಲ್ಕು ಪುರುಷಾರ್ಥಗಳೂ ಕರ್ಮಗಳಿಂದ ಕೂಡಿರುವುವು. ಕೇವಲ ಕರ್ಮವನ್ನು ಬಿಡುವುದರಿಂದ ಮಾತ್ರವೇ ಮುಕ್ತಿಯು ಲಭಿಸುವುದೆಂಬುದು ಸುಳ್ಳುಮಾತು.

ಕರ್ಮಣಾ ಸರ್ವಧಾನ್ಯಾನಿ ಸೇತ್ಸ್ಯಂತಿ ನೃಪಸತ್ತಮ ।
ತಸ್ಮಾತ್ಸರ್ವಾತ್ಮನಾ ಕರ್ಮ ಕರ್ತವ್ಯಂ ವೈದಿಕಂ ನೃಭಿಃ ॥ ೧೨ ॥

ತೇನ ಭುಕ್ತಿಂ ಚ ಮುಕ್ತಿಂ ಚ ಪ್ರಾಪ್ನುವಂತೀಹ ಮಾನವಾಃ ।
ಅಕರ್ಮಣಃ ಕರ್ಮ ಪುಣ್ಯಂ ಕರ್ಮ ಚಾಪ್ಯಾಶ್ರಮೇಷು ಚ ॥ ೧೩ ॥

ಜಾತ್ಯಾಶ್ರಿತಂ ಚ ರಾಜೇಂದ್ರ ತತ್ರಾಪಿ ಶೃಣು ಧರ್ಮವಿತ್ ।
ಆಶ್ರಮಾಣಿ ಚ ಚತ್ವಾರಿ ಕರ್ಮದ್ವಾರಾಣಿ ಮಾನದ ॥ ೧೪ ॥

ಚತುರ್ಣಾಮಾಶ್ರಮಾಣಾಂ ಚ ಗಾರ್ಹಸ್ಥ್ಯಂ ಪುಣ್ಯದಂ ಸ್ಮೃತಂ ।
ತಸ್ಮಾದ್ಭುಕ್ತಿಶ್ಚ ಮುಕ್ತಿಶ್ಚ ಭವತೀತಿ ಮತಿರ್ಮಮ ॥ ೧೫ ॥

॥ ಬ್ರಹ್ಮೋವಾಚ ॥

ಏತಚ್ಛ್ರುತ್ವಾ ತು ಜನಕೋ ಯಾಜ್ಞವಲ್ಕ್ಯಶ್ಚ ಬುದ್ಧಿಮಾನ್ ।
ವರುಣಂ ಪೂಜಯಿತ್ವಾ ತು ಪುನರ್ವಚನಮೂಚತುಃ ॥ ೧೬ ॥

---

೧೨. ಎಲೈ ರಾಜನೇ, ಕರ್ಮದಿಂದಲೇ ಎಲ್ಲ ಕಾರ್ಯಗಳೂ ಸಿದ್ಧಿಸುವುವು. ಆದುದರಿಂದ ಮಾನವನು ವೈದಿಕಕರ್ಮವನ್ನು ತಪ್ಪದೆ ಮಾಡಬೇಕು.

೧೩. ಕರ್ಮದಿಂದ ಭೋಗಮೋಕ್ಷಗಳೆರಡೂ ಲಭಿಸುವುವು. ಕರ್ಮ ಮಾಡದಿರುವುದಕ್ಕಿಂತಲೂ ಕರ್ಮಮಾಡುವುದು ಪುಣ್ಯಕರವು. ಆ ಕರ್ಮವನ್ನೂ ಆಯಾ ಆಶ್ರಮಗಳಿಗೆ ವಿಹಿತವೆಂದು ಹೇಳಿರುವಂತೆ ಮಾಡಬೇಕು.

೧೪. ಆಶ್ರಮಗಳಲ್ಲಿಯೂ ಆಯಾಯ ಜಾತಿಗನುಸಾರವಾದ ಕರ್ಮವನ್ನು ಮಾಡಬೇಕು. ಕರ್ಮಕ್ಕೆ ಮಾರ್ಗವಾದ ಆಶ್ರಮಗಳು ನಾಲ್ಕು.

೧೫. ನಾಲ್ಕು ಆಶ್ರಮಗಳಲ್ಲಿ ಗೃಹಸ್ಥಾಶ್ರಮವೇ ಶ್ರೇಷ್ಠವಾದುದು. ಗೃಹಸ್ಥಾಶ್ರಮದಲ್ಲಿಯೇ ಭೋಗಮೋಕ್ಷಗಳೆರಡನ್ನೂ ಪಡೆಯಬಹುದು ಎಂದನು.

೧೬. ವರುಣನ ಆ ಉಪದೇಶವನ್ನು ಕೇಳಿ ಬುದ್ಧಿವಂತರಾದ ಜನಕ ಯಾಜ್ಞವಲ್ಕ್ಯರು ವರುಣನನ್ನು ಪೂಜಿಸಿ, ಮತ್ತೆ ಅವನನ್ನು ಕುರಿತು,

ಕೋ ದೇಶಃ ಕಿಂ ಚ ತೀರ್ಥಂ ಸ್ಯಾದ್ಭುಕ್ತಿಮುಕ್ತಿಪ್ರದಾಯಕಂ ।
ತದ್ವದಸ್ವ ಸುರಶ್ರೇಷ್ಠ ಸರ್ವಜ್ಞೋಽಸಿ ನಮೋಽಸ್ತು ತೇ ॥ ೧೭ ॥

॥ ವರುಣ ಉವಾಚ ॥

ಪೃಥಿವ್ಯಾಂ ಭಾರತಂ ವರ್ಷಂ ದಂಡಕಂ ತತ್ರ ಪುಣ್ಯದಂ ।
ತಸ್ಮಿನ್ ಕ್ಷೇತ್ರೇ ಕೃತಂ ಕರ್ಮ ಭುಕ್ತಿಮುಕ್ತಿಪ್ರದಂ ನೃಣಾಂ ॥ ೧೮ ॥

ತೀರ್ಥಾನಾಂ ಗೌತಮೀ ಗಂಗಾ ಶ್ರೇಷ್ಠಾ ಮುಕ್ತಿಪ್ರದಾ ನೃಣಾಂ ।
ತತ್ರ ಯಜ್ಞೇನ ದಾನೇನ ಭೋಗಾನ್ಮುಕ್ತಿಮವಾಪ್ಸ್ಯಸಿ ॥ ೧೯ ॥

॥ ಬ್ರಹ್ಮೋವಾಚ ॥

ಯಾಜ್ಞವಲ್ಕ್ಯಶ್ಚ ಜನಕೋ ವಾಚಂ ಶ್ರುತ್ವಾ ಹ್ಯಪಾಂ ಪತೇಃ ।
ವರುಣೇನ ಹ್ಯನುಜ್ಞಾತೌ ಸ್ವಪುರೀಂ ಜಗ್ಮತುಸ್ತದಾ ॥ ೨೦ ॥

---

೧೭. ಓ ದೇವಶ್ರೇಷ್ಠನೇ, ನಿನಗೆ ನಮಸ್ಕಾರವು. ಭೋಗಮೋಕ್ಷಗಳೆರಡನ್ನೂ ಉಂಟುಮಾಡುವ ದೇಶವಾವುದು ? ತೀರ್ಥವಾವುದು ? ಅದನ್ನು ತಿಳಿಸಬೇಕೆನಲು,

೧೮. ವರುಣನು ಹೇಳಿದನು—ಭೂಮಿಯಲ್ಲಿ ಭಾರತದೇಶವು ಪವಿತ್ರ ಕ್ಷೇತ್ರವು. ಅದರಲ್ಲಿಯೂ ದಂಡಕಾರಣ್ಯವು ಅತಿ ಶ್ರೇಷ್ಠವಾದ ಕ್ಷೇತ್ರವು. ಆ ಕ್ಷೇತ್ರದಲ್ಲಿ ಕರ್ಮವನ್ನು ಮಾಡಿದರೆ ಭೋಗಮೋಕ್ಷಗಳೆರಡೂ ಸಿದ್ಧಿಸುವುವು.

೧೯. ತೀರ್ಥಗಳಲ್ಲಿ ಗೌತಮೀನದಿಯು ಶ್ರೇಷ್ಠವಾದುದು, ಮುಕ್ತಿಪ್ರದವಾದುದು. ಆ ನದಿಯ ತೀರದಲ್ಲಿ ಯಾಗ ಮತ್ತು ದಾನಗಳನ್ನು ಮಾಡಿದರೆ ಭೋಗವೂ ಅದರಿಂದ ಮುಕ್ತಿಯೂ ಲಭಿಸುವುವು ಎಂದನು.

೨೦. ಯಾಜ್ಞವಲ್ಕ್ಯಜನಕರು ವರುಣನ ಉಪದೇಶವನ್ನು ಕೇಳಿ ಅವನ ಅನುಮತಿಯನ್ನು ಪಡೆದು ತಮ್ಮ ನಗರಕ್ಕೆ ಬಂದರು.

ಅಶ್ವಮೇಧಾದಿಕಂ ಕರ್ಮ ಚಕಾರ ಜನಕೋ ನೃಪಃ ।
ಯಾಜಯಾಮಾಸ ವಿಪ್ರೇಂದ್ರೋ ಯಾಜ್ಞವಲ್ಕ್ಯಶ್ಚ ತಂ ನೃಪಂ ॥ ೨೧ ॥

ಗಂಗಾತೀರಂ ಸಮಾಶ್ರಿತ್ಯ ಯಜ್ಞಾನ್ಮುಕ್ತಿಮವಾಪ ರಾಟ್ ।
ತಥಾ ಜನಕರಾಜಾನೋ ಬಹವಸ್ತತ್ರ ಕರ್ಮಣಾ ॥ ೨೨ ॥

ಮುಕ್ತಿಂ ಪ್ರಾಪುರ್ಮಹಾಭಾಗಾ ಗೌತಮ್ಯಾಶ್ಚ ಪ್ರಸಾದತಃ ।
ತತಃ ಪ್ರಭೃತಿ ತತ್ತೀರ್ಥಂ ಜನಸ್ಥಾನೇತಿ ವಿಶ್ರುತಂ ॥ ೨೩ ॥

ಜನಕಾನಾಂ ಯಜ್ಞಸದೋ ಜನಸ್ಥಾನಂ ಪ್ರಕೀರ್ತಿತಂ ।
ಚತುರ್ಯೋಜನವಿಸ್ತೀರ್ಣಂ ಸ್ಮರಣಾತ್ಸರ್ವಪಾಪನುತ್ ॥ ೨೪ ॥

---

೨೧. ಅಶ್ವಮೇಧ ಮೊದಲಾದ ಕರ್ಮಗಳನ್ನು ಜನಕರಾಜನು ಮಾಡಿದನು. ಯಾಜ್ಞವಲ್ಕ್ಯನು ಜನಕನಿಗೆ ಪುರೋಹಿತನಾಗಿ ಯಾಗಗಳನ್ನು ಮಾಡಿಸಿದನು.

೨೨. ಗೌತಮೀನದಿಯ ತೀರಕ್ಕೆ ಬಂದು ಅಲ್ಲಿ ಯಜ್ಞವನ್ನು ಮಾಡಿ ಜನಕನು ಮುಕ್ತಿಯನ್ನು ಪಡೆದನು. ಆಮೇಲೆ ಅನೇಕ ಜನಕರಾಜರು (ಎಂದರೆ ಆ ದೇಶದ ರಾಜರು) ಆ ಸ್ಥಳದಲ್ಲಿ ಯಾಗಗಳನ್ನು ಮಾಡಿ ಗೌತಮೀನದಿಯ ಪ್ರಭಾವದಿಂದ ಮುಕ್ತಿಯನ್ನು ಪಡೆದರು.

೨೩-೨೪. ಆ ಮೊದಲುಗೊಂಡು ಆ ತೀರ್ಥವು ಜನಸ್ಥಾನವೆಂದು ಪ್ರಸಿದ್ಧವಾಯಿತು. ಜನಕರಾಜರು ಅಲ್ಲಿ ಯಾಗಮಾಡಿದುದರಿಂದ ಅದಕ್ಕೆ ಜನಸ್ಥಾನವೆಂದು ಹೆಸರಾಯಿತು. ನಾಲ್ಕು ಗಾವುದ ವಿಸ್ತೀರ್ಣವಾಗಿರುವ ಆ ತೀರ್ಥವನ್ನು ಸ್ಮರಿಸಿದಮಾತ್ರಕ್ಕೆ ಪಾಪಗಳೆಲ್ಲವೂ ನಾಶವಾಗುವುವು.

ತತ್ರ ಸ್ನಾನೇನ ದಾನೇನ ಪಿತೃಣಾಂ ತರ್ಪಣೇನ ತು ।
ತೀರ್ಥಸ್ಯ ಸ್ಮರಣಾದ್ವಾಽಪಿ ಗಮನಾದ್ಭಕ್ತಿಸೇವನಾತ್ ॥ ೨೫ ॥

ಸರ್ವಾನ್ಕಾಮಾನವಾಪ್ನೋತಿ ಮುಕ್ತಿಂ ಚ ಸಮವಾಪ್ನುಯಾತ್ ॥ ೨೬ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಜನಸ್ಥಾನತೀರ್ಥವರ್ಣನಂ ನಾಮಾಷ್ಟಾಶೀತಿತಮೋಽಧ್ಯಾಯಃ

೨೫-೨೬. ಆ ಜನಸ್ಥಾನತೀರ್ಥದಲ್ಲಿ ಸ್ನಾನದಾನಗಳನ್ನೂ, ಪಿತೃತರ್ಪಣವನ್ನೂ ಮಾಡಿದರೆ ಭೋಗಮೋಕ್ಷಗಳೆರಡೂ ಲಭಿಸುವುವು. ಭಕ್ತಿಯಿಂದ ಆ ತೀರ್ಥಯಾತ್ರೆಯನ್ನು ಮಾಡಿದರೂ ಭೋಗಮೋಕ್ಷಗಳೆರಡೂ ಸಿದ್ಧಿಸುವುವು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಜನಸ್ಥಾನತೀರ್ಥವರ್ಣನವೆಂಬ ಎಂಭತ್ತೆಂಟನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಹತ್ತೊಂಭತ್ತನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಊನನವತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಅರುಣಾ ವರುಣಾ ಚೈವ ನದ್ಯೌ ಪುಣ್ಯತರೇ ಶುಭೇ ।
ತಯೋಶ್ಚ ಸಂಗಮಃ ಪುಣ್ಯೋ ಗಂಗಾಯಾಂ ಮುನಿಸತ್ತಮ ॥ ೧ ॥

ತದುತ್ಪತ್ತಿಂ ಶೃಣುಷ್ವೇಹ ಸರ್ವಪಾಪವಿನಾಶನಂ ।
ಕಶ್ಯಪಸ್ಯ ಸುತೋ ಜ್ಯೇಷ್ಠ ಆದಿತ್ಯೋ ಲೋಕವಿಶ್ರುತಃ ॥ ೨ ॥

ಎಂಭತ್ತೊಂಭತ್ತನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದಮುನಿ, ಅರುಣಾ ಮತ್ತು ವರುಣಾ ಎಂಬ ಗೌತಮಿಯ ಉಪನದಿಗಳು, ಪುಣ್ಯತಮವಾದುವುಗಳು ಮತ್ತು ಮಂಗಳಕರವಾದುವು. ಆ ಎರಡು ನದಿಗಳು ಗಂಗಾನದಿಯನ್ನು ಸೇರುವ ಸಂಗಮಸ್ಥಳವು ಅತ್ಯಂತ ಪುಣ್ಯತಮವಾದುದು.

೨. ಆ ನದಿಗಳ ಉತ್ಪತ್ತಿಕಥೆಯನ್ನು ಹೇಳುವೆನು ಅದನ್ನು ಕೇಳಿದರೆ ಪಾಪವೆಲ್ಲವೂ ನಾಶವಾಗುವುದು. ಲೋಕಪ್ರಸಿದ್ಧನಾದ ಸೂರ್ಯನು ಕಶ್ಯಪನ ಹಿರಿಯ ಮಗನು. ಅವನು ಮೂರು ಲೋಕಗಳಿಗೂ ಕಣ್ಣಿನಂತಿರುವನು. ಅವನ ಕಿರಣಗಳು ಬಹು ತೀಕ್ಷ್ಣವಾಗಿರುವುವು. ಏಳು ಕುದುರೆಗಳನ್ನು ಕಟ್ಟಿದ ರಥದಲ್ಲಿ ಅವನು ಸಂಚರಿಸುವನು. ಜನಗಳೆಲ್ಲರೂ ಅವನನ್ನು ಪೂಜಿಸುವರು.

ತ್ರೈಲೋಕ್ಯಚಕ್ಷುಸ್ತೀಕ್ಷ್ಣಾಂಶುಃ ಪಶ್ಚಾತ್ಪ್ರೋಕ್ತೋ ಲೋಕಪೂಜಿತಃ ।
ತಸ್ಯ ಪತ್ನೀ ಉಷಾ ಖ್ಯಾತಾ ತ್ವಾಷ್ಟ್ರೀ ತ್ರೈಲೋಕ್ಯಸುಂದರೀ ॥ ೩ ॥

ಭರ್ತುಃ ಪ್ರತಾಪತೀವ್ರತ್ವಮಸಹಂತೀ ಸುಮಧ್ಯಮಾ ।
ಚಿಂತಯಾಮಾಸ ಕಿಂ ಕೃತ್ಯಂ ಮಮ ಸ್ಯಾದಿತಿ ಭಾಮಿನೀ ॥ ೪ ॥

ತಸ್ಯಾಃ ಪುತ್ರೌ ಮಹಾಪ್ರಾಜ್ಞೌ ಮನುರ್ವೈವಸ್ವತೋ ಯಮಃ ।
ಯಮುನಾ ಚ ನದೀ ಪುಣ್ಯಾ ಶೃಣು ವಿಸ್ಮಯಕಾರಣಂ ॥ ೫ ॥

ಸಾಕರೋದಾತ್ಮನಶ್ಛಾಯಾಮಾತ್ಮರೂಪೇಣ ಯತ್ನತಃ ।
ತಾಮಬ್ರವೀತ್ತತಶ್ಛೋಷಾ ತ್ವಂ ಚ ಮತ್ಸದೃಶೀ ಭವ ॥ ೬ ॥

ಭರ್ತಾರಂ ತ್ವಮಪತ್ಯಾನಿ ಪಾಲಯಸ್ವ ಮಮಾಜ್ಞಯಾ ।
ಯಾವದಾಗಮನಂ ಮೇ ಸ್ಯಾತ್ಪತ್ಯುಸ್ತಾವತ್ಪ್ರಿಯಾ ಭವ ॥ ೭ ॥

೩–೪. ತ್ವಷ್ಟ್ರುಬ್ರಹ್ಮನ ಮಗಳೂ ಮಹಾಸುಂದರಿಯೂ ಆದ ಉಷಾದೇವಿಯು ಆ ಸೂರ್ಯನ ಹೆಂಡತಿಯು. ಕೃಶಾಂಗಿಯಾದ ಅವಳು ಗಂಡನ ಉಗ್ರತೇಜಸ್ಸನ್ನು ಸಹಿಸಲು ಅಶಕ್ತಳಾಗಿ ಈಗ ನಾನು ಏನುಮಾಡಲಿ? ಎಂದು ಚಿಂತಿಸುತ್ತಿದ್ದಳು.

೫. ಮಹಾಜ್ಞಾನಿಯಾದ ವೈವಸ್ವತಮನು ಮತ್ತು ಯಮ ಇವರು ಆ ಉಷಾದೇವಿಯ ಮಕ್ಕಳು, ಪುಣ್ಯಕರವಾದ ಯಮುನಾನದಿಯೂ ಅವಳಮಗಳು. ಎಲೈ ನಾರದ, ಮುಂದೆ ನಡೆದ ಆಶ್ಚರ್ಯಕರವಾದ ಸಂಗತಿಯನ್ನು ಗಮನವಿಟ್ಟು ಕೇಳು.

೬. ಆ ಉಷಾದೇವಿಯು ತನ್ನಂತೆಯೇ ರೂಪವುಳ್ಳ ಛಾಯಾದೇವಿಯನ್ನು ನಿರ್ಮಿಸಿ ಆ ಛಾಯಾದೇವಿಯನ್ನು ಕುರಿತು,

೭. ಎಲೌ ಛಾಯಾದೇವಿ, ನಾನು ತಿರುಗಿ ಬರುವವರೆಗೆ ನನ್ನ ಗಂಡನನ್ನೂ ಮಕ್ಕಳನ್ನೂ ನನ್ನಂತೆ ಕಾಪಾಡಬೇಕು. ಹೆಂಡತಿಯಂತೆ ನನ್ನ ಸ್ವಾಮಿಯನ್ನುಪಚರಿಸಬೇಕು. ಆದರೂ ಈ ರಹಸ್ಯವನ್ನು ಮಕ್ಕಳಿಗೂ ಸೂರ್ಯದೇವನಿಗೂ ಹೇಳಬಾರದು ಎನ್ನಲು,

ನಾಖ್ಯಾತವ್ಯಂ ತ್ವಯಾ ಕ್ವಾಪಿ ಅಪತ್ಯಾನಾಂ ತಥಾ ಪ್ರಿಯೇ ।
ತಥೇತ್ಯಾಹ ಚ ಸಾ ಛಾಯಾ ನಿರ್ಜಗಾಮ ಗೃಹಾದುಷಾ ॥ ೮ ॥

ಇತ್ಯುಕ್ತ್ವಾ ಸಾ ಜಗಾಮಾಶು ಶಾಂತಂ ರೂಪಮಭೀಪ್ಸತೀ ।
ಸಾ ಗತ್ವೋಷಾ ಗೃಹಂ ತ್ವಷ್ಟುಃ ಪಿತ್ರೇ ಸರ್ವಂ ನ್ಯವೇದಯತ್ ।
ತ್ವಷ್ಟಾಪಿ ಚಕಿತಃ ಪ್ರಾಹ ತಾಂ ಸುತಾಂ ಸುತವತ್ಸಲಃ ॥ ೯ ॥

॥ ತ್ವಷ್ಟೋವಾಚ ॥

ನೈತದ್ಯುಕ್ತಂ ಭರ್ತೃಮತ್ಯಾ ಯತ್ಸ್ವೈರೇಣ ಪ್ರವರ್ತನಂ ।
ಅಪತ್ಯಾನಾಂ ಕಥಂ ವೃತ್ತಿರ್ಭರ್ತುರ್ವಾ ಸವಿತುಸ್ತವ ।
ಬಿಭೇಮಿ ಭದ್ರೇ ಶಿಷ್ಟೋಽಹಂ ಭರ್ತುರ್ಗೇಹಂ ಪುನರ್ವ್ರಜ ॥ ೧೦ ॥

॥ ಬ್ರಹ್ಮೋವಾಚ ॥

ಏವಮುಕ್ತಾ ತು ಪಿತ್ರಾ ಸಾ ನೇತ್ಯುಕ್ತ್ವಾ ವೈ ಪುನಃ ಪುನಃ ।
ಉತ್ತರಂ ಚ ಕುರೋರ್ದೇಶಂ ಜಗಾಮ ತಪಸೇ ತ್ವರಾ ॥ ೧೧ ॥

---

೮. ಛಾಯೆಯು ಅದರಂತೆ ಒಪ್ಪಿಕೊಂಡಳು. ಉಷೆಯು ಹಾಗೆ ಹೇಳಿ ಸೂರ್ಯನ ರೂಪವನ್ನು ಶಾಂತವನ್ನಾಗಿ ಮಾಡಲು ಏನು ಮಾಡಬೇಕೆಂದು ಚಿಂತಿಸುತ್ತಾ ಮನೆಯಿಂದ ಹೊರಹೊರಟು,

೯. ತ್ವಷ್ಟ್ರುಬ್ರಹ್ಮನ ಮನೆಗೆ ಹೋಗಿ ತನ್ನ ತಂದೆಗೆ ಸಮಾಚಾರವೆಲ್ಲ ವನ್ನೂ ಹೇಳಿದಳು. ಮಗಳಲ್ಲಿ ತುಂಬಾ ಪ್ರೀತಿಯುಳ್ಳ ಆ ವಿಶ್ವಕರ್ಮನು ಆಶ್ಚರ್ಯಗೊಂಡು,

೧೦. ಎಲೌ ಮಗಳೇ, ಇದು ಯೋಗ್ಯವಲ್ಲ. ಅನುರೂಪನಾದ ಪತಿ ಯನ್ನು ಪಡೆದ ಸ್ತ್ರೀಯು ಹೀಗೆ ಸ್ವೇಚ್ಛೆಯಾಗಿ ಪ್ರವರ್ತಿಸಬಾರದು. ನೀನು ಹೀಗೆ ಹೊರಟುಬಂದರೆ ನಿನ್ನ ಮಕ್ಕಳ ಗತಿಯೇನು? ಗಂಡನ ಜೀವನವು ಹೇಗೆ ನಡೆದೀತು? ಎಲೌ ಮಗಳೆ, ನಾನು ಆರ್ಯಮಾರ್ಗವನ್ನು ಅನುಸರಿ ಸುವ ಶಿಷ್ಟನು. ಆದುದುರಿಂದ ಇಂತಹ ಸ್ವೇಚ್ಛಾಪ್ರವೃತ್ತಿಗೆ ಹೆದರುವೆನು. ಈಗ ನೀನು ಗಂಡನ ಮನೆಗೇ ಹಿಂದಕ್ಕೆ ಹೋಗು ಎಂದನು.

೧೧. ಹೀಗೆ ತಂದೆಯು ಹೇಳಿದರೂ ಉಷಾದೇವಿಯು ಅದನ್ನು ಕೇಳದೆ ತಪಸ್ಸನ್ನು ಮಾಡಲು ಉತ್ತರ ಕುರುದೇಶಕ್ಕೆ ಹೊರಟುಹೋಗಿ

ತತ್ರ ತೇಪೇ ತಪಸ್ತೀವ್ರಂ ವಡವಾರೂಪಧಾರಿಣೀ ।
ದುಷ್ಪ್ರೇಕ್ಷಂ ತಂ ಸ್ವಕಂ ಕಾಂತಂ ಧ್ಯಾಯಂತೀ ನಿಶ್ಚಲಾ ಉಷಾ ॥ ೧೨ ॥

ಏತಸ್ಮಿನ್ನಂತರೇ ತಾತ ಛಾಯಾ ಚೋಷಾಸ್ವರೂಪಿಣೀ ।
ಪತ್ಯೌ ಸಾ ವರ್ತಯಾಮಾಸ ಅಪತ್ಯಾನ್ಯಥ ಜಜ್ಞಿರೇ ॥ ೧೩ ॥

ಸಾವರ್ಣಿಶ್ಚ ಶನಿಶ್ಚೈವ ವಿಷ್ಟಿರ್ಯಾ ದುಷ್ಟಕನ್ಯಕಾ ।
ಸಾ ಛಾಯಾ ವರ್ತಯಾಮಾಸ ವೈಷಮ್ಯೇಣೈವ ನಿತ್ಯಶಃ ॥ ೧೪ ॥

ಸ್ವೇಷ್ವಪತ್ಯೇಷು ಚೋಷಾಯಾ ಯಮಸ್ತತ್ರ ಚುಕೋಪ ಹ ।
ವೈಷಮ್ಯೇಣಾಥ ವರ್ತಂತೀಂ ಛಾಯಾಂ ತಾಂ ಮಾತರಂ ತದಾ ॥ ೧೫ ॥

ತಾಡಯಾಮಾಸ ಪಾದೇನ ದಕ್ಷಿಣಾಶಾಪತಿರ್ಯಮಃ ।
ಪುತ್ರದೌರ್ಜನ್ಯಸಂಕ್ಷೋಭಾಚ್ಛಾಯಾ ವೈವಸ್ವತಂ ಯಮಂ ॥ ೧೬ ॥

---

೧೨. ಅಲ್ಲಿ ವಡವಾ (ಕುದುರೆಯ) ರೂಪವನ್ನು ಧರಿಸಿ ಮಹಾತೇಜಸ್ವಿಯಾದ ತನ್ನ ಪತಿಯನ್ನು ಧ್ಯಾನಿಸುತ್ತಾ ಏಕಾಗ್ರತೆಯಿಂದ ತಪಸ್ಸನ್ನಾಚರಿಸುತ್ತಿದ್ದಳು.

೧೩. ಇತ್ತ ಛಾಯಾದೇವಿಯು ಉಷಾದೇವಿಯ ರೂಪದಿಂದ ಸೂರ್ಯನನ್ನು ಸೇವಿಸುತ್ತಿದ್ದಳು. ಅವಳಲ್ಲಿ ಸಾವರ್ಣಿ, ಶನಿಗಳೆಂಬೀರ್ವರು ಮಕ್ಕಳು ಜನಿಸಿದರು. ವಿಷ್ಟಿ (ಭದ್ರಾ) ಯೆಂಬ ದುಷ್ಟಕನ್ಯೆಯೂ ಜನಿಸಿದಳು.

೧೪. ಆ ಛಾಯಾದೇವಿಯು ತನ್ನ ಸ್ವಂತ ಮಕ್ಕಳಲ್ಲಿ ಮಾತ್ರ ಹೆಚ್ಚಾದ ಪ್ರೀತಿಯನ್ನಿಟ್ಟು ಉಷಾದೇವಿಯ ಮಕ್ಕಳಲ್ಲಿ ಭೇದವನ್ನೆಣಿಸತೊಡಗಿದಳು. ಯಮನಿಗೆ ಇದು ಸಹಿಸಲಿಲ್ಲ.

೧೫. ಭೇದನನ್ನೆಣಿಸುವ ತನ್ನ ತಾಯಿಯನ್ನು ದಕ್ಷಿಣದಿಕ್ಕಿಗೆ ಪತಿಯಾದ ಯಮನು ಕೋಪದಿಂದ ಕಾಲಿನಿಂದ ಒದ್ದನು.

೧೬. ಪುತ್ರನ ಅಂತಹ ದುಷ್ಟತನದಿಂದ ಕೋಪಗೊಂಡು ಛಾಯಾದೇವಿಯು ಎಲೈ ಮೂರ್ಖ, ನನ್ನಪ್ಪಣೆಯಂತೆ ನಿನ್ನ ಕಾಲು ಚೂರು ಚೂರಾಗಲಿ ಎಂದು ಶಪಿಸಿದಳು.

ಶಶಾಪ ಪಾಪ ಶೇ ಪಾದೋ ವಿಶೀರ್ಯತು ಮಮಾಜ್ಞಯಾ ।
ವಿಶೀರ್ಣಚರಣೋ ದುಃಖಾದ್ರುದನ್ನಿತರಮಭ್ಯಗಾತ್ ।
ಸವಿತ್ರೇ ತಂ ತು ವೃತ್ತಾಂತಂ ನ್ಯವೇದಯದಶೇಷತಃ ॥ ೧೭ ॥

॥ ಯಮ ಉವಾಚ ॥

ನೇಯಂ ಮಾತಾ ಸುರಶ್ರೇಷ್ಠ ಯಯಾ ಶಪ್ತೋಽಹಮೀದೃಶಃ ।
ಅಪತ್ಯೇಷು ವಿರುದ್ಧೇಷು ಜನನೀ ನೈವ ಕುಪ್ಯತೇ ॥ ೧೮ ॥

ಯದ್ಬಾಲ್ಯಾದಬ್ರವಂ ಕಿಂಚಿದಥವಾ ದುಷ್ಕೃತಂ ಕೃತಂ ।
ನೈವ ಕುಪ್ಯತಿ ಸಾ ಮಾತಾ ತಸ್ಮಾನ್ನೇಯಂ ಮಮಾಂಬಿಕಾ ॥ ೧೯ ॥

ಯದಪತ್ಯಕೃತಂ ಕಿಂಚಿತ್ಸಾಧ್ವಸಾಧು ಯಥಾ ತಥಾ ।
ಮಾತ್ಯಸ್ಯಾಂ ಸರ್ವಮಪ್ಯೇತತ್ತಸ್ಮಾನ್ಮಾತೇತಿ ಗೀಯತೇ ॥ ೨೦ ॥

---

೧೭. ಮಾತೆಯ ಶಾಪದಿಂದ ಕಾಲುಗಳು ಹೋಗಲು ಯಮನು ಅಳುತ್ತಾ ತಂದೆಯಾದ ಸೂರ್ಯನ ಬಳಿಗೆ ಬಂದು ಅವನಿಗೆ ನಡೆದ ಸಮಾಚಾರವೆಲ್ಲವನ್ನೂ ತಿಳಿಸಿದನು.

೧೮. ಓ ದೇವೋತ್ತಮ, ಮಗನಾದ ನನ್ನನ್ನು ಹೀಗೆ ಶಪಿಸಿದ ಇವಳು ನಮ್ಮ ತಾಯಿಯಲ್ಲ. ಮಕ್ಕಳು ಎಷ್ಟೇ ದುರಾಚಾರಿಗಳಾಗಿದ್ದರೂ ತಾಯಿಯಾದವಳು ಹೀಗೆ ಕೋಪಮಾಡಿಕೊಳ್ಳುವುದಿಲ್ಲ.

೧೯. ಹಿಂತೆ ನನ್ನ ತಾಯಿಯು —ನಾವು ಹುಡುಗತನದಿಂದ ಏನನ್ನು ಹೇಳಿದರೂ, ಕೆಟ್ಟ ಚೇಷ್ಟೆಯನ್ನು ಮಾಡಿದರೂ ಕೋಪಗೊಳ್ಳುತ್ತಿರಲಿಲ್ಲ. ಆದುದರಿಂದ ಇವಳು ನಮ್ಮ ತಾಯಿಯಲ್ಲ.

೨೦. ಮಕ್ಕಳು ಒಳ್ಳೆಯದನ್ನೇ ಮಾಡಲಿ, ಕೆಟ್ಟದ್ದನ್ನೇ ಮಾಡಲಿ, ಎಲ್ಲವೂ ತಾಯಿಗೆ ಪ್ರೀತಿಯಿಂದ ಸಮ್ಮತವಾಗುವುವು. ಕೆಟ್ಟಕೆಲಸಮಾಡಿದರೂ ಕೋಪಿಸಿಕೊಳ್ಳುವುದಿಲ್ಲ. ಈ ಗುಣವಿರುವವರೇ ನಿಜವಾದ ಮಾತೆಯರು ಎಂದು ತಿಳಿದವರು ಹೇಳಿರುವರು.

ಪ್ರಧಕ್ಷ್ಯಂತೀವ ಮಾಂ ತಾತ ನಿತ್ಯಂ ಪಶ್ಯತಿ ಚಕ್ಷುಷಾ ।
ವಕ್ಯಗ್ನಿಕಾಲಸದೃಶಾ ವಾಚಾ ನೇಯಂ ಮದಂಬಿಕಾ ॥ ೨೧ ॥

॥ ಬ್ರಹ್ಮೋವಾಚ ॥

ತತ್ಪುತ್ರವಚನಂ ಶ್ರುತ್ವಾ ಸವಿತಾಚಿಂತಯತ್ತತಃ ।
ಇಯಂ ಛಾಯಾ ನಾಸ್ಯ ಮಾತಾ ಉಷಾ ಮಾತಾ ತು ಸಾನ್ಯತಃ ॥ ೨೨ ॥

ಮಮ ಶಾಂತಿಮಭೀಪ್ಸಂತೀ ದೇಶೇಽನ್ಯಸ್ಮಿಂಸ್ತಪೋರತಾ ।
ಉತ್ತರೇ ಚ ಕುರೌ ತ್ವಾಷ್ಟ್ರೀ ವಡವಾರೂಪಧಾರಿಣೀ ॥ ೨೩ ॥

ತತ್ರಾಸ್ತೇ ಸಾ ಇತಿ ಜ್ಞಾತ್ವಾ ಜಗಾಮೋಶೋ ದಿವಾಕರಃ ।
ಯತ್ರ ಸಾ ವರ್ತತೇ ಕಾಂತಾ ಅಶ್ವರೂಪಃ ಸ್ವಯಂ ತದಾ ॥ ೨೪ ॥

ತಾಂ ದೃಷ್ಟ್ವಾ ವಡವಾರೂಪಾಂ ಪರ್ಯಧಾವದ್ಧಯಾಕೃತಿಃ ।
ಕಾಮಾತುರಂ ಹಯಂ ದೃಷ್ಟ್ವಾ ಶ್ರುತ್ವಾ ವೈ ಹೇಷಿತಸ್ವನಂ ॥ ೨೫ ॥

---

೨೧. ಓ ತಂದೆ, ಇವಳು ನನ್ನನ್ನು ನಿತ್ಯವೂ ಸುಟ್ಟುಬಿಡುವಂತೆ ಕ್ರೂರವಾದ ದೃಷ್ಟಿಯಿಂದ ನೋಡುವಳು. ಅಗ್ನಿಯಂತೆ ಕಠಿನವಾದ ಮಾತನ್ನಾಡುವಳು. ಇವಳು ನಮ್ಮ ತಾಯಿಯೇ ಅಲ್ಲ ಎಂದನು.

೨೨. ಮಗನ ಆ ಮಾತನ್ನು ಕೇಳಿ ಸೂರ್ಯನು ಜ್ಞಾನದೃಷ್ಟಿಯಿಂದ ಎಲ್ಲವನ್ನೂ ತಿಳಿದು ಇವಳು ಉಷೆಯ ಪ್ರತಿಕೃತಿಯಾದ ಛಾಯೆಯು, ಯಮನ ತಾಯಿಯಾದ ಉಷಾದೇವಿಯಲ್ಲ. ಆ ಉಷೆಯು ಈಗಿಲ್ಲಿರುವುದಿಲ್ಲ.

೨೩-೨೪. ನನಗೆ ಶಾಂತಸ್ವಭಾವವು ಉಂಟಾಗಲೆಂದು ಬಯಸಿ, ಆ ಉಷೆಯು ಇಲ್ಲಿಂದ ಹೊರಟು ಉತ್ತರಕುರುದೇಶದಲ್ಲಿ ವಡವಾ [ಹೆಣ್ಣು ಕುದುರೆಯ] ರೂಪವನ್ನು ಧರಿಸಿ ತಪಸ್ಸನ್ನಾಚರಿಸುತ್ತಿರುವಳು, ಹೀಗೆಂದು ತಿಳಿದು ಸೂರ್ಯನು ಆ ಉಷಾದೇವಿಯಬಳಿಗೆ ಗಂಡುಕುದುರೆಯ ವೇಷವನ್ನು ತಾಳಿ ಬಂದನು.

೨೫. ಹೆಣ್ಣುಕುದುರೆಯ ರೂಪದಲ್ಲಿದ್ದ ಆ ತನ್ನ ಪ್ರಿಯಪತ್ನಿಯನ್ನು ನೋಡಿ ಗಂಡುಕುದುರೆಯ ವೇಷವನ್ನು ತಳೆದಿದ್ದ ಸೂರ್ಯನು ಕಾಮುಕದೃಷ್ಟಿಯಿಂದ ಅವಳನ್ನು ಅಟ್ಟಿಸಿಕೊಂಡು ಹೋದನು.

ಉಷಾ ಪತಿವ್ರತೋಪೇತಾ ಪತಿಧ್ಯಾನಪರಾಯಣಾ ।
ಹಯಧರ್ಷಣಸಂಭೀತಾ ಕೋ ನ್ವಯಂ ಚೇತ್ಯಜಾನತೀ ॥ ೨೬ ॥

ಅಪಲಾಯತ್ತ್ವತೌ ಪ್ರಾಪ್ತೇ ದಕ್ಷಿಣಾಭಿಮುಖೀ ತ್ವರಾ ।
ಕೋ ನು ಮೇ ರಕ್ಷಕೋಽತ್ರ ಸ್ಯಾದೃಷಯೋ ವಾಥವಾ ಸುರಾಃ ॥ ೨೭ ॥

ಧಾವಂತೀಂ ತಾಂ ಪ್ರಿಯಾಮಶ್ವಾಮಶ್ವರೂಪಧರಃ ಸ್ವಯಂ ।
ಪರ್ಯಧಾವದ್ಯತೋ ಯಾತಿ ಉಷಾ ಭಾನುಸ್ತತಸ್ತತಃ ॥ ೨೮ ॥

ಸ್ಮರಗ್ರಹವಶೇ ಜಾತಃ ಕೋ ದುಶ್ಚೇಷ್ಟಂ ನ ಚೇಷ್ಟತೇ ।
ಭಾಗೀರಥೀಂ ನದೀಶ್ಚಾನ್ಯಾ ವನಾನ್ಯುಪವನಾನಿ ಚ ॥ ೨೯ ॥

೨೬-೨೭. ಕಾಮಾತುರನಾಗಿ ಕೆನೆಯುತ್ತಾ ಬರುತ್ತಿರುವ ಆ ಗಂಡು ಕುದುರೆಯನ್ನು ನೋಡಿ ಅವನು ತನ್ನ ಪತಿಯೆಂದ ತಿಳಿಯದೆ ವಡವಾರೂಪಳಾದ ಉಷಾದೇವಿಯು ಪತಿವ್ರತೆಯಾಗಿದ್ದು ಪತಿಯನ್ನೇ ಧ್ಯಾನಿಸುತ್ತಿದ್ದುದರಿಂದ ಈ ಕುದುರೆಯಿಂದ ತನ್ನ ಪಾತಿವ್ರತ್ಯಕ್ಕೆ ಭಂಗವೆಲ್ಲಿ ಬರುವುದೋ ಎಂಬ ಹೆದರಿಕೆಯಿಂದ ಈಗ ನನ್ನನ್ನು ರಕ್ಷಿಸುವವರಾರು? ಋಷಿಗಳಾಗಲೀ ದೇವತೆಗಳಾಗಲೀ ರಕ್ಷಿಸಬಲ್ಲರೇ? ಎಂದು ಚಿಂತಿಸುತ್ತಾ ದಕ್ಷಿಣದಿಕ್ಕಿಗೆ ಓಡಿದಳು.

೨೮. ಅಶ್ವರೂಪದಿಂದ ಓಡುತ್ತಲಿರುವ ಆ ತನ್ನ ಪ್ರಿಯೆಯನ್ನು ಅಶ್ವರೂಪಧಾರಿಯಾದ ಸೂರ್ಯನು ಅವಳು ಹೋದೆಡೆಯಲ್ಲೆಲ್ಲಾ ಹಿಂಬಾಲಿಸಿ ಅಟ್ಟಿಸಿಕೊಂಡು ಹೋದನು. ಕಾಮನ ಬಲೆಗೆ ಬಿದ್ದವರು ಮಾಡಬಾರದುದನ್ನು ಮಾಡುವರಷ್ಟೆ?

೨೯. ಹೀಗೆ ಆ ಉಷಾ ಮತ್ತು ಸೂರ್ಯರು ಒಬ್ಬರನ್ನೊಬ್ಬರು ಅಟ್ಟಿಸಿಕೊಂಡು ಹೋಗುತ್ತಾ ಭಾಗೀರಥೀನದೀ ಮೊದಲಾದ ನದೀತೀರಗಳು, ಕಾಡು ಮೇಡುಗಳು, ನರ್ಮದಾನದಿ, ವಿಂಧ್ಯಗಿರಿ ಇವೆಲ್ಲವನ್ನೂ ಸುತ್ತುತ್ತಾ ದಕ್ಷಿಣ ದಿಕ್ಕಿನಲ್ಲಿ ಓಡಾಡುತ್ತಿದ್ದರು.

ನರ್ಮದಾಂ ಚಾಥ ವಿಂಧ್ಯಂ ಚ ದಕ್ಷಿಣಾಭಿಮುಖಾವ್ರಭೌ ।
ಅತಿಕ್ರಮ್ಯ ಭಯೋದ್ವಿಗ್ನಾ ತ್ವಾಷ್ಟ್ರ್ಯಭ್ಯಗಾಚ್ಚ ಗೌತಮೀಂ ॥ ೩೦ ॥

ತ್ರಾತಾರಃ ಸಂತಿ ಮುನಯೋ ಜನಸ್ಥಾನ ಇತಿ ಶ್ರುತಂ ।
ಋಷೀಣಾಮಾಶ್ರಮಂ ಸಾಶ್ವಾ ಪ್ರಪಿಷ್ವಾ ಗೌತಮೀಂ ತಥಾ ॥ ೩೧ ॥

ಅನುಪ್ರಾಪ್ತಸ್ತಥಾ ಚಾಶ್ವೋ ಭಾನುಸ್ತದ್ರೂಪವಾಂಸ್ತತಃ ।
ಅಶ್ವಂ ನಿವಾರಯಾಮಾಸುರ್ಜನಸ್ಥಾ ಮುನಿದಾರಕಾಃ ।
ತತಃ ಕೋಪಾದೃಷೀಂಸ್ತಾಂಶ್ಚ ಶಶಾಪೋಷಾಪತಿಃ ಪ್ರಭುಃ ॥ ೩೨ ॥

॥ ಭಾನುರುವಾಚ ॥

ನಿವಾರಯಥ ಮಾಂ ಯಸ್ಮಾದ್ವಟಾ ಯೂಯಂ ಭವಿಷ್ಯಥ ॥ ೩೩ ॥

॥ ಬ್ರಹ್ಮೋವಾಚ ॥

ಜ್ಞಾನದೃಷ್ಟ್ಯಾ ತು ಮುನಯೋ ಮೇನಿರೇಽಶ್ವಮುಷಾಪತಿಂ ।
ಸ್ತುವಂತೋ ದೇವದೇವೇಶಂ ಭಾನುಂ ತಂ ಮುನಯೋ ಮುದಾ ॥ ೩೪ ॥

---

೩೦. ಭಯಗೊಂಡ ಆ ಉಷಾದೇವಿಯು ಅನೇಕಕಾಡುಮೇಡು ನದಿ ದುರ್ಗಗಳನ್ನು ಅಲೆದು ಗೌತಮೀನದಿಯನ್ನು ದಾಟಿ ಮುನಿಗಳಾದರೂ ರಕ್ಷಿಸುವರೆಂದು ನಂಬಿ ಜನಸ್ಥಾನವೆಂಬ ಋಷ್ಯಾಶ್ರಮಕ್ಕೆ ಬಂದಳು.

೩೧. ಆ ಋಷ್ಯಾಶ್ರಮವನ್ನು ಪ್ರವೇಶಿಸಲು ಅಶ್ವರೂಪನಾದ ಸೂರ್ಯನೂ ಸಹ ಗೌತಮೀನದಿಯನ್ನು ದಾಟಿ ಆ ಆಶ್ರಮಕ್ಕೆ ಬಂದನು.

೩೨. ಕುದುರೆರೂಪನಾದ ಸೂರ್ಯನನ್ನು ಜನಸ್ಥಾನದಲ್ಲಿದ್ದ ಮುನಿಗಳು ತಡೆದರು, ಆಗ ಅವನು ಕೋಪಗೊಂಡು ಋಷಿಗಳನ್ನು ಕುರಿತು,

೩೩-೩೪. ಎಲೈ ಮುನಿಗಳೇ, ನನ್ನನ್ನು ಕಾರಣವಿಲ್ಲದೇ ನೀವು ತಡೆದುದೇಕೆ? ಆದಕಾರಣ ನೀವೆಲ್ಲರೂ ಆಲದ ಮರವಾಗಿ ಎಂದು ಶಪಿಸಿದನು. ಆಗ ಜ್ಞಾನದೃಷ್ಟಿಯಿಂದ ಆ ಮುನಿಗಳು ಆ ಕುದುರೆಯು ಸೂರ್ಯನು ಎಂದು ತಿಳಿದು ದೇವನಾಯಕನಾದ ಅವನನ್ನು ಭಕ್ತಿಯಿಂದ ಸ್ತುತಿಸಿದರು.

ಸ್ತೂಯಮಾನೋ ಮುನಿಗಣೈರಶ್ವಾಂ ಭಾನುರಥಾಗಮತ್ ।
ವಡವಾಯಾ ಮುಖೇ ಲಗ್ನಂ ಮುಖಂ ಚಾಶ್ವಸ್ವರೂಪಿಣಂ ॥ ೩೫ ॥

ಜ್ಞಾತ್ವಾ ತ್ವಾಷ್ಟ್ರೀ ಚ ಭರ್ತಾರಂ ಮುಖಾದ್ವೀರ್ಯಂ ಪ್ರಸುಸ್ರುವೇ ।
ತಯೋರ್ವೀರ್ಯೇಣ ಗಂಗಾಯಾಮಶ್ವಿನೌ ಸಮಜಾಯತಾಂ ॥ ೩೬ ॥

ತತ್ರಾಗಚ್ಛನ್ಸುರಗಣಾಃ ಸಿದ್ಧಾಶ್ಚ ಮುನಯಸ್ತಥಾ ।
ನದ್ಯೋ ಗಾವಸ್ತಥೌಷಧ್ಯೋ ದೇವಾ ಜ್ಯೋತಿರ್ಗಣಾಸ್ತಥಾ ॥ ೩೭ ॥

ಸಪ್ತಾಶ್ವಶ್ಚ ರಥಃ ಪುಣ್ಯೋ ಹ್ಯರುಣೋ ಭಾನುಸಾರಥಿಃ ।
ಯಮೋ ಮನುಶ್ಚ ವರುಣಃ ಶನಿರ್ವೈವಸ್ವತಸ್ತಥಾ ॥ ೩೮ ॥

ಯಮುನಾ ಚ ನದೀ ಪುಣ್ಯಾ ತಾಪೀ ಚೈವ ಮಹಾನದೀ ।
ತತ್ತದ್ರೂಪಂ ಸಮಾಸ್ಥಾಯ ನದ್ಯಸ್ತಾ ವಿಸ್ಮಯಾನ್ಮನೇ ॥ ೩೯ ॥

---

೩೫. ಹೀಗೆ ಮುನಿಗಳಿಂದ ಸ್ತುತಿಸಲ್ಪಡುತ್ತಾ ಸೂರ್ಯನು ಆ ವಡವಾ ದೇವಿಯೊಡನೆ ರತಿಕ್ರೀಡೆಯನ್ನು ಮಾಡಿದನು. ಪ್ರೀತಿಯಿಂದ ಆ ಕುದುರೆಯ ಮುಖವನ್ನು ಚುಂಬಿಸಿದನು.

೩೬. ಆಗ ವಡವಾರೂಪಳಾದ ಉಷೆಯು ಕುದುರೆಯ ರೂಪದಿಂದ ತನ್ನ ಪತಿಯೇ ಬಂದಿರುವನೆಂದು ತಾನೂ ಮುಖದಿಂದ ವೀರ್ಯವನ್ನು ಸುರಿಸಿದಳು. ಮುಂದೆ ಅವರೀರ್ವರ ಆ ವೀರ್ಯದಿಂದ ಗಂಗಾನದಿಯಲ್ಲಿ ಅಶ್ವಿನೀ ಕುಮಾರರು ಜನಿಸಿದರು.

೩೭. ಆಗ ಅಲ್ಲಿಗೆ ದೇವತೆಗಳು, ಸಿದ್ಧರು, ದೇವಮುನಿಗಳು, ನದಿಗಳು ಹಸುಗಳು, ಓಷಧಿ ಲತೆಗಳು, ಗ್ರಹಗಳು ಇವರೆಲ್ಲರೂ ಬಂದರು.

೩೮. ಸೂರ್ಯನ ಸಾರಥಿಯಾದ ಅರುಣನು ಏಳು ಕುದುರೆಗಳುಳ್ಳ ತನ್ನ ರಥವನ್ನು ತೆಗೆದುಕೊಂಡು ಅಲ್ಲಿಗೆ ಬಂದನು, ಯಮ, ಮನು, ವರುಣ ಶನಿ ಇವರೆಲ್ಲರೂ ಆ ಜನಸ್ಥಾನಕ್ಕೆ ಬಂದರು.

೩೯. ಪವಿತ್ರವಾದ ಯಮುನಾನದೀ, ಮಹಾನದಿಯಾದ ತಾಪೀನದೀ ಇವೆಲ್ಲವೂ ತಮ್ಮ ಸುಂದರವಾದ ರೂಪುಗಳನ್ನು ಧರಿಸಿ ಆಶ್ಚರ್ಯದಿಂದ ಜನ

ದೃಷ್ಟುಂ ತೇ ವಿಸ್ಮಯಾವಿಷ್ಟಾ ಆಜಗ್ಮುಃ ಶ್ವಶುರಸ್ತಥಾ ।
ಅಭಿಪ್ರಾಯಂ ವಿದಿತ್ವಾ ತು ಶ್ವಶುರಂ ಭಾನುರಬ್ರವೀತ್ ॥ ೪೦ ॥

॥ ಭಾನುರುವಾಚ ॥
ಉಷಾಯಾಃ ಪ್ರೀತಯೇ ತ್ವಷ್ಟಃ ಕುರ್ವತ್ಯಾಸ್ತಪ ಉತ್ತಮಂ ।
ಯತ್ರಾರೂಢಂ ಚ ಮಾಂ ಕೃತ್ವಾ ಛಿಂಧಿ ತೇಜಾಂಸ್ಯನೇಕಶಃ ।
ಯಾವತ್ಸೌಖ್ಯಂ ಭವೇದಸ್ಯಾಸ್ತಾವಚ್ಛಿಂಧಿ ಪ್ರಜಾಪತೇ ॥ ೪೧ ॥

॥ ಬ್ರಹ್ಮೋವಾಚ ॥
ತಥೇತ್ಯುಕ್ತ್ವಾ ತತಸ್ತ್ವಷ್ಟಾ ಸೋಮನಾಥಸ್ಯ ಸಂನಿಧೌ ।
ತೇಜಸಾಂ ಛೇದನಂ ಚಕ್ರೇ ಪ್ರಭಾಸಂ ತು ತತೋ ವಿದುಃ ॥ ೪೨ ॥

ಭರ್ತ್ರಾ ಚ ಸಂಗತಾ ಯತ್ರ ಗೌತಮ್ಯಾಮಶ್ವರೂಪಿಣೀ ।
ಅಶ್ವಿನೋರ್ಯತ್ರ ಚೋತ್ಪತ್ತಿರಶ್ವತೀರ್ಥಂ ತದುಚ್ಯತೇ ॥ ೪೩ ॥

ಸ್ಥಾನದಲ್ಲಿ ನಡೆಯುವುದನ್ನು ನೋಡಲು ಅಲ್ಲಿಗೆ ಬಂದರು. ಸೂರ್ಯನ ಮಾವನಾದ ತ್ವಷ್ಟೃಬ್ರಹ್ಮನೂ ಬಂದನು.

೪೦-೪೧. ಬಳಿಕ ವಿಶ್ವಕರ್ಮನ ಅಭಿಪ್ರಾಯವನ್ನು ತಿಳಿದು ಸೂರ್ಯನು ಓ ವಿಶ್ವಕರ್ಮ, ನಿನ್ನ ಮಗಳಾದ ಉಷಾದೇವಿಯು ನನ್ನ ಉಗ್ರತೆಯನ್ನು ಕಮ್ಮಿಮಾಡಲು ತಪಸ್ಸನ್ನಾಚರಿಸುತ್ತಿದ್ದಳು. ಅವಳ ಸಂತೋಷಕ್ಕಾಗಿ ನನ್ನ ಬಿಂಬವನ್ನು ಯಂತ್ರಕ್ಕೇರಿಸಿ ತೇಜಸ್ಸನ್ನು ಸಾಣೆಹಿಡಿದು ಉಷಾದೇವಿಗೆ ಸಹಿಸಲು ಸಾಧ್ಯವಾಗುವಂತೆ ನನ್ನ ತೇಜಸ್ಸನ್ನು ಕಮ್ಮಿಮಾಡು ಎಂದನು.

೪೨. ಹಾಗೆಯೇ ಆಗಲಿ ಎಂದು ಹೇಳಿ ತ್ವಷ್ಟೃಬ್ರಹ್ಮನು ಸೋಮನಾಥೇಶ್ವರನ ಸನ್ನಿಧಿಯಲ್ಲಿ ಸೂರ್ಯನ ತೇಜಸ್ಸನ್ನು ಸಾಣೆ ಹಿಡಿದು ಕಮ್ಮಿ ಮಾಡಿದನು. ಆದುದರಿಂದ ಆ ಸ್ಥಳಕ್ಕೆ ಮುಂದೆ ಪ್ರಭಾಸಕ್ಷೇತ್ರವೆಂದು ಹೆಸರಾಯಿತು.

೪೩. ಅಶ್ವರೂಪವನ್ನು ಧರಿಸಿದ ಉಷಾದೇವಿಯು ಗೌತಮೀನದಿಯ ತೀರಪ್ರದೇಶದಲ್ಲಿ ತನ್ನ ಪತಿಯೊಡನೆ ಸಂಗವನ್ನು ಹೊಂದಿದುದರಿಂದಲೂ ಅಶ್ವಿನೀಕುಮಾರರು ಅಲ್ಲಿಯೇ ಜನಿಸಿದುದರಿಂದಲೂ ಆ ಸ್ಥಾನಕ್ಕೆ ಅಶ್ವತೀರ್ಥವೆಂದು ಹೆಸರಾಯಿತು. ಸೂರ್ಯನು ಅಲ್ಲಿ ಪತ್ನಿಯೊಡನೆ ಸಂಗವನ್ನು ಮಾಡಿದುದರಿಂದ ಭಾನುತೀರ್ಥವೆಂದೂ ಸೂರ್ಯನ ಶಾಪದಿಂದ ಋಷಿಗಳು ಐದು ವಟವೃಕ್ಷವಾದುದರಿಂದ ಪಂಚವಟಾಶ್ರಮವೆಂದೂ ಹೆಸರುಗಳಾದುವು.

ಭಾನುತೀರ್ಥಂ ತದಾಖ್ಯಾತಂ ತಥಾ ಪಂಚವಟಾಶ್ರಮಃ ।
**ತಾಪೀ ಚ ಯಮುನಾ ಚೈವ ಪಿತರಂ ದ್ರಷ್ಟುಮಾಗತೇ		॥ ೪೪ ॥**

ಅರುಣಾವರುಣಾನದ್ಯೋರ್ಗಂಗಾಯಾಂ ಸಂಗಮಃ ಶುಭಃ ।
**ದೇವಾನಾಂ ತತ್ರ ತೀರ್ಥಾನಾಮಾಗತಾನಾಂ ಪೃಥಕ್ಪೃಥಕ್		॥ ೪೫ ॥**

ನವ ತ್ರೀಣಿ ಸಹಸ್ರಾಣಿ ತೀರ್ಥಾನಿ ಗುಣವಂತಿ ಚ ।
**ತತ್ರ ಸ್ನಾನಂ ಚ ದಾನಂ ಚ ಸರ್ವಮಕ್ಷಯಪುಣ್ಯದಂ		॥ ೪೬ ॥**

ಸ್ಮರಣಾತ್ಪಠನಾದ್ವಾಪಿ ಶ್ರವಣಾದಪಿ ನಾರದ ।
**ಸರ್ವಪಾಪವಿನಿರ್ಮುಕ್ತೋ ಧರ್ಮವಾನ್ಸ ಸುಖೀ ಭವೇತ್		॥ ೪೭ ॥**

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇಽರುಣಾ-
ವರುಣಾಸಂಗಮಾಶ್ವಭಾನುತೀರ್ಥವರ್ಣನಂ
ನಾಮೋನಸಪ್ತತಿತಮೋಽಧ್ಯಾಯಃ

---

೪೪. ತಮ್ಮ ತಂದೆಯನ್ನು ನೋಡಲು ಬಂದಿದ್ದ ತಾಪೀ ಮತ್ತು ಯಮುನಾನದಿಗಳು ಗಂಗೆಗೆ ಸೇರಿದುವು. ತಾಪೀನದಿಗೆ ಅರುಣಾನದಿಯೆಂದೂ ಹೆಸರುಂಟು. ಯಮುನೆಗೆ ವರುಣಾನದಿಯೆಂದೂ ಹೆಸರುಂಟು. ಈ ಅರುಣಾ ನದಿ ಮತ್ತು ವರುಣಾನದಿಗಳು ಗಂಗೆಯನ್ನು ಸೇರಿದ ಸಂಗಮಸ್ಥಳವು ತುಂಬಾ ಪುಣ್ಯತಮವಾದುದು.

೪೫–೪೬. ಆಗ ಅಲ್ಲಿಗೆ ಬಂದಿದ್ದ ದೇವತೆಗಳಿಂದ ಬೇರೆಬೇರೆಯಾಗಿ ಒಂಭತ್ತುಸಾವಿರ ತೀರ್ಥಗಳು ಆಗಿರುವುವು. ಪವಿತ್ರವಾದಾ ತೀರ್ಥಗಳಲ್ಲಿ ಸ್ನಾನ ದಾನಗಳನ್ನು ಮಾಡಿದರೆ ಸ್ಥಿರವಾದ ಸ್ವರ್ಗವು ಲಭಿಸುವುದು.

೪೭. ಈ ತೀರ್ಥಮಾಹಾತ್ಮ್ಯವನ್ನು ಸ್ಮರಿಸಿದರೂ, ಓದಿದರೂ, ಕೇಳಿದರೂ ಪಾಪವೆಲ್ಲವೂ ನಾಶವಾಗಿ ಧರ್ಮವೂ ಸುಖವೂ ಲಭಿಸುವುವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಅರುಣಾವರುಣಾನದಿಗಳವರ್ಣನವೆಂಬ ಎಂಭತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮೆಯಲ್ಲಿ ಇಪ್ಪತ್ತನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ನವತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಗಾರುಡಂ ನಾಮ ಯತ್ತೀರ್ಥಂ ಸರ್ವವಿಘ್ನಪ್ರಶಾಂತಿದಂ ।
ತಸ್ಯ ಪ್ರಭಾವಂ ವಕ್ಷ್ಯಾಮಿ ಶೃಣು ನಾರದ ಯತ್ನತಃ ॥ ೧ ॥

ಮಣಿನಾಗ ಇತಿ ಖ್ಯಾತಃ ಶೇಷಪುತ್ರೋ ಮಹಾಬಲಃ ।
ಗರುಡಸ್ಯ ಭಯಾದ್ಭಕ್ತ್ಯಾ ತೋಷಯಾಮಾಸ ಶಂಕರಂ ॥ ೨ ॥

ತೊಂಬತ್ತನೆಯ ಅಧ್ಯಾಯ

೧. ಬ್ರಹ್ಮನು ಹೇಳಿದನು—ಎಲೈ ನಾರದನೇ, ಸಕಲ ವಿಘ್ನಗಳನ್ನೂ ಹೋಗಲಾಡಿಸುವಂತಹ ಗಾರುಡವೆಂಬ ತೀರ್ಥವೊಂದಿರುವುದು. ಅದರ ಮಾಹಾತ್ಮ್ಯವನ್ನು ಹೇಳುವೆನು, ಕೇಳು.

೨. ಆದಿಶೇಷನಿಗೆ ಮಣಿನಾಗನೆಂಬ ಬಲಿಷ್ಠನಾದ ಕುಮಾರನಿದ್ದನು, ಆ ಕುಮಾರನು ಗರುಡನ ಭಯವನ್ನು ತಪ್ಪಿಸಿಕೊಳ್ಳಲು ಭಕ್ತಿಯಿಂದ ಶಿವನನ್ನು ಆರಾಧಿಸಿದನು.

ತತಃ ಪ್ರಸನ್ನೋ ಭಗವಾನ್ಪರಮೋಷ್ಠೀ ಮಹೇಶ್ವರಃ ।
ತಮುವಾಚ ಮಹಾನಾಗಂ ವರಂ ವರಯ ಪನ್ನಗ ॥ ೩ ॥

ನಾಗಃ ಪ್ರಾಹ ಪ್ರಭೋ ಮಹ್ಯಂ ದೇಹಿ ಮೇ ಗರುಡಾಭಯಂ ।
ತಥೇತ್ಯಾಹ ಚ ತಂ ಶಂಭುರ್ಗರುಡಾದಭಯಂ ಭವೇತ್ ॥ ೪ ॥

ನಿರ್ಗತೋ ನಿರ್ಭಯೋ ನಾಗೋ ಗರುಡಾದರುಣಾನುಜಾತ್ ।
ಕ್ಷೀರೋದಶಾಯಿನೋ ಯತ್ರಾಸ್ತೇ ಕ್ಷೀರಾರ್ಣವಸಮೀಪತಃ ॥ ೫ ॥

ಇತಶ್ಚೇತಶ್ಚ ಚರತಿ ನಾಗೋಽಸೌ ಸುಖಶೀತಲೇ ।
ಗರುಡೋಽಪಿ ಚ ಯತ್ರಾಸ್ತೇ ತಂ ದೇಶಮಪಿ ಯಾತ್ಯಸೌ ॥ ೬ ॥

---

೩. ಆಗ ಸರ್ವೋತ್ತಮನೂ ಭಗವಂತನೂ ಆದ ಮಹೇಶ್ವರನು ಮಣಿನಾಗನಿಗೆ ಪ್ರಸನ್ನನಾಗಿ ಅವನನ್ನು ಕುರಿತು ಎಲೈ ತಪಸ್ವಿಯೇ, ನಿನಗೆ ಬೇಕಾದ ವರವನ್ನು ಕೇಳು ಎಂದು ಹೇಳಿದನು.

೪. ಆಗ ಮಣಿನಾಗನು ಓ ಸ್ವಾಮಿ, ಗರುಡನಿಂದ ನನಗೆ ಭಯವು ಬರದಂತೆ ಅನುಗ್ರಹಿಸು ಎಂದು ಕೇಳಿಕೊಂಡನು ಶಿವನು ಹಾಗೆಯೇ ಆಗಲಿ, ಗರುಡನಿಂದ ನಿನಗೆ ಭಯವು ಬರಲಾರದು ಎಂದು ವರವನ್ನು ಕೊಟ್ಟು ಅನುಗ್ರಹಿಸಿದನು.

೫. ಕ್ಷೀರಸಮುದ್ರದಲ್ಲಿ ವಾಸಮಾಡುವ ವಿಷ್ಣುವಿನ ಸಮೀಪದಲ್ಲಿರುವವನೂ ಅರುಣನ ತಮ್ಮನೂ ಆದ ಗರುಡನಿಂದ ತನಗೆ ತೊಂದರೆಯು ಬರದಂತೆ ಹೀಗೆ ವರವನ್ನು ಪಡೆದು ಮಣಿನಾಗನು ಧೈರ್ಯದಿಂದಲೂ ಸಂತಸದಿಂದಲೂ ಕೈಲಾಸದಿಂದ ಹೊರಟನು.

೬. ಆ ಮೊದಲುಗೊಂಡು ಆ ಮಣಿನಾಗನು ಸುಖವೂ ಮನೋಹರವೂ ಆದ ದೇಶಗಳಲ್ಲೆಲ್ಲಾ ನಿರ್ಭಯನಾಗಿ ಸಂಚರಿಸತೊಡಗಿದನು. ಗರುಡನಿರುವ ಸ್ಥಳದಲ್ಲಿಯೂ ನಿರಾತಂಕವಾಗಿ ಸಂಚರಿಸುತ್ತಿದ್ದನು.

ಗರುಡಃ ಪನ್ನಗಂ ದೃಷ್ಟ್ವಾ ಚರಂತಂ ನಿರ್ಭಯೇನ ತು ।
ತಂ ಗೃಹೀತ್ವಾ ಮಹಾನಾಗಂ ಪ್ರಾಕ್ಷಿಪತ್ಸ್ವಸ್ಯ ವೇಶ್ಮನಿ ॥ ೭ ॥

ತಂ ಬದ್ಧ್ವಾ ಗಾರುಡೈಃ ಪಾಶೈರ್ಗರುಡೋ ನಾಗಸತ್ತಮಂ ।
ಏತಸ್ಮಿನ್ನಂತರೇ ನಂದೀ ಪ್ರೋವಾಚೇಶಂ ಜಗತ್ಪ್ರಭುಂ ॥ ೮ ॥

॥ ನಂದಿಕೇಶ್ವರ ಉವಾಚ ॥

ನೂನಂ ನಾಗೋ ನ ಚಾಯಾತಿ ಭಕ್ಷಿತೋ ಬದ್ಧ ಏವ ವಾ ।
ಗರುಡೇನ ಸುರೇಶಾನ ಜೀವನ್ನಾಗೋ ನ ಸಂವ್ರಜೇತ್ ॥ ೯ ॥

॥ ಬ್ರಹ್ಮೋವಾಚ ॥

ನಂದಿನೋ ವಚನಂ ಶ್ರುತ್ವಾ ಜ್ಞಾತ್ವಾ ಶಂಭುರಥಾಬ್ರವೀತ್ ॥ ೧೦ ॥

॥ ಶಿವ ಉವಾಚ ॥

ಗರುಡಸ್ಯ ಗೃಹೇ ನಾಗೋ ಬದ್ಧಸ್ತಿಷ್ಠತಿ ಸತ್ವರಂ ।
ಗತ್ವಾ ತಂ ಜಗತಾಮೀಶಂ ವಿಷ್ಣುಂ ಸ್ತುಹಿ ಜನಾರ್ದನಂ ॥ ೧೧ ॥

೭-೮. ಹೀಗೆ ಭಯವಿಲ್ಲದೇ ಸಂಚರಿಸುತ್ತಿರುವ ಆ ಮಣಿನಾಗನನ್ನು ನೋಡಿ ಗರುಡನು ಅವನನ್ನು ಹಿಡಿದು ಗರುಡಪಾಶಗಳಿಂದ ಬಿಗಿದು ಕಟ್ಟಿ ತನ್ನ ಮನೆಯಲ್ಲಿ ಬಂಧಿಸಿಟ್ಟನು. ಈ ಸಮಯದಲ್ಲಿ ನಂದಿಕೇಶ್ವರನು ಜಗದೀಶ್ವರನಾದ ಮಹಾದೇವನನ್ನು ಕುರಿತು,

೯. ಓ ಮಹಾದೇವ, ಮಣಿನಾಗನು ಇನ್ನೂ ಬಂದಿಲ್ಲ. ಬಹುಶಃ ಅವನನ್ನು ಗರುಡನು ತಿಂದಿರಬಹುದು, ಇಲ್ಲವೇ ಬಂಧಿಸಿಟ್ಟಿರಬಹುದು. ಜೀವದಿಂದಿದ್ದರೆ ಆ ನಾಗನು ಇಲ್ಲಿಗೆ ಬರದೇ ಇರುತ್ತಿರಲಿಲ್ಲ ಎನ್ನಲು,

೧೦-೧೧. ನಂದಿಯ ಮಾತನ್ನು ಕೇಳಿ ಹರನು ಜ್ಞಾನದೃಷ್ಟಿಯಿಂದ ನೋಡಿ, ಅಹುದು ಗರುಡನ ಮನೆಯಲ್ಲಿ ಮಣಿನಾಗನು ಬಂಧಿಸಲ್ಪಟ್ಟಿರುವನು. ಎಲೈ ನಂದಿ, ನೀನು ಹೋಗಿ ಜಗದೊಡಯನಾದ ಹರಿಯನ್ನು ಪ್ರಾರ್ಥಿಸಿ ಆ ನಾಗನನ್ನು ಬಿಡಿಸಿಕೊಂಡು ಬಾ ಎಂದನು.

ಬದ್ಧಂ ನಾಗಂ ಕಾಶ್ಯಪೇನ ಮದ್ವಾಕ್ಯಾದಾನಯ ಸ್ವಯಂ ।
ತತ್ಪ್ರಭೋರ್ವಚನಂ ಶ್ರುತ್ವಾ ನಂದೀ ಗತ್ವಾ ಶ್ರಿಯಃ ಪತಿಂ ॥ ೧೨ ॥

ವ್ಯಜ್ಞಾಪಯತ್ಸ್ವಯಂ ವಾಕ್ಯಂ ವಿಷ್ಣುಂ ಲೋಕಪರಾಯಣಂ ।
ನಾರಾಯಣಃ ಪ್ರೀತಮನಾ ಗರುಡಂ ವಾಕ್ಯಮಬ್ರವೀತ್ ॥ ೧೩ ॥

॥ ವಿಷ್ಣುರುವಾಚ ॥

ವಿನತಾತ್ಮಜ ಮೇ ವಾಕ್ಯಾನ್ನಂದಿನೇ ದೇಹಿ ಪನ್ನಗಂ ।
ಕಂಪಮಾನಸ್ತದಾಕರ್ಣ್ಯ ನೇತ್ಯುವಾಚ ವಿಹಂಗಮಃ ।
ವಿಷ್ಣುಮಪ್ಯಬ್ರವೀತ್ಕೋಪಾತ್ಸುಪರ್ಣೋ ನಂದಿನೋಽಂತಿಕೇ ॥ ೧೪ ॥

॥ ಗರುಡ ಉವಾಚ ॥

ಯದ್ಯತ್ಪ್ರಿಯತಮಂ ಕಿಂಚಿದ್ಭೃತ್ಯೇಭ್ಯಃ ಪ್ರಭವಿಷ್ಣವಃ ।
ದಾಸ್ಯಂತ್ಯನ್ಯೇ ಭವಾನ್ನೈವ ಮಯಾನೀತಂ ಹರಿಷ್ಯತಿ ॥ ೧೫ ॥

೧೨-೧೩. ಸ್ವಾಮಿಯ ಆ ಮಾತನ್ನು ಕೇಳಿ, ನಂದಿಯು ನಾರಾಯಣನ ಬಳಿಗೆ ತೆರಳಿ ಅಲ್ಲಿ ಶಿವನು ಹೇಳಿದುದನ್ನು ವಿಜ್ಞಾಪಿಸಿದನು. ಅದನ್ನು ಕೇಳಿ ನಾರಾಯಣನು ಸಂತುಷ್ಟನಾಗಿ ಗರುಡನನ್ನು ಕುರಿತು,

೧೪. ಎಲೈ ಗರುಡನೇ, ನನ್ನ ಪ್ಪಣೆಯಂತೆ ನಂದಿಗೆ ಮಣಿನಾಗನನ್ನೊಪ್ಪಿಸು ಎಂದನು. ಹರಿಯ ಆ ಮಾತನ್ನು ಕೇಳಿ, ಗರುಡನು ನಾಗನನ್ನೊಪ್ಪಿಸಲಾರೆನು ಎಂದು ಹೇಳಿ ಕೋಪದಿಂದ ನಡುಗುತ್ತಾ ಮತ್ತಿಂತೆಂದನು.

೧೫. ಓ ನಾರಾಯಣ, ಪ್ರಭುವಾದವರು ಸೇವಕರಿಗೆ ಬೇಕಾದುದನ್ನು ಕೊಡುವರು. ಆದರೆ ನೀನು ಹಾಗಿಲ್ಲವು. ನಾನು ತಂದಿಟ್ಟುಕೊಂಡದನ್ನೇ ನೀನು ಅಪಹರಿಸುತ್ತಲಿರುವೆ, ನಾನು ಅನುಭವಿಸದಂತೆ ಮಾಡುತ್ತಲಿರುವೆ.

ಪಶ್ಯ ದೇವಂ ತ್ರಿನಯನಂ ನಾಗಂ ಮೋಕ್ಷ್ಯತಿ ನಂದಿನಾ ।
ಮಯೋಪಪಾದಿತಂ ನಾಗಂ ತ್ವಂ ತು ದಾಸ್ಯಸಿ ನಂದಿನೇ ॥ ೧೬ ॥

ತ್ವಾಂ ವಹಾಮಿ ಸದಾ ಸ್ವಾಮಿನ್ಮಮ ದೇಯಂ ಸದಾ ತ್ವಯಾ ।
ಮಯೋಪಪಾದಿತಂ ನಾಗಂ ವಕ್ತುಂ ದೇಹೀತಿ ನೋಚಿತಂ ॥ ೧೭ ॥

ಸತಾಂ ಪ್ರಭೂಣಾಂ ನೇಯಂ ಸ್ಯಾದ್ವೃತ್ತಿಃ ಸದ್ವೃತ್ತಿಕಾರಿಣಾಂ ।
ಸಂತೋ ದಾಸ್ಯಂತಿ ಭೃತ್ಯೇಭ್ಯೋ ಮದುಪಾತ್ತಹರೋ ಭವಾನ್ ॥ ೧೮ ॥

ದೈತ್ಯಾನ್ ಜಯಸಿ ಸಂಗ್ರಾಮೇ ಮದ್ಬಲೇನೈವ ಕೇಶವ ।
ಅಹಂ ಮಹಾಬಲೀತ್ಯೇವಂ ಮುಧೈವ ಶ್ಲಾಘತೇ ಭವಾನ್ ॥ ೧೯ ॥

---

೧೬. ನೋಡು, ಮಹೇಶ್ವರನು ನಂದಿಯನ್ನು ಕಳುಹಿ ತನ್ನ ಸೇವಕನಾದ ಮಣಿನಾಗನನ್ನು ಬಂಧನದಿಂದ ಬಿಡಿಸುತ್ತಲಿರುವನು. ಆದರೆ ನೀನು ನಾನು ಬಂಧಿಸಿಟ್ಟ ನಾಗನನ್ನು ನಂದಿಗೆ ಕೊಡುತ್ತಲಿರುವೆ.

೧೭. ಓ ಸ್ವಾಮಿ, ನಾನು ನಿನ್ನನ್ನು ಸದಾ ಹೊರುತ್ತಲಿರುವೆನು, ಇಂತಹ ಸೇವಕನಾದ ನನಗೆ ಬೇಕಾದುದನ್ನು ನೀನೇ ಕೊಡಬೇಕು. ಅದನ್ನು ಬಿಟ್ಟು ನಾನು ತಂದುಕೊಂಡುದನ್ನೇ ಕೊಟ್ಟುಬಿಡು ಎನ್ನುವುದು ಸರಿಯಲ್ಲ, ನ್ಯಾಯವಲ್ಲ.

೧೮. ಹೀಗೆ ಆಚರಿಸುವುದು ನಿನ್ನಂತಹ ಯೋಗ್ಯಪ್ರಭುಗಳಿಗೆ ಸರಿಯಾದುದಲ್ಲ. ತಿಳಿವಳಿಕೆಯುಳ್ಳ ಪ್ರಭುಗಳು ಸೇವಕರಿಗೆ ಬೇಕಾದುದನ್ನು ಒದಗಿಸಿಕೊಡುವರು. ನೀನಾದರೋ ನಾನು ಸಂಪಾದಿಸಿಕೊಂಡುದನ್ನೇ ಅಪಹರಿಸುತ್ತಲಿರುವೆ.

೧೯. ಓ ಕೇಶವ, ನನ್ನ ಬಲದಿಂದಲೇ [ಸಹಾಯದಿಂದಲೇ] ನೀನು ದೈತ್ಯರನ್ನು ಜಯಿಸುತ್ತಲಿರುವೆ. ನಾನೇ ಮಹಾಬಲಿಷ್ಠನೆಂದು ನೀನು ಇಲ್ಲದ ಜಂಭವನ್ನು ಕೊಚ್ಚಿಕೊಳ್ಳುವೆ ಎಂದು ನುಡಿದನು.

॥ ಬ್ರಹ್ಮೋವಾಚ ॥

ಗರುಡಸ್ಯೇತಿ ತದ್ವಾಕ್ಯಂ ಶ್ರುತ್ವಾ ಚಕ್ರಗದಾಧರಃ ।
ವಿಹಸ್ಯ ನಂದಿನಃ ಪಾರ್ಶ್ವೇ ಪಶ್ಯದ್ಭಿರ್ಲೋಕಪಾಲಕೈಃ ॥ ೨೦ ॥

ಇದಮಾಹ ಮಹಾಬುದ್ಧಿರ್ಮಾಂ ಸಮುಹ್ಯ ಕೃಶೋ ಭವಾನ್ ।
ತ್ವದ್ಬಲಾದಸುರಾನ್ಸರ್ವಾನ್ ಜೇಷ್ಯೇಽಹಂ ಖಗಸತ್ತಮ ॥ ೨೧ ॥

ಇತ್ಯುಕ್ತ್ವಾ ಶ್ರೀಪತಿರ್ಬ್ರಹ್ಮನ್ ಶಾಂತಕೋಪೋಽಬ್ರವೀದಿದಂ ।
ವಹಾಂಗುಲಿಂ ಕರಸ್ಯಾಶು ಕನಿಷ್ಠಾಂ ನಂದಿನೋಽಂತಿಕೇ ॥ ೨೨ ॥

ಗರುಡಸ್ಯ ತತೋ ಮೂರ್ಧ್ನಿ ನ್ಯಸ್ಯೇದಂ ಪುನರಬ್ರವೀತ್ ।
ಸತ್ಯಂ ಮಾಂ ವಹಸೇ ನಿತ್ಯಂ ಪಶ್ಯ ಧರ್ಮಂ ವಿಹಂಗಮ ॥ ೨೩ ॥

---

೨೦. ಗರುಡನ ಆ ಮಾತನ್ನು ಕೇಳಿ, ಚಕ್ರಗದಾಧಾರಿಯಾದ ನಾರಾಯಣನು ನಕ್ಕು, ನಂದಿಕೇಶ್ವರ, ಲೋಕಪಾಲಕರು ಮೊದಲಾದವರ ಎದುರಿನಲ್ಲಿ ಗರುಡನನ್ನು ಕುರಿತು,

೨೧. ಎಲೈ ಪಕ್ಷಿರಾಜ, ನನ್ನನ್ನು ಹೊತ್ತುಹೊತ್ತು ನೀನು ತುಂಬಾ ಕೃಶನಾಗಿರುವೆ. ನಿನ್ನ ಬಲದಿಂದಲೇ ನಾನು ದೈತ್ಯರೆಲ್ಲರನ್ನೂ ಜಯಿಸುತ್ತಲಿರುವೆನು, ನಿಜ.

೨೨. ನೀನೇ ಮಹಾಬಲಶಾಲಿಯು, ಒಳ್ಳೆಯದು, ಈಗ ನಂದಿಯ ಎದುರಿನಲ್ಲಿ ನನ್ನ ಕೈಯ ಕಿರುಬೆರಳನ್ನು ಹೊತ್ತುಕೋ ನೋಡೋಣ ಎಂದನು.

೨೩. ಆಮೇಲೆ ಹರಿಯು ಗರುಡನ ತಲೆಯಮೇಲೆ ತನ್ನ ಕಿರುಬೆರಳನ್ನಿರಿಸಿ ಎಲೈ ಗರುಡ, ನೀನು ನನ್ನನ್ನು ನಿತ್ಯವೂ ಹೊರುವುದು ನಿಜವಷ್ಟೆ? ನಿಜಸ್ಥಿತಿ ಹೇಗಿರುವುದೆಂದು ಈಗ ಧರ್ಮತತ್ವವನ್ನು ನೋಡಿ ತಿಳಿದುಕೋ ಎಂದು ಹೇಳಿ,

ನ್ಯಸ್ತಾಯಾಂ ಚ ತತೋಽಂಗುಲ್ಯಾಂ ಶಿರಃ ಕುಕ್ಷೌ ಸಮಾವಿಶತ್ ।
ಕುಕ್ಷಿಶ್ಚ ಚರಣಸ್ಯಾಂತಃ ಪ್ರಾವಿಶಚ್ಚೂರ್ಣಿತೋಽಭವತ್ ।
ತತಃ ಕೃತಾಂಜಲಿರ್ದೀನೋ ವ್ಯಥಿತೋ ಲಜ್ಜಯಾನ್ವಿತಃ ॥ ೨೪ ॥

॥ ಗರುಡ ಉವಾಚ ॥

ತ್ರಾಹಿ ತ್ರಾಹಿ ಜಗನ್ನಾಥ ಭೃತ್ಯಂ ಮಾಮಪರಾಧಿನಂ ।
ತ್ವಂ ಪ್ರಭುಃ ಸರ್ವಲೋಕಾನಾಂ ಧರ್ತಾ ಧಾರ್ಯಸ್ತ್ವಮೇವ ಚ ॥ ೨೫ ॥

ಅಪರಾಧಸಹಸ್ರಾಣಿ ಕ್ಷಮಂತೇ ಪ್ರಭವಿಷ್ಣವಃ ।
ಕೃತಾಪರಾಧೇಽಪಿ ಜನೇ ಮಹತೀ ಯಸ್ಯ ವೈ ಕೃಪಾ ॥ ೨೬ ॥

ವದಂತಿ ಮುನಯಃ ಸರ್ವೇ ತ್ವಾಮೇವ ಕರುಣಾಕರಂ ।
ರಕ್ಷಸ್ವಾರ್ತಂ ಜಗನ್ಮಾತರ್ಮಾಮಂಬುಜನಿವಾಸಿನಿ ।
ಕಮಲೇ ಬಾಲಕಂ ದೀನಮಾರ್ತಂ ತನಯವತ್ಸಲೇ ॥ ೨೭ ॥

---

೨೪. ಹರಿಯು ತನ್ನ ಕಿರುಬೆರಳನ್ನು ಗರುಡನ ತಲೆಯಮೇಲಿರಿಸಲು ಅದರ ಭಾರದಿಂದ ಅವನ ತಲೆಯು ಹೊಟ್ಟೆಯಲ್ಲಿ ಸೇರಿಹೋಯಿತು. ಹೊಟ್ಟೆಯು ಕಾಲಿನ ಕೆಳಗೆ ಅದುಮಲ್ಪಟ್ಟು ಚೂರುಚೂರಾಯಿತು.

೨೫. ಆಗ ತುಂಬಾ ಬಳಲಿ ಲಜ್ಜೆಗೊಂಡು ವ್ಯಥೆಪಡುತ್ತಾ ಗರುಡನು ಕೈಯ್ಯನ್ನು ಜೋಡಿಸಿ ಓ ಜಗನ್ನಾಥ ಕಾಪಾಡು, ಅಪರಾಧಿಯಾದೀ ಸೇವಕ ನನ್ನು ಸಲಹು, ಜಗತ್ತಿಗೆಲ್ಲಕ್ಕೂ ನೀನೇ ಪ್ರಭುವು. (ಭಾರವನ್ನು) ಧರಿಸುವವನೂ ಧರಿಸಲ್ಪಡುವವನೂ ನೀನೇ. ನನ್ನಂತಹ ಅಲ್ಪನು ನಿನ್ನನ್ನು ಧರಿಸುವನೆಂಬುದು ಅಜ್ಞಾನದ ಮಾತು.

೨೬. ಪ್ರಭುಗಳು ಸೇವಕರ ಸಾವಿರಾರು ತಪ್ಪುಗಳನ್ನು ಮನ್ನಿಸುವರು. ಅಪರಾಧಿಯಲ್ಲೂ ಕೃಪೆಯನ್ನು ತೋರಿಸುವ ಕರುಣಾಕರನು ನೀನೆಂದು ನಿನ್ನನ್ನು ಮುನಿಗಳು ಹೇಳುವರು.

೨೭. ಕಮಲದಲ್ಲಿ ವಾಸಿಸುವ ಮೃದುಮನಸ್ಸಿನವಳಾದ ಓ ಲಕ್ಷ್ಮೀ ದೇವಿ, ನೀನು ಜಗತ್ತಿಗೆ ತಾಯಿಯು. ನಿನ್ನ ಪುತ್ರನಾದ ನಾನು ಈಗ ದುಃಖಿತ

॥ ಬ್ರಹ್ಮೋವಾಚ ॥
ತತಃ ಕೃಪಾನ್ವಿತಾ ದೇವೀ ಶ್ರೀರಪ್ಯಾಹ ಜನಾರ್ದನಂ ॥ ೨೮ ॥

॥ ಕಮಲೋವಾಚ ॥
ರಕ್ಷ ನಾಥ ಸ್ವಕಂ ಭೃತ್ಯಂ ಗರುಡಂ ವಿಪದಂ ಗತಂ ।
ಜನಾರ್ದನ ಉವಾಚೇದಂ ನಂದಿನಂ ಶಂಭುವಾಹನಂ ॥ ೨೯ ॥

॥ ವಿಷ್ಣುರುವಾಚ ॥
ನಯ ನಾಗಂ ಸಗರುಡಂ ಶಂಭೋರಂತಿಕಮೇವ ಚ ।
ತತ್ಪ್ರಸಾದಾಚ್ಚ ಗರುಡೋ ಮಹೇಶ್ವರನಿರೀಕ್ಷಿತಃ ।
ಆತ್ಮೀಯಂ ಚ ಪುನಾ ರೂಪಂ ಗರುಡಃ ಸಮವಾಪ್ಸ್ಯತಿ ॥ ೩೦ ॥

॥ ಬ್ರಹ್ಮೋವಾಚ ॥
ತಥೇತ್ಯುಕ್ತ್ವಾ ಚ ವೃಷಭೋ ನಾಗೇನ ಗರುಡೇನ ಚ ।
ಶನೈಃ ಸ ಶಂಕರಂ ಗತ್ವಾ ಸರ್ವಂ ತಸ್ಮೈ ನ್ಯವೇದಯತ್ ।
ಶಂಕರೋऽಪಿ ಗರುತ್ಮಂತಂ ಪ್ರೋವಾಚ ಶಶಿಶೇಖರಃ ॥ ೩೧ ॥

ನಾಗಿರುವೆನು. ವಾತ್ಸಲ್ಯಮಯಳಾದ ನೀನು ಕೃಪೆಯಿಟ್ಟು ನನ್ನನ್ನು ರಕ್ಷಿಸು ಎಂದು ಹರಿಯನ್ನೂ ಲಕ್ಷ್ಮಿಯನ್ನೂ ಪ್ರಾರ್ಥಿಸುತ್ತಿರಲು,

೨೮-೨೯. ಆಗ ಲಕ್ಷ್ಮಿಯು ಕರುಣೆಯುಳ್ಳವಳಾಗಿ ಹರಿಯನ್ನು ಕುರಿತು ಓ ನಾಥ, ನಿನ್ನ ಸೇವಕನಾದ ಗರುಡನು ವಿಪತ್ತಿನಲ್ಲಿ ಸಿಲುಕಿರುವನು. ದಯ ವಿಟ್ಟು ರಕ್ಷಿಸು ಎಂದು ಹೇಳಿದಳು, ಆಗ ಹರಿಯು ಈಶ್ವರನ ವಾಹನವಾದ ನಂದಿಕೇಶ್ವರನನ್ನು ಕುರಿತು,

೩೦. ಎಲೈ ನಂದಿ, ಈ ಗರುಡನನ್ನೂ ಮಣಿನಾಗನೊಡನೆ ಕರೆದು ಕೊಂಡು ಶಿವನ ಬಳಿಗೆ ಹೋಗು. ಆ ಶಿವನ ಕೃಪಾದೃಷ್ಟಿಯಿಂದ ಗರಡುನು ತನ್ನ ಹಿಂದಿನ ರೂಪವನ್ನು ಪಡೆಯುವನು, ಎಂದನು.

೩೧. ನಂದಿಯು ಹಾಗೆಯೇ ಆಗಲಿ ಎಂದು ಹೇಳಿ ಮಣಿನಾಗ ಗರುಡ ರೊಡನೆ ಶಂಕರನ ಬಳಿಗೆ ಹೋಗಿ ನಡೆದ ವೃತ್ತಾಂತವೆಲ್ಲವನ್ನೂ ಶಿವನಿಗೆ ಅರಿಕೆಮಾಡಲು,

॥ ಶಿವ ಉವಾಚ ॥

ಯಾಹಿ ಗಂಗಾಂ ಮಹಾಬಾಹೋ ಗೌತಮೀಂ ಲೋಕಪಾವನೀಂ ।
ಸರ್ವಕಾಮಪ್ರದಾಂ ಶಾಂತಾಂ ತಾಮಾಪ್ಲುತ್ಯ ಪುನರ್ವಪುಃ ॥ ೩೨ ॥

ಪ್ರಾಪ್ಸ್ಯಸೇ ಸರ್ವಕಾಮಾಂಶ್ಚ ಶತಧಾಥ ಸಹಸ್ರಧಾ ।
ಸರ್ವಪಾಪೋಪತಪ್ತಾ ಯೇ ದುರ್ದೈವೋನ್ಮೂಲಿತೋದ್ಯಮಾಃ ।
ಪ್ರಾಣಿನೋಽಭೀಷ್ಟದಾ ತೇಷಾಂ ಶರಣಂ ಖಗ ಗೌತಮೀ ॥ ೩೩ ॥

॥ ಬ್ರಹ್ಮೋವಾಚ ॥

ತದ್ವಾಕ್ಯಂ ಪ್ರಣತೋ ಭೂತ್ವಾ ಶ್ರುತ್ವಾ ತು ಗರುಡೋಽಭ್ಯಗಾತ್ ।
ಗಂಗಾಮಾಪ್ಲುತ್ಯ ಗರುಡಃ ಶಿವಂ ವಿಷ್ಣುಂ ನನಾಮ ಸಃ ॥ ೩೪ ॥

ತತಃ ಸ್ವರ್ಣಮಯಃ ಪಕ್ಷೀ ವಜ್ರದೇಹೋ ಮಹಾಬಲಃ ।
ವೇಗೀ ಭವನ್ಮುನಿಶ್ರೇಷ್ಠ ಪುನರ್ವಿಷ್ಣುಮಿಯಾತ್ಸುಧೀಃ ॥ ೩೫ ॥

---

೩೨. ಆಗ ಚಂದ್ರಶೇಖರನು ಗರುಡನನ್ನು ಕುರಿತು ಮಹಾಬಲಿಷ್ಠನಾದ ಎಲೈ ಗರುಡನೆ, ಗೌತಮಿಯೆಂದು ಹೆಸರುಳ್ಳ ಪವಿತ್ರವಾದ ಗಂಗಾನದಿಗೆ ಹೋಗಿ ಸಕಲಮನೋರಥಗಳನ್ನೂ ಉಂಟುಮಾಡುವ ಆ ಗೌತಮೀನದಿಯಲ್ಲಿ ಸ್ನಾನ ಮಾಡಿದರೆ ನಿನ್ನ ಸಾವಿರಾರು ಸಂಕಲ್ಪಗಳು ಸಿದ್ಧಿಸುವುವು.

೩೩. ಸಕಲ ಇಷ್ಟಾರ್ಥಗಳನ್ನೂ ಉಂಟುಮಾಡುವ ಆ ಗೌತಮೀ ನದಿಯು ಮಹಾಪಾಪಿಗಳೂ ದುರದೃಷ್ಟಶಾಲಿಗಳೂ ಆದ ಮಾನವರಿಗೆ ಉತ್ತಮ ಗತಿಯನ್ನುಂಟುಮಾಡುವುದು ಎಂದನು.

೩೪. ಶಿವನ ಮಾತನ್ನು ಕೇಳಿ ಗರುಡನು ಶಿವನಿಗೆ ನಮಸ್ಕರಿಸಿ ಆ ಕೂಡಲೇ ಗೌತಮೀನದಿಗೆ ಬಂದು ಸ್ನಾನಮಾಡಿ ಶಿವನನ್ನೂ ಹರಿಯನ್ನೂ ಭಕ್ತಿಯಿಂದ ಮತ್ತೆ ನಮಸ್ಕರಿಸಿದನು.

೩೫. ಆಗ ಗರುಡನಿಗೆ ಚಿನ್ನದ ರೆಕ್ಕೆಗಳೂ, ವಜ್ರದೇಹವೂ ಮಹಾಬಲವೂ ಉಂಟಾದವು. ಆಮೇಲೆ ಆ ಗರುಡನು ಹರಿಯ ಬಳಿಗೆ ಪುನಃ ಹೊರಟು ಹೋದನು.

ತತಃ ಪ್ರಭೃತಿ ತತ್ತೀರ್ಥಂ ಗಾರುಡಂ ಸರ್ವಕಾಮದಂ ।
ತತ್ರ ಸ್ನಾನಾದಿ ಯತ್ಕಿಂಚಿತ್ಕರೋತಿ ಪ್ರಯತೋ ನರಃ ।
ಸರ್ವಂ ತದಕ್ಷಯಂ ವತ್ಸ ಶಿವವಿಷ್ಣುಪ್ರಿಯಾವಹಂ ॥ ೩೬ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಗರುಡ-ತೀರ್ಥವರ್ಣನಂ ನಾಮ ನವತಿತಮೋಽಧ್ಯಾಯಃ

---

೩೬. ಎಲೈ ನಾರದ, ಆಮೊದಲುಗೊಂಡು ಗರುಡನು ಸ್ನಾನಮಾಡಿದ ಆ ತೀರ್ಥಕ್ಕೆ ಗಾರುಡತೀರ್ಥವೆಂದು ಹೆಸರಾಯಿತು. ಸಕಲ ಇಷ್ಟಾರ್ಥಗಳನ್ನೂ ಅದು ಉಂಟುಮಾಡುವುದು. ಆ ತೀರ್ಥದಲ್ಲಿ ಸ್ನಾನ ಮೊದಲಾದುವುಗಳನ್ನು ಶ್ರದ್ಧೆಯಿಂದ ಮಾಡಿದರೆ ಅಕ್ಷಯವಾದ ಪುಣ್ಯವು ಲಭಿಸುವುದಲ್ಲದೇ ಶಿವವಿಷ್ಣುಗಳೂ ಪ್ರಸನ್ನರಾಗುವರು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಗಾರುಡತೀರ್ಥವರ್ಣನವೆಂಬ ತೊಂಭತ್ತನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ಇಪ್ಪತ್ತೊಂದನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಏಕನವತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ತತೋ ಗೋವರ್ಧನಂ ತೀರ್ಥಂ ಸರ್ವಪಾಪಪ್ರಣಾಶನಂ ।
ಪಿತೄಣಾಂ ಪುಣ್ಯಜನನಂ ಸ್ಮರಣಾದಪಿ ಪಾಪನುತ್ ॥ ೧ ॥

ತಸ್ಯ ಪ್ರಭಾವ ಏಷ ಸ್ಯಾನ್ಮಯಾ ದೃಷ್ಟಸ್ತು ನಾರದ ।
ಬ್ರಾಹ್ಮಣಃ ಕರ್ಷಕಃ ಕಶ್ಚಿಜ್ಜಾಬಾಲಿರಿತಿ ವಿಶ್ರುತಃ ॥ ೨ ॥

ತೊಂಬತ್ತೊಂದನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಅಲ್ಲಿಂದ ಮುಂದೆ ಗೋವರ್ಧನವೆಂಬ ತೀರ್ಥವಿರುವುದು. ಅದು ಸಕಲ ಪಾಪಗಳನ್ನೂ ನಾಶಮಾಡುವುದು, ಸ್ನಾನಮಾಡಿದವನ ಪಿತೃಗಳಿಗೆ ಪುಣ್ಯಲೋಕವನ್ನುಂಟುಮಾಡುವುದು. ಅದನ್ನು ಸ್ಮರಿಸಿದ ಮಾತ್ರದಿಂದಲೇ ಪಾಪವು ನಾಶವಾಗುವುದು.

೨. ಆ ಗೋವರ್ಧನ ತೀರ್ಥದ ಮಹಿಮೆಯನ್ನು ನಾನೇ ಕಣ್ಣಿನಿಂದ ನೋಡಿರುವೆನು. ಹಿಂದೆ ಜಾಬಾಲಿಯೆಂಬ ಓರ್ವ ಬ್ರಾಹ್ಮಣನು ವ್ಯವಸಾಯ ವೃತ್ತಿಯನ್ನು ಮಾಡುತ್ತಿದ್ದನು.

ನ ವಿಮುಂಚತ್ಯನಡ್ವಾಹೌ ಮಧ್ಯಂ ಯಾತೇಽಪಿ ಭಾಸ್ಕರೇ ।
ಪ್ರತೋದೇನ ಪ್ರತುದತಿ ಪೃಷ್ಠತೋಽಪಿ ಚ ಪಾರ್ಶ್ವಯೋಃ ॥ ೩ ॥

ತೌ ಗಾವಾವಶ್ರುಪೂರ್ಣಾಕ್ಷೌ ದೃಷ್ಟ್ವಾ ಗೌಃ ಕಾಮದೋಹಿನೀ ।
ಸುರಭಿರ್ಜಗತಾಂ ಮಾತಾ ನಂದಿನೇ ಸರ್ವಮಬ್ರವೀತ್ ॥ ೪ ॥

ಸ ಚಾಪಿ ವ್ಯಥಿತೋ ಭೂತ್ವಾ ಶಂಭವೇ ತನ್ನ್ಯವೇದಯತ್ ।
ಶಂಭುಶ್ಚ ವೃಷಭಂ ಪ್ರಾಹ ಸರ್ವಂ ಸಿಧ್ಯತು ತೇ ವಚಃ ॥ ೫ ॥

ಶಿವಾಜ್ಞಾಸಹಿತೋ ನಂದೀ ಗೋಜಾತಂ ಸರ್ವಮಾಹರತ್ ।
ನಷ್ಟೇಷು ಗೋಷು ಸರ್ವೇಷು ಸ್ವರ್ಗೇ ಮರ್ತ್ಯೇ ತತಸ್ತ್ವರಾ ॥ ೬ ॥

---

೩. ಸೂರ್ಯನು ನಡುಹಗಲನ್ನೇರಿದ್ದರೂ ಆ ಜಾಬಾಲಿಯು ಉಳುವುದಕ್ಕೆ ಕಟ್ಟಿರುವ ಎತ್ತುಗಳನ್ನು ಬಿಡುತ್ತಲಿರಲಿಲ್ಲ, ಬಾರುಗೋಲಿನಿಂದ ಎರಡು ಎತ್ತುಗಳ ಬೆನ್ನು ಮತ್ತು ಹಿಂಭಾಗಗಳಿಗೆ ಹೊಡೆಯುತ್ತಾ ಉಳುತ್ತಿದ್ದನು.

೪. ಆ ಎತ್ತುಗಳು ಕಣ್ಣೀರು ಸುರಿಸುತ್ತಾ ಉಳುತ್ತಿದ್ದುವು, ಇದನ್ನು ನೋಡಿ ಜಗನ್ಮಾತೆಯಾದ ಕಾಮಧೇನುವು ವ್ಯಥೆಪಟ್ಟು ನಂದಿಕೇಶ್ವರನಿಗೆ ಆ ಎತ್ತುಗಳ ಕಷ್ಟವನ್ನು ವಿವರಿಸಿದಳು.

೫. ಆ ನಂದಿಯೂ ವ್ಯಥೆಗೊಂಡು ಶಿವನಿಗೆ ಆ ವೃತ್ತಾಂತವನ್ನು ಹೇಳಿದನು. ಆಗ ಶಿವನು ನಂದಿಗೆ ಈ ವಿಷಯದಲ್ಲಿ ನಿನ್ನ ಇಚ್ಛೆಯು ಸಿದ್ಧಿಸುವುದು ಎಂದು ಹೇಳಿದನು,

೬. ಹೀಗೆ ಶಿವನ ಆಜ್ಞೆಯನ್ನು ಪಡೆದು ನಂದಿಯು ಗೋವುಗಳನ್ನೆಲ್ಲವನ್ನೂ ಅಪಹರಿಸಿದನು. ಸ್ವರ್ಗ ಮತ್ತು ಭೂಲೋಕಗಳಲ್ಲಿ ಎಲ್ಲಿಯೂ ಒಂದು ಹಸುವಾಗಲೀ ಎತ್ತಾಗಲೀ ಇರಲಿಲ್ಲ.

ಮಾಮುವೋಚಸ್ಸುರಗಣಾ ವಿನಾ ಗೋಭಿರ್ನ ಜೀವ್ಯತೇ ।
ತಾನವೋಚಂ ಸುರಾನ್ಸರ್ವಾನ್ ಶಂಕರಂ ಯಾತ ಯಾಚತ ॥ ೭ ॥

ತಥೈವೇಶಂ ತು ತೇ ಸರ್ವೇ ಸ್ತುತ್ವಾ ಕಾರ್ಯಂ ನ್ಯವೇದಯನ್ ।
ಈಶೋಽಪಿ ವಿಬುಧಾನಾಹ ಜಾನಾತಿ ವೃಷಭೋ ಮಮ ॥ ೮ ॥

ತೇ ವೃಷಂ ಪ್ರೋಚುರಮರಾ ದೇಹಿ ಗಾ ಉಪಕಾರಿಣಃ ।
ವೃಷೋಽಪಿ ವಿಬುಧಾನಾಹ ಗೋಸವಃ ಕ್ರಿಯತಾಂ ಕ್ರತುಃ ॥ ೯ ॥

ತತಃ ಪ್ರಾಪ್ಸ್ಯಥ ಗಾಃ ಸರ್ವಾ ಯಾ ದಿವ್ಯಾ ಯಾಶ್ಚ ಮಾನುಷಾಃ ।
ತತಃ ಪ್ರವರ್ತತೇ ಯಜ್ಞೋ ಗೋಸವೋ ದೇವನಿರ್ಮಿತಃ ॥ ೧೦ ॥

---

೭. ಆಗ ದೇವತೆಗಳು ನನ್ನ ಬಳಿಗೆ ಬಂದು ಲೋಕದಲ್ಲೆಲ್ಲಿಯೂ ಒಂದು ಹಸುವೂ ಇಲ್ಲವು. ಹಸು ಮತ್ತು ಎತ್ತುಗಳಿಲ್ಲದೇ ಜೀವನಮಾಡುವುದೇ ಸಾಧ್ಯವಿಲ್ಲ ಎಂದು ಹೇಳಲು ನಾನು ದೇವತೆಗಳನ್ನು ಕುರಿತು ಹೋಗಿ ಶಂಕರನನ್ನು ಪ್ರಾರ್ಥಿಸಿರಿ ಎಂದು ಹೇಳಿದೆನು.

೮. ದೇವತೆಗಳು ನನ್ನ ಮಾತಿನಂತೆ ಶಿವನ ಬಳಿಗೆ ಹೋಗಿ ಅವನನ್ನು ಸ್ತುತಿಸಿ ತಮ್ಮ ಕಾರ್ಯವನ್ನರುಹಿದರು. ಅದಕ್ಕೆ ಶಿವನು ಇದಕ್ಕೆ ಪರಿಹಾರವನ್ನು ನಂದಿಯೇ ತಿಳಿದಿರುವನು. ಅವನನ್ನು ಕೇಳಿರಿ ಎಂದು ದೇವತೆಗಳಿಗೆ ಹೇಳಿದನು.

೯–೧೦. ಆಗ ದೇವತೆಗಳು ನಂದಿಯನ್ನು ಕುರಿತು ಜಗತ್ತಿಗೆ ಉಪಕಾರಿಗಳಾದ ಗೋವುಗಳನ್ನು ನಮಗೆ ಹಿಂದಕ್ಕೆ ಕೊಡು ಎಂದು ಕೇಳಿದರು. ಅದನ್ನು ಕೇಳಿ ನಂದಿಯು ಅವರನ್ನು ಕುರಿತು ಎಲೈ ದೇವತೆಗಳೇ ನೀವು ಈಗ ಗೋಸವ ಯಾಗವನ್ನು ಮಾಡಿದರೆ ಗೋವುಗಳು ಲಭಿಸುವುವು ಎಂದು ಹೇಳಿದನು. ಆಮೇಲೆ ಗೌತಮೀನದಿಯ ತೀರದಲ್ಲಿ ದೇವತೆಗಳು ಅದೇ ಮೊದಲಾಗಿ ಗೋಸವಯಾಗವನ್ನು ಮಾಡಿದರು.

ಗೌತಮ್ಯಾಶ್ಚ ಶುಭೇ ಪಾರ್ಶ್ವೇ ಗಾವೋ ವವೃಧಿರೇ ತತಃ ।
ಗೋವರ್ಧನಂ ತು ತತ್ತೀರ್ಥಂ ದೇವಾನಾಂ ಪ್ರೀತಿವರ್ಧನಂ ॥ ೧೧ ॥

ತತ್ರ ಸ್ನಾನಂ ಮುನಿಶ್ರೇಷ್ಠ ಗೋಸಹಸ್ರಫಲಪ್ರದಂ ।
ಕಿಂಚಿದ್ದಾನಾದಿನಾ ಯತ್ಸ್ಯಾತ್ಫಲಂ ತತ್ತು ನ ವಿದ್ಮಹೇ ॥ ೧೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಗೋವರ್ಧನತೀರ್ಥವರ್ಣನಂ ನಾಮೈಕನವತಿತಮೋಽಧ್ಯಾಯಃ

---

೧೧. ಹೀಗೆ ಯಾಗವನ್ನು ಮಾಡಲು ಗೋವುಗಳು ಜನಿಸಿ ಅಭಿವೃದ್ಧಿ ಹೊಂದಿದುವು. ಯಾಗಮಾಡಿದ ಆ ಸ್ಥಳವೇ ಗೋವರ್ಧನತೀರ್ಥವು. ಅದು ದೇವತೆಗಳಿಗೂ ಪ್ರಿಯವಾದುದು.

೧೨. ಆ ಗೋವರ್ಧನತೀರ್ಥದಲ್ಲಿ ಸ್ನಾನಮಾಡಿದರೆ ಸಾವಿರಾರು ಗೋವುಗಳು ವೃದ್ಧಿಹೊಂದುವುವು, ಎಂದರೆ ಮನೆಯಲ್ಲಿ ಪಶುವೃದ್ಧಿಯಾಗುವುದು. ಇನ್ನು ದಾನ ಮೊದಲಾದುದನ್ನು ಮಾಡಿದರೆ ಲಭಿಸುವ ಫಲವನ್ನು ವರ್ಣಿಸಲ ಸಾಧ್ಯವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಗೋವರ್ಧನತೀರ್ಥವರ್ಣನವೆಂಬ ತೊಂಭತ್ತೊಂದನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಇಪ್ಪತ್ತೆರಡನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ದ್ವಿನವತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಪಾಪಪ್ರಣಾಶನಂ ನಾಮ ತೀರ್ಥಂ ಪಾಪಭಯಾಪಹಂ ।
ನಾಮಧೇಯಂ ಪ್ರವಕ್ಷ್ಯಾಮಿ ಶೃಣು ನಾರದ ಯತ್ನತಃ ॥ ೧ ॥

ಧೃತವ್ರತ ಇತಿ ಖ್ಯಾತೋ ಬ್ರಾಹ್ಮಣೋ ಲೋಕವಿಶ್ರುತಃ ।
ತಸ್ಯ ಭಾರ್ಯಾ ಮಹೀ ನಾಮ ತರುಣೀ ಲೋಕಸುಂದರೀ ॥ ೨ ॥

ತಸ್ಯ ಪುತ್ರಃ ಸೂರ್ಯನಿಭಃ ಸನಾಜ್ಜಾತ ಇತಿ ಶ್ರುತಃ ।
ಧೃತವ್ರತಂ ತಥಾಕರ್ಷನ್ಮೃತ್ಯುಃ ಕಾಲೋರಿತೋ ಮುನೇ ॥ ೩ ॥

ತೊಂಭತ್ತೆರಡನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು:—ಎಲೈ ನಾರದ, ಪಾಪದ ಭಯವನ್ನೇ ಹೋಗಲಾಡಿಸುವ ಪಾಪಪ್ರಣಾಶನವೆಂಬ ಒಂದು ತೀರ್ಥವಿರುವುದು. ಅದರ ಮಾಹಾತ್ಮ್ಯವನ್ನು ಹೇಳುವೆನು, ಶ್ರದ್ಧೆಯಿಂದ ಕೇಳು.

೨. ಹಿಂದೆ ಧೃತವ್ರತನೆಂಬ ಪ್ರಸಿದ್ಧನಾದ ಬ್ರಾಹ್ಮಣನಿದ್ದನು. ಅವನಿಗೆ ಅತಿ ಸುಂದರಿಯಾದ ಮಹೀದೇವಿಯೆಂಬ ಹೆಂಡತಿಯಿದ್ದಳು.

೩. ಮತ್ತು ಆ ಧೃತವ್ರತನಿಗೆ ಸೂರ್ಯನಂತೆ ತೇಜಸ್ವಿಯಾದ ಸನಾಜ್ಜಾತನೆಂಬ ಮಗನಿದ್ದನು, ಕಾಲವಶದಿಂದ ಧೃತವ್ರತನು ಅಲ್ಪಾಯುಸ್ಸಿನಲ್ಲಿಯೇ ಮರಣಹೊಂದಿದನು.

ತತಃ ಸಾ ಬಾಲವಿಧವಾ ಬಾಲಪುತ್ರಾ ಸುರೂಪಿಣೀ ।
ತ್ರಾತಾರಂ ನೈವ ಪಶ್ಯಂತೀ ಗಾಲವಾಶ್ರಮಮಭ್ಯಗಾತ್ ॥ ೪ ॥

ತಸ್ಮೈ ಪುತ್ರಂ ನಿವೇದ್ಯಾಥ ಸ್ವೈರಿಣೀ ಪಾಪಮೋಹಿತಾ ।
ಸಾ ಬಭ್ರಾಮ ಬಹೂನ್ದೇಶಾನ್ಪುಂಸ್ಕಾಮಾ ಕಾಮಚಾರಿಣೀ ॥ ೫ ॥

ತತ್ಪುತ್ರೋ ಗಾಲವಗೃಹೇ ವೇದವೇದಾಂಗಪಾರಗಃ ।
ಜಾತೋಽಪಿ ಮಾತೃದೋಷೇಣ ವೇಶ್ಯೇರಿತಮತಿಸ್ತ್ವಭೂತ್ ॥ ೬ ॥

ಜನಸ್ಥಾನಮಿತಿ ಖ್ಯಾತಂ ನಾನಾಜಾತಿಸಮಾವೃತಂ ।
ತತ್ರಾಸೌ ಪಣ್ಯವೇಷೇಣ ಅಧ್ಯಾಸ್ತೇ ಚ ಮಹೀ ತಥಾ ॥ ೭ ॥

ತತ್ಸುತೋಽಪಿ ಬಹುನ್ದೇಶಾನ್ಪರಿಬಭ್ರಾಮ ಕಾಮುಕಃ ।
ಸೋಽಪಿ ಕಾಲವಶಾತ್ತತ್ರ ಜನಸ್ಥಾನೇಽವಸತ್ತದಾ ॥ ೮ ॥

---

೪. ಆಮೇಲೆ ಬಾಲವಿಧವೆಯೂ ಸುಂದರಿಯೂ ಆದ ಆ ಮಹೀದೇವಿಯು ರಕ್ಷಕರಾರೂ ಇಲ್ಲದೆ ತನ್ನ ಚಿಕ್ಕ ಮಗುವಿನೊಡನೆ ಗಾಲವಾಶ್ರಮಕ್ಕೆ ಬಂದು,

೫. ಗಾಲವಮುನಿಗೆ ಮಗನನ್ನರ್ಪಿಸಿ ಇನ್ನೂ ಕಾಮಸುಖವನ್ನು ಅನುಭವಿಸಬೇಕೆಂಬ ಪಾಪಬುದ್ಧಿಯಿಂದ ಪುರುಷರ ಸಂಗವನ್ನು ಬಯಸಿ ಸ್ವೇಚ್ಛೆಯಿಂದ ದೇಶದೇಶಗಳನ್ನು ಸಂಚರಿಸುತ್ತಾ ರತಿಸುಖವನ್ನನುಭವಿಸತೊಡಗಿದಳು.

೬. ಇತ್ತ ಅವಳ ಮಗನಾದ ಸನಾಜ್ಞಾತನು ಗಾಲವಾಶ್ರಮದಲ್ಲಿ ಬೆಳೆಯುತ್ತಾ ವೇದವೇದಾಂಗಗಳನ್ನು ಅಭ್ಯಾಸಮಾಡಿದನು. ಅದರೂ ಮಾತೃದೋಷದಿಂದ ಮುಂದೆ ಅವನು ವೇಶ್ಯೆಯರಲ್ಲಿ ಆಸಕ್ತಿಯುಳ್ಳ ದುಷ್ಟನಡತೆಯುಳ್ಳವನಾದನು.

೭. ಅತ್ತ ಮಹೀದೇವಿಯು ಅನೇಕಜಾತಿಯ ಜನಗಳು ತುಂಬಿರುವ ಜನಸ್ಥಾನದಲ್ಲಿ ವೇಶ್ಯಾವೃತ್ತಿಯನ್ನು ಅನುಸರಿಸಿ ಜೀವಿಸುತ್ತಿದ್ದಳು.

೮. ಆ ಮಹಿಯ ಮಗನಾದ ಸನಾಜ್ಞಾತನೂ ಕಾಮಾಭಿಲಾಷೆಯಿಂದ ದೇಶದೇಶಗಳನ್ನು ಸಂಚರಿಸುತ್ತಾ ಕಾಲವಶಾತ್ ಅವನೂ ಜನಸ್ಥಾನಕ್ಕೆ ಬಂದು ವಾಸಿಸತೊಡಗಿದನು.

ಸ್ತ್ರಿಯಮಾಕಾಂಕ್ಷತೇ ವೇಶ್ಯಾಂ ಧೃತವ್ರತಸುತೋ ದ್ವಿಜಃ ।
ಮಹೀ ಚಾಪಿ ಧನಂ ದಾತ್ನ್ಯಾನ್ಪುರುಷಾನ್ಸಮಪೇಕ್ಷತೇ ॥ ೯ ॥

ಮೇನೇ ನ ಪುತ್ರಮಾತ್ಮೀಯಂ ಸ ಚಾಪಿ ನ ತು ಮಾತರಂ ।
ತಯೋಃ ಸಮಾಗಮಶ್ಚಾಸೀದ್ವಿಧಿನಾ ಮಾತೃಪುತ್ರಯೋಃ ॥ ೧೦ ॥

ಏವಂ ಬಹುತಿಥೇ ಕಾಲೇ ಪುತ್ರೇ ಮಾತರಿ ಗಚ್ಛತಿ ।
ತಯೋಃ ಪರಸ್ಪರಂ ಜ್ಞಾನಂ ನೈವಾಸೀನ್ಮಾತೃಪುತ್ರಯೋಃ ॥ ೧೧ ॥

ಏವಂ ಪ್ರವರ್ತಮಾನಸ್ಯ ಪಿತೃಧರ್ಮೇಣ ಸನ್ಮತಿಃ ।
ಆಸೀತ್ತಸ್ಯಾಪ್ಯಸದ್ವೃತ್ತೇಃ ಶೃಣು ನಾರದ ಚಿತ್ರವತ್ ॥ ೧೨ ॥

---

೯. ಧೃತವ್ರತನ ಮಗನಾದ ಆ ಸನಾಜ್ಞಾತನು ಜನಸ್ಥಾನದಲ್ಲಿರುತ್ತಾ ವೇಶ್ಯೆಯರನ್ನು ಕಾಮಸುಖಕ್ಕಾಗಿ ಬಯಸುತ್ತಿದ್ದನು. ಮಹೀದೇವಿಯೂ ಸಹ ಧನವನ್ನು ಕೊಡುವಂತಹ ವಿಟಪುರುಷರನ್ನು ಬಯಸುತ್ತಿದ್ದಳು.

೧೦. ಮಹೀದೇವಿಗೆ ಇವನು ತನ್ನ ಮಗನೆಂದು ತಿಳಿಯಲಿಲ್ಲ. ಸನಾಜ್ಞಾತನಿಗೂ ಅವಳು ತನ್ನ ತಾಯಿಯೆಂದೂ ತಿಳಿಯಲಿಲ್ಲ. ವಿಧಿವಶದಿಂದ ಆ ಕಾಮುಕರಾದ ಮಕ್ಕಳಿಗೆ ಆಗ ಪರಸ್ಪರ ಶರೀರಸಂಪರ್ಕವು ನಡೆದುಹೋಯಿತು.

೧೧. ಹೀಗೆ ಮಗನು ಮಾತೃಗಮನವನ್ನು ಮಾಡುತ್ತಿರಲು ಬಹಳ ಕಾಲವು ಕಳೆಯಿತು. ಆದರೂ ಆ ಕಾಮುಕರಿಗೆ ತಾವು ತಾಯಿಮಕ್ಕಳೆಂದು ತಿಳಿಯಲೇ ಇಲ್ಲ.

೧೨. ಹೀಗೆ ಸನಾಜ್ಞಾತನು ಮಾತೃಗಮನದಂತಹ ದುರಾಚಾರವನ್ನು ಮಾಡುತ್ತಿರಲು ಅವನ ಧರ್ಮಿಷ್ಠನಾದ ತಂದೆಯ ಮಹಿಮೆಯಿಂದ ಸನಾಜ್ಞಾತನಿಗೆ ಆಶ್ಚರ್ಯಕರವಾಗಿ ಅರಿವುಂಟಾಯಿತು. ಅದನ್ನು ಹೇಳುವೆನು ಕೇಳು.

ಸ್ವೈರಸ್ಥಿತ್ವಾ ವರ್ತಮಾನೋ ನೇಪಂ ಸ ಪರಿಹಾತವಾನ್ ।
ಬ್ರಾಹ್ಮೀಂ ಸಂಧ್ಯಾಮನುಷ್ಠಾಯ ತದೂರ್ಧ್ವಂ ತು ಧನಾರ್ಜನಂ ॥ ೧೩ ॥

ವಿದ್ಯಾಬಲೇನ ವಿತ್ತಾನಿ ಬಹೂನ್ಯಾರ್ಜ್ಯ ದದಾತ್ಯಸೌ ।
ತಥಾ ಸ ಪ್ರಾತರುತ್ಥಾಯ ಗಂಗಾಂ ಗತ್ವಾ ಯಥಾವಿಧಿ ॥ ೧೪ ॥

ಶೌಚಾದಿ ಸ್ನಾನಸಂಧ್ಯಾದಿ ಸರ್ವಂ ಕಾರ್ಯಂ ಯಥಾಕ್ರಮಂ ।
ಕೃತ್ವಾ ತು ಬ್ರಾಹ್ಮಣಾನ್ನತ್ವಾ ತತೋಽಭ್ಯೇತಿ ಸ್ವಕರ್ಮಸು ॥ ೧೫ ॥

ಪ್ರಾತಃಕಾಲೇ ಗೌತಮೀಂ ತು ಯದಾ ಯಾತಿ ವಿರೂಪವಾನ್ ।
ಕುಷ್ಠಸರ್ವಾಂಗಶಿಥಿಲಃ ಪೂಯಶೋಣಿತನಿಃಸ್ರವಃ ॥ ೧೬ ॥

ಸ್ನಾತ್ವಾ ತು ಗೌತಮೀಂ ಗಂಗಾಂ ಯದಾ ಯಾತಿ ಸುರೂಪಧೃಕ್ ।
ಶಾಂತಃ ಸೂರ್ಯಾಗ್ನಿಸದೃಶೋ ಮೂರ್ತಿಮಾನಿವ ಭಾಸ್ಕರಃ ॥ ೧೭ ॥

---

೧೩. ಸ್ವೇಚ್ಛಾಚಾರವನ್ನು ಮಾಡುತ್ತಿದ್ದರೂ ಸನಾಜ್ಞಾತನು ಬ್ರಾಹ್ಮಣ ಕರ್ಮವನ್ನು ಬಿಟ್ಟಿರಲಿಲ್ಲ. ಮೊದಲು ಸಂಧ್ಯಾವಂದನ ಮುಂತಾದ ಕರ್ಮಗಳನ್ನು ಮಾಡಿ, ಆಮೇಲೆ ಧನವನ್ನು ಸಂಪಾದಿಸುತ್ತಿದ್ದನು. ತನ್ನ ವಿದ್ಯಾಬಲದಿಂದ ಹೇರಳವಾಗಿ ಧನವನ್ನು ಸಂಪಾದಿಸಿ, ವೇಶ್ಯೆಗೆ ಕೊಡುತ್ತಿದ್ದನು.

೧೪-೧೫. ಬೆಳಿಗ್ಗೆ ಮುಂಚಿತವಾಗೆದ್ದು ಗಂಗೆಗೆ ಹೋಗಿ ಶೌಚ, ಸ್ನಾನ ಸಂಧ್ಯಾವಂದನ ಮುಂತಾದುವನ್ನು ವಿಧಿವತ್ತಾಗಿ ಮಾಡುವನು. ಪೂಜ್ಯರಾದ ಬ್ರಾಹ್ಮಣರಿಗೆ ನಮಸ್ಕಾರಮಾಡಿ ಆಮೇಲೆ ತನ್ನ ಕೆಲಸವನ್ನು ನಿರ್ವಹಿಸುವನು.

೧೬. ಪ್ರಾತಃಕಾಲದಲ್ಲಿ ಗೌತಮೀನದಿಗೆ ಹೋಗುವಾಗ ಅವನ ಶರೀರವು ವಿರೂಪವಾಗಿರುತ್ತಿದ್ದಿತು ಕುಷ್ಠವು ಮೈಯೆಲ್ಲಾ ವ್ಯಾಪಿಸಿರುತ್ತಿದ್ದಿತು. ಕೀವು, ಮತ್ತು ರಕ್ತಗಳು ಮೈಯ್ಯಿಂದ ಸುರಿಯುತ್ತಿದ್ದುವು.

೧೭. ಗೌತಮೀನದಿಯಲ್ಲಿ ಸ್ನಾನಮಾಡಿ ಹಿಂತಿರುಗಿ ಬರುವಾಗ ಅವನು ರೂಪವಂತನಾಗಿರುತ್ತಿದ್ದನು. ಸೌಮ್ಯಕಳೆಯಿಂದೊಪ್ಪುತ್ತಾ ಸೂರ್ಯಾಗ್ನಿಗಳಂತೆ ತೇಜಸ್ವಿಯಾಗಿದ್ದು ರೂಪವನ್ನು ಧರಿಸಿಬಂದ ಎರಡನೆಯ ಸೂರ್ಯನಂತೆ ಪ್ರಕಾಶಿ

ಏತದ್ರೂಪದ್ವಯಂ ಸ್ವಸ್ಯ ನೈವ ಪಶ್ಯತಿ ಸ ದ್ವಿಜಃ ।
ಗಾಲವೋ ಯತ್ರ ಭಗವಾಂಸ್ತಪೋಜ್ಞಾನಪರಾಯಣಃ ॥ ೧೮ ॥

ಆಶ್ರಿತ್ಯ ಗೌತಮೀಂ ದೇವೀಮಾಸ್ತೇ ಚ ಮುನಿಭಿರ್ವೃತಃ ।
ಬ್ರಾಹ್ಮಣೋಽಪಿ ಚ ತತ್ರೈವ ನಿತ್ಯಂ ತೀರ್ಥಂ ಸಮೇತ್ಯ ಚ ॥ ೧೯ ॥

ಗಾಲವಂ ಚ ನಮಸ್ಕೃತ್ಯ ತತೋ ಯಾತಿ ಸ್ವಮಂದಿರಂ ।
ಗಂಗಾಯಾಃ ಸೇವನಾತ್ಪೂರ್ವಂ ಸನಾಜ್ಞಾತಸ್ಯ ಯದ್ವಪುಃ ॥ ೨೦ ॥

ಸ್ನಾನಸಂಧ್ಯೋತ್ತರೇ ಕಾಲೇ ಪುನರ್ಯದಪಿ ತದ್ದ್ವಿಜೇ ।
ಉಭಯಂ ತಸ್ಯ ತದ್ರೂಪಂ ಗಾಲವೋ ನಿತ್ಯಮೇವ ಚ ॥ ೨೧ ॥

ದೃಷ್ಟ್ವಾ ಸವಿಸ್ಮಯೋ ಮೇನೇ ಕಿಂಚಿದಸ್ತ್ಯತ್ರ ಕಾರಣಂ ।
ಏವಂ ಸವಿಸ್ಮಯೋ ಭೂತ್ವಾ ಗಾಲವಃ ಪ್ರಾಹ ತಂ ದ್ವಿಜಂ ॥ ೨೨ ॥

ಸುತ್ತಲಿದ್ದನು. ಆದರೂ ಆ ಸನಾಜ್ಞಾತನು ತನಗೆ ದಿನವೂ ಎರಡುಬಗೆಯ ರೂಪವುಂಟಾಗುವುದರ ತತ್ವವನ್ನು ತಿಳಿಯಲಾರದವನಾಗಿದ್ದನು.

೧೮. ಪೂಜ್ಯನೂ ತಪಸ್ವಿಯೂ ಸರ್ವಜ್ಞನೂ ಆದ ಗಾಲವಮುನಿಯು ಆ ಸ್ಥಳದಲ್ಲಿಯೇ ಗೌತಮೀನದಿಯನ್ನು ಸೇವಿಸುತ್ತಾ ಮುನಿಗಳೊಡನೆ ವಾಸವಾಗಿದ್ದನು.

೧೯. ಈ ಸನಾಜ್ಞಾತನೂ ಆ ಗಾಲವಾಶ್ರಮಕ್ಕೆ ಹೋಗಿ ನದಿಯಲ್ಲಿ ಸ್ನಾನಾದಿಗಳನ್ನು ಮಾಡಿಕೊಂಡು ಗಾಲವಮುನಿಗೆ ನಮಸ್ಕಾರಮಾಡಿ ನಿತ್ಯವೂ ಮನೆಗೆ ಬರುತ್ತಿದ್ದನು.

೨೦–೨೨. ಗೌತಮೀನದಿಯಲ್ಲಿ ಸ್ನಾನಮಾಡುವುದಕ್ಕೆ ಮೊದಲಿರುವ ಸನಾಜ್ಞಾತನ ರೂಪವನ್ನೂ, ಸ್ನಾನಮೊದಲಾದುವುಗಳನ್ನು ಮಾಡಿದಮೇಲೆ ಉಂಟಾಗುವ ಸುಂದರರೂಪವನ್ನೂ ನೋಡಿ, ಆ ಗಾಲವಮುನಿಯು ಆಶ್ಚರ್ಯ

ಗಚ್ಛಂತಂ ತು ನಮುಸ್ಕೃತ್ಯಾಥ ಸನಾಜ್ಞಾತಂ ಗುರುರ್ಗೃಹಂ ।
ಆಹೂಯ ಯತ್ನತೋ ಧೀಮಾನ್ಪಪ್ರಯಾ ವಿಸ್ಮಯೇನ ಚ ॥ ೨೩ ॥

॥ ಗಾಲವ ಉವಾಚ ॥

ಕೋ ಭವಾನ್ಕ್ವ ಚ ಗಂತಾಸಿ ಕಿಂ ಕರೋಷಿ ಕ್ವ ಭೋಕ್ಷ್ಯಸಿ ।
ಕಿಂ ನಾಮಾ ತ್ವಂ ಕ್ವ ಶಯ್ಯಾ ತೇ ಕಾ ತೇ ಭಾರ್ಯಾ ವದಸ್ವ ಮೇ ॥ ೨೪ ॥

॥ ಬ್ರಹ್ಮೋವಾಚ ॥

ಗಾಲವಸ್ಯ ವಚಃ ಶ್ರುತ್ವಾ ಬ್ರಾಹ್ಮಣೋಽಸ್ಯಾಹ ತಂ ಮುನಿಂ ॥ ೨೫ ॥

॥ ಬ್ರಾಹ್ಮಣ ಉವಾಚ ॥

ಶ್ವಃ ಕಥ್ಯತೇ ಮಯಾ ಸರ್ವಂ ಜ್ಞಾತ್ವಾ ಕಾರ್ಯವಿನಿರ್ಣಯಂ ॥ ೨೬ ॥

॥ ಬ್ರಹ್ಮೋವಾಚ ॥

ಏವಮುಕ್ತ್ವಾ ಗಾಲವಂ ತಂ ಸನಾಜ್ಞಾತೋ ಗೃಹಂ ಯಯೌ ।
ಭುಕ್ತ್ವಾ ರಾತ್ರೌ ತಯಾ ಸಮ್ಯಕ್ಶಯ್ಯಾಮಾಸಾದ್ಯ ಬಂಧಕೀಂ ।
ಉವಾಚ ಚಕಿತಃ ಸ್ಮೃತ್ವಾ ಗಾಲವಸ್ಯ ತು ಯದ್ವಚಃ ॥ ೨೭ ॥

ಗೊಂಡು ಇದಕ್ಕೆ ಏನೋ ಮಹತ್ತಾದ ಕಾರಣವಿರಬೇಕು ಎಂದು ನಿಶ್ಚಯಿಸಿ, ಒಂದುದಿನ ತನ್ನನ್ನು ನಮಸ್ಕರಿಸಿ ಮನೆಗೆ ಹೋಗುತ್ತಲಿರುವ ಆ ಸನಾಜ್ಞಾತನನ್ನು ಕರೆದು ವಿಶ್ವಾಸದಿಂದ,

೨೪–೨೬. ಎಲೈ ಬ್ರಾಹ್ಮಣ, ನೀನು ಯಾರು? ಎಲ್ಲಿಗೆ ಹೋಗುವೆ? ಏನು ಮಾಡುತ್ತಲಿರುವೆ? ಊಟವನ್ನೆಲ್ಲಿ ಮಾಡುತ್ತಿರುವೆ? ನಿನ್ನ ಹೆಸರೇನು? ನೀನು ಮಲಗುವುದೆಲ್ಲಿ? ನಿನ್ನ ಹೆಂಡತಿಯಾರು? ಎಂದು ಕೇಳಲು, ಗಾಲವ ಮುನಿಯ ಮಾತನ್ನು ಕೇಳಿ ಸನಾಜ್ಞಾತನು ಓ ಗಾಲವಮುನಿ, ನೀನು ಕೇಳಿದುದೆಲ್ಲವನ್ನೂ ಸರಿಯಾಗಿ ಜ್ಞಾಪಿಸಿಕೊಂಡು ನಾಳೆ ಹೇಳುವೆನು.

೨೭. ಎಂದು ಹೇಳಿ ಸನಾಜ್ಞಾತನು ಮನೆಗೆ ಬಂದು ರಾತ್ರಿಯಲ್ಲಿ ಸುಖಭೋಜನಮಾಡಿ ವೇಶ್ಯೆಯಾದ ಮಹೀದೇವಿಯೊಡನೆ ಹಾಸಿಗೆಯಲ್ಲಿ ಪವಡಿಸಿದನು. ಆಗ ಅವನಿಗೆ ಗಾಲವನ ಪ್ರಶ್ನೆಯು ಜ್ಞಾಪಕಕ್ಕೆ ಬಂದು ಅವಳನ್ನು ಕುರಿತು,

॥ ಬ್ರಾಹ್ಮಣ ಉವಾಚ ॥

ತ್ವಂ ತು ಸರ್ವಗುಣೋಪೇತಾ ಬಂಧಕ್ಯಪಿ ಪತಿವ್ರತಾ ।
ಆವಯೋಃ ಸದೃಶೀ ಪ್ರೀತಿರ್ಯಾವಜ್ಜೀವಂ ಪ್ರವರ್ತತಾಂ ॥ ೨೮ ॥

ತಥಾಪಿ ಕಿಂಚಿತ್ಪೃಚ್ಛಾಮಿ ಕಿಂ ನಾಮ್ನೀ ತ್ವಂ ಕ್ವ ವಾ ಕುಲಂ ।
ಕಿಂನು ಸ್ಥಾನಂ ಕ್ವ ವಾ ಬಂಧುರ್ಮಮ ಸರ್ವಂ ನಿವೇದ್ಯತಾಂ ॥ ೨೯ ॥

॥ ಬಂಧಕ್ಯುವಾಚ ॥

ಧೃತವ್ರತ ಇತಿ ಖ್ಯಾತೋ ಬ್ರಾಹ್ಮಣೋ ದೀಕ್ಷಿತಃ ಶುಚಿಃ ।
ತಸ್ಯ ಭಾರ್ಯಾ ಮಹೀ ಚಾಹಂ ಮತ್ಪುತ್ರೋ ಗಾಲವಾಶ್ರಮೇ ॥ ೩೦ ॥

ಉತ್ಸೃಷ್ಟೋ ಮತಿಮಾನ್ಬಾಲಃ ಸನಾಜ್ಜಾತ ಇತಿ ಶ್ರುತಃ ।
ಅಹಂ ತು ಪೂರ್ವದೋಷೇಣ ತ್ಯಕ್ತ್ವಾ ಧರ್ಮಂ ಕುಲಾಗತಂ ।
ಸ್ವೈರಿಣೀ ತ್ವಿಹ ವರ್ತೇಽಹಂ ವಿದ್ಧಿ ಮಾಂ ಬ್ರಾಹ್ಮಣೀಂ ದ್ವಿಜ ॥ ೩೧ ॥

---

೨೮. ಎಲೌ ಪ್ರಿಯೆ, ನೀನು ವೇಶ್ಯೆಯಾಗಿದ್ದರೂ ಗುಣವಂತೆಯೂ ಪತಿವ್ರತೆಯೂ ಆಗಿರುವೆ. ನಮ್ಮಿರ್ವರ ಪ್ರೇಮವು ಸ್ಥಿರವಾಗಿರಲಿ.

೨೯. ಆದರೂ ಕೆಲವು ವಿಷಯಗಳನ್ನು ಪ್ರಶ್ನಿಸುವೆನು. ನಿನ್ನ ಹೆಸರೇನು? ಕುಲವಾವುದು? ಸ್ಥಳವಾವುದು? ನಿನಗೆ ಬಂಧುಗಳಾರಾದರೂ ಇರುವರೆ? ಇದನ್ನೆಲ್ಲಾ ಹೇಳೆನಲು,

೩೦. ವೇಶ್ಯೆಯು, ಎಲೈ ಪ್ರಿಯನೇ, ಹಿಂದೆ ಧೃತವ್ರತನೆಂಬ ಮಹಾನಿಷ್ಠನೂ ಪವಿತ್ರನೂ ಆದ ಓರ್ವ ಬ್ರಾಹ್ಮಣನಿದ್ದನು. ನಾನು ಅವನ ಹೆಂಡತಿಯು, ಮಹೀದೇವಿಯೆಂದು ನನ್ನ ಹೆಸರು. ನನಗೆ ಸನಾಜ್ಜಾತನೆಂಬ ಮಗನಿರುವನು. ಅವನನ್ನು ಗಾಲವಾಶ್ರಮದಲ್ಲಿ ಬಿಟ್ಟಿರುವೆನು.

೩೧. ಆದರೆ ನಾನು ಜನ್ಮಾಂತರದ ಪಾಪದಿಂದ ಕುಲಧರ್ಮವನ್ನು ಬಿಟ್ಟು ವೇಶ್ಯೆಯಾಗಿ ಜೀವಿಸುತ್ತಿರುವೆನು. ವಸ್ತುತಃ ನಾನು ಬ್ರಾಹ್ಮಣಸ್ತ್ರೀಯು ಎಂದಳು.

॥ ಬ್ರಹ್ಮೋವಾಚ ॥

ತಸ್ಯಾಸ್ತದ್ವಚನಂ ಶ್ರುತ್ವಾ ಮರ್ಮವಿದ್ಧ ಇವಾಭವತ್ ।
ಪಪಾತ ಸಹಸಾ ಭೂಮೌ ವೇಶ್ಯಾ ತಂ ವಾಕ್ಯಮಬ್ರವೀತ್ ॥ ೩೨ ॥

॥ ವೇಶ್ಯೋವಾಚ ॥

ಕಿಂ ತು ಜಾತಂ ದ್ವಿಜಶ್ರೇಷ್ಠ ಕ್ವ ಚ ಪ್ರೀತಿರ್ಗತಾ ತವ ।
ಕಿಂ ತು ವಾಕ್ಯಂ ಮಯಾ ಚೋಕ್ತಂ ತವ ಚಿತ್ತವಿರೋಧಕೃತ್ ॥ ೩೩ ॥

ಆತ್ಮಾನಮಾತ್ಮನಾಶ್ವಾಸ್ಯ ಬ್ರಾಹ್ಮಣೋ ವಾಕ್ಯಮಬ್ರವೀತ್ ॥ ೩೪ ॥

॥ ಬ್ರಾಹ್ಮಣ ಉವಾಚ ॥

ಧೃತವ್ರತಃ ಪಿತಾ ವಿಪ್ರಸ್ತತ್ಪುತ್ರೋಽಹಂ ಸನಾದ್ಯತಃ ।
ಮಾತಾ ಮಹೀ ಮಮ ಇಯಂ ಮಮ ದೈವಾದುಪಾಗತಾ ॥ ೩೫ ॥

---

೩೨. ವೇಶ್ಯೆಯಾದ ಮಹೀದೇವಿಯ ಆ ಮಾತನ್ನು ಕೇಳಿ ಸನಾಜ್ಜಾತನು ಮರ್ಮಸ್ಥಳ (ಅಪಾಯಸ್ಥಳ) ದಲ್ಲಿ ಏಟನ್ನು ತಿಂದವನಂತೆ ಆ ಕೂಡಲೇ ಭೂಮಿಯಲ್ಲಿ ಉರುಳಿ ಬಿದ್ದನು. ಅದನ್ನು ನೋಡಿ ಆ ವೇಶ್ಯೆಯು,

೩೩-೩೪. ಓ ಬ್ರಾಹ್ಮಣೋತ್ತಮ, ನಿನಗೇನಾಯಿತು? ನನ್ನಲ್ಲಿ ನಿನಗೆ ಪ್ರೀತಿಯಿಲ್ಲವೆ? ನಿನಗೆ ವ್ಯಥೆಯಾಗುವಂತಹ ಯಾವ ಮಾತನ್ನು ನಾನು ನಿನಗೆ ಆಡಿರುವೆನು ಹೇಳೆನಲು, ಆಗ ಆ ಬ್ರಾಹ್ಮಣನು ತನ್ನಲ್ಲಿಯೇ ಸಮಾಧಾನಗೊಂಡು,

೩೫. ಬ್ರಾಹ್ಮಣನು ಹೇಳಿದನು—ಧೃತವ್ರತನೇ ನನ್ನ ತಂದೆಯು. ನಾನೇ ಅವನ ಮಗನಾದ ಸನಾಜ್ಜಾತನೆಂಬುವನು. ನನ್ನ ತಾಯಿಯಾದ ಮಹೀದೇವಿಯು ನೀನೆ. ಇಂತಹ ಘೋರಪ್ರಸಂಗವು ನನಗೆ ದುರದೃಷ್ಟದಿಂದ ಉಂಟಾಗಿದೆ ಎಂದು ಪ್ರಲಾಪಿಸುತ್ತಿರಲು,

॥ ಬ್ರಹ್ಮೋವಾಚ ॥

ಏತಚ್ಛ್ರುತ್ವಾ ತಸ್ಯ ವಾಕ್ಯಂ ಸಾಪ್ಯಭೂದತಿದುಃಖಿತಾ ।
ತಯೋಸ್ತು ಶೋಚತೋಃ ಪಶ್ಚಾತ್ಪ್ರಭಾತೇ ವಿಮಲೇ ರವೌ ।
ಗಾಲವಂ ಮುನಿಶಾರ್ದೂಲಂ ಗತ್ವಾ ವಿಪ್ರೋ ನ್ಯವೇದಯತ್ ॥ ೩೬ ॥

॥ ಬ್ರಾಹ್ಮಣ ಉವಾಚ ॥

ಧೃತವ್ರತಸುತೋ ಬ್ರಹ್ಮಂಸ್ತ್ವಯಾ ಪೂರ್ವಂ ತು ಪಾಲಿತಃ ।

ಉಪನೀತಸ್ತ್ವಯಾ ಚೈವ ಮಹೀ ಮಾತಾ ಮನು ಪ್ರಭೋ ೩೭ ॥

ಕಿಂ ಕರೋಮಿ ಚ ಕಿಂ ಕೃತ್ವಾ ನಿಷ್ಕೃತಿರ್ಮನು ವೈ ಭವೇತ್ ॥ ೩೮ ॥

॥ ಬ್ರಹ್ಮೋವಾಚ ॥

ತದ್ವಿಪ್ರವಚನಂ ಶ್ರುತ್ವಾ ಗಾಲವಃ ಪ್ರಾಹ ಮಾ ಶುಚಃ ।
ತದೇವಂ ದ್ವಿವಿಧಂ ರೂಪಂ ನಿತ್ಯಂ ಪಶ್ಯಾಮ್ಯಪೂರ್ವವತ್ ॥ ೩೯ ॥

---

೩೬. ಸನಾಜ್ಞಾತನ ಆ ಮಾತನ್ನು ಕೇಳಿ ಮಹೀದೇವಿಯು ತುಂಬಾ ದುಃಖಿತಳಾದಳು. ಹೀಗೆ ಅವರು ಪರಸ್ಪರ ದುಃಖಿಸುತ್ತಿರಲು ಬೆಳ್ಳಗೆ ಬೆಳಗಾಯಿತು, ಆಗ ಆ ಬ್ರಾಹ್ಮಣನು ಗಾಲವಮುನಿಯ ಬಳಿಗೆ ಹೋಗಿ

೩೭-೩೮. ಓ ಬ್ರಾಹ್ಮಣೋತ್ತಮ, ನಾನು ಧೃತವ್ರತನ ಮಗನು, ನೀನೇ ನನಗೆ ಉಪನಯನಸಂಸ್ಕಾರವನ್ನು ಮಾಡಿರುವೆ. ಈ ವೇಶ್ಯೆಯೇ ನನ್ನ ತಾಯಿಯಾದ ಮಹೀದೇವಿಯು. ಓ ಸ್ವಾಮಿ, ಈಗ ನಾನೇನು ಮಾಡಲಿ ? ಯಾವ ಕರ್ಮದಿಂದ ನನ್ನ ಪಾಪವು ಪರಿಹಾರವಾದೀತು ? ಎಂದು ಬೇಡಿಕೊಳ್ಳಲು,

೩೯. ಸನಾಜ್ಞಾತನ ಆ ಮಾತನ್ನು ಕೇಳಿ ಗಾಲವಮುನಿಯು ಎಲೈ ಬ್ರಾಹ್ಮಣ, ಶೋಕಿಸಬೇಡ. ನಿನ್ನ ರೂಪವು ನಿತ್ಯವೂ ಎರಡುಬಗೆಯಾಗುತ್ತಿತ್ತು. ಅದನ್ನು ನೋಡಿ ಆಶ್ಚರ್ಯದಿಂದ ನಿನ್ನ ಪೂರ್ವ ವೃತ್ತಾಂತವನ್ನು ಕೇಳಿದೆನು. ಈಗ ಎಲ್ಲವೂ ತಿಳಿಯಿತು.

ತತಃ ಪೃಷ್ಟೋऽಸಿ ವೃತ್ತಾಂತಂ ಶ್ರುತಂ ಜ್ಞಾತಂ ಮಯಾ ಯಥಾ ।
ಯತ್ಕೃತ್ಯಂ ತವ ತತ್ಸರ್ವಂ ಗಂಗಾಯಾಂ ಪ್ರತ್ಯಗಾತ್ಕ್ಷಯಂ ॥ ೪೦ ॥

ಅಸ್ಯ ತೀರ್ಥಸ್ಯ ಮಾಹಾತ್ಮ್ಯಾದಸ್ಯಾ ದೇವ್ಯಾಃ ಪ್ರಸಾದತಃ ।
ಪೂತೋऽಸಿ ಪ್ರತ್ಯಹಂ ವತ್ಸ ನಾತ್ರ ಕಾರ್ಯಾ ವಿಚಾರಣಾ ॥ ೪೧ ॥

ಪ್ರಭಾತೇ ತವ ರೂಪಾಣಿ ಸಪಾಪಾನಿ ತ್ವಹರ್ನಿಶಂ ।
ಪಶ್ಯೇऽಹಂ ಪುನರಪ್ಯೇವ ರೂಪಂ ತವ ಗುಣೋತ್ತಮಂ ॥ ೪೨ ॥

ಆಗಚ್ಛಂತಂ ತ್ವಾಗೋಯುಕ್ತಂ ಗಚ್ಛಂತಂ ತ್ವಾಮನಾಗಸಂ ।
ಪಶ್ಯಾಮಿ ನಿತ್ಯಂ ತಸ್ಮಾತ್ತ್ವಂ ಪೂತೋ ದೇವ್ಯಾ ಕೃತೋऽಧುನಾ ॥ ೪೩ ॥

ತಸ್ಮಾನ್ನ ಕಾರ್ಯಂ ತೇ ಕಿಂಚಿದವಶಿಷ್ಟಂ ಭವಿಷ್ಯತಿ ।
ಇಯಂ ಚ ಮಾತಾ ತೇ ವಿಪ್ರ ಜ್ಞಾತಾ ಯಾ ಚೈವ ಬಂಧಕೀ ॥ ೪೪ ॥

೪೦-೪೧. ನೀನು ಮಾಡಿದ ಪಾಪವೆಲ್ಲವೂ ನೀನು ಗಂಗಾನದಿಯಲ್ಲಿ ನಿತ್ಯವೂ ಸ್ನಾನಮಾಡಿದುದರಿಂದ ನಾಶವಾಗಿರುವುದು. ಈ ತೀರ್ಥದ ಮತ್ತು ಗಂಗಾದೇವಿಯ ಮಹಿಮೆಯಿಂದ ನೀನು ಪರಿಶುದ್ಧನಾಗಿರುವೆ. ಇದರಲ್ಲಿ ಸಂಶಯವಿಲ್ಲ.

೪೨. ಎಲೈ ಬ್ರಾಹ್ಮಣ, ಬೆಳಗಿನ ಹೊತ್ತು ನಿನ್ನ ರೂಪವು ಪಾಪಮಯವಾಗಿ ವಿಕಾರವಾಗಿ ಕಾಣಿಸುತ್ತಿತ್ತು. ಪುನಃ ಗಂಗಾಸ್ನಾನವಾದಮೇಲೆ ನಿನ್ನ ರೂಪವು ಸುಂದರವಾಗಿರುತ್ತಿತ್ತು. ಈ ಬದಲಾವಣೆಯನ್ನು ನಾನು ದಿನವೂ ನೋಡುತ್ತಿದ್ದೆನು.

೪೩. ಸೂಳೆಯ ಮನೆಯಿಂದ ಬರುವಾಗ ನೀನು ಪಾಪಿಷ್ಠನಾಗಿರುತ್ತಿದ್ದೆ. ಗಂಗಾಸ್ನಾನಮಾಡಿ ತಿರುಗಿ ಮನೆಗೆ ಹೋಗುವಾಗ ಪರಿಶುದ್ಧನಾಗುತ್ತಿದ್ದೆ. ಆದುದರಿಂದ ಗಂಗಾದೇವಿಯು ನಿನ್ನನ್ನು ಪವಿತ್ರನನ್ನಾಗಿ ಮಾಡಿರುವಳು.

೪೪-೪೫. ಆದುದರಿಂದ ನೀನೀಗ ಮಾಡಬೇಕಾದುದೇನೂ ಇಲ್ಲ. ಸೂಳೆಯಾದ ನಿನ್ನ ಈ ತಾಯಿಯೂ ಸಹ ಈಗ ಪಶ್ಚಾತ್ತಾಪವನ್ನು ಹೊಂದಿರು

ಪಶ್ಚಾತ್ತಾಪಂ ಗತಾತ್ಯಂತಂ ನಿವೃತ್ತಾ ತ್ವಥ ಪಾತಕಾತ್ ।
ಭೂತಾನಾಂ ವಿಷಯೇ ಪ್ರೀತಿರ್ವತ್ಸ ಸ್ವಾಭಾವಿಕೀ ಯತಃ ॥ ೪೫ ॥

ಸತ್ಸಂಗತೋ ಮಹಾಪುಣ್ಯಾನ್ನಿವೃತ್ತಿರ್ದೈವತೋ ಭವೇತ್ ।
ಅತ್ಯರ್ಥಮನುತಪ್ತೇಯಂ ಪ್ರಾಗಾಚರಿತಪುಣ್ಯತಃ ॥ ೪೬ ॥

ಸ್ನಾನಂ ಕೃತ್ವಾ ಚಾತ್ರ ತೀರ್ಥೇ ತತಃ ಪೂತಾ ಭವಿಷ್ಯತಿ ।
ತಥಾ ತೌ ಚಕ್ರತುರುಭೌ ಮಾತಾಪುತ್ರೌ ಚ ನಾರದ ॥ ೪೭ ॥

ಸ್ನಾನಾದ್ಬಭೂವತುರುಭೌ ಗತಪಾಪಾವಸಂಶಯಂ ।
ತತಃ ಪ್ರಭೃತಿ ತತ್ತೀರ್ಥಂ ಧೌತಪಾಪಂ ಪ್ರಚಕ್ಷತೇ ॥ ೪೮ ॥

ವಳು. ಅಲ್ಲದೇ ಅವಳಿಗೆ ಪ್ರಾಣಿದಯೆಯು ತುಂಬಾ ಇರುವುದು. ಅದರಿಂದ ಅವಳ ಪಾಪವೂ ನಾಶವಾಗಿರುವುದು.

೪೬. ದೈವಾನುಗ್ರಹದಿಂದ ಲಭಿಸುವ ಸತ್ಪುರುಷರ ಸಹವಾಸವು ಮಹಾ ಪವಿತ್ರವಾದುದು. ಈ ನಿನ್ನ ತಾಯಿಗೆ ಹಿಂದೆ ಸತ್ಪುರುಷನಾದ ಪತಿಯ ಸಹ ವಾಸವು ಲಭಿಸಿದ್ದಿತು. ಈಗಲೂ ತುಂಬಾ ಪಶ್ಚಾತ್ತಾಪವನ್ನು ಹೊಂದಿರುವಳು. ಈ ಪವಿತ್ರವಾದ ಗಂಗಾತೀರ್ಥದಲ್ಲಿ ಸ್ನಾನಮಾಡಿದರೆ ಅವಳೂ ಪರಿಶುದ್ಧಳಾಗು ವಳು ಎಂದನು.

೪೭. ಎಲೈ ನಾರದ—ಗಾಲವಮುನಿಯ ಮಾತಿನಂತೆ ಆ ಮಾತಾಪುತ್ರ ರಾದ ಮಹೀದೇವಿ ಸನಾಜ್ಞಾತರು ಆ ಗಂಗಾ ತೀರ್ಥದಲ್ಲಿ ಸ್ನಾನಮಾಡಿದರು. ಅದರಿಂದ ಅವರ ಪಾಪವೆಲ್ಲವೂ ನಾಶವಾಯಿತು.

೪೮. ಅದುಮೊದಲುಗೊಂಡು ಆ ತೀರ್ಥವು ಧೌತಪಾಪವೆಂದೂ ಪಾಪ ಪ್ರಣಾಶನವೆಂದೂ, ಗಾಲವತೀರ್ಥವೆಂದೂ ಪ್ರಸಿದ್ಧವಾಯಿತು.

ಪಾಪಪ್ರಣಾಶನಂ ನಾಮ ಗಾಲವಂ ಚೇತಿ ವಿಶ್ರುತಂ ।
ಮಹಾಪಾತಕಮಲ್ಪಂ ವಾ ತಥಾ ಯಚ್ಚೋಪಪಾತಕಂ ।
ತತ್ಸರ್ವಂ ನಾಶಯೇದೇತದ್ಧೌತಪಾಪಂ ಸುಪುಣ್ಯದಂ ॥ ೪೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಗೌತಮೀಮಾಹಾತ್ಮ್ಯೇ
ಧೌತಪಾಪಮಾಹಾತ್ಮ್ಯನಿರೂಪಣಂ ನಾಮ
ದ್ವಿನವತಿತಮೋಽಧ್ಯಾಯಃ

---

೪೯. ಮಹಾಪವಿತ್ರವಾದ ಆ ಧೌತಪಾಪತೀರ್ಥವು ಮಹಾಪಾಪಗಳೇ ಮೊದಲಾದ ಎಲ್ಲಾ ಬಗೆಯ ಪಾಪಗಳನ್ನೂ ನಾಶಮಾಡುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಧೌತಪಾಪತೀರ್ಥವರ್ಣನವೆಂಬ ತೊಂಭತ್ತೆರಡನೆಯ ಅಧ್ಯಾಯವು ಮುಗಿದುದು..

ಗೌತಮೀಮಾಹಾತ್ಮ್ಯೆಯಲ್ಲಿ ಇಪ್ಪತ್ತೆರಡನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ತ್ರಿನವತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಯತ್ರ ದಾಶರಥೀ ರಾಮಃ ಸೀತಯಾ ಸಹಿತೋ ದ್ವಿಜ ।
ಪಿತ್ರ್ಯಾನ್ಸಂತರ್ಪಯಾಮಾಸ ಪಿತೃತೀರ್ಥಂ ತತೋ ವಿದುಃ ॥ ೧ ॥

ತತ್ರ ಸ್ನಾನಂ ಚ ದಾನಂ ಚ ಪಿತ್ರ್ಯಾಣಾಂ ತರ್ಪಣಂ ತಥಾ ।
ಸರ್ವಮಕ್ಷಯತಾಮೇತಿ ನಾತ್ರ ಕಾರ್ಯಾ ವಿಚಾರಣಾ ॥ ೨ ॥

ಯತ್ರ ದಾಶರಥೀ ರಾಮೋ ವಿಶ್ವಾಮಿತ್ರಂ ಮಹಾಮುನಿಂ ।
ಪೂಜಯಾಮಾಸ ರಾಜೇಂದ್ರೋ ಮುನಿಭಿಸ್ತತ್ತ್ವದರ್ಶಿಭಿಃ ॥ ೩ ॥

ತೊಂಭತ್ತಮೂರನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದನೇ ಕೇಳು. ದಶರಥನ ಮಗನಾದ ಶ್ರೀರಾಮನು ಸೀತೆಯೊಡನೆ ಗೌತಮೀನದಿಯಲ್ಲಿ ಪಿತೃತರ್ಪಣವನ್ನು ಮಾಡಿದ ಸ್ಥಳಕ್ಕೆ ಪಿತೃತೀರ್ಥವೆಂದು ಹೆಸರು.

೨. ಆ ಪಿತೃತೀರ್ಥದಲ್ಲಿ ಸ್ನಾನದಾನಗಳನ್ನೂ, ಪಿತೃತರ್ಪಣವನ್ನೂ ಮಾಡಿದರೆ ಎಂದಿಗೂ ನಾಶವಾಗದಂತಹ ಅಕ್ಷಯವಾದ ಪುಣ್ಯವು ಲಭಿಸುವುದು, ಇದು ನಿಶ್ಚಯವು.

೩–೪. ಆ ಶ್ರೀರಾಮನು ವಿಶ್ವಾಮಿತ್ರಮಹಾಮುನಿಯನ್ನು ಪೂಜಿಸಿದ

ವಿಶ್ವಾಮಿತ್ರಂ ತು ತತ್ತೀರ್ಥಮೃಷಿಜುಷ್ಟಂ ಸುಪುಣ್ಯದಂ ।
ತತ್ಸ್ವರೂಪಂ ಚ ವಕ್ಷ್ಯಾಮಿ ಪಠಿತಂ ವೇದವಾದಿಭಿಃ ॥ ೪ ॥

ಅನಾವೃಷ್ಟಿರಭೂತ್ಪೂರ್ವಂ ಪ್ರಜಾನಾಮತಿಭೀಷಣಾ ।
ವಿಶ್ವಾಮಿತ್ರೋ ಮಹಾಪ್ರಾಜ್ಞಃ ಸಶಿಷ್ಯೋ ಗೌತಮೀಮಗಾತ್ ॥ ೫ ॥

ಶಿಷ್ಯಾನ್ಪುತ್ರಾಂಶ್ಚ ಜಾಯಾಂ ಚ ಕೃಶಾನ್ದೃಷ್ಟ್ವಾ ಕ್ಷುಧಾತುರಾನ್ ।
ವ್ಯಥಿತಃ ಕೌಶಿಕಃ ಶ್ರೀಮಾನ್ ಶಿಷ್ಯಾನಿದಮುವಾಚ ಹ ॥ ೬ ॥

॥ ವಿಶ್ವಾಮಿತ್ರ ಉವಾಚ ॥

ಯಥಾಕಥಂಚಿತ್ಕಿಂಚಿದ್ಯತ್ರ ಕ್ವಾಪಿ ಯಥಾ ತಥಾ ।
ಆನೀಯತಾಂ ಕಿಂತು ಭಕ್ಷ್ಯಂ ಭೋಜ್ಯಂ ವಾ ಮಾ ವಿಲಂಬ್ಯತಾಂ ।
ಇದಾನೀಮೇವ ಗಂತವ್ಯಮಾನೇತವ್ಯಂ ಕ್ಷಣೇನ ತು ॥ ೭ ॥

ಸ್ಥಳಕ್ಕೆ ವಿಶ್ವಾಮಿತ್ರತೀರ್ಥವೆಂದು ಹೆಸರು, ಆ ತೀರ್ಥವು ಪುಣ್ಯತಮವಾಗಿದ್ದು ಋಷಿಗಳೆಲ್ಲರೂ ಅದನ್ನು ಸೇವಿಸುವರು. ವೇದದಲ್ಲಿಯೂ ಆ ತೀರ್ಥದ ಮಾಹಾತ್ಮ್ಯವು ಹೇಳಲ್ಪಟ್ಟಿರುವುದು. ಅದನ್ನು ಹೇಳುವೆನು ಕೇಳು.

೫. ಹಿಂದೆ ಬಹುಕಾಲ ಮಳೆಯಿಲ್ಲದೆ ಘೋರಕ್ಷಾಮವು ಬಂದಿತು. ಆಗ ವಿಶ್ವಾಮಿತ್ರಮುನಿಯು ಶಿಷ್ಯರೊಡನೆ ಗೌತಮೀನದಿಯ ತೀರಕ್ಕೆ ಹೋಗಿ ಅಲ್ಲಿ ವಾಸಮಾಡುತ್ತಿದ್ದನು.

೬. ಶಿಷ್ಯರು, ಮಕ್ಕಳು ಹೆಂಡತಿ ಇವರೆಲ್ಲರೂ ಹಸಿವಿನಿಂದ ಬಳಲಿ ಕೃಶರಾಗಿರುವುದನ್ನು ನೋಡಿ ಆ ವಿಶ್ವಾಮಿತ್ರನು ವ್ಯಥೆಗೊಂಡು ತನ್ನ ಶಿಷ್ಯರನ್ನು ಕರೆದು,

೭. ಎಲೈ ಶಿಷ್ಯರೇ, ಹೇಗಾದರೂ ಚಿಂತೆಯಿಲ್ಲ, ಎಲ್ಲಿಂದಲಾದರೂ ಯಾವುದಾದರೂ ಭಕ್ಷ್ಯವನ್ನೋ ಭೋಜ್ಯವನ್ನೋ ಪ್ರಯತ್ನಪಟ್ಟು ತನ್ನಿರಿ. ವಿಳಂಬಮಾಡಬೇಡಿರಿ, ಈಗಲೇ ಹೊರಡಿ, ಜಾಗ್ರತೆಯಾಗಿ ತನ್ನಿರಿ, ಎನ್ನಲು.

॥ ಬ್ರಹ್ಮೋವಾಚ ॥
ಋಷೇಸ್ತದ್ವಚನಾಚ್ಛಿಷ್ಯಾಃ ಕ್ಷುಧಿತಾಸ್ತ್ವರಯಾ ಯಯುಃ ।
ಅಟಮಾನಾ ಇತಸ್ತೇತೋ ಮೃತಂ ದದೃಶಿರೇ ಶುನಂ ॥ ೮ ॥

ತಮಾದಾಯ ತ್ವರಾಯುಕ್ತಾ ಆಚಾರ್ಯಾಯ ನ್ಯವೇದಯನ್ ।
ಸೋಽಪಿ ತಂ ಭದ್ರಮಿತ್ಯುಕ್ತ್ವಾ ಪ್ರತಿಜಗ್ರಾಹ ಪಾಣಿನಾ ॥ ೯ ॥

ವಿಶಸಧ್ವಂ ಶ್ವಮಾಂಸಂ ಚ ಕ್ಷಾಲಯಧ್ವಂ ಚ ವಾರಿಣಾ ।
ಪಚಧ್ವಂ ಮಂತ್ರವಚ್ಚಾಪಿ ಹುತ್ವಾಗ್ನೌ ತು ಯಥಾವಿಧಿ ॥ ೧೦ ॥

ದೇವಾನೃಷೀನ್ಪಿತೄನನ್ಯಾಂಸ್ತರ್ಪಯಿತ್ವಾತಿಥೀನ್ಗುರೂನ್ ।
ಸರ್ವೇ ಭೋಕ್ಷ್ಯಾಮಹೇ ಶೇಷಮಿತ್ಯುವಾಚ ಸ ಕೌಶಿಕಃ ॥ ೧೧ ॥

ತಶ್ವಾಮಿತ್ರವಚಃ ಶ್ರುತ್ವಾ ಶಿಷ್ಯಾಶ್ಚಕ್ರುಸ್ತಥೈವ ತತ್ ।
ಪಚ್ಯಮಾನೇ ಶ್ವಮಾಂಸೇ ತು ದೇವದೂತೋಽಗ್ನಿರಭ್ಯಗಾತ್ ।
ದೇವಾನಾಂ ಸದನೇ ಸರ್ವಂ ದೇವೇಭ್ಯಸ್ತನ್ನ್ಯವೇದಯತ್ ॥ ೧೨ ॥

---

೮. ಹಸಿವುಗೊಂಡಿದ್ದ ಆ ಶಿಷ್ಯರೂ ಸಹ ವಿಶ್ವಾಮಿತ್ರನ ಮಾತನ್ನು ಕೇಳಿ ಕೂಡಲೇ ಹೊರಟು ಆಹಾರವನ್ನು ಅರಸತೊಡಗಿದರು. ಆಗ ಅವರಿಗೊಂದು ಸತ್ತ ನಾಯಿಯು ಸಿಕ್ಕಿತು.

೯. ಆ ಸತ್ತನಾಯಿಯನ್ನು ತೆಗೆದುಕೊಂಡು ಶಿಷ್ಯರು ತ್ವರೆಯಿಂದ ಬಂದು ಗುರುವಿಗೆ ಅದನ್ನೊಪ್ಪಿಸಿದರು. ವಿಶ್ವಾಮಿತ್ರನು ಒಳ್ಳೆಯದಾಯಿತು ಎಂದುಕೊಂಡು ಅದನ್ನೇ ಸ್ವೀಕರಿಸಿದನು.

೧೦-೧೧. ಆಮೇಲಾ ಮುನಿಯು—ಎಲೈ ಶಿಷ್ಯರೇ, ಈ ನಾಯಿಯ ಮಾಂಸವನ್ನು ಕತ್ತರಿಸಿ ನೀರಿನಿಂದ ತೊಳೆದು ಬೇಯಿಸಿರಿ. ಆಮೇಲೆ ವಿಧಿವತ್ತಾಗಿ ಮಂತ್ರದಿಂದ ಅಗ್ನಿಯಲ್ಲಿ ಹೋಮಮಾಡಿ ದೇವತೆಗಳು, ಋಷಿಗಳು ಪಿತೃಗಳು, ಅತಿಥಿಗಳು ಇವರೆಲ್ಲರಿಗೂ ನಿವೇದಿಸಿ ಮಿಕ್ಕುದನ್ನು ನಾವು ಭುಜಿಸೋಣ ಎಂದು ಶಿಷ್ಯರಿಗೆ ಹೇಳಿದನು.

೧೨-೧೩. ವಿಶ್ವಾಮಿತ್ರನ ಮಾತಿನಂತೆ ಶಿಷ್ಯರು ನಾಯಿಯ ಮಾಂಸವನ್ನು ಬೇಯಿಸುತ್ತಿರಲು ದೇವದೂತನಾದ ಅಗ್ನಿಯು ಸ್ವರ್ಗಕ್ಕೆ ಬಂದು ಎಲೈ

॥ ಅಗ್ನಿರುವಾಚ ॥
ದೇವೈಃ ಶ್ವಮಾಂಸಂ ಭೋಕ್ತವ್ಯಮಾಪನ್ನನ್ಯೃಷಿಕಲ್ಪಿತಂ ॥ ೧೩ ॥

॥ ಬ್ರಹ್ಮೋವಾಚ ॥
ಅಗ್ನೇಸ್ತದ್ವಚನಾದಿಂದ್ರಃ ಶ್ಯೇನೋ ಭೂತ್ವಾ ವಿಹಾಯಸಿ ।
ಸ್ಥಾಲೀಮಥಾಹರತ್ಪೂರ್ಣಾಂ ಮಾಂಸೇನ ಪಿಹಿತಾಂ ತದಾ ॥ ೧೪ ॥

ತತ್ಕರ್ಮ ದೃಷ್ಟ್ವಾ ಶಿಷ್ಯಾಸ್ತೇ ಋಷೇಃ ಶ್ಯೇನಂ ನ್ಯವೇದಯನ್ ।
ಹೃತಾ ಸ್ಥಾಲೀ ಮುನಿಶ್ರೇಷ್ಠ ಶ್ಯೇನೇನಾಕೃತಬುದ್ಧಿನಾ ॥ ೧೫ ॥

ತತಶ್ಚುಕೋಪ ಭಗವಾನ್ ಶಪ್ತುಕಾಮಸ್ತದಾ ಹರಿಂ ।
ತತೋ ಜ್ಞಾತ್ವಾ ಸುರಪತಿಃ ಸ್ಥಾಲೀಂ ಚಕ್ರೇ ಮಧುಪ್ಲುತಾಂ ॥ ೧೬ ॥

ಪುನರ್ನಿವೇಶಯಾಮಾಸ ಉಲ್ಕಾಸ್ವೇವ ಖಗೋ ಹರಿಃ ।
ಮಧುನಾ ತು ಸಮಾಯುಕ್ತಾಂ ವಿಶ್ವಾಮಿತ್ರಶ್ಚುಕೋಪ ಹ ।
ಸ್ಥಾಲೀಂ ವೀಕ್ಷ್ಯ ತತಃ ಕೋಪಾದಿದಮಾಹ ಸ ಕೌಶಿಕಃ ॥ ೧೭ ॥

ದೇವತೆಗಳೇ, ವಿಶ್ವಾಮಿತ್ರನು ಅರ್ಪಿಸಿದ ನಾಯಿಮಾಂಸವನ್ನು ದೇವತೆಗಳು ತಿನ್ನಬೇಕಾಗುವುದು ಎಂದು ದೇವತೆಗಳಿಗೆ ಆ ಸಮಾಚಾರವನ್ನು ಹೇಳಲು,

೧೪. ಅಗ್ನಿಯ ಮಾತನ್ನು ಕೇಳಿ ಇಂದ್ರನು ಗಿಡುಗನ ರೂಪವನ್ನು ಧರಿಸಿ ಹಾರಿ ಬಂದು ವಿಶ್ವಾಮಿತ್ರಶಿಷ್ಯರು ಬೇಯಿಸುತ್ತಿದ್ದ ಮಾಂಸದ ಪಾತ್ರೆಯನ್ನೇ ಅಪಹರಿಸಿದನು.

೧೫. ಗಿಡುಗವು ಮಾಂಸವನ್ನು ಕಚ್ಚಿಕೊಂಡು ಹೋದುದನ್ನು ನೋಡಿ ಶಿಷ್ಯರು—ಓ ಗುರುವೆ, ಯಾವುದೋ ಒಂದು ದುಷ್ಟಗಿಡುಗವು ಮಾಂಸಪಾತ್ರೆಯನ್ನೆ ಅಪಹರಿಸಿಕೊಂಡು ಹೋಯಿತು ಎಂದು ಹೇಳಿದರು.

೧೬. ಆಗ ವಿಶ್ವಾಮಿತ್ರನು ಕೋಪಗೊಂಡು ಇಂದ್ರನನ್ನು ಶಪಿಸಲು ಧ್ಯುಕ್ತನಾದನು. ಅದನ್ನು ತಿಳಿದು ಇಂದ್ರನು ಮಾಂಸಪಾತ್ರೆಯಲ್ಲಿ ಮಧುವನ್ನು (ಅಮೃತವನ್ನು) ತುಂಬಿದನು.

೧೭. ಹಾಗೆ ಅಮೃತತುಂಬಿದ ಪ್ರಾತ್ರೆಯನ್ನು ಆ ಗಿಡುಗರೂಪನಾದ ಇಂದ್ರನು ಮೊದಲಿದ್ದ ಬೆಂಕಿಯ ಮೇಲೆಯೇ ಇರಿಸಿದನು. ಪಾತ್ರೆಯಲ್ಲಿ ಅಮೃತವಿರುವುದನ್ನು ನೋಡಿ ವಿಶ್ವಾಮಿತ್ರನು ಮತ್ತೂ ಕೋಪಗೊಂಡು,

॥ ವಿಶ್ವಾಮಿತ್ರ ಉವಾಚ ॥

ಶ್ವಮಾಂಸಮೇವ ಸೋ ದೇಹಿ ತ್ವಂ ಹರಾಮೃತಮುತ್ತಮಂ ।
ನೋ ಚೇತ್ತ್ವಾಂ ಭಸ್ಮಸಾತ್ಕುರ್ಯಾಮಿಂದ್ರೋ ಭೀತಸ್ತದಾಽಬ್ರವೀತ್ ೧೮

॥ ಇಂದ್ರ ಉವಾಚ ॥

ಮಧು ಹುತ್ವಾ ಯಥಾನ್ಯಾಯಂ ಪಿಬ ಪುತ್ರೈಃ ಸಮನ್ವಿತಃ ।
ಕಿಮನೇನ ಶ್ವಮಾಂಸೇನ ಅಮೇಧ್ಯೇನ ಮಹಾಮುನೇ ॥ ೧೯ ॥

॥ ಬ್ರಹ್ಮೋವಾಚ ॥

ವಿಶ್ವಾಮಿತ್ರೋಽಪಿ ನೇತ್ಯಾಹ ಭುಕ್ತೇನೈಕೇನ ಕಿಂ ಫಲಂ ।
ಪ್ರಜಾಃ ಸರ್ವಾಶ್ಚ ಸೀದಂತಿ ಕಿಂ ತೇನ ಮಧುನಾ ಹರೇ ॥ ೨೦ ॥

ಸರ್ವೇಷಾಮಮೃತಂ ಚೇತ್ಸ್ಯಾದ್ಭೋಕ್ಷ್ಯೇಽಹಮಮೃತಂ ಶುಚಿ ।
ಅಥವಾ ದೇವಪಿತರೋ ಭೋಕ್ಷ್ಯಂತೀದಂ ಶ್ವಮಾಂಸಕಂ ॥ ೨೧ ॥

---

೧೮. ಎಲೈ ಇಂದ್ರನೇ, ನಾಯಿಮಾಂಸವನ್ನೇ ನಮಗೆ ಕೊಡು. ಈ ಅಮೃತವನ್ನು ತೆಗೆದುಕೊಂಡು ಹೋಗು. ಹಾಗೆ ಮಾಡದಿದ್ದರೆ ನಿನ್ನನ್ನು ಭಸ್ಮ ಮಾಡುವೆನು, ಎಂದನು. ಆಗ ಇಂದ್ರನು ಹೆದರಿ,

೧೯. ಓ ಮಹಾಮುನಿ, ಈ ಅಮೃತವನ್ನೇ ಹೋಮಮಾಡಿ ಶಿಷ್ಯರು ಮಕ್ಕಳೊಡನೆ ಭುಜಿಸು, ಅಪವಿತ್ರವಾದೀ ನಾಯಿಮಾಂಸದಿಂದೇನು ? ಎಂದನು.

೨೦. ಆಗ ವಿಶ್ವಾಮಿತ್ರನು ತನ್ನಲ್ಲಿಯೇ ಇಂತು ಯೋಚಿಸಿದನು. ನಾನೊಬ್ಬನು ಅಮೃತವನ್ನುಂಡು ಪ್ರಯೋಜನವೇನು ? ಪ್ರಜೆಗಳೆಲ್ಲರೂ ಹಸಿವಿನಿಂದ ಸಾಯುತ್ತಿರುವರು, ಅಂತಹ ಅಮೃತವು ನನಗೇಕೆ ?

೨೧. ಎಲ್ಲರಿಗೂ ಅಮೃತವು ಲಭಿಸುವುದಾದರೆ ನಾನೂ ಅಮೃತವನ್ನು ಸ್ವೀಕರಿಸುವೆನು. ಅಲ್ಲದಿದ್ದರೆ, ದೇವತೆಗಳೂ ಪಿತೃಗಳೂ ಈ ನಾಯಿಯ ಮಾಂಸವನ್ನು ತಿನ್ನಬೇಕು.

ಪಶ್ಚಾದಹಂ ತಚ್ಚ ಮಾಂಸಂ ಭೋಕ್ಷ್ಯೇ ನಾಸ್ತ್ಯತಮಸ್ತಿ ಮೇ ।
ತತೋ ಭೀತಃ ಸಹಸ್ರಾಕ್ಷೋ ಮೇಘಾನಾಹೂಯ ತತ್ಕ್ಷಣಾತ್ ॥ ೨೨ ॥

ವವರ್ಷ ಚಾಮೃತಂ ವಾರಿ ಹ್ಯಮೃತೇನಾರ್ಪಿತಾಃ ಪ್ರಜಾಃ ।
ಪಶ್ಚಾತ್ತದಮೃತಂ ಪುಣ್ಯಂ ಹರಿದತ್ತಂ ಯಥಾವಿಧಿ ॥ ೨೩ ॥

ತರ್ಪಯಿತ್ವಾ ಸುರಾನಾದೌ ತರ್ಪಯಿತ್ವಾ ಜಗತ್ತ್ರಯಂ ।
ಪ್ರಿಯಃ ಸಂಭುಕ್ತವಾಞ್ಛಿಷ್ಯೈರ್ವಿಶ್ವಾಮಿತ್ರಃ ಸ್ವಭಾರ್ಯಯಾ ॥ ೨೪ ॥

ತತಃ ಪ್ರಭೃತಿ ತತ್ತೀರ್ಥಮಾಖ್ಯಾನಂ ಚಾತಿಪುಣ್ಯದಂ ।
ಯತ್ರಾಗತಃ ಸುರಪತಿರ್ಲೋಕಾನಾಮಮೃತಾರ್ಪಣಂ ॥ ೨೫ ॥

ಸಂಜಾತಂ ಮಾಂಸವರ್ಜಂ ತು ತತ್ತೀರ್ಥಂ ಪುಣ್ಯದಂ ನೃಣಾಂ ।
ತತ್ರ ಸ್ನಾನಂ ಚ ದಾನಂ ಚ ಸರ್ವಕ್ರತುಫಲಪ್ರದಂ ॥ ೨೬ ॥

---

೨೨. ಆಮೇಲೆ ಮಿಕ್ಕ ಮಾಂಸವನ್ನು ಸೇವಿಸುವೆನು, ಇದು ನಿಜವಾದ ಮಾತು ಎಂದು ನಿಶ್ಚಯಿಸಿ ಆ ನಾಯಿಯ ಮಾಂಸದಿಂದ ದೇವತೆಗಳಿಗೆ ಹವಿರ್ಭಾಗವನ್ನು ಕೊಡಲುದ್ಯುಕ್ತನಾದನು. ಆಗ ಇಂದ್ರನು ಹೆದರಿ ಕೂಡಲೇ ಮೇಘಗಳನ್ನು ಕರೆದು ಅಮೃತಜಲವನ್ನು ಸುರಿಸಿದನು. ಆ ಅಮೃತದಿಂದ ಪ್ರಜೆಗಳೆಲ್ಲರೂ ಸುಖಿತರಾದರು.

೨೩–೨೪. ಆಮೇಲೆ ವಿಶ್ವಾಮಿತ್ರಮುನಿಯು ಇಂದ್ರನು ಕೊಟ್ಟ ಅಮೃತವನ್ನು ತೆಗೆದುಕೊಂಡು ಮೊದಲು ದೇವತೆಗಳನ್ನು ಸಂತೋಷಗೊಳಿಸಿ (ಅರ್ಪಿಸಿ) ಮೂರು ಲೋಕಗಳಿಗೂ ಕ್ಷೇಮವಾಗುವಂತೆ ಮಾಡಿ, ಆಮೇಲೆ ತಾನು ಶಿಷ್ಯರು ಮತ್ತು ಹೆಂಡತಿಯೊಡನೆ ಭೋಜನಮಾಡಿದನು.

೨೫. ಆ ಮೊದಲುಗೊಂಡು ಇಂದ್ರನು ಪ್ರಜೆಗಳಿಗೆ ಅಮೃತಜಲವನ್ನು ಸುರಿಸಿದ ಸ್ಥಳವು ಮಹಾಪವಿತ್ರವಾದ ತೀರ್ಥವಾಯಿತು.

೨೬. ಆ ಸ್ಥಳದಲ್ಲಿಯೇ ಮಾಂಸದ ಬದಲು ಅಮೃತವನ್ನು ಸೇವಿಸುವಂತಾದುದು. ಆ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ಸಕಲಯಾಗಗಳ ಫಲವು ಲಭಿಸುವುದು.

ತತಃ ಪ್ರಭೃತಿ ತತ್ತೀರ್ಥಂ ವಿಶ್ವಾಮಿತ್ರಮಿತಿ ಸ್ಮೃತಂ ।
ಮಧುತೀರ್ಥಮಥೈಂದ್ರಂ ಚ ಶ್ಯೇನಂ ಪರ್ಜನ್ಯಮೇವ ಚ ॥ ೨೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ವಿಶ್ವಾಮಿತ್ರತೀರ್ಥವರ್ಣನಂ ನಾಮ ತ್ರಿನವತಿತಮೋಽಧ್ಯಾಯಃ

---

೨೭. ಆ ಮೊದಲುಗೊಂಡು ಆ ತೀರ್ಥಕ್ಕೆ ವಿಶ್ವಾಮಿತ್ರತೀರ್ಥವೆಂದೂ, ಮಧುತೀರ್ಥವೆಂದೂ, ಇಂದ್ರತೀರ್ಥವೆಂದೂ, ಶ್ಯೇನತೀರ್ಥವೆಂದೂ ಪರ್ಜನ್ಯ ತೀರ್ಥವೆಂದೂ ಅನೇಕ ಹೆಸರಾದುವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ವಿಶ್ವಾಮಿತ್ರತೀರ್ಥವರ್ಣನವೆಂಬ ತೊಂಭತ್ತ ಮೂರನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಇಪ್ಪತ್ತನಾಲ್ಕನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಚತುರ್ನವತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಶ್ವೇತತೀರ್ಥಮಿತಿ ಖ್ಯಾತಂ ತ್ರೈಲೋಕ್ಯೇ ವಿಶ್ರುತಂ ಶುಭಂ ।
ತಸ್ಯ ಶ್ರವಣಮಾತ್ರೇಣ ಸರ್ವಪಾಪೈಃ ಪ್ರಮುಚ್ಯತೇ ॥ ೧ ॥

ಶ್ವೇತೋ ನಾಮ ಪುರಾ ವಿಪ್ರೋ ಗೌತಮಸ್ಯ ಪ್ರಿಯಃ ಸಖಾ ।
ಆತಿಥ್ಯಪೂಜಾನಿರತೋ ಗೌತಮೀತೀರಮಾಶ್ರಿತಃ ॥ ೨ ॥

ತೊಂಭತ್ತನಾಲ್ಕನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಶ್ವೇತತೀರ್ಥವೆಂಬ ಮತ್ತೊಂದು ತೀರ್ಥವು ಅಲ್ಲಿ ಪ್ರಸಿದ್ಧವಾಗಿರುವುದು. ಆ ತೀರ್ಥವನ್ನು ಕೇಳಿದ ಮಾತ್ರದಿಂದಲೇ ಪಾಪಗಳೆಲ್ಲವೂ ನಾಶವಾಗುವುವು.

೨. ಹಿಂದೆ ಶ್ವೇತನೆಂಬ ಓರ್ವ ಮುನಿ ಇದ್ದನು. ಅವನು ಗೌತಮ ಮುನಿಯ ಸ್ನೇಹಿತನಾಗಿದ್ದನು. ಗೌತಮೀ ತೀರದಲ್ಲಿ ವಾಸಮಾಡುತ್ತಾ ಸದಾ ಅತಿಥಿಗಳನ್ನು ಸತ್ಕರಿಸುತ್ತಿದ್ದನು.

ಮನಸಾ ಕರ್ಮಣಾ ವಾಚಾ ಶಿವಭಕ್ತಿಪರಾಯಣಃ ।
ಧ್ಯಾಯಂತಂ ತಂ ದ್ವಿಜಶ್ರೇಷ್ಠಂ ಪೂಜಯಂತಂ ಸದಾಶಿವಂ ॥ ೩ ॥

ಪೂರ್ಣಾಯುಷಂ ದ್ವಿಜವರಂ ಶಿವಭಕ್ತಿಪರಾಯಣಂ ।
ನೇತುಂ ದೂತಾಃ ಸಮಾಜಗ್ಮುರ್ದಕ್ಷಿಣಾಶಾಪತೇಸ್ತದಾ ॥ ೪ ॥

ನಾಶಕ್ನುವನ್ಗೃಹಂ ತಸ್ಯ ಪ್ರವೇಷ್ಟುಮಪಿ ನಾರದ ।
ತದಾ ಕಾಲೇ ವ್ಯತಿಕ್ರಾಂತೇ ಚಿತ್ರಕೋ ಮೃತ್ಯುಮಬ್ರವೀತ್ ॥ ೫ ॥

॥ ಚಿತ್ರಕ ಉವಾಚ ॥

ಕಿಂ ನ್ಯಾಯಾತಿ ಕ್ಷೀಣಜೀವೋ ಮೃತ್ಯೋ ಶ್ವೇತಃ ಕಥಂ ತ್ವಿತಿ ।
ನಾದ್ಯಾಪ್ಯಾಯಾಂತಿ ದೂತಾಸ್ತೇ ಮೃತ್ಯೋರ್ನೈವೋಚಿತಂ ತು ತೇ ॥ ೬ ॥

॥ ಬ್ರಹ್ಮೋವಾಚ ॥

ತತಶ್ಚ ಕುಪಿತೋ ಮೃತ್ಯುಃ ಪ್ರಾಯಾಚ್ಛ್ವೇತಗೃಹಂ ಸ್ವಯಂ ।
ಬಹಿಃಸ್ಥಿತಾಂಸ್ತದಾ ಪಶ್ಯನ್ಮೃತ್ಯುರ್ದೂತಾನ್ಭಯಾರ್ದಿತಾನ್ ।
ಪ್ರೋವಾಚ ಕಿಮಿದಂ ದೂತಾ ಮೃತ್ಯುಮೂಚುಶ್ಚ ದೂತಕಾಃ ॥ ೭ ॥

೩-೪. ಅಲ್ಲನೆ ಶ್ವೇತನು ಮನೋವಾಕ್ಕಾಯಕರ್ಮಗಳಿಂದಲೂ ಶಿವನಲ್ಲಿ ಭಕ್ತಿಯನ್ನಿರಿಸಿ ಶಿವನನ್ನು ಪೂಜಿಸುತ್ತಾ ಸದಾ ಧ್ಯಾನಿಸುತ್ತಿದ್ದನು. ಹೀಗಿರಲು ಅವನ ಪುರುಷಾಯುಸ್ಸು ಮುಗಿಯಿತು. ಶಿವಭಕ್ತನಾದಾ ಶ್ವೇತನನ್ನು ಕರೆದೊಯ್ಯಲು ಯಮನ ದೂತರು ಬಂದರು.

೫. ಆದರೆ ಆ ಶಿವಭಕ್ತನ ಮನೆಯನ್ನು ಪ್ರವೇಶಿಸಲು ಆ ಯಮದೂತರಿಗೆ ಸಾಧ್ಯವಾಗಲಿಲ್ಲ. ಕಾಲವು ಕಳೆದುಹೋಯಿತು. ಆದರೂ ಯಮದೂತರು ಬರದಿರುವುದನ್ನು ನೋಡಿ ಚಿತ್ರಗುಪ್ತನು ಯಮನೊಡನೆ ಇಂತೆಂದನು.

೬. ಓ ಮೃತ್ಯುದೇವ, ಆಯುಸ್ಸು ತೀರಿದ್ದರೂ ಶ್ವೇತನು ಇನ್ನೂ ಬರದಿರಲು ಕಾರಣವೇನು? ಅವನನ್ನು ಸೆಳೆದು ತರಲು ಹೋದ ದೂತರೂ ಬಂದಿಲ್ಲ. ಇದು ನನಗೆ ಸರಿಯಾಗಿ ಕಾಣುವುದಿಲ್ಲ ಎಂದನು.

೭. ಆಗ ಯಮನು ಕೋಪಗೊಂಡು ತಾನೇ ಶ್ವೇತನ ಮನೆಗೆ ಹೋಗಿ ನೋಡಲು ಅಲ್ಲಿ ಭಯದಿಂದ ಮನೆಯ ಹೊರಗೆ ನಿಂತಿರುವ ತನ್ನ ದೂತರನ್ನು ನೋಡಿದನು. ದೂತರೇ, ಇದೇನು? ಹೀಗೇಕೆ ಹೊರಗೆ ಸುಮ್ಮನೆ ನಿಂತಿರುವಿರಿ? ಎಂದು ಕೇಳಲು ದೂತರು,

॥ ದೂತಾ ಊಚುಃ ॥

ಶಿವೇನ ರಕ್ಷಿತಂ ಶ್ವೇತಂ ವಯಂ ನೋ ವೀಕ್ಷಿತುಂ ಕ್ಷಮಾಃ ।
ಯೇಷಾಂ ಪ್ರಸನ್ನೋ ಗಿರಿಶಸ್ತೇಷಾಂ ಕಾ ನಾಮ ಭೀತಯಃ ॥ ೮ ॥

॥ ಬ್ರಹ್ಮೋವಾಚ ॥

ಪಾಶಪಾಣಿಸ್ತದಾ ಮೃತ್ಯುಃ ಪ್ರಾವಿಶದ್ಯತ್ರ ಸ ದ್ವಿಜಃ ।
ನಾಸೌ ವಿಪ್ರೋ ವಿಜಾನಾತಿ ಮೃತ್ಯುಂ ವಾ ಯಮಕಿಂಕರಾನ್ ॥ ೯ ॥

ಶಿವಂ ಪೂಜಯತೇ ಭಕ್ತ್ಯಾ ಶ್ವೇತಸ್ಯ ತು ಸಮೀಪತಃ ।
ಮೃತ್ಯುಂ ಪಾಶಧರಂ ದೃಷ್ಟ್ವಾ ದಂಡೀ ಪ್ರೋವಾಚ ವಿಸ್ಮಿತಃ ॥ ೧೦ ॥

॥ ದಂಡ್ಯುವಾಚ ॥

ಕಿಮತ್ರ ವೀಕ್ಷಸೇ ಮೃತ್ಯೋ ದಂಡಿನಂ ಮೃತ್ಯುರಬ್ರವೀತ್ ॥ ೧೧ ॥

---

೮. ಯಾರಿಗೆ ಶಿವನು ಪ್ರಸನ್ನನಾಗಿರುವನೋ ಅವರಿಗೆ ಯಾವ ಹೆದರಿಕೆಯೂ ಇಲ್ಲ. ಶಿವನಿಂದ ರಕ್ಷಿಸಲ್ಪಟ್ಟ ಈ ಶ್ವೇತನನ್ನು ನೋಡಲೂ ನಾವು ಸಮರ್ಥರಲ್ಲ ಎಂದರು.

೯. ಆಗ ಮೃತ್ಯುವು ಪಾಶವನ್ನು ಹಿಡಿದು ತಾನೇ ಶ್ವೇತಮುನಿಯ ಬಳಿಗೆ ಹೋದನು. ಆದರಾ ಬ್ರಾಹ್ಮಣನಿಗೆ ಯಮದೂತರು ಮತ್ತು ಮೃತ್ಯುವು ಬಂದಿರುವುದು ತಿಳಿಯಲೇ ಇಲ್ಲ.

೧೦. ಭಕ್ತಿಯಿಂದ ಶಿವನನ್ನು ಪೂಜಿಸುತ್ತಿದ್ದನು. ಆ ಶ್ವೇತನ ಬಳಿಯಲ್ಲಿ ಅವನನ್ನು ರಕ್ಷಿಸುತ್ತಾ ನಂದಿಕೇಶ್ವರನು ನಿಂತಿದ್ದನು. ಆ ನಂದಿಯು ಪಾಶವನ್ನು ಹಿಡಿದು ಬಂದ ಮೃತ್ಯುವನ್ನು ನೋಡಿ ಅಚ್ಚರಿಗೊಂಡು,

೧೧. ನಂದಿಯು—ಎಲೈ ಮೃತ್ಯು, ಇಲ್ಲೇನನ್ನು ನೋಡುತ್ತಿರುವೆ? ಇಲ್ಲಿ ನಿನಗೇನು ಕೆಲಸ? ಎಂದು ಪ್ರಶ್ನಿಸಲು ಮೃತ್ಯುವಿಂತೆಂದನು.

॥ ಮೃತ್ಯುರುವಾಚ ॥

ಶ್ವೇತಂ ನೇತುಮಿಹಾಯಾತಸ್ತಸ್ಮಾದ್ವೀಕ್ಷೇ ದ್ವಿಜೋತ್ತಮಂ ॥ ೧೨ ॥

॥ ಬ್ರಹ್ಮೋವಾಚ ॥

ತ್ವಂ ಗಚ್ಛೇತ್ಯಬ್ರವೀದ್ದಂಡೀ ಮೃತ್ಯುಃ ಪಾಶಾನಥಾಕ್ಷಿಪತ್ ।
ಶ್ವೇತಾಯ ಮುನಿಶಾರ್ದೂಲ ತತೋ ದಂಡೀ ಚುಕೋಪ ಹ ॥ ೧೩ ॥

ಶಿವದತ್ತೇನ ದಂಡೇನ ದಂಡೀ ಮೃತ್ಯುಮತಾಡಯತ್ ।
ತತಃ ಪಾಶಧರೋ ಮೃತ್ಯುಃ ಪಪಾತ ಧರಣೀತಲೇ ॥ ೧೪ ॥

ತತಸ್ತೇ ಸತ್ವರಂ ದೂತಾ ಹತಂ ಮೃತ್ಯುಮವೇಕ್ಷ್ಯ ಚ ।
ಯಮಾಯ ಸರ್ವಮವದನ್ವಧಂ ಮೃತ್ಯೋಽಸ್ತು ದಂಡಿನಾ ॥ ೧೫ ॥

ತತಶ್ಚ ಕುಪಿತೋ ಧರ್ಮೋ ಯಮೋ ಮಹಿಷವಾಹನಃ ।
ಚಿತ್ರಗುಪ್ತಂ ಬಹುಬಲಂ ಯಮದಂಡಂ ಚ ರಕ್ಷಕಂ ॥ ೧೬ ॥

---

೧೨. ಈ ಶ್ವೇತನನ್ನು ಕರೆದುಕೊಂಡು ಹೋಗಲು ಬಂದಿರುವೆನು. ಆದುದರಿಂದ ಇವನನ್ನು ನೋಡುತ್ತಿರುವೆನು ಎಂದನು.

೧೩. ಆಗ ನಂದಿಯು ಮೃತ್ಯುವಿಗೆ ನೀನು ಹೊರಟು ಹೋಗು ಎಂದನು. ಮೃತ್ಯುವು ನಂದಿಯ ಮಾತನ್ನು ಕೇಳದೆ ಶ್ವೇತಮುನಿಯ ಮೇಲೆ ತನ್ನ ಪಾಶವನ್ನು ಹಾಕಿದನು. ಆದರಿಂದ ನಂದಿಗೆ ಬಹು ಕೋಪಬಂದು,

೧೪. ಶಿವನು ಕೊಟ್ಟ ದಂಡದಿಂದ ಮೃತ್ಯುವನ್ನು ಪ್ರಹರಿಸಿದನು. ಅದರಿಂದ ಮೃತ್ಯುವು ಪಾಶವನ್ನು ಹಿಡಿದಂತೆಯೇ ನೆಲಕ್ಕೆ ಉರುಳಿದನು.

೧೫. ಮೃತ್ಯುವು ನೆಲಕ್ಕುರುಳಿದುದನ್ನು ನೋಡಿ ಯಮದೂತರು ಹೆದರಿ ಕೂಡಲೇ ಯಮನ ಬಳಿಗೆ ತೆರಳಿ ನಂದಿಯು ಮೃತ್ಯುವನ್ನು ವಧಿಸಿದ ಸಮಾಚಾರವನ್ನು ಹೇಳಿದರು.

೧೬-೧೮. ಆ ಸಮಾಚಾರವನ್ನು ಕೇಳಿ ಯಮಧರ್ಮರಾಜನು ಚಿತ್ರ ಗುಪ್ತ, ಯಮದಂಡ, ಭೂತವೇತಾಳಗಳು, ಮನೋರೋಗಗಳು, ಕಣ್ಣುರೋಗ

ಮಹಿಷಂ ಭೂತವೇತಾಲಾನಾಧಿವ್ಯಾಧೀಂಸ್ತಥೈವ ಚ ।
ಅಕ್ಷಿರೋಗಾನ್ಕುಕ್ಷಿರೋಗಾನ್ಕರ್ಣಶೂಲಂ ತಥೈವ ಚ　॥ ೧೭ ॥

ಜ್ವರಂ ಚ ತ್ರಿವಿಧಂ ಪಾಪಂ ನರಕಾಣಿ ಪೃಥಕ್ಪೃಥಕ್ ।
ತ್ವರಂತಾಮಿತಿ ತಾನುಕ್ತ್ವಾ ಜಗಾಮ ತ್ವರಿತೋ ಯಮಃ　॥ ೧೮ ॥

ಏತೈರನ್ಯೈಃ ಪರಿವೃತೋ ಯತ್ರ ಶ್ವೇತೋ ದ್ವಿಜೋತ್ತಮಃ ।
ತಮಾಯಾಂತಂ ಯಮಂ ದೃಷ್ಟ್ವಾ ನಂದೀ ಪ್ರೋವಾಚ ಸಾಯುಧಃ ॥ ೧೯ ॥

ವಿನಾಯಕಂ ತಥಾ ಸ್ಕಂದಂ ಭೂತನಾಥಂ ತು ದಂಡಿನಂ ।
ತತ್ರ ತದ್ಯುದ್ಧಮಭವತ್ಸರ್ವಲೋಕಭಯಾವಹಂ　॥ ೨೦ ॥

ಕಾರ್ತಿಕೇಯಃ ಸ್ವಯಂ ಶಕ್ತ್ಯಾ ಬಿಭೇದ ಯಮಕಿಂಕರಾನ್ ।
ದಕ್ಷಿಣಾಶಾಪತಿಂ ಚಾಪಿ ನಿಜಘಾನ ಬಲಾನ್ವಿತಂ　॥ ೨೧ ॥

ಹೊಟ್ಟೆರೋಗ, ಕಿವಿಶೂಲೆ ಮುಂತಾದ ರೋಗಗಳನ್ನೂ, ಶೀತಜ್ವರ, ಉಷ್ಣಜ್ವರ, ತಾಪತ್ರಯಗಳು, ನರಕಗಳು ಇವರೆಲ್ಲರಿಗೂ ಜಾಗ್ರತೆ ಸಿದ್ದರಾಗಿ ತನ್ನೊಡನೆ ಬರುವಂತೆ ಅಪ್ಪಣೆಮಾಡಿ ತಾನು ಕೋಣವನ್ನೇರಿ ಅವರೆಲ್ಲರೊಡನೆ ತ್ವರೆಯಿಂದ ಶ್ವೇತಮುನಿಯ ಬಳಿಗೆ ಹೊರಟನು.

೧೯. ಯಮನು ಸೈನ್ಯದೊಡನೆ ಬರುತ್ತಿರುವುದನ್ನು ನೋಡಿ ನಂದಿಯು ಆಯುಧವನ್ನು ಹಿಡಿದು ವಿನಾಯಕ, ಷಣ್ಮುಖ, ಭೂತನಾಥ ದಂಡೀ ಮೊದಲಾದವರಿಗೆ ಸಿದ್ಧರಾಗಿ ಎಂದು ಹೇಳಿ ಯುದ್ಧಕ್ಕೆ ಸಿದ್ಧನಾದನು.

೨೦-೨೧. ಆಗ ಯಮದೂತರಿಗೂ ಶಿವದೂತರಿಗೂ ಘೋರಯುದ್ಧವಾಯಿತು. ಕುಮಾರಸ್ವಾಮಿಯು ಶಕ್ತಿಯಿಂದ ಯಮದೂತರನ್ನೆಲ್ಲಾ ಸದೆಬಡಿದು ದಕ್ಷಿಣದಿಕ್ಕಿನ ಒಡೆಯನಾದ ಯಮನನ್ನೂ ಸಂಹರಿಸಿದನು. ಯುದ್ಧದಲ್ಲಿ ಸತ್ತುಳಿದ ಯಮದೂತರು ಕೆಲವರು ಯಮನ ತಂದೆಯಾದ ಸೂರ್ಯನ ಬಳಿಗೆ ಹೋಗಿ ನಡೆದ ಸಮಾಚಾರವನ್ನರುಹಿದರು.

ಹತಾವಶಿಷ್ಟಾ ಯಾಮ್ಯಾಸ್ತೇ ಆದಿತ್ಯಾಯ ನ್ಯವೇದಯನ್ ।
ಆದಿತ್ಯೋಽಪಿ ಸುರೈಃ ಸಾರ್ಧಂ ಶ್ರುತ್ವಾ ತನ್ಮಹದದ್ಭುತಂ ॥ ೨೨ ॥

ಲೋಕಪಾಲೈರನುವೃತೋ ಮಮಾಂತಿಕಮುಪಾಗಮತ್ ।
ಅಹಂ ವಿಷ್ಣುಶ್ಚ ಭಗವಾನಿಂದ್ರೋಽಗ್ನಿರ್ವರುಣಸ್ತಥಾ ॥ ೨೩ ॥

ಚಂದ್ರಾದಿತ್ಯಾವಶ್ವಿನೌ ಚ ಲೋಕಪಾಲಾ ಮರುದ್ಗಣಾಃ ।
ಏತೇ ಚಾನ್ಯೇ ಚ ಬಹವೋ ವಯಂ ಯಾತಾ ಯಮಾಂತಿಕಂ ॥ ೨೪ ॥

ಮೃತ ಆಸ್ತೇ ದಕ್ಷಿಣೇಶೋ ಗಂಗಾತೀರೇ ಬಲಾನ್ವಿತಃ ।
ಸಮುದ್ರಾಶ್ಚ ನದಾ ನಾಗಾ ನಾನಾಭೂತಾನ್ಯನೇಕಶಃ ॥ ೨೫ ॥

ತತ್ರಾಜಗ್ಮುಃ ಸುರೇಶಾನಂ ದ್ರಷ್ಟುಂ ವೈವಸ್ವತಂ ಯಮಂ ।
ತಂ ದೃಷ್ಟ್ವಾ ಹತಸೈನ್ಯಂ ಚ ಯಮಂ ದೇವಾ ಭಯಾರ್ದಿತಾಃ ।
ಕೃತಾಂಜಲಿಪುಟಾಃ ಶಂಭುಮೂಚುಃ ಸರ್ವೇ ಪುನಃ ಪುನಃ ॥ ೨೬ ॥

---

೨೨. ಸೂರ್ಯನು ಆ ಭಯಂಕರ ವೃತ್ತಾಂತವನ್ನು ಕೇಳಿ ಭಯಗೊಂಡು ದೇವತೆಗಳೊಡನೆ ನನ್ನ (ಬ್ರಹ್ಮನ) ಬಳಿಗೆ ಬಂದನು.

೨೩–೨೪. ಆಮೇಲೆ ನಾನೂ ಭಗವಾನ್ ವಿಷ್ಣು, ಇಂದ್ರ, ಅಗ್ನಿ, ವರುಣ, ಚಂದ್ರಸೂರ್ಯರು, ಅಶ್ವಿನೀದೇವತೆಗಳು, ಲೋಕಪಾಲಕರು, ಮರುತ್ತುಗಳು ಮೊದಲಾದವರೆಲ್ಲರೂ ಹೊರಟು ಯಮನಿದ್ದ ಸ್ಥಳಕ್ಕೆ ಬಂದು ನೋಡಲು,

೨೫. ಗೌತಮೀತೀರದಲ್ಲಿ ಯಮನು ಸೈನ್ಯದೊಡನೆ ಮೃತನಾಗಿ ಬಿದ್ದಿದ್ದನು. ಸಮುದ್ರಗಳು ನದಗಳು, ಸರ್ಪಗಳು ಮೊದಲಾದ ಎಲ್ಲಾ ಪ್ರಾಣಿಗಳೂ ಆ ಯಮನನ್ನು ನೋಡಲು ಬಂದಿದ್ದುವು.

೨೬. ಯಮನು ಸೈನ್ಯದೊಡನೆ ಹತನಾಗಿರುವುದನ್ನು ನೋಡಿ ದೇವತೆಗಳೆಲ್ಲರೂ ಭಯಗೊಂಡು ಅಂಜಲಿಯನ್ನು ಧರಿಸಿ ವಿನಯದಿಂದ ಶಿವನನ್ನು ಸ್ತುತಿಸಿದರು.

॥ ದೇವಾ ಊಚುಃ ॥

ಭಕ್ತಪ್ರಿಯತ್ವಂ ತೇ ನಿತ್ಯಂ ದುಷ್ಟಹಂತೃತ್ವಮೇವ ಚ ।
ಆದಿಕರ್ತರ್ನಮಸ್ತುಭ್ಯಂ ನೀಲಕಂಠ ನಮೋಽಸ್ತು ತೇ ।
ಬ್ರಹ್ಮಪ್ರಿಯ ನಮಸ್ತೇಽಸ್ತು ದೇವಪ್ರಿಯ ನಮೋಽಸ್ತು ತೇ ॥ ೨೭ ॥

ಶ್ವೇತಂ ದ್ವಿಜಂ ಭಕ್ತಮನಾಯುಷಂ ತೇ
ನೇತುಂ ಯಮಾದಿಃ ಸಕಲೋಽಸಮರ್ಥಃ ।
ಸಂತೋಷಮಾಪ್ತಾಃ ಪರಮಂ ಸಮೀಕ್ಷ್ಯ
ಭಕ್ತಪ್ರಿಯತ್ವಂ ತ್ವಯಿ ನಾಥ ಸತ್ಯಂ ॥ ೨೮ ॥

ಯೇ ತ್ವಾಂ ಪ್ರಪನ್ನಾಃ ಶರಣಂ ಕೃಪಾಲುಂ ।
ನಾಲಂ ಕೃತಾಂತೋಽಪ್ಯನುವೀಕ್ಷಿತುಂ ತಾನ್ ।
ಏವಂ ವಿದಿತ್ವಾ ಶಿವ ಏವ ಸರ್ವೇ
ತ್ವಾಮೇವ ಭಕ್ತ್ಯಾ ಪರಯಾ ಭಜಂತೇ ॥ ೨೯ ॥

ತ್ವಮೇವ ಜಗತಾಂ ನಾಥ ಕಿಂ ನ ಸ್ಮರಸಿ ಶಂಕರ ।
ತ್ವಾಂ ವಿನಾ ಕಃ ಸಮರ್ಥೋಽತ್ರ ವ್ಯವಸ್ಥಾಂ ಕರ್ತುಮೀಶ್ವರಃ ॥ ೩೦ ॥

---

೨೭. ಓ ನೀಲಕಂಠ, ನೀನು ಭಕ್ತವತ್ಸಲನು, ದುಷ್ಟಶಿಕ್ಷನು. ನೀನೇ ಆದಿಕರ್ತನು. ಇದೋ ನಿನಗೆ ನಮಸ್ಕಾರವು. ಬ್ರಾಹ್ಮಣಪ್ರಿಯನೂ, ದೇವ ಪ್ರಿಯನೂ ಆದ ನಿನಗೆ ನಮಸ್ಕಾರವು.

೨೮. ಶ್ವೇತಮುನಿಯು ಆಯುಸ್ಸುತೀರಿದವನಾದರೂ ನಿನ್ನ ಭಕ್ತನಾದ ಆವನನ್ನು ಯಮನೇ ಮೊದಲಾದವರಾರೂ ಒಯ್ಯಲಾರರು. ಓ ಸ್ವಾಮಿ, ನಿನ್ನ ಭಕ್ತವತ್ಸಲತೆಯು ಸತ್ಯವಾದುದು. ಅದನ್ನು ನೋಡಿ ನಾವು ತುಂಬಾ ಸಂತೋ ವುಳ್ಳವರಾಗಿರುವೆವು.

೨೯. ಓ ಪರಮೇಶ್ವರ, ನಿನ್ನನ್ನು ಯಾರು ಶರಣುಹೊಂದಿರುವರೋ ಅವರನ್ನು ಯಮನು ನೋಡಲೂ ಸಮರ್ಥನಲ್ಲ. ಈ ರಹಸ್ಯವನ್ನು ತಿಳಿದು ಎಲ್ಲರೂ ನಿನ್ನನ್ನೇ ಭಕ್ತಿಯಿಂದ ಸೇವಿಸುವರು, ಭಜಿಸುವರು, ಪೂಜಿಸುವರು.

೩೦. ಓ ಶಂಕರ, ನೀನೇ ಜಗದೀಶ್ವರನು, ನಿನ್ನ ಹೊರತು ಇನ್ನಾರೂ ಜಗತ್ತಿನ ವ್ಯವಸ್ಥೆಯನ್ನು ಮಾಡಲಾರರು ಎಂದು ಸ್ತುತಿಸುತ್ತಿರಲು,

॥ ಬ್ರಹ್ಮೋವಾಚ ॥

ಏವಂ ತು ಸ್ತುವತಾಂ ತೇಷಾಂ ಪುರಸ್ತಾದಭವಚ್ಛಿವಃ ।
ಕಿಂ ದದಾಮೀತಿ ತಾನಾಹ ಇದಮೂಚುಃ ಸುರಾ ಅಪಿ ॥ ೩೧ ॥

॥ ದೇವಾ ಊಚುಃ ॥

ಅಯಂ ವೈವಸ್ವತೋ ಧರ್ಮೋ ನಿಯಂತಾ ಸರ್ವದೇಹಿನಾಂ ।
ಧರ್ಮಾಧರ್ಮವ್ಯವಸ್ಥಾಯಾಂ ಸ್ಥಾಪಿತೋ ಲೋಕಪಾಲಕಃ ॥ ೩೨ ॥

ನಾಯಂ ವಧಮವಾಪ್ನೋತಿ ನಾಪರಾಧೀ ನ ಪಾಪಕೃತ್ ।
ವಿನಾ ತೇನ ಜಗದ್ಧಾತುರ್ನೈವ ಕಿಂಚಿದ್ಭವಿಷ್ಯತಿ ॥ ೩೩ ॥

ತಸ್ಮಾಜ್ಜೀವಯ ದೇವೇಶ ಯಮಂ ಸಬಲವಾಹನಂ ।
ಪ್ರಾರ್ಥನಾ ಸಫಲಾ ನಾಥ ಮಹತ್ಸು ನ ವೃಥಾ ಭವೇತ್ ॥ ೩೪ ॥

---

೩೧. ಅದನ್ನು ಕೇಳಿ ಕರುಣಾಮಯನಾದ ಶಿವನು ದೇವತೆಗಳೆದುರಿಗೆ ಪ್ರತ್ಯಕ್ಷನಾಗಿ ಎಲೈ ದೇವತೆಗಳೇ, ನಿಮ್ಮ ಸ್ತೋತ್ರಕ್ಕೆ ಸಂತುಷ್ಟನಾಗಿರುವೆನು. ನಿಮಗೆ ಯಾವ ವರವು ಬೇಕು? ಎಂದು ಪ್ರಶ್ನಿಸಲು,

೩೨. ದೇವತೆಗಳಿಂತೆಂದರು—ಈ ಯಮನು ಪ್ರಾಣಿಗಳನ್ನು ಶಿಕ್ಷಿಸತಕ್ಕವನು, ಧರ್ಮಾಧರ್ಮಗಳ ವ್ಯವಸ್ಥೆಗಾಗಿ ಇವನು ಲೋಕಪಾಲನಾಗಿ ಸ್ಥಾಪಿಸಲ್ಪಟ್ಟಿರುವನು.

೩೩. ಇಂತಹ ಯಮನನ್ನು ವಧಿಸುವುದು ಸರಿಯಲ್ಲ. ಇವನು ಅಪರಾಧಿಯೂ ಪಾಪಿಯೂ ಅಲ್ಲ. ತನ್ನ ಕರ್ತವ್ಯವನ್ನು ಮಾತ್ರ ಮಾಡುತ್ತಲಿರುವನು. ಇವನಿಲ್ಲದಿದ್ದರೆ ಸೃಷ್ಟಿಕರ್ತನ ಕೆಲಸವೇ ನಡೆಯಲಾರದು.

೩೪. ಆದುದರಿಂದ ಓ ಮಹಾದೇವ, ಈ ಯಮನನ್ನೂ ಅವನ ಸೈನ್ಯವನ್ನೂ ಬದುಕಿಸು. ನಿನ್ನಂತಹ ಮಹಾತ್ಮರಲ್ಲಿ ಮಾಡಿದ ಪ್ರಾರ್ಥನೆಯು ಎಂದಿಗೂ ವ್ಯರ್ಥವಾಗಲಾರದು ಎಂದರು.

॥ ಬ್ರಹ್ಮೋವಾಚ ॥

ತತಃ ಪ್ರೋವಾಚ ಭಗವಾಞ್ಜೀವಯೇಯಮಸಂಶಯಂ ।
ಯಮಂ ಯದಿ ವಚೋ ಮೇಽದ್ಯ ಅನುಮನ್ಯಂತಿ ದೇವತಾಃ ॥ ೩೫ ॥

ತತಃ ಪ್ರೋಚುಃ ಸುರಾಃ ಸರ್ವೇ ಕುರ್ಮೋ ವಾಕ್ಯಂ ತ್ವಯೋದಿತಂ ।
ಹರಿಬ್ರಹ್ಮಾದಿಸಹಿತಂ ವಶೇ ಯಸ್ಯಾಖಿಲಂ ಜಗತ್ ॥ ೩೬ ॥

ತತಃ ಪ್ರೋವಾಚ ಭಗವಾನಮರಾನ್ಸಮುಪಾಗತಾನ್ ।
ಮದ್ಭಕ್ತೋ ನ ಮೃತಿಂ ಯಾತು ನೇತ್ಯೂಚುರಮರಾಃ ಪುನಃ ॥ ೩೭ ॥

ಅಮರಾಃ ಸ್ಯುಸ್ತತೋ ದೇವ ಸರ್ವಲೋಕಾಶ್ಚರಾಚರಾಃ ।
ಅಮರ್ತ್ಯಮರ್ತ್ಯಭೇದೋಽಯಂ ನ ಸ್ಯಾದ್ದೇವ ಜಗನ್ಮಯ ॥ ೩೮ ॥

ಪುನರಪ್ಯಾಹ ತಾನ್ ಶಂಭುಃ ಶೃಣ್ವಂತು ಮಮ ಭಾಷಿತಂ ।
ಮದ್ಭಕ್ತಾನಾಂ ವೈಷ್ಣವಾನಾಂ ಗೌತಮೀಮನುಸೇವತಾಂ ॥ ೩೯ ॥

---

೩೫. ಆಗ ಭಗವಾನ್ ಶಂಕರನು—ಒಳ್ಳೆಯದು, ಈ ಯಮನನ್ನು ಬದುಕಿಸುವೆನು. ಆದರೆ ಈಗ ನೀವು ನನ್ನದೊಂದು ಮಾತನ್ನು ನಡೆಸಬೇಕು, ಎಂದನು.

೩೬. ಆಗ ದೇವತೆಗಳು—ಓ ದೇವ, ನಿನ್ನ ಮಾತನ್ನು ನಡೆಯಿಸುವೆವು. ಹರಿಬ್ರಹ್ಮಮೊದಲಾದ ನಾವೆಲ್ಲರೂ ನಿನ್ನ ಅಧೀನದಲ್ಲಿಯೇ ಇರುವವರಲ್ಲವೇ ಎಂದು ಬಿನ್ನವಿಸಿದರು.

೩೭. ಆಗ ಪರಮೇಶ್ವರನು ದೇವತೆಗಳಿಗೆ—ನನ್ನ ಭಕ್ತರು ಮರಣವನ್ನು ಹೊಂದಕೂಡದು ಎಂದು ಹೇಳಿದನು. ಶಿವನ ಆ ಮಾತನ್ನು ಒಪ್ಪದೇ ದೇವತೆಗಳು,

೩೮. ನಿನ್ನ ಭಕ್ತರಿಗೆ ಮರಣವಿಲ್ಲದಿದ್ದರೆ ಜನಗಳೆಲ್ಲರೂ ದೇವತೆಗಳೇ ಆಗುವರು, ಅದರಿಂದ ದೇವತೆಗಳು ಮಾನವರು ಎಂಬ ಭೇದವೇ ಲೋಕದಲ್ಲಿ ಇರಲಾರದು ಎಂದರು.

೩೯-೪೦. ಪುನಃ ಪರಮೇಶ್ವರನು ಹೇಳಿದನು—ಎಲ್ಲರೂ ನನ್ನ ಮಾತನ್ನು ಕೇಳಿ, ನನ್ನ ಗೌತಮಿಯನ್ನು ಸೇವಿಸುವ ನನ್ನ ಭಕ್ತರಿಗೂ ವಿಷ್ಣು

ವಯಂ ತು ಸ್ವಾಮಿನೋ ನಿತ್ಯಂ ನ ಮೃತ್ಯುಃ ಸ್ವಾಮ್ಯಮರ್ಹತಿ ।
ನಾರ್ತಾಸ್ಯೇಷಾಂ ನ ಕರ್ತವ್ಯಾ ಯಮೇನ ತು ಕದಾಚನ ॥ ೪೦ ॥

ಆಧಿವ್ಯಾಧ್ಯಾದಿಭಿರ್ಜಾತು ಕಾರ್ಯೋ ನಾಭಿಭವಃ ಕ್ವಚಿತ್ ।
ಯೇ ಶಿವಂ ಶರಣಂ ಯಾತಾಸ್ತೇ ಮುಕ್ತಾಸ್ತತ್ಕ್ಷಣಾದಪಿ ॥ ೪೧ ॥

ಸಾನುಗಸ್ಯ ಯಮಸ್ಯಾತೋ ನಮಸ್ಯಾಃ ಸರ್ವ ಏವ ತೇ ।
ತಥೇತ್ಯೂಚುಃ ಸುರಗಣಾ ದೇವದೇವಂ ಶಿವಂ ಪ್ರತಿ ॥ ೪೨ ॥
ತತಶ್ಚ ಭಗವಾನ್ನಾಥೋ ನಂದಿನಂ ಪ್ರಾಹ ವಾಹನಂ ॥ ೪೩ ॥

॥ ಶಿವ ಉವಾಚ ॥

ಗೌತಮ್ಯಾ ಉದಕೇನ ತ್ವಮಭಿಷಿಂಚ ಮೃತಂ ಯಮಂ ॥ ೪೪ ॥

ಭಕ್ತರಿಗೂ ನಾವೇ ಒಡೆಯರು, ರಕ್ಷಕರು. ಮೃತ್ಯುವಿನ ಅಧಿಕಾರವು ಅವರಲ್ಲಿ ನಡೆಯಲಾರದು. ಯಮನು ನಮ್ಮ ಭಕ್ತರಗೊಡವೆಯನ್ನೇ ಬಿಟ್ಟುಬಿಡಬೇಕು.

೪೧–೪೨. ಶಿವಭಕ್ತರಿಗೆ ದುಃಖರೋಗಾದಿಗಳು ಬರಕೂಡದು. ಶಿವನನ್ನು ಶರಣುಹೊಂದಿದವರು ಕೂಡಲೇ ಮುಕ್ತಿಯನ್ನೈದುವರು. ಯಮನೂ ಅವನ ದೂತರೂ ಶಿವಭಕ್ತರನ್ನು ನಮಸ್ಕರಿಸಬೇಕು ಎಂದನು.

೪೩. ಶಿವನ ಈ ಮಾತನ್ನು ಕೇಳಿ ದೇವತೆಗಳು ಹಾಗೆಯೇ ಆಗಲೆಂದು ಒಪ್ಪಿಕೊಂಡರು. ಆಮೇಲೆ ಪರಮೇಶ್ವರನು ತನ್ನ ವಾಹನವಾದ ನಂದಿಯನ್ನು ಕುರಿತು,

೪೪. ಎಲೈ ನಂದಿ, ಗೌತಮೀನದಿಯ ನೀರಿನಿಂದ ಮೃತನಾದೀ ಯಮನನ್ನು ಪ್ರೋಕ್ಷಿಸು ಎಂದಪ್ಪಣೆಮಾಡಲು, ನಂದಿಯು ಹಾಗೆಯೇ ಮಾಡಿದನು.

॥ ಬ್ರಹ್ಮೋವಾಚ ॥

ತತೋ ಯಮಾದಯಃ ಸರ್ವೇ ಅಭಿಷಿಕ್ತಾಸ್ತು ನಂದಿನಾ ।
ಉತ್ಥಿತಾಶ್ಚ ಸಜೀವಾಸ್ತೇ ದಕ್ಷಿಣಾಶಾಂ ತತೋ ಗತಾಃ ॥ ೪೫ ॥

ಉತ್ತರೇ ಗೌತಮೀತೀರೇ ವಿಷ್ಣ್ವಾದ್ಯಾಃ ಸರ್ವದೈವತಾಃ ।
ಸ್ಥಿತಾ ಆಸನ್ಪೂಜಯಂತೋ ದೇವದೇವಂ ಮಹೇಶ್ವರಂ ॥ ೪೬ ॥

ತತ್ರಾಸನ್ನಯುತಾನ್ಯಷ್ಟ ಸಹಸ್ರಾಣಿ ಚತುರ್ದಶ ।
ತಥಾ ಷಟ್ಚ ಸಹಸ್ರಾಣಿ ಪುನಃ ಷಟ್ಚ ತಥೈವ ಚ ॥ ೪೭ ॥

ಷಡ್ದಕ್ಷಿಣೇ ತಥಾ ತೀರೇ ತೀರ್ಥಾನಾಮಯುತತ್ರಯಂ ।
ಪುಣ್ಯಮಾಖ್ಯಾನಮೇತದ್ಧಿ ಶ್ವೇತತೀರ್ಥಸ್ಯ ನಾರದ ॥ ೪೮ ॥

---

೪೫. ಆಮೇಲೆ ಯಮ ಮೊದಲಾದವರೆಲ್ಲರೂ ನಂದಿಯಿಂದ ಪ್ರೋಕ್ಷಿಸಲ್ಪಟ್ಟು ಬದುಕಿದವರಾಗಿ ತಮ್ಮ ನಗರಿಗೆ ತೆರಳಿದರು.

೪೬. ಗೌತಮೀನದಿಯ ಉತ್ತರತೀರದಲ್ಲಿ ಹರಿ ಮೊದಲಾದ ದೇವತೆಗಳೆಲ್ಲರೂ ಹಿಂದೆ ಹೇಳಿದಂತೆ ದೇವದೇವನಾದ ಮಹೇಶ್ವರನನ್ನು ಪೂಜಿಸಿ ಸ್ತುತಿಸುತ್ತಿದ್ದರು.

೪೭. ಅದರಿಂದ ಆ ಉತ್ತರತೀರದಲ್ಲಿ ಒಂದುಕಡೆ ಎಂಭತ್ತುಸಾವಿರ ತೀರ್ಥಗಳೂ ಮತ್ತೊಂದು ಕಡೆ ಹದಿನಾಲ್ಕುಸಾವಿರ ತೀರ್ಥಗಳೂ, ಮತ್ತೊಂದು ಭಾಗದಲ್ಲಿ ಆರುಸಾವಿರ ತೀರ್ಥಗಳೂ ಇನ್ನೊಂದು ಸ್ಥಳದಲ್ಲಿ ಆರುಸಾವಿರ ತೀರ್ಥಗಳೂ ಆದುವು.

೪೮. ಹಾಗೆಯೇ ಗೌತಮೀನದಿಯ ದಕ್ಷಿಣದಡದಲ್ಲಿ ಒಂದುಕಡೆ ಆರು ಸಾವಿರ ತೀರ್ಥಗಳೂ ಮತ್ತೊಂದು ಭಾಗದಲ್ಲಿ ಅರವತ್ತುಸಾವಿರ ತೀರ್ಥಗಳೂ ಇರುವುವು. ಈರೀತಿಯಾಗಿ ಶ್ವೇತತೀರ್ಥದ ಈ ಮಹಾತ್ಮ್ಯವು ಪುಣ್ಯಪ್ರದವಾಗಿರುವುದು.

ಯತ್ರಾಸೌ ಪತಿತೋ ಮೃತ್ಯುರ್ಮೃತ್ಯುತೀರ್ಥಂ ತದುಚ್ಯತೇ ।
ತಸ್ಯ ಶ್ರವಣಮಾತ್ರೇಣ ಸಹಸ್ರಂ ಜೀವತೇ ಸಮಾಃ ॥ ೪೯ ॥

ತತ್ರ ಸ್ನಾನಂ ಚ ದಾನಂ ಚ ಸರ್ವಪಾಪಪ್ರಣಾಶನಂ ।
ಶ್ರವಣಂ ಪಠನಂ ಚಾಪಿ ಸ್ಮರಣಂ ಚ ಮಲಕ್ಷಯಂ ।
ಕರೋತಿ ಸರ್ವಲೋಕಾನಾಂ ಭುಕ್ತಿಮುಕ್ತಿಪ್ರದಾಯಕಂ ॥ ೫೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಉತ್ತರತೀರಸ್ಥಲೈಕಲಕ್ಷಣದ್ವಾದಶಸಹಸ್ರತೀರ್ಥದಕ್ಷಿಣತೀರಸ್ಥತ್ರಿಂಶತ್ಸಹಸ್ರ ತೀರ್ಥವರ್ಣನಂ ನಾಮ ಚತುರ್ನವತಿತಮೋಽಧ್ಯಾಯಃ

---

೪೯. ನಂದಿಯಿಂದ ಹತನಾದ ಮೃತ್ಯುವು ಬಿದ್ದ ಸ್ಥಳಕ್ಕೆ ಮೃತ್ಯು ತೀರ್ಥವೆಂದು ಹೆಸರು. ಆ ತೀರ್ಥವನ್ನು ಕೇಳಿದಮಾತ್ರದಿಂದ ಮನುಜನು ಸಾವಿರ ವರ್ಷಗಳ ವರೆಗೆ ಬದುಕುವನು.

೫೦. ಆ ಮೃತ್ಯುತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ಪಾಪಗಳೆಲ್ಲವೂ ನಾಶವಾಗುವುವು. ಆ ತೀರ್ಥದ ಮಾಹಾತ್ಮ್ಯವನ್ನು ಕೇಳಿದರೂ, ಹೇಳಿದರೂ, ಸ್ಮರಿಸಿದರೂ ಪಾಪಗಳೆಲ್ಲವೂ ನಾಶವಾಗಿ ಭೋಗಮೋಕ್ಷಗಳು ಲಭಿಸುವುವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಮೃತ್ಯುತೀರ್ಥವರ್ಣನವೆಂಬ ತೊಂಭತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ಗೌತಮೀಮಹಾತ್ಮ್ಯೆಯಲ್ಲಿ ಇಪ್ಪತ್ತೈದನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಪಂಚನವತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಶುಕ್ರತೀರ್ಥಮಿತಿ ಖ್ಯಾತಂ ಸರ್ವಸಿದ್ಧಿಕರಂ ನೃಣಾಂ ।
ಸರ್ವಪಾಪಪ್ರಶಮನಂ ಸರ್ವವ್ಯಾಧಿವಿನಾಶನಂ ॥ ೧ ॥

ಅಂಗಿರಾಶ್ಚ ಭೃಗುಶ್ಚೈವ ಋಷೀ ಪರಮಧಾರ್ಮಿಕೌ ।
ತಯೋಃ ಪುತ್ರೌ ಮಹಾಪ್ರಾಜ್ಞೌ ರೂಪಬುದ್ಧಿವಿಲಾಸಿನೌ ॥ ೨ ॥

ತೊಂಭತ್ತೈದನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಶುಕ್ರತೀರ್ಥವೆಂಬ ತೀರ್ಥವಿರುವುದು. ಅದು ಸಕಲಸಿದ್ಧಿಯನ್ನೂ ಉಂಟುಮಾಡುವುದು. ಪಾಪಗಳೆಲ್ಲವನ್ನೂ ಹೋಗಲಾಡಿಸುವುದು, ರೋಗಗಳೆಲ್ಲವನ್ನೂ ನಾಶಮಾಡುವುದು.

೨-೩. ಅಂಗಿರಸ್ಸು ಮತ್ತು ಭೃಗುಮುನಿ ಇವರು ಮಹಾಧಾರ್ಮಿಕರಾದ ಋಷಿಗಳು. ಅವರೀರ್ವರಿಗೆ ಮಹಾಮೇಧಾವಿಗಳೂ ರೂಪವಂತರೂ ಮಾತಾಪಿತೃಭಕ್ತಿಯುಳ್ಳವರೂ ಆದ ಪುತ್ರರೀರ್ವರು ಜನಿಸಿದರು. ಅಂಗಿರಸ್ಸಿನ ಪುತ್ರನು, ಬೃಹಸ್ಪತಿಯು. ಭೃಗುವಿನ ಪುತ್ರನು ಶುಕ್ರಾಚಾರ್ಯನು. ಉಪ

ಜೀವಃ ಕವಿರಿತಿ ಖ್ಯಾತೌ ಮಾತಾಪಿತ್ರೋರ್ವಶೇ ರತೌ ।
ಉಪನೀತೌ ಸುತೌ ದೃಷ್ಟ್ವಾ ಪಿತರಾವೂಚತುರ್ಮಿಥಃ ॥ ೩ ॥

॥ ಋಷೀ ಊಚತುಃ ॥

ಆವಯೋರೇಕ ಏವಾಸ್ತು ಶಾಸ್ತಾ ನಿತ್ಯಂ ಚ ಪುತ್ರಯೋಃ ।
ತಸ್ಮಾದೇಕಃ ಶಾಸಿತಾ ಸ್ಯಾತ್ತಿಷ್ಠತ್ವೇಕೋ ಯಥಾಸುಖಂ ॥ ೪ ॥

॥ ಬ್ರಹ್ಮೋವಾಚ ॥

ಏತುಚ್ಛ್ರುತ್ವಾ ತತಃ ಶೀಘ್ರಮಂಗಿರಾಃ ಪ್ರಾಹ ಭಾರ್ಗವಂ ।
ಅಧ್ಯಾಪಯಿಷ್ಯೇ ಸದೃಶಂ ಸುಖಂ ತಿಷ್ಠತು ಭಾರ್ಗವಃ ॥ ೫ ॥

ಏತಚ್ಛ್ರುತ್ವಾ ಚಾಂಗಿರಸೋ ವಾಕ್ಯಂ ಭೃಗುಕುಲೋದ್ವಹಃ ।
ತಥೇತಿ ಮತ್ವಾಂಗಿರಸೇ ಶುಕ್ರಂ ತಸ್ಮೈ ನ್ಯವೇದಯತ್ ॥ ೬ ॥

ಉಭಾವಪಿ ಸುತೌ ನಿತ್ಯಮಧ್ಯಾಪಯತಿ ವೈ ಪೃಥಕ್ ।
ವೈಷಮ್ಯಬುದ್ಧ್ಯಾ ತೌ ಬಾಲೌ ಚಿರಾಚ್ಛುಕ್ರೋಽಬ್ರವೀದಿದಂ ॥ ೭ ॥

ನಯನಸಂಸ್ಕಾರವನ್ನು ಹೊಂದಿದ ಆ ಪುತ್ರರೀರ್ವರನ್ನು ಕುರಿತು ಅವರ ಪಿತೃಗಳು,

೪. ಎಲೈ ಪುತ್ರರೇ, ನಮ್ಮೀರ್ವರನ್ನು ನಿಮ್ಮಲ್ಲಿ ಓರ್ವನೆ ಸಲಹಿದರೆ ಸಾಕು. ಆದುದರಿಂದ ಓರ್ವನು ನಮ್ಮನ್ನು ಪೋಷಿಸಲಿ, ಮತ್ತೋರ್ವನು ಸುಖವಾಗಿರಲಿ ಎಂದು ಹೇಳಿದರು.

೫. ಆಗ ಅಂಗಿರಸಮುನಿಯು ಶುಕ್ರನಿಗೆ ಅಧ್ಯಯನಮಾಡಿಸುವೆನು, ಅವನು ಸಂಸಾರತಾಪತ್ರಯವಿಲ್ಲದೆ ಸುಖವಾಗಿ ಓದುತ್ತಲಿರಲಿ ಎಂದು ಹೇಳಿದನು.

೬. ಅಂಗಿರಸನ ಮಾತನ್ನು ಕೇಳಿ ಭೃಗುಮುನಿಯು ಹಾಗೆಯೇ ಆಗಲೆಂದೊಪ್ಪಿ ಅಂಗಿರಸನಿಗೆ ಶುಕ್ರನನ್ನು ಒಪ್ಪಿಸಿದನು.

೭. ಆ ಈರ್ವರು ಕುಮಾರರಿಗೂ ಅಂಗಿರಸನು ಅಧ್ಯಯನಮಾಡಿಸುತ್ತಿದ್ದನು. ಆದರೆ ತನ್ನ ಮಗನಲ್ಲದ ಶುಕ್ರನಲ್ಲಿ ವೈಷಮ್ಯಬುದ್ಧಿಯನ್ನಿಟ್ಟಿದ್ದನು, ಆದನ್ನು ನೋಡಿ ಶುಕ್ರನು ಒಂದು ದಿನ,

॥ ಶುಕ್ರ ಉವಾಚ ॥

ವೈಷಮ್ಯೇಣ ಗುರೋ ಮಾಂ ತ್ವಮಧ್ಯಾಪಯಸಿ ನಿತ್ಯಶಃ ।
ಗುರೂಣಾಂ ನೇದಮುಚಿತಂ ವೈಷಮ್ಯಂ ಪುತ್ರಶಿಷ್ಯಯೋಃ ॥ ೮ ॥

ವೈಷಮ್ಯೇಣ ಚ ವರ್ತಂತೇ ಮೂಢಾಃ ಶಿಷ್ಯೇಷು ದೇಶಿಕಾಃ ।
ನೈಷಾ ವಿಷಮಬುದ್ಧೀನಾಂ ಸಂಖ್ಯಾ ಪಾಪಸ್ಯ ವಿದ್ಯತೇ ॥ ೯ ॥

ಆಚಾರ್ಯ ಸಮ್ಯಜ್ಞಾತೋಽಸಿ ನಮಸ್ಯೇಽಹಂ ಪುನಃ ಪುನಃ ।
ಗಚ್ಛೇಯಂ ಗುರುಮನ್ಯಂ ವೈ ಮಾಮನುಜ್ಞಾತುಮರ್ಹಸಿ ॥ ೧೦ ॥

ಗಚ್ಛೇಯಂ ಪಿತರಂ ಬ್ರಹ್ಮನ್ಯದ್ಯಸೌ ವಿಷಮೋ ಭವೇತ್ ।
ತತೋ ವಾಽನ್ಯತ್ರ ಗಚ್ಛಾಮಿ ಸ್ವಾಮಿನ್ಪೃಷ್ಟೋಽಸಿ ಗಮ್ಯತೇ ॥ ೧೧ ॥

---

೮. ಓ ಗುರುವೇ, ವೈಷಮ್ಯದಿಂದ (ಪಕ್ಷಪಾತದಿಂದ) ನೀನು ನನಗೆ ಅಧ್ಯಯನ ಮಾಡಿಸುತ್ತಲಿರುವೆ. ಗುರುಗಳಿಗೆ ಇದು ಯೋಗ್ಯವಾದುದಲ್ಲ. ಪುತ್ರ ಮತ್ತು ಶಿಷ್ಯರಲ್ಲಿ ಒಂದೇ ತರನಾದ ದೃಷ್ಟಿಯಿರಬೇಕು.

೯. ಶಿಷ್ಯರಲ್ಲಿ ಮಾತ್ಸರ್ಯಬುದ್ಧಿಯುಳ್ಳ ಗುರುಗಳು ಮೂಢರು. ಅವರ ವಿಷಮಬುದ್ಧಿಯಿಂದ ಉಂಟಾಗುವ ಪಾಪಕ್ಕೆ ಗಣನೆಯೇ ಇಲ್ಲ.

೧೦. ಓ ಗುರುವೇ, ನೀನು ಮಹಾಜ್ಞಾನಿಯು, ಪುನಃಪುನಃ ನಿನಗೆ ನಮಸ್ಕರಿಸುವೆನು. ನಾನು ಇನ್ನೊಬ್ಬ ಗುರುವಿನ ಬಳಿಗೆ ಹೋಗುವೆನು, ಅನುಮತಿಯನ್ನು ಕೊಡು.

೧೧. ಮೊದಲು ತಂದೆಯಬಳಿಗೆ ಹೋಗುವೆನು. ಅವನೂ ವಿಷಮ ಬುದ್ಧಿಯುಳ್ಳವನಾದರೆ ಮತ್ತೊಬ್ಬ ಗುರುವಿನ ಬಳಿಗೆ ಹೋಗುವೆನು. ಓ ಗುರುವೇ, ಹೋಗಿಬರುವೆನು ಎಂದು ಹೇಳಿ ಅವನ ಅನುಮತಿಯನ್ನು ಪಡೆದು,

॥ ಬ್ರಹ್ಮೋವಾಚ ॥

ಗುರುಂ ಬೃಹಸ್ಪತಿಂ ದೃಷ್ಟ್ವಾ ಅನುಜ್ಞಾತಸ್ತ್ವಗಾತ್ತತಃ ।
ಅವಾಪ್ತವಿದ್ಯಃ ಪಿತರಂ ಗಚ್ಛೇಯಂ ಚೇದ್ಯಚಿಂತಯತ್ ॥ ೧೨ ॥

ತಸ್ಮಾತ್ಕಮನುಪೃಚ್ಛೇಯಮುತ್ಕೃಷ್ಟಃ ಕೋ ಗುರುರ್ಭವೇತ್ ।
ಇತಿ ಸ್ಮರನ್ಮಹಾಪ್ರಾಜ್ಞಮಪೃಚ್ಛದ್ವೃದ್ಧಗೌತಮಂ ॥ ೧೩ ॥

॥ ಶುಕ್ರ ಉವಾಚ ॥

ಕೋ ಗುರುಃ ಸ್ಯಾನ್ಮುನಿಶ್ರೇಷ್ಠ ಮಮ ಬ್ರೂಹಿ ಗುರುರ್ಭವೇತ್ ।
ತ್ರಯಾಣಾಮಪಿ ಲೋಕಾನಾಂ ಯೋ ಗುರುಸ್ತಂ ವ್ರಜಾಮ್ಯಹಂ ॥ ೧೪ ॥

॥ ಬ್ರಹ್ಮೋವಾಚ ॥

ಸ ಪ್ರಾಹ ಜಗತಾಮೀಶಂ ಶಂಭುಂ ದೇವಂ ಜಗದ್ಗುರುಂ ।
ಕ್ವಾರಾಧಯಾಮಿ ಗಿರಿಶಮಿತ್ಯುಕ್ತಃ ಪ್ರಾಹ ಗೌತಮಃ ॥ ೧೫ ॥

---

೧೨. ಆಮೇಲಾ ಶುಕ್ರನು ಬೃಹಸ್ಪತಿಯನ್ನು ಕಂಡು ಅವನಿಂದ ಬೀಳ್ಕೊಂಡು ಸಂಪೂರ್ಣವಾಗಿ ವಿದ್ಯೆಯನ್ನು ಪಡದೇ ತಂದೆಯನ್ನು ನೋಡು ವೆನು ಎಂದು ನಿಶ್ಚಯಿಸಿದನು.

೧೩. ಈಗ ನಾನು ಯಾರನ್ನು ಪ್ರಶ್ನಿಸಲಿ ? ಸರ್ವಶ್ರೇಷ್ಠನಾದ ಗುರುವು ಯಾರು ? ಎಂದು ಯೋಚಿಸುತ್ತಾ ಆ ಶುಕ್ರನು ವೃದ್ಧ ಗೌತಮನ ಬಳಿಗೆ ಬಂದು

೧೪. ಓ ಗೌತಮಮುನಿ, ನನಗೆ ತಕ್ಕ ಗುರುವು ಯಾರು ? ಮೂರು ಲೋಕಗಳಿಗೂ ಗುರುವಾದವನ ಬಳಿಗೆ ಹೋಗಬೇಕೆಂದಿರುವೆನು. ಅವನಾರು ? ಹೇಳು, ಎಂದು ಪ್ರಾರ್ಥಿಸಲು,

೧೫. ಪರಮೇಶ್ವರನಾದ ಶಂಕರನೇ ಜಗದ್ಗುರುವು ಎಂದು ಗೌತಮನು ಹೇಳಿದನು. ಅದಕ್ಕೆ ಶುಕ್ರನು ಆ ಶಿವನನ್ನು ಎಲ್ಲಿ ಆರಾಧಿಸಲಿ ? ಎಂದು ಪ್ರಶ್ನಿಸಲು ಅದಕ್ಕೆ ಗೌತಮಮುನಿಯು,

॥ ಗೌತಮ ಉವಾಚ ॥

ಗೌತಮ್ಯಾಂ ತು ಶುಚಿರ್ಭೂತ್ವಾ ಸ್ತೋತ್ರೈಸ್ತೋಷಯ ಶಂಕರಂ ।
ತತಸ್ತುಷ್ಟೋ ಜಗನ್ನಾಥಃ ಸ ತೇ ವಿದ್ಯಾಂ ಪ್ರದಾಸ್ಯತಿ ॥ ೧೬ ॥

॥ ಬ್ರಹ್ಮೋವಾಚ ॥

ಗೌತಮಸ್ಯ ತು ತದ್ವಾಕ್ಯಾತ್ಪ್ರಾಗಾದ್ಗಂಗಾಂ ಸ ಭಾರ್ಗವಃ ।
ಸ್ನಾತ್ವಾ ಭೂತ್ವಾ ಶುಚಿಃ ಸಮ್ಯಕ್‌ಸ್ತುತಿಂ ಚಕ್ರೇ ಸ ಬಾಲಕಃ ॥ ೧೭ ॥

॥ ಶುಕ್ರ ಉವಾಚ ॥

ಬಾಲೋಽಹಂ ಬಾಲಬುದ್ಧಿಶ್ಚ ಬಾಲಚಂದ್ರಧರ ಪ್ರಭೋ ।
ನಾಹಂ ಜಾನಾಮಿ ತೇ ಕಿಂಚಿತ್ಸ್ತುತಿಂ ಕರ್ತುಂ ನಮೋಽಸ್ತು ತೇ ॥ ೧೮ ॥

ಪರಿತ್ಯಕ್ತಸ್ಯ ಗುರುಣಾ ನ ಮಮಾಸ್ತಿ ಸುಹೃತ್ಸಖಾ ।
ತ್ವಂ ಪ್ರಭುಃ ಸರ್ವಭಾವೇನ ಜಗನ್ನಾಥ ನಮೋಽಸ್ತು ತೇ ॥ ೧೯ ॥

---

೧೬. ಎಲೈ ಶುಕ್ರನೆ, ಗೌತಮೀನದಿಯಲ್ಲಿ ಸ್ನಾನಮಾಡಿ ಶುಚಿರ್ಭೂತನಾಗಿ ಸ್ತೋತ್ರಗಳಿಂದ ಶಂಕರನನ್ನು ಸ್ತುತಿಸು. ಆಗ ಶಂಕರನು ಪ್ರಸನ್ನನಾಗಿ ನಿನಗೆ ವಿದ್ಯೆಯನ್ನು ಉಪದೇಶಿಸುವನು ಎಂದನು.

೧೭. ಗೌತಮಮುನಿಯ ಮಾತಿನಂತೆ ಶುಕ್ರನು ಗೌತಮೀನದಿಗೆ ಹೋಗಿ ಅಲ್ಲಿ ಸ್ನಾನಮಾಡಿ ಶುಚಿಯಾಗಿ ಶಿವನನ್ನು ಸ್ತುತಿಸಿದನು.

೧೮. ಬಾಲಚಂದ್ರನನ್ನು ಧರಿಸಿರುವ ಓ ಪ್ರಭುವೇ, ನಾನು ಇನ್ನೂ ಬಾಲಕನು, ನನ್ನ ಬುದ್ಧಿಯು ಬಾಲಬುದ್ಧಿಯು. ನಿನ್ನ ಮಹಿಮೆಯಿನ್ನು ತಿಳಿಯದ ನಾನು ನಿನ್ನನ್ನು ಸ್ತುತಿಸಲಸಮರ್ಥನು. ನಿನಗೆ ನಮಸ್ಕಾರವು.

೧೯. ಗುರುವು ನನ್ನನ್ನು ತ್ಯಜಿಸಿರುವನು. ಸ್ನೇಹಿತರು, ಗೆಳೆಯರು ಯಾರೂ ನನಗಿಲ್ಲ. ಸರ್ವವಿಧದಿಂದಲೂ ನೀನೇ ನನಗೆ ಸ್ವಾಮಿಯು. ಓ ಪರಮೇಶ್ವರ, ನಿನಗೆ ನಮಸ್ಕಾರವು.

ಗುರುರ್ಗುರುಮತಾಂ ದೇವ ಮಹತಾಂ ಚ ಮಹಾನಸಿ ।
ಅಹಮಲ್ಪತರೋ ಬಾಲೋ ಜಗನ್ಮಯ ನಮೋಽಸ್ತು ತೇ ॥ ೨೦ ॥

ವಿದ್ಯಾರ್ಥಂ ಹಿ ಸುರೇಶಾನ ನಾಹಂ ವೇದ್ಮಿ ಭವದ್ಗತಿಂ ।
ಮಾಂ ತ್ವಂ ಚ ಕೃಪಯಾ ಪಶ್ಯ ಲೋಕಸಾಕ್ಷಿನ್ನಮೋಽಸ್ತು ತೇ ॥ ೨೧ ॥

॥ ಬ್ರಹ್ಮೋವಾಚ ॥

ಏವಂ ತು ಸ್ತುವತಸ್ತಸ್ಯ ಪ್ರಸನ್ನೋಽಭೂತ್ಸುರೇಶ್ವರಃ ॥ ೨೨ ॥

॥ ಶಿವ ಉವಾಚ ॥

ಕಾಮಂ ವರಯ ಭದ್ರಂ ತೇ ಯಚ್ಚಾಪಿ ಸುರದುರ್ಲಭಂ ॥ ೨೩ ॥

॥ ಬ್ರಹ್ಮೋವಾಚ ॥

ಕವಿರಪ್ಯಾಹ ದೇವೇಶಂ ಕೃತಾಂಜಲಿರುದಾರಧೀಃ ॥ ೨೪ ॥

---

೨೦. ಓ ದೇವ, ನೀನು ಗುರುಗಳಿಗೂ ಗುರುವಾದ ಜಗದ್ಗುರುವು, ಮಹಾತ್ಮರಿಗೂ ಮಹಾತ್ಮನಾದ ಪರಮೇಶ್ವರನು, ನಾನು ಅಲ್ಪನಾದ ಬಾಲಕನು. ಜಗನ್ಮೂರ್ತಿಯಾದ ನಿನಗೆ ನಮಸ್ಕಾರವು.

೨೧. ವಿದ್ಯೆಗಾಗಿ ನಿನ್ನ ಬಳಿಗೆ ನಾನು ಬಂದಿರುವೆನು. ನಿನ್ನ ಮಹಿಮೆಯು ನನಗೆ ತಿಳಿಯದು. ಕೃಪೆಯಿಂದ ನನ್ನನ್ನು ನೋಡು. ಜಗತ್ಸಾಕ್ಷಿಯಾದ ನಿನಗೆ ನಮಸ್ಕಾರವು.

೨೨. ಹೀಗೆ ಶುಕ್ರನು ಸ್ತುತಿಸಲು ಶಿವನು ಪ್ರಸನ್ನನಾಗಿ ಕಾಣಿಸಿಕೊಂಡು,

೨೩. ಎಲೈ ಶುಕ್ರನೇ, ನಿನಗೆ ಮಂಗಳವಾಗಲಿ, ಬೇಕಾದ ವರವನ್ನು ಕೇಳು. ದೇವತೆಗಳೂ ಪಡೆಯದಂತಹ ವರವನ್ನು ನಿನಗೆ ಕೊಡುವೆನು ಎಂದನು.

೨೪. ಆಗ ಶುಕ್ರನು ಅಂಜಲಿಯನ್ನು ಧರಿಸಿ ವಿನಯದಿಂದ ಮಹಾದೇವನನ್ನು ಪ್ರಾರ್ಥಿಸಿದನು.

॥ ಶುಕ್ರ ಉವಾಚ ॥

ಬ್ರಹ್ಮಾದಿಭಿಶ್ಚ ಋಷಿಭಿರ್ಯಾ ವಿದ್ಯಾ ನೈವ ಗೋಚರಾ ।
ತಾಂ ವಿದ್ಯಾಂ ನಾಥ ಯಾಚಿಷ್ಯೇ ತ್ವಂ ಗುರುರ್ಮನ ದೈವತಂ ॥ ೨೫ ॥

॥ ಬ್ರಹ್ಮೋವಾಚ ॥

ಮೃತಸಂಜೀವನೀಂ ವಿದ್ಯಾಮಜ್ಞಾತಾಂ ತ್ರಿದಶೈರಪಿ ।
ತಾಂ ದತ್ತವಾನ್ಸುರಶ್ರೇಷ್ಠಸ್ತಸ್ಮೈ ಶುಕ್ರಾಯ ಯಾಚತೇ ॥ ೨೬ ॥

ಇತರಾ ಲೌಕಿಕೀ ವಿದ್ಯಾ ವೈದಿಕೀ ಚಾನ್ಯಗೋಚರಾ ।
ಕಿಂ ಪುನಃ ಶಂಕರೇ ತುಷ್ಟೇ ವಿಚಾರ್ಯಮವಶಿಷ್ಯತೇ ॥ ೨೭ ॥

ಸ ತು ಲಬ್ಧ್ವಾ ಮಹಾವಿದ್ಯಾಂ ಪ್ರಾಯಾತ್ಸ್ವಪಿತರಂ ಗುರುಂ ।
ದೈತ್ಯಾನಾಂ ಚ ಗುರುಶ್ಚಾಸೀದ್ವಿದ್ಯಯಾ ಪೂಜಿತಃ ಕವಿಃ ॥ ೨೮ ॥

---

೨೫. ಓ ಮಹಾದೇವ, ಬ್ರಹ್ಮನೇ ಮೊದಲಾದವರೂ ಋಷಿಗಳೂ ಯಾವ ವಿದ್ಯೆಯನ್ನು ತಿಳಿಯಲಸಮರ್ಥರೋ ಅಂತಹ ವಿದ್ಯೆಯನ್ನು ನನಗೆ ಉಪದೇಶಿಸು. ನೀನೇ ನನಗೆ ಗುರುವು, ನೀನೇ ಸ್ವಾಮಿಯು, ಎಂದು ಪುನಃಪುನಃ ಪ್ರಾರ್ಥಿಸಲು,

೨೬. ಆಗ ಮಹಾದೇವನು ದೇವತೆಗಳೂ ತಿಳಿಯದಂತಹ ಮೃತಸಂಜೀವಿನೀ (ಸತ್ತವರನ್ನು ಬದುಕಿಸುವುದು) ಎಂಬ ವಿದ್ಯೆಯನ್ನು ಆ ಶುಕ್ರನಿಗೆ ಉಪದೇಶಿಸಿದನು.

೨೭. ಮತ್ತು ಮಿಕ್ಕ ವೈದಿಕಲೌಕಿಕ ವಿದ್ಯೆಗಳನ್ನೂ ಮಹಾದೇವನು ಶುಕ್ರನಿಗೆ ಉಪದೇಶಿಸಿದನು. ಶಂಕರನು ಪ್ರಸನ್ನನಾದಮೇಲೆ ಹೇಳುವುದೇನು? ಬೇಕಾದುದೆಲ್ಲವೂ ಲಭಿಸುವುದು.

೨೮. ಮೃತಸಂಜೀವಿನೀಯೆಂಬ ಮಹಾವಿದ್ಯೆಯನ್ನು ಪಡೆದು ಆ ಶುಕ್ರನು ತಂದೆಯ ಬಳಿಗೆ ಬಂದನು, ಆಮೇಲವನು ತನ್ನ ವಿದ್ಯೆಯ ಮಹಿಮೆಯಿಂದ ದೈತ್ಯರ ಗುರುವಾದನು.

ತತಃ ಕದಾಚಿತ್ತಾಂ ವಿದ್ಯಾಂ ಕಸ್ಮಿಂಶ್ಚಿತ್ಕಾರಣಾಂತರೇ ।
ಕಚೋ ಬೃಹಸ್ಪತಿಸುತೋ ವಿದ್ಯಾಂ ಪ್ರಾಪ್ತಃ ಕವೇಸ್ತು ತಾಂ ॥ ೨೯ ॥

ಕಚಾದ್ಬೃಹಸ್ಪತಿಶ್ಚಾಪಿ ತತೋ ದೇವಾಃ ಪೃಥಕ್ಪೃಥಕ್ ।
ಅವಾಪುರ್ಮಹತೀಂ ವಿದ್ಯಾಂ ಯಾಮಾಹುರ್ಮೃತಜೀವಿನೀಂ ॥ ೩೦ ॥

ಯತ್ರ ಸಾ ಕವಿನಾ ಪ್ರಾಪ್ತಾ ವಿದ್ಯಾಪ್ರೂಜ್ಯ ಮಹೇಶ್ವರಂ ।
ಗೌತಮ್ಯಾ ಉತ್ತರೇ ಪಾರೇ ಶುಕ್ರತೀರ್ಥಂ ತದುಚ್ಯತೇ ॥ ೩೧ ॥

ಮೃತಸಂಜೀವಿನೀತೀರ್ಥಮಾಯುರಾರೋಗ್ಯವರ್ಧನಂ ।
ಸ್ನಾನಂ ದಾನಂ ಚ ಯತ್ಕಿಂಚಿತ್ಸರ್ವಮಕ್ಷಯಪುಣ್ಯದಂ ॥ ೩೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಮೃತಸಂಜೀವಿನೀತೀರ್ಥಮಾಹಾತ್ಮ್ಯನಿರೂಪಣಂ
ನಾಮ ಪಂಚನವತಿತಮೋಽಧ್ಯಾಯಃ

---

೨೯. ಆಮೇಲೊಂದುಸಾರಿ ಯಾವುದೋ ಕಾರಣದಿಂದ ಶುಕ್ರಾಚಾರ್ಯನು ಬೃಹಸ್ಪತಿಯ ಮಗನಾದ ಕಚನಿಗೆ ಆ ಮೃತಸಂಜೀವಿನೀವಿದ್ಯೆಯನ್ನುಪದೇಶಿಸಿದನು.

೩೦. ಕಚನಿಂದ ಬೃಹಸ್ಪತಿಯು ಆ ಮೃತಸಂಜೀನೀವಿದ್ಯೆಯನ್ನು ಪಡೆದನು. ಮುಂದೆ ದೇವತೆಗಳೂ ಆ ವಿದ್ಯೆಯನ್ನು ಬೃಹಸ್ಪತಿಯಿಂದ ಪಡೆದರು.

೩೧. ಶುಕ್ರನು ಮಹೇಶ್ವರನನ್ನು ಸ್ತುತಿಸಿ ಆ ವಿದ್ಯೆಯನ್ನು ಪಡೆದ ಸ್ಥಳಕ್ಕೆ ಶುಕ್ರತೀರ್ಥವೆಂದು ಹೆಸರು. ಆ ತೀರ್ಥವು ಗೌತಮೀನದಿಯ ಉತ್ತರ ತೀರದಲ್ಲಿರುವುದು.

೩೨. ಆ ತೀರ್ಥಕ್ಕೆ ಮೃತಸಂಜೀವಿನೀತೀರ್ಥವೆಂದೂ ಹೆಸರಿರುವುದು. ಅದರಲ್ಲಿ ಸ್ನಾನದಾನಗಳನ್ನು ಮಾಡಿದರೆ ಆಯುರಾರೋಗ್ಯಗಳು ಹೆಚ್ಚಾಗುವುವು. ಎಂದಿಗೂ ನಾಶವಾಗದಂತಹ ಪುಣ್ಯವು ಲಭಿಸುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಮೃತಸಂಜೀವನೀತೀರ್ಥವರ್ಣನವೆಂಬ ತೊಂಭತ್ತೈದನ್ನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ಇಪ್ಪತ್ತಾರನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಷಣ್ಣವತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಇಂದ್ರತೀರ್ಥಮಿತಿ ಖ್ಯಾತಂ ಬ್ರಹ್ಮಹತ್ಯಾವಿನಾಶನಂ ।
ಸ್ಮರಣಾದಪಿ ಪಾಪೌಘಕ್ಲೇಶಸಂಘವಿನಾಶನಂ ॥ ೧ ॥

ಪುರಾ ವೃತ್ರವಧೇ ವೃತ್ತೇ ಬ್ರಹ್ಮಹತ್ಯಾ ತು ನಾರದ ।
ಶಚೀಪತಿಂ ಚಾನುಗತಾ ತಾಂ ದೃಷ್ಟ್ವಾ ಭೀತವದ್ಧರಿಃ ॥ ೨ ॥

ಇಂದ್ರಸ್ತತೋ ವೃತ್ರಹಂತಾ ಇತಶ್ಚೇತಶ್ಚ ಧಾವತಿ ।
ಯತ್ರ ಯತ್ರ ತ್ವಸೌ ಯಾತಿ ಹತ್ಯಾ ಸಾಪೀಂದ್ರಗಾಮಿನೀ ॥ ೩ ॥

ತೊಂಭತ್ತಾರನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಇಂದ್ರತೀರ್ಥವೆಂಬ ತೀರ್ಥವಿರುವುದು. ಅದು ಬ್ರಹ್ಮಹತ್ಯೆಯನ್ನೂ ಹೋಗಲಾಡಿಸುವುದು. ಆ ತೀರ್ಥವನ್ನು ಸ್ಮರಣೆ ಮಾಡಿದಮಾತ್ರದಿಂದಲೇ ಪಾಪಗಳೂ ಕಷ್ಟಗಳೂ ಎಲ್ಲವೂ ನಾಶವಾಗುವುವು.

೨-೩. ಹಿಂದೆ ಇಂದ್ರನು ವೃತ್ರಾಸುರನನ್ನು ಸಂಹರಿಸಿದನಷ್ಟೆ. ಆ ಅಸುರನು ಬ್ರಾಹ್ಮಣನಾದುದರಿಂದ ಬ್ರಹ್ಮಹತ್ಯೆಯು ಇಂದ್ರನಿಗೆ ತಟ್ಟಿತು. ಆ ಬ್ರಹ್ಮಹತ್ಯೆಯನ್ನು ನೋಡಿ ಇಂದ್ರನು ಹೆದರಿ ಅದನ್ನು ತಪ್ಪಿಸಿಕೊಳ್ಳಬೇಕೆಂದು ಅಲ್ಲಿಇಲ್ಲಿ ಅಲೆದಾಡಿದನು. ಇಂದ್ರನು ಹೋದೆಡೆಗೆಲ್ಲಾ ಬ್ರಹ್ಮಹತ್ಯೆಯೂ ಹೋಗಿ ಅವನನ್ನು ಪೀಡಿಸತೊಡಗಿತು.

ಸ ಮಹತ್ಸರ ಆವಿಶ್ಯ ಪದ್ಮನಾಲಮುಪಾಗಮತ್ ।
ತತ್ರಾಸೌ ತಂತುವದ್ಭೂತ್ವಾ ವಾಸಂ ಚಕ್ರೇ ಶಚೀಪತಿಃ ॥ ೪ ॥

ಸರಸ್ತೀರೇಽಪಿ ಹತ್ಯಾಸೀದ್ದಿವ್ಯಂ ವರ್ಷಸಹಸ್ರಕಂ ।
ಏತಸ್ಮಿನ್ನಂತರೇ ದೇವಾ ನಿರಿಂದ್ರಾ ಹ್ಯಭವನ್ಮುನೇ ॥ ೫ ॥

ಮಂತ್ರಯಾಮಾಸುರವ್ಯಗ್ರಾಃ ಕಥಮಿಂದ್ರೋ ಭವೇದಿತಿ ।
ತತ್ರಾಹಮುಪದಂ ದೇವಾಸ್ಹತ್ಯಾಸ್ಥಾನಂ ಪ್ರಕಲ್ಪ್ಯ ಚ ॥ ೬ ॥

ಇಂದ್ರಸ್ಯ ಪಾವನಾರ್ಥಾಯ ಗೌತಮ್ಯಾಮಭಿಷಿಚ್ಯತಾಂ ।
ಯತ್ರಾಭಿಷಿಕ್ತಃ ಪೂತಾತ್ಮಾ ಪುನರಿಂದ್ರೋ ಭವಿಷ್ಯತಿ ॥ ೭ ॥

ತಥಾ ತೇ ನಿಶ್ಚಯಂ ಕೃತ್ವಾ ಗೌತಮೀಂ ಶೀಘ್ರಮಾಗಮನ್ ।
ತತ್ರ ಸ್ನಾನಂ ಸುರಪತಿಂ ದೇವಾಶ್ಚ ಋಷಯಸ್ತಥಾ ॥ ೮ ॥

---

೪. ಆಗ ಇಂದ್ರನು ದೊಡ್ಡ ಸರಸ್ಸಿನೊಳಗೆ ಮುಳುಗಿ ಅಲ್ಲಿರುವ ಒಂದು ಪದ್ಮದ ನಾಳದಲ್ಲಿ ತಂತುವಾಗಿ ಸೇರಿಕೊಂಡು ಕುಳಿತನು.

೫. ಬ್ರಹ್ಮಹತ್ಯೆಯು ಆ ಸರಸ್ಸಿನ ತೀರದಲ್ಲಿ ನಿಂತು ಇಂದ್ರನನ್ನು ನಿರೀಕ್ಷಿಸುತ್ತಿದ್ದಿತು. ಹೀಗಿರಲು ದೇವಮಾನರೀತಿಯಿಂದ ಸಾವಿರವರ್ಷಗಳು ಕಳೆದುವು. ಈ ಸಮಯದಲ್ಲಿ ಇಂದ್ರನೇ ಇಲ್ಲದಿರುವುದನ್ನು ನೋಡಿ ದೇವತೆಗಳು ಗಳು ಇಂದ್ರನು ಪುನಃ ಬಂದು ಸ್ವರ್ಗವನ್ನಾಳುವುದು ಹೇಗೆ? ಎಂದು ಚಿಂತಿಸುತ್ತಿರಲು,

೬-೭. ಆಗ ನಾನು (ಬ್ರಹ್ಮನು) ದೇವತೆಗಳಿಗೆ ಬ್ರಹ್ಮಹತ್ಯೆಗೆ ಸ್ಥಾನವನ್ನು ಕಲ್ಪಿಸಿ. ಇಂದ್ರನು ಪರಿಶುದ್ಧನಾಗಲು ಅವನನ್ನು ಗೌತಮೀನದಿಯಲ್ಲಿ ಸ್ನಾನಮಾಡಿಸಿ ಅಭಿಷೇಕಮಾಡಿಸಿದರೆ ಇಂದ್ರನು ಪರಿಶುದ್ಧನಾಗಿ ಪುನಃ ಇಂದ್ರಪದವಿಗೆ ಅರ್ಹನಾಗುವನು ಎಂದೆನು.

೮. ದೇವತೆಗಳು ನಾನು ಹೇಳಿದಂತೆಯೇ ನಿಶ್ಚಯಿಸಿ, ಗೌತಮೀನದಿಗೆ ಬಂದು ಅಲ್ಲಿ ಇಂದ್ರನಿಗೆ ಸ್ನಾನಮಾಡಿಸಿದರು, ಆಮೇಲೆ ದೇವತೆಗಳೂ ಋಷಿಗಳೂ ಸೇರಿ ಅಲ್ಲಿಯೇ ಇಂದ್ರನಿಗೆ ಬ್ರಹ್ಮಹತ್ಯೆ ಹೋಗುವಂತೆ ಅಭಿಷೇಕ ಮಾಡಿಸಲು ಸಿದ್ಧರಾದರು.

ಅಭಿಷೇಕ್ತುಕಾಮಾಸ್ತೇ ಸರ್ವೇ ಶಚೀಕಾಂತಂ ಚ ತಸ್ಥಿರೇ ।
ಅಭಿಷಿಚ್ಯಮಾನಮಿಂದ್ರಂ ತಂ ಪ್ರಕೋಪಾದ್ಗೌತಮೋಽಬ್ರವೀತ್ ॥ ೯ ॥

॥ ಗೌತಮ ಉವಾಚ ॥

ಅಭಿಷೇಕ್ಷ್ಯಂತಿ ಪಾಪಿಷ್ಠಂ ಮಹೇಂದ್ರಂ ಗುರುತಲ್ಪಗಂ ।
ತಾನ್ಸರ್ವಾನ್ಭಸ್ಮಸಾತ್ಕುರ್ಯಾಂ ಶೀಘ್ರಂ ಯಾಂತ್ವಸುರಾರಯಃ ॥ ೧೦ ॥

॥ ಬ್ರಹ್ಮೋವಾಚ ॥

ತದೃಷೇರ್ವಚನಂ ಶ್ರುತ್ವಾ ಪರಿತ್ಯಜ್ಯ ಚ ಗೌತಮೀಂ ।
ನರ್ಮದಾಮಗಮನ್ಸರ್ವ ಇಂದ್ರಮಾದಾಯ ಸತ್ವರಾಃ ॥ ೧೧ ॥

ಉತ್ತರೇ ನರ್ಮದಾತೀರೇ ಅಭಿಷೇಕಾಯ ತಸ್ಥಿರೇ ।
ಅಭಿಷೇಕ್ಷ್ಯಮಾಣಮಿಂದ್ರಂ ತಂ ಮಾಂಡವ್ಯೋ ಭಗವಾನೃಷಿಃ ॥ ೧೨ ॥

ಅಬ್ರವೀದ್ಭಸ್ಮಸಾತ್ಕುರ್ಯಾಂ ಯದಿ ಸ್ಯಾದಭಿಷೇಚನಂ ।
ಪೂಜಯಾಮಾಸುರಮರಾ ಮಾಂಡವ್ಯಂ ಯುಕ್ತಿಭಿಃ ಸ್ತವೈಃ ॥ ೧೩ ॥

೯–೧೦. ಇಂದ್ರನಿಗೆ ಅಭಿಷೇಕಮಾಡಿಸುವುದನ್ನು ನೋಡಿ ಗೌತಮ ಮುನಿಯು ಕೋಪದಿಂದ ಈ ಇಂದ್ರನು ದುರಾತ್ಮನು, ಗುರುಪತ್ನೀಸಂಗವನ್ನು ಮಾಡಿದ ಮಹಾಪಾಪಿಯು. ಇಂತಹ ನೀಚನಿಗೆ ಇಲ್ಲಿ ಅಭಿಷೇಕಮಾಡಿಸಿದರೆ ಎಲ್ಲರನ್ನೂ ಸುಟ್ಟು ಭಸ್ಮಮಾಡುವೆನು. ಈ ಸ್ಥಳವನ್ನು ಬಿಟ್ಟು ಹೊರಡಿ ಎಂದು ಗದರಿಸಲು,

೧೧. ಗೌತಮನ ಆ ಮಾತನ್ನು ಕೇಳಿ ಭಯಗೊಂಡು ಎಲ್ಲರೂ ಗೌತಮೀನದಿಯನ್ನು ಬಿಟ್ಟು ಇಂದ್ರನೊಡನೆ ನರ್ಮದಾನದಿಗೆ ಬಂದು ಆ ನರ್ಮದಾ ನದಿಯ ತೀರದಲ್ಲಿ ಇಂದ್ರನಿಗೆ ಅಭಿಷೇಕಮಾಡಿಸತೊಡಗಿದರು.

೧೨–೧೩. ಹಾಗೆ ಇಂದ್ರನಿಗೆ ಅಭಿಷೇಕಮಾಡಿಸುತ್ತಿರುವುದನ್ನು ನೋಡಿ ಅಲ್ಲಿದ್ದ ಮಾಂಡವ್ಯನೆಂಬ ಮಹರ್ಷಿಯು ಆ ದೇವತೆಗಳನ್ನು ಕುರಿತು ಇಲ್ಲಿ ಇಂದ್ರನಿಗೆ ಅಭಿಷೇಕಮಾಡಿಸಿದರೆ ನಿಮ್ಮೆಲ್ಲರನ್ನೂ ಸುಟ್ಟು ಭಸ್ಮಮಾಡುವೆನು ಎಂದು ಕೋಪದಿಂದ ನುಡಿಯಲು, ಆಗ ದೇವತೆಗಳು ಮಾಂಡವ್ಯಮುನಿಯನ್ನು ಪೂಜಿಸಿ,

॥ ದೇವಾ ಊಚುಃ ॥

ಅಯಮಿಂದ್ರಃ ಸಹಸ್ರಾಕ್ಷೋ ಯಸ್ಮಿನ್ದೇಶೇಽಭಿಷಿಚ್ಯತೇ ।
ತತ್ರಾತಿದಾರುಣಂ ವಿಘ್ನಂ ಮುನೇ ಸಮುಪಜಾಯತೇ ॥ ೧೪ ॥

ತಚ್ಛಾಂತಿಂ ಕುರು ಕಲ್ಯಾಣ ಪ್ರಸೀದ ವರದೋ ಭವ ।
ಮಲನಿರ್ಯಾತನಂ ಯಸ್ಮಿನ್ಕುರ್ಮಸ್ತಸ್ಮಿನ್ವರಾನ್ಬಹೂನ್ ॥ ೧೫ ॥

ದೇಶೇ ದಾಸ್ಯಾಮಹೇ ಸರ್ವೇ ತದನುಜ್ಞಾತುಮರ್ಹಸಿ ।
ಯಸ್ಮಿನ್ದೇಶೇ ಸುರೇಂದ್ರಸ್ಯ ಅಭಿಷೇಕೋ ಭವಿಷ್ಯತಿ ॥ ೧೬ ॥

ಸ ಸರ್ವಕಾಮದಃ ಪುಂಸಾಂ ಧಾನ್ಯವೃಕ್ಷಫಲೈರ್ಯುತಃ ।
ನಾನಾವೃಷ್ಟಿರ್ನದುರ್ಭಿಕ್ಷಂ ಭವೇತ್ತತ್ರ ಕದಾಚನ ॥ ೧೭ ॥

---

೧೪. ಓ ಮುನಿ, ಈ ಇಂದ್ರನಿಗೆ ಅಭಿಷೇಕಮಾಡಿಸಲು ಯಾವ ದೇಶಕ್ಕೆ ಹೋದರೂ ಅಲ್ಲೆಲ್ಲಾ ಒಂದೊಂದು ಮಹಾವಿಘ್ನವು ಅಡ್ಡವಾಗುವುದು. ಆದುದರಿಂದ ಇಲ್ಲಿಗೆ ಬಂದಿರುವೆವು, ಇಲ್ಲಿಯೂ ನೀನು ಅಡ್ಡಬರದೆ ಅನುಗ್ರಹಿಸು. ಸಮಾಧಾನವನ್ನು ತಾಳು. ಇದೋ ನಿನಗೆ ನಮಸ್ಕಾರವು.

೧೫. ಇಂದ್ರನ ಬ್ರಹ್ಮಹತ್ಯೆಯೆಂಬ ಮಲವನ್ನು ಈ ದೇಶದಲ್ಲಿ ಕಳೆಯುವೆವು. ಈ ದೇಶಕ್ಕೆ ನಾವೆಲ್ಲರೂ ವರಗಳನ್ನು ಕೊಡುವೆವು, ಅಭಿಷೇಕಮಾಡಿಸಲು ಅನುಮತಿಯನ್ನು ಕೊಡು.

೧೬-೧೭. ಇಂದ್ರನಿಗೆ ಅಭಿಷೇಕವಾಗುವ ಈ ದೇಶದಲ್ಲಿ ಸಕಲಸಂಪತ್ತುಗಳೂ ಲಭಿಸುವಂತಾಗಲಿ. ಧನಧಾನ್ಯ ಸಮೃದ್ಧಿಗಳೂ ಫಲಪುಷ್ಪಸಮೃದ್ಧಿಗಳೂ ಸದಾ ನೆಲಸಿರಲಿ. ಈ ದೇಶದಲ್ಲಿ ಎಂದೂ ಅನಾವೃಷ್ಟಿಯು ಆಗದಂತಿರಲಿ. ಬರಗಾಲವು ಬರದಿರಲಿ ಎನ್ನಲು,

॥ ಬ್ರಹ್ಮೋವಾಚ ॥

ಮೇನೇ ತತೋ ಮುನಿಶ್ರೇಷ್ಠೋ ಮಾಂಡವ್ಯೋ ಲೋಕಪೂಜಿತಃ ।
ಅಭಿಷೇಕಃ ಕೃತಸ್ತತ್ರ ಮಲನಿರ್ಯಾತನಂ ತಥಾ ॥ ೧೮ ॥

ದೇವೈಸ್ತದೋಕ್ತೋ ಮುನಿಭಿಃ ಸ ದೇಶೋ ಮಾಲವಸ್ತತಃ ।
ಅಭಿಷಿಕ್ತೇ ಸುರಪತೌ ಜಾತೇ ಚ ವಿಮಲೇ ತದಾ ॥ ೧೯ ॥

ಆನೀಯ ಗೌತಮೀಂ ಗಂಗಾಂ ತಂ ಪುಣ್ಯಾಯಾಭಿಷೇಚಿರೇ ।
ಸುರಾಶ್ಚ ಋಷಯಶ್ಚೈವ ಅಹಂ ವಿಷ್ಣುಸ್ತಥೈವ ಚ ॥ ೨೦ ॥

ವಸಿಷ್ಠೋ ಗೌತಮಶ್ಚಾಪಿ ಅಗಸ್ತ್ಯೋಽತ್ರಿಶ್ಚ ಕಶ್ಯಪಃ ।
ಏತೇ ಚಾನ್ಯೇ ಚ ಋಷಯೋ ದೇವಾ ಯಕ್ಷಾಃ ಸಪನ್ನಗಾಃ ॥ ೨೧ ॥

---

೧೮. ಲೋಕವಂದ್ಯನಾದ ಮಾಂಡವ್ಯಮುನಿಯು ದೇವತೆಗಳ ಆ ಮಾತನ್ನಂಗೀಕರಿಸಿದನು. ಬಳಿಕ ದೇವತೆಗಳು ಆ ನರ್ಮದಾ ತೀರದಲ್ಲಿ ಇಂದ್ರನಿಗೆ ಅಭಿಷೇಕಮಾಡಿಸಿ ಅವನ ಬ್ರಹ್ಮಹತ್ಯೆಯೆಂಬ ಮಲವನ್ನು ಹೋಗಲಾಡಿಸಿದರು. ಇಂದ್ರನ ಮಲವು ನಾಶವಾದ ಆ ದೇಶಕ್ಕೆ ದೇವತೆಗಳು ಮತ್ತು ಮುನಿಗಳು ಮಾಲವವೆಂದು ಹೆಸರಿಟ್ಟರು.

೧೯. ಹೀಗೆ ಅಭಿಷೇಕದಿಂದ ಇಂದ್ರನು ಪರಿಶುದ್ಧನಾಗಲು ಅವನನ್ನು ಪುನಃ ದೇವತೆಗಳು ಗೌತಮೀನದಿಗೆ ಕರೆದುಕೊಂಡು ಬಂದು ಪುಣ್ಯಪ್ರಾಪ್ತಿಗಾಗಿ ಅಲ್ಲಿಯೂ ಸ್ನಾನಮಾಡಿಸಿದರು.

೨೦-೨೧. ದೇವತೆಗಳು, ಋಷಿಗಳು, ನಾನು (ಬ್ರಹ್ಮ) ವಿಷ್ಣು, ವಸಿಷ್ಠ, ಗೌತಮ, ಅಗಸ್ತ್ಯ, ಅತ್ರಿ, ಕಶ್ಯಪ, ಯಕ್ಷರು, ನಾಗಪುರುಷರು ಮೊದಲಾದ ನಾವೆಲ್ಲರೂ ಸೇರಿ ಆ ಗೌತಮೀನದಿಯ ಪುಣ್ಯಜಲದಲ್ಲಿ ಸ್ನಾನಮಾಡಿ ಇಂದ್ರನಿಗೆ ಅಭಿಷೇಕಮಾಡಿಸಿದೆವು.

ಸ್ನಾನಂ ತತ್ಪುಣ್ಯತೋಯೇನ ಅಕುರ್ವನ್ನಭಿಷೇಚನಂ ।
ಮಯಾ ಪುನಃ ಶಚೀಭರ್ತಾ ಕಮಂಡಲುಭವೇನ ಚ ॥ ೨೨ ॥

ವಾರಿಣಾಪ್ಯಭಿಷಿಕ್ತಶ್ಚ ತತ್ರ ಪುಣ್ಯಾಭವನ್ನದೀ ।
ಸಿಕ್ತಾ ಚೇತಿ ಚ ತತ್ರಾಸೀತ್ತೇ ಗಂಗಾಯಾಂ ಚ ಸಂಗತೇ ॥ ೨೩ ॥

ಸಂಗಮೌ ತತ್ರ ವಿಖ್ಯಾತೌ ಸರ್ವದಾ ಮುನಿಸೇವಿತೌ ।
ತತಃ ಪ್ರಭೃತಿ ತತ್ತೀರ್ಥಂ ಪುಣ್ಯಾಸಂಗಮಮುಚ್ಯತೇ ॥ ೨೪ ॥

ಸಿಕ್ತಾಯಾಃ ಸಂಗಮೋ ಪುಣ್ಯಮೈನ್ದ್ರಂ ತದಭಿಧೀಯತೇ ।
ತತ್ರ ಸಪ್ತ ಸಹಸ್ರಾಣಿ ತೀರ್ಥಾನ್ಯಾಸನ್ ಶುಭಾನಿ ಚ ॥ ೨೫ ॥

ತೇಷು ಸ್ನಾನಂ ಚ ದಾನಂ ಚ ವಿಶೇಷೇಣ ತು ಸಂಗಮೇ ।
ಸರ್ವಂ ತದಕ್ಷಯಂ ವಿದ್ಯಾನ್ನಾತ್ರ ಕಾರ್ಯಾ ವಿಚಾರಣಾ ॥ ೨೬ ॥

೨೨-೨೩. ಆಮೇಲೆ ನಾನು ನನ್ನ ಕಮಂಡಲುವಿನ ಪುಣ್ಯಜಲವನ್ನು ತೆಗೆದು ಇಂದ್ರನಿಗೆ ಅಭಿಷೇಕ ಮಾಡಿಸಿದೆನು. ಆ ನೀರಿನಿಂದ ಪುಣ್ಯಾ, ಸಿಕ್ತಾ ಎಂಬ ಎರಡು ನದಿಗಳನು ಜನಿಸಿದುವು. ಆ ನದಿಗಳಾಮೇಲೆ ಗೌತಮೀನದಿಯನ್ನು ಸೇರಿದುವು.

೨೪. ಆ ಮೊದಲುಗೊಂಡು ಆ ತೀರ್ಥಕ್ಕೆ ಪುಣ್ಯಾಸಂಗಮವೆಂದು ಹೆಸರು. ಅವೆರಡು ನದಿಗಳ ಸಂಗಮಗಳು ಪ್ರಸಿದ್ಧವಾಗಿರುವುವು. ಮುನಿಗಳಿಂದ ಸೇವಿಸಲ್ಪಡುತ್ತಿರುವುವು.

೨೫. ಸಿಕ್ತಾನದಿಯ ಸಂಗಮಕ್ಕೆ ಐಂದ್ರತೀರ್ಥವೆಂದು ಹೆಸರು. ಆ ತೀರ್ಥದಲ್ಲಿ ಏಳುಸಾವಿರ ತೀರ್ಥಗಳಿರುವುವು.

೨೬. ಸಂಗಮದಲ್ಲಿರುವ ಆ ತೀರ್ಥಗಳಲ್ಲಿ ಸ್ನಾನದಾನಗಳನ್ನು ಮಾಡಿದರೆ ಅಕ್ಷಯಪುಣ್ಯವು ಲಭಿಸುವುದು, ಇದರಲ್ಲಿ ಸಂಶಯವಿಲ್ಲ.

ಯದೇತತ್ಪುಣ್ಯಮಾಖ್ಯಾನಂ ಯಃ ಪಠೇಚ್ಚ ಶೃಣೋತಿ ವಾ ।
ಸರ್ವಪಾಪೈಃ ಸ ಮುಚ್ಯೇತ ಮನೋವಾಕ್ಕಾಯಕರ್ಮಜೈಃ ॥ ೨೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಪುಣ್ಯಾಸಿಕ್ತಾಸಂಗಮೇಂದ್ರತೀರ್ಥಾದಿಸಪ್ತಸಹಸ್ರತೀರ್ಥ-
ವರ್ಣನಂ ನಾಮ ಷಣ್ಣವತಿತಮೋಽಧ್ಯಾಯಃ

---

೨೭. ಪವಿತ್ರವಾದೀ ತೀರ್ಥಮಾಹಾತ್ಮ್ಯವನ್ನು ಹೇಳಿದರೂ ಕೇಳಿದರೂ ಮನೋವಾಕ್ಕಾಯಗಳಿಂದ ಮಾಡಿದ ಪಾಪಗಳೆಲ್ಲವೂ ನಾಶವಾಗುವುವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಪುಣ್ಯಾಸಿಕ್ತಾಸಂಗಮ, ಐಂದ್ರತೀರ್ಥ ಮೊದಲಾದ ಏಳುಸಾವಿರತೀರ್ಥಗಳ ವರ್ಣನವೆಂಬ ತೊಂಭತ್ತಾರನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಇಪ್ಪತ್ತೇಳನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತನವತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಪೌಲಸ್ತ್ಯಂ ತೀರ್ಥಮಾಖ್ಯಾತಂ ಸರ್ವಸಿದ್ಧಿಪ್ರದಂ ನೃಣಾಂ ।
ಪ್ರಭಾವಂ ತಸ್ಯ ವಕ್ಷ್ಯಾಮಿ ಭ್ರಷ್ಟರಾಜ್ಯಪ್ರದಾಯಕಂ ॥ ೧ ॥

ಉತ್ತರಾಶಾಪತಿಃ ಪೂರ್ವಮೃದ್ಧಿಸಿದ್ಧಿಸಮನ್ವಿತಃ ।
ಪುರಾ ಲಂಕಾಪತಿಶ್ಚಾಸೀಜ್ಜ್ಯೇಷ್ಠೋ ವಿಶ್ರವಸಃ ಸುತಃ ॥ ೨ ॥

ತೊಂಭತ್ತೇಳನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಪೌಲಸ್ತ್ಯತೀರ್ಥವೆಂಬುದೊಂದಿರುವುದು. ಅದು ಸಕಲ ಸಿದ್ಧಿಯನ್ನೂ ಉಂಟುಮಾಡುವುದು, ಕಳೆದುಹೋದ ರಾಜ್ಯವನ್ನು ಪುನಃ ಒದಗಿಸುವುದು, ಇಂತಹ ತೀರ್ಥದ ಮಹಾತ್ಮ್ಯವನ್ನು ಹೇಳುವೆನು.

೨. ಉತ್ತರ ದಿಕ್ಕಿಗೆ ಒಡೆಯನಾದ ಕುಬೇರನು ವಿಶ್ರವಸಬ್ರಹ್ಮನ ಹಿರಿಯ ಮಗನು. ಅವನು ಮೊದಲು ಸಕಲೈಶ್ವರ್ಯಸಂಪನ್ನನಾಗಿ ಲಂಕೆಯನ್ನಾಳುತ್ತಿದ್ದನು.

ತಸ್ಯೈತೇ ಭ್ರಾತರಶ್ಚಾಸನ್ಬಲವಂತೋಽಮಿತಪ್ರಭಾಃ ।
ಸಾಪತ್ನಾ ರಾವಣಶ್ಚೈವ ಕುಂಭಕರ್ಣೋ ವಿಭೀಷಣಃ ॥ ೩ ॥

ತೇಽಪಿ ವಿಶ್ರವಸಃ ಪುತ್ರಾ ರಾಕ್ಷಸ್ಯಾಂ ರಾಕ್ಷಸಾಸ್ತು ತೇ ।
ಮದ್ದತ್ತೇನ ವಿಮಾನೇನ ಧನದೋ ಭ್ರಾತೃಭಿಃ ಸಹ ॥ ೪ ॥

ಮಮಾಂತಿಕಂ ಭಕ್ತಿಯುಕ್ತೋ ನಿತ್ಯಮೇತಿ ತು ಯಾತಿ ಚ ।
ರಾವಣಸ್ಯ ತು ಯಾ ಮಾತಾ ಕುಪಿತಾ ಸಾಬ್ರವೀತ್ಸುತಾನ್ ॥ ೫ ॥

॥ ರಾವಣಮಾತೋವಾಚ ॥

ಮರಿಷ್ಯೇ ನ ಚ ಜೀವಿಷ್ಯೇ ಪುತ್ರಾ ವೈರೂಪ್ಯಕಾರಣಾತ್ ।
ದೇವಾಶ್ಚ ದಾನವಾಶ್ಚಾಸನ್ಸಾಪತ್ನಾ ಭ್ರಾತರೋ ಮಿಥಃ ॥ ೬ ॥

---

೩. ಆ ಕುಬೇರನಿಗೆ ರಾವಣ, ಕುಂಭಕರ್ಣ, ವಿಭೀಷಣರೆಂಬ ಮೂರು ಮಂದಿ ತಮ್ಮಂದಿರು ಇದ್ದರು. ಅವರೆಲ್ಲರೂ ಮಹಾ ತೇಜಸ್ವಿಗಳೂ ಬಲಿಷ್ಠರೂ ಆಗಿದ್ದರು.

೪. ರಾವಣಕುಂಭಕರ್ಣವಿಭೀಷಣರು ವಿಶ್ರವಸಬ್ರಹ್ಮನಿಗೆ ರಾಕ್ಷಸ ಸ್ತ್ರೀಯಲ್ಲಿ ಜನಿಸಿದ ಪುತ್ರರಾದ್ದರಿಂದ ರಾಕ್ಷಸರಾಗಿದ್ದರು. ನಾನು (ಬಹ್ಮನು) ಕೊಟ್ಟ ಪುಷ್ಪಕವಿಮಾನದಲ್ಲಿ ಕುಳಿತು ಕುಬೇರನು ತನ್ನ ಸಹೋದರರೊಡನೆ ನಿತ್ಯವೂ ನನ್ನ ಬಳಿಗೆ ಬಂದು ಭಕ್ತಿಯಿಂದ ನನ್ನನ್ನು ಓಲೈಸಿ ಹಿಂತಿರುಗುತ್ತಿದ್ದನು.

೫-೬. ಹೀಗಿರಲು ಒಂದುದಿನ ರಾವಣನ ತಾಯಿಯಾದ ರಾಕ್ಷಸಿಯು ಕೋಪದಿಂದ ತನ್ನ ಪುತ್ರರನ್ನು ಕುರಿತು, ನಾನು ಜೀವವಿಟ್ಟುಕೊಂಡಿರುವುದಿಲ್ಲ, ಸಾಯುವೆನು. ಎಲೈ ಮಕ್ಕಳೇ, ನೀವು ವಿಪರೀತವಾಗಿ ವರ್ತಿಸುತ್ತಿರುವಿರಿ. ದೇವತೆಗಳೂ ರಾಕ್ಷಸರೂ ಯಾವಾಗಲೂ ಪರಸ್ಪರ ವೈರಿಗಳು.

ಅನ್ಯೋನ್ಯವಧನಿಸ್ಸಂತೇ ಜಯೈಶ್ವರ್ಯವಶಾನುಗಾಃ ।
ತನ್ನೈವಂತೋ ನ ಪುರುಷಾ ನ ಶಕ್ತಾ ನ ಜಯೈಷಿಣಃ ।
ಸಾಪತ್ನಂ ಯೋಽನುಮನ್ಯತೇ ತಸ್ಯ ಜೀವೋ ನಿರರ್ಥಕಃ ॥ ೭ ॥

॥ ಬ್ರಹ್ಮೋವಾಚ ॥

ತನ್ಮಾತೃವಚನಂ ಶ್ರುತ್ವಾ ಭ್ರಾತರಸ್ತೇ ತ್ರಯೋ ಮುನೇ ।
ಜಗ್ಮುಸ್ತೇ ತಪಸೇಽರಣ್ಯಂ ಕೃತವಂತಸ್ತಪೋ ಮಹತ್ ॥ ೮ ॥

ಮತ್ತೋ ವರಾನವಾಪುಶ್ಚ ತ್ರಯ ಏತೇ ಚ ರಾಕ್ಷಸಾಃ ।
ಮಾತುಲೇನ ಮರೀಚೇನ ತಥಾ ಮಾತಾಮಹೇನ ತು ॥ ೯ ॥

ತನ್ಮಾತೃವಚನಾಚ್ಚಾಪಿ ತತೋ ಲಂಕಾಮಯಾಚತ ।
ರಕ್ಷೋಭಾವಾನ್ಮಾತೃದೋಷಾದ್ಭ್ರಾತ್ರೋರ್ವೈರಮಭೂನ್ಮಹತ್ ॥ ೧೦ ॥

---

೭. ಸಹೋದರರಾದರೂ ಆ ದೇವರಾಕ್ಷಸರು ಜಯ ಮತ್ತು ಐಶ್ವರ್ಯಗಳ ಮರಾಸೆಯಿಂದ ಒಬ್ಬರನ್ನೊಬ್ಬರು ವಧಿಸಲು ಯತ್ನಿಸುವರು. ಇದು ಸಹಜ ಸ್ಥಿತಿಯು. ಹೀಗಿದ್ದರೂ ಸುಮ್ಮನಿರುವ ನೀವು ಪುರುಷರೇ ಅಲ್ಲ, ಜಯಾಪೇಕ್ಷೆಯು ನಿಮಗಿಲ್ಲ. ಶತ್ರುವನ್ನು ಮನ್ನಿಸುವವನ ಅಥವಾ ಹಿಂಬಾಲಿಸುವವನ ಜೀವನವೇ ವ್ಯರ್ಥವು ಎಂದು ರಾವಣಾದಿಗಳನ್ನು ಮೂದಲಿಸಲು,

೮. ತಾಯಿಯ ಆ ಮಾತನ್ನು ಕೇಳಿ ರಾವಣಕುಂಭಕರ್ಣವಿಭೀಷಣರು ತಪಸ್ಸಿಗಾಗಿ ಅರಣ್ಯಕ್ಕೆ ಹೋಗಿ ಅಲ್ಲಿ ಘೋರ ತಪಸ್ಸನ್ನಾಚರಿಸಿ ನನ್ನಿಂದ ಬೇಕಾದ ವರಗಳನ್ನು ಪಡೆದರು.

೯. ಮತ್ತು ಸೋದರಮಾವನಾದ ಮಾರೀಚ, ತಾಯಿಯ ತಂದೆ [ಅಜ್ಜ] ಯಾದ ಮಾಲ್ಯವಂತ, ಮತ್ತು ತಾಯಿ ಇವರ ಮಾತಿನಂತೆ ವರವನ್ನು ಕೇಳಿ ನನ್ನಿಂದ ಲಂಕೆಯನ್ನೂ ಪಡೆದರು.

೧೦. ರಾಕ್ಷಸಸ್ವಭಾವದ ದೆಸೆಯಿಂದಲೂ ತಾಯಿಯ ದೋಷದಿಂದಲೂ ಆ ಮೂವರು ರಾಕ್ಷಸರಿಗೆ ಅಣ್ಣನಾದ ಕುಬೇರನಲ್ಲಿ ದ್ವೇಷವುಂಟಾಯಿತು. ಆಮೇಲಾ ಸಹೋದರರಿಗೆ ದೇವದಾನವರ ಯುದ್ಧದಂತೆ ಘೋರಯುದ್ಧವಾಯಿತು.

ತತಸ್ತದಭವದ್ಯುದ್ಧಂ ದೇವದಾನವಯೋರಿವ ।
ಯುದ್ಧೇ ಜಿತ್ವಾಗ್ರಜಂ ಶಾಂತಂ ಧನದಂ ಭ್ರಾತರಂ ತಥಾ ॥ ೧೧ ॥

ಪುಷ್ಪಕಂ ಚ ಪುರೀಂ ಲಂಕಾಂ ಸರ್ವಂ ಚೈವ ವ್ಯಪಾಹರತ್ ।
ರಾವಣೋ ಘೋಷಯಾಮಾಸ ತ್ರೈಲೋಕ್ಯೇ ಸಚರಾಚರೇ ॥ ೧೨ ॥

ಯೋ ದದ್ಯಾದಾಶ್ರಯಂ ಭ್ರಾತುಃ ಸ ಚ ವಧ್ಯೋ ಭವೇನ್ಮಮ ।
ಭ್ರಾತ್ರಾ ನಿರಸ್ತೋ ವೈಶ್ರವಣೋ ನೈವ ಪ್ರಾಪಾಶ್ರಯಂ ಕ್ವಚಿತ್ ।
ಪಿತಾಮಹಂ ಪುಲಸ್ತ್ಯಂ ತಂ ಗತ್ವಾ ನತ್ವಾಬ್ರವೀದ್ವಚಃ ॥ ೧೩ ॥

॥ ಧನದ ಉವಾಚ ॥

ಭ್ರಾತ್ರಾ ನಿರಸ್ತೋ ದುಷ್ಟೇನ ಕಿಂ ಕರೋಮಿ ವದಸ್ವ ಮೇ ।
ಆಶ್ರಯಃ ಶರಣಂ ಯತ್ಸ್ಯಾದ್ದೈವಂ ವಾ ತೀರ್ಥಮೇವ ಚ ॥ ೧೪ ॥

॥ ಬ್ರಹ್ಮೋವಾಚ ॥

ತತ್ಪೌತ್ರವಚನಂ ಶ್ರುತ್ವಾ ಪುಲಸ್ತ್ಯೋ ವಾಕ್ಯಮಬ್ರವೀತ್ ॥ ೧೫ ॥

---

೧೧. ರಾವಣನು ಶಾಂತ ಸ್ವಭಾವದವನಾದಾ ತನ್ನ ಅಣ್ಣ ಕುಬೇರನನ್ನು ಜಯಿಸಿ ಪುಷ್ಪಕವಿಮಾನವನ್ನೂ ಲಂಕಾನಗರವನ್ನೂ ಮಿಕ್ಕೆಲ್ಲ ಐಶ್ವರ್ಯವನ್ನೂ ಅಪಹರಿಸಿದನು.

೧೨. ಆಮೇಲಾ ರಾವಣನು—ಪ್ರಪಂಚದಲ್ಲಾರಾದರೂ ಈ ದುರಾತ್ಮನಾದ ಕುಬೇರನಿಗೆ ಆಶ್ರಯವನ್ನು ಕೊಟ್ಟರೆ ಅವನನ್ನು ಸಂಹರಿಸುವೆನು ಎಂದು ಡಂಗುರಸಾರಿಸಿದನು.

೧೩. ಹೀಗೆ ತಮ್ಮನಿಂದ ಓಡಿಸಲ್ಪಟ್ಟ ಕುಬೇರನಿಗೆ ಎಲ್ಲಿಯೂ ಆಶ್ರಯ ಸಿಗಲಿಲ್ಲ, ಆದುದರಿಂದ ಅವನು ಅಜ್ಜನಾದ ಪುಲಸ್ತ್ಯನ ಬಳಿಗೆ ಹೋಗಿ ನಮಸ್ಕರಿಸಿ.

೧೪-೧೫. ಓ ತಾತ, ದುಷ್ಟನಾದ ತಮ್ಮನು ನನ್ನನ್ನು ಓಡಿಸಿದನು. ಈಗೇನುಮಾಡಲಿ ? ಯಾವ ದೇವನನ್ನಾಶ್ರಯಿಸಿದರೆ ನನಗೆ ರಕ್ಷಣೆಯಾಗುವುದು ? ಯಾವ ತೀರ್ಥವನ್ನಾಶ್ರಯಿಸಲಿ? ಹೇಳೆಂದು ಪ್ರಾರ್ಥಿಸಲು, ಮೊಮ್ಮಗನ ಆ ಮಾತನ್ನು ಕೇಳಿ ಪುಲಸ್ತ್ಯನು,

॥ ಪುಲಸ್ತ್ಯ ಉವಾಚ ॥

ಗೌತಮೀಂ ಗಚ್ಛ ಪುತ್ರ ತ್ವಂ ಸ್ತುಹಿ ದೇವಂ ಮಹೇಶ್ವರಂ ।
ತತ್ರ ನಾಸ್ಯ ಪ್ರವೇಶಃ ಸ್ಯಾದ್ಗಂಗಾಯಾ ಜಲಮಧ್ಯತಃ ॥ ೧೬ ॥
ಸಿದ್ಧಿಂ ಪ್ರಾಪ್ಸ್ಯಸಿ ಕಲ್ಯಾಣೀಂ ತಥಾ ಕುರು ಮಯಾ ಸಹ ॥ ೧೭ ॥

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಜಗಾಮಾಸೌ ಸಭಾರ್ಯೋ ಧನದಸ್ತಥಾ ।
ಪಿತ್ರಾ ಮಾತ್ರಾ ಚ ವೃದ್ಧೇನ ಪುಲಸ್ತ್ಯೇನ ಧನೇಶ್ವರಃ ॥ ೧೮ ॥

ಗತ್ವಾ ತು ಗೌತಮೀಂ ಗಂಗಾಂ ಶುಚಿಃ ಸ್ನಾತ್ವಾ ಯತವ್ರತಃ ।
ತುಷ್ಟಾವ ದೇವದೇವೇಶಂ ಭುಕ್ತಿಮುಕ್ತಿಪ್ರದಂ ಶಿವಂ ॥ ೧೯ ॥

॥ ಧನದ ಉವಾಚ ॥

ಸ್ವಾಮೀ ತ್ವಮೇವಾಸ್ಯ ಚರಾಚರಸ್ಯ
ವಿಶ್ವಸ್ಯ ಶಂಭೋ ನ ಪರೋಽಸ್ತಿ ಕಶ್ಚಿತ್ ।
ತ್ವಾಮಪ್ಯವಜ್ಞಾಯ ಯದೀಹ ಮೋಹಾ-
ತ್ಪ್ರಗಲ್ಭತೇ ಕೋಽಪಿ ಸ ಶೋಚ್ಯ ಏವ ॥ ೨೦ ॥

೧೬-೧೭. ಎಲೈ ಪುತ್ರ, ಗೌತಮೀನದಿಗೆ ಹೋಗಿ ಅಲ್ಲಿ ಪರಮೇಶ್ವರನನ್ನು ಸ್ತುತಿಸು. ಗೌತಮಿಯ ಪ್ರಭಾವದಿಂದ ಅಲ್ಲಿಗೆ ರಾವಣನು ಬರಲು ಶಕ್ತನಲ್ಲ. ಆದರಿಂದ ನಿನಗೆ ಕಾರ್ಯಸಿದ್ಧಿಯಾಗುವುದು, ನಡೆ ನಾವೂ ಬರುವೆವು ಎಂದನು.

೧೮-೧೯. ಪುಲಸ್ತ್ಯನ ಮಾತಿನಂತೆ ಕುಬೇರನು ಹೆಂಡತಿ ತಂದೆತಾಯಿಗಳು ಮುದುಕನಾದ ಅಜ್ಜ ಇವರೊಡನೆ ಗೌತಮೀತೀರಕ್ಕೆ ಹೋಗಿ ನದಿಯಲ್ಲಿ ಸ್ನಾನಮಾಡಿ ಪರಿಶುದ್ಧನಾಗಿ ನಿಯಮದಿಂದ ಭೋಗಮೋಕ್ಷಗಳನ್ನು ಕರುಣಿಸುವವನೂ ದೇವದೇವನೂ ಆದ ಶಿವನನ್ನು ಸ್ತುತಿಸಿದನು.

೨೦. ಓ ಪರಮೇಶ್ವರ, ಈ ಜಗತ್ತಿಗೆ ನೀನೇ ಸ್ವಾಮಿಯು, ಬೇರೊಬ್ಬನಾರೂ ಇಲ್ಲ. ಹೀಗಿದ್ದೂ ನಿನ್ನನ್ನು ಮರೆತು ನಾನೇ ಜಗತ್ಪ್ರಭುವೆಂದು ಯಾರು ಭ್ರಮಿಸುವರೋ ಅವರು ಮೂಢರು, ಅಜ್ಞಾನಿಗಳು.

ತ್ವಮಷ್ಟಮೂರ್ತ್ಯಾ ಸಕಲಂ ಬಿಭರ್ಷಿ
ತ್ವದಾಜ್ಞಯಾ ವರ್ತತ ಏವ ಸರ್ವಂ ।
ತಥಾಪಿ ವೇದೇತಿ ಬುಧೋ ಭವಂತಂ
ನ ಜಾತ್ವವಿದ್ವಾನ್ಮಹಿಮಾ ಪುರಾತನಂ ॥ ೨೧ ॥

ಮಲಪ್ರಸೂತಂ ಯದವೋಚದಂಬಾ
ಹಾಸ್ಯಾತ್ಸುತೋಽಯಂ ತವ ದೇವ ಶೂರಃ ।
ತ್ವತ್ಪ್ರೇಕ್ಷಿತಾದ್ಯಃ ಸ ಚ ವಿಘ್ನರಾಜೋ
ಜಜ್ಞೇ ತ್ವಹೋ ಚೇಷ್ಟಿತಮೀಶದೃಷ್ಟೇಃ ॥ ೨೨ ॥

ಅಶ್ರುಪ್ಲುತಾಂಗೀ ಗಿರಿಜಾ ಸಮೀಕ್ಷ್ಯ
ವಿಯುಕ್ತದಾಂಪತ್ಯಮಿತೀಶಮೂಚೇ ।
ಮನೋಭವೋಽಭೂನ್ಮದನೋ ರತಿಶ್ಚ
ಸೌಭಾಗ್ಯಪೂರ್ವತ್ವಮವಾಪ ಸೋಮಾತ್ ॥ ೨೩ ॥

---

೨೧. ಓ ಮಹಾದೇವ, ಪೃಥಿವೀ, ಜಲ, ತೇಜಸ್ಸು, ವಾಯು, ಆಕಾಶ ಯಜಮಾನ, ಚಂದ್ರ, ಸೂರ್ಯ, ಎಂಬ ಅಷ್ಟಮೂರ್ತ್ಯಾತ್ಮಕವಾದ ಎಂಟು ರೂಪಗಳಿಂದ ನೀನು ಜಗತ್ತೆಲ್ಲವನ್ನೂ ಧರಿಸಿರುವೆ. ನಿನ್ನಾಜ್ಞೆಯಂತೆ ಜಗತ್ತೆಲ್ಲವೂ ನಡೆಯುತ್ತಿರುವುದು. ಹೀಗಿದ್ದರೂ ಈ ನಿನ್ನ ಅನಾದಿಯಾದ ಮಹಿಮೆಯನ್ನು ಯಾರೂ ತಿಳಿಯಲಾರರು.

೨೨. ದೇಹದ ಕೊಳೆಯಿಂದ ಜನಿಸಿದ ಕುಮಾರನನ್ನು ಪಾರ್ವತಿಯು ಹಾಸ್ಯಕ್ಕಾಗಿ—ಓ ದೇವ ಇವನು ನಿನ್ನ ಮಗನು ಮತ್ತು ಮಹಾಶೂರನು ಎಂದಳು. ಅಂತಹ ಆ ಕುಮಾರನೂ ನಿನ್ನ ಕೃಪಾದೃಷ್ಟಿಯಿಂದ ವಿಘ್ನರಾಜನಾದನು. ನಿನ್ನ ಕೃಪಾದೃಷ್ಟಿಯು ಆಶ್ಚರ್ಯಕರವಾದುದು.

೨೩. ಮನ್ಮಥನು ಭಸ್ಮವಾದನು. ರತಿಯು ಶೋಕಿಸತೊಡಗಿದಳು. ಅದನ್ನು ನೋಡಿ ಗಿರಿಜೆಯು ಕಂಬನಿದುಂಬಿ ಪ್ರೀತಿಮಯವಾದ ದಾಂಪತ್ಯವು ಒಡೆದುಹೋಯಿತು ಎಂದು ವ್ಯಥೆಪಟ್ಟಳು. ಆಗ ನೀನು ಕೃಪಾದೃಷ್ಟಿಯಿಂದ ಮನ್ಮಥನನ್ನು ಮನೋಭವನನ್ನಾಗಿ ಮಾಡಿ ಬದುಕಿಸಿದೆ. ರತಿಯು ದೀರ್ಘ ಸುಮಂಗಲಿಯಾದಳು. ಓ ಮಹೇಶ, ನಿನ್ನ ಮಹಿಮೆಯು ಅಗಾಧವಾದುದಲ್ಲವೇ?

॥ ಬ್ರಹ್ಮೋವಾಚ ॥

ಇತ್ಯಾದಿ ಸ್ತುವತಸ್ತಸ್ಯ ಪುರತೋಽಭೂತ್ತ್ರಿಲೋಚನಃ ।
ವರೇಣ ಚ್ಛಂದಯಾಮಾಸ ಹರ್ಷಾನ್ನೋವಾಚ ಕಿಂಚನ ॥ ೨೪ ॥

ತೂಷ್ಣೀಂಭೂತೇ ತು ಧನದೇ ಪುಲಸ್ತ್ಯೇ ಚ ಮಹೇಶ್ವರೇ ।
ಪುನಃ ಪುನರ್ವರಸ್ವೇತಿ ಶಿವೇ ವಾದಿನಿ ಹರ್ಷಿತೇ ॥ ೨೫ ॥

ಏತಸ್ಮಿನ್ನಂತರೇ ತತ್ರ ವಾಗುವಾಚಾಶರೀರಿಣೀ ।
ಪ್ರಾಪ್ತವ್ಯಂ ಧನಪಾಲತ್ವಂ ವದಂತೀದಂ ಮಹೇಶ್ವರಂ ॥ ೨೬ ॥

ಪುಲಸ್ತ್ಯಸ್ಯ ತು ಯಚ್ಚಿತ್ತಂ ಪಿತುರ್ವೈಶ್ರವಣಸ್ಯ ತು ।
ವಿದಿತ್ವೇವ ತದಾ ವಾಣೀ ಶುಭಮರ್ಥಮುದೀರಯತ್ ॥ ೨೭ ॥

ಭೂತವದ್ಭವಿತವ್ಯಂ ಸ್ಯಾದ್ದಾಸ್ಯಮಾನಂ ತು ದತ್ತವತ್ ।
ಪ್ರಾಪ್ತವ್ಯಂ ಪ್ರಾಪ್ತವತ್ತತ್ರ ದೈವೀ ವಾಗಭವಚ್ಛುಭಾ ॥ ೨೮ ॥

---

೨೪. ಹೀಗೆ ಕುಬೇರನು ಸ್ತುತಿಸಲು, ಪರಮೇಶ್ವರನು ಎದುರಿಗೆ ಪ್ರತ್ಯಕ್ಷನಾಗಿ ನಿನಗೆ ಬೇಕಾದ ವರವನ್ನು ಕೇಳು ಎಂದನು. ಆದರೆ ಶಿವನನ್ನು ನೋಡಿ ಸಂತೋಷಾತಿರೇಕದಿಂದ ಕುಬೇರನಿಗೆ ಏನನ್ನೂ ಹೇಳಲು ತೋರದಿರಲು,

೨೫. ಶಿವನು ಪುನಃಪುನಃ ವರವನ್ನು ಕೇಳು ಎಂದರೂ ಕುಬೇರನೂ ಪುಲಸ್ತ್ಯನೂ ಸಂತೋಷಾಧಿಕ್ಯದಿಂದ ಏನನ್ನೂ ಹೇಳಲಿಲ್ಲ.

೨೬. ಈ ಸಮಯದಲ್ಲಿ ಕುಬೇರನು ಧನಪತಿಯಾಗಬೇಕೆಂಬುದನ್ನು ಸೂಚಿಸುವಂತಹ ಒಂದು ಆಕಾಶವಾಣಿಯು ಕೇಳಿಸಿತು.

೨೭. ಪುಲಸ್ತ್ಯ ಮತ್ತು ವೈಶ್ರವಣರ ಮನೋಭಿಪ್ರಾಯವನ್ನು ತಿಳಿದಂತೆ ಅವರ ಇಷ್ಟಕ್ಕನುಸಾರವಾಗಿಯೇ ಆಕಾಶವಾಣಿಯು ಹೇಳಿತು.

೨೮. ಮುಂದೆ ನಡೆಯುವುದನ್ನು ಹಿಂದೆ ನಡೆದಂತೆಯೂ ಮುಂದೆ ಶಿವನು ಕೊಡುವುದನ್ನು ಕೊಟ್ಟಿರುವಂತೆಯೂ, ಕುಬೇರನು ಮುಂದೆ ಪಡೆಯುವುದನ್ನು ಹಿಂದೆಯೇ ಪಡೆದಂತೆಯೂ ಆಕಾಶವಾಣಿಯು ಹೀಗೆ ಹೇಳಿತು.

ಪ್ರಭೂತಶತ್ರುಃ ಪರಿಭೂತದುಃಖಃ
ಸಂಪೂಜ್ಯ ಸೋಮೇಶ್ವರಮಾಪ ಲಿಂಗಂ ।
ದಿಗೀಶ್ವರತ್ವಂ ದ್ರವಿಣಪ್ರಭುತ್ವ-
ಮುಪಾರದಾತೃತ್ವಕಲತ್ರಪುತ್ರಾನ್ ॥ ೨೯ ॥

ತಾಂ ವಾಚಂ ಧನದಃ ಶ್ರುತ್ವಾ ದೇವದೇವಂ ತ್ರಿಶೂಲಿನಂ ।
ಏವಂ ಭವತು ನಾಮೇತಿ ಧನದೋ ವಾಕ್ಯಮಬ್ರವೀತ್ ॥ ೩೦ ॥

ತಥೈವಾಸ್ತ್ವಿತಿ ದೇವೇಶೋ ದೈವೀಂ ವಾಚಮಮನ್ಯತ ।
ಪುಲಸ್ತ್ಯಂ ಚ ವರೈಃ ಪುಣ್ಯೈಸ್ತಥಾ ವಿಶ್ರವಸಂ ಮುನಿಂ ॥ ೩೧ ॥

ಧನಪಾಲಂ ಚ ದೇವೇಶಂ ಹ್ಯಭಿನಂದ್ಯ ಯಯೌ ಶಿವಃ ।
ತತಃ ಪ್ರಭೃತಿ ತತ್ತೀರ್ಥಂ ಪೌಲಸ್ತ್ಯಂ ಧನದಂ ವಿದುಃ ॥ ೩೨ ॥

---

೨೯. ವೈರಿಯಿಂದ ಕುಬೇರನ ಐಶ್ವರ್ಯವು ಅಪಹರಿಸಲ್ಪಟ್ಟು ಅವನ ದುಃಖಕ್ಕೊಳಗಾದನು. ಆಗ ಅವನು ಸೋಮೇಶ್ವರ (ಶಿವ) ನನ್ನು ಪೂಜಿಸಿ ಆ ದೇವನ ಅನುಗ್ರಹದಿಂದ ದಿಕ್ಪಾಲನಾದನು, ಧನಪತಿಯಾದನು, ಮಹಾ ಉದಾರಿಯಾದನು, ಸಂಪನ್ನರಾದ ಹೆಂಡತಿಮಕ್ಕಳನ್ನು ಪಡೆದನು.

೩೦. ಇಂತಹ ಆಕಾಶವಾಣಿಯನ್ನು ಕೇಳಿ ಕುಬೇರನು ಅಶರೀರವಾಣಿಯು ಹೇಳಿದಂತೆಯೇ ನನಗೆ ವರಗಳನ್ನನುಗ್ರಹಿಸು ಎಂದು ಮಹಾದೇವನನ್ನು ಪ್ರಾರ್ಥಿಸಿದನು.

೩೧-೩೨. ಮಹಾದೇವನು ಅಶರೀರವಾಣಿಯು ಹೇಳಿದಂತೆ ವರವನ್ನು ಅನುಗ್ರಹಿಸಿದನು. ಆಮೇಲೆ ಪುಲಸ್ತ್ಯಬ್ರಹ್ಮ ವೈಶ್ರವಣರನ್ನು ವರಗಳಿಂದ ಅಭಿನಂದಿಸಿ ಮಹಾದೇವನು ತನ್ನ ಸ್ಥಾನಕ್ಕೆ ತೆರಳಿದನು. ಅದು ಮೊದಲುಗೊಂಡು

ತಥಾ ವೈಶ್ರವಸಂ ಪುಣ್ಯಂ ಸರ್ವಕಾಮಪ್ರದಂ ಶುಭಂ ।
ತೇಷು ಸ್ನಾನಾದಿ ಯತ್ಕಿಂಚಿತ್ತತ್ಸರ್ವಂ ಬಹುಪುಣ್ಯದಂ ॥ ೩೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಪೌಲಸ್ತ್ಯತೀರ್ಥವರ್ಣನಂ ನಾಮ
ಸಪ್ತನವತಿತಮೋಽಧ್ಯಾಯಃ

ಆ ಗೌತಮೀತೀರದಲ್ಲಿ ಪೌಲಸ್ತ್ಯ, ಧನದ, ವೈಶ್ರವಸಗಳೆಂಬ ತೀರ್ಥಗಳಾದುವು, ಈ ತೀರ್ಥಗಳೆಲ್ಲವೂ ಪವಿತ್ರವಾದುವುಗಳು, ಸಕಲೇಷ್ಟವನ್ನೂ ಉಂಟುಮಾಡುವಂತಹವು. ಈ ತೀರ್ಥಗಳಲ್ಲಿ ಸ್ನಾನ ಮೊದಲಾದುವುಗಳನ್ನು ಮಾಡಿದರೆ ಮಹಾ ಪುಣ್ಯವು ಲಭಿಸುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಪೌಲಸ್ತ್ಯತೀರ್ಥವರ್ಣನವೆಂಬ ತೊಂಭತ್ತೇಳನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಯಲ್ಲಿ ಇಪ್ಪತ್ತೆಂಟನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಅಷ್ಟನವತಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಅಗ್ನಿತೀರ್ಥಮಿತಿ ಖ್ಯಾತಂ ಸರ್ವಕ್ರತುಫಲಪ್ರದಂ ।
ಸರ್ವವಿಘ್ನೋಪಶಮನಂ ತತ್ತೀರ್ಥಸ್ಯ ಫಲಂ ಶೃಣು ॥ ೧ ॥

ಜಾತವೇದಾ ಇತಿ ಖ್ಯಾತೋ ಅಗ್ನೇರ್ಭ್ರಾತಾ ಸ ಹವ್ಯವಾಟ್ ।
ಹವ್ಯಂ ವಹಂತಂ ದೇವಾನಾಂ ಗೌತಮ್ಯಾಸ್ತೀರ ಏವ ತು ॥ ೨ ॥

ತೊಂಭತ್ತೆಂಟನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಅಗ್ನಿತೀರ್ಥವೆಂಬ ತೀರ್ಥವಿರುವುದು. ಅದು ಸಕಲ ಯಾಗಗಳ ಫಲವನ್ನುಂಟುಮಾಡುವುದು. ವಿಘ್ನಗಳೆಲ್ಲವನ್ನೂ ಹೋಗಲಾಡಿಸುವುದು. ಇಂತಹ ಅಗ್ನಿತೀರ್ಥದ ಮಾಹಾತ್ಮ್ಯವನ್ನು ಹೇಳುವೆನು ಕೇಳು.

೨. ಅಗ್ನಿದೇವನಿಗೆ ಜಾತವೇದನೆಂದು ಪ್ರಸಿದ್ಧನಾದ ಸಹೋದರನಿದ್ದನು. ಆ ಜಾತವೇದನು ಒಂದುಸಾರಿ ಗೌತಮೀನದಿಯ ತೀರದಲ್ಲಿ ಋಷಿಗಳು ಮಾಡುತ್ತಿರುವ ಯಜ್ಞದಲ್ಲಿನ ಹವಿರ್ಭಾಗವನ್ನು ಸ್ವೀಕರಿಸಿ ದೇವತೆಗೆ ಒಯ್ಯುತ್ತಿದ್ದನು.

ಋಷೀಣಾಂ ಸತ್ರಸದನೇ ಅಗ್ನೇರ್ಭ್ರಾತರಮುತ್ತಮಂ ।
ಭ್ರಾತುಃ ಪ್ರಿಯಂ ತಥಾ ದಕ್ಷಂ ಮಧುರ್ದಿತಿಸುತೋ ಬಲೀ ॥ ೩ ॥

ಜಘಾನ ಋಷಿಮುಖ್ಯೇಷು ಪಶ್ಯತ್ಸು ಚ ಸುರೇಷ್ವಪಿ ।
ಹವ್ಯಂ ದೇವಾ ನೈವ ಚಾಪುರ್ಮೃತೇ ವೈ ಜಾತವೇದಸಿ ॥ ೪ ॥

ಮೃತೇ ಭ್ರಾತರಿ ಸ ತ್ವಗ್ನಿಃ ಪ್ರಿಯೇ ವೈ ಜಾತವೇದಸಿ ।
ಕೋಪೇನ ಮಹತಾವಿಷ್ಟೋ ಗಾಂಗಮಂಭಃ ಸಮಾವಿಶತ್ ॥ ೫ ॥

ಗಂಗಾಂಭಸಿ ಸಮಾವಿಷ್ಟೇ ಹ್ಯಗ್ನೌ ದೇವಾಶ್ಚ ಮಾನುಷಾಃ ।
ಜೀವಮುತ್ಸರ್ಜಯಾಮಾಸುರಗ್ನಿಜೀವಾ ಯತೋ ಮತಾಃ ॥ ೬ ॥

ಯತ್ರಾಗ್ನಿರ್ಜಲಮಾವಿಷ್ಟಸ್ತಂ ದೇಶಂ ಸರ್ವ ಏವ ತೇ ।
ಆಜಗ್ಮುರ್ವಿಬುಧಾಃ ಸರ್ವ ಋಷಯಃ ಪಿತರಸ್ತಥಾ ॥ ೭ ॥

ವಿನಾಗ್ನಿನಾ ನ ಜೀವಾಮಃ ಸ್ತುವಂತೋಽಗ್ನಿಂ ವಿಶೇಷತಃ ।
ಅಗ್ನಿಂ ಜಲಗತಂ ದೃಷ್ಟ್ವಾ ಪ್ರಿಯಂ ಚೋಚುರ್ದಿವೌಕಸಃ ॥ ೮ ॥

೩-೪. ಅಣ್ಣನಾದ ಅಗ್ನಿಗೆ ಆ ಜಾತವೇದನು ತುಂಬಾ ಪ್ರಿಯನಾಗಿದ್ದನು, ಇಂತಹ ಜಾತವೇದನನ್ನು ದಿತಿಯ ಮಗನಾದ ಮಧುವೆಂಬ ದೈತ್ಯನು ದೇವತೆಗಳು ಮುನಿಗಳು ನೋಡುತ್ತಿರುವಂತೆಯೇ ಸಂಹರಿಸಿದನು. ಹೀಗೆ ಜಾತವೇದನು ಮೃತನಾಗಲು ಅಲ್ಲಿನ ಹವಿರ್ಭಾಗವು ದೇವತೆಗಳಿಗೆ ಲಭಿಸಲೇ ಇಲ್ಲ.

೫. ಪ್ರಿಯ ಸಹೋದರನಾದ ಜಾತವೇದನ ಮರಣದಿಂದ ಅಗ್ನಿಯು ಕೋಪಗೊಂಡು ಗಂಗೆಯ ಪ್ರವಾಹವನ್ನು ಪ್ರವೇಶಿಸಿದನು.

೬. ಅಗ್ನಿಯು ಗಂಗೆಯ ಜಲವನ್ನು ಪ್ರವೇಶಿಸಲು ದೇವತೆಗಳೂ ಮನುಷ್ಯರೂ ಜೀವಿಸಲಸಮರ್ಥರಾದರು. ಅಗ್ನಿಯಿಲ್ಲದೆ ಯಾರೂ ಜೀವಿಸಲಾರರು.

೭-೮. ಅಗ್ನಿಯಿಲ್ಲದೆ ನಾವು ಬದುಕಲಾರೆವು ಎಂದು ಯೋಚಿಸಿ ಆ ದೇವತೆಗಳು ಅಗ್ನಿಯ ಜಲಪ್ರವೇಶವನ್ನು ಮಾಡಿದ ಸ್ಥಳಕ್ಕೆ ಋಷಿಗಳು, ಪಿತೃಗಳು, ದೇವತೆಗಳಾದಿಯಾಗಿ ಎಲ್ಲರೂ ಬಂದು ಜಲದಲ್ಲಿರುವ ಅಗ್ನಿಯನ್ನು ಕುರಿತು,

॥ ದೇವಾ ಊಚುಃ ॥

ದೇವಾನ್ ಜೀವಯ ಹವ್ಯೇನ ಕವ್ಯೇನ ಚ ಪಿತ್ರ್ಯಂಸ್ತಥಾ ।
ಮಾನುಷಾನನ್ನಪಾಕೇನ ಬೀಜಾನಾಂ ಕ್ಲೇದನೇನ ಚ ॥ ೯ ॥

॥ ಬ್ರಹ್ಮೋವಾಚ ॥

ಅಗ್ನಿರಪ್ಯಾಹ ತಾನ್ದೇವಾನ್ ಶಕ್ತೋ ಯೋ ಮೇ ಗತೋಽನುಜಃ ।
ಕ್ರಿಯಮಾಣೇ ಭವತ್ಕಾರ್ಯೇ ಯಾ ಗತಿರ್ಜಾತವೇದಸಃ ॥ ೧೦ ॥

ಸಾ ವಾಪಿ ಸ್ಯಾನ್ಮಮ ಸುರಾ ನೋತ್ಸಹೇ ಕಾರ್ಯಸಾಧನೇ ।
ಕಾರ್ಯಂ ತು ಸರ್ವತಸ್ತಸ್ಯ ಭವತಾಂ ಜಾತವೇದಸಃ ॥ ೧೧ ॥

ಇಮಾಂ ಸ್ಥಿತಿಮನುಪ್ರಾಪ್ತೋ ನ ಜಾನೇ ಮೇ ಕಥಂ ಭವೇತ್ ।
ಇಹ ಚಾಮುತ್ರ ಚ ವ್ಯಾಪ್ತಾ ಶಕ್ತಿರಪ್ಯತ್ರ ನೋ ಭವೇತ್ ॥ ೧೨ ॥

---

೯. ಓ ಅಗ್ನಿದೇವ, ಹವಿರ್ಭಾಗದಿಂದ ದೇವತೆಗಳನ್ನು ಬದುಕಿಸು. ಕವ್ಯದಿಂದ ಪಿತೃಗಳನ್ನು ಬದುಕಿಸು. ಅನ್ನಪಾಕದಿಂದಲೂ ಬೀಜಪಾಕದಿಂದಲೂ ಮನುಷ್ಯರನ್ನು ಸಲಹು ಎಂದು ಪ್ರಾರ್ಥಿಸಿದರು.

೧೦. ಆಗ ಅಗ್ನಿಯು ಅವರನ್ನು ಕುರಿತು ಎಲೈ ದೇವತೆಗಳೇ, ನೀವು ಹೇಳಿದ ಕಾರ್ಯವನ್ನು ಮಾಡಲು ಸಮರ್ಥನಾದ ನನ್ನ ಸಹೋದರನು ಮೃತನಾದನು. ನಿಮಗೆ ಹವಿರ್ಭಾಗವನ್ನು ಒದಗಿಸುವ ಕಾರ್ಯದಲ್ಲಿ ಜಾತವೇದನಿಗಿದ್ದ ಶಕ್ತಿಯು ನನಗಿಲ್ಲ. ಆ ಕಾರ್ಯವನ್ನು ನಾನು ಮಾಡಲಾರೆನು.

೧೧. ನಿಮ್ಮ ಕಾರ್ಯವೆಲ್ಲವನ್ನೂ ಜಾತವೇದನೇ ಮಾಡುತ್ತಿದ್ದನು. ಶಕ್ತಿಯಿಲ್ಲದ ನಾನು ಅದನ್ನು ಮಾಡುವುದು ಹೇಗೆ?

೧೨. ಇಹಪರಲೋಕಗಳೆರಡನ್ನೂ ವ್ಯಾಪಿಸುವ ಶಕ್ತಿಯು ನನಗಿಲ್ಲ. ಹೀಗಿದ್ದರೂ ನಾನು ನಿಮ್ಮ ಕಾರ್ಯವನ್ನು ಪ್ರಾರಂಭಿಸಿದರೆ ಜಾತವೇದನಿಗಾದ ಗತಿಯೇ ನನಗೂ ಬರುವುದು ಎಂದನು.

ಅಥಾಪಿ ಕ್ರಿಯಮಾಣೇ ವೈ ಕಾರ್ಯೇ ಸೈವ ಗತಿರ್ಮನು ।
ದೇವಾಸ್ತಮೂಚುರ್ಧಾವೇನ ಸರ್ವೇಣ ಋಷಯಸ್ತಥಾ ॥ ೧೩ ॥

ಆಯುಃ ಕರ್ಮಣಿ ಚ ಪ್ರೀತಿರ್ವ್ಯಾಪ್ತೌ ಶಕ್ತಿಶ್ಚ ದೀಯತೇ ।
ಪ್ರಯಾಜಾನನುಯಾಜಾಂಶ್ಚ ದಾಸ್ಯಾಮೋ ಹವ್ಯವಾಹನ ॥ ೧೪ ॥

ದೇವಾನಾಂ ತ್ವಂ ಮುಖಂ ಶ್ರೇಷ್ಠಮಾಹುತ್ಯಃ ಪ್ರಥಮಾಸ್ತವ ।
ತ್ವಯಾ ದತ್ತಂ ತು ಯದ್ದ್ರವ್ಯಂ ಭೋಕ್ಷ್ಯಾಮಃ ಸುರಸತ್ತಮ ॥ ೧೫ ॥

॥ ಬ್ರಹ್ಮೋವಾಚ ॥

ತತಸ್ತುಷ್ಟೋಽಭವದ್ವಹ್ನಿರ್ದೇವವಾಕ್ಯಾದ್ಯಥಾಕ್ರಮಂ ।
ಇಹ ಚಾಮುತ್ರ ಚ ವ್ಯಾಪ್ತೌ ಹವ್ಯೇ ವಾ ಲೌಕಿಕೇ ತಥಾ ॥ ೧೬ ॥

---

೧೩. ಆಗ ದೇವತೆಗಳೂ ಋಷಿಗಳೂ ಅಗ್ನಿಯನ್ನು ಕುರಿತು ಪ್ರೀತಿಯಿಂದ ಎಲೈ ಅಗ್ನಿಯೇ, ನಿನಗೆ ದೀರ್ಘಾಯುಸ್ಸನ್ನೂ, ಕರ್ಮಪ್ರೀತಿಯನ್ನೂ ಇಹಪರಗಳಲ್ಲಿ ವ್ಯಾಪಿಸುವ ಶಕ್ತಿಯನ್ನೂ ಕೊಡುವೆವು.

೧೪–೧೫. ಪ್ರಯಾಜ ಮತ್ತು ಅನುಯಾಜಗಳನ್ನೂ ಕೊಡುವೆವು, ದೇವತೆಗಳಿಗೆ ಪ್ರಧಾನವಾದ ಮುಖವು ನೀನು. ಹೋಮದಲ್ಲಿ ಮೊದಲನೆಯ ಆಹುತಿಗಳು ನಿನಗೇ ಕೊಡಲ್ಪಡುವುವು. ನೀನು ನಮಗೆ ಅರ್ಪಿಸಿದ ಹವಿರ್ಭಾಗವನ್ನು ನಾವು ಸೇವಿಸುವೆವು ಎಂದು ಹೇಳಲು,

೧೬. ದೇವತೆಗಳ ಈ ಮಾತಿನಿಂದ ಅಗ್ನಿಯು ಸಂತುಷ್ಟನಾದನು. ದೇವತೆಗಳ ಆಜ್ಞೆಯಂತೆ ಆಮೇಲಾ ಅಗ್ನಿಯು ಇಹಪರಲೋಕಗಳ ವ್ಯಾಪ್ತಿಯನ್ನು ಪಡೆದನು. ವೈದಿಕಲೌಕಿಕಕರ್ಮಗಳೆರಡರಲ್ಲಿಯೂ ಅವನಿಗೆ ನಿರ್ಭಯವಾದ ಸಾಮರ್ಥ್ಯವುಂಟಾಯಿತು.

ಸರ್ವತ್ರ ವಹ್ನಿರಭಯಃ ಸಮುತ್ಥೋಽಭೂತ್ಸುರಾಜ್ಞಯಾ ।
ಜಾತವೇದಾ ಬೃಹದ್ಭಾನುಃ ಸಪ್ತಾರ್ಚಿರ್ನೀಲಲೋಹಿತಃ ॥ ೧೭ ॥

ಜಲಗರ್ಭಃ ಶಮೀಗರ್ಭೋ ಯಜ್ಞಗರ್ಭಃ ಸ ಉಚ್ಯತೇ ।
ಜಲಾದಾಕೃಷ್ಯ ವಿಬುಧಾ ಅಭಿಷಿಚ್ಯ ವಿಭಾವಸುಂ ॥ ೧೮ ॥

ಉಭಯತ್ರ ಪದೇ ವಾಸಃ ಸರ್ವಗೋಽಗ್ನಿಸ್ತತೋಽಭವತ್ ।
ಯಥಾಗತಂ ಸುರಾ ಜಗ್ಮುರ್ವಹ್ನಿತೀರ್ಥಂ ತದುಚ್ಯತೇ ॥ ೧೯ ॥

ತತ್ರ ಸಪ್ತ ಶತಾನ್ಯಾಸಂಸ್ತೀರ್ಥಾನಿ ಗುಣವಂತಿ ಚ ।
ತೇಷು ಸ್ನಾನಂ ಚ ದಾನಂ ಚ ಯಃ ಕರೋತಿ ಜಿತಾತ್ಮವಾನ್ ॥ ೨೦ ॥

---

೧೭. ಆ ಮೊದಲುಗೊಂಡು ಅಗ್ನಿಗೆ ಜಾತವೇದನೆಂದೂ, ಬೃಹದ್ಭಾನುವೆಂದೂ, ಸಪ್ತಾರ್ಚಿಯೆಂದೂ, ನೀಲಲೋಹಿತನೆಂದೂ, ಜಲಗರ್ಭನೆಂದೂ, ಶಮೀಗರ್ಭನೆಂದೂ ಯಜ್ಞಗರ್ಭನೆಂದೂ ನಾನಾ ಹೆಸರುಗಳಾದುವು.

೧೮. ಆಮೇಲೆ ದೇವತೆಗಳು ಅಗ್ನಿಯನ್ನು ಜಲದಿಂದ ಮೇಲಕ್ಕೆ ಕರೆದುಕೊಂಡು ಬಂದು ಗೌತಮೀಜಲದಿಂದ ಅಭಿಷೇಕಮಾಡಿಸಿದರು. ಅಂದಿನಿಂದ ಅಗ್ನಿಗೆ ಸ್ವರ್ಗಮರ್ತ್ಯಲೋಕಗಳಲ್ಲಿ ವಾಸವೂ ಪ್ರಪಂಚದಲ್ಲೆಲ್ಲಾ ವ್ಯಾಪ್ತಿಯೂ ಉಂಟಾದುವು.

೧೯. ಬಳಿಕ ದೇವತೆಗಳು ತಮ್ಮ ಲೋಕಕ್ಕೆ ಹೊರಟುಹೋದರು. ಹೀಗೆ ಅಗ್ನಿಗೆ ಅಭಿಷೇಕವಾದ ಗೌತಮೀತೀರಕ್ಕೆ ಅಗ್ನಿತೀರ್ಥವೆಂದು ಹೆಸರು. ಆ ತೀರ್ಥದಲ್ಲಿ ಮುಂದೆ ಏಳನೂರು ಪುಣ್ಯತೀರ್ಥಗಳು ಜನಿಸಿದುವು-

೨೦. ಆ ತೀರ್ಥಗಳಲ್ಲಿ ಸ್ನಾನದಾನಗಳನ್ನು ಶ್ರದ್ಧೆಯಿಂದ ಮಾಡಿದರೆ ಅಶ್ವಮೇಧಯಾಗದ ಸಂಪೂರ್ಣವಾದಫಲವು ಲಭಿಸುವುದಲ್ಲದೆ ಸರ್ವಮಂಗಳವೂ ಉಂಟಾಗುವುದು.

ಅಶ್ವಮೇಧಫಲಂ ಸಾಗ್ರಂ ಪ್ರಾಪ್ನೋತ್ಯವಿಕಲಂ ಶುಭಂ ।
ದೇವತೀರ್ಥಂ ಚ ತತ್ರೈವ ಆಗ್ನೇಯಂ ಜಾತವೇದಸಂ ॥ ೨೧ ॥

ಅಗ್ನಿಪ್ರತಿಷ್ಠಿತಂ ಲಿಂಗಂ ತತ್ರಾಸ್ತ್ಯನೇಕವರ್ಣವತ್ ।
ತದ್ದೇವದರ್ಶನಾದೇವ ಸರ್ವಕ್ರತುಫಲಂ ಲಭೇತ್ ॥ ೨೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇಽಗ್ನಿ-ತೀರ್ಥವರ್ಣನಂ ನಾಮಾಷ್ಟನವತಿತಮೋಽಧ್ಯಾಯಃ

೨೧-೨೨. ಅಲ್ಲಿಯೇ ದೇವತೀರ್ಥ, ಆಗ್ನೇಯತೀರ್ಥ, ಜಾತವೇದ ತೀರ್ಥಗಳಿರುವುವು. ಆ ಸ್ಥಳದಲ್ಲಿ ಪೂಜೆಗಾಗಿ ಅಗ್ನಿಯು ಪ್ರತಿಷ್ಠಿಸಿದ ಶಿವಲಿಂಗ ವಿರುವುದು. ಅದು ನಾನಾ ಬಣ್ಣವುಳ್ಳದ್ದಾಗಿದೆ. ಆ ಶಿವಲಿಂಗದರ್ಶನವನ್ನು ಮಾಡಿದರೆ ಸಕಲ ಯಾಗಗಳ ಫಲವು ಲಭಿಸುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಅಗ್ನಿತೀರ್ಥವರ್ಣನವೆಂಬ ತೊಂಭತ್ತೆಂಟನೆಯ ಅಧ್ಯಾಯವು ಮುಗಿದುದು.

ಗೌತಮೀಮಹಾತ್ಮೆಯಲ್ಲಿ ಇಪ್ಪತ್ತೊಂಭತ್ತನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಏಕೋನಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಋಣಪ್ರಮೋಚನಂ ನಾಮ ತೀರ್ಥಂ ವೇದವಿದೋ ವಿದುಃ ।
ತಸ್ಯ ಸ್ವರೂಪಂ ವಕ್ಷ್ಯಾಮಿ ಶೃಣು ನಾರದ ತನ್ಮನಾಃ ॥ ೧ ॥

ಆಸೀತ್ಪೃಥುಶ್ರವಾ ನಾಮ ಪ್ರಿಯಃ ಕಕ್ಷೀವತಃ ಸುತಃ ।
ನ ದಾರಸಂಗ್ರಹಂ ಲೇಭೇ ವೈರಾಗ್ಯಾನ್ನಾಗ್ನಿಪೂಜನಂ ॥ ೨ ॥

ತೊಂಭತ್ತೊಂಭತ್ತನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಋಣಪ್ರಮೋಚನವೆಂಬ ತೀರ್ಥವಿರುವುದು. ಅದರ ಮಹಾತ್ಮ್ಯವನ್ನು ಹೇಳುವೆನು, ಶ್ರದ್ಧೆಯಿಂದ ಕೇಳು.

೨. ಕಕ್ಷಿವಾನನೆಂಬುವವನಿಗೆ ಪೃಥುಶ್ರವನೆಂಬ ಮಗನಿದ್ದನು, ಅವನು ವೈರಾಗ್ಯದಿಂದ ಮದುವೆಯನ್ನೇ ಮಾಡಿಕೊಳ್ಳಲಿಲ್ಲ. ತನ್ಮೂಲಕ ಅಗ್ನಿಸೇವೆಯನ್ನೂ (ಔಪಾಸನವನ್ನೂ) ಮಾಡಲಿಲ್ಲ.

ಕನೀಯಾಂಸ್ತು ಸಮರ್ಥೋಽಪಿ ಪರಿವಿತ್ತಿಭಯಾನ್ಮುನೇ ।
ನಾಕರೋದ್ದಾರಕರ್ಮಾದಿ ನೈವಾಗ್ನೀನಾಮುಪಾಸನಂ ॥ ೩ ॥

ತತಃ ಪ್ರೋಚುಃ ಪಿತೃಗಣಾಃ ಪುತ್ರಂ ಕಕ್ಷೀವತಃ ಶುಭಂ ।
ಜ್ಯೇಷ್ಠಂ ಚೈವ ಕನಿಷ್ಠಂ ಚ ಪೃಥಕ್ಪೃಥಗಿದಂ ವಚಃ ॥ ೪ ॥

॥ ಪಿತರ ಊಚುಃ ॥

ಋಣತ್ರಯಾಪನೋದಾಯ ಕ್ರಿಯತಾಂ ದಾರಸಂಗ್ರಹಃ ॥ ೫ ॥

॥ ಬ್ರಹ್ಮೋವಾಚ ॥

ನೇತ್ಯುವಾಚ ತತೋ ಜ್ಯೇಷ್ಠಃ ಕಿಮೃಣಂ ಕೇನ ಯುಜ್ಯತೇ ।
ಕನೀಯಾಂಸ್ತು ಪಿತೄನ್ಪ್ರಾಹ ನ ಯೋಗ್ಯೋ ದಾರಸಂಗ್ರಹಃ ॥ ೬ ॥

---

೩. ಕಕ್ಷಿವಾನನಿಗೆ ಕಿರಿಯ ಮಗನೊಬ್ಬನಿದ್ದನು. ಅವನೂ ಪರಿವಿತ್ತಿಯ ಭಯದಿಂದ [ಎಂದರೆ ಅಣ್ಣನು ಮದುವೆಯಾಗುವುದಕ್ಕಿಂತ ಮುಂಚೆ ತಮ್ಮನು ಮದುವೆಯಾಗುವುದು. ಇದು ದೋಷವು] ಮದುವೆಯಾಗಲಿಲ್ಲ, ಅಗ್ನಿ ಪೂಜೆಯನ್ನೂ ಮಾಡಲಿಲ್ಲ.

೪. ಆಗ ಕಕ್ಷೀವಾನನ ಪಿತೃಗಳು ಅವನ ಮಕ್ಕಳನ್ನು ಕುರಿತು,

೫. ಎಲೈ ಕುಮಾರರೇ, ಪಿತೃಋಣ, ದೇವಋಣ, ಋಷಿಋಣಗಳೆಂಬ ಮೂರು ಋಣ (ಸಾಲ) ಗಳನ್ನು ತೀರಿಸಿಕೊಳ್ಳಲು ಮದುವೆಯಾಗಿರಿ, ಎನ್ನಲು,

೬. ಆಗ ಹಿರಿಯವನು ಋಣವೆಂದರೇನು? ಅದು ಆತ್ಮನಿಗೆ ಸಂಬಂಧಿಸುವುದು ಹೇಗೆ? ಎಲ್ಲವೂ ಸುಳ್ಳು ಎಂದನು. ಕಿರಿಯುವನು ಗುಣವಂತನಾದ ಅಣ್ಣನು ಮದುವೆಯಾಗದಿರಲು ತಮ್ಮನು ಮದುವೆಯಾಗುವುದು ನ್ಯಾಯವಲ್ಲ ಎಂದನು.

ಜ್ಯೇಷ್ಠೇ ಸತಿ ಮಹಾಪ್ರಾಜ್ಞಃ ಪರಿವಿತ್ತಿಭಯಾದಿತಿ ।
ತಾವುಭೌ ಪುನರಪ್ಯೇವಮೂಚುಸ್ತೇ ವೈ ಪಿತಾಮಹಾಃ ॥ ೭ ॥

॥ ಪಿತರ ಊಚುಃ ॥

ಯಾತಾಮುಭೌ ಗೌತಮೀಂ ತು ಪುಣ್ಯಾಂ ಕಕ್ಷೀವತಃ ಸುತೌ ।
ಕುರುತಾಂ ಗೌತಮೀಸ್ನಾನಂ ಸರ್ವಾಭೀಷ್ಟಪ್ರದಾಯಕಂ ॥ ೮ ॥

ಗಚ್ಛತಾಂ ಗೌತಮೀಂ ಗಂಗಾಂ ಲೋಕತ್ರಿತಯಪಾವನೀಂ ।
ಸ್ನಾನಂ ಚ ತರ್ಪಣಂ ತಸ್ಯಾಂ ಕುರುತಾಂ ಶ್ರದ್ಧಯಾನ್ವಿತೌ ॥ ೯ ॥

ದೃಷ್ಟ್ವಾವನಾಮಿತಾ ಧ್ಯಾತಾ ಗೌತಮೀ ಸರ್ವಕಾಮದಾ ।
ನ ದೇಶಕಾಲಜಾತ್ಯಾದಿನಿಯಮೋಽತ್ರಾವಗಾಹನೇ ।
ಜ್ಯೇಷ್ಠೋಽನೃಣಸ್ತತೋ ಭೂಯಾತ್ಪರಿವಿತ್ತಿರ್ನ ಚೇತರಃ ॥ ೧೦ ॥

॥ ಬ್ರಹ್ಮೋವಾಚ ॥

ತತಃ ಪೃಥುಶ್ರವಾ ಜ್ಯೇಷ್ಠಃ ಕೃತ್ವಾ ಸ್ನಾನಂ ಸತರ್ಪಣಂ ।
ತ್ರಯಾಣಾಮಪಿ ಲೋಕಾನಾಂ ಕಾಕ್ಷೀವತೋಽನೃಣೋಽಭವತ್ ॥ ೧೧ ॥

೭–೯. ಆ ಸಹೋದರರನ್ನು ಕುರಿತು ಅವರ ಪಿತೃಗಳು ಮತ್ತೆ ಹೇಳಿದರು–ಎಲೈ ಕುಮಾರರೇ ನೀವೀರ್ವರೂ ಗೌತಮೀನದಿಗೆ ಹೋಗಿರಿ. ಆ ನದಿಯು ಮೂರುಲೋಕಗಳನ್ನೂ ಪವಿತ್ರಗೊಳಿಸುವಂತಹುದು, ಸಕಲಾಭೀಷ್ಟವನ್ನೂ ಉಂಟುಮಾಡುವುದು. ಆ ನದಿಯಲ್ಲಿ ಸ್ನಾನವನ್ನೂ ತರ್ಪಣವನ್ನೂ ಶ್ರದ್ಧೆಯಿಂದ ಮಾಡಿ,

೧೦. ಗೌತಮೀನದಿಯನ್ನು ದರ್ಶನಮಾಡಿ ನಮಸ್ಕರಿಸಿದರೆ ಸಕಲೈಶ್ವರ್ಯಗಳೂ ಲಭಿಸುವುವು. ಆ ನದಿಯಲ್ಲಿ ಸ್ನಾನಮಾಡಲು ದೇಶಕಾಲಜಾತಿಗಳ ನಿಯಮವಿಲ್ಲ. ಅಲ್ಲಿ ಸ್ನಾನಮಾಡಿದರೆ ನಿಮ್ಮಲ್ಲಿ ಹಿರಿಯನ ಋಣವು ಹೋಗುವುದು ಕಿರಿಯನಿಗೆ ಪರಿವಿತ್ತಿ ದೋಷವೂ ಬರುವುದಿಲ್ಲ ಎಂದರು.

೧೧. ಆಮೇಲೆ ಕಕ್ಷಿವಾನನ ಹಿರಿಯಮಗನಾದ ಪೃಥುಶ್ರವನು ಗೌತ

ತತಃ ಪ್ರಭೃತಿ ತತ್ತೀರ್ಥಮೃಣಮೋಚನಮುಚ್ಯತೇ ।
ಶ್ರೌತಸ್ಮಾರ್ತಋಣೇಭ್ಯಶ್ಚ ಇತರೇಭ್ಯಶ್ಚ ನಾರದ ।
ತತ್ರ ಸ್ನಾನೇನ ದಾನೇನ ಋಣೀ ಮುಕ್ತಃ ಸುಖೀ ಭವೇತ್ ॥ ೧೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಋಣಮೋಚನತೀರ್ಥವರ್ಣನಂ ನಾಮ
ನವನವತಿತಮೋಽಧ್ಯಾಯಃ

ವಿಾನದಿಯಲ್ಲಿ ಸ್ನಾನತರ್ಪಣಗಳನ್ನು ಮಾಡಿ ದೇವಋಣ ಪಿತೃಋಣ ಋಷಿ ಋಣಗಳನ್ನು ಕಳೆದುಕೊಂಡನು.

೧೨. ಆ ಮೊದಲುಗೊಂಡು ಆ ತೀರ್ಥಕ್ಕೆ ಋಣಮೋಚನತೀರ್ಥವೆಂದು ಹೆಸರು. ಆ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ಶ್ರುತಿಯಲ್ಲಿ ಹೇಳಿದ ಋಣಗಳೂ ಸ್ಮೃತಿಯಲ್ಲಿ ಹೇಳುವ ಋಣಗಳೂ ಮಿಕ್ಕ ಲೌಕಿಕಋಣಗಳೂ ತೀರುವುವು, ಸುಖವು ಲಭಿಸುವುದು.

ಕೃಷ್ಣಯಜುರ್ವೇದದ ತೈತ್ತಿರೀಯಸಂಹಿತೆಯ ಆರನೆಯ ಕಾಂಡದ ಮೂರನೆಯ ಅಧ್ಯಾಯದಲ್ಲಿ ಈ ರೀತಿ ಇರುವುದು—ಜಾಯಮಾನೋ ವೈ ಬ್ರಾಹ್ಮಣಸ್ತ್ರಿಭಿರ್ಋಣವಾ ಜಾಯತೇ ಬ್ರಹ್ಮಚರ್ಯೇಣರ್ಷಿಭ್ಯೋ ಯಜ್ಞೇನ ದೇವೇಭ್ಯಃ ಪ್ರಜಯಾ ಪಿತೃಭ್ಯ ಏಷ ವಾ ಅನೃಣೋ ಯಃ ಪುತ್ರೀ ಯಜ್ವಾ ಬ್ರಚಾರಿವಾಸೀ ಎಂದರೆ ಬ್ರಾಹ್ಮಣನಾದವನು (ಇದು ಬ್ರಹ್ಮ ಕ್ಷತ್ರಿಯ ವೈಶ್ಯರಿಗೂ ಅನ್ವಯಿಸುವುದು) ಹುಟ್ಟುವಾಗಲೇ ಮೂರು ವಿಧವಾದ ಋಣಗಳನ್ನು (ಸಾಲ) ಹೊತ್ತುಕೊಂಡೇ ಹುಟ್ಟುವನು. ಆ ಋಣಗಳು ಋಷಿಋಣ, ದೇವಋಣ, ಪಿತೃಋಣಗಳೆಂದು ಮೂರು-ವಿಧವು. ಬ್ರಹ್ಮಚರ್ಯವ್ರತದಿಂದಿದ್ದು ನಿಯಮದಿಂದ ವೇದಾಧ್ಯಯನಮಾಡುವುದರಿಂದ ಋಷಿಋಣವು ತೀರುವುದು. ಯಜ್ಞಯಾಗಾದಿಗಳನ್ನು ವಿಧ್ಯುಕ್ತವಾಗಿ ಮಾಡುವುದರಿಂದ ದೇವಋಣವು ತೀರುವುದು. ಅಗ್ನಿಸಾಕ್ಷಿಯಾಗಿ ವಿವಾಹಮಾಡಿಕೊಂಡ ತನ್ನ ಧರ್ಮಪತ್ನಿಯಲ್ಲಿ ಪ್ರಜೋತ್ಪಾದನ

ಮಾಡುವುದರಿಂದ ಪಿತೃಋಣವು ತೀರುವುದು. ಆದುದರಿಂದ ದ್ವಿಜನಾದವನು ಉಪನಯನವಾದ ಕೂಡಲೇ ಗುರು ಶುಶ್ರೂಷೆಮಾಡಿ ವೇದಾಭ್ಯಾಸವನ್ನು ಮಾಡಬೇಕು. ವೇದಾಧ್ಯಯನವು ಮುಗಿದನಂತರ ಗುರುವಿನ ಅನುಮತಿಯಿಂದ ಸ್ನಾತಕಾದಿ ವ್ರತಗಳನ್ನು ಮಾಡಿ ವಿವಾಹಮಾಡಿಕೊಂಡು ಗೃಹಸ್ಥನಾಗಿ ಯಜ್ಞಾದಿಗಳಿಂದ ದೇವತೆಗಳನ್ನು ಆರಾಧಿಸಬೇಕು ಮತ್ತು ಗೃಹಸ್ಥಾಶ್ರಮದಲ್ಲಿರುವಾಗಲೇ ತನ್ನ ಪತ್ನಿಯಲ್ಲಿ ಪುತ್ರೋತ್ಪತ್ತಿಗಾಗಿ ಪ್ರಯತ್ನಿಸಬೇಕು. ಹೀಗೆ ಮಾಡುವುದರಿಂದ ಮೂರು ವಿಧವಾದ ಋಣಗಳನ್ನು ತೀರಿಸಿದಂತಾಗುವುದು. ಬಳಿಕ ವಾನಪ್ರಸ್ಥ ಮತ್ತು ತುರೀಯಾಶ್ರಮಗಳನ್ನು ಸ್ವೀಕರಿಸಿ ಮೋಕ್ಷಪ್ರಾಪ್ತಿಗಾಗಿ ಪ್ರಯತ್ನಿಸಬೇಕು. ಇದು ಶಾಸ್ತ್ರ ವಿಧಿಯು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಋಣಮೋಚನತೀರ್ಥವರ್ಣನವೆಂಬ ತೊಂಭತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಮೂವತ್ತನೆಯ ಅಧ್ಯಾಯವು

ಶ್ರೀಃ

|| ಓಂ ತತ್ಸದ್ಬ್ರಹ್ಮಣೇ ನಮಃ ||

ಅಥ ಬ್ರಾಹ್ಮೇ ಮಹಾಪುರಾಣೇ

ಶತತಮೋಽಧ್ಯಾಯಃ

|| ಬ್ರಹ್ಮೋವಾಚ ||

ಸುಪರ್ಣಾಸಂಗಮಂ ನಾಮ ಕಾದ್ರವಾಸಂಗಮಂ ತಥಾ ।
ಮಹೇಶ್ವರೋ ಯತ್ರ ದೇವೋ ಗಂಗಾಪುಲಿನಮಾಶ್ರಿತಃ ॥ ೧ ॥

ಅಗ್ನಿಕುಂಡಂ ಚ ತತ್ರೈವ ರೌದ್ರಂ ವೈಷ್ಣವಮೇವ ಚ ।
ಸೌರಂ ಸೌಮ್ಯಂ ತಥಾ ಬ್ರಾಹ್ಮಂ ಕೌಮಾರಂ ವಾರುಣಂ ತಥಾ ॥ ೨ ॥

ನೂರನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಸುಪರ್ಣಾಸಂಗಮ ಕಾದ್ರವಾಸಂಗಮ ಗಳೆಂದು ಎರಡು ತೀರ್ಥಗಳು ಗೌತಮೀತೀರದಲ್ಲಿರುವುವು. ಆ ತೀರ್ಥಗಳ ತೀರದಲ್ಲಿ ಮಹಾದೇವನು ನೆಲಸಿರುವನು.

೨. ಆ ತೀರ್ಥದಲ್ಲಿ ಅಗ್ನಿಕುಂಡ, ರುದ್ರಕುಂಡ, ವಿಷ್ಣುಕುಂಡ, ಸೂರ್ಯಕುಂಡ, ಸೋಮಕುಂಡ ಬ್ರಹ್ಮಕುಂಡ, ಕುಮಾರಕುಂಡ, ವಾರುಣಕುಂಡಗಳೆಂಬ ಎಂಟು ಕುಂಡಗಳಿರುವುವು.

ಅಪ್ಸರಾ ಚ ನದೀ ಯತ್ರ ಸಂಗತಾ ಗಂಗಯಾ ತಥಾ ।
ತತ್ತೀರ್ಥಸ್ಮರಣಾದೇವ ಕೃತಕೃತ್ಯೋ ಭವೇನ್ನರಃ ॥ ೩ ॥

ಸರ್ವಪಾಪಪ್ರಶಮನಂ ಶೃಣು ಯತ್ನೇನ ನಾರದ ।
ಇಂದ್ರೇಣ ಹಿಂಸಿತಾಃ ಪೂರ್ವಂ ವಾಲಖಿಲ್ಯಾ ಮಹರ್ಷಯಃ ।
ದತ್ತಾರ್ಧತಪಸಃ ಸರ್ವೇ ಪ್ರೋಚುಸ್ತೇ ಕಾಶ್ಯಪಂ ಮುನಿಂ ॥ ೪ ॥

॥ ವಾಲಖಿಲ್ಯಾ ಊಚುಃ ॥

ಪುತ್ರಮುತ್ಪಾದಯಾನೇನ ಇಂದ್ರದರ್ಪಹರಂ ಶುಭಂ ।
ತಪಸೋಽರ್ಧಂ ತು ದಾಸ್ಯಾಮಸ್ತಥೇತ್ಯಾಹ ಮುನಿಸ್ತು ತಾನ್ ॥ ೫ ॥

ಸುಪರ್ಣಾಯಾಂ ತತೋ ಗರ್ಭಮಾದಧೇ ಸ ಪ್ರಜಾಪತಿಃ ।
ಕದ್ರ್ವಾಂ ಚೈವ ಶನೈರ್ಬ್ರಹ್ಮನ್ಸರ್ಪಾಣಾಂ ಸರ್ಪಮಾತರಿ ॥ ೬ ॥

---

೩. ಅಲ್ಲಿ ಅಪ್ಸರೆಯೆಂಬ ನದಿಯು ಹರಿಯುತ್ತಿದ್ದು ಗೌತಮೀನದಿಯನ್ನು ಸೇರುವುದು. ಆ ಸಂಗಮತೀರ್ಥವನ್ನು ಸ್ಮರಿಸಿದ ಮಾತ್ರದಿಂದಲೇ ನರನು ಕೃತಕೃತ್ಯನಾಗುವನು.

೪. ಎಲೈ ನಾರದ, ಸುಪರ್ಣಾಸಂಗಮ, ಕಾದ್ರವಾಸಂಗಮ ತೀರ್ಥಗಳು ಸಕಲಪಾಪವನ್ನೂ ಹೋಗಲಾಡಿಸುವುವು. ಆ ತೀರ್ಥಗಳ ಮಾಹಾತ್ಮ್ಯವನ್ನು ಹೇಳುವೆನು ಶ್ರದ್ಧೆಯಿಂದ ಕೇಳು. ಹಿಂದೊಮ್ಮೆ ಇಂದ್ರನು ವಾಲಖಿಲ್ಯರೆಂಬ ಮಹರ್ಷಿಗಳನ್ನು ಹಿಂಸಿಸಿದನು. ಆಗ ಅವರು ತಮ್ಮ ತಪಸ್ಸಿನ ಅರ್ಧಭಾಗವನ್ನು ಕಾಶ್ಯಪಮುನಿಗೆ ಕೊಟ್ಟು,

೫. ಎಲೈ ಮುನಿ, ನಿನಗೆ ನಮ್ಮ ತಪಸ್ಸಿನ ಅರ್ಧಭಾಗವನ್ನು ಕೊಡುವೆವು. ಅದರಿಂದ ಇಂದ್ರನ ಗರ್ವವನ್ನು ಮುರಿಯುವಂತಹ ಪುತ್ರನನ್ನು ಉತ್ಪಾದನೆಮಾಡು ಎನ್ನಲು,

೬. ವಾಲಖಿಲ್ಯರ ಮಾತಿನಂತೆ ಕಶ್ಯಪನು ಸುಪರ್ಣಾ (ವಿನತಾ) ದೇವಿಯಲ್ಲಿಯೂ ಸರ್ಪಮಾತೃವಾದ ಕದ್ರೂದೇವಿಯಲ್ಲಿಯೂ ಆ ಋಷಿಗಳ ತಪಶ್ಶಕ್ತಿಯಿಂದ ಗರ್ಭೋತ್ಪತ್ತಿಯನ್ನು ಮಾಡಿದನು.

ತೇ ಗರ್ಭಿಣ್ಯಾವುಭೇ ಆಹ ಗಂತುಕಾಮಃ ಪ್ರಜಾಪತಿಃ ।
ಅಪರಾಧೋ ನ ಚ ಕ್ವಾಪಿ ಕಾರ್ಯೋ ಗಮನಮೇವ ಚ ॥ ೭ ॥

ಅನ್ಯತ್ರ ಗಮನಾಚ್ಛಾಪೋ ಭವಿಷ್ಯತಿ ನ ಸಂಶಯಃ ॥ ೮ ॥

॥ ಬ್ರಹ್ಮೋವಾಚ ॥

ಇತ್ಯುಕ್ತ್ವಾ ಸ ಯಯೌ ಪತ್ನ್ಯೌ ಗತೇ ಭರ್ತರಿ ತೇ ಉಭೇ ।
ತದೈವ ಜಗ್ಮತುಃ ಸತ್ರಮೃಷೀಣಾಂ ಭಾವಿತಾತ್ಮನಾಂ ॥ ೯ ॥

ಬ್ರಹ್ಮವೃಂದಸಮಾಕೀರ್ಣಂ ಗಂಗಾತೀರಸಮಾಶ್ರಿತಂ ।
ಉನ್ಮತ್ತೇ ತೇ ಉಭೇ ನಿತ್ಯಂ ವಯಃಸಂಪತ್ತಿಗರ್ವಿತೇ ॥ ೧೦ ॥

ನಿವಾರ್ಯಮಾಣೇ ಬಹುಶೋ ಮುನಿಭಿಸ್ತತ್ತ್ವದರ್ಶಿಭಿಃ ।
ವಿಕುರ್ವತ್ಯೌ ತತ್ರ ಸತ್ರೇ ಸಮಾನಿ ಚ ಹವೀಂಷಿ ಚ ॥ ೧೧ ॥

೭-೮. ಒಂದುದಿನ ಎಲ್ಲಿಗೋ ಪ್ರಯಣ ಬೆಳಸಲುದ್ಯುಕ್ತನಾಗಿ ಕಶ್ಯಪನು ಗರ್ಭಿಣಿಯರಾದ ಆ ಕದ್ರೂವಿನತೆಯರನ್ನು ಕರೆದು ನೀವು ಯಾವ ಅಪರಾಧ ವನ್ನೂ ಮಾಡಕೂಡದು, ಬೇರೆ ಕಡೆಗೆ ಹೋಗಕೂಡದು. ಹಾಗೆ ಹೋದರೆ ನಿಶ್ಚಯವಾಗಿ ಶಾಪವು ಬರುವುದು ಎಂದು ಕಟ್ಟಪ್ಪಣೆಮಾಡಿ ಹೊರಟುಹೋದನು.

೯. ಹೀಗೆ ಹೇಳಿ ಪತಿಯು ತೆರಳಲು, ಆ ವಿನತಾಕದ್ರುದೇವಿಯ ರಿಬ್ಬರೂ ಆಗಲೇ ಮಹಾತ್ಮರಾದ ಋಷಿಗಳು ಬ್ರಾಹ್ಮಣವೃಂದದೊಡನೆ ಗಂಗಾತೀರದಲ್ಲಿ ಮಾಡುತ್ತಿದ್ದ ಮಹಾಯಾಗವನ್ನು ನೋಡಬೇಕೆಂದು ಅಲ್ಲಿಗೆ ಹೋಗಿ,

೧೦-೧೧. ಯೌವನಮದದಿಂದ ಕೊಬ್ಬಿದ ಆ ಕದ್ರೂವಿನತೆಯರು ಯಜ್ಞದ ಉಪಕರಣಗಳನ್ನೂ ಹವಿಸ್ಸುಗಳನ್ನೂ ಅಪವಿತ್ರಗೊಳಿಸಿದರು. ತತ್ವ ದರ್ಶಿಗಳಾದ ಮುನಿಗಳು ತಡೆದರೂ ಕೇಳಲಿಲ್ಲ.

ಯೋಷಿತಾಂ ದುರ್ವಿಲಸಿತಂ ಕಃ ಸಂವರಿತುಮೀಶ್ವರಃ ।
ತೇ ದೃಷ್ಟ್ವಾ ಚುಕ್ಷುಭುರ್ವಿಪ್ರಾ ಅಪಮಾರ್ಗರತೇ ಉಭೇ ॥ ೧೨ ॥

ಅಪಮಾರ್ಗಸ್ಥಿತೇ ಯಸ್ಮಾದಾಪಗೇ ಹಿ ಭವಿಷ್ಯಥಃ ।
ಸುಪರ್ಣಾ ಚೈವ ಕದ್ರೂಶ್ಚ ನದ್ಯೌ ತೇ ಸಂಬಭೂವತುಃ ॥ ೧೩ ॥

ಸ ಕದಾಚಿದ್ಗೃಹಂ ಪ್ರಾಯಾತ್ಕಶ್ಯಪೋಽಥ ಪ್ರಜಾಪತಿಃ ।
ಋಷಿಭ್ಯಸ್ತತ್ರ ವೃತ್ತಾಂತಂ ಶಾಪಂ ತಾಭ್ಯಾಂ ಸವಿಸ್ತರಂ ॥ ೧೪ ॥

ಶ್ರುತ್ವಾ ತು ವಿಸ್ಮಯಾವಿಷ್ಟಃ ಕಿಂ ಕರೋಮೀತ್ಯಚಿಂತಯತ್ ।
ಋಷಿಭ್ಯಃ ಕಥಯಾಮಾಸ ವಾಲಖಿಲ್ಯಾ ಇತಿ ಶ್ರುತಾಃ ॥ ೧೫ ॥

ತ ಊಚುಃ ಕಶ್ಯಪಂ ವಿಪ್ರಂ ಗತ್ವಾ ಗಂಗಾಂ ತು ಗೌತಮೀಂ ।
ತತ್ರ ಸ್ತುಹಿ ಮಹೇಶಾನಂ ಪುನರ್ಭಾರ್ಯೇ ಭವಿಷ್ಯತಃ ॥ ೧೬ ॥

೧೨-೧೩. ಸ್ತ್ರೀಯರ ದುರಾಚಾರವನ್ನು ತಡೆಯಲು ಯಾರೂ ಸಮರ್ಥರಲ್ಲವಷ್ಟೆ. ಆ ಕದ್ರೂವಿನತೆಯರು ದುರಾಚಾರಮಾಡುವುದನ್ನು ನೋಡಿ ಋಷಿಗಳು ಕೋಪಗೊಂಡು ನೀಚಮಾರ್ಗದಲ್ಲಿ ನೀವು ನಡೆಯುವುದರಿಂದ ಆಪಗಾ ಎಂದರೆ ಕೆಳದಾರಿಯಲ್ಲಿ ಹೋಗುವ ನದಿಗಳು ಆಗಿರಿ ಎಂದು ಅವರನ್ನು ಶಪಿಸಿದರು. ಆಗ ಆ ಕದ್ರುವಿನತೆಯರು ನದಿಗಳಾದರು.

೧೪. ದೇಶಾಂತರಕ್ಕೆ ಹೋಗಿದ್ದ ಕಶ್ಯಪನು ಮನೆಗೆ ಬಂದು ನೋಡುವಲ್ಲಿ ಕದ್ರುವಿನತೆಯರ ಅವಿವೇಕವನ್ನೂ ಋಷಿಶಾಪವನ್ನೂ ತಿಳಿದನು. ಅದನ್ನು ಕೇಳಿ ಈಗ ಏನುಮಾಡಲಿ? ಎಂದು ವ್ಯಥೆಯಿಂದ ಚಿಂತಿಸತೊಡಗಿದನು.

೧೫-೧೬. ಆಮೇಲವನು ವಾಲಖಿಲ್ಯರಿಗೆ ಆ ಸಮಾಚಾರವನ್ನು ತಿಳಿಸಿದನು. ಆ ಋಷಿಗಳು ಕಶ್ಯಪನನ್ನು ಕುರಿತು ಬ್ರಹ್ಮಶಿರಸ್ಸನ್ನು ಕತ್ತರಿಸಿದುದರಿಂದುಂಟಾದ ಬ್ರಹ್ಮಹತ್ಯೆಯ ಭಯದಿಂದಲೋ ಎಂಬಂತೆ ಮಹೇಶ್ವರನು ಗೌತಮೀನದಿಯ ನೀರಿನ ಮಧ್ಯದಲ್ಲಿ ಮಧ್ಯಮೇಶ್ವರನೆಂಬ ಹೆಸರಿನಿಂದ ನೆಲಸಿರು

ಬ್ರಹ್ಮಹತ್ಯಾಭಯಾದೇವ ಯತ್ರ ದೇವೋ ಮಹೇಶ್ವರಃ ।
ಗಂಗಾಮಧ್ಯೇ ಸದಾ ಹ್ಯಾಸ್ತೇ ಮಧ್ಯಮೇಶ್ವರಸಂಜ್ಞಯಾ ॥ ೧೭ ॥

ತಥೇತ್ಯುಕ್ತ್ವಾ ಕಶ್ಯಪೋಽಪಿ ಸ್ನಾತ್ವಾ ಗಂಗಾಂ ಜಿತವ್ರತಃ ।
ತುಷ್ಟಾವ ಸ್ತವನೈಃ ಪುಣ್ಯೈರ್ದೇವದೇವಂ ಮಹೇಶ್ವರಂ ॥ ೧೮ ॥

॥ ಕಶ್ಯಪ ಉವಾಚ ॥

ಲೋಕತ್ರಯೈಕಾಧಿಪತೇರ್ನ ಯಸ್ಯ
ಕುತ್ರಾಪಿ ವಸ್ತುನ್ಯಭಿಮಾನಲೇಶಃ ।
ಸ ಸಿದ್ಧನಾಥೋಽಖಿಲವಿಶ್ವಕರ್ತಾ
ಭರ್ತಾ ಶಿವಾಯಾ ಭವತು ಪ್ರಸನ್ನಃ ॥ ೧೯ ॥

ತಾಪತ್ರಯೋಷ್ಣದ್ಯುತಿತಾಪಿತಾನಾ-
ಮಿತಸ್ತತೋ ವೈ ಪರಿಧಾವತಾಂ ಚ ।
ಶರೀರಿಣಾಂ ಸ್ಥಾವರಜಂಗಮಾನಾಂ
ತ್ವಮೇವ ದುಃಖವ್ಯಪನೋದದಕ್ಷಃ ॥ ೨೦ ॥

ವನು. ಗೌತಮೀತೀರಕ್ಕೆ ಹೋಗಿ ಅಲ್ಲಿ ಪರಮೇಶ್ವರನನ್ನು ಸ್ತುತಿಸು. ಪುನಃ ನಿನ್ನ ಪತ್ನಿಯರಾದ ಕದ್ರೂವಿನತೆಯರು ನಿನಗೆ ಲಭಿಸುವರು ಎಂದರು.

೧೮. ವಾಲಖಿಲ್ಯರ ಮಾತಿನಂತೆ ಕಶ್ಯಪನು ಗೌತಮೀನದಿಗೆ ಹೋಗಿ ಆ ನದಿಯಲ್ಲಿ ಸ್ನಾನಮಾಡಿ ಪರಿಶುದ್ಧನಾಗಿ ಭಕ್ತಿಯಿಂದ ದೇವದೇವನಾದ ಈಶ್ವರನನ್ನು ಪುಣ್ಯಶ್ಲೋಕಗಳಿಂದ ಸ್ತುತಿಸಿದನು.

೧೯. ಮೂರು ಲೋಕಗಳಿಗೂ ಓರ್ವನೇ ಪತಿಯಾಗಿದ್ದರೂ ಪರಮೇಶ್ವರನಿಗೆ ಯಾವ ವಸ್ತುವಿನಲ್ಲಿಯೂ ಸ್ವಲವೂ ಅಭಿಮಾನವಿಲ್ಲ. ಇಂತಹ ನಿಸ್ಪೃಹನೂ ಸಿದ್ಧಮುನಿಗಳಿಗೆ ಆದರ್ಶಪ್ರಾಯನೂ, ಸಕಲ ಜಗತ್ತನ್ನು ಸೃಷ್ಟಿಸುವವನೂ, ಗೌರಿಯ ಪ್ರಿಯಪತಿಯೂ ಆದ ಸಿದ್ಧೇಶ್ವರನು ನನಗೆ ಪ್ರಸನ್ನನಾಗಲಿ.

೨೦. ಓ ಮಹಾದೇವ, ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕಗಳೆಂಬ ಮೂರುವಿಧದುಃಖಗಳ ಉರಿಬೇಗೆಗೆ ಸಿಲುಕಿ ಬಳಲಿ ಅಲ್ಲಿಂದಿಲ್ಲಿಗೆ ಅಲೆಯುತ್ತಿರುವ ಸ್ಥಿರಚರಾತ್ಮಕರೂಪರಾದ ಪ್ರಾಣಿಗಳಿಗೆ ದುಃಖವನ್ನು ಹೋಗಲಾಡಿಸಿ ಸುಖವನ್ನುಂಟುಮಾಡಲು ನೀನೊಬ್ಬನೇ ಸಮರ್ಥನು.

ಸತ್ತ್ವಾದಿಯೋಗಸ್ತ್ರಿವಿಧೋಽಪಿ ಯಸ್ಯ
ಶಕ್ರಾದಿಭಿರ್ವಕ್ತುಮಶಕ್ಯ ಏವ ।
ವಿಚಿತ್ರವೃತ್ತಿಂ ಪರಿಚಿಂತ್ಯ ಸೋಽಮುಂ
ಸುಖೀ ಸದಾ ದಾನಪರೋ ವರೇಣ್ಯಃ　　॥ ೨೧ ॥

॥ ಬ್ರಹ್ಮೋವಾಚ ॥

ಇತ್ಯಾದಿಸ್ತುತಿಭಿರ್ದೇವಃ ಸ್ತುತೋ ಗೌರೀಪತಿಃ ಶಿವಃ ।
ಪ್ರಸನ್ನೋ ಹ್ಯದದಾಚ್ಛಂಭುಃ ಕಶ್ಯಪಾಯ ವರಾನ್ಬಹೂನ್　　॥ ೨೨ ॥

ಭಾರ್ಯಾರ್ಥಿನಂ ತು ತಂ ಪ್ರಾಹ ಸ್ಯಾತಾಂ ಭಾರ್ಯೇ ಉಭೇ ತು ತೇ ।
ನದೀಸ್ವರೂಪೇ ಪತ್ನ್ಯೌ ಯೇ ಗಂಗಾಂ ಪ್ರಾಪ್ಯ ಸರಿದ್ವರಾಂ　　॥ ೨೩ ॥

ತತ್ಸಂಗಮನಮಾತ್ರೇಣ ತಾಭ್ಯಾಂ ಭೂಯಾತ್ಸ್ವಕಂ ವಪುಃ ।
ತೇ ಗರ್ಭಿಣ್ಯೌ ಪುನರ್ಜಾತೇ ಗಂಗಾಯಾಶ್ಚ ಪ್ರಸಾದತಃ　　॥ ೨೪ ॥

---

೨೧. ಸತ್ತ್ವಗುಣದಿಂದ ವಿಷ್ಣುವೂ, ರಜೋಗುಣದಿಂದ ಬ್ರಹ್ಮನೂ, ತಮೋಗುಣದಿಂದ ರುದ್ರನೂ ಆಗುವ ಪರಮೇಶ್ವರನ ಮಹಿಮೆಯನ್ನು ದೇವೇಂದ್ರಮೊದಲಾದವರೂ ವರ್ಣಿಸಲಾರರು. ಇಂತಹ ವಿಚಿತ್ರ ಮಹಿಮೆಯುಳ್ಳ ಶಿವನನ್ನು ಭಕ್ತಿಯಿಂದ ಧ್ಯಾನಿಸುವವನು ಸುಖಿಯೂ ಉದಾರಿಯೂ ಸರ್ವೋತ್ತಮನೂ ಆಗುವನು.

೨೨. ಇವೇ ಮೊದಲಾದ ಸ್ತುತಿಗಳಿಂದ ಕಶ್ಯಪನು ಗೌರೀಪತಿಯಾದ ಶಿವನನ್ನು ಸ್ತುತಿಸಲು ಆ ದೇವನು ಪ್ರಸನ್ನನಾಗಿ ಕಶ್ಯಪನಿಗೆ ಅನೇಕ ವರಗಳನ್ನು ಕೊಟ್ಟನು.

೨೩. ತನ್ನ ಪತ್ನಿಯರಿಗೆ ನಿಜಶರೀರವನ್ನಪೇಕ್ಷಿಸುವ ಕಶ್ಯಪನಿಗೆ ಶಿವನಿಂತೆಂದನು—ನದೀಸ್ವರೂಪವನ್ನು ಪಡೆದ ನಿನ್ನ ಪತ್ನಿಯರು ಗೌತಮೀನದಿಯನ್ನು ಸೇರಿದಕೂಡಲೇ ತಮ್ಮ ಹಿಂದಿನ ಶರೀರವನ್ನು ಪಡೆಯುವರು. ನಿನಗೆ ಪತ್ನಿಯರು ಪುನಃ ಲಭಿಸುವರು ಎಂದನು.

೨೪. ಆಮೇಲೆ ಗೌತಮಿಯನ್ನು ಸೇರಿ ಆ ನದಿಗಳು ಆ ನದಿಯ ಮಹಿಮೆಯಿಂದ ಗರ್ಭಿಣಿಯಾದ ತಮ್ಮ ಶರೀರವನ್ನು ಪಡೆದರು.

ತತಃ ಪ್ರಜಾಪತಿಃ ಪ್ರೀತೋ ಭಾರ್ಯೇ ಪ್ರಾಪ್ಯ ಮಹಾಮನಾಃ ।
ಆಹ್ವಯಾಮಾಸ ತಾನ್ವಿಪ್ರಾನ್ಗೌತಮೀತೀರಮಾಶ್ರಿತಾನ್ ॥ ೨೫ ॥

ಸೀಮಂತೋನ್ನಯನಂ ಚಕ್ರೇ ತಾಭ್ಯಾಂ ಪ್ರೀತಃ ಪ್ರಜಾಪತಿಃ ।
ಬ್ರಾಹ್ಮಣಾನ್ಪೂಜಯಾಮಾಸ ವಿಧಿದೃಷ್ಟೇನ ಕರ್ಮಣಾ ॥ ೨೬ ॥

ಭುಕ್ತವತ್ಸ್ವಥ ವಿಪ್ರೇಷು ಕಶ್ಯಪಸ್ಯಾಥ ಮಂದಿರೇ ।
ಭರ್ತೃಸಮೀಪೋಪವಿಷ್ಟಾ ಕದ್ರೂರ್ವಿಪ್ರಾನ್ನಿರೀಕ್ಷ್ಯ ಚ ॥ ೨೭ ॥

ತತಃ ಕದ್ರೂಋಷೀನಕ್ಷ್ಣಾ ಪ್ರಾಹಸತ್ತೇ ಚ ಚುಕ್ಷುಭುಃ ।
ಯೇನಾಕ್ಷ್ಣಾ ಹಸಿತಾ ಪಾಪೇ ಭಜ್ಯತಾಂ ತೇಽಕ್ಷಿ ಪಾಪವತ್ ॥ ೨೮ ॥

---

೨೫. ಹೀಗೆ ಪತ್ನಿಯರನ್ನು ಪುನಃ ಪಡೆದು ಕಶ್ಯಪನು ಸಂತಸ ಗೊಂಡನು. ಆಮೇಲೆ ಅವನು ಗೌತಮೀತೀರದಲ್ಲಿರುವ ಆ ಬ್ರಾಹ್ಮಣರನ್ನು ಕರೆಸಿ,

೨೬. ಅವರಿಂದ ತನ್ನ ಪತ್ನಿಯರಿಗೆ ಸೀಮಂತೋನ್ನಯನವೆಂಬ ಗರ್ಭ ಸಂಸ್ಕಾರವನ್ನು ಮಾಡಿಸಿದನು. ಆಮೇಲಾ ವಿಪ್ರರನ್ನು ವಿಧಿವತ್ತಾಗಿ ಸತ್ಕರಿಸಿ ಉಪಚರಿಸಿದನು.

೨೭. ಬ್ರಾಹ್ಮಣರಿಗೆಲ್ಲಾ ಭೋಜನವಾಯಿತು. ಎಲ್ಲರೂ ಸುಖಾನದಲ್ಲಿ ಕುಳಿತಿದ್ದರು. ಆಗ ಕದ್ರೂದೇವಿಯು ಪತಿಯ ಬಳಿಯಲ್ಲಿ ಕುಳಿತಿರುವಾಗ ಅಲ್ಲಿದ್ದ ಆ ಋಷಿಗಳನ್ನು ನೋಡಿ ಕಣ್ಣು ಮಿಟಕಿಸಿ ಹಾಸ್ಯಮಾಡಿದಳು. ಅದರಿಂದ ಋಷಿ ಗಳು ಕೋಪಗೊಂಡು,

೨೮. ಎಲೌ ದುಷ್ಟಹೆಂಗಸೇ, ಯಾವ ಪಾಪಿಕಣ್ಣುಗಳಿಂದ ನೀನು ನಮ್ಮನ್ನು ಹಾಸ್ಯಗೈದೆಯೋ ಆ ಕಣ್ಣುಗಳು ನಾಶವಾಗಲಿ ಎಂದು ಶಪಿಸಿದರು. ಆದರಿಂದ ಕದ್ರೂದೇವಿಯು ಕುರುಡಳಾದಳು.

ಕಾಣಾಭವತ್ತತಃ ಕದ್ರೂಃ ಸರ್ಪಮಾತೇತಿ ಯೋಚ್ಯತೇ ।
ತತಃ ಪ್ರಸಾದಯಾಮಾಸ ಕಶ್ಯಪೋ ಭಗವಾನೃಷೀನ್ ॥ ೨೯ ॥

ತತಃ ಪ್ರಸನ್ನಾಸ್ತೇ ಪ್ರೋಚುರ್ಗೌತಮೀ ಸರಿತಾಂ ವರಾ ।
ಅಪರಾಧಸಹಸ್ರೇಭ್ಯೋ ರಕ್ಷಿಷ್ಯತಿ ಚ ಸೇವನಾತ್ ॥ ೩೦ ॥

ಭಾರ್ಯಾನ್ವಿತಸ್ತಥಾ ಚಕ್ರೇ ಕಶ್ಯಪೋ ಮುನಿಸತ್ತಮಃ ।
ತತಃ ಪ್ರಭೃತಿ ತತ್ತೀರ್ಥಮುಭಯೋಃ ಸಂಗಮಂ ವಿದುಃ ।
ಸರ್ವಪಾಪಪ್ರಶಮನಂ ಸರ್ವಕ್ರತುಫಲಪ್ರದಂ ॥ ೩೧ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಕದ್ರೂಸುಪರ್ಣಾಸಂಗಮತೀರ್ಥವರ್ಣನಂ ನಾಮ
ಶತತಮೋಽಧ್ಯಾಯಃ

೨೯-೩೦. ಆಗ ಕಶ್ಯಪನು ಆ ಮುನಿಗಳನ್ನು ಪ್ರಾರ್ಥಿಸಿ ಸಮಾಧಾನಗೊಳಿಸಿದನು. ಪ್ರಸನ್ನರಾಗಿ ಆ ಮುನಿಗಳು ನದೀಶ್ರೇಷ್ಠವಾದ ಗೌತಮಿಯನ್ನು ಸೇವಿಸಿದರೆ ಸಕಲಾಪರಾಧಗಳೂ ನಾಶವಾಗುವುವು ಎಂದು ಅನುಗ್ರಹಿಸಿದರು. ಮುನಿಗಳಪ್ಪಣೆಯಂತೆ ಹೆಂಡತಿಯರೊಡನೆ ಕಶ್ಯಪನು ಗೌತಮೀನದಿಯನ್ನು ಸೇವಿಸಿದನು.

೩೧. ಆ ಮೊದಲುಗೊಂಡು ವಿನತಾ ಮತ್ತು ಕದ್ರೂನದಿಗಳು ಗೌತಮೀನದಿಗೆ ಸೇರಿ ಸಂಗಮವಾದಾ ತೀರ್ಥವು ಸರ್ವಪಾಪಗಳನ್ನೂ ಹೋಗಲಾಡಿಸುವಂತಹ ಸರ್ವಪಾಪಪ್ರಶಮನವೆಂಬ ತೀರ್ಥವಾಗಿರುವುದು. ಅಲ್ಲಿ ಸಕಲ ಯಾಗಗಳ ಫಲವೂ ಲಭಿಸುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಕದ್ರೂಸುಪರ್ಣಾಸಂಗಮತೀರ್ಥವರ್ಣನವೆಂಬ
ನೂರನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ಮೂವತ್ತೊಂದನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಏಕಾಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಪುರೂರವಸಸಮಾಖ್ಯಾತಂ ತೀರ್ಥಂ ವೇದವಿದೋ ವಿದುಃ ।
ಸ್ಮರಣಾದೇವ ಪಾಪಾನಾಂ ನಾಶನಂ ಕಿಂತು ದರ್ಶನಾತ್ ॥ ೧ ॥

ಪುರೂರವಾ ಬ್ರಹ್ಮಸದಃ ಪ್ರಾಪ್ಯ ತತ್ರ ಸರಸ್ವತೀಂ ।
ಯದೃಚ್ಛಯಾ ದೇವನದೀಂ ಹಸಂತೀಂ ಬ್ರಹ್ಮಣೋಽಂತಿಕೇ ।
ತಾಂ ದೃಷ್ಟ್ವಾ ರೂಪಸಂಪನ್ನಾಮುರ್ವಶೀಂ ಪ್ರಾಹ ಭೂಪತಿಃ ॥ ೨ ॥

ನೂರೊಂದನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಪುರೂರವಸವೆಂಬ ತೀರ್ಥವಿರುವುದು. ಅದನ್ನು ವೇದವಿತ್ತುಗಳಾದ ಋಷಿಗಳೂ ಆಶ್ರಯಿಸುವರು. ಆ ತೀರ್ಥವನ್ನು ಸ್ಮರಣೆಮಾಡಿದಮಾತ್ರದಿಂದಲೇ ಪಾಪವೆಲ್ಲವೂ ನಾಶವಾಗುವುದು. ಇನ್ನು ದರ್ಶನ ಮಾಡಿದರೆ ಹೇಳುವುದೇನು ?

೨. ಪುರೂರವನೆಂಬ ರಾಜನು ಒಂದುಸಾರಿ ಬ್ರಹ್ಮನ ಸಭೆಗೆ ಹೋಗಿದ್ದನು. ಅಲ್ಲಿ ಬ್ರಹ್ಮನ ಬಳಿಯಲ್ಲಿಯೇ ದೇವನದಿಯಾದ ಸರಸ್ವತಿಯು ದಿವ್ಯ ರೂಪದಿಂದ ಪ್ರಕಾಶಿಸುತ್ತಿದ್ದಳು. ಸುಂದರಿಯಾದಾ ಸರಸ್ವತೀನದಿಯನ್ನು ನೋಡಿ ರಾಜನು ಊರ್ವಶಿಯನ್ನು ಕುರಿತು,

॥ ರಾಜೋವಾಚ ॥

ಕೇಯಂ ರೂಪವತೀ ಸಾಧ್ವೀ ಸ್ಥಿತೇಯಂ ಬ್ರಹ್ಮಣೋಂತಿಕೇ ।
ಸರ್ವಾಸಾಮುತ್ತಮಾ ಯೋಷಿದ್ದೀಪಯಂತೀ ಸಭಾಮಿಮಾಂ ॥ ೩ ॥

॥ ಬ್ರಹ್ಮೋವಾಚ ॥

ಉರ್ವಶೀ ಸ್ಪ್ರಾಹ ರಾಜಾನಮಿಯಂ ದೇವನದೀ ಶುಭಾ ।
ಸರಸ್ವತೀ ಬ್ರಹ್ಮಸುತಾ ನಿತ್ಯಮೇತಿ ಚ ಯಾತಿ ಚ ।
ತಚ್ಛ್ರುತ್ವಾ ವಿಸ್ಮಿತೋ ರಾಜಾ ಆನಯೇಮಾಂ ಮಮಾಂತಿಕಂ ॥ ೪ ॥

॥ ಬ್ರಹ್ಮೋವಾಚ ॥

ಉರ್ವಶೀ ಪುನರಪ್ಯಾಹ ರಾಜಾನಂ ಭೂರಿದಕ್ಷಿಣಂ ॥ ೫ ॥

॥ ಉರ್ವಶ್ಯುವಾಚ ॥

ಆನೀಯತೇ ಮಹಾರಾಜ ತಸ್ಯಾಃ ಸರ್ವಂ ನಿವೇದ್ಯ ಚ ॥ ೬ ॥

॥ ಬ್ರಹ್ಮೋವಾಚ ॥

ತತಸ್ತಾಂ ಸ್ಪ್ರಾಹಿಣೋತ್ತತ್ರ ರಾಜಾ ಪ್ರೀತ್ಯಾ ತದೋರ್ವಶೀಂ ।
ಸಾ ಗತ್ವಾ ರಾಜವಚನಂ ನ್ಯವೇದಯದಥೋರ್ವಶೀ ॥ ೭ ॥

---

೩. ಎಲೌ ಊರ್ವಶಿ, ಬ್ರಹ್ಮನ ಬಳಿಯಲ್ಲಿರುವ ರೂಪವತಿಯಾದ ಈ ಸ್ತ್ರೀಯಾರು ? ಸರ್ವಸುಂದರಿಯಾದಿವಳು ಈ ಸಭೆಯನ್ನೇ ತನ್ನ ಸೌಂದರ್ಯದಿಂದ ಬೆಳಗುತ್ತಿರುವವಳು ಎಂದು ಕೇಳಲು,

೪. ಆಗ ಊರ್ವಶಿಯು ಪುರೂರವನೊಡನೆ—ಇವಳು ದೇವನದಿಯಾದ ಸರಸ್ವತಿಯು. ಬ್ರಹ್ಮನ ಮಗಳಾದ ಇವಳು ದಿನವೂ ಬ್ರಹ್ಮಸಭೆಗೆ ಬಂದು ಹೋಗುವವಳು ಎಂದಳು. ಅದನ್ನು ಕೇಳಿ ಪುರೂರವನು ಇವಳನ್ನು ನನ್ನ ಬಳಿಗೆ ಕರೆದುಕೊಂಡು ಬಾ ಎಂದನು.

೫-೬. ಆಗ ಊರ್ವಶಿಯು ಪುರೂರವನನ್ನು ಕುರಿತು ಓ ಮಹಾರಾಜ, ನಿನ್ನ ಅಭಿಪ್ರಾಯವನ್ನು ತಿಳಿಸಿ ಆ ಸರಸ್ವತೀನದಿಯನ್ನು ಕರೆದುಕೊಂಡು ಬರುವೆನು ಎಂದಳು.

೭. ಆಮೇಲೆ ಪುರೂರವನು ಊರ್ವಶಿಯನ್ನು ಸರಸ್ವತಿಯ ಬಳಿಗೆ ಕಳುಹಿಸಿದನು. ಅವಳು ಸರಸ್ವತಿಯ ಬಳಿಗೆ ಹೋಗಿ ರಾಜನ ಅಭಿಪ್ರಾಯವನ್ನು ತಿಳಿಸಿದಳು.

ಸರಸ್ವತ್ಯಪಿ ತನ್ಮೇನೇ ಉರ್ವಶ್ಯಾ ಯನ್ನಿವೇದಿತಂ ।
ಸಾ ತಥೇತಿ ಪ್ರತಿಜ್ಞಾಯ ಪ್ರಾಯಾದ್ಯತ್ರ ಪುರೂರವಾಃ ॥ ೮ ॥

ಸರಸ್ವತ್ಯಾಸ್ತತಸ್ತೀರೇ ಸ ರೇಮೇ ಬಹುಲಾಃ ಸಮಾಃ ।
ಸರಸ್ವಾನಭವತ್ಪುತ್ರೋ ಯಸ್ಯ ಪುತ್ರೋ ಬೃಹದ್ರಥಃ ॥ ೯ ॥

ತಾಂ ಗಚ್ಛಂತೀಂ ನೃಪಗೃಹಂ ನಿತ್ಯಮೇವ ಸರಸ್ವತೀಂ ।
ಸರಸ್ವಂತಂ ತತೋ ಲಕ್ಷ್ಮ ಜ್ಞಾತ್ವಾನ್ಯೇಷು ತಥಾ ಕೃತಂ ॥ ೧೦ ॥

ತಸ್ಯೈ ದದಾವಹಂ ಶಾಪಂ ಭೂಯಾ ಇತಿ ಮಹಾನದೀ ।
ಮಚ್ಛಾಪಭೀತಾ ವಾಗೀಶಾ ಪ್ರಾಗಾದ್ದೇವೀಂ ಚ ಗೌತಮೀಂ ॥ ೧೧ ॥

ಕಮಂಡಲುಭವಾಂ ಪೂತಾಂ ಮಾತರಂ ಲೋಕಪಾವನೀಂ ।
ತಾಪತ್ರಯೋಪಶಮನೀಮೈಹಿಕಾಮುಷ್ಮಿಕಪ್ರದಾಂ ॥ ೧೨ ॥

---

೮. ಸರಸ್ವತೀನದಿಯು ಊರ್ವಶಿಯು ಹೇಳಿದ ರಾಜನ ಅಭಿಪ್ರಾಯವನ್ನು ಮನ್ನಿಸಿ ಆ ಪುರೂರವನ ಬಳಿಗೆ ಬಂದಳು.

೯. ಆಮೇಲೆ ಸರಸ್ವತೀನದಿಯ ತೀರದಲ್ಲಿ ಆ ಸರಸ್ವತಿಯೊಡನೆ ಪುರೂರವನು ಬಹುಕಾಲ ವಿಹರಿಸಿದನು. ಅಲ್ಲಿ ಅವನಿಗೆ ಸರಸ್ವತಿಯಲ್ಲಿ ಸರಸ್ವಾನ್ ಎಂಬ ಪುತ್ರನು ಜನಿಸಿದನು, ಆ ಸರಸ್ವಂತನ ಮಗನೇ ಬೃಹದ್ರಥನು.

೧೦. ಸರಸ್ವತಿಯು ಪುರೂರವನ ಮನೆಗೆ ದಿನವೂ ಹೋಗಿಬರುತ್ತಿರುವುದನ್ನೂ ಸರಸ್ವಂತನು ಜನಿಸಿದುದನ್ನೂ ಮಿಕ್ಕ ಕೆಲವು ಗುರುತುಗಳನ್ನೂ ತಿಳಿದು ನಾನು (ಬ್ರಹ್ಮನು) ಆ ಸರಸ್ವತಿಗೆ ನೀನು ನದಿಯಾಗು ಎಂದು ಶಾಪ ಕೊಟ್ಟೆನು.

೧೧-೧೨. ನನ್ನ ಶಾಪದಿಂದ ಭಯಗೊಂಡು ಆ ಸರಸ್ವತೀನದಿಯು ನನ್ನ ಕಮಂಡಲುವಿನಲ್ಲಿ ಜನಿಸಿದವಳೂ ಲೋಕಮಾತೆಯೂ, ಲೋಕವನ್ನು ಪರಿಶುದ್ಧಗೊಳಿಸುವವಳೂ ದುಃಖಗಳನ್ನು ಹೋಗಲಾಡಿಸುವವಳೂ, ಇಹಪರಗಳಲ್ಲಿ ಸುಖವನ್ನುಂಟುಮಾಡುವವಳೂ ಆದ ಗೌತಮೀನದಿಗೆ ಹೋಗಿ ಪ್ರಾರ್ಥಿಸಲು,

ಸಾ ಗತ್ವಾ ಗೌತಮೀಂ ದೇವೀಂ ಪ್ರಾಹ ಮಚ್ಛಾಪಮೋದಿತಃ ।
ಗಂಗಾಪಿ ಮಾಮುವಾಚೇದಂ ವಿಶಾಪಾಂ ಕರ್ತುಮರ್ಹಸಿ ॥ ೧೩ ॥

ನ ಯುಕ್ತಂ ಯತ್ಸರಸ್ವತ್ಯಾಃ ಶಾಪಂ ತ್ವಂ ದತ್ತವಾನಸಿ ।
ಸ್ತ್ರೀಣಾಮೇಷ ಸ್ವಭಾವೋ ವೈ ಪುಂಸ್ಕಾಮಾ ಯೋಷಿತೋ ಯತಃ ॥ ೧೪ ॥

ಸ್ವಭಾವಚಪಲಾ ಬ್ರಹ್ಮನ್ಯೋಷಿತಃ ಸಕಲಾ ಅಪಿ ।
ತ್ವಂ ಕಥಂ ತು ನ ಜಾನೀಷೇ ಜಗತ್ಸ್ರಷ್ಟಾಂಬುಜಾಸನ ॥ ೧೫ ॥

ವಿಡಂಬಯತಿ ಕಂ ವಾ ನ ಕಾಮೋ ವಾಪಿ ಸ್ವಭಾವತಃ ।
ತತೋ ವಿಶಾಪಮುವದಂ ದೃಶ್ಯಾಪಿ ಸ್ಯಾತ್ಸರಸ್ವತೀ ॥ ೧೬ ॥

ತಸ್ಮಾಚ್ಛಾಪಾನ್ನದೀ ಮರ್ತ್ಯೇ ದೃಶ್ಯಾದೃಶ್ಯಾ ಸರಸ್ವತೀ ।
ಯತ್ರೈಷಾ ಸಂಗತಾ ದೇವೀ ಗಂಗಾಯಾಂ ಶಾಪವಿಹ್ವಲಾ ॥ ೧೭ ॥

---

೧೩. ಆಗ ಗಂಗೆಯು ನನ್ನನ್ನು ಕುರಿತು ಓ ಬ್ರಹ್ಮದೇವ, ಈ ಸರಸ್ವತಿಯ ಶಾಪವನ್ನು ಪರಿಹರಿಸು. ಇವಳಿಗೆ ಶಾಪವನ್ನು ಕೊಟ್ಟುದುದು ನ್ಯಾಯವಲ್ಲ.

೧೪. ಪುರುಷರನ್ನು ಬಯಸುವುದು ಸ್ತ್ರೀಯರ ಸ್ವಭಾವವು. ಸ್ತ್ರೀಯರೆಲ್ಲರೂ ಸ್ವಾಭಾವಿಕವಾಗಿ ಚಪಲೆಯರು.

೧೫. ಸೃಷ್ಟಿಕರ್ತನಾದರೂ ನಿನಗಿದು ತಿಳಿಯಲಿಲ್ಲವೇ ? ಮನ್ಮಥನು ಯಾರನ್ನು ತಾನೇ ಮೋಹಗೊಳಿಸುವುದಿಲ್ಲ? ಎಂದು ಹೇಳಿದಳು.

೧೬. ಆಗ ನಾನು (ಬ್ರಹ್ಮನು) ಸರಸ್ವತಿಯು ಜನರ ಕಣ್ಣಿಗೆ ಕಾಣಿಸುವಂತಹ ರೂಪವುಳ್ಳವಳೂ ಆಗಲಿ ಎಂದು ಶಾಪನಿವೃತ್ತಿಯನ್ನು ಅನುಗ್ರಹಿಸಿದೆನು. ಆದುದರಿಂದ ಮುಂದೆ ಸರಸ್ವತೀನದಿಯು ಕೆಲವೆಡೆ ಕಾಣಿಸುವವಳೂ ಕೆಲವೆಡೆ ಗುಪ್ತಗಾಮಿನಿಯೂ ಆದಳು.

೧೭. ಶಾಪಹೊಂದಿದ ಸರಸ್ವತೀನದಿಯು ಗೌತಮೀನದಿಯಲ್ಲಿ ಸೇರಿದ ಸಂಗಮಸ್ಥಳಕ್ಕೆ ರಾಜೋತ್ತಮನೂ ಧಾರ್ಮಿಕನೂ ಆದ ಪುರೂರವನು ಹೋಗಿ

ತತ್ರ ಪ್ರಾಯೋನ್ನೃಪವರೋ ಧಾರ್ಮಿಕಃ ಸ ಪುರೂರವಾಃ ।
ತಪಸ್ತಪ್ತ್ವಾ ಸಮಾರಾಧ್ಯ ದೇವಂ ಸಿದ್ಧೇಶ್ವರಂ ಹರಂ ॥ ೧೮ ॥

ಸರ್ವಾನ್ಕಾಮಾನಥಾವಾಪ ಗಂಗಾಯಾಶ್ಚ ಪ್ರಸಾದತಃ ।
ತತಃ ಪ್ರಭೃತಿ ತತ್ತೀರ್ಥಂ ಪುರೂರವಸಮುಚ್ಯತೇ ॥ ೧೯ ॥

ಸರಸ್ವತೀಸಂಗಮಂ ಚ ಬ್ರಹ್ಮತೀರ್ಥಂ ತದುಚ್ಯತೇ ।
ಸಿದ್ಧೇಶ್ವರೋ ಯತ್ರ ದೇವಃ ಸರ್ವಕಾಮಪ್ರದಂ ತು ತತ್ ॥ ೨೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಸರಸ್ವತೀಸಂಗಮಪುರೂರವಸಬ್ರಹ್ಮತೀರ್ಥಸಿದ್ಧೇಶ್ವರವರ್ಣನಂ ನಾಮೈಕಾಧಿಕಶತತಮೋಽಧ್ಯಾಯಃ

---

೧೮. ಅಲ್ಲಿ ಸಿದ್ಧೇಶ್ವರನೆಂಬ ಹೆಸರಿನಿಂದ ನೆಲಸಿರುವ ಶಿವನನ್ನು ಆರಾಧಿಸಿ ಆ ದೇವದೇವನ ಅನುಗ್ರಹದಿಂದಲೂ ಗೌತಮಿಯ ಮಹಿಮೆಯಿಂದಲೂ ಸಹ ಸಕಲೇಷ್ಟಾರ್ಥಗಳನ್ನೂ ಪಡೆದನು.

೧೯-೨೦. ಅದು ಮೊದಲುಗೊಂಡು ಆ ತೀರ್ಥಕ್ಕೆ ಪುರೂರವಸತೀರ್ಥವೆಂದು ಹೆಸರಾಯಿತು. ಸರಸ್ವತೀನದಿಯು ಗೌತಮಿನದಿಯನ್ನು ಸೇರಿದ ಸಂಗಮ ಸ್ಥಳಕ್ಕೆ ಬ್ರಹ್ಮತೀರ್ಥವೆಂದು ಹೆಸರಾಯಿತು, ಸಿದ್ಧೇಶ್ವರಸ್ವಾಮಿಯು ನೆಲಸಿರುವ ಸ್ಥಳಕ್ಕೆ ಸರ್ವಕಾಮಪ್ರದತೀರ್ಥವೆಂದು ಹೆಸರಾಯಿತು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಸರಸ್ವತೀಸಂಗಮ ಪುರೂರುವಸಬ್ರಹ್ಮತೀರ್ಥ ಸಿದ್ಧೇಶ್ವರವರ್ಣನವೆಂಬ ನೂರೊಂದನೆಯ ಅಧ್ಯಾಯವು ಮುಗಿದುದು.

ಗೌತಮಿಯ ಮಾಹಾತ್ಮ್ಯೆಯಲ್ಲಿ ಮೂವತ್ತೆರಡನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ದ್ವ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಸಾವಿತ್ರೀ ಚೈವ ಗಾಯತ್ರೀ ಶ್ರದ್ಧಾ ಮೇಧಾ ಸರಸ್ವತೀ ।
ಏತಾನಿ ಪಂಚ ತೀರ್ಥಾನಿ ಪುಣ್ಯಾನಿ ಮುನಯೋ ವಿದುಃ ॥ ೧ ॥

ತತ್ರ ಸ್ನಾತ್ವಾ ತು ಪೀತ್ವಾ ತು ಮುಚ್ಯತೇ ಸರ್ವಕಲ್ಮಷಾತ್ ।
ಸಾವಿತ್ರೀ ಚೈವ ಗಾಯತ್ರೀ ಶ್ರದ್ಧಾ ಮೇಧಾ ಸರಸ್ವತೀ ॥ ೨ ॥

ನೂರೆರಡನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಸಾವಿತ್ರೀ, ಗಾಯತ್ರೀ, ಶ್ರದ್ಧಾ ಮೇಧಾ, ಸರಸ್ವತೀ ಇವುಗಳು ಐದು ಪುಣ್ಯತೀರ್ಥಗಳು. ಇವುಗಳನ್ನು ಋಷಿಗಳೂ ಸೇವಿಸುವರು. ಈ ತೀರ್ಥಗಳಲ್ಲಿ ಸ್ನಾನಪಾನಗಳನ್ನು ಮಾಡಿದರೆ ಸಕಲಪಾಪಗಳೂ ನಾಶವಾಗುವುವು.

೨. ಸಾವಿತ್ರೀ, ಗಾಯತ್ರೀ, ಶ್ರದ್ಧಾ, ಮೇದಾ ಸರಸ್ವತೀ, ಈ ಐವರು ಕುಮಾರಿಯರು ನನ್ನ (ಬ್ರಹ್ಮನ) ಹಿರಿಯ ಮಕ್ಕಳು. ಇವರಿಂದ ಧರ್ಮದ ವ್ಯವಸ್ಥೆಯು ಸರಿಯಾಗಿ ನಡೆಯುತ್ತಿರುವುದು.

ಏತಾ ಮಮ ಸುತಾ ಜ್ಯೇಷ್ಠಾ ಧರ್ಮಸಂಸ್ಥಾನಹೇತವಃ ।
ಸರ್ವಾಸಾಮುತ್ತಮಾಂ ಕಾಂಚಿನ್ನಿರ್ಮಮೇ ಲೋಕಸುಂದರೀಂ ॥ ೩ ॥

ತಾಂ ದೃಷ್ಟ್ವಾ ವಿಕೃತಾ ಬುದ್ಧಿರ್ಮಮಾಸೀನ್ಮುನಿಸತ್ತಮ ।
ಗೃಹ್ಯಮಾಣಾ ಮಯಾ ಬಾಲಾ ಸಾ ಮಾಂ ದೃಷ್ಟ್ವಾ ಪಲಾಯಿತಾ ॥ ೪ ॥

ಮೃಗೀಭೂತಾ ತು ಸಾ ಬಾಲಾ ಮೃಗೋಽಹಮಭವಂ ತದಾ ।
ಮೃಗವ್ಯಾಧೋಽಭವಚ್ಛಂಭುರ್ಧರ್ಮಸಂರಕ್ಷಣಾಯ ಚ ॥ ೫ ॥

ತಾ ಮದ್ಭೀತಾಃ ಪಂಚ ಸುತಾ ಗಂಗಾಮಾಯುರ್ಮಹಾನದೀಂ ।
ತತೋ ಮಹೇಶ್ವರಃ ಪ್ರಾಯಾದ್ಧರ್ಮಸಂರಕ್ಷಣಾಯ ಸಃ ॥ ೬ ॥

ಧನುರ್ಗೃಹೀತ್ವಾ ಸಶರಮಾಶೋಽಪಿ ಮೃಗರೂಪಿಣಂ ।
ಮಾಮುವಾಚ ವಧಿಷ್ಯೇ ತ್ವಾಂ ಮೃಗವ್ಯಾಧಸ್ತದಾ ಹರಃ ॥ ೭ ॥

ತತ್ಕರ್ಮಣೋ ನಿವೃತ್ತೋಽಹಂ ಪ್ರಾದಾಂ ಕನ್ಯಾಂ ವಿವಸ್ವತೇ ।
ಸಾವಿತ್ರ್ಯಾದ್ಯಾಃ ಪಂಚ ಸುತಾ ನದೀರೂಪೇಣ ಸಂಗತಾಃ ॥ ೮ ॥

---

೩. ಈ ಐವರಲ್ಲಿ ಓರ್ವಳನ್ನು ಲೋಕೋತ್ತರಸುಂದರಿಯಾಗಿ ನಿರ್ಮಿಸಿದೆನು. ಅವಳನ್ನು ನೋಡಿ ನನ್ನ ಬುದ್ಧಿಯು ವಿಕಾರಗೊಂಡಿತು, ಮೋಹಗೊಂಡಿತು.

೪. ಕಾಮುಕತನದಿಂದ ನಾನು ಆ ಸುಂದರಿಯನ್ನು ಹಿಡಿದುಕೊಳ್ಳಲುದ್ಯುಕ್ತನಾದೆನು. ಅದನ್ನು ನೋಡಿ ಆ ಕುಮಾರಿಯು ಹೆದರಿ ಹೆಣ್ಣುಜಿಂಕೆಯ ರೂಪವನ್ನು ಧರಿಸಿ ಓಡಿದಳು. ನಾನೂ ಮೃಗರೂಪವನ್ನು ಧರಿಸಿ ಅವಳ ಬೆನ್ನಟ್ಟಿದೆನು.

೫. ಆಗ ಈಶ್ವರನು ಧರ್ಮಸಂರಕ್ಷಣೆಗಾಗಿ ಮೃಗವ್ಯಾಧನ (ಬೇಡ) ರೂಪವನ್ನು ಧರಿಸಿ ನಮ್ಮನ್ನು ಬೆನ್ನಟ್ಟಿದನು. ನನ್ನಿಂದ ಭಯಗೊಂಡ ಆ ಐವರು ಕುಮಾರಿಯರು ಗೌತಮಿಯ ತೀರಕ್ಕೆ ಬಂದರು.

೬-೭. ಆಗ ಮೃಗವ್ಯಾಧರೂಪನಾದ ಈಶ್ವರನೂ ಧನುರ್ಬಾಣಗಳನ್ನು ಧರಿಸಿ ನನ್ನನ್ನಟ್ಟಿಕೊಂಡು ಬಂದು ಮೃಗರೂಪನಾದ ನನ್ನೊಡನೆ ನಿನ್ನನ್ನು ಸಂಹರಿಸುವೆನು ಎಂದು ಹೆದರಿಸಿದನು.

೮. ಅದರಿಂದ ನಾನು ಹೆದರಿ ಆ ಲೋಕಸುಂದರಿಯಾದ ಕನ್ಯೆಯ ಗೊಡವೆಯನ್ನೇ ಬಿಟ್ಟು ಅವಳನ್ನು ಸೂರ್ಯನಿಗೆ ಮದುವೆಮಾಡಿಕೊಟ್ಟೆನು.

ತಾ ಆಗತಾಃ ಪುನಶ್ಚಾಪಿ ಸ್ವರ್ಗಂ ಲೋಕಂ ಮಮಾಂತಿಕಂ ।
ಯತ್ರ ತಾಃ ಸಂಗತಾ ದೇವ್ಯಾ ಪಂಚ ತೀರ್ಥಾನಿ ನಾರದ ॥ ೯ ॥

ಸಂಗತಾನಿ ಚ ಪುಣ್ಯಾನಿ ಪಂಚ ನದ್ಯಃ ಸರಸ್ವತೀ ।
ತೇಷು ಸ್ನಾನಂ ತಥಾ ದಾನಂ ಯತ್ಕಿಂಚಿತ್ಕುರುತೇ ನರಃ ॥ ೧೦ ॥

ಸರ್ವಕಾಮಪ್ರದಂ ತತ್ಸ್ಯಾನ್ನೈಷ್ಕರ್ಮ್ಯಾನ್ಮುಕ್ತಿದಂ ಸ್ಮೃತಂ ।
ತತ್ರಾಭವನ್ಮೃಗವ್ಯಾಧಂ ತೀರ್ಥಂ ಸರ್ವಾರ್ಥದಂ ನೃಣಾಂ ।
ಸ್ವರ್ಗಮೋಕ್ಷಫಲಂ ಚಾನ್ಯದ್ಬ್ರಹ್ಮತೀರ್ಥಫಲಂ ಸ್ಮೃತಂ ॥ ೧೧ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಪಂಚತೀರ್ಥಮಾಹಾತ್ಮ್ಯನಿರೂಪಣಂ ನಾಮ
ದ್ವ್ಯಧಿಕಶತತಮೋಽಧ್ಯಾಯಃ

ಸಾವಿತ್ರೀ ಮೊದಲಾದ ಐವರು ಕುಮಾರಿಯರೂ ನದೀರೂಪವಾಗಿ ಹರಿಯುತ್ತಾ ಗೌತಮೀನದಿಯಲ್ಲಿ ಸೇರಿ ಪುನಃ ಸ್ವರ್ಗಕ್ಕೆ ಬಂದು ಸೇರಿದರು.

೯. ಆ ಐದುನದಿಗಳೂ ಗೌತಮೀನದಿಯಲ್ಲಿ ಸೇರಿದ ಸ್ಥಳದಲ್ಲಿ ಐದು ತೀರ್ಥಗಳಾಗಿರುವುವು. ಅವೆಲ್ಲವೂ ಪವಿತ್ರವಾದವುಗಳು. ಆ ಐದು ನದಿಗಳಿಗೂ ಒಟ್ಟು ಸರಸ್ವತೀನದಿಯೆಂದು ಹೆಸರು.

೧೦. ಆ ಐದು ತೀರ್ಥಗಳಲ್ಲಿ ಸ್ನಾನ ಮೊದಲಾದ ಯಾವುದೊಂದನ್ನು ಮಾಡಿದರೂ ಸಕಲೇಷ್ಟಾರ್ಥಗಳೂ ಸಿದ್ಧಿಸುವುವು. ವೈರಾಗ್ಯದಿಂದ ಮುಂದೆ ಮುಕ್ತಿಯು ಲಭಿಸುವುದು.

೧೧. ಮೃಗವ್ಯಾಧವೆಂಬ ತೀರ್ಥವೂ ಬ್ರಹ್ಮತೀರ್ಥವೆಂಬುದೂ ಆ ಸ್ಥಳದಲ್ಲಿರುವುವು. ಆ ತೀರ್ಥಗಳು ಇಷ್ಟಾರ್ಥಗಳೆಲ್ಲವನ್ನೂ ಸ್ವರ್ಗಮೋಕ್ಷಗಳನ್ನೂ ಉಂಟುಮಾಡುವುವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಪಂಚತೀರ್ಥಮಾಹಾತ್ಮ್ಯನಿರೂಪಣವೆಂಬ
ನೂರೆರಡನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಮೂವತ್ತಮೂರನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ತ್ರ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಶಮೀತೀರ್ಥಮಿತಿ ಖ್ಯಾತಂ ಸರ್ವಪಾಪೋಪಶಾಂತಿದಂ ।
ತಸ್ಯಾಖ್ಯಾನಂ ಪ್ರವಕ್ಷ್ಯಾಮಿ ಶೃಣು ಯತ್ನೇನ ನಾರದ ॥ ೧ ॥

ಆಸೀತ್ಪ್ರಿಯವ್ರತೋ ನಾಮ ಕ್ಷತ್ರಿಯೋ ಜಯತಾಂ ವರಃ ।
ಗೌತಮ್ಯಾ ದಕ್ಷಿಣೇ ತೀರೇ ದೀಕ್ಷಾಂ ಚಕ್ರೇ ಪುರೋಧಸಾ ॥ ೨ ॥

ನೂರಮೂರನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಶಮೀತೀರ್ಥವೆಂದು ಪ್ರಸಿದ್ಧವಾದ ತೀರ್ಥವಿರುವುದು. ಅದು ಪಾಪಗಳೆಲ್ಲವನ್ನೂ ನಾಶಮಾಡುವುದು. ಅದರ ಮಾಹಾತ್ಮ್ಯವನ್ನು ಹೇಳುವೆನು ಶ್ರದ್ಧೆಯಿಂದ ಕೇಳು.

೨. ಹಿಂದೆ ಪ್ರಿಯವ್ರತನೆಂಬ ಮಹಾ ಶೂರನಾದ ರಾಜನಿದ್ದನು, ಅವನು ತನ್ನ ಪುರೋಹಿತನೊಡನೆ ಗೌತಮೀನದಿಯ ದಕ್ಷಿಣತೀರದಲ್ಲಿ ಯಜ್ಞ ದೀಕ್ಷೆಯನ್ನು ಕೈಗೊಂಡನು.

ಹಯಮೇಧ ಉಪಕ್ರಾಂತೇ ಋತ್ವಿಗ್ಭಿರೃಷಿಭಿರ್ವೃತೇ ।
ತಸ್ಯ ರಾಜ್ಞೋ ಮಹಾಬಾಹೋರ್ವಸಿಷ್ಠಸ್ತು ಪುರೋಹಿತಃ ॥ ೩ ॥

ತದ್ಯಜ್ಞವಾಟಮಗಮದ್ದಾನವೋಽಥ ಹಿರಣ್ಯಕಃ ।
ತಂ ದಾನವಮಭಿಪ್ರೇಕ್ಷ್ಯ ದೇವಾಸ್ತ್ವಿಂದ್ರಪುರೋಗಮಾಃ ॥ ೪ ॥

ಭೀತಾಃ ಕೇಚಿದ್ದಿವಂ ಜಗ್ಮುರ್ಹವ್ಯವಾಟ್ಛಮಿಮಾವಿಶತ್ ।
ಅಶ್ವತ್ಥಂ ವಿಷ್ಣುರಗಮದ್ಭಾನುರರ್ಕಂ ವಟಂ ಶಿವಃ ॥ ೫ ॥

ಸೋಮಃ ಪಲಾಶಮಗಮದ್ಗಂಗಾಂಭೋ ಹವ್ಯವಾಹನಃ ।
ಅಶ್ವಿನೌ ತು ಹಯಂ ಗೃಹ್ಯ ವಾಯಸೋಽಭೂದ್ಯಮಃ ಸ್ವಯಂ ॥ ೬ ॥

ಏತಸ್ಮಿನ್ನಂತರೇ ತತ್ರ ವಸಿಷ್ಠೋ ಭಗವಾನೃಷಿಃ ।
ಯಷ್ಟಿಮಾದಾಯ ದೈತೇಯಾನ್ನ್ಯವಾರಯದಥಾಜ್ಞಯಾ ॥ ೭ ॥

---

೩. ಋಷಿಗಳು ಋತ್ವಿಜರಾಗಿ ಆ ರಾಜನ ಅಶ್ವಮೇಧಯಾಗವನ್ನು ಪ್ರಾರಂಭಿಸಿದರು. ಆ ಪ್ರಿಯವ್ರತನಿಗೆ ವಸಿಷ್ಠಮುನಿಯು ಮುಖ್ಯ ಪುರೋಹಿತನಾಗಿದ್ದನು.

೪-೬. ಆಗ ಆ ಯಾಗಶಾಲೆಗೆ ಹಿರಣ್ಯಕನೆಂಬ (ಹಿರಣ್ಯಕಶಿಪು) ರಾಕ್ಷಸನು ಪ್ರವೇಶಿಸಿದನು. ಆ ದೈತ್ಯನನ್ನು ನೋಡಿ ಇಂದ್ರನೇ ಮೊದಲಾದ ಕೆಲವರು ದೇವತೆಗಳು ಹೆದರಿ ಸ್ವರ್ಗಕ್ಕೆ ಓಡಿಹೋದರು. ಅಗ್ನಿಯು ಶಮೀವೃಕ್ಷವನ್ನು ಸೇರಿದನು, ಹರಿಯು ಅಶ್ವತ್ಥವನ್ನು ಸೇರಿದನು, ಸೂರ್ಯನು ಅರ್ಕವೃಕ್ಷವನ್ನಾಶ್ರಯಿಸಿದನು, ಶಿವನು ಆಲದಮರವನ್ನು ಪ್ರವೇಶಿಸಿದನು, ಚಂದ್ರನು ಮುತ್ತುಗದಮರವನ್ನು ಸೇರಿದನು. ಆಹವನೀಯಾಗ್ನಿಯು ಜಲವನ್ನು ಸೇರಿದನು, ಅಶ್ವಿನೀದೇವತೆಗಳು ಕುದುರೆಯಲ್ಲಡಗಿದರು, ಯಮನು ಕಾಗೆಯಾದನು.

೭. ಆ ಸಮಯದಲ್ಲಿ ಮಹಾತ್ಮನಾದ ವಸಿಷ್ಠಮುನಿಯು ತನ್ನ ಬ್ರಹ್ಮದಂಡವನ್ನೆತ್ತಿ ಆ ರಾಕ್ಷಸರೆಲ್ಲರನ್ನೂ ತನ್ನ ತಪಶ್ಶಕ್ತಿಯಿಂದ ಓಡಿಸಿದನು.

ತತಃ ಪ್ರವೃತ್ತಃ ಪುನರೇವ ಯಜ್ಞೋ
ದೈತ್ಯೋ ಗತಃ ಸ್ವೇನ ಬಲೇನ ಯುಕ್ತಃ ।
ಇಮಾನಿ ತೀರ್ಥಾನಿ ತತಃ ಶುಭಾನಿ
ದಶಾಶ್ವಮೇಧಸ್ಯ ಫಲಾನಿ ದದ್ಯುಃ ॥ ೮ ॥

ಪ್ರಥಮಂ ತು ಶಮೀತೀರ್ಥಂ ದ್ವಿತೀಯಂ ವೈಷ್ಣವಂ ವಿದುಃ ।
ಆರ್ಕಂ ಶೈವಂ ಚ ಸೌಮ್ಯಂ ಚ ವಾಸಿಷ್ಠಂ ಸರ್ವಕಾಮದಂ ॥ ೯ ॥

ದೇವಾಶ್ಚ ಋಷಯಃ ಸರ್ವೇ ನಿವೃತ್ತೇ ಮಖವಿಸ್ತರೇ ।
ತುಷ್ಟಾಃ ಪ್ರೋಚುರ್ವಸಿಷ್ಠಂ ತಂ ಯಜಮಾನಂ ಪ್ರಿಯವ್ರತಂ ॥ ೧೦ ॥

ತಾಂಶ್ಚ ವೃಕ್ಷಾಂಸ್ತಾಂ ಚ ಗಂಗಾಂ ಮುದಾ ಯುಕ್ತಾಃ ಪುನಃ ಪುನಃ ।
ಹಯಮೇಧಸ್ಯ ನಿಷ್ಪತ್ತ್ಯೈ ಏತೇ ಯಾತಾ ಇತಸ್ತತಃ ॥ ೧೧ ॥

---

೮. ಆಮೇಲೆ ಆ ಯಜ್ಞವು ಪುನಃ ಪ್ರಾರಂಭವಾಯಿತು. ಹಿರಣ್ಯಕಾಸುರನು ಹೆದರಿ ತನ್ನ ಸೈನ್ಯದೊಡನೆ ಓಡಿಹೋದನು. ಆ ಶಮೀ ಮೊದಲಾದ ತೀರ್ಥಗಳು ಮಹಾ ಪವಿತ್ರವಾದುವುಗಳು. ಹತ್ತು ಅಶ್ವಮೇಧಯಾಗಗಳ ಫಲವನ್ನು ಕೊಡುವುವು.

೯. ಅವುಗಳಲ್ಲಿ ಮೊದಲನೆಯದು ಶಮೀತೀರ್ಥ, ಎರಡನೆಯದು ವೈಷ್ಣವತೀರ್ಥ. ಆರ್ಕತೀರ್ಥ, ಶೈವತೀರ್ಥ, ಸೌಮ್ಯತೀರ್ಥ, ವಾಸಿಷ್ಠತೀರ್ಥ ಇವುಗಳು ಮಿಕ್ಕ ತೀರ್ಥಗಳು. ಈ ತೀರ್ಥಗಳೆಲ್ಲವೂ ಇಷ್ಟಾರ್ಥಗಳೆಲ್ಲವನ್ನೂ ಉಂಟುಮಾಡುವುವು.

೧೦. ಯಜ್ಞವು ಮುಗಿದಮೇಲೆ ದೇವತೆಗಳೂ ಋಷಿಗಳೂ ವಸಿಷ್ಠಮಹಾಮುನಿಯನ್ನೂ ಪ್ರಿಯವ್ರತನನ್ನೂ ಹೊಗಳಿ ಸಂತಸದಿಂದ ಆ ವೃಕ್ಷಗಳನ್ನು ಗಂಗೆಯನ್ನು ಉದ್ದೇಶಿಸಿ ಇಂತು ನುಡಿದರು.

೧೧. ಅಶ್ವಮೇಧಯಾಗವು ಕೆಡದಿರಲು ದೇವತೆಗಳಲ್ಲಿ ಕೆಲವರು ಕೆಲವು ಮರಗಳನ್ನೂ ಗಂಗೆಯನ್ನೂ ಪ್ರವೇಶಿಸಿರುವರು. ಆದುದರಿಂದ ದೇವತೆಗಳಿಗೆ ಆಶ್ರಯವನ್ನಿತ್ತ ಆ ವೃಕ್ಷ ಮೊದಲಾದುವುಗಳು ಮಹಾತೀರ್ಥಗಳಾಗಲಿ. ಆ ತೀರ್ಥಗಳು ಅಶ್ವಮೇಧಯಾಗದ ಫಲವನ್ನು ಕೊಡುವುವು ಎಂದು ಅನುಗ್ರಹಿಸಿದರು.

ಹಯಮೇಧಫಲಂ ದದ್ಯುಸ್ತೀರ್ಥಾನೀತ್ಯವದನ್ಸುರಾಃ ।
ತಸ್ಮಾತ್ಸ್ನಾನೇನ ದಾನೇನ ತೇಷು ತೀರ್ಥೇಷು ನಾರದ ।
ಹಯಮೇಧಫಲಂ ಪುಣ್ಯಂ ಪ್ರಾಪ್ನೋತಿ ನ ಮೃಷಾ ವಚಃ ॥ ೧೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ತೀರ್ಥಮಾಹಾತ್ಮ್ಯೇ ಶಮ್ಯಾದಿತೀರ್ಥವರ್ಣನಂ
ನಾಮ ತ್ರ್ಯಧಿಕಶತತಮೋऽಧ್ಯಾಯಃ

---

೧೨. ಆದುದರಿಂದ ಆ ಶಮೀತೀರ್ಥ ಮೊದಲಾದ ತೀರ್ಥಗಳಲ್ಲಿ ಸ್ನಾನದಾನಗಳನ್ನು ಮಾಡಿದರೆ ಅಶ್ವಮೇಧಯಾಗದ ಫಲವು ಲಭಿಸುವುದು, ಇದು ಸಟೆಯಲ್ಲ.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಶಮ್ಯಾದಿತೀರ್ಥವರ್ಣನವೆಂಬ ನೂರಮೂರನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಮೂವತ್ತನಾಲ್ಕನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಚತುರಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ವಿಶ್ವಾಮಿತ್ರಂ ಹರಿಶ್ಚಂದ್ರಂ ಶುನಃಶೇಪಂ ಚ ರೋಹಿತಂ ।
ವಾರುಣಂ ಬ್ರಾಹ್ಮಮಾಗ್ನೇಯಮೈಂದ್ರಮೈಂದವಮೈಶ್ವರಂ ॥ ೧ ॥

ಮೈತ್ರಂ ಚ ವೈಷ್ಣವಂ ಚೈವ ಯಾಮ್ಯಮಾಶ್ವಿನಮೌಶನಂ ।
ಏತೇಷಾಂ ಪುಣ್ಯತೀರ್ಥಾನಾಂ ನಾಮಧೇಯಂ ಶೃಣುಷ್ವ ಮೇ ॥ ೨ ॥

ನೂರನಾಲ್ಕನೆಯ ಅಧ್ಯಾಯವು

೧-೨. ಬ್ರಹ್ಮನು ಹೇಳಿದನು—ಎಲೈ ನಾರದ ಹಿಂದೆ ಹೇಳಿದ ತೀರ್ಥಗಳಲ್ಲದೆ ವಿಶ್ವಾಮಿತ್ರತೀರ್ಥ, ಹರಿಶ್ಚಂದ್ರತೀರ್ಥ, ಶುನಶ್ಶೇಫತೀರ್ಥ, ರೋಹಿತತೀರ್ಥ, ವಾರುಣತೀರ್ಥ, ಬ್ರಾಹ್ಮತೀರ್ಥ, ಆಗ್ನೇಯತೀರ್ಥ, ಐಂದ್ರತೀರ್ಥ, ಐಂದವತೀರ್ಥ ಐಶ್ವರತೀರ್ಥ, ಮೈತ್ರತೀರ್ಥ, ವೈಷ್ಣವತೀರ್ಥ, ಯಾಮ್ಯತೀರ್ಥ, ಆಶ್ವಿನತೀರ್ಥ ಔಶನತೀರ್ಥಗಳೆಂಬ ಪುಣ್ಯತೀರ್ಥಗಳು ಆ ಗೌತಮೀತೀರದಲ್ಲಿರುವುವು. ಅವುಗಳ ಮಹಿಮೆಯನ್ನು ಹೇಳುವೆನು ಕೇಳು.

ಹರಿಶ್ಚಂದ್ರ ಇತಿ ಖ್ಯಾಸೀದಿಕ್ಷ್ವಾಕುಪ್ರಭವೋ ನೃಪಃ ।
ತಸ್ಯ ಗೃಹೇ ಮುನೀ ಪ್ರಾಪ್ತೌ ನಾರದಃ ಪರ್ವತಸ್ತಥಾ ।
ಕೃತ್ವಾತಿಥ್ಯಂ ತಯೋಃ ಸಮ್ಯಗ್ಘರಿಶ್ಚಂದ್ರೋಽಬ್ರವೀದೃಷೀ ॥ ೩ ॥

॥ ಹರಿಶ್ಚಂದ್ರ ಉವಾಚ ॥

ಪುತ್ರಾರ್ಥಂ ಕ್ಲಿಶ್ಯತೇ ಲೋಕಃ ಕಿಂ ಪುತ್ರೇಣ ಭವಿಷ್ಯತಿ ।
ಜ್ಞಾನೀ ವಾಪ್ಯಥವಾಜ್ಞಾನೀ ಉತ್ತಮೋ ಮಧ್ಯಮೋಽಥವಾ ।
ಏತಂ ಮೇ ಸಂಶಯಂ ನಿತ್ಯಂ ಬ್ರೂತಾಮೃಷಿವರಾವುಭೌ ॥ ೪ ॥

॥ ಬ್ರಹ್ಮೋವಾಚ ॥

ತಾವೂಚತುರ್ಹರಿಶ್ಚಂದ್ರಂ ಪರ್ವತೋ ನಾರದಸ್ತಥಾ ॥ ೫ ॥

॥ ನಾರದಪರ್ವತಾವೂಚತುಃ ॥

ಏಕಧಾ ದಶಧಾ ರಾಜನ್ ಶತಧಾ ಚ ಸಹಸ್ರಧಾ ।
ಉತ್ತರಂ ವಿದ್ಯತೇ ಸಮ್ಯಕ್ತಥಾಪ್ಯೇತದುದೀರ್ಯತೇ ॥ ೬ ॥

---

೩. ಇಕ್ಷ್ವಾಕುವಂಶದಲ್ಲಿ ಹರಿಶ್ಚಂದ್ರನೆಂಬ ಓರ್ವ ರಾಜನಿದ್ದನು. ಒಂದುದಿನ ಅವನ ಮನೆಗೆ ನಾರದಪರ್ವತರೆಂಬ ಮುನಿಗಳು ಬಂದರು. ಆ ಮುನಿಗಳಿಗೆ ಹರಿಶ್ಚಂದ್ರನು ಚನ್ನಾಗಿ ಅತಿಥಿಸತ್ಕಾರವನ್ನು ಮಾಡಿ ಅವರನ್ನು ಕುರಿತು,

೪–೬. ಮಕ್ಕಳಿಗಾಗಿ ಜನಗಳು ತುಂಬಾ ಪ್ರಯತ್ನಪಡುವರು. ಮಕ್ಕಳಿಂದ ನಮಗಾಗುವುದೇನು? ಮಕ್ಕಳಿಂದ ಜ್ಞಾನಿಯಾಗಬಹುದೆ? ಅಥವಾ ಅಜ್ಞಾನಿಯಾಗಬಹುದೆ? ಉತ್ತಮನಾಗಬಹುದೆ? ಅಥವಾ ಮಧ್ಯಮನಾಗಬಹುದೆ? ಈ ಸಂಶಯವು ನನಗೆ ಬಹುದಿನಗಳಿಂದಲೂ ಇರುವುದು. ಎಲೈ ಮುನಿಗಳೇ, ಈ ಸಂಶಯವನ್ನು ನಿವಾರಿಸಿ, ಎಂದು ಕೇಳಲು ಆಗ ಆ ಪರ್ವತನಾರದರು ಎಲೈ ರಾಜ, ನೀನು ಕೇಳಿದ ಪ್ರಶ್ನೆಗೆ ಒಂದು ತೆರನಾಗಿಯೂ ಹತ್ತುತೆರನಾಗಿಯೂ ನೂರು ತೆರನಾಗಿಯೂ ಸಾವಿರತೆರನಾಗಿಯೂ ಉತ್ತರವಿರುವುದು. ಆದರೂ ಈ ಉತ್ತರವನ್ನು ಹೇಳುವೆವು ಕೇಳು.

ನಾಪುತ್ರಸ್ಯ ಪರೋ ಲೋಕೋ ವಿದ್ಯತೇ ನೃಪಸತ್ತಮ ।
ಜಾತೇ ಪುತ್ರೇ ಪಿತಾ ಸ್ನಾನಂ ಯಃ ಕರೋತಿ ಜನಾಧಿಪ ॥ ೭ ॥

ದಶಾನಾಮಶ್ವಮೇಧಾನಾಮಭಿಷೇಕಫಲಂ ಲಭೇತ್ ।
ಆತ್ಮಪ್ರತಿಷ್ಠಾ ಪುತ್ರಾತ್ಸ್ಯಾಜ್ಜಾಯತೇ ಚಾಮರೋತ್ತಮಃ ॥ ೮ ॥

ಅಮೃತೇನಾಮರಾ ದೇವಾಃ ಪುತ್ರೇಣ ಬ್ರಾಹ್ಮಣಾದಯಃ ।
ತ್ರಿಋಣಾನ್ಮೋಚಯೇತ್ಪುತ್ರಃ ಪಿತರಂ ಚ ಪಿತಾಮಹಾನ್ ॥ ೯ ॥

ಕಿಂತು ಮೂಲಂ ಕಿಮು ಜಲಂ ಕಿಂತು ಶ್ರೌಣಿ ಕಿಂ ತಪಃ ।
ವಿನಾ ಪುತ್ರೇಣ ರಾಜೇಂದ್ರ ಸ್ವರ್ಗೋ ಮುಕ್ತಿಃ ಸುತಾತ್ಸ್ಮೃತಾಃ ॥ ೧೦ ॥

ಪುತ್ರ ಏವ ಪರೋ ಲೋಕೋ ಧರ್ಮಃ ಕಾಮೋಽರ್ಥ ಏವ ಚ ।
ಪುತ್ರೋ ಮುಕ್ತಿಃ ಪರಂ ಜ್ಯೋತಿಸ್ತಾರಕಃ ಸರ್ವದೇಹಿನಾಂ ॥ ೧೧ ॥

---

೭. ಮಕ್ಕಳಿಲ್ಲದವನಿಗೆ ಪರಲೋಕವಿಲ್ಲ. ಪುತ್ರನು ಹುಟ್ಟಿದೊಡನೆ ಯಾವನು ಸ್ನಾನವನ್ನು ಮಾಡುವನೋ ಅವನು ಹತ್ತು ಅಶ್ವಮೇಧಯಾಗಗಳ ಅವಭೃಥಸ್ನಾನಮಾಡಿದ ಪುಣ್ಯವನ್ನು ಪಡೆಯುವನು.

೮-೯. ಪುತ್ರನಿಂದ ಆತ್ಮಪ್ರತಿಷ್ಠೆಯು ಲಭಿಸುವುದು. ಅಮೃತದಿಂದ ದೇವತೆಗಳು ಅಮರ(ಮರಣವಿಲ್ಲದವ) ರಾಗುವರು. ಪುತ್ರನಿಂದ ಬ್ರಾಹ್ಮಣಾದಿಗಳು ಅಮರರಾಗುವರು. ಪುತ್ರನು ದೇವಋಣ ಋಷಿಋಣ ಪಿತೃಋಣಗಳನ್ನು ಬಿಡಿಸಿ ತಂದೆತಾತಂದಿರನ್ನು ಉದ್ಧರಿಸುವನು.

೧೦. ಪುತ್ರನಿಲ್ಲದ ಧನವೆಂತಹುದು ? ಊಟವೆಂತಹುದು ? ಪಾನವೆಂತಹುದು ? ಪುತ್ರನಿಲ್ಲದೆ ಯಾಗಗಳೆಲ್ಲಿಯವು ? ತಪಸ್ಸೆಂತಹುದು ? ಸ್ವರ್ಗಮೋಕ್ಷಗಳು ಪುತ್ರನಿಂದಲೇ ಲಭಿಸುವುವು.

೧೧. ಪುತ್ರನೇ ಪರಲೋಕವು, ಪುತ್ರನೇ ಧರ್ಮಾರ್ಥಕಾಮಮೋಕ್ಷಗಳು, ಪುತ್ರನೇ ಪರಮಾತ್ಮನು ಮಾರ್ಗದರ್ಶಕನು, ಪುತ್ರನೇ ಎಲ್ಲರನ್ನೂ ಉದ್ಧರಿಸುವನು.

ವಿನಾ ಪುತ್ರೇಣ ರಾಜೇಂದ್ರ ಸ್ವರ್ಗಮೋಕ್ಷೌ ಸುದುರ್ಲಭೌ ।
ಪುತ್ರ ಏವ ಪರೋ ಲೋಕೇ ಧರ್ಮಕಾಮಾರ್ಥಸಿದ್ಧಯೇ ॥ ೧೨ ॥

ವಿನಾ ಪುತ್ರೇಣ ಯದ್ದತ್ತಂ ವಿನಾ ಪುತ್ರೇಣ ಯದ್ಧುತಂ ।
ವಿನಾ ಪುತ್ರೇಣ ಯಜ್ಜನ್ಮ ವ್ಯರ್ಥಂ ತದವಭಾತಿ ಮೇ ॥ ೧೩ ॥

ತಸ್ಮಾತ್ಪುತ್ರಸಮಂ ಕಿಂಚಿತ್ಕಾಮ್ಯಂ ನಾಸ್ತಿ ಜಗತ್ರಯೇ ।
ತಚ್ಛ್ರುತ್ವಾ ವಿಸ್ಮಯವಾಂಸ್ತಾವುವಾಚ ನೃಪಃ ಪುನಃ ॥ ೧೪ ॥

॥ ಹರಿಶ್ಚಂದ್ರ ಉವಾಚ ॥

ಕಥಂ ಮೇ ಸ್ಯಾತ್ಸುತೋ ಬ್ರೂತಾಂ ಯತ್ರ ಕ್ವಾಪಿ ಯಥಾತಥಂ ।
ಯೇನ ಕೇನಾಪ್ಯುಪಾಯೇನ ಕೃತ್ವಾ ಕಿಂಚಿತ್ತು ಪೌರುಷಂ ।
ಮಂತ್ರೇಣ ಯಾಗದಾನಾಭ್ಯಾಮುತ್ಪಾದ್ಯೋಽಸೌ ಸುತೋ ಮಯಾ ॥೧೫॥

॥ ಬ್ರಹ್ಮೋವಾಚ ॥

ತಾವೂಚತುರ್ನೃಪಶ್ರೇಷ್ಠಂ ಹರಿಶ್ಚಂದ್ರಂ ಸುತಾರ್ಥಿನಂ ।
ಧ್ಯಾತ್ವಾ ಕ್ಷಣಂ ತಥಾ ಸಮ್ಯಗ್ಗೌತಮೀಂ ಯಾಹಿ ಮಾನದ ॥ ೧೬ ॥

---

೧೨. ಪುತ್ರನಿಲ್ಲದಿದ್ದರೆ ಸ್ವರ್ಗಮೋಕ್ಷಗಳು ಲಭಿಸಲಾರವು. ಧರ್ಮ-ಕಾಮಾರ್ಥಗಳನ್ನು ಸಾಧಿಸಲು ಪುತ್ರನಿಗಿಂತ ಉತ್ತಮವಾದ ಸಾಧನವಿಲ್ಲ.

೧೩. ಪುತ್ರನಿಲ್ಲದವನು ಮಾಡುವ ದಾನವೂ ವ್ಯರ್ಥ, ಹೋಮವೂ ವ್ಯರ್ಥ. ಹೆಚ್ಚೇನು? ಪುತ್ರನಿಲ್ಲದ ಜನ್ಮವೇ ವ್ಯರ್ಥವು.

೧೪. ಆದುದರಿಂದ ಲೋಕದಲ್ಲಿ ಪುತ್ರನಂತಹ ಇಷ್ಟವಸ್ತುವು ಬೇರೊಂದಿಲ್ಲ ಎಂದು ಹೇಳಿದರು. ಅದನ್ನು ಕೇಳಿ ಆಶ್ಚರ್ಯಗೊಂಡು ಹರಿಶ್ಚಂದ್ರನು,

೧೫. ಎಲೈ ಮುನಿಗಳೇ, ನನಗೆ ಪುತ್ರನಾಗುವುದು ಹೇಗೆ? ಯಾವ ಪ್ರಯತ್ನವನ್ನು ಮಾಡಿದರೆ ಪುತ್ರನು ಜನಿಸುವನು? ಯಾವ ಯಾಗದಾನಗಳನ್ನು ಮಾಡಬೇಕು? ಯಾವುದಾದರೊಂದು ಉಪಾಯವನ್ನು ಹೇಳಿ ಎಂದು ಪ್ರಾರ್ಥಿಸಲು,

೧೬. ಆಗಲಾ ನಾರದಪರ್ವತರು ಸ್ವಲ್ಪಹೊತ್ತು ಧ್ಯಾನದೃಷ್ಟಿಯಿಂದ ನೋಡಿ ಪುತ್ರಾಪೇಕ್ಷಿಯಾದಾ ಹರಿಶ್ಚಂದ್ರರಾಜನನ್ನು ಕುರಿತು ಎಲೈ ರಾಜ, ನೀನು ಗೌತಮೀನದಿಗೆ ಹೋಗು.

ತತ್ರಾಪಾಂಪತಿರುತ್ಕೃಷ್ಟಂ ದದಾತಿ ಮನಸೀಪ್ಸಿತಂ ।
ವರುಣಃ ಸರ್ವದಾತಾ ವೈ ಮುನಿಭಿಃ ಪರಿಕೀರ್ತಿತಃ ॥ ೧೭ ॥

ಸ ತು ಪ್ರೀತಃ ಶನೈಃ ಕಾಲೇ ತವ ಪುತ್ರಂ ಪ್ರದಾಸ್ಯತಿ ।
ಏತಚ್ಛ್ರುತ್ವಾ ನೃಪಶ್ರೇಷ್ಠೋ ಮುನಿವಾಕ್ಯಂ ತಥಾಕರೋತ್ ॥ ೧೮ ॥

ತೋಷಯಾಮಾಸ ವರುಣಂ ಗೌತಮೀತೀರಮಾಶ್ರಿತಃ ।
ತತಶ್ಚ ತುಷ್ಟೋ ವರುಣೋ ಹರಿಶ್ಚಂದ್ರಮುವಾಚ ಹ ॥ ೧೯ ॥

॥ ವರುಣ ಉವಾಚ ॥

ಪುತ್ರಂ ದಾಸ್ಯಾಮಿ ತೇ ರಾಜಂಲ್ಲೋಕತ್ರಯವಿಭೂಷಣಂ ।
ಯದಿ ಯಕ್ಷ್ಯಸಿ ತೇನೈವ ತವ ಪುತ್ರೋ ಭವೇದ್ಧ್ರುವಂ ॥ ೨೦ ॥

---

೧೭. ಆ ಗೌತಮೀತೀರದಲ್ಲಿ ವರುಣನು ನಿನಗೆ ಬೇಕಾದ ವರವನ್ನು ಕೊಡುವನು. ವರುಣದೇವನು ಎಲ್ಲವನ್ನೂ ಕೊಡುವನು ಎಂದು ಮುನಿಗಳೂ ಅವನನ್ನು ಹೊಗಳಿಗುವರು. ಅಂತಹ ವರುಣನು ಪ್ರಸನ್ನನಾಗಿ ನಿನಗೆ ಸುಪುತ್ರನನ್ನು ಕರುಣಿಸುವನು ಎಂದು ಹೇಳಿದರು.

೧೮-೧೯. ಪರ್ವತನಾರದರ ಆ ಮಾತನ್ನು ಕೇಳಿ ಹರಿಶ್ಚಂದ್ರನು ಅವರಂತೆ ಗೌತಮೀನದಿಗೆ ಹೋಗಿ ಅಲ್ಲಿ ವರುಣನನ್ನು ಸ್ತುತಿಸಿ ಪ್ರಸನ್ನಗೊಳಿಸಿದನು. ಪ್ರಸನ್ನನಾದಾ ವರುಣನು ಹರಿಶ್ಚಂದ್ರನನ್ನು ಕುರಿತು,.

೨೦. ಎಲೈ ರಾಜ, ನಿನಗೆ ಮೂರುಲೋಕಗಳಿಗೂ ಅಲಂಕಾರಪ್ರಾಯನಾದ ಸುಪುತ್ರನನ್ನು ಕರುಣಿಸುವೆನು. ಆದರೆ ಆ ಕುಮಾರನನ್ನೇ ಪಶುವಾಗಿ ಮಾಡಿ ನರಮೇಧಯಾಗದಿಂದ ನನಗೆ ಹವಿಸ್ಸನ್ನು ಕೊಡಬೇಕು. ಹಾಗೆ ಮಾಡುವುದಾದರೆ ನಿನಗೆ ಪುತ್ರನನ್ನು ಕರುಣಿಸುವೆನು ಎಂದನು.

॥ ಬ್ರಹ್ಮೋವಾಚ ॥

ಹರಿಶ್ಚಂದ್ರೋಽಪಿ ವರುಣಂ ಯಕ್ಷ್ಯೇ ತೇನೇತ್ಯವೋಚತ ।
ತತೋ ಗತ್ವಾ ಹರಿಶ್ಚಂದ್ರಶ್ಚರುಂ ಕೃತ್ವಾ ತು ವಾರುಣಂ ॥ ೨೧ ॥

ಭಾರ್ಯಾಯೈ ನೃಪತಿಃ ಪ್ರಾದಾತ್ತತೋ ಜಾತಃ ಸುತೋ ನೃಪಾತ್ ।
ಜಾತೇ ಪುತ್ರೇ ಅಪಾಮೀಶಃ ಪ್ರೋವಾಚ ವದತಾಂ ವರಃ ॥ ೨೨ ॥

॥ ವರುಣ ಉವಾಚ ॥

ಅದ್ಯೈವ ಪುತ್ರೋ ಯಷ್ಟವ್ಯಃ ಸ್ಮರಸೇ ವಚನಂ ಪುರಾ ॥ ೨೩ ॥

॥ ಬ್ರಹ್ಮೋವಾಚ ॥

ಹರಿಶ್ಚಂದ್ರೋಽಪಿ ವರುಣಂ ಪ್ರೋವಾಚೇದಂ ಕ್ರಮಾಗತಂ ॥ ೨೪ ॥

॥ ಹರಿಶ್ಚಂದ್ರ ಉವಾಚ ॥

ನಿರ್ದಶೋ ಮೇಧ್ಯತಾಂ ಯಾತಿ ಪಶುರ್ಯಕ್ಷ್ಯೇ ತತೋ ಹ್ಯಹಂ ॥ ೨೫ ॥

---

೨೧. ಆಗ ಹರಿಶ್ಚಂದ್ರನು ಆ ಕುಮಾರನಿಂದ ಯಾಗಮಾಡಿ ನಿನ್ನನ್ನು ಆರಾಧಿಸುವೆನು ಎಂದು ಒಪ್ಪಿಕೊಂಡನು. ಆಮೇಲಾ ಹರಿಶ್ಚಂದ್ರನು ಮನೆಗೆ ಬಂದು ವರುಣದೇವತೆಯ ಚರುವನ್ನು ನಿರ್ಮಿಸಿ ಅದನ್ನು ತನ್ನ ಹೆಂಡತಿಗೆ ಕೊಟ್ಟನು. ಅದರಿಂದ ಅವಳಲ್ಲಿ ಪುತ್ರನು ಜನಿಸಿದನು.

೨೨-೨೩. ಪುತ್ರನು ಹುಟ್ಟಿದೊಡನೆ ವರುಣನು ಹರಿಶ್ಚಂದ್ರನ ಬಳಿಗೆ ಬಂದು ಎಲೈ ರಾಜ, ಈಗಲೇ ಈ ಪುತ್ರನಿಂದ ಯಾಗವನ್ನು ಮಾಡು, ನಿನ್ನ ಹಿಂದಿನ ವಚನವು ಜ್ಞಾಪಕದಲ್ಲಿದೆಯಷ್ಟೆ ? ಎಂದನು.

೨೪-೨೫. ಆಗ ಹರಿಶ್ಚಂದ್ರನು ಈ ಶಾಸ್ತ್ರನಿಯಮವನ್ನು ಹೇಳಿದನು ಓ ವರುಣ, ಶೈಶವಾವಸ್ಥೆಯನ್ನು ದಾಟಿದವನೇ ಯಾಗಕ್ಕೆ ಪವಿತ್ರವಾದ ಪಶುವು. ಈ ಪುತ್ರನು ಶೈಶವವನ್ನು ಕಳೆದಮೇಲೆ ಯಾಗಮಾಡುವೆನು ಎನ್ನಲು, ಹರಿಶ್ಚಂದ್ರನ ಆ ಮಾತನ್ನೊಪ್ಪಿ ವರುಣನು ಹೊರಟುಹೋದನು.

॥ ಬ್ರಹ್ಮೋವಾಚ ॥

ತಚ್ಛ್ರುತ್ವಾ ವಚನಂ ರಾಜ್ಞೋ ವರುಣೋಽಗಾತ್ಸ್ವಮಾಲಯಂ ।
ನಿರ್ದಶೇ ಪುನರಭ್ಯೇತ್ಯ ಯಜಸ್ವೇತ್ಯಾಹ ತಂ ನೃಪಂ ॥ ೨೬ ॥

ರಾಜಾಪಿ ವರುಣಂ ಪ್ರಾಹ ನಿರ್ದಂತೋ ನಿಷ್ಫಲಃ ಪಶುಃ ।
ಪಶೋರ್ದಂತೇಷು ಜಾತೇಷು ಏಹಿ ಗಚ್ಛಾಧುನಾಪ್ಪತೇ ॥ ೨೭ ॥

ತಚ್ಛ್ರುತ್ವಾ ರಾಜವಚನಂ ಪುನಃ ಪ್ರಾಯಾದಪಾಂಪತಿಃ ।
ಜಾತೇಷು ಚೈವ ದಂತೇಷು ಸಪ್ತವರ್ಷೇಷು ನಾರದ ॥ ೨೮ ॥

ಪುನರಪ್ಯಾಹ ರಾಜಾನಂ ಯಜಸ್ವೇತಿ ತತೋಽಬ್ರವೀತ್ ।
ರಾಜಾಪಿ ವರುಣಂ ಪ್ರಾಹ ಪತ್ಸ್ಯಂತೀಮೇ ಅಪಾಂಪತೇ ॥ ೨೯ ॥

೨೬-೨೭. ಆ ಶಿಶುವಿಗೆ ಶೈಶವಾವಸ್ಥೆಯು ಕಳೆಯಲು ವರುಣನು ಪುನಃ ಬಂದು ಹರಿಶ್ಚಂದ್ರನಿಗೆ ಯಾಗಮಾಡು ಎಂದನು. ಅದಕ್ಕೆ ಹರಿಶ್ಚಂದ್ರನು ಹಲ್ಲು ಹುಟ್ಟದ ಪಶುವು ಯಾಗಕ್ಕೆ ಯೋಗ್ಯವಲ್ಲ. ಈ ಕುಮಾರನಿಗೆ ಹಲ್ಲುಗಳು ಹುಟ್ಟಿದಮೇಲೆ ಬಾ. ಈಗ ಹೋಗು. ಎಂದು ವರುಣನಿಗೆ ನುಡಿದನು

೨೮. ರಾಜನ ಮಾತಿನಂತೆ ವರುಣನು ಹೊರಟುಹೋದನು. ಮುಂದೆ ಏಳು ವರ್ಷಗಳು ಕಳೆದುವು. ಬಾಲಕನಿಗೆ ಹಲ್ಲುಗಳು ಹುಟ್ಟಿದುವು. ಆಗ ಪುನಃ ವರುಣನು ಬಂದು ಬಾಲಕನಿಗೆ ಹಲ್ಲುಗಳು ಜನಿಸಿರುವುವು. ಈಗ ಯಾಗವನ್ನು ಮಾಡಬಹುದಲ್ಲಾ ಎನಲು,

೨೯. ಆಗ ಹರಿಶ್ಚಂದ್ರನು—ಓ ವರುಣದೇವ, ಕುಮಾರನಿಗೆ ಈಗ ಹಲ್ಲುಗಳು ಹುಟ್ಟಿದರೂ ಪುನಃ ಬೀಳುವುವು. ಆಮೇಲೆ ಸರಿಯಾಗಿ ಹುಟ್ಟುವುವು. ಆಗಬಾ ಯಾಗಮಾಡುವೆನು, ಈಗ ತೆರಳು ಎಂದನು.

ಸಂಪತ್ಸ್ಯಂತಿ ತಥಾ ಚಾನ್ಯೇ ತತೋ ಯಕ್ಷ್ಯೇ ವ್ರಜಾಧುನಾ ।
ಪುನಃ ಪ್ರಾಯಾತ್ಸ ವರುಣಃ ಪುನರ್ದಂತೇಷು ನಾರದ ।
ಯಜಸ್ವೇತಿ ನೃಪಂ ಪ್ರಾಹ ರಾಜಾ ಪ್ರಾಹ ತ್ವಪಾಂಪತಿಂ ॥ ೩೦ ॥

॥ ರಾಜೋವಾಚ ॥

ಯದಾ ತು ಕ್ಷತ್ರಿಯೋ ಯಜ್ಞೇ ಪಶುರ್ಭವತಿ ವಾರಿಪ ।
ಧನುರ್ವೇದಂ ಯದಾ ವೇತ್ತಿ ತದಾ ಸ್ಯಾತ್ಪಶುರುತ್ತಮಃ ॥ ೩೧ ॥

॥ ಬ್ರಹ್ಮೋವಾಚ ॥

ತಚ್ಛ್ರುತ್ವಾ ರಾಜವಚನಂ ವರುಣೋಽಗಾತ್ಸ್ವಮಾಲಯಂ ।
ಯದಾಸ್ತ್ರೇಷು ಚ ಶಸ್ತ್ರೇಷು ಸಮರ್ಥೋಽಭೂತ್ಸ ರೋಹಿತಃ ॥ ೩೨ ॥

ಸರ್ವವೇದೇಷು ಶಾಸ್ತ್ರೇಷು ವೇತ್ತಾಭೂತ್ಸ ತ್ವರಿಂದಮಃ ।
ಯುವರಾಜ್ಯಮನುಪ್ರಾಪ್ತೇ ರೋಹಿತೇ ಷೋಡಶಾಬ್ದಿಕೇ ॥ ೩೩ ॥

---

೩೦. ಆಗ ಪುನಃ ವರುಣನು ಮನೆಗೆ ತೆರಳಿದನು. ಕುಮಾರನಿಗೆ ಹಲ್ಲುಗಳು ಬಿದ್ದು ಪುನಃ ಹುಟ್ಟಿದುವು. ಆಗ ವರುಣನು ಮತ್ತೆ ಬಂದು ಈಗ ಯಾಗ ಮಾಡು ಎಂದನು, ಅದಕ್ಕೆ ಹರಿಶ್ಚಂದ್ರನು

೩೧. ಓ ಜಲಾಧಿಪತಿ, ಸರಿಯಾದ ಕ್ಷತ್ರಿಯನೇ ಯಾಗಕ್ಕೆ ಯೋಗ್ಯ ಪಶುವು. ಆದುದರಿಂದ ಈ ಕುಮಾರನು ಧನುರ್ವೇದವನ್ನಭ್ಯಸಿಸಿ ಕ್ಷತ್ರಿಯನಾದರೆ ಉತ್ತಮಪಶುವಾಗುವನು. ಆಗ ಯಾಗಮಾಡುವೆನು ಎಂದನು.

೩೨–೩೩. ಹರಿಶ್ಚಂದ್ರನ ಆ ಮಾತನ್ನು ಕೇಳಿ ವರುಣನು ಹೊರಟು ಹೋದನು. ಇತ್ತ ಹರಿಶ್ಚಂದ್ರಸುತನಾದ ರೋಹಿತಕುಮಾರನು ಅಸ್ತ್ರಶಸ್ತ್ರಗಳಲ್ಲಿ ಬುದ್ಧಿವಂತನಾದನು, ಸಕಲ ವೇದಶಾಸ್ತ್ರಗಳನ್ನೂ ಅಧ್ಯಯನಮಾಡಿದನು. ಹದಿನಾರುವರುಷದ ತರುಣ ವೀರನಾದ ಆ ರೋಹಿತನನ್ನು ಹರಿಶ್ಚಂದ್ರನು ಯುವರಾಜನನ್ನಾಗಿ ಮಾಡಿದನು.

ಪ್ರೀತಿಮಾನಗಮತ್ತತ್ರ ಯತ್ರ ರಾಜಾ ಸರೋಹಿತಃ ।
ಆಗತ್ಯ ವರುಣಃ ಪ್ರಾಹ ಯಜಸ್ವಾದ್ಯ ಸುತಂ ಸ್ವಕಂ ॥ ೩೪ ॥

ಓಮಿತ್ಯುಕ್ತ್ವಾ ನೃಪವರ ಋತ್ವಿಜಃ ಪ್ರಾಹ ಭೂಪತಿಃ ।
ರೋಹಿತಂ ಚ ಸುತಂ ಜ್ಯೇಷ್ಠಂ ಶೃಣ್ವತೋ ವರುಣಸ್ಯ ಚ ॥ ೩೫ ॥

॥ ಹರಿಶ್ಚಂದ್ರ ಉವಾಚ ॥

ಏಹಿ ಪುತ್ರ ಮಹಾವೀರ ಯಕ್ಷ್ಯೇ ತ್ವಾಂ ವರುಣಾಯ ಹಿ ॥ ೩೬ ॥

॥ ಬ್ರಹ್ಮೋವಾಚ ॥

ಕಿಮೇತದಿತ್ಯಥೋವಾಚ ರೋಹಿತಃ ಪಿತರಂ ಪ್ರತಿ ।
ಪಿತಾಪಿ ತದ್ಯಥಾವೃತ್ತಮಾಚಚಕ್ಷೇ ಸವಿಸ್ತರಂ ।
ರೋಹಿತಃ ಪಿತರಂ ಪ್ರಾಹ ಶೃಣ್ವತೋ ವರುಣಸ್ಯ ಚ ॥ ೩೭ ॥

---

೩೪. ಆಗ ವರುಣನು ಕುತೂಹಲದಿಂದ ಹರಿಶ್ಚಂದ್ರರಾಜನ ಬಳಿಗೆ ಬಂದು ಎಲೈ ರಾಜ, ಈಗಲಾದರೂ ಈ ನಿನ್ನ ಮಗನನ್ನು ಯಾಗಮಾಡು ಎಂದನು.

೩೫. ಆಗಲಿ ಎಂದು ಅಂಗೀಕರಿಸಿ ಹರಿಶ್ಚಂದ್ರನು ವರುಣನೆದುರಿನಲ್ಲಿಯೇ ಋತ್ವಿಜರನ್ನೂ ರೋಹಿತಕುಮಾರನನ್ನೂ ಕುರಿತು,

೩೬. ಎಲೈ ವೀರಕುವರನೇ, ಬಾ ನಿನ್ನನ್ನು ವರುಣನಿಗಾಗಿ ಯಾಗ ಮಾಡುವೆನು ಎಂದನು.

೩೭. ಆಗ ರೋಹಿತಕುಮಾರನು ತಂದೆಯನ್ನು ಕುರಿತು—ಇದೇನು? ಎಂದು ಕೇಳಿದನು. ಹರಿಶ್ಚಂದ್ರನು ಹಿಂದಿನ ವೃತ್ತಾಂತವನ್ನು ಸುತನಿಗೆ ತಿಳಿಸಿದನು.

॥ ರೋಹಿತ ಉವಾಚ ॥

ಅಹಂ ಪೂರ್ವಂ ಮಹಾರಾಜ ಋತ್ವಿಗ್ಭಿಃ ಸಪುರೋಹಿತಃ ।
ವಿಷ್ಣವೇ ಲೋಕನಾಥಾಯ ಯಕ್ಷ್ಯೇಽಹಂ ತ್ವರಿತಂ ಶುಚಿಃ ।
ಪಶುನಾ ವರುಣೇನಾಥ ತದನುಜ್ಞಾತುಮರ್ಹಸಿ ॥ ೩೮ ॥

॥ ಬ್ರಹ್ಮೋವಾಚ ॥

ರೋಹಿತಸ್ಯ ತು ತದ್ವಾಕ್ಯಂ ಶ್ರುತ್ವಾ ವಾರೀಶ್ವರಸ್ತದಾ ।
ಕೋಪೇನ ಮಹತಾವಿಷ್ಟೋ ಜಲೋದರಮಥಾಕರೋತ್ ॥ ೩೯ ॥

ಹರಿಶ್ಚಂದ್ರಸ್ಯ ನೃಪತೇ ರೋಹಿತಃ ಸ ವನಂ ಯಯೌ ।
ಗೃಹೀತ್ವಾ ಸ ಧನುರ್ದಿವ್ಯಂ ರಥಾರೂಢೋ ಗತವ್ಯಥಃ ॥ ೪೦ ॥

ಯತ್ರ ಚಾರಾಧ್ಯ ವರುಣಂ ಹರಿಶ್ಚಂದ್ರೋ ಜನೇಶ್ವರಃ ।
ಗಂಗಾಯಾಂ ಪ್ರಾಪ್ತವಾನ್ಪುತ್ರಂ ತತ್ರಾಗಾತ್ಸೋಽಪಿ ರೋಹಿತಃ ॥ ೪೧ ॥

---

೩೮. ಆಗ ರೋಹಿತಕುಮಾರನು ವರುಣನೆದುರಿನಲ್ಲಿ ತಂದೆಯನ್ನು ಕುರಿತು ಓ ಮಹಾರಾಜ, ಮೊದಲು ನಾನು ಋತ್ವಿಜಪುರೋಹಿತರೊಡನೆ ಲೋಕನಾಥನಾದ ಹರಿಯನ್ನುದ್ದೇಶಿಸಿ ಯಾಗವನ್ನು ಮಾಡುವೆನು. ಆ ಯಾಗಕ್ಕೆ ಈ ವರುಣನೇ ಪಶುವು, ಅದಕ್ಕನುಮತಿಯನ್ನು ಕೊಡು ಎನ್ನಲು,

೩೯. ರೋಹಿತಾಶ್ವನ ಆ ಮಾತನ್ನು ಕೇಳಿ ವರುಣನು ಕೋಪಗೊಂಡು ಹರಿಶ್ಚಂದ್ರನಿಗೆ ಜಲೋದರರೋಗಬರುವಂತೆ ಮಾಡಿದನು.

೪೦. ಆಮೇಲೆ ರೋಹಿತಾಶ್ವನು ಧನಸ್ಸನ್ನು ಧರಿಸಿ ರಥವನ್ನೇರಿ ನಿಶ್ಚಿಂತತೆಯಿಂದ ಕಾಡಿಗೆ ಹೋದನು.

೪೧. ಹಿಂದೆ ಹರಿಶ್ಚಂದ್ರನು ವರುಣನನ್ನು ಆರಾಧಿಸಿ ಪುತ್ರನನ್ನು ಪಡೆದ ಗೌತಮೀ ತೀರಕ್ಕೂ ಆ ರೋಹಿತನು ಹೋಗಿ,

ವ್ಯತೀತಾನ್ಯಥ ವರ್ಷಾಣಿ ಪಂಚಷಷ್ಟೇ ಪ್ರವರ್ತತಿ ।
ತತ್ರ ಸ್ಥಿತ್ವಾ ನೃಪಸುತಃ ಶುಶ್ರಾವ ನೃಪತೇ ರುಜಂ ॥ ೪೨ ॥

ಮಯಾ ಪುತ್ರೇಣ ಜಾತೇನ ಪಿತುರ್ನ್ಯೈ ಕ್ಲೇಶಕಾರಿಣಾ ।
ಕಿಂ ಫಲಂ ಕಿಂನು ಕೃತ್ಯಂ ಸ್ಯಾದಿತ್ಯೇವಂ ಪರ್ಯಚಿಂತಯತ್ ॥ ೪೩ ॥

ತಸ್ಯಾಸ್ತೀರೇ ಋಷೀನ್ಪುಣ್ಯಾನಪಶ್ಯನ್ನೃಪತೇಃ ಸುತಃ ।
ಗಂಗಾತೀರೇ ವರ್ತಮಾನಮಪಶ್ಯದೃಷಿಸತ್ತಮಂ ॥ ೪೪ ॥

ಅಜೀಗರ್ತಮಿತಿ ಖ್ಯಾತಮೃಷೇಸ್ತು ವಯಸಃ ಸುತಂ ।
ತ್ರಿಭಿಃ ಪುತ್ರೈರನುವೃತಂ ಭಾರ್ಯಯಾ ಕ್ಷೀಣವೃತ್ತಿಕಂ ।
ತಂ ದೃಷ್ಟ್ವಾ ನೃಪತೇಃ ಪುತ್ರೋ ನಮಸ್ಕೃತ್ಯೇದಂ ವಚೋಽಬ್ರವೀತ್ ॥ ೪೫ ॥

॥ ರೋಹಿತ ಉವಾಚ ॥
ಕ್ಷೀಣವೃತ್ತಿಃ ಕೃಶಃ ಕಸ್ಮಾದ್ದುರ್ಮನಾ ಇವ ಲಕ್ಷ್ಯಸೇ ॥ ೪೬ ॥

---

೪೨. ಆ ಗೌತಮೀ ತೀರದಲ್ಲಿ ಐದಾರು ವರ್ಷಗಳವರೆಗೆ ವಾಸವಾಗಿದ್ದನು. ಆಗ ಅವನು ಹರಿಶ್ಚಂದ್ರನು ಜಲೋದರ ರೋಗದಿಂದ ವ್ಯಥೆಪಡುತ್ತಿರುವುದನ್ನು ಕೇಳಿ,

೪೩. ತಂದೆಗೆ ಕ್ಲೇಶವನ್ನುಂಟುಮಾಡುವ ನಾನು ಜನಿಸಿ ಏನು ಮಾಡಿದಂತಾಯಿತು? ಯಾವುದನ್ನು ಸಾಧಿಸಿದಂತಾಯಿತು? ಎಂದು ಚಿಂತಿಸುತ್ತಿದ್ದನು

೪೪. ಗೌತಮೀತೀರದಲ್ಲಿ ಅನೇಕ ಋಷಿಗಳು ವಾಸವಾಗಿದ್ದರು. ಅವರಲ್ಲಿ ಅಜೀಗರ್ತನೆಂಬ ಓರ್ವ, ಋಷಿಶ್ರೇಷ್ಠನಿದ್ದನು.

೪೫. ಆ ಮುನಿಯು ವಯಸನೆಂಬ ಮುನಿಯ ಪುತ್ರನು, ಕಡುದರಿದ್ರನಾಗಿದ್ದನು. ಅವನಿಗೆ ಓರ್ವ ಹೆಂಡತಿಯೂ ಮೂರುಮಂದಿ ಮಕ್ಕಳೂ ಇದ್ದರು. ಆ ದರಿದ್ರಮುನಿಯನ್ನು ಕುರಿತು ರೋಹಿತಾಶ್ವನು,

೪೬-೪೭. ಓ ಮುನಿ, ನೀನು ದಾರಿದ್ರ್ಯಾವಸ್ಥೆಯಿಂದ ಬಳಲಿ ಕೊರಗಿ

॥ ಬ್ರಹ್ಮೋವಾಚ ॥

ಅಜೀಗರ್ತೋಽಪಿ ಚೋವಾಚ ರೋಹಿತಂ ನೃಪತೇಃ ಸುತಂ ॥ ೪೭ ॥

॥ ಅಜೀಗರ್ತ ಉವಾಚ ॥

ವರ್ತನಂ ನಾಸ್ತಿ ದೇಹಸ್ಯ ಭೋಕ್ತಾರೋ ಬಹವಶ್ಚ ಮೇ ।
ವಿನಾನ್ನೇನ ಮರಿಷ್ಯಾಮೋ ಬ್ರೂಹಿ ಕಿಂ ಕರವಾಮಹೇ ॥ ೪೮ ॥

॥ ಬ್ರಹ್ಮೋವಾಚ ॥

ತಚ್ಛ್ರುತ್ವಾ ಪುನರಪ್ಯಾಹ ನೃಪಪುತ್ರ ಋಷಿಂ ತದಾ ॥ ೪೯ ॥

॥ ರೋಹಿತ ಉವಾಚ ॥

ತವ ಕಿಂ ವರ್ತತೇ ಚಿತ್ತೇ ತದ್ಬ್ರೂಹಿ ವದತಾಂವರ ॥ ೫೦ ॥

॥ ಅಜೀಗರ್ತ ಉವಾಚ ॥

ಹಿರಣ್ಯಂ ರಜತಂ ಗಾವೋ ಧಾನ್ಯಂ ವಸ್ತ್ರಾದಿಕಂ ನ ಮೇ ।
ವಿದ್ಯತೇ ನೃಪಶಾರ್ದೂಲ ವರ್ತನಂ ನಾಸ್ತಿ ಮೇ ತತಃ ॥ ೫೧ ॥

ವ್ಯಥೆಪಡುತ್ತಿರುವಂತೆ ಕಾಣುವುದು. ಇದಕ್ಕೆ ಕಾರಣವೇನು ? ಎಂದು ಕೇಳಲು ಆಗ ಅಜೀಗರ್ತನು ರಾಜಪುತ್ರನಾದ ರೋಹಿತಾಶ್ವನೊಡನೆ ಇಂತೆಂದನು.

೪೮. ಶರೀರಕ್ಕೆ ಜೀವನವೇ ಇಲ್ಲದಾಗಿದೆ. ಮನೆಯಲ್ಲಿ ಊಟಮಾಡುವವರು ಬಹುಮಂದಿ. ಆಹಾರವಿಲ್ಲದೆ ನಾವು ಸಾಯುತ್ತಿರುವೆವು. ವ್ಯಥೆಪಡದೆ ಮತ್ತೇನುಮಾಡೋಣ ? ಎಂದನು.

೪೯-೫೦. ಅಜೀಗರ್ತನ ಆ ಮಾತನ್ನು ಕೇಳಿ ರೋಹಿತಾಶ್ವನು ಮತ್ತೆ ಅವನನ್ನು ಕುರಿತು ಓ ಮುನಿ, ನಿನ್ನ ಮನಸ್ಸಿನಲ್ಲಿರುವುದೇನು ? ಹೇಳು ಎಂದನು.

೫೧. ಅದಕ್ಕೆ ಅಜೀಗರ್ತನು ಚಿನ್ನ, ಬೆಳ್ಳಿ, ಹಸು, ಧಾನ್ಯ, ವಸ್ತ್ರ ಇವಾವುದೂ ನನ್ನಲ್ಲಿಲ್ಲ, ಆದುದರಿಂದ ನನ್ನ ಜೀವನವೇ ನಡೆಯುತ್ತಿಲ್ಲ.

ಸುತಾ ಮೇ ಸಂತಿ ಭಾರ್ಯಾ ಚ ಅಹಂ ವೈ ಪಂಚಮಸ್ತಥಾ ।
ನೈತೇಷಾಂ ಕತಮಸ್ಯಾಪಿ ಕ್ರೇತಾನ್ನೇನ ನೃಪೋತ್ತಮ ॥ ೫೨ ॥

॥ ರೋಹಿತ ಉವಾಚ ॥
ಕಿಂ ಕ್ರೀಣಾಸಿ ಮಹಾಬುದ್ಧೇಽಜೀಗರ್ತ ಸತ್ಯಮೇವ ಮೇ ।
ವದ ನಾನ್ಯಚ್ಚ ವಕ್ತವ್ಯಂ ವಿಪ್ರಾ ವೈ ಸತ್ಯವಾದಿನಃ ॥ ೫೩ ॥

॥ ಅಜೀಗರ್ತ ಉವಾಚ ॥
ತ್ರಯಾಣಾಮಪಿ ಪುತ್ರಾಣಾಮೇಕಂ ವಾ ಮಾಂ ತಥೈವ ಚ ।
ಭಾರ್ಯಾಂ ವಾಪಿ ಗೃಹಾಣೇಮಾಂ ಕ್ರೀತ್ವಾ ಜೀವಾಮಹೇ ವಯಂ ॥೫೪॥

॥ ರೋಹಿತ ಉವಾಚ ॥
ಕಿಂ ಭಾರ್ಯಯಾ ಮಹಾಬುದ್ಧೇ ಕಿಂ ತ್ವಯಾ ವೃದ್ಧರೂಪಿಣಾ ।
ಯುವಾನಂ ದೇಹಿ ಪುತ್ರಂ ಮೇ ಪುತ್ರಾಣಾಂ ಯಂ ತ್ವಮಿಚ್ಛಸಿ ॥ ೫೫ ॥

---

೫೨. ನನ್ನ ಮನೆಯಲ್ಲಿ ಹೆಂಡಿರುಮಕ್ಕಳು ಸೇರಿ ಐದುಮಂದಿಗಳಿರುವೆವು. ಇವರಲ್ಲಿ ಒಬ್ಬನನ್ನಾದರೂ ಕೊಂಡುಕೊಂಡು ನಮಗೆ ಆಹಾರವನ್ನೊದಗಿಸುವವರಿಲ್ಲ ಎಂದು ವ್ಯಸನಪಟ್ಟನು.

೫೩. ರೋಹಿತನಿಂತೆಂದನು—ಓ ಅಜೀಗರ್ತ, ನೀನು ನಿಜವಾಗಿಯೂ ನಿಮ್ಮಲ್ಲೊಬ್ಬರನ್ನು ಮಾರುವಿಯಾ? ಹೇಳು, ಸುಳ್ಳನ್ನು ಹೇಳಬಾರದು. ಬ್ರಾಹ್ಮಣರು ಸತ್ಯವಾದಿಗಳಷ್ಟೆ?

೫೪. ಅಜೀಗರ್ತನು ಹೇಳಿದನು—ನಾನು ಸತ್ಯವನ್ನೇ ಹೇಳುವೆನು, ಮೂರು ಮಕ್ಕಳಲ್ಲಿ ಒಬ್ಬನನ್ನಾದರೂ ಅಥವಾ ನನ್ನನ್ನಾದರೂ ಇಲ್ಲವೇ ನನ್ನ ಹೆಂಡತಿಯನ್ನಾದರೂ ಕೊಂಡುಕೊ. ಉಳಿದವರು ವಿಕ್ರಯದಿಂದ ಬಂದ ಧನದಿಂದ ಜೀವಿಸುವೆವು ಎನ್ನಲು,

೫೫. ಅದಕ್ಕೆ ರೋಹಿತಾಶ್ವನು—ನಿನ್ನ ಹೆಂಡತಿಯಿಂದಲೂ ಮುದುಕನಾದ ನಿನ್ನಿಂದಲೂ ನನಗೆ ಪ್ರಯೋಜನವಿಲ್ಲ. ಮಕ್ಕಳಲ್ಲಿ ತರುಣನಾದ ಯಾವನನ್ನಾದರೂ ಕೊಡು ಎಂದನು.

॥ ಅಜೀಗರ್ತ ಉವಾಚ ॥

ಜ್ಯೇಷ್ಠಪುತ್ರಂ ಶುನಃಪುಚ್ಛಂ ನಾಹಂ ಕ್ರೀಣಾಮಿ ರೋಹಿತ ।
ಮಾತಾ ಕನೀಯಸಂ ಚಾಪಿ ನ ಕ್ರೀಣಾತಿ ತತೋಽನಯೋಃ ।
ಮಧ್ಯಮಂ ತು ಶುನಃಶೇಪಂ ಕ್ರೀಣಾಮಿ ವದ ತದ್ಧನಂ ॥ ೫೬ ॥

॥ ರೋಹಿತ ಉವಾಚ ॥

ವರುಣಾಯ ಪಶುಃ ಕಲ್ಪ್ಯಃ ಪುರುಷೋ ಗುಣವತ್ತರಃ ।
ಯದಿ ಕ್ರೀಣಾಸಿ ಮೂಲ್ಯಂ ತ್ವಂ ವದ ಸತ್ಯಂ ಮಹಾಮುನೇ ॥ ೫೭ ॥

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ತ್ವಜೀಗರ್ತಃ ಪುತ್ರಮೂಲ್ಯಮಕಲ್ಪಯತ್ ।
ಗವಾಂ ಸಹಸ್ರಂ ಧಾನ್ಯಾನಾಂ ನಿಷ್ಕಾಣಾಂ ಚಾಪಿ ವಾಸಸಾಂ ।
ರಾಜಪುತ್ರ ವರಂ ದೇಹಿ ದಾಸ್ಯಾಮಿ ಸ್ವಸುತಂ ತವ ॥ ೫೮ ॥

---

೫೬. ಅಜೀಗರ್ತನು ಹೇಳಿದನು—ಹಿರಿಯಮಗನಾದ ಶುನಃಪುಚ್ಛನನ್ನು ನಾನು ಕೊಡಲಾರೆನು. ತಾಯಿಯು ಕಿರಿಯಮಗನನ್ನು ಮಾರಲಾರಳು. ಆದುದರಿಂದ ನಡುವಿನವನಾದ ಶುನಶ್ಶೇಫನನ್ನು ವಿಕ್ರಯಿಸುವೆನು. ಧನವೆಷ್ಟನ್ನು ಕೊಡುವೆ? ಹೇಳು ಎಂದು ಕೇಳಿದನು.

೫೭. ರೋಹಿತನು ಹೇಳಿದನು—ಯಾಗದಲ್ಲಿ ವರುಣನಿಗೆ ಗುಣವಂತನಾದ ಪುರುಷನೋರ್ವನನ್ನು ಪಶುವಾಗಿ ನಿವೇದಿಸಬೇಕಾಗಿದೆ. ಓ ಮಹಾಮುನಿ, ನಿಜವಾಗಿ ನೀನು ಪುತ್ರನನ್ನು ವಿಕ್ರಯಿಸುವವನಾದರೆ ನೀನೇ ಬೆಲೆಯನ್ನು ಹೇಳು ಎಂದು ಕೇಳಲು,

೫೮. ಆಗ ಅಜೀಗರ್ತನು—ಸಾವಿರ ಹಸುಗಳು, ಸಾವಿರ ಧಾನ್ಯರಾಶಿಗಳು, ಸಾವಿರ ನಾಣ್ಯಗಳು, ಸಾವಿರ ಬಟ್ಟೆಗಳು ಇವುಗಳನ್ನು ಕೊಟ್ಟರೆ ಮಗನನ್ನು ಕೊಡುವೆನು ಎಂದು ಬೆಲೆಯನ್ನು ಹೇಳಿದನು.

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ರೋಹಿತೋಽಪಿ ಪಾದಾತ್ಸವಸನಂ ಧನಂ ।
ದತ್ವಾ ಜಗಾಮ ಪಿತರಮೃಷಿಪುತ್ರೇಣ ರೋಹಿತಃ ।
ಪಿತ್ರೇ ನಿವೇದಯಾಮಾಸ ಕ್ರಯಕ್ರೀತಮೃಷೇಃ ಸುತಂ ॥ ೫೯ ॥

॥ ರೋಹಿತ ಉವಾಚ ॥

ವರುಣಾಯ ಯಜಸ್ವ ತ್ವಂ ಪಶುನಾ ತ್ವಮರುಗ್ಭವ ॥ ೬೦ ॥

॥ ಬ್ರಹ್ಮೋವಾಚ ॥

ತಥೋವಾಚ ಹರಿಶ್ಚಂದ್ರಃ ಪುತ್ರವಾಕ್ಯಾದನಂತರಂ ॥ ೬೧ ॥

॥ ಹರಿಶ್ಚಂದ್ರ ಉವಾಚ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ರಾಜ್ಞಾ ಪಾಲ್ಯಾ ಇತಿ ಶ್ರುತಿಃ ।
ವಿಶೇಷತಸ್ತು ವರ್ಣಾನಾಂ ಗುರವೋ ಹಿ ದ್ವಿಜೋತ್ತಮಾಃ ॥ ೬೨ ॥

ವಿಷ್ಣೋರಪಿ ಹಿ ಯೇ ಪೂಜ್ಯಾ ಮಾದೃಶಾಃ ಕುತ ಏವ ಹಿ ।
ಅವಜ್ಞಯಾಪಿ ಯೇಷಾಂ ಸ್ಯಾನ್ನೃಪಾಣಾಂ ಸ್ವಕುಲಕ್ಷಯಃ ॥ ೬೩ ॥

---

೫೯. ಆಗಲಿ ಎಂದು ರೋಹಿತನು ಅಜೀಗರ್ತನಿಗೆ ಅವನು ಹೇಳಿದ ಧನಧಾನ್ಯ ವಸ್ತ್ರಗಳನ್ನು ಕೊಟ್ಟು ಋಷಿಪುತ್ರನನ್ನು ಕರೆದುಕೊಂಡು ತಂದೆಯ ಬಳಿಗೆ ಬಂದು ಆ ಋಷಿಕುಮಾರನನ್ನು ತಂದೆಗೆ ಒಪ್ಪಿಸಿ,

೬೦. ಓ ತಂದೆ, ಈ ಪುರುಷಪಶುವಿನಿಂದ ವರುಣನಿಗಾಗಿ ಯಾಗವನ್ನು ಮಾಡು. ನೀನು ರೋಗವನ್ನು ಹೋಗಲಾಡಿಸಿಕೋ, ಎಂದನು.

೬೧-೬೨. ಮಗನ ಮಾತನ್ನು ಕೇಳಿ ಹರಿಶ್ಚಂದ್ರನು ಎಲೈ ಮಗನೇ, ಬ್ರಾಹ್ಮಣಕ್ಷತ್ರಿಯವೈಶ್ಯರನ್ನು ರಾಜರು ಪಾಲಿಸಬೇಕು. ವಿಶೇಷವಾಗಿ ಎಲ್ಲರಿಗೂ ಗುರುಸ್ಥಾನದಲ್ಲಿರುವ ಬ್ರಾಹ್ಮಣರನ್ನು ಪಾಲಿಸಬೇಕು.

೬೩. ಬ್ರಾಹ್ಮಣರು ವಿಷ್ಣುವಿಗೂ ಪೂಜ್ಯರು, ಇನ್ನು ನಮ್ಮಂತಹವರಿಗೆ ಹೇಳುವುದೇನಿದೆ ? ಅವರನ್ನು ಅವಮಾನಪಡಿಸಿದರೆ ರಾಜರ ಕುಲವೇ ನಾಶ ವಾಗುವುದು.

ತಾನ್ಪಶೂಸ್ತ್ವತ್ವಾ ಕೃಪಣಂ ಕಥಂ ರಕ್ಷಿತುಮುತ್ಸಹೇ ।
ಅಹಂ ಚ ಬ್ರಾಹ್ಮಣಂ ಕುರ್ಯಾಂ ಪಶುಂ ನೈತದ್ಧಿ ಯುಜ್ಯತೇ ॥ ೬೪ ॥

ವರಂ ಹಿ ಜಾತು ಮರಣಂ ನ ಕಥಂಚಿದ್ದ್ವಿಜಂ ಪಶುಂ ।
ಕರೋಮಿ ತಸ್ಮಾತ್ಪುತ್ರ ತ್ವಂ ಬ್ರಾಹ್ಮಣೇನ ಸುಖಂ ವ್ರಜ ॥ ೬೫ ॥

॥ ಬ್ರಹ್ಮೋವಾಚ ॥

ಏತಸ್ಮಿನ್ನಂತರೇ ತತ್ರ ವಾಗುವಾಚಾಶರೀರಿಣೀ ॥ ೬೬ ॥

॥ ಆಕಾಶವಾಗುವಾಚ ॥

ಗೌತಮೀಂ ಗಚ್ಛ ರಾಜೇಂದ್ರ ಋತ್ವಿಗ್ಭಿಃ ಸಪುರೋಹಿತಃ ।
ಪಶುನಾ ವಿಪ್ರಪುತ್ರೇಣ ರೋಹಿತೇನ ಸುತೇನ ಚ ॥ ೬೭ ॥

ತ್ವಯಾ ಕಾರ್ಯಃ ಕ್ರತುಶ್ಚೈವ ಶುನಃಶೇಪವಧಂ ವಿನಾ ।
ಕ್ರತುಃ ಪೂರ್ಣೋ ಭವೇತ್ತತ್ರ ತಸ್ಮಾದ್ಯಾಹಿ ಮಹಾಮತೇ ॥ ೬೮ ॥

---

೬೪. ನಾವು ಬದುಕಿರಬೇಕೆಂಬ ದುರಾಸೆಯಿಂದ ಬ್ರಾಹ್ಮಣನನ್ನು ಪಶುವಾಗಿ ಬಲಿಕೊಟ್ಟರೆ ನಮ್ಮ ಕುಲವು ಉಳಿಯುವುದೆಂತು ? ಆಗುವಂತಿದ್ದರೆ ನಾನೇ ಬ್ರಾಹ್ಮಣಪಶುವನ್ನು ಮಾಡುತ್ತಿದ್ದೆನು. ಆದರೆ ಹಾಗೆ ಮಾಡುವುದು ನ್ಯಾಯವಲ್ಲ.

೬೫. ಬ್ರಾಹ್ಮಣನನ್ನು ಪಶುವಾಗಿ ಬಲಿಕೊಡುವುದಕ್ಕಿಂತಲೂ ಮರಣವೇ ಲೇಸು. ಬ್ರಾಹ್ಮಣನನ್ನು ವಧಿಸಲಾರೆನು. ಎಲೈ ಮಗನೇ, ಈ ಬ್ರಾಹ್ಮಣನೊಡನೆ ಸುಖವಾಗಿ ಹೊರಟುಹೋಗು ಎಂದನು.

೬೬–೬೭. ಈ ಸಮಯದಲ್ಲಿ ಅಲ್ಲಿ ಆಕಾಶವಾಣಿಯೊಂದು ಕೇಳಿಸಿತು. ಎಲೈ ರಾಜೇಂದ್ರ, ಋತ್ವಿಜರು ಮತ್ತು ಪುರೋಹಿತರೊಡನೆಯೂ ಈ ಬ್ರಾಹ್ಮಣಪಶು ಮತ್ತು ರೋಹಿತನೊಡನೆಯೂ ಗೌತಮೀನದಿಗೆ ಹೋಗಿ,

೬೮. ಅಲ್ಲಿ ಯಜ್ಞವನ್ನಾರಂಭಿಸು. ಸುನಶ್ಶೇಫನ ವಧೆಯಿಲ್ಲದಂತೆ ಯಜ್ಞವು ನಡೆಯುವುದು. ಯಾಗವೂ ಪೂರ್ತಿಯಾಗುವುದು. ಆದುದರಿಂದ ಅಲ್ಲಿಗೆ ಹೊರಡು ಎಂದಿತು.

॥ ಬ್ರಹ್ಮೋವಾಚ ॥

ತಚ್ಛ್ರುತ್ವಾ ವಚನಂ ಶೀಘ್ರಂ ಗಂಗಾಮಗಾನ್ನೃಪೋತ್ತಮಃ ।
ವಿಶ್ವಾಮಿತ್ರೇಣ ಋಷಿಣಾ ವಸಿಷ್ಠೇನ ಪುರೋಧಸಾ ॥ ೬೯ ॥

ವಾಮದೇವೇನ ಋಷಿಣಾ ತಥಾನ್ಯೈರ್ಮುನಿಭಿಃ ಸಹ ।
ಪ್ರಾಪ್ಯ ಗಂಗಾಂ ಗೌತಮೀಂ ತಾಂ ನರಮೇಧಾಯ ದೀಕ್ಷಿತಃ ॥ ೭೦ ॥

ವೇದಿಮಂಡಪಕುಂಡಾದಿ ಯೂಪಪಶ್ವಾದಿ ಚಾಕರೋತ್ ।
ಕೃತ್ವಾ ಸರ್ವಂ ಯಥಾನ್ಯಾಯಂ ತಸ್ಮಿನ್ಯಜ್ಞೇ ಪ್ರವರ್ತಿತೇ ॥ ೭೧ ॥

ಶುನಃಶೇಪಂ ಪಶುಂ ಯೂಪೇ ನಿಬದ್ಧ್ಯಾಥ ಸಮಂತ್ರಕಂ ।
ವಾರಿಭಿಃ ಪ್ರೋಕ್ಷಿತಂ ದೃಷ್ಟ್ವಾ ವಿಶ್ವಾಮಿತ್ರೋಽಬ್ರವೀದಿದಂ ॥ ೭೨

॥ ವಿಶ್ವಾಮಿತ್ರ ಉವಾಚ ॥

ದೇವಾನೃಷೀನ್ಹರಿಶ್ಚಂದ್ರಂ ರೋಹಿತಂ ಚ ವಿಶೇಷತಃ ।
ಅನುಜಾನನ್ತ್ವಿಮಂ ಸರ್ವೇ ಶುನಃಶೇಪಂ ದ್ವಿಜೋತ್ತಮಂ ॥ ೭೩ ॥

೬೯-೭೦. ಆ ಅಶರೀರವಾಣಿಯನ್ನು ಕೇಳಿ ಕೂಡಲೇ ಹರಿಶ್ಚಂದ್ರನು, ವಿಶ್ವಾಮಿತ್ರಮುನಿ ಮತ್ತು ಪುರೋಹಿತನಾದ ವಸಿಷ್ಠಮುನಿ ವಾಮದೇವ ಮೊದಲಾದ ಋಷಿಗಳೊಡನೆ ಗೌತಮೀನದಿಗೆ ತೆರಳಿ ಅಲ್ಲಿ ನರಮೇಧಯಾಗದ ದೀಕ್ಷೆಯನ್ನು ಕೈಗೊಂಡನು.

೭೧-೭೨. ವೇದಿ, ಮಂಡಪ, ಕುಂಡ ಯೂಪಸ್ತಂಭ ಮುಂತಾದುವುಗಳನ್ನು ವಿಧಿವತ್ತಾಗಿ ಮಾಡಿಸಿದನು. ಶಾಸ್ತ್ರಾನುಸಾರವಾಗಿ ಯಾಗವು ಪ್ರಾರಂಭವಾಯಿತು. ಶುನಶ್ಶೇಫನನ್ನುಮಂತ್ರಪೂರ್ವಕವಾಗಿ ಯೂಪಸ್ತಂಭದಲ್ಲಿ ಕಟ್ಟಿದರು. ಪಶುವಾದ ಅವನನ್ನು ನೀರಿನಿಂದ ಪ್ರೋಕ್ಷಿಸಿದರು. ಆಗ ವಿಶ್ವಾಮಿತ್ರನು—

೭೩. ದೇವತೆಗಳು, ಋಷಿಗಳು, ಹರಿಶ್ಚಂದ್ರ, ರೋಹಿತಾಶ್ವ ಇವರೆಲ್ಲರೂ ಬ್ರಾಹ್ಮಣನಾದ ಶುನಶ್ಶೇಫನು ಯಾಗಪಶುವಾಗಲು ಅನುಮತಿಸಿರಿ,

ಯೇಭ್ಯಸ್ತ್ವಯಂ ಹವಿರ್ದೇಯೋ ದೇವೇಭ್ಯೋಽಯಂ ಪೃಥಕ್ಪೃಥಕ್ ।
ಅನುಜಾನಂತು ತೇ ಸರ್ವೇ ಶುನಃಶೇಪಂ ವಿಶೇಷತಃ ॥ ೭೪ ॥

ವಸಾಭಿರ್ಲೋಮಭಿಸ್ತ್ವಗ್ಭಿರ್ಮಾಂಸೈಃ ಸನ್ಮಂತ್ರಿತೈರ್ಮಖೇ ।
ಅಗ್ನಾ ಹೋಷ್ಯಃ ಪಶುಶ್ಚಾಯಂ ಶುಸಃಶೇಪೋ ದ್ವಿಜೋತ್ತಮಃ ॥ ೭೫ ॥

ಉಪಾಸಿತಾಃ ಸ್ಯುರ್ವಿಪ್ರೇಂದ್ರಾಸ್ತೇ ಸರ್ವೇ ತ್ವನುಮನ್ಯ ಮಾಂ ।
ಗೌತಮೀಂ ಯಾಂತು ವಿಪ್ರೇಂದ್ರಾಃ ಸ್ನಾ ತ್ವಾ ದೇವಾನ್ಪೃಥಕ್ಪೃಥಕ್ ೭೬

ಮಂತ್ರೈಃ ಸ್ತೋತ್ರೈಃ ಸ್ತುವಂತಸ್ತೇ ಮುದಂ ಯಾಂತು ಶಿವೇ ರತಾಃ ।
ಏನಂ ರಕ್ಷಂತು ಮುನಯೋ ದೇವಾಶ್ಚ ಹವಿಷೋ ಭುಜಃ ॥ ೭೭ ॥

॥ ಬ್ರಹ್ಮೋವಾಚ ॥

ತಥೇತ್ಯೂಚುಶ್ಚ ಮುನಯೋ ಮೇನೇ ಚ ನೃಪಸತ್ತಮಃ ।
ತತೋ ಗತ್ವಾ ಶುನಃಶೇಪೋ ಗಂಗಾಂ ತ್ರೈಲೋಕ್ಯಪಾವನೀಂ ॥ ೭೮ ॥

---

೭೪. ಯಾರಾರಿಗೆ ಈ ಶುನಶ್ಶೇಫನನ್ನು ಹವಿಸ್ಸಾಗಿ ಸಮರ್ಪಿಸುವೆವೋ ಆ ದೇವತೆಗಳೆಲ್ಲರೂ ಇವನು ಪಶುವಾಗಲು ಅನುಮತಿಯನ್ನೀಯಲಿ.

೭೫. ಬ್ರಾಹ್ಮಣನಾದ ಈ ಶುನಶ್ಶೇಫನ ಮೇದಸ್ಸುಗಳಿಂದಲೂ ರೋಮಗಳಿಂದಲೂ, ಚರ್ಮಗಳಿಂದಲೂ, ಮಾಂಸಗಳಿಂದಲೂ, ಮಂತ್ರಪೂರ್ವಕವಾಗಿ ಅಗ್ನಿಯಲ್ಲಿ ಹೋಮಮಾಡಬೇಕು.

೭೬-೭೭. ಪೂಜ್ಯರಾದ ವಿಪ್ರರೆಲ್ಲರೂ ನನ್ನ ಮಾತನ್ನು ಮನ್ನಿಸಿ ಗೌತಮೀನದಿಗೆ ಹೋಗಿ, ಅಲ್ಲಿ ಸ್ನಾನಮಾಡಿ ದೇವತೆಗಳನ್ನು ಬೇರೆಬೇರೆಯಾಗಿ ಸ್ತುತಿಸಿ ಈ ಶುನಶ್ಶೇಫನನ್ನು ರಕ್ಷಿಸಿ. ದೇವತೆಗಳೂ ಇವನನ್ನು ರಕ್ಷಿಸಲಿ, ಎಂದನು.

೭೮. ಮುನಿಗಳೂ ಹರಿಶ್ಚಂದ್ರನೂ ರೋಹಿತಾಶ್ವನೂ ವಿಶ್ವಾಮಿತ್ರನ ಮಾತನ್ನಂಗೀಕರಿಸಿ ಶುನಶ್ಶೇಫನೊಡನೆ ಗೌತಮೀನದಿಗೆ ಹೋಗಿ ಅಲ್ಲಿ ಸ್ನಾನ ಮಾಡಿ ಆ ಯಾಗದ ಹವಿರ್ಭಾಗವನ್ನು ತೆಗೆದುಕೊಳ್ಳುವ ದೇವತೆಗಳನ್ನು ಸ್ತುತಿಸಿದರು. ಶುನಶ್ಶೇಫನೂ ಸ್ತುತಿಸಿದನು.

ಸ್ನಾತ್ವಾ ತುಷ್ಟಾವ ತಾನ್ದೇವಾನ್ಸೋsತ್ರ ಪವಿಷ್ಟೋ ಭುಜಃ ।
ತತಸ್ತುಷ್ಟಾಃ ಸುರಗಣಾಃ ಶುನಃಶೇಪಂ ಚ ತೇ ಮುನೇ ।
ಅವದಂತ ಸುರಾಃ ಸರ್ವೇ ವಿಶ್ವಾಮಿತ್ರಸ್ಯ ಶೃಣ್ವತಃ ॥ ೭೯ ॥

॥ ಸುರಾ ಊಚುಃ

ಕ್ರತುಃ ಪೂರ್ಣೋ ಭವತ್ವೇಷ ಶುನಃಶೇಪವಧಂ ವಿನಾ ॥ ೮೦ ॥

॥ ಬ್ರಹ್ಮೋವಾಚ ॥

ವಿಶೇಷೇಣಾಥ ವರುಣಶ್ಚಾವದನ್ನೃಪಸತ್ತಮಂ ।
ತತಃ ಪೂರ್ಣೋsಭವದ್ರಾಜ್ಞೋ ನೃಮೇಧೋ ಲೋಕವಿಶ್ರುತಃ ॥ ೮೧ ॥

ದೇವಾನಾಂ ಚ ಪ್ರಸಾದೇನ ಮುನೀನಾಂ ಚ ಪ್ರಸಾದತಃ
ತೀರ್ಥಸ್ಯ ತು ಪ್ರಸಾದೇನ ರಾಜ್ಞಃ ಪೂರ್ಣೋsಭವತ್ಕ್ರತುಃ ॥ ೮೨ ॥

ವಿಶ್ವಾಮಿತ್ರಃ ಶುನಃಶೇಪಂ ಪೂಜಯಾಮಾಸ ಸಂಸದಿ ।
ಅಕರೋದಾತ್ಮನಃ ಪುತ್ರಂ ಪೂಜಯಿತ್ವಾ ಸುರಾಂತಿಕೇ ॥ ೮೩ ॥

---

೭೯. ಆಗ ದೇವತೆಗಳು ಪ್ರಸನ್ನರಾಗಿ ಶುನಶ್ಶೇಫನನ್ನೂ ಮಿಕ್ಕವರನ್ನೂ ಕುರಿತು ವಿಶ್ವಾಮಿತ್ರನೆದುರಿಗೆ,

೮೦. ಶುನಶ್ಶೇಫನ ವಧೆಯಿಲ್ಲದೆ ಈ ಯಾಗವು ಪೂರ್ಣವಾಗಲಿ, ಎಂದು ಅನುಗ್ರಹಿಸಿದರು.

೮೧. ವಿಶೇಷವಾಗಿ ವರುಣನೂ ಹರಿಶ್ಚಂದ್ರನಿಗೆ ಶುಶ್ಶೇಫವಧವಿಲ್ಲವೆ ಯಜ್ಞವು ಪೂರ್ಣವಾಗುವುದು ಎಂದನು. ಆಮೇಲಾ ನರಮೇಧಯಾಗವು ಪೂರ್ಣವಾಗಿ ನಡೆಯಿತು.

೮೨. ದೇವತೆಗಳ ಮತ್ತು ಮುನಿಗಳ ಅನುಗ್ರಹದಿಂದಲೂ ಗೌತಮಿಾ ತೀರ್ಥದ ಮಹಿಮೆಯಿಂದಲೂ ಹರಿಶ್ಚಂದ್ರರಾಜನ ಆ ಯಾಗವು ಪೂರ್ಣ ವಾಯಿತು.

೮೩–೮೪. ಆಮೇಲೆ ವಿಶ್ವಾಮಿತ್ರನು ಸಭೆಯಲ್ಲಿ ಶುನಶ್ಶೇಫನನ್ನು ಗೌರವಿಸಿ ದೇವತೆಗಳ ಸಾಕ್ಷಿಯಾಗಿ ಅವನನ್ನು ತನ್ನ ಹಿರಿಯಮಗನನ್ನಾಗಿ

ಜ್ಯೇಷ್ಠಂ ಚಕಾರ ಪುತ್ರಾಣಾಮಾತ್ಮನಃ ಸ ತು ಕೌಶಿಕಃ ।
ನ ಮೇನಿರೇ ಯೇ ಚ ಪುತ್ರಾ ವಿಶ್ವಾಮಿತ್ರಸ್ಯ ಧೀಮತಃ ॥ ೮೪ ॥

ಶುನಃಶೇಪಸ್ಯ ಚ ಜ್ಯೈಷ್ಠ್ಯಂ ತಾಞ್ಛಶಾಪ ಸ ಕೌಶಿಕಃ ।
ಜ್ಯೈಷ್ಠ್ಯಂ ಯೇ ಮೇನಿರೇ ಪುತ್ರಾಃ ಪೂಜಯಾಮಾಸ ತಾನ್ಸುತಾನ್॥ ೮೫ ॥

ವರೇಣ ಮುನಿಶಾರ್ದೂಲಸ್ತದೇತತ್ಕಥಿತಂ ಮಯಾ ।
ಏತತ್ಸರ್ವಂ ಯತ್ರ ಜಾತಂ ಗೌತಮ್ಯಾ ದಕ್ಷಿಣೇ ತಟೇ ॥ ೮೬ ॥

ತತ್ರ ತೀರ್ಥಾನಿ ಪುಣ್ಯಾನಿ ವಿಖ್ಯಾತಾನಿ ಸುರಾದಿಭಿಃ ।
ಬಹೂನಿ ತೇಷಾಂ ನಾಮಾನಿ ಮತ್ತಃ ಶೃಣು ಮಹಾಮತೇ ॥ ೮೭ ॥

ಹರಿಶ್ಚಂದ್ರಂ ಶುನಃಶೇಪಂ ವಿಶ್ವಾಮಿತ್ರಂ ಸರೋಹಿತಂ ।
ಇತ್ಯಾದ್ಯಷ್ಟ ಸಹಸ್ರಾಣಿ ತೀರ್ಥಾನ್ಯತ್ರ ಚತುರ್ದಶ ॥ ೮೮ ॥

ಸ್ವೀಕರಿಸಿದನು, ಆದರೆ ಅವನ ಮಿಕ್ಕ ಕೆಲವರು ಮಕ್ಕಳು ಶುನಶ್ಶೇಫನ ಹಿರಿಯ ತನವನ್ನು ಒಪ್ಪಲಿಲ್ಲ.

೮೫. ಶುನಶ್ಶೇಫನ ಹಿರಿಯತನವನ್ನು ಒಪ್ಪದ ಮಕ್ಕಳನ್ನು ಆ ವಿಶ್ವಾಮಿತ್ರನು ಶಪಿಸಿದನು. ಹಿರಿಯತನವನ್ನೊಪ್ಪಿದ ಮಕ್ಕಳನ್ನು ಪ್ರಶಂಸಿಸಿ ಅವರಿಗೆ ವರವನ್ನನುಗ್ರಹಿಸಿ ಆದರಿಸಿದನು.

೮೬-೮೭. ಎಲೈ ನಾರದ, ಹೀಗೆ ನಿನಗೆ ನರಮೇಧಯಾಗದ ಚರಿತೆಯನ್ನು ಹೇಳಿರುವೆನು. ಇದೆಲ್ಲವೂ ನಡೆದ ಗೌತಮೀನದಿಯ ದಕ್ಷಿಣತೀರದಲ್ಲಿ ಅನೇಕತೀರ್ಥಗಳಾದುವು. ಅವುಗಳಲ್ಲಿ ಮುಖ್ಯವಾದ ಕೆಲವು ತೀರ್ಥಗಳ ಹೆಸರನ್ನು ಹೇಳುವೆನು.

೮೮. ಹರಿಶ್ಚಂದ್ರತೀರ್ಥ, ಶುನಶ್ಶೇಫತೀರ್ಥ, ವಿಶ್ವಾಮಿತ್ರತೀರ್ಥ, ರೋಹಿತತೀರ್ಥ ಮೊದಲಾದ ಎಂಟುಸಾವಿರದ ಹದಿನಾಲ್ಕುತೀರ್ಥಗಳು ಆ ಗೌತಮೀತೀರದಲ್ಲಿರುವುವು.

ತೇಷು ಸ್ನಾನಂ ಚ ದಾನಂ ಚ ನರಮೇಧಫಲಪ್ರದಂ ।
ಆಖ್ಯಾತಂ ಚಾಸ್ಯ ಮಾಹಾತ್ಮ್ಯಂ ತೀರ್ಥಸ್ಯ ಮುನಿಸತ್ತಮ ॥ ೮೯ ॥

ಯಃ ಪಠೇಚ್ಛಾವಯೇದ್ವಾಽಪಿ ಶೃಣುಯಾದ್ವಾಽಪಿ ಭಕ್ತಿತಃ ।
ಅಪುತ್ರಃ ಪುತ್ರಮಾಪ್ನೋತಿ ಯಚ್ಚಾನ್ಯನ್ಮನಸಃ ಪ್ರಿಯಂ ॥ ೯೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ವಿಶ್ವಾಮಿತ್ರಾದಿ ದ್ವಾವಿಂಶತಿಸಹಸ್ರತೀರ್ಥವರ್ಣನಂ ನಾಮ
ಚತುರಧಿಕಶತತಮೋಽಧ್ಯಾಯಃ

---

೮೯. ಆ ತೀರ್ಥಗಳಲ್ಲಿ ಸ್ನಾನದಾನಗಳನ್ನು ಮಾಡಿದರೆ ನರಮೇಧ ಯಾಗದ ಫಲವು ಲಭಿಸುವುದು. ಹೀಗೆ ಈ ತೀರ್ಥದ ಮಾಹಾತ್ಮ್ಯವನ್ನು ಹೇಳಿರುವೆನು.

೯೦. ಈ ಮಾಹಾತ್ಮ್ಯವನ್ನು ಶ್ರದ್ಧೆಯಿಂದ ಕೇಳಿದರೂ, ಹೇಳಿದರೂ ಹೇಳಿಸಿದರೂ ಪುತ್ರನಿಲ್ಲದವನಿಗೆ ಪುತ್ರನು ಜನಿಸುವನು. ಮಿಕ್ಕ ಇಷ್ಟಾರ್ಥ ಗಳೆಲ್ಲವೂ ಸಿದ್ಧಿಸುವುವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ವಿಶ್ವಾಮಿತ್ರತೀರ್ಥವೇ ಮೊದಲಾದ ಇಪ್ಪತ್ತೆರಡು
ಸಹಸ್ರತೀರ್ಥಗಳ ವರ್ಣನವೆಂಬ ನೂರನಾಲ್ಕನೆಯ ಅಧ್ಯಾಯವು
ಮುಗಿದುದು.

ಗೌತಮೀಮಾಹಾತ್ಮೆಯಲ್ಲಿ ಮೂವತ್ತೈದನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಪಂಚಾಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಸೋಮತೀರ್ಥಮಿತಿ ಖ್ಯಾತಂ ಪಿತೄಣಾಂ ಪ್ರೀತಿವರ್ಧನಂ ।
ತತ್ರ ವೃತ್ತಂ ಮಹಾಪುಣ್ಯಂ ಶೃಣು ಯತ್ನೇನ ನಾರದ ॥ ೧ ॥

ಸೋಮೋ ರಾಜಾಽಮೃತಮಯೋ ಗಂಧರ್ವಾಣಾಂ ಪುರಾಽಭವತ್ ।
ನ ದೇವಾನಾಂ ತದಾ ದೇವಾ ಮಾಮಭ್ಯೇತ್ಯೇದಮಬ್ರುವನ್ ॥ ೨ ॥

ನೂರೈದನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಸೋಮತೀರ್ಥವೆಂಬ ಪಿತೃಗಳಿಗೆ ಪ್ರಿಯವಾದ ತೀರ್ಥವೊಂದಿರುವುದು. ಅದರ ಮಹಾಪುಣ್ಯಕರವಾದ ಮಾಹಾತ್ಮ್ಯವನ್ನು ಹೇಳುವೆನು, ಶ್ರದ್ಧೆಯಿಂದ ಕೇಳು.

೨. ಅಮೃತಮಯನಾದ ಚಂದ್ರನು ಒಮ್ಮೆ ಗಂಧರ್ವರ ಪಕ್ಷಕ್ಕೆ ಸೇರಿದ್ದನು. ದೇವತೆಗಳ ಪಕ್ಷಕ್ಕಿರಲಿಲ್ಲ. ಆಗ ದೇವತೆಗಳು ನನ್ನ ಬಳಿಗೆ ಬಂದು,

॥ ದೇವಾ ಊಚುಃ ॥
ಗಂಧರ್ವೈರಾಹೃತಃ ಸೋಮೋ ದೇವಾನಾಂ ಪ್ರಾಣದಃ ಪುರಾ ।
ತಮುಧ್ಯಾಯನ್ಸುರಗಣಾ ಋಷಯಸ್ತ್ವತಿದುಃಖಿತಾಃ ।
ಯಥಾ ಸ್ಯಾತ್ಸೋಮೋ ಹ್ಯಸ್ಮಾಕಂ ತಥಾ ನೀತಿರ್ವಿಧೀಯತಾಂ ॥ ೩ ॥

॥ ಬ್ರಹ್ಮೋವಾಚ ॥
ತತ್ರ ವಾಗ್ಬಿಬುಧಾನಾಹ ಗಂಧರ್ವಾಃ ಸ್ತ್ರೀಷು ಕಾಮುಕಾಃ ।
ತೇಭ್ಯೋ ದತ್ವ್ವಾಥ ಮಾಂ ದೇವಾಃ ಸೋಮಮಾಹರ್ತುಮರ್ಹಥ ॥ ೪ ॥

ವಾಚಂ ಪ್ರತ್ಯೂಚುರಮರಾಸ್ತ್ವಾಂ ದಾತುಂ ನ ಕ್ಷಮಾ ವಯಂ ।
ವಿನಾ ತೇನಾಪಿ ನ ಸ್ಥಾತುಂ ಶಕ್ಯಂ ನೈವ ತ್ವಯಾ ವಿನಾ ॥ ೫ ॥

ಪುನರ್ವಾಗಬ್ರವೀದ್ದೇವಾನ್ಪುನರೇಷ್ಯಾಮ್ಯಹಂ ತ್ವಿಹ ।
ಅತ್ರ ಬುದ್ಧಿರ್ವಿಧಾತವ್ಯಾ ಕ್ರಿಯತಾಂ ಕ್ರತುರುತ್ತಮಃ ॥ ೬ ॥

---

೩. ಓ ಬ್ರಹ್ಮದೇವ, ನಮಗೆ ಹಿಂದೆ ಅಮೃತವನ್ನು ಕೊಟ್ಟು ಸಲಹು ತ್ತಿದ್ದ ಚಂದ್ರನು ಇಂದು ಗಂಧರ್ವರಿಂದ ಅಪಹರಿಸಲ್ಪಟ್ಟಿರುವನು. ಆ ಅಮೃತ ಕಿರಣನನ್ನು ಚಿಂತಿಸುತ್ತಾ ದೇವತೆಗಳೂ, ಮುನಿಗಳೂ ದುಃಖಿಸುತ್ತಿರುವರು. ಚಂದ್ರನು ನಮ್ಮ ಭಾಗಕ್ಕೆ ಬರುವಂತೆ ಏನಾದರೊಂದುಪಾಯವನ್ನು ಮಾಡು ಎಂದರು.

೪. ಆಗ ಸರಸ್ವತಿಯು ದೇವತೆಗಳಿಗೆ—ಗಂಧರ್ವರು ಸ್ತ್ರೀಕಾಮುಕರು, ಆದುದರಿಂದ ಸ್ತ್ರೀಯಾದ ನನ್ನನ್ನು ಆ ಗಂಧರ್ವರಿಗೆಕೊಟ್ಟು ಚಂದ್ರನನ್ನು ಕರೆತನ್ನಿರಿ ಎಂದು ಹೇಳಿದಳು.

೫. ಆಗ ದೇವತೆಗಳು ಸರಸ್ವತಿಯನ್ನು ಕುರಿತು—ಓ ದೇವಿ, ವಿದ್ಯಾಭಿ ಮಾನಿಯಾದ ನಿನ್ನನ್ನು ನಾವು ಕೊಡಲಾರೆವು. ಒಂದುವೇಳೆ ಚಂದ್ರನಿಲ್ಲ ದಿದ್ದರೂ ಜೀವಿಸಬಹುದು, ಆದರೆ ನೀನಿಲ್ಲದಿದ್ದರೆ ಜೀವಿಸಲಾರೆವು ಎನ್ನಲು,

೬. ಆಗ ಸರಸ್ವತಿಯು ಪುನಃ ಇಂತೆಂದಳು—ಎಲೈ ದೇವತೆಗಳೇ, ನಾನು ಪುನಃ ನಿಮಲ್ಲಿಗೇ ಬರುವೆನು. ಆದರೆ ಅದಕ್ಕೆ ತಕ್ಕ ಉಪಾಯವನ್ನು ಮಾಡಿ. ಗೌತಮೀನದಿಯ ದಕ್ಷಿಣ ತೀರದಲ್ಲಿ ಯಾಗವೊಂದನ್ನು ಮಾಡಿ.

ಗೌತಮ್ಯಾ ದಕ್ಷಿಣೇ ತೀರೇ ಭವೇದ್ದೇವಾಗಮೋ ಯದಿ ।
ಮುಖಂ ತು ವಿಷಯಂ ಕೃತ್ವಾ ಆಯಾಂತು ಸುರಸತ್ತಮಾಃ ॥ ೭ ॥

ಗಂಧರ್ವಾಃ ಸ್ತ್ರೀಪ್ರಿಯಾ ನಿತ್ಯಂ ಪಣಧ್ವಂ ತಂ ಮಯಾ ಸಹ ।
ತಥೇತ್ಯುಕ್ತ್ವಾ ಸುರಗಣಾಃ ಸರಸ್ವತ್ಯಾ ವಚಃಸ್ಥಿತಾಃ ॥ ೮ ॥

ದೇವದೂತೈಃ ಪೃಥಗ್ದೇವಾನ್ಯಕ್ಷಾನ್ಗಂಧರ್ವಪನ್ನಗಾನ್ ।
ಆಹ್ವಾನಂ ಚಕ್ರಿರೇ ತತ್ರ ಪುಣ್ಯೇ ದೇವಗಿರೌ ತದಾ ॥ ೯ ॥

ತತೋ ದೇವಗಿರಿರ್ನಾಮ ಪರ್ವತಸ್ಯಾಭವನ್ಮುನೇ ।
ತತ್ರಾಽಗಮನ್ಸುರಗಣಾ ಗಂಧರ್ವಾ ಯಕ್ಷಕಿನ್ನರಾಃ ॥ ೧೦ ॥

ದೇವಾಃ ಸಿದ್ಧಾಶ್ಚ ಋಷಯಸ್ತಥಾಽಷ್ಟೌ ದೇವಯೋನಯಃ ।
ಋಷಿಭಿರ್ಗೌತಮೀತೀರೇ ಕ್ರಿಯಮಾಣೇ ಮಹಾಧ್ವರೇ ॥ ೧೧ ॥

---

೭. ಆ ಯಾಗಕ್ಕೆ ದೇವಗಂಧರ್ವರೆಲ್ಲರೂ ಬರುವರು. ಆಗ ನೀವು ಸ್ತ್ರೀಕಾಮುಕರಾದ ಗಂಧರ್ವರನ್ನು ಕುರಿತು ಈ ಯಾಗಕ್ಕೆ ಚಂದ್ರನು ಅವಶ್ಯವಾಗಿ ಬೇಕಾಗಿದೆ, ಈ ಸ್ತ್ರೀಯನ್ನು ತೆಗೆದುಕೊಂಡು ಬದಲಾಗಿ ಚಂದ್ರನನ್ನು ಕೊಡಿ ಎಂದು ಕೇಳಿರಿ, ಎಂದಳು.

೮-೯. ಆಗ ದೇವತೆಗಳು ಸರಸ್ವತಿಯ ಮಾತನ್ನೊಪ್ಪಿ ಯಜ್ಞಸಿದ್ಧತೆಗಳನ್ನು ಮಾಡಿದರು. ದೇವದೂತರನ್ನು ಕಳುಹಿಸಿ ದೇವನಾಯಕರು, ಯಕ್ಷರು ಸರ್ಪಗಳು, ಗಂಧರ್ವರು ಮೊದಲಾದವರೆಲ್ಲರನ್ನೂ ಆ ಯಜ್ಞಕ್ಕೆ ಆಹ್ವಾನಿಸಿದರು.

೧೦. ದೇವಗಿರಿಯಲ್ಲಿ ಯಾಗವು ಪ್ರಾರಂಭವಾಯಿತು. ಅಲ್ಲಿಗೆ ದೇವತೆಗಳು, ಗಂಧರ್ವರು, ಯಕ್ಷರು, ಸಿದ್ಧರು, ಕಿನ್ನರರು, ದೇವಮುನಿಗಳು ಮೊದಲಾದವರೂ ಎಂಟುಬಗೆಯಾದ*ಉಪದೇವಪಂಗಡದವರೂ ಆ ಗಿರಿಗೆ ಬಂದರು.

೧೧-೧೨. ಋಷಿಗಳು ಆ ದೇವಗಿರಿಯಲ್ಲಿ ಗೌತಮೀತೀರದಲ್ಲಿ ಆ

ತತ್ರ ದೇವೈಃ ಪರಿವೃತಃ ಸಪಸ್ತ್ರಾಕ್ಷೋಽಭ್ಯಭಾಷತ । ॥ ೧೨ ॥

॥ ಇಂದ್ರ ಉವಾಚ ॥

ಗಂಧರ್ವಾನಥ ಸಂಪೂಜ್ಯ ಸರಸ್ವತ್ಯಾಃ ಸಮೀಪತಃ ।
ಸರಸ್ವತ್ಯಾ ಪಣಧ್ವಂ ನೋ ಯುಷ್ಮಾಕಮನುವ್ರತಾತ್ಮನಾ ॥ ೧೩ ॥

॥ ಬ್ರಹ್ಮೋವಾಚ ॥

ತಚ್ಛಕ್ರವಚನಾಚ್ಛ್ರೇ ವೈ ಗಂಧರ್ವಾಃ ಸ್ತ್ರೀಷು ಕಾಮುಕಾಃ ।
ಸೋಮಂ ದತ್ವಾ ಸುರೇಭ್ಯಸ್ತು ಜಗೃಹುಸ್ತಾಂ ಸರಸ್ವತೀಂ ॥ ೧೪ ॥

ಸೋಮೋಽಭವಚ್ಚಾಮರಾಣಾಂ ಗಂಧರ್ವಾಣಾಂ ಸರಸ್ವತೀ ।
ಅವಸತ್ತತ್ರ ವಾಗೀಶಾ ತಥಾಽಪಿ ಚ ಸುರಾಂತಿಕೇ ॥ ೧೫ ॥

ಆಯಾತಿ ಚ ರಹೋ ನಿತ್ಯಮುಪಾಂಶು ಕ್ರಿಯತಾಮಿತಿ ।
ಅತ ಏವ ಹಿ ಸೋಮಸ್ಯ ಕ್ರಯೋ ಭವತಿ ನಾರದ ॥ ೧೬ ॥

ಮಹಾಯಾಗವನ್ನು ಪ್ರಾರಂಭಿಸಲು ಆಗ ಇಂದ್ರನು ದೇವತೆಗಳೊಡನೆ ಗಂಧರ್ವರನ್ನು ಸತ್ಕರಿಸಿ ಸರಸ್ವತಿಯ ಎದುರಿಗೆ,

೧೩. ಎಲೈ ಗಂಧರ್ವರೇ, ನಿಮ್ಮ ಚಂದ್ರನು ಈ ಯಾಗಕ್ಕೆ ಬೇಕಾಗಿದೆ. ಈ ನಮ್ಮ ಸರಸ್ವತಿಯನ್ನು ತೆಗೆದುಕೊಂಡು ನಿಮ್ಮ ಚಂದ್ರನನ್ನು ಕೊಡಿ ಎಂದನು.

೧೪. ಸ್ವಭಾವವಾಗಿ ಸ್ತ್ರೀಕಾಮುಕರಾದ ಗಂಧರ್ವರು ಇಂದ್ರನ ಮಾತನ್ನು ಕೇಳಿ ಸರಸ್ವತಿಯನ್ನು ತೆಗೆದುಕೊಂಡು ಚಂದ್ರನನ್ನು ಕೊಟ್ಟರು.

೧೫. ಅಂದಿನಿಂದಲೂ ಸೋಮನು ದೇವತೆಗಳಿಗಾದನು. ಗಂಧರ್ವರಲ್ಲಿ ಸರಸ್ವತಿಯು ನೆಲಸಿದಳು. ಆದರೂ ಆ ದೇವಿಯು ರಹಸ್ಯವಾಗಿ ದೇವತೆಗಳಲ್ಲಿಗೆ ನಿತ್ಯವೂ ಬರುವಳು, ಆದುದರಿಂದ ಗಂಧರ್ವರಿಗೆ ಸರಸ್ವತಿಯಿಂದ ಯಾವ ಉಪಯೋಗವೂ ಆಗಲಿಲ್ಲ.

೧೬. ಆದುದರಿಂದಲೇ ಯಾಗದಲ್ಲಿ ಸೋಮಲತೆಯನ್ನು ವಿಕ್ರಯಿಸುವರು. ಆ ವಿಕ್ರಯವೂ ರಹಸ್ಯವಾಗಿಯೇ ನಡೆಯಬೇಕು, ಮೆಲ್ಲಗೆ ವಿಕ್ರಯಣ ಮಂತ್ರವನ್ನು ಹೇಳಬೇಕು.

ಉಪಾಂಶುನಾ ವರ್ತಿತವ್ಯಂ ಸೋಮಕ್ರಯಣ ಏವ ಹಿ ।
ತತೋಽಭವದ್ದೇವತಾನಾಂ ಸೋಮಶ್ಚಾಪಿ ಸರಸ್ವತೀ ॥ ೧೭ ॥

ಗಂಧರ್ವಾಣಾಂ ನೈವ ಸೋಮೋ ನೈವಾಽಸೀಚ್ಚ ಸರಸ್ವತೀ ।
ತತ್ರಾಗಮನ್ಸರ್ವ ಏವ ಸೋಮಾರ್ಥಂ ಗೌತಮೀತಟಂ ॥ ೧೮ ॥

ಗಾವೋ ದೇವಾಃ ಪರ್ವತಾ ಯಕ್ಷರಕ್ಷಾಃ
ಸಿದ್ಧಾಃ ಸಾಧ್ಯಾ ಮುನಯೋ ಗುಹ್ಯಕಾಶ್ಚ ।
ಗಂಧರ್ವಾಸ್ತೇ ಮರುತಃ ಪನ್ನಗಾಶ್ಚ
ಸರ್ವೌಷಧ್ಯೋ ಮಾತರೋ ಲೋಕಪಾಲಾಃ ।
ರುದ್ರಾದಿತ್ಯಾ ವಸವಶ್ಚಾಶ್ವಿನೌ ಚ
ಯೇಽನ್ಯೇ ದೇವಾ ಯಜ್ಞಭಾಗಸ್ಯ ಯೋಗ್ಯಾಃ ॥ ೧೯ ॥

ಪಂಚವಿಂಶತಿನದ್ಯಸ್ತು ಗಂಗಾಯಾಂ ಸಂಗತಾ ಮುನೇ ।
ಪೂರ್ಣಾಹುತಿರ್ಯತ್ರ ದತ್ವಾ ಪೂರ್ಣಾಖ್ಯಾನಂ ತದುಚ್ಯತೇ ॥ ೨೦ ॥

---

೧೭. ಹೀಗಾದುದರಿಂದ ಸೋಮನೂ ಸರಸ್ವತಿಯೂ ದೇವತೆಗಳ ಪಾಲಿಗೇ ಉಳಿದರು. ಗಂಧರ್ವರಿಗೆ ಸರಸ್ವತಿಯಿಂದ ಉಪಕಾರವೂ ಆಗಲಿಲ್ಲ, ಚಂದ್ರನೂ ಸಿಗಲಿಲ್ಲ.

೧೮-೧೯. ಆ ದೇವಯಾಗಕ್ಕಾಗಿ ದೇವಗಿರಿಯಲ್ಲಿನ ಗೌತಮೀತೀರಕ್ಕೆ ಗೋವುಗಳು, ದೇವತೆಗಳು, ಪರ್ವತಗಳು, ಯಕ್ಷರು, ರಾಕ್ಷಸರು, ಸಿದ್ಧರು, ಸಾಧ್ಯರು, ಮುನಿಗಳು, ಗುಹ್ಯಕರು, ಗಂಧರ್ವರು, ಮರುತ್ತುಗಳು, ಸರ್ಪಗಳು, ಓಷಧಿಗಳು, ಮಾತೃಕೆಯರು, ಲೋಕಪಾಲಕರು, ರುದ್ರರು, ಆದಿತ್ಯರು ವಸುಗಳು, ಅಶ್ವಿನೀದೇವತೆಗಳು ಮೊದಲಾದವರೆಲ್ಲರೂ ಹವಿರ್ಭಾಗವನ್ನು ತೆಗೆದುಕೊಳ್ಳಲು ಬಂದಿದ್ದರು.

೨೦. ಆ ಸ್ಥಳದಲ್ಲಿ ಆಗ ಇಪ್ಪತ್ತೈದು ನದಿಗಳಾಗಿ ಗೌತಮೀಯನ್ನು ಸೇರಿದುವು. ಪುರ್ಣಾಹುತಿಯನ್ನು ಕೊಟ್ಟ ಸ್ಥಳದಲ್ಲಿ ಜನಿಸಿದುದಕ್ಕೆ ಪೂರ್ಣಾನದಿಯೆಂದು ಹೆಸರು.

ಗೌತಮ್ಯಾಂ ಸಂಗತಾ ಯಾಸ್ತು ಸರ್ವಾಸ್ತಾಃ ಪಿ ಯುಧೋದಿತಾಃ ।
ತನ್ನಾಮಧೇಯತೀರ್ಥಾನಿ ಸಂಕ್ಷೇಪಾಚ್ಛೃಣು ನಾರದ ॥ ೨೧ ॥

ಸೋಮತೀರ್ಥಂ ಚ ಗಾಂಧರ್ವಂ ದೇವತೀರ್ಥಮತಃ ಪರಂ ।
ಪೂರ್ಣಾತೀರ್ಥಂ ತತಃ ಶಾಲಂ ಶ್ರೀಪರ್ಣಾಸಂಗಮಂ ತಥಾ ॥ ೨೨ ॥

ಸ್ವಾಗತಾಸಂಗಮಂ ಪುಣ್ಯಂ ಕುಸುಮಾಯಾಶ್ಚ ಸಂಗಮಂ ।
ಪುಷ್ಟಿಸಂಗಮಮಾಖ್ಯಾತಂ ಕರ್ಣಿಕಾಸಂಗಮಂ ಶುಭಂ ॥ ೨೩ ॥

ವೈಷ್ಣವೀಸಂಗಮಶ್ಚೈವ ಕೃಶರಾಸಂಗಮಸ್ತಥಾ ।
ವಾಸವೀಸಂಗಮಶ್ಚೈವ ಶಿವಶಯ್ಯಾ ತಥಾ ಶಿಖೀ ॥ ೨೪ ॥

ಕುಸುಂಭಿಕಾ ಉಪಾರಥ್ಯಾ ಶಾಂತಿಜಾ ದೇವಜಾ ತದಾ ।
ಅಜೋ ವೃದ್ಧಃ ಸುರೋ ಭದ್ರೋ ಗೌತಮ್ಯಾ ಸಹ ಸಂಗತಾಃ ॥ ೨೫ ॥

ಏತೇ ಚಾನ್ಯೇ ಚ ಬಹವೋ ನದೀನದಸಹಾಯಗಾಃ ।
ಪೃಥಿವ್ಯಾಂ ಯಾನಿ ತೀರ್ಥಾನಿ ಹ್ಯಗಮನ್ದೇವಪರ್ವತೇ ॥ ೨೬ ॥

---

೨೧. ಗೌತಮೀನದಿಗೆ ಆ ನದಿಗಳು ಸೇರಿದ ಸ್ಥಳದಲ್ಲಿ ಸಾವಿರಾರು ತೀರ್ಥಗಳಾಗಿರುವುವು. ಸಂಕ್ಷೇಪವಾಗಿ ಕೆಲವು ತೀರ್ಥಗಳ ಹೆಸರನ್ನು ಹೇಳುವೆನು.

೨೨–೨೫. ಸೋಮತೀರ್ಥ, ಗಾಂಧರ್ವತೀರ್ಥ, ದೇವತೀರ್ಥ, ಪೂರ್ಣಾತೀರ್ಥ, ಶಾಲತೀರ್ಥ, ಶ್ರೀಪರ್ಣಾಸಂಗಮ, ಸ್ವಾಗತಾಸಂಗಮ, ಕುಸುಮಾಸಂಗಮ, ಪುಷ್ಟಿಸಂಗಮ, ಕರ್ಣಿಕಾಸಂಗಮ, ವೈಷ್ಣವೀಸಂಗಮ, ಕೃಶರಾಸಂಗಮ, ವಾಸವೀಸಂಗಮ, ಶಿವಶಯ್ಯಾತೀರ್ಥ, ಶಿಖಿತೀರ್ಥ, ಕುಸುಂಭಿಕಾತೀರ್ಥ, ಉಪಾರಥ್ಯಾತೀರ್ಥ, ಶಾಂತಿಜಾತೀರ್ಥ, ದೇವಜಾತೀರ್ಥ, ಅಜತೀರ್ಥ, ವೃದ್ಧತೀರ್ಥ. ಸುರತೀರ್ಥ, ಭದ್ರತೀರ್ಥ ಮೊದಲಾದ ತೀರ್ಥಗಳು ಗೌತಮಿಯಲ್ಲಿರುವುವು.

೨೬. ಇವೇ ಮೊದಲಾದ ಅನೇಕತೀರ್ಥಗಳು ನದೀನದಗಳೊಡನೆ ದೇವಗಿರಿಗೆ ಸೋಮನಿಗಾಗಿ ಬಂದುವು, ಇನ್ನು ಕೆಲವು ಯಾಗಶಾಲೆಯಲ್ಲಿ ನೆಲಸಿದುವು.

ಸೋಮಾರ್ಥಂ ವೈ ತಥಾ ಚಾನ್ಯೇ(ಽ)ಪ್ಯಾಗಮನ್ಮಖಮಂಡಪಂ ।
ತಾನಿ ತೀರ್ಥಾನಿ ಗಂಗಾಯಾಂ ಸಂಗತಾನಿ ಯಥಾಕ್ರಮಂ ॥ ೨೭ ॥

ನದೀರೂಪೇಣ ಕಾನ್ಯೇವ ನದರೂಪೇಣ ಕಾನಿಚಿತ್ ।
ಸರೋರೂಪೇಣ ಕಾನ್ಯತ್ರ ಸ್ತವರೂಪೇಣ ಕಾನಿಚಿತ್ ॥ ೨೮ ॥

ತಾನ್ಯೇವ ಸರ್ವತೀರ್ಥಾನಿ ವಿಖ್ಯಾತಾನಿ ಪೃಥಕ್ಪೃಥಕ್ ।
ತೇಷು ಸ್ನಾನಂ ಜಪೋ ಹೋಮಃ ಪಿತೃತರ್ಪಣಮೇವ ಚ ॥ ೨೯ ॥

ಸರ್ವಕಾಮಪ್ರದಂ ಪುಂಸಾಂ ಭುಕ್ತಿದಂ ಮುಕ್ತಿಭಾಜನಂ ।
ಏತೇಷಾಂ ಪಠನಂ ಚಾಪಿ ಸ್ಮರಣಂ ವಾ ಕರೋತಿ ಯಃ ।
ಸರ್ವಪಾಪವಿನಿರ್ಮುಕ್ತೋ ಯಾತಿ ವಿಷ್ಣುಪುರಂ ಜನಃ ॥ ೩೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಪೂರ್ಣಾದಿಪಂಚವಿಂಶತಿನದೀದೇವನದೀನದಸಂಗಮ
ವರ್ಣನಂ ನಾಮ ಪಂಚಾಧಿಕಶತತಮೋ(ಽ)ಧ್ಯಾಯಃ

೨೭-೨೮. ಆ ತೀರ್ಥಗಳೆಲ್ಲವೂ ಕೆಲವು ನದೀರೂಪದಿಂದಲೂ, ಕೆಲವು ಸರೋವರರೂಪದಿಂದಲೂ, ಕೆಲವು ಸ್ತೋತ್ರರೂಪದಿಂದಲೂ, ಗೌತಮೀನದಿಯನ್ನು ಸೇರಿದುವು.

೨೯. ಆ ತೀರ್ಥಗಳೆಲ್ಲವೂ ಗೌತಮೀನದಿಯಲ್ಲಿ ಬೇರೆಬೇರೆಯಾಗಿ ಪ್ರಸಿದ್ಧವಾಗಿರುವುವು. ಅವುಗಳಲ್ಲಿ ಸ್ನಾನ, ಜಪ, ಹೋಮ, ಪಿತೃತರ್ಪಣಗಳನ್ನು ಮಾಡಿದರೆ ಇಷ್ಟಾರ್ಥಗಳೆಲ್ಲವೂ ಸಿದ್ಧಿಸುವುವು. ಬೋಗಮೋಕ್ಷಗಳೆರಡೂ ಲಭಿಸುವುವು.

೩೦. ಈ ತೀರ್ಥಗಳ ಮಾಹಾತ್ಮ್ಯವನ್ನು ಓದುವವನೂ ಸ್ಮರಿಸುವವನೂ ಸಹ ಪಾಪಗಳೆಲ್ಲವನ್ನೂ ಕಳೆದುಕೊಂಡು ವಿಷ್ಣುಲೋಕವನ್ನು ಪಡೆಯುವನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಪೂರ್ಣಾನದಿ ಮೊದಲಾದ ಇಪ್ಪತ್ತೈದುನದಿಗಳ ಮತ್ತು ದೇವನದಿಯ ಸಂಗಮವರ್ಣನವೆಂಬ ನೂರೈದನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಮೂವತ್ತಾರನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಷಡಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಪ್ರವರಾಸಂಗಮೋ ನಾಮ ಶ್ರೇಷ್ಠಾ ಚೈವ ಮಹಾನದೀ ।
ಯತ್ರ ಸಿದ್ಧೇಶ್ವರೋ ದೇವಃ ಸರ್ವಲೋಕೋಪಕಾರಕೃತ್ ॥ ೧ ॥

ದೇವಾನಾಂ ದಾನವಾನಾಂ ಚ ಸಂಗಮೋಽಭೂತ್ಸುದಾರುಣಃ ।
ತೇಷಾಂ ಪರಸ್ಪರಂ ಚಾಪಿ ಪ್ರೀತಿಶ್ಚಾಭೂನ್ಮಹಾಮುನೇ ॥ ೨ ॥

ನೂರಾರನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಪ್ರವರಾಸಂಗಮವೆಂಬ ತೀರ್ಥವು ಗೌತಮೀನದಿಯಲ್ಲಿರುವುದು. ಪ್ರವರಾನದಿಯು ಆ ನದಿಯಲ್ಲಿ ಸೇರಿ ತೀರ್ಥವಾಗಿರುವುದು. ಅಲ್ಲಿ ಸಿದ್ಧೇಶ್ವರನೆಂಬ ಹೆಸರಿನಿಂದ ಶಿವನು ನೆಲಸಿ ಭಕ್ತರಿಗೆ ಅನುಗ್ರಹವನ್ನು ಮಾಡುತ್ತಲಿರುವನು.

೨. ಒಂದುಸಾರಿ, ದೇವತೆಗಳೂ ದಾನವರೂ ಒಮ್ಮತದಿಂದ ಒಟ್ಟುಗೂಡಿದರು. ಅವರಲ್ಲಿ ಪರಸ್ಪರವಾಗಿ ಸ್ನೇಹವೂ ಬೆಳೆಯಿತು.

ತೇಽಸ್ಯೈವಂ ಮಂತ್ರಯಾಮಾಸುರ್ದೇವಾ ವೈ ದಾನವಾ ಮಿಥಃ ।
ಮೇರುಪರ್ವತಮಾಸಾದ್ಯ ಪರಸ್ಪರಹಿತೈಷಿಣಃ ॥ ೩ ॥

॥ ದೇವದೈತ್ಯಾ ಊಚುಃ

ಅಮೃತೇನಾಮರತ್ವಂ ಸ್ಯಾದುತ್ಪಾದ್ಯಾಮೃತಮುತ್ತಮಂ ।
ಪಿಬಾಮಃ ಸರ್ವ ಏವೈತೇ ಭವಾಮಶ್ಚಾಮರಾ ವಯಂ ॥ ೪ ॥

ಏಕೀ ಭೂತ್ವಾ ವಯಂ ಲೋಕಾನ್ಪಾಲಯಾಮಃ ಸುಖಾನಿ ಚ ।
ಪ್ರಾಪ್ಸ್ಯಾಮಃ ಸಂಗರಂ ಹಿತ್ವಾ ಸಂಗರೋ ದುಃಖಕಾರಣಂ ॥ ೫ ॥

ಪ್ರೀತ್ಯಾ ಚೈವಾರ್ಜಿತಾನರ್ಥಾನ್ಭೋಕ್ಷ್ಯಾಮೋ ಗತಮತ್ಸರಾಃ ।
ಯತಃ ಸ್ನೇಹೇನ ವೃತ್ತಿರ್ಯಾ ಸಾಸ್ಮಾಕಂ ಸುಖದಾ ಸದಾ ॥ ೬ ॥

ವೈಪರೀತ್ಯಂ ತು ಯದ್ವೃತ್ತಂ ನ ಸ್ಮರ್ತವ್ಯಂ ಕದಾಚನ ।
ನ ಚ ತ್ರೈಲೋಕ್ಯರಾಜ್ಯೇಽಪಿ ಕೈವಲ್ಯೇ ವಾ ಸುಖಂ ಮನಾಕ್ ।
ತದೂರ್ಧ್ವಮಪಿ ವಾ ಯತ್ತು ನಿರ್ವೈರತ್ವಾದವಾಪ್ಯತೇ ॥ ೭ ॥

---

೩. ಆ ದೇವದಾನವರು ಮೇರುಗಿರಿಗೆ ಬಂದು ಪರಸ್ಪರ ಹಿತಕ್ಕಾಗಿ ಇಂತು ಆಲೋಚಿಸಿದರು—

೪. ಅಮೃತದಿಂದ ಅಮರತ್ವವು (ಮರಣವಿಲ್ಲದಿರುವಿಕೆಯು) ಉಂಟಾಗುವುದು. ಆದುದರಿಂದ ನಾವೆಲ್ಲರೂ ಸೇರಿ ಅಮೃತವನ್ನು ಸಂಪಾದಿಸಿ ಕುಡಿಯೋಣ. ಅಮರರಾಗೋಣ.

೫. ನಾವೆಲ್ಲರೂ ಒಟ್ಟುಸೇರಿ ಜಗತ್ತನ್ನು ಪಾಲಿಸೋಣ, ಸುಖವನ್ನನುಭವಿಸೋಣ. ನಮ್ಮಿರ್ವರಲ್ಲಿ ಯುದ್ಧವು ಬೇಡ. ಯುದ್ಧದಿಂದ ದುಃಖವೇ ವಿನಾ ಸುಖವಿಲ್ಲ.

೬. ಸಂಪಾದಿಸಿದ ದ್ರವ್ಯವನ್ನು ಭೇದವಿಲ್ಲದೇ ಪ್ರೀತಿಯಿಂದ ಅನುಭವಿಸೋಣ. ನಾವೀರ್ವರೂ ಸ್ನೇಹದಿಂದ ವರ್ತಿಸಿದರೆ ಸುಖವಾಗಿರಬಹುದು.

೭. ಹಿಂದಿನ ನಮ್ಮ ವೈರವೆಲ್ಲವನ್ನೂ ಮರೆತುಬಿಡಬೇಕು. ವೈರವನ್ನು ಬಿಟ್ಟರೆ ತ್ರಿಲೋಕರಾಜ್ಯವನ್ನಾದರೂ ಪಡೆಯಬಹುದು, ಮುಕ್ತಿಸುಖವನ್ನೂ ಪಡೆಯಬಹುದು.

॥ ಬ್ರಹ್ಮೋವಾಚ ॥

ಏವಂ ಪರಸ್ಪರಂ ಪ್ರೀತಾಃ ಸಂತೋ ದೇವಾಶ್ಚ ದಾನವಾಃ ।
ಏಕೀಭೂತಾಶ್ಚ ಸುಪ್ರೀತಾ ವಿಮಥ್ಯ ವರುಣಾಲಯಂ ॥ ೮ ॥

ಮಂಥಾನಂ ಮಂದರಂ ಕೃತ್ವಾ ರಜ್ಜುಂ ಕೃತ್ವಾ ತು ವಾಸುಕಿಂ ।
ದೇವಾಶ್ಚ ದಾನವಾಃ ಸರ್ವೇ ಮಮಂಥುರ್ವರುಣಾಲಯಂ ॥ ೯ ॥

ಉತ್ಪನ್ನಂ ಚ ತತಃ ಪುಣ್ಯಮಮೃತಂ ಸುರವಲ್ಲಭಂ ।
ನಿಷ್ಪನ್ನೇ ಚಾಮೃತೇ ಪುಣ್ಯೇ ತೇ ಚ ಪ್ರೋಚುಃ ಪರಸ್ಪರಂ ॥ ೧೦ ॥

ಯಾಮಃ ಸ್ವಂ ಸ್ವಮಧಿಷ್ಠಾನಂ ಕೃತಕಾರ್ಯಾಃ ಶ್ರಮಂ ಗತಾಃ ।
ಸರ್ವೇ ಸಮಂ ಚ ಸರ್ವೇಭ್ಯೋ ಯಥಾಯೋಗ್ಯಂ ವಿಭಜ್ಯತಾಂ ॥ ೧೧ ॥

ಯದಾ ಸರ್ವಾಗಮೋ ಯತ್ರ ಯಸ್ಮಿಂಲ್ಲಗ್ನೇ ಶುಭಾವಹೇ ।
ವಿಭಜ್ಯತಾಮಿದಂ ಪುಣ್ಯಮಮೃತಂ ಸುರಸತ್ತಮಾಃ ॥ ೧೨ ॥

೮-೯. ಹೀಗೆ ಆಲೋಚಿಸಿ ಸ್ನೇಹದಿಂದ ಒಟ್ಟುಗೂಡಿ ದೇವಾಸುರರು ಸಮುದ್ರಮಥನವನ್ನು ಮಾಡಲು ಸಿದ್ಧರಾದರು. ಮಂದರಗಿರಿಯನ್ನು ಕಡೆಗೋಲನ್ನಾಗಿ ಮಾಡಿಕೊಂಡರು. ವಾಸುಕಿಯನ್ನು ಹಗ್ಗವಾಗಿ ಮಾಡಿಕೊಂಡರು. ಎಲ್ಲರೂ ಸೇರಿ ಸ್ನೇಹದಿಂದ ಸಮುದ್ರವನ್ನು ಕಡೆಯತೊಡಗಿದರು.

೧೦. ಆಗ ಸಮುದ್ರದಿಂದ ಶ್ರೇಷ್ಠವಾದ ಅಮೃತವು ಜನಿಸಿತು. ಅಮೃತವು ಜನಿಸಲು ಆ ದೇವಾಸುರರು ತಮ್ಮತಮ್ಮಲ್ಲಿ ಹೀಗೆ ಮಾತನಾಡಿಕೊಂಡರು–

೧೧. ಸಮುದ್ರಮಥನ ಮಾಡಿ ಆಯಾಸಗೊಂಡ ನಾವೆಲ್ಲರೂ ಈಗ ನಮ್ಮನಮ್ಮ ಮನೆಗಳಿಗೆ ಹೋಗೋಣ, ಆಮೇಲೆ ಎಲ್ಲರೂ ಸರಿಯಾಗಿ ಈ ಅಮೃತವನ್ನು ಹಂಚಿಕೊಳ್ಳೋಣ.

೧೨. ಪುನಃ ಒಂದು ಶುಭಮುಹೂರ್ತದಲ್ಲಿ ನಾವೆಲ್ಲರೂ ಒಟ್ಟುಸೇರಿ ಈ ಅಮೃತವನ್ನು ಹಂಚಿಕೊಳ್ಳೋಣ. ಅಲ್ಲಿಯವರೆಗೂ ಈ ಅಮೃತವು ನಿಮ್ಮ ರಕ್ಷಣೆಯಲ್ಲಿರಲಿ.

ಇತ್ಯುಕ್ತ್ವಾ ತೇ ಯಯುಃ ಸರ್ವೇ ದೈತ್ಯದಾನವರಾಕ್ಷಸಾಃ ।
ಗತೇಷು ದೈತ್ಯಸಂಘೇಷು ದೇವಾಃ ಸರ್ವೇऽನ್ವಮಂತ್ರಯನ್ ॥ ೧೩ ॥

॥ ದೇವಾ ಊಚುಃ ॥

ಗತಾಸ್ತೇ ರಿಪವೋऽಸ್ಮಾಕಂ ದೈವಯೋಗಾದರಿಂದಮಾಃ ।
ರಿಪೂಣಾಮಮೃತಂ ನೈವ ದೇಯಂ ಭವತಿ ಸರ್ವಥಾ ॥ ೧೪ ॥

॥ ಬ್ರಹ್ಮೋವಾಚ ॥

ಬೃಹಸ್ಪತಿಸ್ತಥೇತ್ಯಾಹ ಪುನರಾಹ ಸುರಾನಿದಂ ॥ ೧೫ ॥

॥ ಬೃಹಸ್ಪತಿರುವಾಚ ॥

ನ ಜಾನಂತಿ ಯಥಾ ಪಾಪಾ ಪಿಬಧ್ವಂ ಚ ತಥಾಮೃತಂ ।
ಅಯಮೇವೋಚಿತೋ ಮಂತ್ರೋ ಯಚ್ಛತ್ರೂಣಾಂ ಪರಾಭವಃ ॥ ೧೬ ॥

ದ್ವೇಷ್ಯಾಃ ಸರ್ವಾತ್ಮನಾ ದ್ವೇಷ್ಯಾ ಇತಿ ನೀತಿವಿದೋ ವಿದುಃ ।
ನ ವಿಶ್ವಾಸ್ಯಾ ನ ಚಾಖ್ಯೇಯಾ ನೈವ ಮಂತ್ರ್ಯಾಶ್ಚ ಶತ್ರವಃ ॥ ೧೭ ॥

---

೧೩. ಎಂದು ಹೇಳಿ ಅಸುರರೆಲ್ಲರೂ ಹೊರಟುಹೋಗಲು ಆಗ ದೇವತೆಗಳು ಮಾತ್ರವೇ ಸೇರಿಕೊಂಡು ರಹಸ್ಯವಾಗಿ ಆಲೋಚಿಸಿದರು.

೧೪. ಅದೃಷ್ಟವಶಾತ್ ಆ ನಮ್ಮ ಶತ್ರುಗಳಾದ ದೈತ್ಯರೆಲ್ಲರೂ ಹೊರಟು ಹೋದರು. ಶತ್ರುಗಳಾದ ಅವರಿಗೆ ಅಮೃತವನ್ನೆಂದಿಗೂ ಕೊಡಕೂಡದು.

೧೫-೧೬. ಆಗ ಬೃಹಸ್ಪತಿಯು ದೇವತೆಗಳಾಮಾತನ್ನೊಪ್ಪಿ ಎಲೈ ದೇವತೆಗಳೇ, ನಿಮ್ಮ ಆಲೋಚನೆಯು ಸರಿಯಾಗಿದೆ. ಶತ್ರುಗಳಿಗೆ ಸೋಲಾಗಬೇಕು. ಆ ದುಷ್ಟದೈತ್ಯರಿಗೆ ಗೊತ್ತಾಗದಂತೆ ಈ ಅಮೃತವೆಲ್ಲವನ್ನೂ ನೀವೇ ಕುಡಿಯಿರಿ.

೧೭. ಶತ್ರುಗಳು ಯಾವಾಗಲೂ ಶತ್ರುಗಳೇ ಎಂದು ರಾಜನೀತಿಯನ್ನು ಬಲ್ಲವರು ಹೇಳುವರು. ಶತ್ರುಗಳೊಡನೆ ಸ್ನೇಹವನ್ನೂ ಬೆಳೆಸಬಾರದು, ಆಲೋಚಿಸಲೂ ಬಾರದು, ಮಾತಾಡಲೂ ಕೂಡದು.

ತೇಭ್ಯೋ ನ ದೇಯಮಮೃತಂ ಭವೇಯುರಮರಾಸ್ತತಃ ।
ಅಮರೇಷು ಚ ಜಾತೇಷು ತೇಷು ದೈತ್ಯೇಷು ಶತ್ರುಷು ।
ತಾನ್ ಜೇತುಂ ನೈವ ಶಕ್ಷ್ಯಾಮೋ ನ ದೇಯಮಮೃತಂ ತತಃ ॥ ೧೮ ॥

॥ ಬ್ರಹ್ಮೋವಾಚ ॥

ಇತಿ ಸಂಮಂತ್ರ್ಯ ತೇ ದೇವಾ ವಾಚಸ್ಪತಿಮಥಾಬ್ರುವನ್ ॥ ೧೯ ॥

॥ ದೇವಾ ಊಚುಃ ॥

ಕ್ವ ಯಾಮಃ ಕುತ್ರ ಮಂತ್ರಃ ಸ್ಯಾತ್ಕ್ವ ಪಿಬಾಮಃ ಕ್ವ ಸಂಸ್ಥಿತಿಃ ।
ಕುರ್ಮಸ್ತದೇವ ಪ್ರಥಮಂ ವದ ವಾಚಸ್ಪತೇ ತಥಾ ॥ ೨೦ ॥

॥ ಬೃಹಸ್ಪತಿರುವಾಚ ॥

ಯಾಂತು ಬ್ರಹ್ಮಾಣಮಮರಾಃ ಪೃಚ್ಛಂತ್ವತ್ರ ಗತಿಂ ಪರಾಂ ।
ಸ ತು ಜ್ಞಾತಾ ಚ ವಕ್ತಾ ಚ ದಾತಾ ಚೈವ ಪಿತಾಮಹಃ ॥ ೨೧ ॥

॥ ಬ್ರಹ್ಮೋವಾಚ ॥

ಬೃಹಸ್ಪತೇರ್ವಚಃ ಶ್ರುತ್ವಾ ಮದಂತಿಕಮಥಾಗಮನ್ ।
ನಮಸ್ಯ ಮಾಂ ಸುರಾಃ ಸರ್ವೇ ಯದ್ವೃತ್ತಂ ತನ್ನ್ಯವೇದಯನ್ ॥ ೨೨ ॥

---

೧೮. ದೈತ್ಯರಿಗೆ ಅಮೃತವನ್ನು ಕೊಟ್ಟರೆ ಅವರೂ ಅಮರರಾಗುವರು. ಅವರು ಅಮರರಾದರೆ ಪುನಃ ನಾವವರನ್ನು ಜಯಿಸಲಾರೆವು. ಆದುದರಿಂದ ಅಸುರರಿಗೆ ಅಮೃತವನ್ನು ಕೊಡಲೇ ಕೂಡದು ಎಂದನು.

೧೯-೨೦. ಹೀಗೆ ಆಲೋಚಿಸಿ ದೇವತೆಗಳು ಬೃಹಸ್ಪತಿಯೊಡನೆ ಓ ಬೃಹಸ್ಪತಿ, ಈಗ ನಾವು ಎಲ್ಲಿಗೆ ಹೋಗೋಣ? ರಹಸ್ಯವಾದ ಸ್ಥಳವಾವುದು? ಅಮೃತವನ್ನು ಎಲ್ಲಿ ಕುಡಿಯೋಣ? ಮೊದಲದನ್ನು ಹೇಳು ಎಂದರು.

೨೧. ಅದಕ್ಕೆ ಬೃಹಸ್ಪತಿಯು—ಎಲೈ ದೇವತಗಳೇ, ನೀವೆಲ್ಲರೂ ಬ್ರಹ್ಮನ ಬಳಿಗೆ ಹೋಗಿ ಅವನನ್ನು ಕೇಳಿರಿ. ಅವನೆಲ್ಲವನ್ನೂ ತಿಳಿದಿರುವನು, ಆ ಪಿತಾಮಹನೇ ನಿಮಗೆ ಅಮೃತವನ್ನು ಕೊಡಿಸುವನು ಎನ್ನಲು,

೨೨. ಬೃಹಸ್ಪತಿಯ ಮಾತಿನಂತೆ ದೇವತೆಗಳಾಮೇಲೆ ನನ್ನ ಬಳಿಗೆ ಬಂದು ನಮಸ್ಕರಿಸಿ ನಡೆದಿರುವ ವೃತ್ತಾಂತವೆಲ್ಲವನ್ನೂ ನನಗೆ ತಿಳಿಸಿದರು.

ತದ್ದೇವವಚನಾತ್ಪುತ್ರ ತೈಃ ಸುರೈರಗಮಂ ಹರಿಂ ।
ವಿಷ್ಣವೇ ಕಥಿತಂ ಸರ್ವಂ ಶಂಭವೇ ವಿಷಹಾರಿಣೇ ॥ ೨೩ ॥

ಅಹಂ ವಿಷ್ಣುಶ್ಚ ಶಂಭುಶ್ಚ ದೇವಗಂಧರ್ವಕಿಂನರೈಃ ।
ಮೇರುಕಂದರಮಾಗತ್ಯ ನ ಜಾನಂತಿ ಯಥಾಸುರಾಃ ॥ ೨೪ ॥

ರಕ್ಷಕಂ ಚ ಹರಿಂ ಕೃತ್ವಾ ಸೋಮಪಾನಾಯ ತಸ್ಥಿರೇ ।
ಆದಿತ್ಯಸ್ತತ್ರ ವಿಜ್ಞಾತಾ ಸೋಮಭೋಜ್ಯಾನಥೇತರಾನ್ ॥ ೨೫ ॥

ಸೋಮೋ ದಾತಾಮೃತಂ ಭಾಗಂ ಚಕ್ರಧೃಗ್ರಕ್ಷಕಸ್ತಥಾ ।
ನೈವ ಜಾನಂತಿ ತದ್ದೈತ್ಯಾ ದನುಜಾ ರಾಕ್ಷಸಾಸ್ತಥಾ ॥ ೨೬ ॥

ವಿನಾ ರಾಹುಂ ಮಹಾಪ್ರಾಜ್ಞಂ ಸೈಂಹಿಕೇಯಂ ಚ ಸೋಮಪಂ ।
ಕಾಮರೂಪಧರೋ ರಾಹುರ್ಮರುತಾಂ ಮಧ್ಯಮಾವಿಶತ್ ॥ ೨೭ ॥

---

೨೩. ದೇವತೆಗಳ ಆ ಮಾತನ್ನು ಕೇಳಿ ನಾನು ಆ ದೇವತೆಗಳೊಡನೆ ಹರಿಯ ಬಳಿಗೂ ವಿಷಪಾನಮಾಡಿದ ಶಿವನ ಬಳಿಗೂ ಹೋಗಿ ಎಲ್ಲವನ್ನೂ ಹೇಳಿದೆನು.

೨೪. ಆಮೇಲೆ ನಾನೂ ಹರಿಯೂ ಶಿವನೂ ಸಹ ದೇವಗಂಧರ್ವಕಿನ್ನರರೊಡನೆ ಮೇರುಗಿರಿಯ ಗುಹೆಯೊಂದಕ್ಕೆ ಬಂದು ಅಲ್ಲಿ ರಾಕ್ಷಸರಿಗೆ ತಿಳಿಯದಂತೆ ಅಮೃತಪಾನಕ್ಕೆ ಕುಳಿತೆವು. ಹರಿಯು ರಾಕ್ಷಸರಾರೂ ಬರದಂತೆ ಅಲ್ಲಿ ರಕ್ಷಕನಾಗಿದ್ದನು.

೨೫. ಸೂರ್ಯನು ದೇವತೆಗಳಲ್ಲದವರನ್ನು ಪತ್ತೆಮಾಡಲು ನಿಂತಿದ್ದನು. ಚಂದ್ರನು ಅಮೃತವನ್ನು ಹಂಚುತ್ತಿದ್ದನು. ಹರಿಯು ಚಕ್ರವನ್ನು ಧರಿಸಿ ರಕ್ಷಿಸುತ್ತಿದ್ದನು.

೨೬. ಮಹಾಬುದ್ಧಿಶಾಲಿಯಾದ ರಾಹುವೊಬ್ಬನಿಗೆ ಹೊರತು ಮಿಕ್ಕ ಯಾವ ದೈತ್ಯರಿಗೂ, ದಾನವರಿಗೂ, ರಾಕ್ಷಸರಿಗೂ, ನಾವು ಅಮೃತಪಾನಮಾಡುತ್ತಿರುವ ಸುಳಿವೇ ಗೊತ್ತಾಗಲಿಲ್ಲ.

೨೭–೨೮. ಮಾಯಾವಿಯಾದ ರಾಹುವು ಮರುತ್ತುಗಳ ರೂಪವನ್ನು

ಮರುದ್ರೂಪಂ ಸಮಾಸ್ಥಾಯ ಪಾನಪಾತ್ರಧರಸ್ತಥಾ ।
ಜ್ಞಾತ್ವಾ ದಿವಾಕರೋ ದೈತ್ಯಂ ತಂ ಸೋಮಾಯ ನ್ಯವೇದಯತ್ ॥ ೨೮ ॥

ತದಾ ತದಮೃತಂ ತಸ್ಮೈ ದೈತ್ಯಾಯಾದೈತ್ಯರೂಪಿಣೇ ।
ದತ್ತ್ವಾ ಸೋಮಂ ತದಾ ಸೋಮೋ ವಿಷ್ಣವೇ ತನ್ನ್ಯವೇದಯತ್ ॥ ೨೯ ॥

ವಿಷ್ಣುಃ ಪೀತಾಮೃತಂ ದೈತ್ಯಂ ಚಕ್ರೇಣೋದ್ಯಮ್ಯ ತಚ್ಛಿರಃ ।
ಚಿಚ್ಛೇದ ತರಸಾ ವತ್ಸ ತಚ್ಛಿರಸ್ತ್ವಮರಂ ತ್ವಭೂತ್ ॥ ೩೦ ॥

ಶಿರೋಮಾತ್ರವಿಹೀನಂ ಯದ್ದೇಹಂ ತದಪತದ್ಭುವಿ ।
ದೇಹಂ ತದಮೃತಸ್ಪೃಷ್ಟಂ ಪತಿತಂ ದಕ್ಷಿಣೇ ತಟೇ ॥ ೩೧ ॥

ಗೌತಮ್ಯಾ ಮುನಿಶಾರ್ದೂಲ ಕಂಪಯದ್ವಸುಧಾತಲಂ ।
ದೇಹಂ ಚಾಪ್ಯಮರಂ ಪುತ್ರ ತದೆಮೃತಮಿವಾಭವತ್ ॥ ೩೨ ॥

ಧರಿಸಿ ಪಾನಪಾತ್ರೆಯನ್ನು ಹಿಡಿದು ಮರುತ್ತು ದೇವತೆಗಳ ಮಧ್ಯದಲ್ಲಿ ಕುಳಿತಿದ್ದನು. ಅವನು ದೇವರೂಪವನ್ನು ಧರಿಸಿ ಕುಳಿತಿರುವುದನ್ನು ತಿಳಿದು ಸೂರ್ಯನು ಚಂದ್ರನಿಗೆ ಸೂಚಿಸಿದನು.

೨೯. ಅಷ್ಟರಲ್ಲಿಯೇ ಚಂದ್ರನು ರಾಹುವಿಗೆ ಅಮೃತವನ್ನು ಬಡಿಸಿಯಾಗಿತ್ತು. ಆದರೂ ಆ ಸಮಾಚಾರವನ್ನು ವಿಷ್ಣುವಿಗೆ ತಿಳಿಸಿದನು.

೩೦. ಅಷ್ಟರಲ್ಲಿಯೇ ರಾಹುವು ಅಮೃತವನ್ನು ಕುಡಿದಾಗಿದ್ದಿತು, ಆದರೂ ಹರಿಯು ಕೂಡಲೇ ಚಕ್ರವನ್ನೆತ್ತಿ ಆ ದೈತ್ಯನ ತಲೆಯನ್ನು ಕತ್ತರಿಸಿದನು. ಆದರೆ ಆ ಶಿರಸ್ಸು ಅಮೃತದಿಂದ ಅಮರವಾಗಿದ್ದಿತು.

೩೧-೩೨. ಶಿರದಿಂದ ಬೇರೆಯಾದ ಮುಂಡವು ಅಮೃತಸಂಬಂಧವುಳ್ಳದ್ದಾಗಿದ್ದು ಭೂಮಿಯನ್ನು ನಡುಗಿಸುತ್ತಾ ಗೌತಮೀನದಿಯ ದಕ್ಷಿಣತೀರದಲ್ಲಿ ಬಿದ್ದಿತು, ಅಮೃತವನ್ನು ಕುಡಿದುದರಿಂದ ಆ ಮುಂಡವೂ ಅಮರವಾಗಿದ್ದು (ಜೀವದಿಂದಿದ್ದು) ದು ಆಶ್ಚರ್ಯಕರವಾಗಿದ್ದಿತು.

ದೇಹಂ ಚ ಶಿರಸೋಽಪೇಕ್ಷಿ ಶಿರೋ ದೇಹಮಪೇಕ್ಷತೇ ।
ಉಭಯಂ ಚಾಮರಂ ಜಾತಂ ದೈತ್ಯಶ್ಚಾಯಂ ಮಹಾಬಲಃ ॥ ೩೩ ॥

ಶಿರಃ ಕಾಯೇ ಸಮಾವಿಷ್ಟಂ ಸರ್ವಾನ್ಭಕ್ಷಯತೇ ಸುರಾನ್ ।
ತಸ್ಮಾದ್ದೇಹಮಿದಂ ಪೂರ್ವಂ ನಾಶಯಾಮೋ ಮಹೀಗತಂ ।
ತತಸ್ತೇ ಶಂಕರಂ ಪ್ರಾಹುರ್ದೇವಾಃ ಸರ್ವೇ ಸಸಂಭ್ರಮಾಃ ॥ ೩೪ ॥

॥ ಶಂಕರ ಉವಾಚ ॥

ಮಹೀಗತಂ ದೈತ್ಯದೇಹಂ ನಾಶಯಸ್ವ ಸುರೋತ್ತಮ ।
ತ್ವಂ ದೇವ ಕರುಣಾಸಿಂಧುಃ ಶರಣಾಗತರಕ್ಷಕಃ ॥ ೩೫ ॥

ಶಿರಸಾ ನೈವ ಯುಜ್ಯೇತ ದೈತ್ಯದೇಹಂ ತಥಾ ಕುರು ॥ ೩೬ ॥

॥ ಬ್ರಹ್ಮೋವಾಚ ॥

ಪ್ರೇಷಯಾಮಾಸ ಚೇಶೋಽಪಿ ಶ್ರೇಷ್ಠಾಂ ಶಕ್ತಿಂ ತದಾತ್ಮನಃ ।
ಮಾತೃಭಿಃ ಸಹಿತಾಂ ದೇವೀಂ ಮಾತರಂ ಲೋಕಪಾಲಿನೀಂ ॥ ೩೭ ॥

೩೩-೩೪. ಮುಂಡವು ಶಿರಸ್ಸನ್ನಪೇಕ್ಷಿಸುವುದು. ಶಿರಸ್ಸು ಮುಂಡವಿಲ್ಲದೆ ನಿಲ್ಲಲಾರದು. ಆದರೆ ಇಲ್ಲಿ ಮುಂಡರುಂಡಗಳೆರಡೂ ಅಮರವಾಗಿರುವುವು. ಇವೆರಡೂ ಒಟ್ಟುಗೂಡಿದರೆ ಇವನು ಮಹಾಸುರನಾಗಿ ದೇವತೆಗಳೆಲ್ಲರನ್ನೂ ಸಂಹರಿಸುವನು. ಆದುದರಿಂದ ಮೊದಲು ಈ ಭೂಮಿಯಲ್ಲಿ ಬಿದ್ದಿರುವ ಮುಂಡವನ್ನು ನಾಶಪಡಿಸಬೇಕು, ಎಂದು ಚಿಂತಿಸಿ ದೇವತೆಗಳೆಲ್ಲರೂ ಗಾಬರಿಯಿಂದ ಶಂಕರನನ್ನು ಕುರಿತು ಪ್ರಾರ್ಥಿಸಿದರು.

೩೫-೩೬. ಓ ಮಹಾದೇವ, ಭೂಮಿಯಲ್ಲಿ ಬಿದ್ದಿರುವ ಈ ದೈತ್ಯನ ದೇಹವನ್ನು ನಾಶಪಡಿಸು. ನೀನು ಕರುಣಾಸಾಗರನು, ಶರಣುಹೊಂದಿದವರನ್ನು ರಕ್ಷಿಸುವವನು. ಈ ಅಸುರನ ರುಂಡವು ಮುಂಡದೊಂದಿಗೆ ಸೇರಬಾರದು. ಅದರಂತೆ ಮಾಡು ಎಂದರು.

೩೭. ಆಗ ಈಶ್ವರನು ಲೋಕಮಾತೆಯೂ ಲೋಕರಕ್ಷಕಳೂ ಆದ ತನ್ನ ಶಕ್ತಿಯಾದ ಕಾಳಿದೇವಿಯನ್ನು ಬ್ರಾಹ್ಮೀ ಮೊದಲಾದ ಮಾತೃಕೆಯರೊಡನೆ ಅಲ್ಲಿಗೆ ಕಳುಹಿದನು.

ಈಶಾಯುಧಧರಾ ದೇವೀ ಈಶಶಕ್ತಿಸಮನ್ವಿತಾ ।
ಮಹೀಗತಂ ಯತ್ರ ದೇಹಂ ತತ್ರಾಗಾದ್ಭಕ್ಷ್ಯಕಾಂಕ್ಷಿಣೀ ॥ ೩೮ ॥

ಶಿರೋಮಾತ್ರಂ ಸುರಾಃ ಸರ್ವೇ ಮೇರೌ ತತ್ರೈವ ಸಾಂತ್ವಯನ್ ।
ದೇಹೋ ದೇವ್ಯಾ ಪುನಸ್ತತ್ರ ಯುಯುಧೇ ಬಹವಃ ಸಮಾಃ ॥ ೩೯ ॥

ರಾಹುಸ್ತತ್ರ ಸುರಾನಾಹ ಭಿತ್ತ್ವಾ ದೇಹಂ ಪುರಾ ಮಮ ।
ಅತ್ರಾಸ್ತೇ ರಸಮುತ್ಕೃಷ್ಟಂ ತದಾಕೃಷ್ಯ ಶರೀರತಃ ॥ ೪೦ ॥

ಪೃಥಕ್ಪ್ಲುತೇ ರಸೇ ದೇಹಂ ಪ್ರವರೇಽಮೃತಮುತ್ತಮಂ ।
ಭಸ್ಮೀ ಭೂಯಾತ್ಕ್ಷಣೇನೈವ ತಸ್ಮಾತ್ಕುರ್ವಂತು ತತ್ಪುರಾ ॥ ೪೧ ॥

॥ ಬ್ರಹ್ಮೋವಾಚ ॥

ಏತದ್ರಾಹುವಚಃ ಶ್ರುತ್ವಾ ಪ್ರೀತಾಃ ಸರ್ವೇಽಸುರಾರಯಃ ।
ಅಭ್ಯಷಿಂಚನ್ಗ್ರಹಾಣಾಂ ತ್ವಂ ಗ್ರಹೋ ಭೂಯಾ ಮುದಾನ್ವಿತಃ ॥ ೪೨ ॥

---

೩೮. ಕಾಳಿಕಾದೇವಿಯು ಶಿವನ ಆಯುಧಗಳನ್ನು ಧರಿಸಿ ಶಿವಶಕ್ತಿಯಿಂದ ಕೂಡಿದವಳಾಗಿ ಭೂಮಿಯಲ್ಲಿ ಬಿದ್ದಿರುವ ದೈತ್ಯನ ದೇಹವನ್ನು ತಿನ್ನಲೋಸುಗ ಅಲ್ಲಿಗೆ ಬಂದಳು.

೩೯. ದೈತ್ಯನ ಶಿರವನ್ನು ಮಾತ್ರ ದೇವತೆಗಳು ರಕ್ಷಿಸುತ್ತಿದ್ದರು. ದೇಹವು ಕಾಳಿಕಾದೇವಿಯೊಡನೆ ಬಹುವರ್ಷಗಳವರೆಗೆ ಯುದ್ಧಮಾಡಿತು.

೪೦. ಆಗ ಶಿರೋರೂಪನಾದ ರಾಹುವು ದೇವತೆಗಳೊಡನೆ ಹೀಗೆ ಹೇಳಿದನು—ಮೊದಲು ನನ್ನ ಶರೀರವನ್ನು ಭೇದಿಸಿ ಅದರಲ್ಲಿರುವ ಅಮೃತರಸವನ್ನು ತೆಗೆಯಿರಿ,

೪೧. ದೇಹದಿಂದ ಅಮೃತರಸವನ್ನು ತೆಗೆವರೆ ಆ ದೇಹವು ಕೂಡಲೇ ಭಸ್ಮವಾಗುವುದು, ಎಲೈ ದೇವತೆಗಳೇ ಮೊದಲದನ್ನು ಮಾಡಿರಿ ಎಂದನು.

೪೨. ರಾಹುವಿನ ಆ ಮಾತನ್ನು ಕೇಳಿ ದೇವತೆಗಳು ಸಂತುಷ್ಟರಾಗಿ ನೀನು ಗ್ರಹಗಳಲ್ಲಿ ಒಬ್ಬನಾಗು ಎಂದು ಅನುಗ್ರಹಮಾಡಿ ಅವನನ್ನು ನವಗ್ರಹಗಳ ಗುಂಪಿನಲ್ಲಿ ಸೇರಿಸಿದರು.

ತದ್ದೇವವಚನಾಚ್ಛಕ್ತಿರೀಶ್ವರೀ ಯಾ ನಿಗದ್ಯತೇ ।
ದೇಹಂ ಭಿತ್ತ್ವಾ ದೈತ್ಯಪತೇಃ ಸುರಶಕ್ತಿಸಮನ್ವಿತಾ ॥ ೪೩ ॥

ಆಕೃಷ್ಯ ಶೀಘ್ರಮುತ್ಕೃಷ್ಟಂ ಪ್ರವರಂ ಚಾಮೃತಂ ಬಹಿಃ ।
ಸ್ಥಾಪಯಿತ್ವಾ ತು ತದ್ದೇಹಂ ಭಕ್ಷಯಾಮಾಸ ಚಾಂಬಿಕಾ ॥ ೪೪ ॥

ಕಾಲರಾತ್ರಿರ್ಭದ್ರಕಾಲೀ ಪ್ರೋಚ್ಯತೇ ಯಾ ಮಹಾಬಲಾ ।
ಸ್ಥಾಪಿತಂ ರಸಮುತ್ಕೃಷ್ಟಂ ರಸಾನಾಂ ಪ್ರವರಂ ರಸಂ ॥ ೪೫ ॥

ವ್ಯಸ್ರವತ್ಸ್ಥಾಪಿತಂ ತತ್ತು ಪ್ರವರಾ ಸಾಭವನ್ನದೀ ।
ಆಕೃಷ್ಟಮಮೃತಂ ಚೈವ ಸ್ಥಾಪಿತಂ ಸಾಪ್ಯಭಕ್ಷಯತ್ ॥ ೪೬ ॥

ತತಃ ಶ್ರೇಷ್ಠಾ ನದೀ ಜಾತಾ ಪ್ರವರಾ ಚಾಮೃತಾ ಶುಭಾ ।
ರಾಹುದೇಹಸಮುದ್ಭೂತಾ ರುದ್ರಶಕ್ತಿಸಮನ್ವಿತಾ ॥ ೪೭ ॥

೪೩–೪೪. ಆಮೇಲೆ ಶಿವಶಕ್ತಿಯಾದ ಕಾಳಿಯು ದೇವಶಕ್ತಿಯೊಡನೆ ಕೂಡಿ ದೈತ್ಯನ ಶರೀರವನ್ನು ಭೇದಿಸಿ ಅದರಲ್ಲಿದ್ದ ಶ್ರೇಷ್ಠವಾದ ಅಮೃತರಸವನ್ನು ಹೊರತೆಗೆದಳು. ನಂತರ ಆ ಶರೀರವನ್ನು ಭಕ್ಷಿಸಿ ನಾಶಪಡಿಸಿದಳು.

೪೫-೪೬. ಕಾಳರಾತ್ರಿಯೆಂದೂ ಭದ್ರಕಾಳಿಯೆಂದೂ ಆ ಶಿವಶಕ್ತಿದೇವಿಯನ್ನು ಕರೆಯುವರು. ಆ ದೇವಿಯು ದೈತ್ಯಶರೀರದಿಂದ ಹೊರತೆಗೆದ ಅಮೃತ ರಸವು ಸ್ರವಿಸಿ ಅದರಿಂದ ಒಂದು ನದಿಯು ಜನಿಸಿತು. ಪ್ರವರಾನದಿಯೆಂದು ಅದರ ಹೆಸರು. ಆ ಅಮೃತರಸವು ಆ ನದಿಯಲ್ಲಿಯೂ ಸೇರಿ ಅದು ಅತಿಶ್ರೇಷ್ಠ ನದಿಯೂ ಪುಣ್ಯತಮವೂ ಆಯಿತು.

೪೭. ಆ ರಾಹುವಿನ ದೇಹದಿಂದ ಹೊರಟ ಆ ಪ್ರವರಾನದಿಯು ರುದ್ರ ಶಕ್ತಿಯಿಂದ ಕೂಡಿ ಅಮೃತಮಯವಾಗಿ ಹರಿಯತೊಡಗಿತು.

ನದೀನಾಂ ಪ್ರವರಾ ರಮ್ಯಾ ಚಾಮೃತಾ ಪ್ರೇರಿತಾ ತಥಾ ।
ತತ್ರ ಪಂಚ ಸಹಸ್ರಾಣಿ ತೀರ್ಥಾನಿ ಗುಣವಂತಿ ಚ ॥ ೪೮ ॥

ತತ್ರ ಶಂಭುಃ ಸ್ವಯಂ ತಸ್ಥೌ ಸರ್ವದಾ ಸುರಪೂಜಿತಃ ।
ತಸ್ಯೈ ತುಷ್ಟಾಃ ಸುರಾಃ ಸರ್ವೇ ದೇವ್ಯೈ ನದ್ಯೈ ಪೃಥಕ್ಪೃಥಕ್ ॥ ೪೯ ॥

ವರಾನ್ದದುರ್ಮುದಾ ಯುಕ್ತಾ ಯಥಾ ಪೂಜಾಮವಾಪ್ಸ್ಯತಿ ।
ಶಂಭುಃ ಸುರಪತಿರ್ಲೋಕೇ ತಥಾ ಪೂಜಾಮವಾಪ್ಸ್ಯಸಿ ॥ ೫೦ ॥

ನಿವಾಸಂ ಕುರು ದೇವಿ ತ್ವಂ ಲೋಕಾನಾಂ ಹಿತಕಾಮ್ಯಯಾ ।
ಸದಾ ತಿಷ್ಠ ರಸೇಶಾನಿ ಸರ್ವೇಷಾಂ ಸರ್ವಸಿದ್ಧಿದಾ ॥ ೫೧ ॥

ಸ್ತವನಾತ್ಕೀರ್ತನಾದ್ಧ್ಯಾನಾತ್ಸರ್ವಕಾಮಪ್ರದಾಯಿನೀ ।
ತ್ವಾಂ ನಮಸ್ಯಂತಿ ಯೇ ಭಕ್ತ್ಯಾ ಕಿಂಚಿದಾಪೇಕ್ಷ್ಯ ಸರ್ವದಾ ॥ ೫೨ ॥

---

೪೮. ಆ ನದಿಯಲ್ಲಿ ಐದುಸಾವಿರ ಪುಣ್ಯತೀರ್ಥಗಳಿರುವುವು. ಆ ನದಿಯ ತೀರದಲ್ಲಿ ಶಂಕರನು ನೆಲಸಿ ದೇವತೆಗಳಿಂದ ಪೂಜಿಸಲ್ಪಡುತ್ತಲಿರುವನು.

೪೯-೫೦. ರಾಹುದೇಹವನ್ನು ಭೇದಿಸಿದ ಕಾಳಿಕಾದೇವಿಗೆ ದೇವತೆಗಳು ಹೀಗೆ ವರವನ್ನು ಕೊಟ್ಟರು—ಓ ದೇವಿ, ದೇವದೇವನಾದ ಮಹಾದೇವನು ಲೋಕದಲ್ಲಿ ಪೂಜಿಸಲ್ಪಡುತ್ತಿರುವಂತೆ ನೀನೂ ಪೂಜಿಸಲ್ಪಡುವವಳಾಗು. ಜಗದೀಶ್ವರಿಯಾಗು.

೫೧. ರಸಪರಮೇಶ್ವರಿಯಾದ ಓ ದೇವಿ, ಲೋಕಕ್ಷೇಮಕ್ಕಾಗಿ ಈ ಸ್ಥಳದಲ್ಲಿ ನೆಲಸಿ ಭಕ್ತರಿಗೆ ಸರ್ವಸಿದ್ಧಿಯನ್ನೂ ಕರುಣಿಸು.

೫೨. ಓ ದೇವಿ, ನಿನ್ನನ್ನು ಸ್ತುತಿಸಿದರೆ, ನಿನ್ನ ನಾಮವನ್ನು ಕೀರ್ತನ ಮಾಡಿದರೆ, ಇಷ್ಟಾರ್ಥಗಳೆಲ್ಲವೂ ಸಿದ್ಧಿಸುವುವು. ನಿನ್ನನ್ನು ಭಕ್ತಿಯಿಂದ ನಮಸ್ಕರಿಸುವವರ ಕಾರ್ಯಗಳೆಲ್ಲವೂ ಸುಮುಖವಾಗಿ ಸಿದ್ಧಿಸಲಿ.

ತೇಷಾಂ ಸರ್ವಾಣಿ ಕಾರ್ಯಾಣಿ ಭವೇಯುರ್ದೇವತಾಜ್ಞಯಾ ।
ಶಿವಶಕ್ತ್ಯೋರ್ಯತಸ್ತಸ್ಮಿನ್ನಿವಾಸೋಽಭೂತ್ಸನಾತನಃ ॥ ೩೩ ॥

ಅತೋ ವದಂತಿ ಮುನಯೋ ನಿವಾಸಪುರಮಿತ್ಯದಃ ।
ಪ್ರವರಾಯಾಃ ಪುರಾ ದೇವಾಃ ಸುಪ್ರೀತಾಸ್ತೇ ವರಾನ್ದದುಃ ॥ ೩೪ ॥

ಗಂಗಾಯಾಃ ಸಂಗಮೋ ಯಸ್ತೇ ವಿಖ್ಯಾತಃ ಸುರವಲ್ಲಭಃ ।
ತತ್ರಾಪ್ಲುತಾನಾಂ ಸರ್ವೇಷಾಂ ಭುಕ್ತಿರ್ವಾ ಮುಕ್ತಿರೇವ ಚ ॥ ೩೫ ॥

ಯದ್ವಾಪಿ ಮನಸಃ ಕಾಮ್ಯಂ ದೇವಾನಾಮಪಿ ದುರ್ಲಭಂ ।
ಸ್ಯಾತ್ತೇಷಾಂ ಸರ್ವಮೇವೇಹ ಏವಂ ದತ್ವಾ ಸುರಾ ಯಯುಃ ॥ ೩೬ ॥

೩೩-೩೪. ಶಿವ ಮತ್ತು ಶಿವಶಕ್ತಿ ಇವರು ಈ ಸ್ಥಳದಲ್ಲಿ ವಾಸಿಸಿ (ನೆಲಸಿ) ರುವುದರಿಂದ ಈ ಸ್ಥಳವನ್ನು ಇನ್ನು ಮೇಲೆ ನಿವಾಸಪುರವೆಂದು ಮುನಿಗಳು ಕರೆಯುವರು ಎಂದು ಹೇಳಿ ಪ್ರವರಾನದಿಗೂ ದೇವತೆಗಳು ಹೀಗೆ ವರವನ್ನನುಗ್ರಹಿಸಿದರು.

೩೫. ಎಲೈ ನದಿ, ನೀನು ಗೌತಮೀನದಿಯಲ್ಲಿ ಸೇರಿದ ಸಂಗಮಸ್ಥಳವು ಪ್ರಸಿದ್ಧವಾಗಿ ದೇವಪ್ರಿಯವಾಗಿರುವುದು. ಆ ಸಂಗಮದಲ್ಲಿ ಸ್ನಾನಮಾಡುವವರಿಗೆ ಭೋಗಮೋಕ್ಷಗಳೆರಡೂ ಲಭಿಸುವುವು.

೩೬. ಹಾಗೆ ನಿನ್ನ ಸಂಗಮತೀರ್ಥದಲ್ಲಿ ಸ್ನಾನಮಾಡುವವರಿಗೆ ದೇವತೆಗಳಿಗೂ ದುರ್ಲಭವಾದಂತಹ ಇಷ್ಟಾರ್ಥಗಳು ಲಭಿಸುವುವು ಎಂದು ವರವನ್ನು ಕೊಟ್ಟು ದೇವತೆಗಳು ಸ್ವರ್ಗಕ್ಕೆ ತೆರಳಿದರು. ಆಮೊದಲುಗೊಂಡು ಆ ತೀರ್ಥಕ್ಕೆ ಪ್ರವರಾಸಂಗಮತೀರ್ಥವೆಂದು ಹೆಸರಾಯಿತು.

ತತಃ ಪ್ರಭೃತಿ ತತ್ತೀರ್ಥಂ ಪ್ರವರಾಸಂಗಮಂ ವಿದುಃ ।
ಪ್ರೇರಿತಾ ದೇವದೇವೇನ ಶಕ್ತಿರ್ಯಾ ಪ್ರೇರಿತಾ ತು ಸಾ ॥ ೫೭ ॥

ಅಮೃತಾ ಸೈವ ವಿಖ್ಯಾತಾ ಪ್ರವರೈವಂ ಮಹಾನದೀ ॥ ೫೮ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಶಿವಪ್ರೇರಿತಾಮೃತಾಸಂಗಮಾದಿತೀರ್ಥವರ್ಣನಂ ನಾಮ
ಷಡಧಿಕಶತತಮೋಽಧ್ಯಾಯಃ

೫೭–೫೮. ದೈತ್ಯಶರೀರವನ್ನು ಭೇದಿಸಲು ಶಿವನಿಂದ ಪ್ರೇರಿತಳಾದ ಶಿವಶಕ್ತಿಗೆ ಆಮೇಲೆ ಅಮೃತೇಶ್ವರೀ ಎಂದು ಹೆಸರಾಯಿತು, ಹೀಗೆ ಪ್ರವರಾ ನದಿಯು ಮಹಾನದಿಯಾಯಿತು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಶಿವಪ್ರೇರಿತಾಮೃತಾಸಂಗಮಾದಿತೀರ್ಥವರ್ಣನ ವೆಂಬ ನೂರಾರನೆಯ ಅಧ್ಯಾಯವು ಮುಗಿದುದು.

ಗೌತಮೀಮಹಾತ್ಮ್ಯೆಯಲ್ಲಿ ಮೂವತ್ತೇಳನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತಾಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ವೃದ್ಧಾಸಂಗಮಮಾಖ್ಯಾತಂ ಯತ್ರ ವೃದ್ಧೇಶ್ವರಃ ಶಿವಃ ।
ತಸ್ಯಾಖ್ಯಾನಂ ಪ್ರವಕ್ಷ್ಯಾಮಿ ಶೃಣು ಪಾಪಪ್ರಣಾಶನಂ ॥ ೧ ॥

ಗೌತಮೋ ವೃದ್ಧ ಇತ್ಯುಕ್ತೋ ಮುನಿರಾಸೀನ್ಮಹಾತಪಾಃ ।
ಯದಾ ಪುರಾಭವದ್ಬಾಲೋ ಗೌತಮಸ್ಯ ಸುತೋ ದ್ವಿಜಃ ॥ ೨ ॥

ಅನಾಸಃ ಸ ಪುರೋತ್ಪನ್ನಸ್ತಸ್ಮಾದ್ವಿಕೃತರೂಪಧೃಕ್ ।
ಸ ವೈರಾಗ್ಯಾಜ್ಜಗಾಮಾಥ ದೇಶಂ ತೀರ್ಥಮಿತಸ್ತತಃ ॥ ೩ ॥

ನೂರೇಳನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ವೃದ್ಧಾಸಂಗಮವೆಂಬ ತೀರ್ಥವಿರುವುದು. ಆ ತೀರ್ಥಸ್ಥಳದಲ್ಲಿ ವೃದ್ಧೇಶ್ವರನೆಂಬ ಹೆಸರಿನಿಂದ ಶಿವನು ನೆಲಸಿರುವನು. ಆ ತೀರ್ಥದ ಪಾಪಹರವಾದ ಮಾಹಾತ್ಮ್ಯವನ್ನು ಹೇಳುವೆನು ಕೇಳು.

೨-೩. ವೃದ್ಧ ಗೌತಮನೆಂಬ ಮಹಾ ತಪಸ್ವಿಯಾದ ಮುನಿಯಿದ್ದನು. ಅವನು ಗೌತಮನ ಪುತ್ರನು. ಜನಿಸುವಾಗ ಆ ವೃದ್ಧಗೌತಮನು ಮೂಗಿಲ್ಲದೆ ವಿಕಾರವಾದ ರೂಪವುಳ್ಳವನಾಗಿದ್ದನು. ಆದುದರಿಂದ ಅವನು ವೈರಾಗ್ಯಹೊಂದಿ ತೀರ್ಥಗಳಿಗೂ ದೇಶದೇಶಗಳಿಗೂ ಅಲೆಯತೊಡಗಿದನು.

ಉಪಾಧ್ಯಾಯೇನ ನೈವಾಸೀಲ್ಲಜ್ಜಿತಸ್ಯ ಸಮಾಗಮಃ ।
ಶಿಷ್ಯೈರನ್ಯೈಃ ಸಹಾಧ್ಯಾಯೋ ಲಜ್ಜಿತಸ್ಯ ಚ ನಾಭವತ್ ॥ ೪ ॥

ಉಪನೀತಃ ಕಥಂಚಿಚ್ಚ ಪಿತ್ರಾ ವೈ ಗೌತಮೇನ ಸಃ ।
ಏತಾವತಾ ಗೌತಮೋಽಪಿ ವ್ಯಗಮುಚ್ಚರಿತುಂ ಬಹಿಃ ॥ ೫ ॥

ಏವಂ ಬಹುತಿಥೇ ಕಾಲೇ ಬ್ರಹ್ಮಮಾತ್ರಾ ಧೃತೇ ದ್ವಿಜೇ ।
ನೈವ ಚಾಧ್ಯಯನಂ ತಸ್ಯ ಸಂಜಾತಂ ಗೌತಮಸ್ಯ ಹಿ ॥ ೬ ॥

ನೈವ ಶಾಸ್ತ್ರಸ್ಯ ಚಾಭ್ಯಾಸೋ ಗೌತಮಸ್ಯಾಭವತ್ತದಾ ।
ಅಗ್ನಿಕಾರ್ಯಂ ತತಶ್ಚಕ್ರೇ ನಿತ್ಯಮೇವ ಯತವ್ರತಃ ॥ ೭ ॥

ಗಾಯತ್ರ್ಯಭ್ಯಾಸಮಾತ್ರೇಣ ಬ್ರಾಹ್ಮಣೋ ನಾಮಧಾರಕಃ ।
ಅಗ್ನ್ಯುಪಾಸನಮಾತ್ರಂ ಚ ಗಾಯತ್ರ್ಯಭ್ಯಸನಂ ತಥಾ ॥ ೮ ॥

---

೪. ತನ್ನ ಕುರೂಪದಿಂದ ಲಜ್ಜೆಗೊಂಡು ಆ ಗೌತಮನು ಗುರುವಿನ ಬಳಿ ಶುಶ್ರೂಷೆಮಾಡಿ ವಿದ್ಯಾಭ್ಯಾಸಮಾಡಲಿಲ್ಲ. ಸಹಪಾಠಿಗಳೊಡನೆ ಸೇರಿ ಅಧ್ಯಯನಮಾಡಲೂ ಇಲ್ಲ.

೫. ತಂದೆಯಾದ ಗೌತಮನು ಆ ವೃದ್ಧಗೌತಮನಿಗೆ ಉಪನಯನವೊಂದನ್ನು ಮಾತ್ರ ಹೇಗೋ ಮಾಡಿ ಅವನೂ ದೇಶಾಂತರಕ್ಕೆ ತೆರಳಿದ್ದನು.

೬. ಬಹುಕಾಲದವರೆಗೆ ಅವನನ್ನು ತಾಯಿಯೇ ಸಲಹಿದಳು. ಹೀಗಾಗಿ ಆ ವೃದ್ಧಗೌತಮನಿಗೆ ವಿದ್ಯಾಭ್ಯಾಸವೇ ನಡೆಯಲಿಲ್ಲ.

೭. ಶಾಸ್ತ್ರಾಭ್ಯಾಸವನ್ನೂ ಆ ಗೌತಮನೂ ಮಾಡಲಿಲ್ಲ. ನಿತ್ಯವೂ ಶ್ರದ್ಧೆಯಿಂದ ಅಗ್ನಿಕಾರ್ಯವನ್ನೂ ಗಾಯತ್ರ್ಯುಪಾಸನೆ (ಸಂಧ್ಯಾವಂದನೆ) ಯನ್ನೂ ಮಾಡುತ್ತಿದ್ದನು, ಅಷ್ಟರಿಂದಲೇ ಅವನು ಬ್ರಾಹ್ಮಣನಾಗಿದ್ದನು.

೮. ಅಗ್ನಿಕಾರ್ಯ ಮತ್ತು ಗಾಯತ್ರ್ಯುಪಾಸನೆಗಳಿಂದಲೇ ಆ ಗೌತಮನು ನಾಮಮಾತ್ರಕ್ಕೆ ಬ್ರಾಹ್ಮಣನಾಗಿದ್ದನು.

ಏತಾವತಾ ಬ್ರಾಹ್ಮಣತ್ವಂ ಗೌತಮಸ್ಯಾಭವನ್ಮುನೇ ।
ಉಪಾಸತೋಽಗ್ನಿಂ ವಿಧಿವದ್ಗಾಯತ್ರೀಂ ಚ ಮಹಾತ್ಮನಃ ॥ ೯ ॥

ತಸ್ಯಾಯುರ್ವವೃಧೇ ಪುತ್ರ ಗೌತಮಸ್ಯ ಚಿರಾಯುಷಃ ।
ನ ದಾರಸಂಗ್ರಹಂ ಲೇಭೇ ನೈವ ದಾತಾಸ್ತಿ ಕನ್ಯಕಾಂ ॥ ೧೦ ॥

ತಥಾ ಚರಂಸ್ತೀರ್ಥದೇಶೇ ವನೇಷು ವಿವಿಧೇಷು ಚ ।
ಆಶ್ರಮೇಷು ಚ ಪುಣ್ಯೇಷು ಅಟನ್ನಾಸ್ತೇ ಸ ಗೌತಮಃ ॥ ೧೧ ॥

ಏವಂ ಭ್ರಮನ್ ಶೀತಗಿರಿಮಾಶ್ರಿತ್ಯಾಸ್ತೇ ಸ ಗೌತಮಃ ।
ತತ್ರಾಪಶ್ಯದ್ಗುಹಾಂ ರಮ್ಯಾಂ ವಲ್ಲೀವಿಟಪಮಾಲಿನೀಂ ॥ ೧೨ ॥

ತತ್ರೋಪವಿಶ್ಯ ವಿಪ್ರೇಂದ್ರೋ ವಸ್ತುಂ ಸಮಕರೋನ್ಮತಿಂ ।
ಚಿಂತಯಂಸ್ತು ಪ್ರವಿಷ್ಟೋಽಸಾವಪಶ್ಯತ್ಸ್ತ್ರಿಯಮುತ್ತಮಾಂ ॥ ೧೩ ॥

೯-೧೦. ಹೀಗೆ ಅಗ್ನಿಕಾರ್ಯ ಗಾಯತ್ರ್ಯುಪಾಸನೆಗಳನ್ನು ವಿಧಿವತ್ತಾಗಿ ಆ ಗೌತಮನು ಮಾಡುತ್ತಿರಲು ಆವನಿಗೆ ಬಹುವರ್ಷಗಳಾದುವು. ಆದರೂ ಅವನಿಗೆ ಮದುವೆಯಾಗಲಿಲ್ಲ, ಕುರೂಪಿಯೂ ಅವಿದ್ಯಾವಂತನೂ ಆದ ಅವನಿಗೆ ಯಾರೂ ಹೆಣ್ಣುಕೊಡಲಿಲ್ಲ.

೧೧. ತೀರ್ಥದೇಶ, ಅರಣ್ಯಗಳು, ಆಶ್ರಮಗಳು ಇವುಗಳಲ್ಲಿ ಸಂಚರಿಸುತ್ತಾ ಆ ಗೌತಮನು ಕಾಲ ಕಳೆಯುತ್ತಿದ್ದನು.

೧೨. ಹೀಗೆ ಸಂಚರಿಸುತ್ತಾ ಆ ಗೌತಮನು ಹಿಮಾಲಯಕ್ಕೆ ಬಂದನು, ಅಲ್ಲಿ ಮರಗಳು ಲತೆಗಳು ಇವುಗಳಿಂದ ನಿಬಿಡವಾಗಿಯೂ ರಮ್ಯವಾಗಿಯೂ ಇದ್ದ ಗುಹೆಯೊಂದನ್ನು ನೋಡಿದನು.

೧೩. ಆ ಗುಹೆಯಲ್ಲಿ ವಾಸಮಾಡಬೇಕೆಂದು ಯೋಚಿಸಿ ಅದನ್ನು ಪ್ರವೇಶಿಸಿದನು. ಅದರೊಳಗೆ ಸ್ತ್ರೀಯೋರ್ವಳು ಕುಳಿತಿದ್ದಳು.

ಶಿಥಿಲಾಂಗೀಮಥ ಕೃಶಾಂ ವೃದ್ಧಾಂ ಚ ತಪಸಿ ಸ್ಥಿತಾಂ ।
ಬ್ರಹ್ಮಚರ್ಯೇಣ ವರ್ತಂತೀಂ ವಿರಾಗಾಂ ರಹಸಿ ಸ್ಥಿತಾಂ ॥ ೧೪ ॥

ಸ ತಾಂ ದೃಷ್ಟ್ವಾ ಮುನಿಶ್ರೇಷ್ಠೋ ನಮಸ್ಕಾರಾಯ ತಸ್ಥಿವಾನ್ ।
ನಮಸ್ಯಂತಂ ಮುನಿಶ್ರೇಷ್ಠಂ ತಂ ಗೌತಮಮುವಾರಯತ್ ॥ ೧೫ ॥

॥ ವೃದ್ಧೋವಾಚ ॥

ಗುರುಸ್ತ್ವಂ ಭವಿತಾ ಮಹ್ಯಂ ನ ಮಾಂ ವಂದಿತುಮರ್ಹಸಿ ।
ಆಯುರ್ವಿದ್ಯಾ ಧನಂ ಕೀರ್ತಿರ್ಧರ್ಮಃ ಸ್ವರ್ಗಾದಿಕಂ ಚ ಯತ್ ।
ತಸ್ಯ ನಶ್ಯತಿ ವೈ ಸರ್ವಂ ಯಂ ನಮಸ್ಯತಿ ವೈ ಗುರುಃ ॥ ೧೬ ॥

॥ ಬ್ರಹ್ಮೋವಾಚ ॥

ಕೃತಾಂಜಲಿಪುಟಸ್ತಾಂ ವೈ ಗೌತಮಃ ಪ್ರಾಹ ವಿಸ್ಮಿತಃ ॥ ೧೭ ॥

॥ ಗೌತಮ ಉವಾಚ ॥

ತಪಸ್ವಿನೀ ತ್ವಂ ವೃದ್ಧಾ ಚ ಗುಣಜ್ಯೇಷ್ಠಾ ಚ ಭಾಮಿನೀ ।
ಅಲ್ಪವಿದ್ಯಸ್ತ್ವಲ್ಪವಯಾ ಅಹಂ ತವ ಗುರುಃ ಕಥಂ ॥ ೧೮ ॥

---

೧೪. ಆ ಸ್ತ್ರೀಯು ವೃದ್ಧಳಾಗಿದ್ದು ಶರೀರವೆಲ್ಲವೂ ಶಿಥಿಲವಾಗಿ ಕೃಶವಾಗಿದ್ದಿತು. ವೈರಾಗ್ಯದಿಂದ ಅವಳು ಬ್ರಹ್ಮಚಾರಿಣಿಯಾಗಿದ್ದು ತಪಸ್ಸು ಮಾಡುತ್ತಲಿದ್ದಳು.

೧೫. ಆ ವೃದ್ಧತಪಸ್ವಿನಿಯನ್ನು ನೋಡಿ ಗೌತಮನು ನಮಸ್ಕರಿಸಲು ಉದ್ಯುಕ್ತನಾದನು. ನಮಸ್ಕರಿಸುತ್ತಲಿರುವ ಅವನನ್ನು ತಡೆದು ಆ ವೃದ್ಧೆಯು,

೧೬. ಓ ಮುನಿ, ನೀನು ನನಗೆ ಗುರುಸಮಾನನು. ನಮಸ್ಕರಿಸಬೇಡ. ಗುರುವು ನಮಸ್ಕರಿಸಿದರೆ ಶಿಷ್ಯನ ಆಯುಸ್ಸು, ವಿದ್ಯೆ, ಧನ, ಕೀರ್ತಿ, ಧರ್ಮ, ಸ್ವರ್ಗ, ಮೋಕ್ಷ ಮೊದಲಾದುವುಗಳೆಲ್ಲವೂ ನಾಶವಾಗುವುವು ಎಂದಳು.

೧೭-೧೮. ಆಗ ಗೌತಮನು ಆಶ್ಚರ್ಯಗೊಂಡು ಅಂಜಲಿಯನ್ನು ಧರಿಸಿ ಆ ಸ್ತ್ರೀಯನ್ನು ಕುರಿತು ಎಲೌ ತಪಸ್ವಿನಿ, ನೀನು ವೃದ್ಧಳು, ತಪಸ್ವಿನಿಯು. ಮೇಲಾಗಿ ಗುಣದಲ್ಲಿಯೂ ಹಿರಿಯವಳು. ಇಂತಹ ನಿನಗೆ ಅಲ್ಪವಿದ್ಯೆಯುಳ್ಳವನೂ ನಿನಗಿಂತ ಕಿರಿಯವನೂ ಆದ ನಾನು ಗುರುವಾಗುವುದು ಹೇಗೆ? ಎಂದನು.

॥ ವೃದ್ಧೋವಾಚ ॥

ಆರ್ಷ್ಟಿಷೇಣಪ್ರಿಯಪುತ್ರ ಋತಧ್ವಜ ಇತಿ ಶ್ರುತಃ ।
ಗುಣವಾನ್ಮತಿಮಾನ್ ಶೂರಃ ಕ್ಷತ್ರಧರ್ಮಪರಾಯಣಃ ॥ ೧೯ ॥

ಸ ಕದಾಚಿದ್ವನಂ ಪ್ರಾಯಾನ್ಮೃಗಯಾಕೃಷ್ಟಚೇತನಃ ।
ವಿಶ್ರಾಮಮಕರೋದಸ್ಯಾಂ ಗುಹಾಯಾಂ ಸ ಋತಧ್ವಜಃ ॥ ೨೦ ॥

ಯುವಾ ಸ ಮತಿಮಾನ್ದಕ್ಷೋ ಬಲೇನ ಮಹತಾ ವೃತಃ ।
ತಂ ವಿಶ್ರಾಂತಂ ನೃಪವರಮಪ್ಸರಾ ಪದೃಶೇ ತತಃ ॥ ೨೧ ॥

ಗಂಧರ್ವರಾಜಸ್ಯ ಸುತಾ ಸುಶ್ಯಾಮಾ ಇತಿ ವಿಶ್ರುತಾ ।
ತಾಂ ದೃಷ್ಟ್ವಾ ಚಕಮೇ ರಾಜಾ ರಾಜಾನಂ ಚಕಮೇ ಚ ಸಾ ॥ ೨೨ ॥

ಇತಿ ಕ್ರೀಡಾ ಸಮಭವತ್ತಯಾ ರಾಜ್ಞೋ ಮಹಾಮತೇ ।
ನಿವೃತ್ತಕಾಮೋ ರಾಜೇಂದ್ರಸ್ತಾಮಾಪೃಚ್ಛ್ಯಾಗಮದ್ಗೃಹಂ ॥ ೨೩ ॥

---

೧೯. ಅದಕ್ಕೆ ವೃದ್ಧೆಯು ಹಿಂದೆ ಆರ್ಷ್ಟಿಷೇಣನ ಮಗನಾದ ಋತಧ್ವಜನೆಂಬ ರಾಜನಿದ್ದನು, ಅವನು ಗುಣವಂತನೂ ಬುದ್ಧಿಶಾಲಿಯೂ ಶೂರನೂ ಕ್ಷತ್ರಿಯ ಧರ್ಮವನ್ನು ಬಿಡದೇ ಆಚರಿಸುವವನೂ ಆಗಿದ್ದನು.

೨೦. ಆ ಋತಧ್ವಜರಾಜನೊಂದುದಿನ ಬೇಟೆಗಾಗಿ ಸೈನ್ಯದೊಡನೆ ಕಾಡಿಗೆ ಹೋದನು. ಆಗಲವನು ಈ ಗುಹೆಯಲ್ಲಿಯೇ ವಿಶ್ರಮಿಸಿಕೊಂಡಿದ್ದನು.

೨೧. ತರುಣನೂ ಸುಂದರನೂ ಶೂರನೂ ಆದ ಆ ಋತಧ್ವಜನನ್ನು ಗಂಧರ್ವರಾಜನ ಮಗಳಾದ ಸುಶ್ಯಾಮಾ ಎಂಬ ಅಪ್ಸರೆಯು ನೋಡಿದಳು.

೨೨. ಆ ಸುಂದರಿಯನ್ನು ನೋಡಿ ಆ ಋತಧ್ವಜನೂ ಕಾಮಿಸಿದನು. ಆ ಅಪ್ಸರೆಯೂ ರಾಜನನ್ನು ಕಾಮಿಸಿದಳು. ಆಮೇಲೆ ಅವರೀರ್ವರೂ ಇಲ್ಲಿ ಸ್ವೇಚ್ಛೆಯಾಗಿ ವಿಹರಿಸಿದರು.

೨೩. ಕಾಮಸುಖವನ್ನನುಭವಿಸಿ ಋತಧ್ವಜನು ಆಮೇಲೆ ಅವಳಿಂದ ಬೀಳ್ಕೊಂಡು ಮನೆಗೆ ತೆರಳಿದನು. ಆಗ ಆ ಸುಶ್ಯಾಮಾದೇವಿಯಲ್ಲಿ ನಾನು ಜನಿಸಿದೆನು.

ಉತ್ಪನ್ನಾಹಂ ತತಸ್ತಸ್ಯಾಂ ಸುಕ್ಷ್ಮಾಮಾಯಾಂ ಮಹಾಮತೇ ।
ಗಚ್ಛಂತೀ ಮಾಂ ತದಾ ಮಾತಾ ಇದಮಾಹ ತಪೋಧನ ॥ ೨೪ ॥

॥ ಸುಕ್ಷ್ಮಾವೋವಾಚ ॥

ಯಸ್ತ್ವಸ್ಯಾಂ ಪ್ರವಿಶೇದ್ಭದ್ರೇ ಸ ತೇ ಭರ್ತಾ ಭವಿಷ್ಯತಿ ॥ ೨೫ ॥

॥ ವೃದ್ಧೋವಾಚ ॥

ಇತ್ಯುಕ್ತ್ವಾ ಸಾ ಜಗಾಮಾಥ ಮಾತಾ ಮಮ ಮಹಾಮತೇ ।
ತಸ್ಮಾದತ್ರ ಪ್ರವಿಷ್ಟಸ್ತ್ವಂ ಪುಮಾನ್ನಾನ್ಯಃ ಕದಾಚನ ॥ ೨೬ ॥

ಸಹಸ್ರಾಣಿ ತಥಾಶೀತಿಂ ಕೃತ್ವಾ ರಾಜ್ಯಂ ಪಿತಾ ಮಮ ।
ಅತ್ರೈವ ಚ ತಪಸ್ತಪ್ತ್ವಾ ತತಃ ಸ್ವರ್ಗಮುಪೇಯಿವಾನ್ ॥ ೨೭ ॥

ಸ್ವರ್ಗಂ ಯಾತೇಽಪಿ ಪಿತರಿ ಸಹಸ್ರಾಣಿ ತಥಾ ದಶ ।
ವರ್ಷಾಣಿ ಮುನಿಶಾರ್ದೂಲ ರಾಜ್ಯಂ ಕೃತ್ವಾ ತಥಾ ಪರಃ ॥ ೨೮ ॥

೨೪-೨೬. ಆ ನನ್ನ ತಾಯಿಯು ತನ್ನ ಸ್ಥಾನಕ್ಕೆ ಹೋಗುವಾಗ ನನ್ನನ್ನು ಕರೆದು ಎಲೌ ಮಗಳೇ, ಈ ಗುಹೆಯಲ್ಲಿ ಮೊದಲಾವ ಪುರುಷನು ಪ್ರವೇಶಿಸುವನೋ ಅವನೇ ನಿನ್ನ ಪತಿಯು, ಎಂದು ಹೇಳಿ ನನ್ನ ತಾಯಿಯು ಹೊರಟುಹೋದಳು. ಆದುದರಿಂದ ಈ ಗುಹೆಯಲ್ಲಿ ಪ್ರವೇಶಿಸಿದ ನೀನೇ ನನ್ನ ಪತಿಯು.

೨೭. ನನ್ನ ತಂದೆಯಾದ ಋತಧ್ವಜನು ಎಂಭತ್ತುಸಾವಿರ ವರ್ಷಗಳ ವರೆಗೆ ರಾಜ್ಯವನ್ನಾಳಿ ಕೊನೆಗೆ ಈ ವನದಲ್ಲಿಯೇ ತಪವನ್ನಾಚರಿಸಿ ಸ್ವರ್ಗವನ್ನು ಪಡೆದನು.

೨೮. ತಂದೆಯು ದಿವಂಗತನಾದಮೇಲೆ ನನ್ನ ಸಹೋದರನೋರ್ವನು ಹತ್ತುಸಾವಿರ ವರ್ಷಗಳ ವರೆಗೆ ರಾಜ್ಯವನ್ನಾಳಿ ಕೊನೆಗೆ ಈ ವನಕ್ಕೆ ಬಂದು ತಪವನ್ನಾಚರಿಸಿ ಸ್ವರ್ಗವನ್ನು ಪಡೆದನು. ಆಗಲೂ ನಾನು ಇಲ್ಲಿಯೇ ಇದ್ದೆನು.

ಸ್ವರ್ಗೇ ಯಾತೋ ಮಮ ಭ್ರಾತಾ ಅಹಮತ್ರೈವ ಸಂಸ್ಥಿತಾ ।
ಅಹಂ ಬ್ರಹ್ಮನ್ನಾನ್ಯವೃತ್ತಾ ನ ಮಾತಾ ನ ಪಿತಾ ಮಮ ॥ ೨೯ ॥

ಅಹಮಾತ್ಮೇಶ್ವರೀ ಬ್ರಹ್ಮನ್ನಿವಿಷ್ಟಾ ಕ್ಷತ್ರಕನ್ಯಕಾ ।
ತಸ್ಮಾದ್ಭಜಸ್ವ ಮಾಂ ಬ್ರಹ್ಮನ್ಸ್ವತಸ್ಥಾಂ ಪುರುಷಾರ್ಥಿನೀಂ ॥ ೩೦ ॥

॥ ಗೌತಮ ಉವಾಚ ॥

ಸಹಸ್ರಾಯುರಹಂ ಭದ್ರೇ ಮತ್ತಸ್ತ್ವಂ ವಯಸಾಧಿಕಾ ।
ಅಹಂ ಬಾಲಸ್ತ್ವಂ ತು ವೃದ್ಧಾ ನೈವಾಯಂ ಘಟತೇ ಮಿಥಃ ॥ ೩೧ ॥

॥ ವೃದ್ಧೋವಾಚ ॥

ತ್ವಂ ಭರ್ತಾ ಮೇ ಪುರಾ ದಿಷ್ಟೋ ನಾನ್ಯೋ ಭರ್ತಾ ಮತೋ ಮಮ ।
ಧಾತ್ರಾ ದತ್ತಸ್ತತಸ್ತ್ವಂ ಮಾಂ ನ ನಿರಾಕರ್ತುಮರ್ಹಸಿ ॥ ೩೨ ॥

ಅಥವಾ ನೇಚ್ಛಸಿ ಮಾಂ ತ್ವಮುಪ್ರದುಷ್ಟಾಮನುವ್ರತಾಂ ।
ತತಸ್ತ್ಯಕ್ಷ್ಯಾಮಿ ಜೀವಂ ಮೇ ಇದಾನೀಂ ತವ ಪಶ್ಯತಃ ॥ ೩೩ ॥

೨೯-೩೦. ಓ ಬ್ರಾಹ್ಮಣ, ನಾನು ಈವರೆವಿಗೂ ಯಾವ ಪುರುಷನನ್ನೂ ವರಿಸಿಲ್ಲ, ನನಗೆ ತಂದೆಯೂ ತಾಯಿಯೂ ಇಲ್ಲ, ನನಗೆ ನಾನೇ ಒಡತಿಯಾಗಿರುವೆನು. ತಪಸ್ವಿನಿಯೂ ಪುರುಷಾಪೇಕ್ಷಿಣಿಯೂ ಕ್ಷತ್ರಿಯಕುವರಿಯೂ ಆದ ನನ್ನನ್ನು ಮದುವೆಯಾಗು ಎಂದು ತನ್ನ ವೃತ್ತಾಂತವನ್ನರುಹಿದಳು.

೩೧. ಆಗ ಗೌತಮನು ಎಲೌ ಮಂಗಳೇ, ನನಗೆ ಸಾವಿರಾರುವರುಷ ವಯಸ್ಸಾಗಿರುವುದು. ನನಗಿಂತಲೂ ನೀನು ವಯಸ್ಸಾದವಳು. ನಿನಗಿಂತ ನಾನು ಕಿರಿಯವನು. ನೀನು ವೃದ್ಧೆಯು. ಆದುದರಿಂದ ನನಗೂ ನಿನಗೂ ದಾಂಪತ್ಯವು ಹೊಂದುವುದಿಲ್ಲ ಎನ್ನಲು,

೩೨. ವೃದ್ಧೆಯು ಮತ್ತಿಂತೆಂದಳು—ನನಗೆ ನೀನೇ ಪತಿಯೆಂದು ಬ್ರಹ್ಮಸಂಕಲ್ಪವು. ಇನ್ನಾರೂ ನನಗೆ ಪತಿಯಾಗಲಾರರು. ಆದುದರಿಂದ ನನ್ನನ್ನು ನಿರಾಕರಿಸಬೇಡ.

೩೩. ಅದಲ್ಲದೆ ಪರಿಶುದ್ಧಳೂ ನಿನ್ನನ್ನೇ ನಂಬಿರುವವಳೂ ಆದ ನನ್ನನ್ನು ನೀನು ನಿರಾಕರಿಸಿದರೆ ನಾನು ನಿನ್ನೆದುರಿನಲ್ಲಿಯೇ ಪ್ರಾಣವನ್ನು ಬಿಡುವೆನು.

ಅಪೇಕ್ಷಿತಾಪ್ರಾಪ್ತಿತೋ ಹಿ ದೇಹಿನಾಂ ಮರಣಂ ವರಂ ।
ಅನುರಕ್ತಜನತ್ಯಾಗೇ ಪಾತಕಾಂತೋ ನ ವಿದ್ಯತೇ ॥ ೩೪ ॥

॥ ಬ್ರಹ್ಮೋವಾಚ ॥
ವೃದ್ಧಾಯಾಸ್ತದ್ವಚಃ ಶ್ರುತ್ವಾ ಗೌತಮೋ ವಾಕ್ಯಮಬ್ರವೀತ್ ॥ ೩೫ ॥

॥ ಗೌತಮ ಉವಾಚ ॥
ಅಹಂ ತಪೋವಿರಹಿತೋ ವಿದ್ಯಾಹೀನೋ ಹ್ಯಕಿಂಚನಃ ।
ನಾಹಂ ವರೋ ಹಿ ಯೋಗ್ಯಸ್ತೇ ಕುರೂಪೋ ಭೋಗವರ್ಜಿತಃ ॥ ೩೬ ॥

ಅನಾಸೋಽಹಂ ಕಿಂ ಕರೋಮಿ ಅತಪೋವಿದ್ಯ ಏವ ಚ ।
ತಸ್ಮಾತ್ಸ್ವರೂಪಂ ಸುವಿದ್ಯಾಮಾಪಾದ್ಯ ಪ್ರಥಮಂ ಶುಭೇ ।
ಪಶ್ಚಾತ್ತೇ ವಚನಂ ಕಾರ್ಯಂ ತತೋ ವೃದ್ಧಾಬ್ರವೀದ್ದ್ವಿಜಂ ॥ ೩೭ ॥

॥ ವೃದ್ಧೋವಾಚ ॥
ಮಯಾ ಸರಸ್ವತೀ ದೇವೀ ತೋಷಿತಾ ತಪಸಾ ದ್ವಿಜ ।
ತಥೈವಾಪೋ ರೂಪವತ್ಯೋ ರೂಪದಾತಾಗ್ನಿರೇವ ಚ ॥ ೩೮ ॥

---

೩೪. ಅಪೇಕ್ಷಿತವಸ್ತುವನ್ನು ಪಡೆಯದೇ ವ್ಯಥೆಪಡುವುದಕ್ಕಿಂತಲೂ ಮರಣವೇ ಲೇಸು. ನೀನಾದರೂ ಅನುರಕ್ತಳಾದ ನನ್ನನ್ನು ಬಿಟ್ಟರೆ ಮಹಾ ಪಾಪವನ್ನು ಹೊಂದುವೆ. ಅನುರಕ್ತ ಜನರನ್ನು ಬಿಡುವುದರಿಂದುಂಟಾಗುವ ಪಾಪಕ್ಕೆ ಕೊನೆಯಿಲ್ಲ.

೩೫–೩೬. ವೃದ್ಧೆಯ ಆ ಮಾತನ್ನು ಕೇಳಿ ಗೌತಮನು ಎಲೌ ವೃದ್ಧಳೇ, ನಾನು ತಪಸ್ವಿಯಲ್ಲ, ವಿದ್ಯಾವಂತನಲ್ಲ, ಮೇಲಾಗಿ ದರಿದ್ರನು. ರೂಪವಂತನಲ್ಲ ಮೂಗಿಲ್ಲದ ಕುರೂಪಿಯು ನಾನು. ಇಂತಹ ನನ್ನನ್ನು ಸೇರಿದರೆ ನಿನಗೆ ಯಾವ ಸುಖವೂ ಲಭಿಸಲಾರದು.

೩೭. ಆದುದರಿಂದ ಮೊದಲು ಸುರೂಪವನ್ನೂ ವಿದ್ಯೆಯನ್ನೂ ಪಡೆದು ಆಮೇಲೆ ನಿನ್ನನ್ನು ವರಿಸುವೆನು ಎಂದನು. ಆಗ ಆ ವೃದ್ಧೆಯು,

೩೮. ಓ ವಿಪ್ರ, ನಾನು ಸರಸ್ವತೀದೇವಿಯನ್ನು ತಪಸ್ಸಿನಿಂದ ಸಂತೋಷಗೊಳಿಸಿರುವೆನು ಮತ್ತು ರೂಪವಂತರಾದ ಜಲಾಗ್ನಿದೇವತೆಗಳನ್ನೂ ಸಂತೋಷಗೊಳಿಸಿರುವೆನು.

ತಸ್ಮಾದ್ವಾಗೀಶ್ವರೀ ದೇವೀ ಸಾ ತೇ ವಿದ್ಯಾಂ ಪ್ರದಾಸ್ಯತಿ ।
ಅಗ್ನಿಶ್ಚ ರೂಪವಾನ್ದೇವಸ್ತವ ರೂಪಂ ಪ್ರದಾಸ್ಯತಿ ॥ ೩೯ ॥

॥ ಬ್ರಹ್ಮೋವಾಚ ॥

ಏವಮುಕ್ತ್ವಾ ಗೌತಮಂ ತಂ ವೃದ್ಧೋವಾಚ ವಿಭಾವಸುಂ ।
ಪ್ರಾರ್ಥಯಿತ್ವಾ ಸುವಿದ್ಯಂ ತಂ ಸುರೂಪಂ ಚಾಕರೋನ್ಮುನಿಂ ॥ ೪೦ ॥

ತತಃ ಸುವಿದ್ಯಃ ಸುಭಗಃ ಸುಕಾಂತೋ
ವೃದ್ಧಾಂ ಸ ಪತ್ನೀಮಕರೋತ್ಪ್ರೀತಿಯುಕ್ತಃ ।
ತಯಾ ಸ ರೇಮೇ ಬಹುಲಾ ಮನೋಜ್ಞಯಾ
ಸಮಾಃ ಸುಖಂ ಪ್ರೀತಮನಾ ಗುಹಾಯಾಂ ॥ ೪೧ ॥

ಕದಾಚಿತ್ತತ್ರ ವಸತೋರ್ದಂಪತ್ಯೋರ್ಮುದತೋರ್ಗಿರೌ ।
ಗುಹಾಯಾಂ ಮುನಿಶಾರ್ದೂಲ ಆಜಗ್ಮುರ್ಮುನಯೋಽಮಲಾಃ ॥ ೪೨ ॥

---

೩೯. ಆದುದರಿಂದ ಸರಸ್ವತೀದೇವಿಯು ನಿನಗೆ ವಿದ್ಯೆಯನ್ನನುಗ್ರಹಿಸುವಳು, ಅಗ್ನಿಯು ನಿನಗೆ ಸುರೂಪವನ್ನು ಕರುಣಿಸುವನು ಎಂದಳು.

೪೦. ಹೀಗೆ ಹೇಳಿ ವೃದ್ಧೆಯು ಅಗ್ನಿಯನ್ನೂ ಸರಸ್ವತಿಯನ್ನೂ ಪ್ರಾರ್ಥಿಸಿ ಅವರನುಗ್ರಹದಿಂದ ಆ ಗೌತಮನನ್ನು ವಿದ್ಯಾವಂತನನ್ನಾಗಿಯೂ ರೂಪವಂತನನ್ನಾಗಿಯೂ ಮಾಡಿದಳು.

೪೧. ಬಳಿಕ ವಿದ್ಯಾವಂತನೂ ರೂಪವಂತನೂ ಆಗಿ ಆ ಗೌತಮನು ಪ್ರೀತಿಯಿಂದ ಆ ವೃದ್ಧೆಯನ್ನು ಮದುವೆಯಾದನು. ಸುಂದರಿಯಾದವಳೊಡನೆ ಆ ಗುಹೆಯಲ್ಲಿ ಸಂತೋಷದಿಂದ ಬಹುವರ್ಷಗಳವರೆಗೆ ಕ್ರೀಡಿಸಿದನು.

೪೨–೪೩. ಹೀಗೆ ಆ ವೃದ್ಧದಂಪತಿಗಳು ಗುಹೆಯಲ್ಲಿ ವಿಹರಿಸುತ್ತಿರಲು ಒಂದು ಸಾರಿ ಆ ಗುಹೆಗೆ ತಪಸ್ವಿಗಳಾದ ವಸಿಷ್ಠವಾಮದೇವ ಮೊದಲಾದ ಕೆಲ

ವಸಿಷ್ಠವಾಮದೇವಾದ್ಯಾ ಯೇ ಚಾನ್ಯೇ ಚ ಮಹರ್ಷಯಃ ।
ಭ್ರಮಂತಃ ಪುಣ್ಯತೀರ್ಥಾನಿ ಪ್ರಾಪ್ನುವಂಸ್ತಸ್ಯ ತಾಂ ಗುಹಾಂ ॥ ೪೩ ॥

ಆಗತಾಂಸ್ತಾನೃಷೀನ್ ಜ್ಞಾತ್ವಾ ಗೌತಮಃ ಸಹ ಭಾರ್ಯಯಾ ।
ಸತ್ಕಾರಮಕರೋತ್ತೇಷಾಂ ಜಹಸುಸ್ತಂ ಚ ಕೇಚನ ॥ ೪೪ ॥

ಯೇ ಬಾಲಾ ಯೌವನೋನ್ಮತ್ತಾ ವಯಸಾ ಯೇ ಚ ಮಧ್ಯಮಾಃ ।
ವೃದ್ಧಾಂ ಚ ಗೌತಮಂ ಪ್ರೇಕ್ಷ್ಯ ಜಹಸುಸ್ತತ್ರ ಕೇಚನ ॥ ೪೫ ॥

॥ ಋಷಯ ಊಚುಃ ॥

ಪುತ್ರೋಽಯಂ ತವ ಪೌತ್ರೋ ವಾ ವೃದ್ಧೇ ಕೋ ಗೌತಮೋಽಭವತ್ ।
ಸತ್ಯಂ ವದಸ್ವ ಕಲ್ಯಾಣಿ ಇತ್ಯೇವಂ ಜಹಸುರ್ದ್ವಿಜಾಃ ॥ ೪೬ ॥

ವಿಷಂ ವೃದ್ಧಸ್ಯ ಯುವತೀ ವೃದ್ಧಾಯಾ ಅನೃತಂ ಯುವಾ ।
ಇಷ್ಟಾನಿಷ್ಟಸಮಾಯೋಗೋ ದೃಷ್ಟೋಽಸ್ಮಾಭಿರಹೋ ಚಿರಾತ್ ॥ ೪೭ ॥

ವರು ಮಹಾ ಮುನಿಗಳು ಪುಣ್ಯತೀರ್ಥಗಳನ್ನು ಸಂಚರಿಸುತ್ತಾ ಆ ಗುಹೆಗೆ ಬಂದರು.

೪೪-೪೫. ಮನೆಗೆ ಬಂದ ಆ ಮಹಾಮುನಿಗಳನ್ನು ಗೌತಮನು ಹೆಂಡತಿಯೊಡನೆ ಸತ್ಕರಿಸಿದನು. ಆದರೆ ಆ ಮುನಿಗಳಲ್ಲಿ ಯೌವನೋನ್ಮತ್ತರಾದ ಕೆಲವರು ತರುಣಮುನಿಗಳೂ ಋಷಿಕುಮಾರರೂ ಗೌತಮನನ್ನೂ ಅವನ ವೃದ್ಧ ಪತ್ನಿಯನ್ನೂ ನೋಡಿ ಹಾಸ್ಯಮಾಡಿದರು.

೪೬. ಎಲೌ ಮುದುಕಿ, ಈ ಗೌತಮನು ನಿನಗೆ ಮಗನೆ? ಅಥವಾ ಮೊಮ್ಮಗನೇ? ನಿಜವನ್ನು ಹೇಳು.

೪೭. ಮುದುಕನಿಗೆ ತರುಣಿಯು ವಿಷವು, ಆದರೆ ಮುದುಕಿಗೆ ತರುಣನು ಅನೃತಪ್ರಾಯನು. ವರನಿಗೆ ಅನಿಷ್ಟವೂ ವಧುವಿಗೆ ಇಷ್ಟವೂ ಆದಂತಹ ದಾಂಪತ್ಯವನ್ನು ನಾವು ಇಲ್ಲಿ ನೋಡಿದಂತಾಯಿತು. ಇದು ತುಂಬಾ ಆಶ್ಚರ್ಯವಾಗಿರುವುದು.

॥ ಬ್ರಹ್ಮೋವಾಚ ॥

ಇತ್ಯೇವಮೂಚಿರೇ ಕೇಚಿದ್ದಂಪತ್ಯೋಃ ಶೃಣ್ವತೋಸ್ತದಾ ।
ಏವಮುಕ್ತ್ವಾ ಕೃತಾಥಿತ್ಯಾ ಯಯುಃ ಸರ್ವೇ ಮಹರ್ಷಯಃ ॥ ೪೮ ॥

ಋಷೀಣಾಂ ವಚನಂ ಶ್ರುತ್ವಾ ಉಭಾವಪಿ ಸುದುಃಖಿತೌ ।
ಲಜ್ಜಿತೌ ಚ ಮಹಾಪ್ರಾಜ್ಞೌ ಗೌತಮೋ ಭಾರ್ಯಯಾ ಸಹ ।
ಪಪ್ರಚ್ಛ ಮುನಿಶಾರ್ದೂಲಮಗಸ್ತ್ಯಮೃಷಿಸತ್ತಮಂ ॥ ೪೯ ॥

॥ ಗೌತಮ ಉವಾಚ ॥

ಕೋ ದೇಶಃ ಕಿಮು ತೀರ್ಥಂ ವಾ ಯತ್ರ ಶ್ರೇಯಃ ಸಮಾಪ್ಯತೇ ।
ಶೀಘ್ರಮೇವ ಮಹಾಪ್ರಾಜ್ಞ ಭುಕ್ತಿಮುಕ್ತಿಪ್ರದಾಯಕಂ ॥ ೫೦ ॥

॥ ಅಗಸ್ತ್ಯ ಉವಾಚ ॥

ವದದ್ಭಿರ್ಮುನಿಭಿರ್ಬ್ರಹ್ಮನ್ಮಯಾ ಶ್ರುತಮಿದಂ ವಚಃ ।
ಸರ್ವೇ ಕಾಮಾಸ್ತತ್ರ ಪೂರ್ಣಾ ಗೌತಮ್ಯಾಂ ನಾತ್ರ ಸಂಶಯಃ ॥ ೫೧ ॥

---

೪೮. ಹೀಗೆ ಆ ಗೌತಮದಂಪತಿಗಳು ಕೇಳುತ್ತಿರುವಂತೆಯೇ ಹೇಳಿ ಆಮೇಲಾ ಮುನಿಗಳ ಆತಿಥ್ಯವನ್ನು ಸ್ವೀಕರಿಸಿ ತಮ್ಮಾಶ್ರಮಗಳಿಗೆ ತೆರಳಿದರು.

೪೯. ಋಷಿಗಳು ಆ ಹಾಸ್ಯವಚನವನ್ನು ಕೇಳಿ ವೃದ್ಧಾಗೌತಮರೀರ್ವರೂ ಲಜ್ಜೆಗೊಂಡು ದುಃಖಿತರಾದರು. ಆಮೇಲೆ ಮಹಾಪ್ರಾಜ್ಞನಾದ ಗೌತಮನು ಹೆಂಡತಿಯೊಡನೆ ಅಗಸ್ತ್ಯಮಹಾಮುನಿಯ ಬಳಿಗೆ ಬಂದು ನಮಸ್ಕರಿಸಿ,

೫೦. ಓ ಮುನಿ, ಶೀಘ್ರವಾಗಿ ಶ್ರೇಯಸ್ಸನ್ನು ಪಡೆಯಲು ಅನುಕೂಲವಾದ ದೇಶವಾವುದು ? ತೀರ್ಥವಾವುದು ? ಎಲ್ಲಿ ಭೋಗಮೋಕ್ಷಗಳೆರಡೂ ಲಭಿಸುವುವು ? ಹೇಳು ಎಂದು ಪ್ರಾರ್ಥಿಸಲು,

೫೧. ಅಗಸ್ತ್ಯನಿಂತೆಂದನು—ಎಲೈ ಗೌತಮ, ಗೌತಮೀನದಿಯಲ್ಲಿ ಸ್ನಾನಮಾಡುವುದರಿಂದ ಇಷ್ಟಾರ್ಥಗಳೆಲ್ಲವೂ ತಪ್ಪದೇ ಸಿದ್ಧಿಸುವುವೆಂದು ಮಹಾಮುನಿಗಳಿಂದ ನಾನೀಮಾತನ್ನು ಕೇಳಿರುವೆನು.

ತಸ್ಮಾದ್ಗಚ್ಛ ಮಹಾಬುದ್ಧೇ ಗೌತಮೀಂ ಪಾಪನಾಶಿನೀಂ ।
ಅಹಂ ತ್ವಾಮನುಯಾಸ್ಯಾಮಿ ಯಥೇಚ್ಛಸಿ ತಥಾ ಕುರು ॥ ೫೨ ॥

॥ ಬ್ರಹ್ಮೋವಾಚ ॥

ಏತಚ್ಛ್ರುತ್ವಾಽಗಸ್ತ್ಯವಾಕ್ಯಂ ವೃದ್ಧಯಾ ಗೌತಮೋಽಭ್ಯಗಾತ್ ।
ತತ್ರ ತೇಪೇ ತಪಸ್ತೀವ್ರಂ ಪತ್ನ್ಯಾ ಸ ಭಗವಾನೃಷಿಃ ॥ ೫೩ ॥

ಸ್ತುತಿಂ ಚಕಾರ ದೇವಸ್ಯ ಶಂಭೋರ್ವಿಷ್ಣೋಸ್ತಥೈವ ಚ ।
ಗಂಗಾಂ ಚ ತೋಷಯಾಮಾಸ ಭಾರ್ಯಾರ್ಥಂ ಭಗವಾನೃಷಿಃ ॥ ೫೪ ॥

॥ ಗೌತಮ ಉವಾಚ ॥

ಖಿನ್ನಾತ್ಮನಾಮತ್ರ ಭವೇ ತ್ವಮೇವ ಶರಣಂ ಶಿವಃ ।
ಮರುಭೂಮಾವಧ್ವಗಾನಾಂ ವಿಟಪೀವ ಪ್ರಿಯಾಯುತಃ ॥ ೫೫ ॥

ಉಚ್ಚಾವಚಾನಾಂ ಭೂತಾನಾಂ ಸರ್ವಥಾ ಪಾಪನೋದನಃ ।
ಸಸ್ಯಾನಾಂ ಘನವತ್ಕೃಷ್ಣ ತ್ವಮವಗ್ರಹಶೋಷಿಣಾಂ ॥ ೫೬ ॥

---

೫೨. ಆದುದರಿಂದ ಬುದ್ಧಿಶಾಲಿಯಾದ ನೀನು ಪಾಪನಾಶಿನಿಯಾದ ಗೌತಮೀನದಿಗೆ ಹೋಗು. ನೀನು ಹೋಗುವುದಾದರೆ ನಾನೂ ಬರುವೆನು. ನಿನ್ನಿಷ್ಟಬಂದಂತೆ ಮಾಡು ಎಂದನು.

೫೩. ಅಗಸ್ತ್ಯನ ಮಾತನ್ನು ಕೇಳಿ ಗೌತಮನು ವೃದ್ಧೆಯೊಡನೆ ಗೌತಮೀತೀರಕ್ಕೆ ಹೋಗಿ ಅಲ್ಲಿ ಪತ್ನಿಯೊಡನೆ ಘೋರತಪವನ್ನಾಚರಿಸಿದನು.

೫೪. ಮತ್ತು ತನ್ನ ಪತ್ನಿಗಾಗಿ ದೇವದೇವನಾದ ಮಹಾದೇವನನ್ನು ಹರಿಯನ್ನೂ ಗೌತಮೀನದಿಯನ್ನೂ ಭಕ್ತಿಯಿಂದ ಸ್ತುತಿಸಿದನು.

೫೫. ಓ ಶಿವ, ಮಂಗಳರೂಪನಾದ ನೀನು ಸಂಸಾರತಾಪತ್ರಯದಲ್ಲಿ ಸಿಲುಕಿದವರಿಗೆ ರಕ್ಷಕನು. ಮರುಭೂಮಿಯಲ್ಲಿ ಪ್ರಯಾಣಿಕರಿಗೆ ಫಲಪುಷ್ಪಭರಿತವಾದ ಮರದಂತೆ ಆಶ್ರಯನು.

೫೬. ಓ ನಾರಾಯಣ, ನಾನಾಬಗೆಯಾದ ಪ್ರಾಣಿಗಳ ಪಾಪವನ್ನು ಹೋಗಲಾಡಿಸುವವನು ನೀನು. ಬಿಸಿಲಿನಿಂದ ಒಣಗುತ್ತಿರುವ ಪೈರನ್ನು ಮಳೆಯು ರಕ್ಷಿಸುವಂತೆ ನೀನು ದಳಿತದುಃಖಿತರನ್ನು ಅನುಗ್ರಹದಿಂದ ಸಲಹುವೆ.

ವೈಕುಂಠದುರ್ಗನಿಃಶ್ರೇಣಿಸ್ತ್ವಂ ಪೀಯೂಷತರಂಗಿಣೀ ।
ಅಧೋಗತಾನಾಂ ತಪ್ತಾನಾಂ ಶರಣಂ ಭವ ಗೌತಮಿ ॥ ೫೭ ॥

॥ ಬ್ರಹ್ಮೋವಾಚ ॥

ತತಸ್ತುಷ್ಟಾವದದ್ವಾಕ್ಯಂ ಗೌತಮಂ ವೃದ್ಧಯಾ ಯುತಂ ।
ಶರಣಾಗತದೀನಾರ್ತಂ ಶರಣ್ಯಾ ಗೌತಮೀ ಮುದಾ ॥ ೫೮ ॥

॥ ಗೌತಮ್ಯುವಾಚ ॥

ಅಭಿಷಿಂಚಸ್ವ ಭಾರ್ಯಾಂ ತ್ವಂ ಮಜ್ಜಲೈರ್ಮಂತ್ರಸಂಯುತೈಃ ।
ಕಲಶೈರುಪಚಾರೈಶ್ಚ ತತಃ ಪತ್ನೀ ತವ ಪ್ರಿಯಾ ॥ ೫೯ ॥

ಸುರೂಪಾ ಚಾರುಸರ್ವಾಂಗೀ ಸುಭಗಾ ಚಾರುಲೋಚನಾ ।
ಸರ್ವಲಕ್ಷಣಸಂಪೂರ್ಣಾ ರಮ್ಯರೂಪಮವಾಪ್ಸ್ಯತಿ ॥ ೬೦ ॥

ರೂಪವತ್ಯಾ ಪುನಸ್ತ್ವಂ ವೈ ಭಾರ್ಯಯಾ ಚಾಭಿಷೇಚಿತಃ ।
ಸರ್ವಲಕ್ಷಣಸಂಪೂರ್ಣಃ ಕಾಂತಂ ರೂಪಮವಾಪ್ಸ್ಯಸಿ ॥ ೬೧ ॥

---

೫೭. ಅಮೃತತರಂಗಮಯಳಾದ ಓ ಗೌತಮೀ, ನೀನು ವೈಕುಂಠ ದುರ್ಗಕ್ಕೆ ಸೋಪಾನಪಂಕ್ತಿಯಾಗಿರುವೆ. ದುಃಖದಿಂದ ಬಳಲಿರುವ ದೀನರನ್ನು ಉದ್ಧರಿಸು ಎಂದು ಪ್ರಾರ್ಥಿಸಲು,

೫೮. ಆಗ ಗೌತಮಿಯು ಪ್ರಸನ್ನಳಾಗಿ ಭಾರ್ಯೆಯೊಡನಿರುವ ಶರಣಾಗತನೂ ದುಃಖಿತನೂ ಆದ ಗೌತಮನನ್ನು ಕುರಿತು,

೫೯-೬೦. ಎಲೈ ಗೌತಮ, ನನ್ನ ಜಲವನ್ನು ಉಪಚಾರಗಳಿಂದಲೂ ಮಂತ್ರದಿಂದಲೂ ಅಭಿಮಂತ್ರಿಸಿ ಅದರಿಂದ ನಿನ್ನ ಪತ್ನಿಗೆ ಅಭಿಷೇಕಮಾಡು, ಅದರಿಂದ ಅವಳಿಗೆ ಸುಂದರವಾದ ಅವಯವಗಳೂ, ಕಣ್ಣುಗಳೂ ಉಂಟಾಗಿ ಸಕಲಲಕ್ಷಣಗಳಿಂದ ಕೂಡಿದ ರೂಪವತಿಯಾಗುವಳು.

೬೧. ಆಮೇಲೆ ರೂಪವತಿಯಾದ ನಿನ್ನ ಹೆಂಡತಿಯು ಗೌತಮೀಜಲದಿಂದ ನಿನಗಭಿಷೇಕವನ್ನು ಮಾಡಿದರೆ ನೀನೂ ಲಕ್ಷಣವಂತನೂ ರೂಪವಂತನೂ ಆಗುವೆ ಎಂದಳು.

॥ ಬ್ರಹ್ಮೋವಾಚ ॥

ತಥೇತಿ ಗಾಂಗವಚನಾದ್ಯಥೋಕ್ತಂ ತೌ ಚ ಚಕ್ರತುಃ ।
ಸುರೂಪತಾಮುಭೌ ಪ್ರಾಪ್ತೌ ಗೌತಮ್ಯಾಶ್ಚ ಪ್ರಸಾದತಃ ॥ ೬೨ ॥

ಅಭಿಷೇಕೋದಕಂ ಯಚ್ಚ ಸಾ ನದೀ ಸಮಜಾಯತ ।
ತಸ್ಯಾ ನಾಮ್ನಾ ತು ವಿಖ್ಯಾತಾ ವೃದ್ಧಯಾ ಮುನಿಸತ್ತಮ ॥ ೬೩ ॥

ವೃದ್ಧಾ ನದೀತಿವಿಖ್ಯಾತಾ ಗೌತಮೋಽಪಿ ತಥೋಚ್ಯತೇ ।
ವೃದ್ಧಗೌತಮ ಇತ್ಯುಕ್ತ ಋಷಿಭಿಃ ಸಮವಾಸಿಭಿಃ ।
ವೃದ್ಧಾ ತು ಗೌತಮೀಂ ಪ್ರಾಹ ಗಂಗಾಂ ಪ್ರತ್ಯಕ್ಷರೂಪಿಣೀಂ ॥ ೬೪ ॥

॥ ವೃದ್ಧೋವಾಚ ॥

ಮನ್ನಾಮ್ನಾಯಂ ನದೀಂ ದೇವಿ ವೃದ್ಧಾ ಚೇತ್ಯಭಿಧೀಯತಾಂ ।
ತ್ವಯಾ ಚ ಸಂಗಮಸ್ತಸ್ಯಾಸ್ತಸ್ಯಾಸ್ತೀರ್ಥಮನುತ್ತಮಂ ॥ ೬೫ ॥

ರೂಪಸೌಭಾಗ್ಯಸಂಪತ್ತಿಪುತ್ರಪೌತ್ರಪ್ರವರ್ಧನಂ ।
ಆಯುರಾರೋಗ್ಯಕಲ್ಯಾಣಂ ಜಯಪ್ರೀತಿವಿವರ್ಧನಂ ।
ಸ್ನಾನದಾನಾದಿಹೋಮೈಶ್ಚ ಪಿತೄಣಾಂ ಪಾವನಂ ಪರಂ ॥ ೬೬ ॥

---

೬೨. ಗೌತಮೀನದಿಯ ಮಾತಿನಂತೆ ವೃದ್ಧಾಗೌತಮರು ಗೌತಮೀ ಜಲದಿಂದ ಪರಸ್ಪರ ಅಭಿಷೇಕಮಾಡಿಕೊಂಡರು. ಗೌತಮಿಯ ಅನುಗ್ರಹದಿಂದ ಆಗ ಆ ದಂಪತಿಗಳೀರ್ವರೂ ತರುಣರೂ ರೂಪವಂತರೂ ಆದರು.

೬೩. ಆ ದಂಪತಿಗಳು ಅಭಿಷೇಕಿಸಿಕೊಂಡ ಜಲದಿಂದ ನದಿಯೊಂದು ಜನಿಸಿತು. ಅದು ಆ ವೃದ್ಧಾದೇವಿಯ ಹೆಸರಿನಿಂದ ವೃದ್ಧಾನದಿಯೆಂದು ಪ್ರಸಿದ್ಧವಾಯಿತು.

೬೪. ಈ ರಹಸ್ಯವನ್ನು ಬಲ್ಲ ಋಷಿಗಳು ಆ ಗೌತಮನನ್ನು ವೃದ್ಧಗೌತಮನೆಂದು ಕರೆದರು. ಆಗ ವೃದ್ಧಾದೇವಿಯು ಪ್ರತ್ಯಕ್ಷಳಾದ ಗೌತಮಿ (ಗಂಗೆ)ಯೊಡನೆ ಇಂತೆಂದಳು.

೬೫. ಓ ದೇವಿ, ಈ ನದಿಯು ನನ್ನ ಹೆಸರಿನಿಂದ ವೃದ್ಧಾನದಿಯೆಂದು ಕರೆಯಲ್ಪಡಲಿ. ಈ ನದಿಯು ನಿನ್ನಲ್ಲಿ [ಗೌತಮಿಯಲ್ಲಿ] ಸೇರುವ ಸಂಗಮಸ್ಥಳವು ಪವಿತ್ರತೀರ್ಥವಾಗಲಿ,

೬೬. ಈ ವೃದ್ಧಾಸಂಗಮತೀರ್ಥದಲ್ಲಿ ಸ್ನಾನದಾನಗಳನ್ನೂ ಹೋಮ

॥ ಬ್ರಹ್ಮೋವಾಚ ॥

ಅಸ್ತ್ವಿತ್ಯಾಹ ಚ ತಾಂ ಗಂಗಾ ಸುವೃದ್ಧಾಂ ಗೌತಮಪ್ರಿಯಾಂ ।
ಗೌತಮಸ್ಥಾಪಿತಂ ಲಿಂಗಂ ವೃದ್ಧಾನಾಮ್ನೈವ ಕೀರ್ತಿತಂ ॥ ೬೭ ॥

ತತ್ರೈವ ಚ ಮುದಂ ಪ್ರಾಪ್ತೋ ವೃದ್ಧಯಾ ಮುನಿಸತ್ತಮಃ ।
ತತ್ರ ಸ್ನಾನಂ ಚ ದಾನಂ ಚ ಸರ್ವಾಭೀಷ್ಟಪ್ರದಾಯಕಂ ॥ ೬೮ ॥

ತತಃ ಪ್ರಭೃತಿ ತತ್ತೀರ್ಥಂ ವೃದ್ಧಾಸಂಗಮಮುಚ್ಯತೇ ॥ ೬೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ವೃದ್ಧಾಸಂಗಮಾದ್ಯುಭಯತಟಸಪ್ತದಶತೀರ್ಥವರ್ಣನಂ
ನಾಮ ಸಪ್ತಾಧಿಕಶತತಮೋಽಧ್ಯಾಯಃ

ಗಳನ್ನೂ ಮಾಡಿದರೆ ಪಿತೃಗಳಿಗೆ ತೃಪ್ತಿಯಾಗಲಿ. ರೂಪ, ಸೌಭಾಗ್ಯ, ಐಶ್ವರ್ಯ ಮಕ್ಕಳು ಮಮ್ಮಕ್ಕಳುಗಳು ವೃದ್ಧಿಹೊಂದಲಿ. ಆಯುಸ್ಸು, ಆರೋಗ್ಯ, ಮಂಗಳ ಜಯ, ಸಂತೋಷಗಳು ಹೆಚ್ಚಲಿ. ಹೀಗೆ ವರವನ್ನನುಗ್ರಹಿಸಬೇಕೆಂದು ಪ್ರಾರ್ಥಿಸಲು,

೬೭. ಗಂಗೆಯು ಆ ಗೌತಮಪತ್ನಿಯಾದ ವೃದ್ಧಾದೇವಿಗೆ ಹಾಗೆಯೇ ವರವನ್ನನುಗ್ರಹಿಸಿದಳು. ಆ ವೃದ್ಧಾಸಂಗಮತೀರದಲ್ಲಿ ಗೌತಮನು ಪ್ರತಿಷ್ಠಿಸಿದ ವೃದ್ಧೇಶ್ವರಲಿಂಗವಿರುವುದು. ಆ ಸ್ಥಳದಲ್ಲಿಯೇ ಗೌತಮಮುನಿಯು ತನ್ನ ಇಷ್ಟಾರ್ಥಗಳೆಲ್ಲವನ್ನೂ ಪಡೆದನು.

೬೮-೬೯. ಆ ಮೊದಲುಗೊಂಡು ಆ ತೀರ್ಥವು ವೃದ್ಧಾಸಂಗಮತೀರ್ಥವೆಂದು ಪ್ರಸಿದ್ಧವಾಯಿತು. ಆ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ಇಷ್ಟಾರ್ಥಗಳೆಲ್ಲವೂ ಸಿದ್ಧಿಸುವುವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ವೃದ್ಧಾಸಂಗಮವೇ ಮೊದಲಾದ ಹದಿನೇಳು ತೀರ್ಥಗಳವರ್ಣನವೆಂಬ ನೂರೇಳನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ಮೂವತ್ತೆಂಟನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಅಷ್ಟಾಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಇಲಾತೀರ್ಥಮಿತಿ ಖ್ಯಾತಂ ಸರ್ವಸಿದ್ಧಿಕರಂ ನೃಣಾಂ ।
ಬ್ರಹ್ಮಹತ್ಯಾದಿಪಾಪಾನಾಂ ಪಾವನಂ ಸರ್ವಕಾಮದಂ ॥ ೧ ॥

ವೈವಸ್ವತಾನ್ವಯೇ ಜಾತ ಇಲೋ ನಾಮ ಜನೇಶ್ವರಃ ।
ಮಹತ್ಯಾ ಸೇನಯಾ ಸಾರ್ಧಂ ಜಗಾಮ ಮೃಗಯಾವನಂ ॥ ೨ ॥

ನೂರೆಂಟನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಇಲಾತೀರ್ಥವೆಂಬ ತೀರ್ಥವಿರುವುದು. ಅದು ಸಕಲ ಸಿದ್ಧಿಯನ್ನೂ ಉಂಟುಮಾಡುವುದು, ಬ್ರಹ್ಮಹತ್ಯೆ ಮೊದಲಾದ ಪಾಪಗಳೆಲ್ಲವನ್ನೂ ಹೋಗಲಾಡಿಸುವುದು.

೨. ಸೂರ್ಯವಂಶದಲ್ಲಿ ಇಲನೆಂಬರಾಜನು ಪ್ರಸಿದ್ಧನಾಗಿದ್ದನು. ಅವನೊಂದುದಿನ ದೊಡ್ಡ ಸೈನ್ಯದೊಡನೆ ಬೇಟೆಗಾಗಿ ಕಾಡಿಗೆ ಹೋದನು.

ಪರಿಬಭ್ರಾಮ ಗಹನಂ ಬಹುವ್ಯಾಲಸಮಾಕುಲಂ ।
ನಾನಾಕಾರದ್ವಿಜಯುತಂ ವಿಟಪೈಃ ಪರಿಶೋಭಿತಂ ॥ ೩ ॥

ವನೇಚರಂ ನೃಪಶ್ರೇಷ್ಠೋ ಮೃಗಯಾಗತಮಾನಸಃ ।
ತತ್ರೈವ ಮತಿಮಾಧತ್ತ ಇಲೋಽಮಾತ್ಯಾನಥಾಬ್ರವೀತ್ ॥ ೪ ॥

॥ ಇಲ ಉವಾಚ ॥

ಗಚ್ಛಂತು ನಗರಂ ಸರ್ವೇ ಮಮ ಪುತ್ರೇಣ ಪಾಲಿತಂ ।
ದೇಶಂ ಕೋಶಂ ಬಲಂ ರಾಜ್ಯಂ ಪಾಲಯಂತು ಪುನಶ್ಚ ತಂ ॥ ೫ ॥

ವಸಿಷ್ಠೋಽಪಿ ತಥಾ ಯಾತು ಆದಾಯಾಗ್ನೀನ್ಪಿತೇವ ನಃ ।
ಪತ್ನೀಭಿಃ ಸಹಿತೋ ಧೀಮಾನರಣ್ಯೇಽಹಂ ವಸಾಮ್ಯಥ ॥ ೬ ॥

ಅರಣ್ಯಭೋಗಭುಗ್ಭಿಶ್ಚ ವಾಜಿವಾರಣಮಾನುಷೈಃ ।
ಮೃಗಯಾಶೀಲಿಭಿಃ ಕೈಶ್ಚಿದ್ಯಾಂತು ಸರ್ವ ಇತಃ ಪುರೀಂ ॥ ೭ ॥

---

೩. ಅನೇಕ ಕ್ರೂರಜಂತುಗಳಿಂದಲೂ ನಾನಾಬಗೆಯ ಹಕ್ಕಿಗಳಿಂದಲೂ ದೊಡ್ಡದೊಡ್ಡ ಮರಗಳಿಂದಲೂ ನಿಬಿಡವಾದ ಅರಣ್ಯವನ್ನು ಹೊಕ್ಕು ಆ ರಾಜನು ಬೇಟೆಯಾಡುತ್ತಾ ಸಂಚರಿಸುತ್ತಿದ್ದನು,

೪. ಹೀಗೆ ಬೇಟೆಯಲ್ಲಿ ಆಸಕ್ತನಾಗಿ ಆ ರಾಜನು ಬಹುದಿನಗಳವರೆಗೆ ಅಲ್ಲಿರುತ್ತಾ ಒಂದುದಿನ ತನ್ನ ಮಂತ್ರಿಗಳನ್ನು ಕುರಿತು.

೫. ನೀವೆಲ್ಲರೂ ಪಟ್ಟಣಕ್ಕೆ ತೆರಳಿರಿ. ನನ್ನ ಪುತ್ರನು ಪಾಲಿಸುತ್ತಿರುವ ದೇಶ ಬೊಕ್ಕಸ ಬಲ ರಾಜ್ಯಗಳನ್ನು ನೀವೂ ಸಹಕರಿಸಿ ಪಾಲಿಸಿ.

೬. ನಮಗೆ ತಂದೆಯಂತಿರುವ ವಸಿಷ್ಠಮುನಿಯೂ ಸಹ ಅಗ್ನಿಗಳನ್ನು ತೆಗೆದುಕೊಂಡು ಪಟ್ಟಣಕ್ಕೆ ಹೊರಡಲಿ. ನಾನು ಹೆಂಡಿರೊಡನೆ ಈ ಅರಣ್ಯದಲ್ಲಿಯೇ ವಾಸಿಸುವೆನು.

೭. ಅರಣ್ಯವಾಸದಲ್ಲಿ ಅಭಿರುಚಿಯುಳ್ಳ ಮತ್ತು ಬೇಟೆಯಲ್ಲಿ ಸಮರ್ಥರಾದ ಕೆಲವು ಅನುಚರರೊಡನೆಯೂ ಕುದುರೆ ಆನೆ ಮನುಷ್ಯರೊಡನೆಯೂ ನಾನು ಇಲ್ಲಿ ವಾಸಿಸುವೆನು. ಮಿಕ್ಕ ನೀವೆಲ್ಲರೂ ಪಟ್ಟಣಕ್ಕೆ ಹೋಗಿರೆನ್ನಲು,

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಯಯುಸ್ತೇಽಪಿ ಸ್ವಯಂ ಪ್ರಾಯಾಚ್ಛನೈರ್ಗಿರಿಂ ।
ಹಿಮವಂತಂ ರತ್ನಮಯಂ ವಸಂಸ್ತತ್ರ ಇಲೋ ನೃಪಃ ॥ ೮ ॥

ದದರ್ಶ ಕಂದರಂ ತತ್ರ ನಾನಾರತ್ನವಿಚಿತ್ರಿತಂ ।
ತತ್ರ ಯಕ್ಷೇಶ್ವರಃ ಕಶ್ಚಿತ್ಸಮನ್ಯುರಿತಿ ವಿಶ್ರುತಃ ॥ ೯ ॥

ತಸ್ಯ ಭಾರ್ಯಾ ಸಮಾನಾಮ್ನಾ ಭರ್ತೃವ್ರತಪರಾಯಣಾ ।
ತಸ್ಮಿನ್ವಸತ್ಯಸೌ ಯಕ್ಷೋ ರಮಣೀಯೇ ನಗೋತ್ತಮೇ ॥ ೧೦ ॥

ಮೃಗರೂಪೇಣ ವ್ಯಚರದ್ಭಾರ್ಯಯಾ ಸ ಮಹಾಮತಿಃ ।
ಸ್ವೇಚ್ಛಯಾ ಸ್ವವನೇ ಯಕ್ಷಃ ಕ್ರೀಡತೇ ನೃತ್ಯಗೀತಕೈಃ ॥ ೧೧ ॥

ಇತ್ಥಂ ಸ ಯಕ್ಷೋ ಜಾನಾತಿ ಮೃಗರೂಪಧರೋಽಪಿ ಚ ।
ಇಲಸ್ತು ತಂ ನ ಜಾನಾತಿ ಕಂದರಂ ಯಕ್ಷಪಾಲಿತಂ ॥ ೧೨ ॥

---

೮. ಇಲರಾಜನ ಮಾತಿನಂತೆ ಮಂತ್ರಿ ಮೊದಲಾದವರೆಲ್ಲರೂ ಪಟ್ಟಣಕ್ಕೆ ತೆರಳಿದರು. ಇತ್ತ ಕಾಡಿನಲ್ಲಿ ವಾಸಿಸುತ್ತಾ ಆ ರಾಜನು ರತ್ನಮಯವಾದ ಹಿಮಾಲಯಕ್ಕೆ ಹೋಗಿ ಅಲ್ಲಿ ರತ್ನಮವಾದ ಗುಹೆಯೊಂದನ್ನು ನೋಡಿದನು.

೯. ಆ ಗುಹೆಯಲ್ಲಿ ಸಮನ್ಯುವೆಂಬ ಯಕ್ಷರಾಜನು ವಾಸಿಸುತ್ತಿದ್ದನು. ಸಮಾದೇವಿಯೆಂಬುವವಳು ಆ ಯಕ್ಷನ ಹೆಂಡತಿಯು. ಅವಳು ಪತಿವ್ರತೆಯಾಗಿದ್ದಳು.

೧೦-೧೧. ಹಿಮಾಲಯದಲ್ಲಿ ವಾಸಿಸುತ್ತಿದ್ದ ಆ ಯಕ್ಷನು ಮೃಗರೂಪದಿಂದ ಹೆಂಡತಿಯೊಡನೆ ಸಂಚರಿಸುತ್ತಾ ತನ್ನ ವನದಲ್ಲಿ ಗೀತನೃತ್ಯಗಳಿಂದ ವಿಹರಿಸುತ್ತಿದ್ದನು.

೧೨. ಮೃಗರೂಪವನ್ನು ಧರಿಸಿದ್ದರೂ ಆ ಯಕ್ಷನು ಇಲರಾಜನನ್ನು ಗುರುತಿಸಿದನು. ಆದರಾ ರಾಜನಿಗೆ ಅದು ಯಕ್ಷನ ಗುಹೆಯೆಂದು ತಿಳಿಯಲಿಲ್ಲ.

ಯಕ್ಷಸ್ಯ ಗೇಹಂ ವಿಪುಲಂ ನಾನಾರತ್ನವಿಚಿತ್ರಿತಂ ।
ತತ್ರೋಽಪವಿಷ್ಟೋ ನೃಪತಿರ್ಮಹತ್ಯಾ ಸೇನಯಾ ವೃತಃ ॥ ೧೩ ॥

ವಾಸಂ ಚಕ್ರೇ ಸ ತತ್ರೈವ ಗೇಹೇ ಯಕ್ಷಸ್ಯ ಧೀಮತಃ ।
ಸ ಯಕ್ಷೋಽಧರ್ಮಕೋಪೇನ ಭಾರ್ಯಯಾ ಮೃಗರೂಪಧೃಕ್ ॥ ೧೪ ॥

ಇಲಂ ಜೇತುಂ ನ ಶಕ್ನೋಮಿ ಯಾಚಿತೋ ನ ದದಾತಿ ಚ ।
ಹೃತಂ ಗೇಹಂ ಮಮಾನೇನ ಕಿಂ ಕರೋಮೀತ್ಯಚಿಂತಯತ್ ॥ ೧೫ ॥

ಯುಧಿ ಮತ್ತಂ ಕಥಂ ಹನ್ಯಾಂ ಚೇತಿ ಸ್ಥಿತ್ವಾ ಸ ಯಕ್ಷರಾಟ್ ।
ಆತ್ಮೀಯಾನ್ಪ್ರೇಷಯಾಮಾಸ ಯಕ್ಷಾನ್ ಶೂರಾನ್ಧನುರ್ಧರಾನ್ ॥ ೧೬ ॥

॥ ಯಕ್ಷ ಉವಾಚ ॥

ಯುದ್ಧೇ ಜಿತ್ವಾ ಚ ರಾಜಾನಮಿಲಮುದ್ಧತದಂತಿನಂ ।
ಗೃಹಾದ್ಯಥಾನ್ಯತೋ ಯಾತಿ ಮಮ ತತ್ಕರ್ತುಮರ್ಹಥ ॥ ೧೭ ॥

---

೧೩. ಯಕ್ಷನ ರತ್ನಮಯವಾದ ವಿಶಾಲವಾದಾ ಗುಹೆಯಲ್ಲಿ ಇಲ ರಾಜನು ತನ್ನ ಸೇನೆಯೊಡನೆ ವಾಸಿಸತೊಡಗಿದನು.

೧೪–೧೫. ಇಲರಾಜನ ಆ ಅತ್ಯಾಚಾರದಿಂದ ಕೋಪಗೊಂಡು ಯಕ್ಷನು ಈ ಇಲರಾಜನನ್ನು ನಾನು ಸಂಹರಿಸಲಾರೆನು. ಯಾಚಿಸಿದರೆ ಇವನು ನನ್ನ ಮನೆಯನ್ನು ಬಿಟ್ಟುಕೊಡುವುದಿಲ್ಲ. ನನ್ನ ವಾಸಸ್ಥಾನವನ್ನೇ ಈ ದುಷ್ಟನು ಅಪ ಹರಿಸಿದನು. ಈಗೇನು ಮಾಡಲಿ? ಎಂದು ಯೋಚಿಸಿ,

೧೬. ಕೊಬ್ಬಿರುವ ಈ ರಾಜನನ್ನು ಹೇಗಾದರೂ ಸಂಹರಿಸಬೇಕು ಎಂದು ನಿಶ್ಚಯಿಸಿ, ಶೂರರೂ ಧನುರ್ಧಾರಿಗಳೂ ಆದ ತನ್ನ ಭಟರನ್ನು ಇಲ ರಾಜನಮೇಲೆ ಯುದ್ಧಕ್ಕೆ ಕಳುಹಿಸುತ್ತಾ,

೧೭. ಎಲೈ ಭಟರೇ, ಯುದ್ಧದಲ್ಲಿ ಮದಸಿನ ಆನೆಯಂತಿರುವ ಈ ಇಲ ರಾಜನನ್ನು ಜಯಿಸಿ. ಅವನು ನನ್ನ ಮನೆಯನ್ನು ಬಿಟ್ಟು ತೆರಳುವಂತೆ ಮಾಡಿ. ಎಂದಪ್ಪಣೆಮಾಡಿದನು.

॥ ಬ್ರಹ್ಮೋವಾಚ ॥

ಯಕ್ಷೇಶ್ವರಸ್ಯ ತದ್ವಾಕ್ಯಾದ್ಯಕ್ಷಾಸ್ತೇ ಯುದ್ಧದುರ್ಮದಾಃ ।
ಇಲಂ ಗತ್ವಾಬ್ರುವನ್ಸರ್ವೇ ನಿರ್ಗಚ್ಛಾಸ್ಮಾದ್ಗುಹಾಲಯಾತ್ ॥ ೧೮ ॥

ನ ಚೇದ್ಯುದ್ಧಾತ್ಪರಿಭ್ರಷ್ಟಃ ಪಲಾಯ್ಯ ಕ್ವ ಗಮಿಷ್ಯಸಿ ।
ತದ್ಯಕ್ಷವಚನಾತ್ಕೋಪಾದ್ಯುದ್ಧಂ ಚಕ್ರೇ ಸ ರಾಜರಾಟ್ ॥ ೧೯ ॥

ಜಿತ್ವಾ ಯಕ್ಷಾನ್ಬಹುವಿಧಾನುವಾಸ ದಶ ಶರ್ವರೀಃ ।
ಯಕ್ಷೇಶ್ವರೋ ಮೃಗೋ ಭೂತ್ವಾ ಭಾರ್ಯಯಾಪಿ ವನೇ ವಸನ್ ॥ ೨೦ ॥

ಹೃತಗೇಹೋ ವನಂ ಪ್ರಾಪ್ತೋ ಹೃತಭೃತ್ಯಃ ಸ ಯಕ್ಷಿಣೀಂ ।
ಪ್ರಾಹ ಚಿಂತಾಪರೋ ಭೂತ್ವಾ ಮೃಗೀರೂಪಧರಾಂ ಪ್ರಿಯಾಂ ॥ ೨೧ ॥

॥ ಯಕ್ಷ ಉವಾಚ ॥

ರಾಜಾಯಂ ದುರ್ಮನಾಃ ಕಾಂತೇ ವ್ಯಸನಾಸಕ್ತಮಾನಸಃ ।
ಕಥಮಾಯಾತಿ ವಿಪದಂ ತತ್ರೋಪಾಯೋ ವಿಚಿಂತ್ಯತಾಂ ॥ ೨೨ ॥

---

೧೮. ಯಕ್ಷರಾಜನ ಮಾತಿನಂತೆ ಯುದ್ಧನಿಪುಣರಾದ ಯಕ್ಷಭಟರು ಇಲರಾಜನ ಬಳಿಗೆ ಹೋಗಿ ಈ ಗುಹೆಯನ್ನು ಬಿಟ್ಟು ಹೊರಡು. ಇಲ್ಲದಿದ್ದರೆ ಯುದ್ಧಮಾಡಿ ಜಯಿಸಿ ನಿನ್ನನ್ನು ಓಡಿಸುವೆವು ಎಂದರು.

೧೯. ಯಕ್ಷರ ಆ ನಿಷ್ಠುರವಚನವನ್ನು ಕೇಳಿ ಇಲರಾಜನು ಕೋಪಗೊಂಡು ಅವರೊಡನೆ ಯುದ್ಧಮಾಡಿ ಅವರೆಲ್ಲರನ್ನೂ ಜಯಿಸಿದನು. ಆಮೇಲಾ ಗುಹೆಯಲ್ಲಿ ಬಹುಕಾಲ ವಾಸಿಸಿದನು.

೨೦-೨೧. ಯಕ್ಷಭಟರೆಲ್ಲರೂ ಹತರಾಗಲು ಯಕ್ಷರಾಜನು ಮನೆಯಿಲ್ಲದೇ ಸೇವಕರಿಲ್ಲದೇ ವ್ಯಥೆಪಡುತ್ತಾ ಕಾಡಿನಲ್ಲಿ ಮೃಗರೂಪದಿಂದ ಸಂಚರಿಸುತ್ತಾ ಮೃಗರೂಪಳಾದ ತನ್ನ ಹೆಂಡತಿಯನ್ನು ಕುರಿತು,

೨೨. ಎಲೌ ಕಾಂತೆ, ಈ ರಾಜನು ದುಷ್ಟನು. ಮೃಗಬೇಟೆಯ ವ್ಯಸನವುಳ್ಳವನು. ಇವನು ವಿಪತ್ತನ್ನು ಪಡೆಯುವಂತೆ ಒಂದು ಉಪಾಯವನ್ನು ಚಿಂತಿಸು.

ಪಾಪರ್ಧಿವ್ಯಸನಾಂತಾನಿ ರಾಜ್ಯಾನ್ಯಖಿಲಭೂಭುಜಾಂ ।
ಪ್ರಾಪಯೋಮಾವನಂ ಸುಭ್ರೂರ್ಮೃಗೀ ಭೂತ್ವಾ ಮನೋಹರಾ ॥ ೨೩ ॥

ಪ್ರವಿಶೇತ್ತತ್ರ ರಾಜಾಯಂ ಸ್ತ್ರೀ ಭವಿಷ್ಯತ್ಯಸಂಶಯಂ ।
ಕರಣೀಯಂ ತ್ವಯಾ ಭದ್ರೇ ನ ಚೈತದ್ಯುಜ್ಯತೇ ಮಮ ।
ಅಹಂ ತು ಪುರುಷೋ ಯೇನ ತ್ವಂ ಪುನಃ ಸ್ತ್ರೀ ಚ ಯಕ್ಷಿಣೀ ॥ ೨೪ ॥

॥ ಯಕ್ಷಿಣ್ಯುವಾಚ ॥

ಕಥಂ ತ್ವಯಾ ನ ಗಂತವ್ಯಮುಮಾವನಮನುತ್ತಮಂ ।
ಗತೇಽಪಿ ತ್ವಯಿ ಕೋ ದೋಷಸ್ತನ್ಮೇ ಕಥಯ ತತ್ತ್ವತಃ ॥ ೨೫ ॥

॥ ಯಕ್ಷ ಉವಾಚ ॥

ಹಿಮವತ್ಪರ್ವತಶ್ರೇಷ್ಠ ಉಮಯಾ ಸಹಿತಃ ಶಿವಃ ।
ದೇವೈರ್ಗಣೈರನುವೃತೋ ವಿಚಚಾರ ಯಥಾಸುಖಂ ।
ಪಾರ್ವತೀ ಶಂಕರಂ ಪ್ರಾಹ ಕದಾಚಿದ್ರಹಸಿ ಸ್ಥಿತಂ ॥ ೨೬ ॥

---

೨೩. ರಾಜರಿಗೆ ಪಾಪಬುದ್ಧಿ ದುರ್ವ್ಯಸನಗಳುದಯಿಸಿದರೆ ಅವರ ರಾಜ್ಯವು ನಾಶವಾಗುವುದು. ಎಲೌ ಸುಂದರಿ, ನೀನು ಸುಂದರ ಮೃಗರೂಪವನ್ನು ಧರಿಸಿ ಉಮಾವನಕ್ಕೆ ಈ ರಾಜನನ್ನು ಕರೆದೊಯ್ಯು. ಆ ವನಕ್ಕೆ ಅವನು ಪ್ರವೇಶಿಸಿದರೆ ನಿಶ್ಚಯವಾಗಿ ಸ್ತ್ರೀಯಾಗುವನು.

೨೪. ಸ್ತ್ರೀಯಾದ ನೀನೇ ಈ ಕಾರ್ಯವನ್ನು ಮಾಡಬೇಕು, ಪುರುಷನಾದ ನಾನು ಈ ಕಾರ್ಯವನ್ನು ಮಾಡುವಂತಿಲ್ಲ ಎನ್ನಲು,

೨೫. ಅದಕ್ಕೆ ಯಕ್ಷಪತ್ನಿಯು ಓ ಪ್ರಿಯನೇ, ನೀನೇಕೆ ಉಮಾವನಕ್ಕೆ ಬರಬಾರದು? ಬಂದರೆ ದೋಷವೇನು? ಇದರ ರಹಸ್ಯವನ್ನು ಹೇಳು ಎಂದು ಕೇಳಲು,

೨೬. ಯಕ್ಷನು ಹೇಳಿದನು—ಒಮ್ಮೆ ಈ ಹಿಮಾಲಯದಲ್ಲಿ ಪರಮೇಶ್ವರನು ಪಾರ್ವತಿಯೊಡನೆಯೂ, ದೇವತೆಗಳೊಡನೆಯೂ, ಗಣಗಳೊಡನೆಯೂ ಸಂಚರಿಸುತ್ತಿದ್ದನು.

॥ ಪಾರ್ವತ್ಯುವಾಚ ॥

ಸ್ತ್ರೀಣಾಮೇವ ಸ್ವಭಾವೋಽಸ್ತಿ ರತಂ ಗೋಪಾಯಿತಂ ಭವೇತ್ ।
ತಸ್ಮಾನ್ಮೇ ನಿಯತಂ ದೇಶಮಾಜ್ಞಯಾ ರಕ್ಷಿತಂ ತವ ॥ ೨೭ ॥

ದೇಹಿ ಮೇ ತ್ರಿದಶೇಶಾನ ಉಮಾವನಮಿತಿ ಶ್ರುತಂ ।
ವಿನಾ ತ್ವಯಾ ಗಣೇಶೇನ ಕಾರ್ತಿಕೇಯೇನ ನಂದಿನಾ ॥ ೨೮ ॥

ಯಸ್ತ್ವತ್ರ ಪ್ರವಿಶೇನ್ನಾಥ ಸ್ತ್ರೀತ್ವಂ ತಸ್ಯ ಭವೇದಿತಿ ॥ ೨೯ ॥

॥ ಯಕ್ಷ ಉವಾಚ ॥

ಇತ್ಯಾಜ್ಞೋಮಾವನೇ ದತ್ತಾ ಪ್ರಸನ್ನೇನೇಂದುಮೌಲಿನಾ ।
ಕಿಂ ಕರೋಮಿ ಪುಮಾನ್ಕಾಂತೇ ತ್ವಯಾ ಪ್ರಣಯನಾರ್ದಿತಃ ।
ತಸ್ಮಾನ್ಮಯಾ ನ ಗಂತವ್ಯಮುಮಾಯಾ ವನಮುತ್ತಮಂ ॥ ೩೦ ॥

॥ ಬ್ರಹ್ಮೋವಾಚ ॥

ತದ್ಭರ್ತೃವಚನಂ ಶ್ರುತ್ವಾ ಯಕ್ಷಿಣೀ ಕಾಮರೂಪಿಣೀ ।
ಮೃಗೀ ಭೂತ್ವಾ ವಿಶಾಲಾಕ್ಷೀ ಇಲಸ್ಯ ಪುರತೋಽಭವತ್ ॥ ೩೧ ॥

---

೨೭. ಹೀಗಿರಲೊಂದುದಿನ ಪಾರ್ವತಿಯು ಏಕಾಂತದಲ್ಲಿ ಶಿವನೊಡನೆ ಓ ಸ್ವಾಮಿ, ಸ್ತ್ರೀಯರದೊಂದು ಸ್ವಭಾವವು. ಅವರಿಗೆ ಕ್ರೀಡೆಯು ಏಕಾಂತದಲ್ಲೇ ನಡೆಯಬೇಕು. ಆದುದರಿಂದ ಪುರುಷರು ಪ್ರವೇಶಿಸಿದಂತಹ ಒಂದು ವನವನ್ನು ನನಗೆ ಅನುಗ್ರಹಿಸು, ಅದಕ್ಕೆ ಉಮಾವನವೆಂದು ಹೆಸರಾಗಲಿ.

೨೮-೨೯. ನೀನು (ಪರಮೇಶ್ವರ) ಗಣೇಶ, ಷಣ್ಮುಖ, ನಂದಿ ಇವರು ಹೊರತು ಇನ್ನಾರಾದರೂ ಆ ವನದಲ್ಲಿ ಪ್ರವೇಶಿಸಿದರೆ ಅವರು ಸ್ತ್ರೀಯರಾಗಲಿ, ಅದರಂತೆ ವರವನ್ನು ಕೊಡು ಎಂದು ಕೇಳಲು,

೩೦. ಆ ಉಮಾವನಕ್ಕೆ ಶಿವನು ಅದರಂತೆಯೇ ವರವನ್ನು ಕೊಟ್ಟಿರುವನು. ಆದುದರಿಂದ ಪುರುಷನಾದ ನಾನು ಆ ವನಕ್ಕೆ ಪ್ರವೇಶಿಸುವಂತಿಲ್ಲ, ಎಂದನು.

೩೧. ಪತಿಯ ಆ ಮಾತನ್ನು ಕೇಳಿ ನಾನಾ ರೂಪಗಳನ್ನು ಧರಿಸಬಲ್ಲ ಆ ಯಕ್ಷಸುಂದರಿಯು ಮೃಗ (ಜಿಂಕೆ) ರೂಪವನ್ನು ಧರಿಸಿ ಇಲರಾಜನೆದುರಿಗೆ ಬಂದಳು.

ಯಕ್ಷಸ್ತು ಸಂಸ್ಥಿತಸ್ತತ್ರ ದದರ್ಶೇಲೋ ಮೃಗೀಂ ತದಾ ।
ಮೃಗಯಾಸಕ್ತಚಿತ್ತೋ ವೈ ಮೃಗೀಂ ದೃಷ್ಟ್ವಾ ವಿಶೇಷತಃ ॥ ೩೨ ॥

ಏಕ ಏವ ಹಯಾರೂಢೋ ನಿರ್ಯಯೌ ತಾಂ ಮೃಗೀಮನು ।
ಸಾಕರ್ಷತ ಶನೈಸ್ತಂ ತು ರಾಜಾನಂ ಮೃಗಯಾಕುಲಂ ॥ ೩೩ ॥

ಶನೈರ್ಜಗಾಮ ಸಾ ತತ್ರ ಯದುಮಾವನಮುಚ್ಯತೇ ।
ಅದೃಶ್ಯಾ ತು ಮೃಗೀ ತಸ್ಯೈ ದರ್ಶಯಂತೀ ಕ್ವಚಿತ್ಕ್ವಚಿತ್ ॥ ೩೪ ॥

ತಿಷ್ಠಂತೀ ಚೈವ ಗಚ್ಛಂತೀ ಧಾವಂತೀ ಚ ವಿಭೀತವತ್ ।
ಹರಿಣೀ ಚಪಲಾಕ್ಷೀ ಸಾ ತಮಾಕರ್ಷದುಮಾವನಂ ॥ ೩೫ ॥

ಅನುಪ್ರಾಪ್ತೋ ಹಯಾರೂಢಸ್ತತ್ಪ್ರಾಪ ಸ ಉಮಾವನಂ ।
ಉಮಾವನಂ ಪ್ರವಿಷ್ಟಂ ತಂ ಜ್ಞಾತ್ವಾ ಸಾ ಯಕ್ಷಿಣೀ ತದಾ ॥ ೩೬ ॥

ಮೃಗೀರೂಪಂ ಪರಿತ್ಯಜ್ಯ ಯಕ್ಷಿಣೀ ಕಾಮರೂಪಿಣೀ ।
ದಿವ್ಯರೂಪಂ ಸಮಾಸ್ಥಾಯ ಚಾಶೋಕತರುಸಂನಿಧೌ ॥ ೩೭ ॥

---

೩೨. ಯಕ್ಷನು ಅಲ್ಲಿಯೇ ಇದ್ದನು. ಅತ್ತ ಇಲರಾಜನು ತನ್ನ ಎದುರಿನಲ್ಲಿರುವ ಹೆಣ್ಣು ಜಿಂಕೆಯನ್ನು ನೋಡಿ ಮೃಗಬೇಟೆಯಲ್ಲಿ ಕುತೂಹಲಿಯಾದುದರಿಂದ ಕುದುರೆಯನ್ನೇರಿ ಜಿಂಕೆಯನ್ನಟ್ಟಿಕೊಂಡು ಒಬ್ಬನೇ ಹೊರಟನು.

೩೩. ಮೃಗಬೇಟೆಯಲ್ಲಾಸಕ್ತನಾದಾ ರಾಜನನ್ನು ಆ ಮೃಗರೂಪಳಾದ ಯಕ್ಷಿಣಿಯು ಮೆಲ್ಲಮೆಲ್ಲನೆ ಎಳೆದೊಯ್ಯುತ್ತಾ ಆ ಉಮಾವನಕ್ಕೆ ಬಂದಳು.

೩೪–೩೫. ಕೆಲವೊಮ್ಮೆ ಕಾಣಿಸದೆಯೂ ಮತ್ತೊಮ್ಮೆ ಕಾಣಿಸುತ್ತಲೂ ಹೆದರಿದಂತೆ ಓಡುತ್ತಲೂ ಆ ಜಿಂಕೆಯು ಇಲರಾಜನನ್ನು ಉಮಾವನಕ್ಕೆ ಕರೆತಂದಿತು.

೩೬-೩೭. ಕುದುರೆಯನ್ನೇರಿದ ರಾಜನು ಆ ಉಮಾವನಕ್ಕೆ ಬಂದನು. ಉಮಾವನಕ್ಕೆ ಆ ರಾಜನು ಬಂದುದನ್ನು ನೋಡಿ ಆ ಯಕ್ಷಿಣಿಯು ಮೃಗರೂಪ

ತಚ್ಛಾಖಾಲಂಬಿತಕರಾ ದಿವ್ಯಗಂಧಾನುಲೇಪನಾ ।
ದಿವ್ಯರೂಪಧರಾ ತಸ್ಮಿನ್ ಕೃತಕಾರ್ಯಾ ಸಮಾ ತದಾ ॥ ೩೮ ॥

ಹಸಂತೀ ನೃಪತಿಂ ಪ್ರೇಕ್ಷ್ಯ ಶ್ರಾಂತಂ ಹಯಗತಂ ತದಾ ।
ಮೃಗೀಮಾಲೋಕಯಂತಂ ತಂ ಚಪಲಾಕ್ಷಮಿಲಂ ತದಾ ॥ ೩೯ ॥

ಭರ್ತೃವಾಕ್ಯಮಶೇಷೇಣ ಸ್ಮರಂತೀ ಪ್ರಾಹ ಭೂಮಿಪಂ ॥ ೪೦ ॥

॥ ಸಮೋವಾಚ ॥

ಹಯಾರೂಢಾಬಲಾ ತಸ್ಮಿ ಕ್ವ ಏಕೈವ ತು ಗಚ್ಛಸಿ ।
ಪುರುಷಸ್ಯ ಚ ವೇಷೇಣ ಇಲೇ ಕಮನುಯಾಸ್ಯಸಿ ॥ ೪೧ ॥

॥ ಬ್ರಹ್ಮೋವಾಚ ॥

ಇಲೇತಿ ವಚನಂ ಶ್ರುತ್ವಾ ರಾಜಾಸೌ ಕ್ರೋಧಮೂರ್ಛಿತಃ ।
ಯಕ್ಷಿಣೀಂ ಭರ್ತ್ಸಯಿತ್ವಾಸೌ ತಾಮಪೃಚ್ಛನ್ಮೃಗೀಂ ಪುನಃ ॥ ೪೨ ॥

ವನ್ನು ಬಿಟ್ಟು ತನ್ನ ಸುಂದರವಾದ ಯಕ್ಷಸುಂದರಿಯ ರೂಪವನ್ನು ಧರಿಸಿ ಅಶೋಕತರುವೊಂದರ ಬಳಿ ನಿಂತಳು.

೩೮–೪೦. ಆ ಅಶೋಕಮರದ ಕೊಂಬೆಯನ್ನು ಹಿಡಿದು ನಿಂತು ದಿವ್ಯ ಗಂಧವನ್ನು ಪೂಸಿಕೊಂಡ ಆ ಯಕ್ಷಸುಂದರಿಯು ತನ್ನ ಪತಿಯ ಮಾತನ್ನು ಸ್ಮರಿಸಿ ತಾನು ಉದ್ದೇಶಿಸಿದ ಕಾರ್ಯವು ನೆರವೇರಿತೆಂದು ತಿಳಿದಳು. ಆಗ ರಾಜನು ಕುದುರೆಯಮೇಲೆ ಕುಳಿತಿದ್ದು ಆಯಾಸಗೊಂಡು ಜಿಂಕೆಯು ಎಲ್ಲಿಗೆ ಹೋಯಿತು? ಎಂದು ಅತ್ತಿತ್ತ ನೋಡುತ್ತಿದ್ದನು. ಅಂತಹ ಆ ಇಲರಾಜನನ್ನು ನೋಡಿ ನಕ್ಕು ಸಮಾದೇವಿಯು ಇಂತು ನುಡಿದಳು.

೪೧. ಎಲೌ ಇಲೆ, ನೀನು ಸ್ತ್ರೀಯಾಗಿದ್ದು ಪುರುಷವೇಷವನ್ನು ಧರಿಸಿ ಕುದುರೆಯನ್ನೇರಿ ಓರ್ವಳೇ ಎಲ್ಲಿಗೆ ಹೋಗುತ್ತಲಿರುವೆ? ಯಾರನ್ನು ಅನುಸರಿಸುತ್ತಲಿರುವೆ? ಎಂದಳು.

೪೨. ಇಲೆ ಎಂಬ ಸ್ತ್ರೀಸಂಬೋಧನವನ್ನು ಕೇಳಿ ರಾಜನು ಕೋಪಗೊಂಡು ಆ ಯಕ್ಷಿಣಿಯನ್ನು ಹೆದರಿಸಿ ಇಲ್ಲಿಗೆ ಬಂದ ಜಿಂಕೆಯು ಎಲ್ಲಿ ಹೋಯಿತು? ಎಂದು ಪ್ರಶ್ನಿಸಿದನು. ಆದರೂ ಆ ಯಕ್ಷಿಣಿಯು ಎಲೌ ಇಲೆ, ಏನು ನೋಡುತ್ತಲಿರುವೆ? ಎಂದು ಮತ್ತೆ ಕೇಳಿದಳು.

ತಥಾಪಿ ಯಕ್ಷಿಣೀ ಪ್ರಾಹ ಇಲೇ ಕಿಮನುವೀಕ್ಷಸೇ ।
ಇಲೇತಿ ವಚನಂ ಶ್ರುತ್ವಾ ಧೃತಚಾಪೋ ಹಯಸ್ಥಿತಃ ॥ ೪೩ ॥

ಕುಪಿತೋ ದರ್ಶಯಾಮಾಸ ತ್ರೈಲೋಕ್ಯವಿಜಯಿಾ ಧನುಃ ।
ಪುನಃ ಸಾ ಪ್ರಾಹ ನೃಪತಿಂ ಮಹಾತ್ಮಾನಮಿಲೇ ಸ್ವಯಂ ॥ ೪೪ ॥

ಪ್ರೇಕ್ಷಸ್ವ ಪಶ್ಚಾನ್ಮಾಂ ಬ್ರೂಹಿ ಅಸತ್ಯಾಂ ಸತ್ಯವಾದಿನೀಂ ।
ತದಾ ಚಾಲೋಕಯದ್ರಾಜಾ ಸ್ತನೌ ತುಂಗೌ ಭುಜಾಂತರೇ ॥ ೪೫ ॥

ಕಿಮಿದಂ ಮಮ ಸಂಜಾತಮಿತ್ಯೇವಂ ಚಕಿತೋಽಭವತ್ ॥ ೪೬ ॥

॥ ಇಲೋವಾಚ ॥

ಕಿಮಿದಂ ಮಮ ಸಂಜಾತಂ ಜಾನೀತೇ ಭವತೀ ಸ್ಫುಟಂ ।
ವದ ಸರ್ವಂ ಯಥಾತಥ್ಯಂ ತ್ವಂ ಕಾ ವಾ ವದ ಸುವ್ರತೇ ॥ ೪೭ ॥

---

೪೩. ಇಲೆಯೆಂಬ ಸ್ತ್ರೀಸಂಬೋಧನವನ್ನು ಕೇಳಿ ಧನುರ್ಧಾರಿಯಾದ ಇಲರಾಜನು ಪುನಃ ಕೋಪಗೊಂಡು ಮೂರುಲೋಕಗಳನ್ನು ಜಯಿಸಿದಂತಹ ತನ್ನ ಧನುಸ್ಸನ್ನು ಹಿಡಿದೆತ್ತಿ ತೋರಿಸಿದನು.

೪೪. ಆಗ ಆ ಯಕ್ಷಸುಂದರಿಯು ಮಹಾತ್ಮನಾದಾ ರಾಜನಿಗೆ ಪುನಃ ಎಲೌ ಇಲಾದೇವಿ, ನಿನ್ನನ್ನೇ ನೀನು ನೋಡಿಕೊ, ಆಮೇಲೆ ನಾನು ಸಟೆ ಯಾಡಿದೆನೋ ? ದಿಟವಾಡಿದೆನೋ ? ಎಂಬುದು ನಿನಗೇ ತಿಳಿಯುವುದು ಎಂದು ಹೇಳಿದಳು.

೪೫-೪೬. ಅಗ ರಾಜನು ತನ್ನ ಶರೀರವನ್ನು ನೋಡಲು, ಉನ್ನತವಾದ ಸ್ತನಗಳು ಮೂಡಿದ್ದುವು. ಅದನ್ನು ನೋಡಿ ರಾಜನು ಭಯಗೊಂಡು ನನಗೆ ಇದೆಲ್ಲಿ ಉಂಟಾಯಿತು ? ಎಂದು ಶಂಕಿಸಿ,

೪೭. ಎಲೌ ಹೆಂಗಸೇ, ನನಗೆ ಹೀಗೆ ಸ್ತನಗಳು ಜನಿಸಲು ಕಾರಣ ವೇನು ? ನಿನಗೆ ಇದರ ರಹಸ್ಯವು ತಿಳಿದಿರಬೇಕು. ನಿಜಾಂಶವನ್ನು ಹೇಳು ನೀನು ಯಾರು ? ಅದನ್ನೂ ಹೇಳು ಎಂದನು.

॥ ಯಕ್ಷಿಣ್ಯುವಾಚ ॥

ಹಿಮವತ್ಕಂದರಶ್ರೇಷ್ಠೇ ಸಮನ್ಯುರ್ನಾಸತೇ ಪತಿಃ ।
ಯಕ್ಷಾಣಾಮಧಿಪಃ ಶ್ರೀಮಾಂಸ್ತದ್ಭಾರ್ಯಾಹಂ ತು ಯಕ್ಷಿಣೀ ॥ ೪೮ ॥

ಯತ್ಕಂದರೇ ಭವಾನ್ರಾಜಾ ತೂಪವಿಷ್ಟಃ ಸುಶೀತಲೇ ।
ಯಸ್ಯ ಯಕ್ಷಾ ಹತಾ ಮೋಹಾತ್ತ್ವಯಾ ಹಿ ಸಂಗರಂ ವಿನಾ ॥ ೪೯ ॥

ತತೋಽಹಂ ನಿರ್ಗಮಾರ್ಥಂ ತೇ ಮೃಗೀ ಭೂತ್ವಾ ಉಮಾವನಂ ।
ಪ್ರವಿಷ್ಟಾ ತ್ವಂ ಪ್ರವಿಷ್ಟೋಽಸಿ ಪುರಾ ಪ್ರಾಹ ಮಹೇಶ್ವರಃ ॥ ೫೦ ॥

ಯಸ್ತ್ವತ್ರ ಪ್ರವಿಶೇನ್ಮಂದಃ ಪುಮಾನ್ ಸ್ತ್ರೀತ್ವಮವಾಪ್ಸ್ಯತಿ ।
ತಸ್ಮಾತ್ಸ್ತ್ರೀತ್ವಮವಾಪ್ತೋಽಸಿ ನ ತ್ವಂ ದುಃಖಿತುಮರ್ಹಸಿ ।
ಪ್ರೌಢೋಽಪಿ ಕೋಽತ್ರ ಜಾನಾತಿ ವಿಚಿತ್ರಭವಿತವ್ಯತಾಂ ॥ ೫೧ ॥

---

೪೮. ಯಕ್ಷಸುಂದರಿಯು ಹೇಳಿದಳು—ಹಿಮಾಲಯದ ರತ್ನಮಯವಾದ ಗುಹೆಯಲ್ಲಿ ಸಮನ್ಯುವೆಂಬ ಯಕ್ಷರಾಜನು ವಾಸಿಸುತ್ತಿರುವನು. ಅವನ ಪತ್ನಿಯು ನಾನು, ಯಕ್ಷಿಣಿಯು.

೪೯. ಆ ಯಕ್ಷನ ತಂಪಾದ ಗುಹೆಯಲ್ಲಿಯೇ ರಾಜನಾದ ನೀನು ಈವರೆಗೆ ವಾಸಿಸುತ್ತಿದ್ದೆ. ಯಕ್ಷಭಟರನ್ನು ನೀನು ಕಾರಣವಿಲ್ಲದೇ ಯುದ್ಧಮಾಡಿ ಅಜ್ಞಾನದಿಂದ ಸಂಹರಿಸಿರುವೆ.

೫೦. ಆಗ ನಾನು ನಿನ್ನನ್ನು ಆ ನಮ್ಮ ಗುಹೆಯಿಂದ ಹೊರಡಿಸಲು ಮೃಗವೇಷವನ್ನು ಧರಿಸಿ ಈ ಉಮಾವನವನ್ನು ಪ್ರವೇಶಿಸಿದೆನು. ನನ್ನಟ್ಟಿಕೊಂಡು ನೀನೂ ಈ ವನವನ್ನು ಪ್ರವೇಶಿಸಿರುವೆ. ಈ ಉಮಾವನವನ್ನು ಯಾವನು ಪ್ರವೇಶಿಸುವನೋ ಅವನು ಹೆಂಗಸಾಗಲಿ ಎಂದು ಈಶ್ವರನು ಈ ವನಕ್ಕೆ ಪುರುಷರು ಪ್ರವೇಶಿಸದಂತೆ ಕಟ್ಟನ್ನು ಮಾಡಿರುವನು.

೫೧. ಆದುದರಿಂದ ಈ ವನವನ್ನು ಪ್ರವೇಶಿಸಿದ ನೀನು ಹೆಂಗಸಾಗಿರುವೆ. ಆದರೆ ನೀನು ದುಃಖಿಸಬೇಡ. ಎಂತಹ ಜ್ಞಾನಿಗೂ ಮುಂದಿನ ಭವಿಷ್ಯವು ತಿಳಿಯದು. ಭವಿಷ್ಯದವಶಾತ್ ನೀನು ಹೆಂಗಸಾಗಿರುವೆ ಎಂದಳು.

॥ ಬ್ರಹ್ಮೋವಾಚ ॥
ಯಕ್ಷಿಣೀವಚನಂ ಶ್ರುತ್ವಾ ಹಯಾರೂಢಸ್ತದಾಪತತ್ ।
ತಮಾಶ್ವಾಸ್ಯ ಪುನಃ ಸೈವ ಯಕ್ಷಿಣೀ ವಾಕ್ಯಮಬ್ರವೀತ್ ॥ ೫೨ ॥

॥ ಯಕ್ಷಿಣ್ಯುವಾಚ ॥
ಸ್ತ್ರೀತ್ವಂ ಜಾತಂ ಜಾತಮೇವ ನ ಪುಂಸ್ತ್ವಂ ಕರ್ತುಮರ್ಹಸಿ ।
ಗೃಹಾಣ ವಿದ್ಯಾಂ ಸ್ತ್ರೀಯೋಗ್ಯಾಂ ನೃತ್ಯಂ ಗೀತಮಲಂಕೃತಿಂ ।
ಸ್ತ್ರೀಲಾಲಿತ್ಯಂ ಸ್ತ್ರೀವಿಲಾಸಂ ಸ್ತ್ರೀಕೃತ್ಯಂ ಸರ್ವಮೇವ ತತ್ ॥ ೫೩ ॥

॥ ಬ್ರಹ್ಮೋವಾಚ ॥
ಇಲಾ ಸರ್ವಮಥಾವಾಪ್ಯ ಯಕ್ಷಿಣೀಂ ವಾಕ್ಯಮಬ್ರವೀತ್ ॥ ೫೪ ॥

॥ ಇಲೋವಾಚ ॥
ಕೋ ವಾ ಭರ್ತಾ ಕಿಂ ತು ಕೃತ್ಯಂ ಪುನಃ ಪುಂಸ್ತ್ವಂ ಕಥಂ ಭವೇತ್ ।
ಏತದ್ವದಸ್ವ ಕಲ್ಯಾಣೀ ದುಃಖಾರ್ತಾಯಾ ವಿಶೇಷತಃ ।
ಆರ್ತಾನಾಮಾರ್ತಿಶಮನಾಚ್ಛ್ರೇಯೋ ನಾಭ್ಯಧಿಕಂ ಕ್ವಚಿತ್ ॥ ೫೫ ॥

---

೫೨. ಯಕ್ಷಿಣಿಯ ಮಾತನ್ನು ಕೇಳಿ ಇಲರಾಜನು ದುಃಖದಿಂದ ಕುದುರೆಯಿಂದ ಕೆಳಗೆ ಬಿದ್ದನು. ಆಗ ಯಕ್ಷಿಣಿಯು ಅವನನ್ನು ಸಮಾಧಾನಗೊಳಿಸಿ,

೫೩. ಎಲೈ ರಾಜನೇ, ಸ್ತ್ರೀರೂಪವು ಉಂಟಾದಮೇಲೆ ಏನೂ ಮಾಡುವಂತಿಲ್ಲ, ತಿರುಗಿ ಪುರುಷನಾಗುವಂತಿಲ್ಲ. ಸ್ತ್ರೀಯರಿಗೆ ಯೋಗ್ಯವಾದ ವಿದ್ಯೆಯನ್ನಭ್ಯಸಿಸು, ಗೀತನರ್ತನಾದಿಗಳನ್ನು ಕಲಿ, ಅಲಂಕಾರವನ್ನು ಮಾಡಿಕೋ. ಸ್ತ್ರೀಯರ ವಿಲಾಸವೆಲ್ಲವನ್ನೂ ಸ್ತ್ರೀಯರ ಕಾರ್ಯವೆಲ್ಲವನ್ನೂ ಅಭ್ಯಸಿಸು, ಎನ್ನಲು,

೫೪. ಆಗ ರಾಜನು ಇಲಾದೇವಿಯಾಗಿ ಆ ಯಕ್ಷಸ್ತ್ರೀಯಿಂದ ಸ್ತ್ರೀವಿದ್ಯೆಯೆಲ್ಲವನ್ನೂ ಅಭ್ಯಸಿಸಿ ಅವಳನ್ನು ಕುರಿತು,

೫೫. ಎಲೌ ಯಕ್ಷಸುಂದರಿ, ನನಗೆ ಪತಿಯು ಯಾರಾಗಬಹುದು? ನನ್ನ ಮುಂದಿನ ಕಾರ್ಯವೇನು? ಪುನಃ ನನಗೆ ಪುರುಷರೂಪವು ಬರುವುದು

॥ ಯಕ್ಷಿಣ್ಯುವಾಚ ॥

ಬುಧಃ ಸೋಮಸುತೋ ನಾಮ ವನಾದಸ್ಮಾಚ್ಚ ಪೂರ್ವತಃ ।
ಆಶ್ರಮಸ್ತಸ್ಯ ಸುಭಗೇ ಪಿತರಂ ನಿತ್ಯಮೇಷ್ಯತಿ ॥ ೫೬ ॥

ಅನೇನೈವ ಪಥಾ ಸೋಮಂ ಪಿತರಂ ಸ ಬುಧೋ ಗ್ರಹಃ ।
ದ್ರಷ್ಟುಂ ಯಾತಿ ತತೋ ನಿತ್ಯಂ ನಮಸ್ಕರ್ತುಂ ತಥೈವ ಚ ॥ ೫೭ ॥

ಯದಾ ಯಾತಿ ಬುಧಃ ಶಾಂತಸ್ತದಾತ್ಮಾನಂ ಚ ದರ್ಶಯ ।
ತಂ ದೃಷ್ಟ್ವಾ ತ್ವಂ ತು ಸುಭಗೇ ಸರ್ವಕಾಮಾನವಾಪ್ಸ್ಯಸಿ ॥ ೫೮ ॥

॥ ಬ್ರಹ್ಮೋವಾಚ ॥

ತಾಮಾಶ್ವಾಸ್ಯ ತತಃ ಸುಭ್ರೂರ್ಯಕ್ಷಿಣ್ಯಂತರಧೀಯತ ।
ಯಕ್ಷಿಣೀ ಸಾ ತಮಾಚಷ್ಟ ಯಕ್ಷೋಽಪಿ ಸುಖಮಾಪ್ತವಾನ್ ॥ ೫೯ ॥

ಹೇಗೆ? ಇದೆಲ್ಲವನ್ನೂ ದುಃಖಪೀಡಿತಳಾದ ನನಗೆ ಹೇಳು. ದುಖಿತರ ದುಃಖವನ್ನು ಹೋಗಲಾಡಿಸುವುದಕ್ಕಿಂತಲೂ ಶ್ರೇಯಸ್ಕರವಾದುದು ಮತ್ತೊಂದಿಲ್ಲ, ಎನ್ನಲು,

೫೬. ಯಕ್ಷಿಣಿಯಿಂತೆಂದಳು—ಚಂದ್ರನ ಮಗನಾದ ಬುಧನು ಈ ವನಕ್ಕೆ ಪೂರ್ವದಲ್ಲಿ ಆಶ್ರಮವನ್ನು ಕಟ್ಟಿಕೊಂಡಿರುವನು. ಅವನು ನಿತ್ಯವೂ ತನ್ನ ತಂದೆಯನ್ನು ನೋಡಲು ಚಂದ್ರಲೋಕಕ್ಕೆ ಹೋಗುವನು.

೫೭. ತಂದೆಯಾದ ಚಂದ್ರನನ್ನು ನೋಡಿ ನಮಸ್ಕರಿಸಿ ಬರಲು ಹೋಗುವ ಆ ಬುಧನು ನಿತ್ಯವೂ ಇದೇ ದಾರಿಯಲ್ಲೇ ಸಂಚರಿಸುವನು.

೫೮. ಬುಧನು ಇಲ್ಲಿಗೆ ಬರುವಾಗ ನೀನು ಅವನಿಗೆ ಕಾಣಿಸಿಕೊ. ಅವನನ್ನು ನೋಡಿದಮೇಲೆ ನಿನ್ನ ಇಷ್ಟವೆಲ್ಲವೂ ಸಿದ್ಧಿಸುವುದು ಎಂದಳು.

೫೯. ಹೀಗೆ ಇಲಾದೇವಿಯನ್ನು ಸಮಾಧಾನಗೊಳಿಸಿ ಯಕ್ಷಸುಂದರಿಯು ಅಲ್ಲಿಯೇ ಅಂತರ್ಧಾನಳಾಗಿ ಪತಿಯಬಳಿಗೆ ಬಂದು ನಡೆದ ಸಮಾಚಾರವನ್ನು ತಿಳಿಸಿದಳು. ಮುಂದೆ ಆ ಯಕ್ಷದಂಪತಿಗಳು ತಮ್ಮ ಗುಹೆಯಲ್ಲಿ ಸುಖವಾಗಿದ್ದರು. ಇಲರಾಜನ ಸೈನ್ಯವು ಆ ಯಕ್ಷನ ಗುಹೆಯಲ್ಲಿ ಸುಖವಾಗಿದ್ದಿತು.

ಇಲಸ್ಸೈನ್ಯಂ ಚ ತತ್ರಾಸೀತ್ತದ್ಗತಂ ಚ ಯಥಾಸುಖಂ ।
ಉಮಾವನಸ್ಥಿತಾ ಚೇಲಾ ಗಾಯಂತೀ ನೃತ್ಯತೀ ಪುನಃ ॥ ೬೦ ॥

ಸ್ತ್ರೀಭಾವಮನುಚೇಷ್ಟಂತೀ ಸ್ಮರಂತೀ ಕರ್ಮಣೋ ಗತಿಂ ।
ಕದಾಚಿತ್ಕ್ರಿಯಮಾಣೇ ತು ಇಲಯಾ ನೃತ್ಯಕರ್ಮಣಿ ॥ ೬೧ ॥

ತಾಮುಪಶ್ಯೆದ್ಬುಧೋ ಧೀಮಾನ್ಪಿತರಂ ಗಂತುಮುದ್ಯತಃ ।
ಇಲಾಂ ದೃಷ್ಟ್ವಾ ಗತಿಂ ತ್ಯಕ್ತ್ವಾ ತಾಮಾಗತ್ಯಾಬ್ರವೀದ್ಬುಧಃ ॥ ೬೨ ॥

॥ ಬುಧ ಉವಾಚ ॥

ಭಾರ್ಯಾ ಭವ ಮಮ ಸ್ವಸ್ಥಾ ಸರ್ವಾಭ್ಯಸ್ತ್ವಂ ಪ್ರಿಯಾ ಭವ ॥ ೬೩ ॥

॥ ಬ್ರಹ್ಮೋವಾಚ ॥

ಬುಧವಾಕ್ಯಮಿಲಾ ಭಕ್ತ್ಯಾ ತ್ವಭಿನಂದ್ಯ ತಥಾಕರೋತ್ ।
ಸ್ಮೃತ್ವಾ ಚ ಯಕ್ಷಿಣೀವಾಕ್ಯಂ ತತಸ್ತುಷ್ಟಾಭವನ್ಮುನೇ ॥ ೬೪ ॥

---

೬೦. ಇತ್ತ ಇಲಾದೇವಿಯು ಉಮಾವನದಲ್ಲಿ ಗಾನಮಾಡುತ್ತಾ ನರ್ತನಮಾಡುತ್ತಾ ಸ್ತ್ರೀ ಸ್ವಭಾವಕ್ಕನುಸಾರವಾಗಿ ನಡೆಯುತ್ತಾ ತನ್ನ ದುರದೃಷ್ಟವನ್ನು ಚಿಂತಿಸುತ್ತಿದ್ದಳು.

೬೧-೬೨. ನೃತ್ಯಗಾನಮಾಡುತ್ತಲಿರುವ ಇಲಾದೇವಿಯನ್ನು ತಂದೆಯ ದರ್ಶನಕ್ಕಾಗಿ ಹೊರಟ ಮಹಾಜ್ಞಾನಿಯಾದ ಬುಧನು ನೋಡಿ, ಗಮನವನ್ನಲ್ಲಿಗೇ ನಿಲ್ಲಿಸಿ ಆ ಇಲೆಯನ್ನು ಕುರಿತು,

೬೩. ಎಲೌ ಸುಂದರ್ರಿ ನೀನು ನನ್ನನ್ನು ಮದುವೆಯಾಗು. ಎಲ್ಲರಿಗಿಂತಲೂ ನಿನ್ನಲ್ಲಿ ನಾನು ಹೆಚ್ಚು ಪ್ರೀಯುಳ್ಳವನಾಗಿರುವೆನು, ಎನ್ನಲು

೬೪. ಬುಧನ ಮಾತನ್ನು ಕೇಳಿ ಇಲಾದೇವಿಯು ಹಾಗೆಯೇ ಆಗಲೆಂದು ಒಪ್ಪಿದಳು. ಯಕ್ಷಿಣಿಯ ಮಾತನ್ನು ನೆನೆದು ಸಂತೋಷದಿಂದ ಬುಧನನ್ನು ಮದುವೆಯಾದಳು.

ಬುಧೋ ರೇಮೇ ತಯಾ ಪ್ರೀತ್ಯಾ ನೀತ್ವಾ ಸ್ವಸ್ಥಾನಮುತ್ತಮಂ ।
ಸಾ ಚಾಪಿ ಸರ್ವಭಾವೇನ ತೋಷಯಾಮಾಸ ತಂ ಪತಿಂ ।
ತತೋ ಬಹುತಿಥೇ ಕಾಲೇ ಬುಧಸ್ತುಷ್ಟೋಽವದತ್ಪ್ರಿಯಾಂ ॥ ೬೫ ॥

॥ ಬುಧ ಉವಾಚ ॥

ಕಿಂ ತೇ ದೇಯಂ ಮಯಾ ಭದ್ರೇ ಪ್ರಿಯಂ ಯನ್ಮನಸಿ ಸ್ಥಿತಂ । ೬೬ ॥

। ಬ್ರಹ್ಮೋವಾಚ ॥

ತದ್ವಾಕ್ಯಸಮಕಾಲಂ ತು ಪುತ್ರಂ ದೇಹೀತ್ಯಭಾಷತ ।
ಇಲಾ ಬುಧಂ ಸೋಮಸುತಂ ಪ್ರೀತಿಮಂತಂ ಪ್ರಿಯಂ ತಥಾ ॥ ೬೭ ॥

॥ ಬುಧ ಉವಾಚ ॥

ಅಮೋಘಾಮೇತನ್ಮದ್ವೀರ್ಯಂ ತಥಾ ಪ್ರೀತಿಸಮುದ್ಭವಂ ।
ಪುತ್ರಸ್ತೇ ಭವಿತಾ ತಸ್ಮಾತ್ಕ್ಷತ್ರಿಯೋ ಲೋಕವಿಶ್ರುತಃ ॥ ೬೮ ॥

---

೬೫. ಆಮೇಲೆ ಬುಧನು ಆ ಇಳೆಯನ್ನು ತನ್ನ ಮನೆಗೆ ಕರೆದು ಕೊಂಡುಹೋಗಿ ಅವಳೊಡನೆ ಪ್ರೀತಿಯಿಂದ ವಿಹರಿಸಿದನು. ಅವಳೂ ಪತಿ ಯಾದ ಆ ಬುಧನನ್ನು ಸರ್ವರೀತಿಯಿಂದಲೂ ಸಂತೋಷಪಡಿಸಿದಳು.

೬೬. ಹೀಗೆ ಕೆಲವು ಕಾಲವು ಕಳೆಯಲು ಆ ಇಲಾದೇವಿಯನ್ನು ಕುರಿತು ಬುಧನು ಪ್ರೀತಿಯಿಂದ ಎಲೌ ಪ್ರಿಯೆ, ನಿನಗೇನು ವರವನ್ನು ಕೊಡಲಿ ? ನಿನ್ನ ಮನಸ್ಸಿನಲ್ಲಿರುವುದೇನು ? ಹೇಳು ಎಂದನು.

೬೭. ಆಕೂಡಲೇ ಇಲಾದೇವಿಯು ಪ್ರಿಯಪತಿಯಾದ ಬುಧನೊಡನೆ ನನಗೆ ಸತ್ಪುತ್ರನನ್ನು ಕರುಣಿಸು ಎಂದು ಕೇಳಿದಳು.

೬೮. ಬುಧನು ಹೇಳಿದನು—ಎಲೌ ಪ್ರಿಯೆ, ಪ್ರೀತಿಯುಂಟಾದ ನನ್ನ ಈ ವೀರ್ಯವು ವ್ಯರ್ಥವಾದುದಲ್ಲ. ಇದರಿಂದ ನಿನಗೆ ಲೋಕಪ್ರಸಿದ್ಧ ನಾದ ಕ್ಷತ್ರಿಯ ಕುಮಾರನು ಜನಿಸುವನು.

ಸೋಮವಂಶಕರಃ ಶ್ರೀಮಾನಾದಿತ್ಯ ಇವ ತೇಜಸಾ ।
ಬುದ್ಧ್ಯಾ ಬೃಹಸ್ಪತಿಸಮಃ ಕ್ಷಮಯಾ ಪೃಥಿವೀಸಮಃ ॥ ೭೯ ॥

ವೀರ್ಯೇಣಾಜೌ ಹರಿರಿವ ಕೋಪೇನ ಹುತಭುಗ್ಯಥಾ ॥ ೭೦ ॥

॥ ಬ್ರಹ್ಮೋವಾಚ ॥

ತಸ್ಮಿನ್ನುತ್ಪದ್ಯಮಾನೇ ತು ಬುಧಪುತ್ರೇ ಮಹಾತ್ಮನಿ ।
ಜಯಶಬ್ದಶ್ಚ ಸರ್ವತ್ರ ತ್ವಾಸೀಚ್ಚ ಸುರವೇಶ್ಮನಿ ॥ ೭೧ ॥

ಬುಧಪುತ್ರೇ ಸಮುತ್ಪನ್ನೇ ತತ್ರಾಜಗ್ಮುಃ ಸುರೇಶ್ವರಾಃ ।
ಅಹಮಪ್ಯಾಗಮಂ ತತ್ರ ಮುದಾ ಯುಕ್ತೋ ಮಹಾಮತೇ ॥ ೭೨ ॥

ಜಾತಮಾತ್ರಃ ಸುತೋ ರಾವಮಕರೋತ್ಸ ಪೃಥುಸ್ವರಂ ।
ತೇನ ಸರ್ವೇಽಪ್ಯವೋಚನ್ತೈ ಸಂಗತಾ ಋಷಯಃ ಸುರಾಃ ॥ ೭೩ ॥

ಯಸ್ಮಾತ್ಪುರೂ ರವೋಽಸ್ಯೇತಿ ತಸ್ಮಾದೇಷ ಪುರೂರವಾಃ ।
ಸ್ಯಾದಿತ್ಯೇವಂ ನಾಮ ಚಕ್ರುಃ ಸರ್ವೇ ಸಂತುಷ್ಟಮಾನಸಾಃ ॥ ೭೪ ॥

೬೯-೭೦. ಆ ಕುಮಾರನು ಚಂದ್ರವಂಶವನ್ನು ಬೆಳೆಸುವನು. ಸೂರ್ಯನಂತೆ ತೇಜಸ್ವಿಯೂ ಬೃಹಸ್ಪತಿಯಂತೆ ಬುದ್ಧಿಶಾಲಿಯೂ ಭೂಮಿಯಂತೆ ಸಹನೆಯುಳ್ಳವನೂ ಆಗಿರುವನು. ಯುದ್ಧದಲ್ಲಿ ಹರಿಯಂತೆ ಶತ್ರುಗಳನ್ನು ಪರಾಕ್ರಮದಿಂದ ಜಯಿಸುವನು. ದುಷ್ಟರಲ್ಲಿ ಅಗ್ನಿಯಂತೆ ಕೋಪವುಳ್ಳವನಾಗಿರುವನು. ಇಂತಹ ಪುತ್ರನು ನಿನಗೆ ಜನಿಸುವನು ಎಂದನು.

೭೧-೭೨. ಮುಂದೆ ಮಹಾತ್ಮನಾಗುವ ಬುಧಪುತ್ರನು ಜನಿಸುವಾಗ ಎಲ್ಲೆಲ್ಲಿಯೂ ಜಯಧ್ವನಿಯು ಕೇಳಿಸಿತು. ಬುಧನ ಪುತ್ರನು ಜನಿಸುವಾಗ ಸಂತೋಷದಿಂದ ದೇವನಾಯಕರೂ ನಾನೂ ಅಲ್ಲಿಗೆ ಬಂದೆವು.

೭೩-೭೪. ಹುಟ್ಟಿದೊಡನೇ ಆ ಶಿಶುವು ತುಂಬಾ ಗಟ್ಟಿಯಾದ ಧ್ವನಿಯಿಂದ ಅತ್ತಿತು. ಅದನ್ನು ಕೇಳಿ ಅಲ್ಲಿ ಸೇರಿದ್ದ ಋಷಿಗಳೂ, ದೇವತೆಗಳೂ ಈ ಕುಮಾರನು ಹುಟ್ಟಿದೊಡನೆ ಹೆಚ್ಚಾದ ಧ್ವನಿಯನ್ನು ಮಾಡಿದುದರಿಂದ ಇವನು ಪುರೂರವನೆಂಬ ಹೆಸರುಳ್ಳವನಾಗಲಿ ಎಂದು ಹೆಸರಿಟ್ಟರು.

ಬುಧೋಽಸ್ಯಧ್ಯಾಪಯಾಮಾಸ ಕ್ಷಾತ್ರವಿದ್ಯಾಂ ಸುತಂ ಶುಭಾಂ ।
ಧನುರ್ವೇದಂ ಸಪ್ರಯೋಗಂ ಬುಧಃ ಪ್ರಾದಾತ್ತದಾತ್ಮಜೇ ॥ ೭೫ ॥

ಸ ಶೀಘ್ರಂ ವೃದ್ಧಿಮಗಮಚ್ಛುಕ್ಲಪಕ್ಷೇ ಯಥಾ ಶಶೀ ।
ಸ ಮಾತರಂ ದುಃಖಯುತಾಂ ಸಮೀಕ್ಷ್ಯೇಲಾಂ ಮಹಾಮತಿಃ ।
ನಮಸ್ಯಾಥ ವಿನೀತಾತ್ಮಾ ಇಲಾಮ್ಯೆಲೋಽಬ್ರವೀದಿದಂ ॥ ೭೬ ॥

॥ ಐಲ ಉವಾಚ ॥

ಬುಧೋ ಮಾತರ್ಮಮ ಪಿತಾ ತವ ಭರ್ತಾ ಪ್ರಿಯಸ್ತಥಾ ।
ಅಹಂ ಚ ಪುತ್ರಃ ಕರ್ಮಣ್ಯಃ ಕಸ್ಮಾತ್ತೇ ಮಾನಸೋ ಜ್ವರಃ ॥ ೭೭ ॥

॥ ಇಲೋವಾಚ ॥

ಸತ್ಯಂ ಪುತ್ರ ಬುಧೋ ಭರ್ತಾ ತ್ವಂ ಚ ಪುತ್ರೋ ಗುಣಾಕರಃ ।
ಭರ್ತೃಪುತ್ರಕೃತಾ ಚಿಂತಾ ನ ಮಮಾಸ್ತಿ ಕದಾಚನ ॥ ೭೮ ॥

---

೭೫. ಆ ಪುರೂರವನಿಗೆ ಬುಧನು ಕ್ಷತ್ರಿಯರಿಗುಚಿತವಾದ ವಿದ್ಯೆಯನ್ನ ಧ್ಯಯನಮಾಡಿಸಿದನು. ಧನುರ್ವೇದವನ್ನೂ ಪ್ರಯೋಗದೊಡನೆ ಉಪದೇಶಿಸಿದನು. ಶುಕ್ಲಪಕ್ಷದ ಚಂದ್ರನಂತೆ ಆ ಪುರೂರವನು ದಿನದಿನವೂ ಬೆಳೆಯತೊಡಗಿದನು.

೭೬. ಆ ಪುರೂರವನು ದಿನವೂ ದುಃಖದಿಂದ ಬಳಲುತ್ತಿರುವ ಮಾತೆಯಾದ ಇಲಾದೇವಿಯನ್ನು ನೋಡಿ ಬಂದು ನಮಸ್ಕರಿಸಿ ವಿನಯದಿಂದ,

೭೭. ಓ ಮಾತೆ, ನನ್ನ ತಂದೆಯಾದ ಬುಧನು ನಿನ್ನ ಪ್ರಿಯಪತಿಯು. ಸತ್ಕರ್ಮನಿಷ್ಠನಾದ ನಾನು ನಿನ್ನ ಮಗನು, ಹೀಗಿರಲು ನೀನು ವ್ಯಥೆಪಡಲು ಕಾರಣವೇನು ? ಎಂದು ಬೆಸಗೊಳ್ಳಲು,

೭೮. ಇಲಾದೇವಿಯು—ಎಲೈ ಪುತ್ರ, ಬುಧನು ನನಗೆ ಪ್ರಿಯಪತಿಯಾಗಿರುವುದು ನಿಜ. ಪುತ್ರನಾದ ನೀನೂ ಗುಣವಂತನಾಗಿರುವೆ. ಪತಿಪುತ್ರರ ವಿಷಯದಲ್ಲಿ ನನಗೆ ಚಿಂತೆಯಿಲ್ಲ.

ತಥಾಪಿ ಪೂರ್ವಜಂ ಕಿಂಚಿದ್ದುಃಖಂ ಸ್ಮೃತ್ವಾ ಪುನಃ ಪುನಃ ।
ಚಿಂತಯೇಯಂ ಮಹಾಬುದ್ಧೇ ತತೋ ಮಾತರಮಬ್ರವೀತ್ ॥ ೭೯ ॥

॥ ಐಲ ಉವಾಚ ॥
ನಿವೇದಯಸ್ವ ನೋ ಮಾತಸ್ತದೇವ ಪ್ರಥಮಂ ಮಮ ॥ ೮೦ ॥

॥ ಬ್ರಹ್ಮೋವಾಚ ॥
ಇಲಾ ಚೈನಮುವಾಚೇದಂ ರಹೋವಾಚಂ ಕಥಂ ವದೇ ।
ತಥಾಪಿ ಪುತ್ರ ತೇ ವಚ್ಮಿ ಪಿತ್ರೋಃ ಪುತ್ರೋ ಯತೋ ಗತಿಃ ।
ಮಗ್ನಾನಾಂ ದುಃಖಪಾಥೋಬ್ಧೌ ಪುತ್ರಃ ಪ್ರವಹಣಂ ಪರಂ ॥ ೮೧ ॥

॥ ಬ್ರಹ್ಮೋವಾಚ ॥
ತನ್ಮಾತೃವಚನಂ ಶ್ರುತ್ವಾ ವಿನೀತಃ ಪ್ರಾಹ ಮಾತರಂ ।
ಪಾದಯೋಃ ಪತಿತಶ್ಚಾಪಿ ವದ ಮಾತರ್ಯಥಾ ತಥಾ ॥ ೮೨ ॥

---

೭೯. ಆದರೆ ಯಾವುದೋ ಒಂದು ಹಿಂದಿನ ದುಃಖವನ್ನು ಸ್ಮರಿಸಿಕೊಂಡು ಪುನಃಪುನಃ ಚಿಂತಿಸುತ್ತಿರುವೆನು ಎನ್ನಲು.

೮೦. ಮತ್ತೆ ಪುರೂರವನು ಓ ಮಾತೆ, ಮೊದಲು ಆ ನಿನ್ನ ದುಃಖವನ್ನು ನನ್ನೊಡನೆ ಹೇಳು, ಎಂದನು.

೮೧. ಆಗ ಇಲಾದೇವಿಯು—ಎಲೈ ಮಗನೇ, ಅದು ಅತಿ ರಹಸ್ಯವಾದುದು, ಹೇಗೆ ಹೇಳಲಿ? ಆದರೂ ಹೇಳುವೆನು, ತಾಯಿತಂದೆಗಳಿಗೆ ಪುತ್ರನೇ ಗತಿಯು. ದುಃಖಸಮುದ್ರದಲ್ಲಿ ಮುಳುಗಿದವರಿಗೆ ಪುತ್ರನೇ ನೌಕೆಯು ಎಂದಳು.

೮೨. ತಾಯಿಯ ಆ ಮಾತನ್ನು ಕೇಳಿ ಪುರೂರವನು ಅವಳ ಪಾದಗಳಿಗೆರಗಿ ವಿನಯದಿಂದ ಓ ಮಾತೆಯೇ, ನಿನ್ನ ದುಃಖದ ಕಾರಣವನ್ನು ಹೇಳು, ಎಂದನು.

॥ ಬ್ರಹ್ಮೋವಾಚ ॥

ಸಾ ಪುರೂರವಸಂ ಪ್ರಾಹ ಇಕ್ಷ್ವಾಕೂಣಾಂ ತಥಾ ಕುಲಂ ।
ತತೋತ್ಪತ್ತಿಂ ಸ್ವಸ್ಯ ನಾಮ ರಾಜ್ಯಪ್ರಾಪ್ತಿಂ ಪ್ರಿಯಾನ್ಸುತಾನ್ ॥ ೮೩ ॥

ಪುರೋಧಸಂ ವಸಿಷ್ಠಂ ಚ ಪ್ರಿಯಾಂ ಭಾರ್ಯಾಂ ಸ್ವಕಂ ಪದಂ ।
ವನನಿರ್ಯಾಣಮೇವಾಥ ಅಮಾತ್ಯಾನಾಂ ಪುರೋಧಸಃ ॥ ೮೪ ॥

ಪ್ರೇಷಣಂ ಚ ನಗರ್ಯಾಂ ತಾಂ ಮೃಗಯಾಸಕ್ತಿಮೇವ ಚ ।
ಹಿಮವತ್ಕಂದರಗತಿಂ ಯಕ್ಷೇಶ್ವರಗೃಹೇ ಗತಿಂ ॥ ೮೫ ॥

ಉಮಾವನಪ್ರವೇಶಂ ಚ ಸ್ತ್ರೀತ್ವಪ್ರಾಪ್ತಿಮಶೇಷತಃ ।
ಮಹೇಶ್ವರಾಜ್ಞಯಾ ತತ್ರ ಚಾಪ್ರವೇಶಂ ನರಸ್ಯ ತು ॥ ೮೬ ॥

ಯಕ್ಷಿಣೀವಾಕ್ಯಮುಖ್ಯಸ್ಯ ವರದಾನಂ ತಥೈವ ಚ ।
ಬುಧಪ್ರಾಪ್ತಿಂ ತಥಾ ಪ್ರೀತಿಂ ಪುತ್ರೋತ್ಪತ್ತ್ಯಾದ್ಯಶೇಷತಃ ॥ ೮೭ ॥

೮೩-೮೪. ಆಗ ಇಲೆಯು ಹಿಂದೆ ತಾನು ಇಕ್ಷ್ವಾಕುವಂಶದಲ್ಲಿ ಇಲ ರಾಜನೆಂಬ ಹೆಸರಿನಿಂದ ಜನಿಸಿ ರಾಜ್ಯವಾಳುತ್ತಿದ್ದುದನ್ನೂ, ಪ್ರಿಯಪುತ್ರರು ಜನಿಸಿದುದನ್ನೂ, ವಸಿಷ್ಠರು ಕುಲಪುರೋಹಿತರಾಗಿದ್ದುದನ್ನೂ, ಪ್ರಿಯಪತ್ನಿಯರನ್ನೂ, ಮೃಗಯಾಸಕ್ತಿಯಿಂದ ಅರಣ್ಯಕ್ಕೆ ತೆರಳಿದುದನ್ನೂ, ಪುರೋಹಿತ ಮತ್ತು ಮಂತ್ರಿಗಳನ್ನು ಪಟ್ಟಣಕ್ಕೆ ಕಳುಹಿಸಿ ತಾನು ಮೃಗಯಾಕುತೂಹಲ ದಿಂದ ಕಾಡಿನಲ್ಲಿ ಸೈನ್ಯದೊಡನೆ ಉಳಿದುದನ್ನೂ ವಿವರಿಸಿದಳು.

೮೫-೮೭. ಆಮೇಲೆ ಮೃಗಯಾಕುತೂಹಲದಿಂದ ಇಲರಾಜನಾದ ತಾನು ಹಿಮಾಲಯದಲ್ಲಿ ಸಂಚರಿಸಿದುದು, ಯಕ್ಷರಾಜನು ವಾಸವಾಗಿದ್ದ ರತ್ನ ಗುಹೆಯಲ್ಲಿ ವಾಸಿಸಿದುದು, ಯಕ್ಷಿಣಿಯ ದುರುಪಾಯದಿಂದ ಉಮಾವನಪ್ರವೇಶ, ಆ ವನದಲ್ಲಿ ಪ್ರವೇಶಿಸಿದ ಪುರುಷನು ಸ್ತ್ರೀಯಾಗಲಿ ಎಂಬ ಮಹೇಶ್ವರ ನಾಜ್ಞೆಯನ್ನು ಯಕ್ಷಸ್ತ್ರೀಯು ಹೇಳಿದುದು, ತಾನು ಹೆಂಸಾದುದು, ಯಕ್ಷಿಣಿಯು ವರವನ್ನನುಗ್ರಹಿಸಿದುದು, ಆಮೇಲೆ ಬುಧನ ಆಗಮನ, ಅವನೊಡನೆ ಪ್ರೀತಿ ವಿವಾಹ, ಮುಂದೆ ಪುರೂರವನ ಜನನ, ಇದೆಲ್ಲವನ್ನೂ ಇಲೆಯು ಪುರೂರವನಿಗೆ ಸಂಕ್ಷೇಪವಾಗಿ ವಿವರಿಸಿದಳು.

ಕಥಯಾಮಾಸ ತತ್ಸರ್ವಂ ಶ್ರುತ್ವಾ ಮಾತರಮಬ್ರವೀತ್ ।
ಪುರೂರವಾಃ ಕಿಂ ಕರೋಮಿ ಕಿಂ ಕೃತ್ವಾ ಸುಕೃತಂ ಭವೇತ್ ॥ ೮೮ ॥

ಏತಾವತಾ ತೇ ತೃಪ್ತಿಶ್ಚೇದಲಮೇತೇನ ಚಾಂಬಿಕೇ ।
ಯದಪ್ಯನ್ಯನ್ಮನೋವರ್ತಿ ತದಪ್ಯಾಜ್ಞಾಪಯಸ್ವ ಮೇ ॥ ೮೯ ॥

॥ ಇಲೋವಾಚ ॥

ಇಚ್ಛೇಯಂ ಪುಂಸ್ತ್ವಮುತ್ಕೃಷ್ಟಮಿಚ್ಛೇಯಂ ರಾಜ್ಯಮುತ್ತಮಂ ।
ಅಭಿಷೇಕಂ ಚ ಪುತ್ರಾಣಾಂ ತವ ಚಾಪಿ ವಿಶೇಷತಃ ॥ ೯೦ ॥

ದಾನಂ ದಾತುಂ ಚ ಯಷ್ಟುಂ ಚ ಮುಕ್ತಿಮಾರ್ಗಸ್ಯ ವೀಕ್ಷಣಂ ।
ಸರ್ವಂ ಚ ಕರ್ತುಮಿಚ್ಛಾಮಿ ತವ ಪುತ್ರ ಪ್ರಸಾದತಃ ॥ ೯೧ ॥

॥ ಪುತ್ರ ಉವಾಚ ॥

ಉಪಾಯಂ ತ್ವಾ ತು ಪೃಚ್ಛಾಮಿ ಯೇನ ಪುಂಸ್ತ್ವಮವಾಪ್ಸ್ಯಸಿ ।
ತಪಸೋ ವಾನ್ಯತೋ ವಾಪಿ ವದಸ್ವ ಮಮ ತತ್ತ್ವತಃ ॥ ೯೨ ॥

೮೮-೮೯. ಇಲೆಯ ಪೂರ್ವಕಥೆಯನ್ನು ಕೇಳಿ ಪುರೂರವನು ಓ ಮಾತೆ, ಈಗ ನಾನು ಮಾಡಬೇಕಾದುದೇನು ? ಏನು ಮಾಡಿದರೆ ನಿನಗೆ ಸುಖವಾಗುವುದು ? ಈಗಿರುವ ಸ್ಥಿತಿಯಲ್ಲಿಯೇ ನಿನಗೆ ತೃಪ್ತಿಯಿದ್ದರೆ ಏನು ಮಾಡುವುದೂ ಬೇಡ. ಅದಲ್ಲದೆ ನಿನ್ನ ಮನಸ್ಸಿನಲ್ಲಿ ಇನ್ನಾವುದು ಆಗಬೇಕೆಂದಿರುವುದೋ ಅದನ್ನು ಆಜ್ಞಾಪಿಸು, ಮಾಡುವೆನು ಎಂದನು.

೯೦. ಅದಕ್ಕೆ ಇಲೆಯು—ಹಿಂದಿನ ನನ್ನ ಪುರುಷಸ್ವರೂಪವನ್ನು ಪಡೆಯಲಿಚ್ಛಿಸುವೆನು. ಹಿಂದಿನ ರಾಜ್ಯವನ್ನಿಚ್ಛಿಸುವೆನು, ಹಿಂದಿನ ಮಕ್ಕಳಿಗೂ ನಿನಗೂ ರಾಜ್ಯಾಭಿಷೇಕವಾಗುವುದನ್ನು ಅಪೇಕ್ಷಿಸುವೆನು.

೯೧. ಎಲೈ ಪುತ್ರನೇ, ನಿನ್ನ ಪ್ರಯತ್ನದಿಂದ ನಾನು ಶ್ರೇಷ್ಠವಾದ ಪುರುಷತನವನ್ನು ಪಡೆದು ದಾನಮಾಡಬೇಕು, ಯಾಗಮಾಡಬೇಕು, ಮುಕ್ತಿ ಮಾರ್ಗವನ್ನು ಚಿಂತಿಸಬೇಕು ಎಂದು ನನಗಪೇಕ್ಷೆಯಿರುವುದು ಎನ್ನಲು,

೯೨. ಪುರೂರವನಿಂತೆಂದನು—ಓ ಮಾತೆ, ಪುನಃ ನೀನು ಪುರುಷನಾಗಲು ಯಾವ ಉಪಾಯವನ್ನು ಮಾಡಬೇಕು ? ತಪಸ್ಸು ಮಾಡಬೇಕೆ ? ಅಥವಾ ಇನ್ನೇನನ್ನು ಮಾಡಬೇಕು ? ಅದನ್ನು ಹೇಳಿದಲ್ಲಿ ಅದಕ್ಕಾಗಿ ತಕ್ಕ ಪ್ರಯತ್ನವನ್ನು ಮಾಡುವೆನೆಂದನು.

॥ ಇಲೋವಾಚ ॥

ಬುಧಂ ತ್ವಂ ಪಿತರಂ ಪೃಚ್ಛ ಗತ್ವಾ ಪುತ್ರ ಯಥಾರ್ಥವತ್ ।
ಸ ತು ಸರ್ವಂ ತು ಜಾನಾತಿ ಉಪದೇಕ್ಷ್ಯತಿ ತೇ ಹಿತಂ ॥ ೯೩ ॥

॥ ಬ್ರಹ್ಮೋವಾಚ ॥

ತನ್ಮಾತೃವಚನಾದೈಲೋ ಗತ್ವಾ ಪಿತರಮುಂಜಸಾ ।
ಉವಾಚ ಪ್ರಣತೋ ಭೂತ್ವಾ ಮಾತುಃ ಕೃತ್ಯಂ ತಥಾತ್ಮನಃ ॥ ೯೪ ॥

॥ ಬುಧ ಉವಾಚ ॥

ಇಲಂ ಜಾನೇ ಮಹಾಪ್ರಾಜ್ಞ ಇಲಾಂ ಜಾತಾಂ ಪುನಸ್ತಥಾ ।
ಉಮಾವನಪ್ರವೇಶಂ ಚ ಶಂಭೋರಾಜ್ಞಾಂ ತಥೈವ ಚ ॥ ೯೫ ॥

ತಸ್ಮಾಚ್ಛಂಭುಪ್ರಸಾದೇನ ಉಮಾಯಾಶ್ಚ ಪ್ರಸಾದತಃ ।
ವಿಶಾಪೋ ಭವಿತಾ ಪುತ್ರ ತಾವಾರಾಧ್ಯ ನ ಚಾನ್ಯಥಾ ೯೬ ॥

---

೯೩. ಇಲೆಯು ಹೇಳಿದಳು—ಎಲೈ ಪುತ್ರ, ತಂದೆಯಾದ ಬುಧನ ಬಳಿಗೆ ಹೋಗಿ ಕೇಳು. ಅವನು ಎಲ್ಲವನ್ನೂ ತಿಳಿದಿರುವನು. ಇದಕ್ಕೆ ತಕ್ಕ ಉಪಾಯವನ್ನು ಅವನು ನಿನಗೆ ಹೇಳಬಹುದು ಎಂದಳು.

೯೪. ತಾಯಿಯ ಮಾತಿನಂತೆ ಪುರೂರವನು ಕೂಡಲೇ ತಂದೆಯ ಬಳಿಗೆ ಹೋಗಿ ವಿನಯದಿಂದ ನಮಸ್ಕರಿಸಿ ಇಲೆಯ ಪೂರ್ವಕಥೆಯನ್ನು ಹೇಳಿ ಅವಳ ದುಃಖಪರಿಹಾರಕ್ಕೆ ಉಪಾಯವೇನೆಂದು ಪ್ರಶ್ನಿಸಿದನು.

೯೫. ಬುಧನು ಹೇಳಿದನು—ಬುದ್ಧಿಶಾಲಿಯಾದ ಎಲೈ ಕುಮಾರನೇ, ಇಲರಾಜನು ಉಮಾವನಕ್ಕೆ ಪ್ರವೇಶಿಸಿ ಇಲಾದೇವಿಯಾದುದನ್ನೂ, ಉಮಾವನಕ್ಕೆ ಶಂಕರನ ವರದಾನವನ್ನೂ ನಾನು ಬಲ್ಲೆನು.

೯೬. ಆದುದರಿಂದ ಶಿವಪಾರ್ವತಿಯರೀರ್ವರನ್ನೂ ಆರಾಧಿಸಿ ಅವರ ಅನುಗ್ರಹವನ್ನು ಸಂಪಾದಿಸಿದರೆ ಇಲರಾಜನ ಶಾಪನಿವೃತ್ತಿಯಾಗುವುದು. ಇಲ್ಲದಿದ್ದರೆ ಇಲ್ಲ ಎನ್ನಲು.

॥ ಪುರೂರವಾ ಉವಾಚ ॥

ಪಶ್ಯೇಯಂ ತಂ ಕಥಂ ದೇವಂ ಕಥಂ ವಾ ಮಾತರಂ ಶಿವಾಂ ।
ತೀರ್ಥಾದ್ವಾ ತಪಸೋ ವಾಪಿ ತತ್ಪಿತಃ ಪ್ರಥಮಂ ವದ ॥ ೯೭ ॥

॥ ಬುಧ ಉವಾಚ ॥

ಗೌತಮೀಂ ಗಚ್ಛ ಪುತ್ರ ತ್ವಂ ತತ್ರಾಸ್ತೇ ಸರ್ವದಾ ಶಿವಃ ।
ಉಮಯಾ ಸಹಿತಃ ಶ್ರೀಮಾನ್ ಶಾಪಹಂತಾ ವರಪ್ರದಃ ॥ ೯೮ ॥

॥ ಬ್ರಹ್ಮೋವಾಚ ॥

ಪುರೂರವಾಃ ಪಿತುರ್ವಾಕ್ಯಂ ಶ್ರುತ್ವಾ ತು ಮುದಿತೋಽಭವತ್ ।
ಗೌತಮೀಂ ತಪಸೇ ಧೀಮಾನ್ಗಂಗಾಂ ತ್ರೈಲೋಕ್ಯಪಾವನೀಂ ॥ ೯೯ ॥

ಪುಂಸ್ತ್ವಮಿಚ್ಛಂಸ್ತಥಾ ಮಾತುರ್ಜಗಾಮ ತಪಸೇ ತ್ವರನ್ ।
ಹಿಮವಂತಂ ಗಿರಿಂ ನತ್ವಾ ಮಾತರಂ ಪಿತರಂ ಗುರುಂ ॥ ೧೦೦ ॥

---

೯೭. ಪುರೂರವನು ಓ ತಂದೆಯೇ, ಶಿವಪಾರ್ವತಿಯರನ್ನು ದರ್ಶನ ಮಾಡುವ ಬಗೆ ಹೇಗೆ? ಯಾವ ತೀರ್ಥವನ್ನು ಸೇವಿಸಬೇಕು? ಎಂತಹ ತಪಸ್ಸು ಮಾಡಬೇಕು? ಅದನ್ನು ಮೊದಲು ಹೇಳು ಎಂದು ಕೇಳಿದನು.

೯೮. ಬುಧನು ಹೇಳಿದನು—ಎಲೈ ಪುತ್ರನೆ, ಗೌತಮೀನದಿಗೆ ಹೋಗು. ಅಲ್ಲಿ ಶಿವನು ಪಾರ್ವತಿಯೊಡನೆ ನೆಲಸಿರುವನು, ಅವನು ನಮಗೆ ವರವನ್ನು ಕೊಟ್ಟು ಶಾಪನಿವೃತ್ತಿಮಾಡುವನು ಎಂದನು.

೯೯. ಪುರೂರವನು ತಂದೆಯ ಮಾತನ್ನು ಕೇಳಿ ಸಂತಸಗೊಂಡು ಕೂಡಲೇ ಮಾತೆಗೆ ಪುಂಸ್ತ್ವವನ್ನು ಸಂಪಾದಿಸಿ ಕೊಡಲು ತಪಸ್ಸಿಗಾಗಿ ತ್ರಿಲೋಕಪವಿತ್ರವಾದ ಗೌತಮೀನದಿಯ ತೀರಕ್ಕೆ ಹೊರಡಲು ಸಿದ್ಧನಾದನು.

೧೦೦. ಹಿಮಾಲಯವನ್ನೂ ತಾಯಿತಂದೆಗಳನ್ನೂ ಗುರುವನ್ನೂ ನಮಸ್ಕರಿಸಿ ತಪಸ್ಸಿಗೆ ಹೊರಟ ಮಗನನ್ನು ಅನುಸರಿಸಿ ಇಲಾಬುಧರೂ ಹೊರಟರು.

ಗಚ್ಛಂತಮನ್ವಗಾತ್ಪುತ್ರಮಿಲಾ ಸೋಮಸುತಸ್ತಥಾ ।
ತೇ ಸರ್ವೇ ಗೌತಮೀಂ ಪ್ರಾಪ್ತಾ ಹಿಮವತ್ಪರ್ವತೋತ್ತಮಾತ್ ॥ ೧೦೧ ॥

ತತ್ರ ಸ್ನಾತ್ವಾ ತಪಃ ಕಿಂಚಿತ್ಕೃತ್ವಾ ಚಕ್ರುಃ ಸ್ತುತಿಂ ಪರಾಂ ।
ಭವಸ್ಯ ದೇವದೇವಸ್ಯ ಸ್ತುತಿಕ್ರಮಮಿಮಂ ಶೃಣು ॥ ೧೦೨ ॥

ಬುಧಸ್ತುಷ್ಟಾವ ಪ್ರಥಮಮಿಲಾ ಚ ತದನಂತರಂ ।
ತತಃ ಪುರೂರವಾಃ ಪುತ್ರೋ ಗೌರೀಂ ದೇವೀಂ ಚ ಶಂಕರಂ ॥ ೧೦೩ ॥

॥ ಬುಧ ಉವಾಚ ॥

ಯೌ ಕುಂಕುಮೇನ ಸ್ವಶರೀರಜೇನ
ಸ್ವಭಾವಹೇಮಪ್ರತಿಮೌ ಸರೂಪೌ ।
ಯಾವರ್ಚಿತೌ ಸ್ಕಂದಗಣೇಶ್ವರಾಭ್ಯಾಂ
ತೌ ಮೇ ಶರಣ್ಯೌ ಶರಣಂ ಭವೇತಾಂ ॥ ೧೦೪ ॥

೧೦೧-೧೦೨. ಅವರೆಲ್ಲರೂ ಹಿಮಾಲಯದಿಂದ ಗೌತಮೀನದಿಗೆ ಹೋಗಿ ಅಲ್ಲಿ ಸ್ನಾನಮಾಡಿ ತಪಸ್ಸನ್ನಾಚರಿಸಿ ಶಿವನನ್ನು ಭಕ್ತಿಯಿಂದ ಸ್ತುತಿಸಿದರು. ದೇವದೇವನಾದ ಮಹಾದೇವನನ್ನು ಅವರು ಸ್ತುತಿಸಿದ ಕ್ರಮವನ್ನು ಹೇಳುವೆನು ಕೇಳು.

೧೦೩. ಶಿವಪಾರ್ವತಿಯರನ್ನು ಈ ರೀತಿಯಾಗಿ ಮೊದಲು ಬುಧನು ಸ್ತುತಿಸಿದನು, ಆಮೇಲೆ ಇಲಾದೇವಿಯು ಸ್ತುತಿಸಿದಳು, ನಂತರ ಪುರೂರವನು ಸ್ತುತಿಸಿದನು.

೧೦೪. ಬುಧನು ಹೇಳಿದನು—ಸ್ವಾಭಾವಿಕವಾಗಿ ಚಿನ್ನದಂತೆ ಮೈ ಬಣ್ಣವುಳ್ಳವರಾದರೂ ತಮ್ಮ ಶರೀರದ ಕುಂಕುಮವರ್ಣದಿಂದ ಒಂದೇ ತೆರನಾಗಿ ಕಾಣಿಸುವವರೂ, ಷಣ್ಮುಖಗಣೇಶರಿಂದ ಪೂಜಿಸಲ್ಪಡುವವರೂ, ದೀನರಕ್ಷಕರೂ ಆದ ಶಿವಪಾರ್ವತಿಯರೇ ನನಗೆ ರಕ್ಷಕರು, ಅವರನ್ನೇ ನಾನು ಶರಣು ಹೊಂದಿರುವೆನು.

॥ ಇಲೋವಾಚ ॥

ಸಂಸಾರತಾಪತ್ರಯದಾವದಗ್ಧಾಃ
ಶರೀರಿಣೋ ಯೌ ಪರಿಚಿಂತಯಂತಃ ।
ಸದ್ಯಃ ಪರಾಂ ನಿರ್ವೃತಿಮಾಪ್ನುವಂತಿ
ತೌ ಶಂಕರೌ ಮೇ ಶರಣಂ ಭವೇತಾಂ ॥ ೧೦೫ ॥

ಆರ್ತಾ ಹ್ಯಹಂ ಪೀಡಿತಮಾನಸಾ ತೇ
ಕ್ಲೇಶಾದಿಗೋಪ್ತಾ ನ ಪರೋಽಸ್ತಿ ಕಶ್ಚಿತ್ ।
ದೇವ ತ್ವದೀಯೌ ಚರಣೌ ಸುಪುಣ್ಯೌ
ತೌ ಮೇ ಶರಣ್ಯೌ ಶರಣಂ ಭವೇತಾಂ ॥ ೧೦೬ ॥

॥ ಪುರೂರವಾ ಉವಾಚ ॥

ಯಯೋಃ ಸಕಾಶಾದಿದಮಭ್ಯುದೈತಿ
ಪ್ರಯಾತಿ ಚಾಂತೇ ಲಯಮೇವ ಸರ್ವಂ ।
ಜಗಚ್ಛರಣ್ಯೌ ಜಗದಾತ್ಮಕೌ ತು
ಗೌರೀಹರೌ ಮೇ ಶರಣಂ ಭವೇತಾಂ ॥ ೧೦೭ ॥

• ೧೦೫. ಇಲೆಯು ಹೇಳಿದಳು—ಸಂಸಾರದುಃಖಗಳೆಂಬ ಕಾಡುಗಿಚ್ಚಿನ ಉರಿಗೆ ಸಿಲುಕಿ ಬಳಲಿದ ಮಾನವರು ಯಾರನ್ನು ಧ್ಯಾನಿಸಿ ಶಾಂತಿಯನ್ನೂ ಸುಖವನ್ನೂ, ಪಡೆಯುವರೋ ಅಂತಹ ಪಾರ್ವತಿಪರಮೇಶ್ವರರನ್ನು ಶರಣು ಹೊಂದಿರುವೆನು.

೧೦೬. ನಾನು ದುಃಖದಿಂದ ಬಳಲಿರುವೆನು. ಓ ಮಹಾದೇವ, ನಿನ್ನ ಹೊರತು ದುಃಖವನ್ನು ಹೋಗಲಾಡಿಸುವರು ಬೇರೊಬ್ಬರಿಲ್ಲ. ನಿನ್ನ ಪವಿತ್ರವಾದ ಪಾದಗಳನ್ನು ಶರಣುಹೊಂದಿರುವೆನು, ರಕ್ಷಿಸು.

೧೦೭. ಪುರೂರವನು ಹೇಳಿದನು—ಓ ಶಿವಪಾರ್ವತಿಯರೇ, ನಿಮ್ಮಿಂದಲೇ ಈ ಜಗತ್ತೆಲ್ಲವೂ ಜನಿಸಿರುವುದು. ರಕ್ಷಿಸುವವರೂ ನೀವು, ಕೊನೆಗೆ ಸಂಹರಿಸುವವರೂ ನೀವು. ಜಗತ್ತಿಗೆ ಆಶ್ರಯರೂ, ಜಗನ್ಮಯರೂ ಆದ ನಿಮ್ಮನ್ನೇ ಶರಣುಹೊಂದಿರುವೆನು.

ಯೌ ದೇವವೃಂದೇಷು ಮಹೋತ್ಸವೇ ತು
ಪಾದೌ ಗೃಹಾಣೇಶ ಗಿರೀಶಪುತ್ರ್ಯಾಃ ।
ಪ್ರೋಕ್ತಂ ಧೃತೌ ಪ್ರೀತಿವಶಾಚ್ಛಿವೇನ
ತೌ ಮೇ ಶರಣ್ಯೌ ಶರಣಂ ಭವೇತಾಂ ॥ ೧೦೮ ॥

॥ ಶ್ರೀದೇವ್ಯುವಾಚ ॥

ಕಿಮಭೀಷ್ಟಂ ಪ್ರದಾಸ್ಯಾಮಿ ಯುಷ್ಮಭ್ಯಂ ತದ್ವದಂತು ಮೇ ।
ಕೃತಕೃತ್ಯಾಃ ಸ್ಥ ಭದ್ರಂ ವೋ ದೇವಾನಾಮಪಿ ದುಷ್ಕರಂ ॥ ೧೦೯ ॥

॥ ಪುರೂರವಾ ಉವಾಚ ॥

ಇಲೋ ರಾಜಾ ತವಾಜ್ಞಾತ್ವಾ ವನಂ ಪ್ರಾವಿಶದಂಬಿಕೇ ।
ತತ್ಕ್ಷಮಸ್ವ ಸುರೇಶಾನಿ ಪುಂಸ್ತ್ವಂ ದಾತುಂ ತ್ವಮರ್ಹಸಿ ॥ ೧೧೦ ॥

---

೧೦೮. ಶಿವಪಾರ್ವತಿಯರ ಮದುವೆ ನಡೆಯುತ್ತಿರುವಾಗ ದೇವತೆಗಳೆಲ್ಲರೂ ಅಲ್ಲಿ ಸೇರಿದ್ದರು. ಅಶ್ಮಾರೋಹಣಸಮಯ. ಆಗ ಪುರೋಹಿತನಾದ ಬ್ರಹ್ಮನು ಶಿವನನ್ನು ಕುರಿತು ದೇವ ಪಾರ್ವತಿಯ ಕಾಲುಗಳನ್ನು ಹಿಡಿದು ವಿವಾಹಶಿಲೆಯಲ್ಲಿರಿಸು ಎಂದು ಹೇಳಿದನು. ಶಿವನು ಆಗ ಪ್ರೀತಿಯಿಂದ ಗಿರಿಜೆಯ ಪಾದಗಳನ್ನು ಹಿಡಿದನು. ಇಂತಹ ಗಿರಿಜೆಯ ಪಾದಗಳು ನನ್ನನ್ನು ರಕ್ಷಿಸಲಿ. ಅವುಗಳನ್ನು ಶರಣು ಹೊಂದಿರುವೆನು, ಎಂದು ಸ್ತೋತ್ರಮಾಡುತ್ತಿರಲು ಆಗ,

೧೦೯. ಪಾರ್ವತಿಯು ಹೇಳಿದಳು—ಎಲೈ ಭಕ್ತರೇ, ನೀವು ಕೃತಾರ್ಥರಾದಿರಿ. ನಿಮಗೆ ಮಂಗಳವಾಗಲಿ. ನಿಮಗೆ ಬೇಕಾದುದೇನು? ಹೇಳಿ. ದೇವತೆಗಳೂ ಪಡೆಯದಂತಹ ವರವನ್ನು ನಿಮಗೆ ಕೊಡುವೆನು ಎನ್ನಲು,

೧೧೦. ಪುರೂರವನು ಹೇಳಿದನು—ಓ ಜಗನ್ಮಾತೆ, ಇಲರಾಜನು ತಿಳಿಯದೆ ನಿನ್ನ ಉಮಾವನವನ್ನು ಪ್ರವೇಶಿಸಿ ಸ್ತ್ರೀಯಾದನು. ಅವನ ಅಪರಾಧವನ್ನು ಮನ್ನಿಸು. ಅವನಿಗೆ ಪುನಃ ಪುಂಸ್ತ್ವವನ್ನು ಕರುಣಿಸು ಎಂದು ಪ್ರಾರ್ಥಿಸಿದನು.

॥ ಬ್ರಹ್ಮೋವಾಚ ॥

ತಥೇತ್ಯುವಾಚ ತಾನ್ಸರ್ವಾನ್ಸ್ವಸ್ಯ ತು ಮತೇ ಸ್ಥಿತಾ ।
ತತಃ ಸ ಭಗವಾನಾಹ ದೇವೀವಾಕ್ಯರತಃ ಸದಾ ॥ ೧೧೧ ॥

॥ ಶಿವ ಉವಾಚ ॥

ಅತ್ರಾಭಿಷೇಕಮಾತ್ರೇಣ ಪುಂಸ್ತ್ವಂ ಪ್ರಾಪ್ನೋತ್ವಯಂ ನೃಪಃ ॥ ೧೧೨ ॥

॥ ಬ್ರಹ್ಮೋವಾಚ ॥

ಸ್ನಾತಾಯಾ ಬುಧಭಾರ್ಯಾಯಾಃ ಶರೀರಾದ್ವಾರಿ ಸುಸ್ರುವೇ ।
ನೃತ್ಯಂ ಗೀತಂ ಚ ಲಾವಣ್ಯಂ ಯಕ್ಷಿಣ್ಯಾ ಯದುಪಾರ್ಜಿತಂ ॥ ೧೧೩ ॥

ತತ್ಸರ್ವಂ ವಾರಿಧಾರಾಭಿರ್ಗಂಗಾಂಭಸಿ ಸಮಾವಿಶತ್ ।
ನೃತ್ಯಾ ಗೀತಾ ಚ ಸೌಭಾಗ್ಯಾ ಇಮಾ ನದ್ಯೋ ಬಭೂವಿರೇ ॥ ೧೧೪ ॥

೧೧೧–೧೧೨. ಆಗ ಪಾರ್ವತಿಯು ಶಿವನ ಅನುಮತಿಯನ್ನು ಪಡೆದು ಹಾಗೆಯೇ ಆಗಲೆಂದು ವರವನ್ನು ಕರುಣಿಸಿದಳು. ಆಮೇಲೆ ಶಿವನು ದೇವಿಯ ಅಭಿಪ್ರಾಯವನ್ನನುಸರಿಸಿ ಇಲ್ಲಿ ಗೌತಮೀನದಿಯ ನೀರಿನಿಂದ ಸ್ನಾನವನ್ನು ಮಾಡುವುದರಿಂದಲೇ ಇಲರಾಜನು ಪುನಃ ಪುಂಸ್ತ್ವವನ್ನು ಪಡೆಯುವನು ಎಂದನು.

೧೧೩. ಆಮೇಲೆ ಇಲೆಯು ಗೌತಮೀನದಿಯಲ್ಲಿ ಸ್ನಾನಮಾಡಲು, ಅವಳ ಶರೀರದಿಂದ ಯಕ್ಷಿಣಿಯು ಹೇಳಿಕೊಟ್ಟ ಗೀತನರ್ತನಗಳೂ, ಲಾವಣ್ಯವೂ, ನೀರಿನರೂಪದಿಂದ ಸ್ರವಿಸಿದುವು.

೧೧೪. ಆ ಗೀತನೃತ್ಯಲಾವಣ್ಯಗಳು ನೃತ್ಯಾನದೀ, ಗೀತಾನದಿ, ಸೌಭಗ್ಯಾನದಿಯೆಂದು ಮೂರು ನದಿಗಳಾಗಿ ಹರಿದು ಗೌತಮೀನದಿಯನ್ನು ಸೇರಿದುವು.

ತಾಶ್ಚಾಪಿ ಸಂಗತಾ ಗಂಗಾಂ ತೇ ಪುಣ್ಯಾಃ ಸಂಗಮಾಸ್ತ್ರಯಃ ।
ತೇಷು ಸ್ನಾನಂ ಚ ದಾನಂ ಚ ಸುರರಾಜ್ಯಫಲಪ್ರದಂ ॥ ೧೧೫ ॥

ಇಲಾ ಪುಂಸ್ತ್ವಮವಾಪ್ಯಾಥ ಗೌರೀಶಂಭೋಃ ಪ್ರಸಾದತಃ ।
ಮಹಾಭ್ಯುದಯಸಿದ್ಧ್ಯರ್ಥಂ ವಾಜಿಮೇಧಮಥಾಕರೋತ್ ॥ ೧೧೬ ॥

ಪುರೋಧಸಂ ವಸಿಷ್ಠಂ ಚ ಭಾರ್ಯಾಂ ಪುತ್ರಾಂಸ್ತಥೈವ ಚ ।
ಅಮಾತ್ಯಾಂಶ್ಚ ಬಲಂ ಕೋಶಮಾನೀಯ ಸ ನೃಪೋತ್ತಮಃ ॥ ೧೧೭ ॥

ಚತುರಂಗಂ ಬಲಂ ರಾಜ್ಯಂ ದಂಡಕೇಽಸ್ಥಾಪಯತ್ತದಾ ।
ಇಲಸ್ಯ ನಾಮ್ನಾ ವಿಖ್ಯಾತಂ ತತ್ರ ತತ್ಪುರಮುಚ್ಯತೇ ॥ ೧೧೮ ॥

ಪೂರ್ವಜಾತಾನಥೋ ಪುತ್ರಾನ್ಸೂರ್ಯವಂಶಕ್ರಮಾಗತೇ ।
ರಾಜ್ಯೇಽಭಿಷಿಚ್ಯ ಪಶ್ಚಾತ್ತನ್ಮೈಲಂ ಸ್ನೇಹಾದಸಿಂಚಯತ್ ॥ ೧೧೯ ॥

ಸೋಮವಂಶಕರಃ ಶ್ರೀಮಾನಯಂ ರಾಜಾ ಭವೇದಿತಿ ।
ಸರ್ವೇಭ್ಯೋ ಮತಿಮಾನೇಭ್ಯೋ ಜ್ಯೇಷ್ಠಃ ಶ್ರೇಷ್ಠೋಽಭವನ್ಮನೇ ॥ ೧೨೦ ॥

---

೧೧೫. ಆ ನದಿಗಳು ಗೌತಮೀನದಿಗೆ ಸೇರಿದ ಮೂರುಸಂಗಮಸ್ಥಳಗಳು ಪವಿತ್ರವಾದುವು. ಆ ಸಂಗಮಗಳಲ್ಲಿ ಸ್ನಾನದಾನಗಳನ್ನು ಮಾಡಿದರೆ ದೇವರಾಜ್ಯವು ಲಭಿಸುವುದು.

೧೧೬. ಇಲಾದೇವಿಯು ಗೌರೀಶಂಕರರ ಅನುಗ್ರಹದಿಂದ ತನ್ನ ಹಿಂದಿನ ಪುಂಸ್ತ್ವವನ್ನು ಪಡೆದು ಇಲರಾಜನಾಗಿ ಮಹದೈಶ್ವರ್ಯಪ್ರಾಪ್ತಿಗಾಗಿ ಅಶ್ವಮೇಧಯಾಗವನ್ನು ಮಾಡಿದನು.

೧೧೭-೧೧೮. ಅನೇಲಾ ಇಲರಾಜನು ಪುರೋಹಿತನಾದ ವಸಿಷ್ಠ, ರಾಣಿ, ಮಕ್ಕಳು, ಮಂತ್ರಿಗಳು, ಸೇನೆ, ಬೊಕ್ಕಸ ಇವುಗಳನ್ನು ಕರೆಯಿಸಿ ಆ ದಂಡಕಾರಣ್ಯದಲ್ಲಿ ಆನೆ, ಕುದುರೆ, ರಥ, ಕಾಲಾಳುಗಳಿಂದ ರಕ್ಷಿಸಲ್ಪಟ್ಟ ರಾಜ್ಯವನ್ನು ಸ್ಥಾಪಿಸಿದನು. ಅಲ್ಲಿ ಮಹಾನಗರವೊಂದನ್ನು ನಿರ್ಮಿಸಿ ಅದಕ್ಕೆ ಇಲಪುರವೆಂದು ಹೆಸರಿಟ್ಟು ರಾಜ್ಯವಾಳತೊಡಗಿದನು.

೧೧೯. ಮೊದಲಿನ ತನ್ನ ಮಕ್ಕಳನ್ನು ಸೂರ್ಯವಂಶದವರ ರಾಜ್ಯದಲ್ಲಿ ಪ್ರತಿಷ್ಠಿಸಿ ಪುರೂರವನನ್ನು ದಂಡಕಾರಣ್ಯರಾಜ್ಯದಲ್ಲಿ ಅಭಿಷೇಕಮಾಡಿದನು.

೧೨೦. ಚಂದ್ರವಂಶವನ್ನು ಬೆಳೆಸಲಿ ಎಂದು ಪುರೂರವನನ್ನು ರಾಜನ

ಯತ್ರ ಚ ಕ್ರತವೋ ವೃತ್ತಾ ಇಲಸ್ಯ ನೃಪತೇಃ ಶುಭಾಃ ।
ಯತ್ರ ಪುಂಸ್ತ್ವಮವಾಪ್ಯಾಥ ಯತ್ರ ಪುತ್ರಾಃ ಸಮಾಗತಾಃ ॥ ೧೨೧ ॥

ಯಕ್ಷಿಣೀದತ್ತನೃತ್ಯಾದಿಗೀತಸೌಭಾಗ್ಯಮಂಗಲಾಃ ।
ನದ್ಯೋ ಭೂತ್ವಾ ಯತ್ರ ಗಂಗಾಂ ಸಂಗತಾಸ್ತಾನಿ ನಾರದ ॥ ೧೨೨ ॥

ತೀರ್ಥಾನಿ ಶುಭದಾನ್ಯಾಸನ್ಸಹಸ್ರಾಣ್ಯಥ ಷೋಡಶ ।
ಉಭಯೋಸ್ತೀರಯೋಸ್ತಾತ ತತ್ರ ಶಂಭುರಿಲೇಶ್ವರಃ ।
ತೇಷು ಸ್ನಾನಂ ಚ ದಾನಂ ಚ ಸರ್ವಕ್ರತುಫಲಪ್ರದಂ ॥ ೧೨೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ ತೀರ್ಥಮಾಹಾತ್ಮ್ಯೇ ಬುಧೇಲಾಪುರೂರವೋವಸಿಷ್ಠನೃತ್ಯಗೀತ-ಸೌಭಾಗ್ಯೇಲೇಶ್ವರಾದಿಷೋಡಶಸಹಸ್ರತೀರ್ಥವರ್ಣನಂ ನಾಮಾಷ್ಟಾಧಿಕಶತತಮೋಽಧ್ಯಾಯಃ

ನ್ನಾಗಿ ಮಾಡಿದನು. ಆ ಪುರೂರವನು ಇಲರಾಜನ ಮಕ್ಕಳೆಲ್ಲರಲ್ಲಿ ಬುದ್ಧಿವಂತನೂ, ಸುಗುಣಿಯೂ, ಶ್ರೇಷ್ಠನೂ ಆಗಿದ್ದನು.

೧೨೧-೧೨೨. ಇಲರಾಜನು ಯಾಗಮಾಡಿದ ಸ್ಥಳ, ಅವನ ಮೊದಲಿನ ಪುತ್ರರು ಬಂದು ಸೇರಿದ ಸ್ಥಳ, ಯಕ್ಷಿಣಿಯಿಂದ ಇಲಾದೇವಿಗೆ ಬಂದ ನೃತ್ಯ ಗೀತಸೌಭಾಗ್ಯಗಳು ನದಿಯಾಗಿ ಹರಿದು ಗೌತಮೀನದಿಯಲ್ಲಿ ಸೇರಿದ ಸಂಗಮ ಸ್ಥಳ, ಇವುಗಳಲ್ಲಿ ಹದಿನಾರುಸಾವಿರ ಪುಣ್ಯತೀರ್ಥಗಳುಂಟಾದುವು.

೧೨೩. ಆ ತೀರ್ಥಗಳ ಎರಡು ತೀರಗಳಲ್ಲಿಯೂ ಇಲೇಶ್ವರನೆಂಬ ಹೆಸರಿನಿಂದ ಶಂಕರನು ನೆಲಸಿರುವನು. ಆ ತೀರ್ಥಗಳಲ್ಲಿ ಸ್ನಾನದಾನಗಳನ್ನು ಮಾಡಿದರೆ ಎಲ್ಲ ಯಾಗಗಳ ಫಲವೂ ಲಭಿಸುವುದು, ಈ ವಿಷಯದಲ್ಲಿ ಸಂಶಯವಿಲ್ಲ.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಬುಧತೀರ್ಥವೇ ಮೊದಲಾದ ಹದಿನಾರು ಸಾವಿರ ತೀರ್ಥಮಾಹಾತ್ಮ್ಯನಿರೂಪಣವೆಂಬ ನೂರೆಂಟನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯದಲ್ಲಿ ಮೂವತ್ತೊಂಭತ್ತನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ನವಾಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಚಕ್ರತೀರ್ಥಮಿತಿ ಖ್ಯಾತಂ ಬ್ರಹ್ಮಹತ್ಯಾದಿನಾಶನಂ ।
ಯತ್ರ ಚಕ್ರೇಶ್ವರೋ ದೇವಶ್ಚಕ್ರಮಾಪ ಯತೋ ಹರಿಃ ॥ ೧ ॥

ಯತ್ರ ವಿಷ್ಣುಃ ಸ್ವಯಂ ಸ್ಥಿತ್ವಾ ಚಕ್ರಾರ್ಥಂ ಶಂಕರಂ ಪ್ರಭುಃ ।
ಪೂಜಯಾಮಾಸ ತತ್ತೀರ್ಥಂ ಚಕ್ರತೀರ್ಥಮುದಾಹೃತಂ ॥ ೨ ॥

ನೂರೊಂಭತ್ತನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಚಕ್ರತೀರ್ಥವೆಂಬ ತೀರ್ಥ ಶ್ರೇಷ್ಠವಿರುವುದು. ಬ್ರಹ್ಮಹತ್ಯೆ ಮೊದಲಾದ ಪಾಪಗಳೂ ಅಲ್ಲಿ ನಾಶವಾಗುವುವು. ಆ ತೀರ್ಥದಲ್ಲಿ ಚಕ್ರೇಶ್ವರನೆಂಬ ಹೆಸರಿನಿಂದ ಶಿವನು ನೆಲಸಿರುವನು.

೨. ಆ ತೀರ್ಥದಲ್ಲಿ ಮಹಾ ವಿಷ್ಣುವೂ ಕೂಡ ಶಂಕರನನ್ನು ಭಕ್ತಿಯಿಂದ ಪೂಜಿಸಿ ಅವನ ಅನುಗ್ರಹದಿಂದ ಸುದರ್ಶನಚಕ್ರವನ್ನು ಪಡೆದನು. ಆದುದರಿಂದ ಆ ತೀರ್ಥಕ್ಕೆ ಚಕ್ರತೀರ್ಥವೆಂದು ಹೆಸರಾಯಿತು. ಆ ತೀರ್ಥದ ಮಾಹಾತ್ಮ್ಯವನ್ನು ಕೇಳಿದ ಮಾತ್ರದಿಂದಲೇ ಪಾಪಗಳೆಲ್ಲವೂ ನಾಶವಾಗುವುವು.

ಯಸ್ಯ ಶ್ರವಣಮಾತ್ರೇಣ ಸರ್ವಪಾಪೈಃ ಪ್ರಮುಚ್ಯತೇ ।
ದಕ್ಷಕ್ರತೌ ಪ್ರವೃತ್ತೇ ತು ದೇವಾನಾಂ ಚ ಸಮಾಗಮೇ ॥ ೩ ॥

ದಕ್ಷೇಣ ದೂಷಿತೇ ದೇವೇ ಶಿವೇ ಶರ್ವೇ ಮಹೇಶ್ವರೇ ।
ಅನಾಹ್ವಾನೇ ಸುರೇಶಸ್ಯ ದಕ್ಷಚಿತ್ತೇ ಮಲೀಮಸೇ ॥ ೪ ॥

ದಾಕ್ಷಾಯಣ್ಯಾ ಶ್ರುತೇ ವಾಕ್ಯೇ ಅನಾಹ್ವಾನಸ್ಯ ಕಾರಣೇ ।
ಅಹಲ್ಯಾಯಾಂ ಚೋಕ್ತವತ್ಯಾಂ ಕುಪಿತಾಭೂತ್ಸುರೇಶ್ವರೀ ॥ ೫ ॥

ಪಿತರಂ ನಾಶಯೇ ಪಾಪಂ ಕ್ಷಮೇಯಂ ನ ಕಥಂಚನ ।
ಶೃಣ್ವತೀ ದೋಷವಾಕ್ಯಾನಿ ಪಿತ್ರಾ ಚೋಕ್ತಾನಿ ಭರ್ತರಿ ॥ ೬ ॥

ಪತ್ಯುಃ ಶೃಣ್ವಂತಿ ಯಾ ನಿಂದಾಂ ತಾಸಾಂ ಪಾಪಾವಧಿಃ ಕುತಃ ।
ಯಾದೃಶಸ್ತಾದೃಶೋ ವಾಪಿ ಪತಿಃ ಸ್ತ್ರೀಣಾಂ ಪರಾ ಗತಿಃ ॥ ೭ ॥

೩-೪. ಹಿಂದೆ ದಕ್ಷಯಜ್ಞವು ಪ್ರಾರಂಭವಾಯಿತು. ದೇವತೆಗಳೆಲ್ಲರೂ ಆ ಯಾಗಕ್ಕೆ ಬಂದಿದ್ದರು. ಆದರೆ ದುರಹಂಕಾರಿಯಾದ ದಕ್ಷನು ಪರಮೇಶ್ವರನಾದ ಶಿವನನ್ನು ನಿಂದಿಸಿ ಆ ಯಾಗಕ್ಕೆ ಕರೆಯಲಿಲ್ಲ.

೫. ದಕ್ಷಪುತ್ರಿಯಾದ ಸತೀದೇವಿಗೆ ತನ್ನ ಪತಿಯಾದ ಶಿವನನ್ನು ದಕ್ಷಯಜ್ಞಕ್ಕೆ ಕರೆಯದಿರಲು ಕಾರಣವು ಅಹಲ್ಯೆಯಿಂದ ತಿಳಿಯಿತು. ಆದುದರಿಂದ ಆ ದೇವಿಯು ಕೋಪಗೊಂಡಳು.

೬. ದಕ್ಷಯಾಗಕ್ಕೆ ತಾನೇ ಹೊರಟುಹೋದಳು. ಅವಳನ್ನು ನೋಡಿ ದಕ್ಷನು ಕೋಪಗೊಂಡು ಅನಾದರಿಸಿ ಅವಳ ಪತಿಯಾದ ಶಿವನನ್ನು ನಿಂದಿಸಿದನು. ಆಗ ಆ ಸತಿಯು ಕೋಪದಿಂದ ಇಂತೆಂದಳು.

೭. ಈ ನನ್ನ ತಂದೆಯನ್ನು ಕ್ಷಮಿಸಲಾರೆನು, ನಾಶಗೊಳಿಸುವೆನು. ಪತಿಯ ನಿಂದೆಯನ್ನು ಕೇಳುವ ಸ್ತ್ರೀಯರಿಗೆ ಪಾಪವು ತಟ್ಟುವುದು. ಪತಿಯು ಎಂಥವನೇ ಆದರೂ ಸ್ತ್ರೀಯರಿಗೆ ಅವನೇ ಗತಿಯು.

ಕಿಂ ಪುನಃ ಸಕಲಾಧೀಶೋ ಮಹಾದೇವೋ ಜಗದ್ಗುರುಃ ।
ಶ್ರುತಂ ತನ್ನಿಂದನಂ ತರ್ಹಿ ಧಾರಯಾಮಿ ನ ದೇಹಕಂ ॥ ೮ ॥

ತಸ್ಮಾತ್ತ್ಯಕ್ಷ್ಯ ಇಮಂ ದೇಹಮಿತ್ಯುಕ್ತ್ವಾ ಸಾ ಮಹಾಸತೀ ।
ಕೋಪೇನ ಮಹತಾವಿಷ್ಟಾ ಪ್ರಜಜ್ವಾಲ ಸುರೇಶ್ವರೀ ॥ ೯ ॥

ಶಿವೈಕಚೇತನಾ ದೇಹಂ ಬಲಾದ್ಯೋಗಾಚ್ಚ ತತ್ಯಜೇ ।
ಮಹೇಶ್ವರೋಽಪಿ ಸಕಲಂ ವೃತ್ತಮಾಕರ್ಣ್ಯ ನಾರದಾತ್ ॥ ೧೦ ॥

ದೃಷ್ಟ್ವಾ ಚುಕೋಪ ಪಪ್ರಚ್ಛ ಜಯಾಂ ಚ ವಿಜಯಾಂ ತಥಾ ।
ತೇ ಊಚತುರುಭೇ ದೇವಂ ದಕ್ಷಕ್ರತುವಿನಾಶನಂ ॥ ೧೧ ॥

ದಾಕ್ಷಾಯಣ್ಯಾ ಇತಿ ಶ್ರುತ್ವಾ ಮುಖಂ ಪ್ರಾಯಾನ್ಮಹೇಶ್ವರಃ ।
ಭೀಮೈರ್ಗಣೈಃ ಪರಿವೃತೋ ಭೂತನಾಥೈಃ ಸಮಂ ಯಯೌ ॥ ೧೨ ॥

---

೮. ಹೀಗಿರಲು ನನ್ನ ಪತಿಯು ಮಹೇಶ್ವರನು, ದೇವದೇವನು, ಜಗದ್ಗುರುವು. ಇಂತಹವನ ನಿಂದೆಯನ್ನು ಕೇಳಿ ಪತ್ನಿಯಾದ ನಾನು ದೇಹವನ್ನು ಧರಿಸಿರಲಾರೆನು.

೯. ಆದುದರಿಂದ ಈ ದೇಹವನ್ನು ತ್ಯಜಿಸುವೆನು, ಎಂದು ಹೇಳಿ ಕೋಪಗೊಂಡ ಆ ಸತೀದೇವಿಯು ಶಿವನನ್ನೇ ಅನನ್ಯಭಕ್ತಿಯಿಂದ ಧ್ಯಾನಿಸುತ್ತಾ ಬಲಾತ್ಕಾರವಾಗಿ ಯೋಗಮಾರ್ಗದಿಂದ ಶರೀರವನ್ನು ತ್ಯಜಿಸಿದಳು.

೧೦-೧೧. ಇತ್ತ ಮಹೇಶ್ವರನಿಗೆ ನಾರದನಿಂದ ಸತೀದೇವಿಯ ಸಮಾಚಾರವು ತಿಳಿಯಿತು. ಅವನು ಸಖಿಯರಾದ ಜಯಾವಿಜಯೆರನ್ನು ಕುರಿತು ಈ ವಿಷಯವಾಗಿ ಪ್ರಶ್ನಿಸಲು, ಅವರು ಸತೀದೇವಿಯು ಪ್ರಾಣಬಿಟ್ಟ ಕಾರಣವನ್ನು ತಿಳಿಸಿದರು.

೧೨, ಆ ಸಮಾಚಾರವನ್ನು ಕೇಳಿ ಶಿವನು ಕೋಪಗೊಂಡು ತನ್ನ ಭಯಂಕರರಾದ ಪ್ರಮಥಗಣಗಳೊಡನೆಯೂ, ಭೂತಗಣಗಳೊಡನೆಯೂ ದಕ್ಷಯಾಗಕ್ಕೆ ಹೋದನು.

ಮುಖಸ್ತೈರ್ವೇಷ್ಟಿತಃ ಸರ್ವೋ ದೇವಬ್ರಹ್ಮಪುರಸ್ಕೃತಃ ।
ದಕ್ಷೇಣ ಯಜಮಾನೇನ ಶುದ್ಧಭಾವೇನ ರಕ್ಷಿತಃ ॥ ೧೩ ॥

ವಸಿಷ್ಠಾದಿಭಿರತ್ಯುಗ್ರೈರ್ಮುನಿಭಿಃ ಪರಿವಾರಿತಃ ।
ಇಂದ್ರಾದಿತ್ಯಾದ್ಯೈರ್ವಸುಭಿಃ ಸರ್ವತಃಪರಿಪಾಲಿತಃ ॥ ೧೪ ॥

ಋುಗ್ಯಜುಃಸಾಮವೇದೈಶ್ಚ ಸ್ವಾಹಾಶಬ್ದೈರಲಂಕೃತಃ ।
ಶ್ರದ್ಧಾ ಪುಷ್ಟಿಸ್ತಥಾ ತುಷ್ಟಿಃ ಶಾಂತಿರ್ಲಜ್ಜಾ ಸರಸ್ವತೀ ॥ ೧೫ ॥

ಭೂಮಿರ್ದ್ಯೌಃ ಶರ್ವರೀ ಕ್ಷಾಂತಿರುಷಾ ಆಶಾ ಜಯಾ ಮತಿಃ ।
ಏತಾಭಿಶ್ಚ ತಥಾನ್ಯಾಭಿಃ ಸರ್ವತಃಸಮಲಂಕೃತಃ ॥ ೧೬ ॥

ತ್ವಷ್ಟ್ರಾ ಮಹಾತ್ಮನಾ ಚಾಪಿ ಕಾರಿತೋ ವಿಶ್ವಕರ್ಮಣಾ ।
ಸುರಭಿರ್ನಂದಿನೀ ಧೇನುಃ ಕಾಮಧುಕ್ಕಾಮದೋಹಿನೀ ॥ ೧೭ ॥

೧೩-೧೪. ಆ ಯಾಗಶಾಲೆಯಲ್ಲಿ ಬ್ರಹ್ಮ ಮೊದಲಾದ ದೇವತೆಗಳು ಮುಂಡಿಸಿದ್ದರು. ವಸಿಷ್ಠಮುನಿ ಮೊದಲಾದ ಮಹಾ ಮುನಿಗಳು ನೆರದಿದ್ದರು. ಯಜಮಾನನಾದ ದಕ್ಷಬ್ರಹ್ಮನು ಶುದ್ಧಭಾವದಿಂದ ಯಜ್ಞವನ್ನು ರಕ್ಷಿಸುತ್ತಿದ್ದನು, ಇಂದ್ರ, ಆದಿತ್ಯ ವಸುಗಳು ಮೊದಲಾದವರು ಸುತ್ತಲೂ ನಿಂತು ಆ ಯಾಗವನ್ನು ರಕ್ಷಿಸುತ್ತಿದ್ದರು.

೧೫-೧೬. ಋುಗ್ವೇದ, ಯಜುರ್ವೇದ, ಸಾಮವೇದಗಳ ಸುಸರ್ವ ಧ್ವನಿಯು ಕೇಳಬರುತ್ತಲಿತ್ತು. ಹೋಮದ ಸ್ವಾಹಾ ಶಬ್ದವೂ ಕೇಳಿಬರುತ್ತಲಿತ್ತು. ಶ್ರದ್ಧಾ, ಪುಷ್ಟಿ, ಶಾಂತಿ, ತುಷ್ಟಿ, ಲಜ್ಜಾ, ಸರಸ್ವತೀ, ಭೂಮಿ, ದ್ಯಾರ್ದೇವಿ, ರಾತ್ರಿ, ಕ್ಷಾಂತಿ, ಉಷಾ- ದಿಗ್ದೇವಿ, ಜಯಾ, ಮತಿ ಮೊದಲಾದ ದೇವಿಯರು ಆ ಯಾಗಶಾಲೆಯನ್ನಲಂಕರಿಸಿದ್ದರು.

೧೭-೧೮. ಮಹಾತ್ಮನಾದ ದೇವಶಿಲ್ಪಿ ತ್ವಷ್ಟೃಬ್ರಹ್ಮನು ಆ ಯಾಗ ಮಂಟಪವನ್ನು ಸುಂದರವಾಗಿ ನಿರ್ಮಿಸಿದ್ದನು. ಇಷ್ಟವಸ್ತುಗಳೆಲ್ಲವನ್ನೂ ಕರೆಯುವ ಸುರಭಿ, ನಂದಿನಿ, ಕಾಮಧೇನು, ಕಾಮದೋಹಿನಿಗಳೆಂಬ ದೇವಧೇನು

ಏತಾಭಿಃ ಕಾಮವರ್ಷಾಭಿಃ ಸರ್ವಕಾಮಸಮೃದ್ಧಿಮಾನ್ ।
ಕಲ್ಪವೃಕ್ಷಃ ಪಾರಿಜಾತೋ ಲತಾಃ ಕಲ್ಪಲತಾದಿಕಾಃ ॥ ೧೮ ॥

ಯದ್ಯದಿಷ್ಟತಮಂ ಕಿಂಚಿತ್ತತ್ರ ತಸ್ಮಿನ್ಮಖೇ ಸ್ಥಿತಂ ।
ಸ್ವಯಂ ಮಘವತಾ ಪೂಷ್ಣಾ ಹರಿಣಾ ಪರಿರಕ್ಷಿತಃ ॥ ೧೯ ॥

ದೀಯತಾಂ ಭುಜ್ಯತಾಂ ವಾಪಿ ಕ್ರಿಯತಾಂ ಸ್ಥೀಯತಾಂ ಸುಖಂ ।
ಏತೈಶ್ಚ ಸರ್ವತೋ ವಾಕ್ಯೈರ್ದಕ್ಷಸ್ಯ ಪೂಜಿತಂ ಮಖಂ ॥ ೨೦ ॥

ಆದೌ ತು ವೀರಭದ್ರೋಽಸೌ ಭದ್ರಕಾಲ್ಯಾ ಯುತೋ ಯಯೌ ।
ಶೋಕಕೋಪಪರೀತಾತ್ಮಾ ಪಶ್ಚಾಚ್ಛೂಲಪಿನಾಕಧೃಕ್ ॥ ೨೧ ॥

ಅಭ್ಯಾಯಯೌ ಮಹಾದೇವೋ ಮಹಾಭೂತೈರಲಂಕೃತಃ ।
ತಾನಿ ಭೂತಾನಿ ಪರಿತೋ ಮಖೇ ವೇಷ್ಟ್ಯ ಮಹೇಶ್ವರಂ ॥ ೨೨ ॥

ಗಳು ಅಲ್ಲಿ ನೆರದಿದ್ದು ಸಕಲ ವಸ್ತುಗಳನ್ನೂ ಸಿದ್ಧಪಡಿಸಿದ್ದುವು. ಪಾರಿಜಾತ ಮೊದಲಾದ ಕಲ್ಪವೃಕ್ಷಗಳೂ ಕಲ್ಪಲತೆಗಳೂ ಆ ಯಾಗಶಾಲೆಯಲ್ಲಿ ನೆಲೆಸಿದ್ದುವು.

೧೯. ಬೇಕಾದಂತಹ ವಸ್ತುಗಳೆಲ್ಲವೂ ಅಲ್ಲಿ ಸಿದ್ಧವಾಗಿದ್ದುವು. ಸ್ವಯಂ ದೇವೇಂದ್ರನೂ, ಸೂರ್ಯನೂ, ಆ ಯಾಗವನ್ನು ರಕ್ಷಿಸುತ್ತಲಿದ್ದರು.

೨೦. ಅತಿಥಿಗಳಿಗೆ ಮೃಷ್ಟಾನ್ನವನ್ನು ಬಡಿಸಿ ಬೇಕುಬೇಕಾದುದನ್ನು ಕೊಡಿರಿ. ಎಲ್ಲರೂ ಸುಖಭೋಜನವನ್ನು ಮಾಡಲಿ. ಆನಂದಪಡಲಿ ಎಂದು ಮುಂತಾದ ವಾಕ್ಯಗಳು ಆ ದಕ್ಷ ಯಜ್ಞದಲ್ಲಿ ಪದೇಪದೇ ಕೇಳಿಬರತ್ತಲಿದ್ದುವು.

೨೧. ಮೊದಲು ಭದ್ರಕಾಳಿಯೊಡನೆ ವೀರಭದ್ರನು ಹೊರಟನು. ಆಮೇಲೆ ಕುಪಿತನಾದಾ ಶಿವನು ಶೂಲಪಿನಾಕಧನುಸ್ಸುಗಳನ್ನು ಧರಿಸಿ ಭೂತ ಗಣಗಳೊಡನೆ ತೆರಳಿದನು.

೨೨. ಆ ಮಹಾಭೂತಗಳೆಲ್ಲವೂ ಈಶ್ವರನೊಡನೆ ಸೇರಿ ದಕ್ಷಯಾಗ ವನ್ನು ಧ್ವಂಸಮಾಡತೊಡಗಿದುವು. ಅದರಿಂದ ತುಂಬಾ ಕ್ಷೋಭೆಯುಂಟಾಯಿತು.

ಕ್ರತುಂ ವಿಧ್ವಂಸಯಾಮಾಸುಸ್ತತ್ರ ಕ್ಷೋಭೋ ಮಹಾನಭೂತ್ ।
ಪಲಾಯಂತ ತತಃ ಕೇಚಿತ್ಕೇಚಿದ್ಗತ್ವಾ ತತಃ ಶಿವಂ ॥ ೨೩ ॥

ಕೇಚಿತ್ಸ್ತುವಂತಿ ದೇವೇಶಂ ಕೇಚಿತ್ಕುಪ್ಯಂತಿ ಶಂಕರಂ ।
ಭಗಸ್ಯ ಚಕ್ಷುಷೀ ವಿಪ್ರ ವೀರಭದ್ರೋ ವ್ಯಪಾಟಯತ್ ॥ ೨೪ ॥

ದಿವಾಕರಂ ಪುನರ್ದೋರ್ಭ್ಯಾಂ ಪರಿಭ್ರಾಮ್ಯ ಸಮಾಕ್ಷಿಪತ್ ।
ತತಃ ಸುರಗಣಾಃ ಸರ್ವೇ ವಿಷ್ಣುಂ ತೇ ಶರಣಂ ಯಯುಃ ॥ ೨೬ ॥

॥ ದೇವಾ ಊಚುಃ ॥

ತ್ರಾಹಿ ತ್ರಾಹಿ ಗದಾಪಾಣೇ ಭೂತನಾಥಕೃತಾದ್ಭಯಾತ್ ।
ಮಹೇಶ್ವರಗಣಃ ಕಶ್ಚಿತ್ಪ್ರಮಥಾನಾಂ ತು ನಾಯಕಃ ।
ತೇನ ದಗ್ಧೋ ಮಖಃ ಸರ್ವೋ ವೈಷ್ಣವಃ ಪಶ್ಯತೋ ಹರೇಃ ॥ ೨೭ ॥

೨೩–೨೪. ಯಾಗಕ್ಕೆ ಬಂದಿದ್ದ ಕೆಲವರು ಓಡಿಹೋದರು. ಕೆಲವರು ಶಿವನನ್ನು ದೀನತೆಯಿಂದ ಪ್ರಾರ್ಥಿಸಿದರು. ಕೆಲವರು ಶಂಕರನಮೇಲೆ ಕುಪಿತರಾದರು. ಹೀಗೆ ಯಜ್ಞವು ಹಾಳಾಗುತ್ತಿರುವುದನ್ನು ನೋಡಿ ಸೂರ್ಯನು ಶಂಕರನ ಮೇಲೇರಿ ಬಂದನು.

೨೫. ಶಂಕರನು ಪೂಷನ (ಸೂರ್ಯನ) ಹಲ್ಲುಗಳನ್ನು ಮುರಿದೋಡಿಸಿದನು. ದೇವೇಂದ್ರನನ್ನು ಪ್ರಹರಿಸಿ ಓಡಿಸಿದನು, ವೀರಭದ್ರನು ಭಗನೆಂಬ ಆದಿತ್ಯನ ಕಣ್ಣುಗಳನ್ನು ಕಿತ್ತುಹಾಕಿದನು.

೨೬. ಸೂರ್ಯನನ್ನು ವೀರಭದ್ರನು ಹಿಡಿದೆತ್ತಿ ಗಿರಗಿರನೆ ತಿರುಗಿಸಿ ಎಸೆದನು. ಆಗ ದೇವತೆಗಳೆಲ್ಲರೂ ಹೆದರಿ ಹರಿಯ ಬಳಿಗೆ ಬಂದು ಬೇಡಿಕೊಂಡರು.

೨೭. ಓ ಗದಾಧಾರಿಯಾದ ಹರಿಯೆ, ಈ ಶಿವನಿಂದ ನಮ್ಮನ್ನು ರಕ್ಷಿಸು. ಪ್ರಮಥಗಣಗಳಿಗೆ ನಾಯಕನಾದ ಶಿವಗಣನೊಬ್ಬನು (ವೀರಭದ್ರನು) ನೀನು ನೋಡುತ್ತಿರುವಂತೆಯೇ ನಿನ್ನನ್ನುದ್ದೇಶಿಸಿಯೇ ಮಾಡುತ್ತಿರುವ ಈ ಯಾಗವನ್ನು ಧ್ವಂಸಮಾಡುತ್ತಿರುವನು ಎನ್ನಲು,

॥ ಬ್ರಹ್ಮೋವಾಚ ॥

ಹರಿಣಾ ಚಕ್ರಮುತ್ಸೃಷ್ಟಂ ಭೂತನಾಥವಧಂ ಪ್ರತಿ ।
ಭೂತನಾಥೋಽಪಿ ತಚ್ಚಕ್ರಮಾಪತಚ್ಚ ತದಾಗ್ರಸತ್ ॥ ೨೮ ॥

ಗ್ರಸ್ತೇ ಚಕ್ರೇ ತತೋ ವಿಷ್ಣೋರ್ಲೋಕಪಾಲಾ ಭಯಾದ್ಯಯುಃ ।
ತಥಾ ಸ್ಥಿತಾನನೇಕ್ಷ್ಯಾಥ ದಕ್ಷೋ ಯಜ್ಞಂ ಸುರಾನಪಿ ।
ತುಷ್ಟಾವ ಶಂಕರಂ ದೇವಂ ದಕ್ಷೋ ಭಕ್ತ್ಯಾ ಪ್ರಜಾಪತಿಃ ॥ ೨೯ ॥

॥ ದಕ್ಷ ಉವಾಚ ॥

ಜಯ ಶಂಕರ ಸೋಮೇಶ ಜಯ ಸರ್ವಜ್ಞ ಶಂಭವೇ ।
ಜಯ ಕಲ್ಯಾಣಭೃಚ್ಛಂಭೋ ಜಯ ಕಾಲಾತ್ಮನೇ ನಮಃ ॥ ೩೦ ॥

ಆದಿಕರ್ತರ್ನಮಸ್ತೇಽಸ್ತು ನೀಲಕಂಠ ನಮೋಽಸ್ತು ತೇ ।
ಬ್ರಹ್ಮಪ್ರಿಯ ನಮಸ್ತೇಽಸ್ತು ಬ್ರಹ್ಮರೂಪ ನಮೋಽಸ್ತು ತೇ ॥ ೩೧ ॥

---

೨೮. ದೇವತೆಗಳ ಮಾತನ್ನು ಕೇಳಿ ಆಗ ಹರಿಯು ಶಿವನಮೇಲೆ ಚಕ್ರವನ್ನು ಪ್ರಯೋಗಿಸಿದನು. ವೇಗದಿಂದ ಬರುತ್ತಲಿರುವ ಆ ವಿಷ್ಣುಚಕ್ರವನ್ನು ಶಿವನು ಹಿಡಿದು ನುಂಗಿಬಿಟ್ಟನು.

೨೯. ಶಿವನು ವಿಷ್ಣುಚಕ್ರವನ್ನು ನುಂಗಲು ಲೋಕಪಾಲಕರೆಲ್ಲರೂ ಹೆದರಿ ಓಡಿಹೋದರು. ದೇವತೆಗಳು ಓಡಿಹೋದುದನ್ನೂ ಯಜ್ಞವು ಹಾಳಾಗುತ್ತಿರುವುದನ್ನೂ ನೋಡಿ ದಕ್ಷಬ್ರಹ್ಮನು ದೇವದೇವನಾದ ಶಂಕರನನ್ನು ಭಕ್ತಿಯಿಂದ ಹೀಗೆ ಸ್ತುತಿಸಿದನು.

೩೦. ಚಂದ್ರಶೇಖರನಾದ ಓ ಶಂಕರನೇ, ನೀನು ಸರ್ವಜ್ಞನು, ಎಲ್ಲರಿಗೂ ಸುಖವನ್ನುಂಟುಮಾಡುವವನು. ಕಾಲರುದ್ರಸ್ವರೂಪನೂ, ಮಂಗಳರೂಪನೂ ಆದ ಓ ಮಹಾದೇವ, ನಿನಗೆ ಜಯವಾಗಲಿ. ನಿನಗೆ ನಮಸ್ಕಾರವು.

೩೧. ಆದಿಸೃಷ್ಟಿಕರ್ತನೂ, ವಿಷಪಾನಮಾಡಿದ ನೀಲಕಂಠನೂ ಆದ ಶಿವನಿಗೆ ನಮಸ್ಕಾರವು. ಬ್ರಾಹ್ಮಣಪ್ರಿಯನೂ ಪರಬ್ರಹ್ಮರೂಪನೂ ಆದ ಪರಮೇಶ್ವರನಿಗೆ ನಮಸ್ಕಾರವು.

ತ್ರಿಮೂರ್ತಯೇ ನಮೋ ದೇವ ತ್ರಿಧಾಮ ಪರಮೇಶ್ವರ ।
ಸರ್ವಮೂರ್ತೇ ನಮಸ್ತೇಽಸ್ತು ತ್ರೈಲೋಕ್ಯಾಧಾರ ಕಾಮದ ॥ ೩೨ ॥

ನಮೋ ವೇದಾಂತವೇದ್ಯಾಯ ನಮಸ್ತೇ ಪರಮಾತ್ಮನೇ ।
ಯಜ್ಞರೂಪ ನಮಸ್ತೇಽಸ್ತು ಯಜ್ಞಧಾಮ ನಮೋಽಸ್ತು ತೇ ॥ ೩೩ ॥

ಯಜ್ಞದಾನ ನಮಸ್ತೇಽಸ್ತು ಹವ್ಯವಾಹ ನಮೋಽಸ್ತು ತೇ ।
ಯಜ್ಞಹರ್ತ್ರೇ ನಮಸ್ತೇಽಸ್ತು ಫಲದಾಯ ನಮೋಽಸ್ತು ತೇ ॥ ೩೪ ॥

ತ್ರಾಹಿ ತ್ರಾಹಿ ಜಗನ್ನಾಥ ಶರಣಾಗತವತ್ಸಲ ।
ಭಕ್ತಾನಾಮಪ್ಯಭಕ್ತಾನಾಂ ತ್ವಮೇವ ಶರಣಂ ಪ್ರಭೋ ॥ ೩೫ ॥

॥ ಬ್ರಹ್ಮೋವಾಚ ॥

ಏವಂ ತು ಸ್ತುವತಸ್ತಸ್ಯ ಪ್ರಸನ್ನೋಽಭೂನ್ಮಹೇಶ್ವರಃ ।
ಕಿಂ ದದಾಮೀತಿ ತಂ ಪ್ರಾಹ ಕ್ರತುಃ ಪೂರ್ಣೋಽಸ್ತು ಮೇ ಪ್ರಭೋ ॥೩೬॥

---

೩೨. ಓ ದೇವ, ತ್ರಿಮೂರ್ತಿಗಳ ರೂಪದಿಂದ ಜಗತ್ತನ್ನು ಸೃಷ್ಟಿಸಿ, ಪಾಲಿಸಿ, ಸಂಹರಿಸುವವನೂ ನೀನೆ. ಜಗನ್ಮಯನು ನೀನು. ಜಗತ್ತಿಗೆ ಆಧಾರನು. ಇಷ್ಟಾರ್ಥಗಳನ್ನು ಕೊಡುವವನು ನೀನು. ಇಂತಹ ನಿನಗೆ ನಮಸ್ಕಾರವು.

೩೩. ವೇದಾಂತಗಳಿಂದ ತಿಳಿಯಲ್ಪಡತಕ್ಕವನೂ, ಪರಮಾತ್ಮನೂ ಆದ ನಿನಗೆ ನಮಸ್ಕಾರವು. ಯಜ್ಞರೂಪನೂ ಯಜ್ಞಗಳಿಗೆ ಆಶ್ರಯನೂ ಆದ ನಿನಗೆ ನಮಸ್ಕಾರವು.

೩೪. ಓ ದೇವ, ಯಜ್ಞಗಳಲ್ಲಿನ ದಾನಸ್ವರೂಪನು ನೀನು. ಯಜ್ಞ ಹವಿಸ್ಸನ್ನು ಸ್ವೀಕರಿಸುವ ಅಗ್ನಿಯು ನೀನು. ಯಜ್ಞಫಲವನ್ನು ಕೊಡುವವನೂ ನೀನು. ಇಂತಹ ನಿನಗೆ ನಮಸ್ಕಾರವು.

೩೫. ಮರೆಹೊಕ್ಕ ಭಕ್ತರಲ್ಲಿ ಕರುಣೆಯುಳ್ಳ ಓ ಪರಮೇಶ್ವರನೇ, ಕಾಪಾಡು, ಕಾಪಾಡು. ನಿನ್ನ ಭಕ್ತರಿಗೂ, ಭಕ್ತರಲ್ಲದವರಿಗೂ ನೀನೇ ಶರಣವು. ಗತಿಯು, ರಕ್ಷಕನು ಎಂದು ಬಹು ವಿಧವಾಗಿ,

೩೬. ದಕ್ಷನು ಸ್ತುತಿಸಲು, ಮಹೇಶ್ವರನು ಪ್ರಸನ್ನನಾಗಿ ಎಲೈ ದಕ್ಷನೇ, ಏನು ವರವನ್ನು ಕೊಡಲಿ? ಎಂದು ಕೇಳಲು, ದಕ್ಷನು ಓ ಸ್ವಾಮಿ, ನನ್ನ ಈ ಯಾಗವು ಪೂರ್ಣವಾಗಲಿ ಎಂದು ಕೇಳಿಕೊಂಡನು.

ತಥೇತ್ಯುವಾಚ ಭಗವಾನ್ದೇವದೇವೋ ಮಹೇಶ್ವರಃ ।
ಶಂಕರಃ ಸರ್ವಭೂತಾತ್ಮಾ ಕರುಣಾವರುಣಾಲಯಃ ॥ ೩೭ ॥

ಕ್ರತುಂ ಕೃತ್ವಾ ತತಃ ಪೂರ್ಣಂ ತಸ್ಯ ದಕ್ಷಸ್ಯ ವೈ ಮುನೇ ।
ಏವಮುಕ್ತ್ವಾ ಸ ಭಗವಾನ್ಭೂತೈರಂತರಧೀಯತ ॥ ೩೮ ॥

ಯಥಾಗತಂ ಸುರಾ ಜಗ್ಮುಃ ಸ್ವಮೇವ ಸದನಂ ಪ್ರತಿ ।
ತತಃ ಕದಾಚಿದ್ದೇವಾನಾಂ ದೈತ್ಯಾನಾಂ ವಿಗ್ರಹೋ ಮಹಾನ್ ॥ ೩೯ ॥

ಬಭೂವ ತತ್ರ ದೈತ್ಯೇಭ್ಯೋ ಭೀತಾ ದೇವಾಃ ಶ್ರಿಯಃ ಪತಿಂ ।
ತುಷ್ಟುವುಃ ಸರ್ವಭಾವೇನ ವಚೋಭಿಸ್ತಂ ಜನಾರ್ದನಂ ॥ ೪೦ ॥

॥ ದೇವಾ ಊಚುಃ ॥

ಶಕ್ರಾದಯೋಽಪಿ ತ್ರಿದಶಾಃ ಕಟಾಕ್ಷ-
ಮವೇಕ್ಷ್ಯ ಯಸ್ಯಾಸ್ತಪ ಆಚರಂತಿ ।
ಸಾ ಚಾಪಿ ಯತ್ಪಾದರತಾ ಚ ಲಕ್ಷ್ಮೀ-
ಸ್ತಂ ಬ್ರಹ್ಮಭೂತಂ ಶರಣಂ ಪ್ರಪದ್ಯೇ ॥ ೪೧ ॥

---

೩೭. ಹಾಗೆಯೇ ಆಗಲೆಂದು ಅನುಗ್ರಹಿಸಿ, ದೇವದೇವನೂ ಮಹೇಶ್ವರನೂ, ಜಗನ್ಮಯನೂ, ಕರಣಾಮೂರ್ತಿಯೂ ಆದ ಶಂಕರನು ತನ್ನ ಭೂತ ಗಣಗಳೊಂದಿಗೆ ಅಲ್ಲಿಯೇ ಅಂತರ್ಧಾನನಾದನು.

೩೮. ಆಮೇಲೆ ದೇವತೆಗಳೆಲ್ಲರೂ ದಕ್ಷಯಜ್ಞವನ್ನು ಪೂರ್ತಿಗೊಳಿಸಿ ತಮ್ಮತಮ್ಮ ಸ್ಥಾನಗಳಿಗೆ ತೆರಳಿದರು.

೩೯-೪೦. ಆಮೇಲೊಂದುಸಾರಿ ದೇವತೆಗಳಿಗೂ, ರಾಕ್ಷಸರಿಗೂ ಘೋರ ಯುದ್ಧವಾಯಿತು. ಆಗ ದೇವತೆಗಳು ಸೋತು ರಾಕ್ಷಸರಿಂದ ಹೆದರಿ ಹರಿಯ ಬಳಿಗೆ ಬಂದು ಅವನನ್ನು ಭಕ್ತಿಯಿಂದ ಸ್ತುತಿಸಿದರು,

೪೧. ಓ ನಾರಾಯಣ, ಇಂದ್ರನೇ ಮೊದಲಾದ ದೇವತೆಗಳೂ ಕೂಡ ಲಕ್ಷ್ಮೀದೇವಿಯ ಕರುಣಾಕಟಾಕ್ಷವನ್ನು ಸಂಪಾದಿಸಲು ಘೋರತಪಸ್ಸನ್ನಾಚರಿಸುವರು, ಅಂತಹ ಆ ಲಕ್ಷ್ಮೀದೇವಿಯೂ ನಿನ್ನ ಪಾದಸೇವೆಯನ್ನು ಮಾಡುವಳು. ಇಂತಹ ಮಹಾಮಹಿಮನೂ ಬ್ರಹ್ಮಸ್ವರೂಪನೂ ಆದ ನಿನ್ನನ್ನು ಶರಣು ಹೊಂದಿರುವೆವು.

ಯಸ್ಮಾತ್ತ್ರಿಲೋಕ್ಯಾಂ ನ ಪರಃ ಸಮಾನೋ
ನ ಚಾಧಿಕಸ್ತ್ವಾರ್ಕ್ಷ್ಯರಥಾನ್ನೃಸಿಂಹಾತ್ ।
ಸ ದೇವದೇವೋಽವತು ನಃ ಸಮಸ್ತಾ-
ನ್ಮಹಾಭಯೇಭ್ಯಃ ಕೃಪಯಾ ಪ್ರಪನ್ನಾನ್ ॥ ೪೨ ॥

॥ ಬ್ರಹ್ಮೋವಾಚ ॥

ತತಃ ಪ್ರಸನ್ನೋ ಭಗವಾನ್ ಶಂಖಚಕ್ರಗದಾಧರಃ ।
ಕಿಮರ್ಥಮಾಗತಾಃ ಸರ್ವೇ ತತ್ಕರ್ತಾಸ್ಮೀತ್ಯುವಾಚ ತಾನ್ ॥ ೪೩ ॥

॥ ದೇವಾ ಊಚುಃ ॥

ಭಯಂ ಚ ತೀವ್ರಂ ದೈತ್ಯೇಭ್ಯೋ ದೇವಾನಾಂ ಮಧುಸೂದನ ।
ತತಸ್ತ್ರಾಣಾಯ ದೇವಾನಾಂ ಮತಿಂ ಕುರು ಜನಾರ್ದನ ॥ ೪೪ ॥

॥ ಬ್ರಹ್ಮೋವಾಚ ॥

ತಾನಾಗತಾನ್ಹರಿಃ ಪ್ರಾಹ ಗ್ರಸ್ತಂ ಚಕ್ರಂ ಹರೇಣ ಮೇ ।
ಕಿಂ ಕರೋಮಿ ಗತಂ ಚಕ್ರಂ ಭವಂತಶ್ಚಾರ್ತಿಮಾಗತಾಃ । ॥ ೪೫ ॥
ಯಾಂತು ಸರ್ವೇ ದೇವಗಣಾ ರಕ್ಷಾ ವಃ ಕ್ರಿಯತೇ ಮಯಾ ॥ ೪೬ ॥

---

೪೨. ಓ ದೇವ. ಗರುಡವಾಹನನೂ, ನರಸಿಂಹಮೂರ್ತಿಯೂ ಆದ ನಿನಗಿಂತಲೂ ಶ್ರೇಷ್ಠನಾದವನೂ, ನಿನಗೆ ಸದೃಶನಾದವನೂ ಇನ್ನೊಬ್ಬನು ಈ ಜಗತ್ತಿನಲ್ಲಿಲ್ಲ. ಇಂತಹ ದೇವದೇವನಾದ ನೀನು ಶರಣಾಗತರಾದ ನಮ್ಮನ್ನು ರಕ್ಷಿಸು ಎಂದು ಸ್ತೋತ್ರವಾಡಿದರು.

೪೩. ಆಗ ಶಂಖಚಕ್ರಗದಾಧಾರಿಯಾದ ಹರಿಯು ಪ್ರಸನ್ನನಾಗಿ ದೇವತೆಗಳನ್ನು ಕುರಿತು, ನೀವು ಯಾವ ಕಾರ್ಯಕ್ಕಾಗಿ ಇಲ್ಲಿಗೆ ಬಂದಿರುವಿರಿ? ಹೇಳಿ. ಆ ಕಾರ್ಯವನ್ನು ಮಾಡಿಕೊಡುವೆನು ಎಂದು ಹೇಳಿದನು.

೪೪. ದೇವತೆಗಳು ಹೇಳಿದರು—ಓ ಮಧುಸೂದನ, ನಮಗೀಗ ರಾಕ್ಷಸರಿಂದ ಮಹಾಭಯವು ಪ್ರಾಪ್ತವಾಗಿದೆ. ದೈತ್ಯರಿಂದ ನಮ್ಮನ್ನು ನೀನೇ ರಕ್ಷಿಸಬೇಕು ಎಂದು ಬೇಡಿಕೊಂಡರು.

೪೫–೪೬. ಆ ದೇವತೆಗಳನ್ನು ಕುರಿತು ಹರಿಯು ಎಲೈ ದೇವತೆಗಳೇ, ನನ್ನ ಚಕ್ರವನ್ನು ಶಂಕರನು ಕಸಿದುಕೊಂಡಿರುವನು. ಏನು ಮಾಡಲಿ? ನೀವೂ

॥ ಬ್ರಹ್ಮೋವಾಚ ॥

ತತೋ ಗತೇಷು ದೇವೇಷು ವಿಷ್ಣುಶ್ಶಕ್ರಾರ್ಥಮುದ್ಯತಃ ।
ಗೋದಾವರೀಂ ತತೋ ಗತ್ವಾ ಶಂಭೋಃ ಪೂಜಾಂ ಪ್ರಚಕ್ರಮೇ ॥ ೪೭ ॥

ಸುವರ್ಣಕಮಲೈರ್ದಿವ್ಯೈಃ ಸುಗಂಧೈರ್ದಶಭಿಃ ಶತೈಃ ।
ಭಕ್ತಿತೋ ನಿತ್ಯವತ್ಪೂಜಾಂ ಚಕ್ರೇ ವಿಷ್ಣುರುಮಾಪತೇಃ ॥ ೪೮ ॥

ಏವಂ ಸಂಪೂಜ್ಯಮಾನೇ ತು ತಯೋಸ್ತತ್ತ್ವಮಿದಂ ಶೃಣು ।
ಕಮಲಾನಾಂ ಸಹಸ್ರೇ ತು ಯುನ್ಯೈಕಂ ನ್ಯೈವ ಪೂರ್ಯತೇ ॥ ೪೯ ॥

ತದಾಸುರಾರಿಃ ಸ್ವಂ ನೇತ್ರಮುತ್ಪಾಟ್ಯಾರ್ಘ್ಯಮಕಲ್ಪಯತ್ ।
ಅರ್ಘ್ಯಪಾತ್ರಂ ಕರೇ ಗೃಹ್ಯ ಸಹಸ್ರಕಮಲಾನ್ವಿತಂ ।
ಧ್ಯಾತ್ವಾ ಶಂಭುಂ ದದಾವರ್ಘ್ಯಮನನ್ಯಶರಣೋ ಹರಿಃ ॥ ೫೦ ॥

ಭಯಗ್ರಸ್ತರಾಗಿರುವಿರಿ, ಆಗಲಿ. ಎಲ್ಲರೂ ನಿಮ್ಮ ಸ್ಥಾನಗಳಿಗೆ ತೆರಳಿ. ಹೇಗಾದರೂ ಮಾಡಿ ನಿಮ್ಮನ್ನು ರಕ್ಷಿಸುವೆನು ಎಂದನು.

೪೭. ಆಗ ದೇವತೆಗಳು ಹೊರಟುಹೋದರು. ನಂತರ ಹರಿಯು ಗೋದಾವರೀ (ಗೌತಮಿ) ತೀರಕ್ಕೆ ತೆರಳಿ ಅಲ್ಲಿ ಶಿವನನ್ನಾರಾಧಿಸಲು ಪ್ರಾರಂಭಿಸಿದನು.

೪೮. ಹರಿಯು ನಿತ್ಯವೂ ಭಕ್ತಿಪೂರ್ವಕವಾಗಿ ದೇವಲೋಕದ ಸಾವಿರ ಚಿನ್ನದ ಕಮಲಗಳಿಂದ ಪರಮೇಶ್ವರನನ್ನು ಅರ್ಚಿಸುತ್ತಿದ್ದನು. ಹೀಗೆ ಪೂಜಿಸುತ್ತಿರಲು ಒಂದು ಆಶ್ಚರ್ಯ ಸಂಗತಿಯು ನಡೆಯಿತು. ಅದನ್ನು ಹೇಳುವೆನು ಕೇಳು.

೪೯. ಒಂದುದಿನ ಸಾವಿರ ಕಮಲಗಳು ಪೂರ್ತಿಯಾಗಲಿಲ್ಲ. ಒಂದು ಕಮಲವು ಸಿಕ್ಕಲೇ ಇಲ್ಲ. ಆಗ ಆ ಪುಂಡರೀಕಾಕ್ಷನು ತನ್ನ ನೇತ್ರ (ಕಣ್ಣನ್ನೇ) ವನ್ನೇ ಕಿತ್ತು ಪುಷ್ಪಾಂಜಲಿಯನ್ನು ಸಿದ್ಧಗೊಳಿಸಿದನು.

೫೦. ಸಾವಿರ ಕಮಲಗಳು ಪೂರ್ತಿಯಾಗಿದ್ದ ಆ ಅರ್ಘ್ಯಪಾತ್ರವನ್ನು ಕೈಗಳಲ್ಲಿ ಧರಿಸಿ ಹರಿಯು ಭಕ್ತಿಯಿಂದ ಶಿವನನ್ನು ಧ್ಯಾನಿಸುತ್ತಾ ತಲ್ಲೀನನಾಗಿ ಶಿವನಿಗೆ ಅರ್ಘ್ಯವನ್ನರ್ಪಿಸಿದನು.

॥ ವಿಷ್ಣುರುವಾಚ ॥

ತ್ವಮೇವ ದೇವ ಜಾನೀಷೇ ಭಾವಮಂತರ್ಗತಂ ನೃಣಾಂ ।
ತ್ವಮೇವ ಶರಣೋಽಧೀಶೋಽತ್ರ ಕಾ ಭವೇದ್ವಿಚಾರಣಾ ॥ ೫೧ ॥

ವದನ್ನುದಶ್ರುನಯನೋ ನಿಲಿಲ್ಯೇಽಸಾವಿತೀಶ್ವರೇ ।
ಭವಾನೀಸಹಿತಃ ಶಂಭುಃ ಪುರಸ್ತಾದಭವತ್ತದಾ ॥ ೫೨ ॥

ಗಾಢಮಾಲಿಂಗ್ಯ ವಿವಿಧೈರ್ವರೈರಾಪೂರಯದ್ಧರಿಂ ।
ತದೇವ ಚಕ್ರಮಭವನ್ನೇತ್ರಂ ಚಾಪಿ ಯಥಾ ಪುರಾ ॥ ೫೩ ॥

ತತಃ ಸುರಗಣಾಃ ಸರ್ವೇ ತುಷ್ಟುವುರ್ಹರಿಶಂಕರೌ ।
ಗಂಗಾಂ ಚಾಪಿ ಸರಿಚ್ಛ್ರೇಷ್ಠಾಂ ದೇವಂ ಚ ವೃಷಭಧ್ವಜಂ ॥ ೫೪ ॥

ತತಃ ಪ್ರಭೃತಿ ತತ್ತೀರ್ಥಂ ಚಕ್ರತೀರ್ಥಮಿತಿ ಸ್ಮೃತಂ ।
ಯಸ್ಯಾನುಶ್ರವಣೇನೈವ ಮುಚ್ಯತೇ ಸರ್ವಕಿಲ್ಬಿಷೈಃ ॥ ೫೫ ॥

---

೫೧. ಓ ಮಹಾದೇವ, ಸರ್ವಜ್ಞನಾದ ನೀನು ಪ್ರಾಣಿಗಳ ಅಂತರಂಗವೆಲ್ಲವನ್ನೂ ತಿಳಿದಿರುವೆ. ಪರಮೇಶ್ವರನಾದ ನೀನೇ ನಮ್ಮ ರಕ್ಷಕನು. ಈ ವಿಷಯದಲ್ಲಿ ಸಂಶಯವೇ ಇಲ್ಲ.

೫೨. ಹೀಗೆ ಹೇಳುತ್ತಾ ಹರಿಯು ಭಕ್ತಿಯ ಉದ್ರೇಕದಿಂದ ಆನಂದ ಬಾಷ್ಪವನ್ನು ಸುರಿಸುತ್ತಾ ಶಿವನಲ್ಲಿ ತಲ್ಲೀನನಾದನು. ಆಗ ಶಂಕರನು ಪಾರ್ವತಿಯೊಡನೆ ಎದುರಿಗೆ ಪ್ರತ್ಯಕ್ಷನಾದನು.

೫೩. ಹರಿಯನ್ನು ಗಾಢವಾಗಿ ಆಲಂಗಿಸಿ ವರಗಳನ್ನನುಗ್ರಹಿಸಿದನು. ಶಿವನನುಗ್ರಹದಿಂದ ಹರಿಗೆ ಪುನಃ ಚಕ್ರವು ಲಭಿಸಿತು, ಕಣ್ಣೂ ಬಂದಿತು.

೫೪. ಆಗ ದೇವತೆಗಳು ಹರಿಯನ್ನೂ, ಗೌತಮಿಾನದಿಯನ್ನೂ, ಪರಮೇಶ್ವರನನ್ನೂ ಭಕ್ತಿಯಿಂದ ಸ್ತುತಿಸಿದರು.

೫೫. ಅದು ಮೊದಲುಗೊಂಡು ಆ ತೀರ್ಥವನ್ನು ಸ್ಮರಣಮಾಡಿಮಾತ್ರದಿಂದಲೇ ಪಾಪಗಳೆಲ್ಲವೂ ನಾಶವಾಗುವುವು.

ತತ್ರ ಸ್ನಾನಂ ಚ ದಾನಂ ಚ ಯಃ ಕುರ್ಯಾತ್ಪಿತೃತರ್ಪಣಂ ।
ಸರ್ವಪಾಪವಿನಿರ್ಮುಕ್ತಃ ಪಿತೃಭಿಃ ಸ್ವರ್ಗಭಾಗ್ಭವೇತ್ ॥ ೫೬ ॥

ತತ್ತು ಚಕ್ರಾಂಕಿತಂ ತೀರ್ಥಮದ್ಯಾಪಿ ಪರಿದೃಶ್ಯತೇ ॥ ೫೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಚಕ್ರತೀರ್ಥವರ್ಣನಂ ನಾಮ ನವಾಧಿಕಶತತಮೋಽಧ್ಯಾಯಃ

೫೬-೫೭. ಆ ಚಕ್ರತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ಪಾಪಗಳೆಲ್ಲವೂ ನಾಶವಾಗಿ ಸ್ವರ್ಗವು ಲಭಿಸುವುದು. ಪಿತೃತರ್ಪಣವನ್ನು ಮಾಡಿದರೆ ಪಿತೃಗಳೂ ಸ್ವರ್ಗವನ್ನು ಪಡೆಯುವರು. ಆ ಚಕ್ರತೀರ್ಥವನ್ನು ಈಗಲೂ ಅಲ್ಲಿ ಕಾಣಬಹುದಾಗಿದೆ.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಚಕ್ರತೀರ್ಥವರ್ಣನವೆಂಬ ನೂರೊಂಭತ್ತನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ನಲವತ್ತನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ದಶಾಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಪಿಪ್ಪಲಂ ತೀರ್ಥಮಾಖ್ಯಾತಂ ಚಕ್ರತೀರ್ಥಾದನಂತರಂ ।
ಯತ್ರ ಚಕ್ರೇಶ್ವರೋ ದೇವಶ್ಚಕ್ರಮಾಪ ಯತೋ ಹರಿಃ ॥ ೧ ॥

ಯತ್ರ ವಿಷ್ಣುಃ ಸ್ವಯಂ ಸ್ಥಿತ್ವಾ ಚಕ್ರಾರ್ಥಂ ಶಂಕರಂ ವಿಭುಂ ।
ಪೂಜಯಾಮಾಸ ತತ್ತೀರ್ಥಂ ಚಕ್ರತೀರ್ಥಮುದಾಹೃತಂ ॥ ೨ ॥

ಯತ್ರ ಪ್ರೀತೋಽಭವದ್ವಿಷ್ಣೋಃ ಶಂಭುಸ್ತತ್ಪಿಪ್ಪಲಂ ವಿದುಃ ।
ಮಹಿಮಾನಂ ಯಸ್ಯ ವಕ್ತುಂ ನ ಕ್ಷಮೋಽಪ್ಯಹಿನಾಯಕಃ ॥ ೩ ॥

ನೂರಹತ್ತನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು:—ಚಕ್ರತೀರ್ಥಕ್ಕೆ ಸಮೀಪದಲ್ಲಿಯೇ ಪಿಪ್ಪಲ ತೀರ್ಥವಿರುವುದು. ಅಲ್ಲಿ ಶಿವನು ಚಕ್ರೇಶ್ವರನೆಂಬ ಹೆಸರಿನಿಂದ ನೆಲಸಿರುವನು.

೨. ಹರಿಯು ಚಕ್ರವನ್ನು ಪಡೆಯಲು ಎಲ್ಲಿ ಕುಳಿತು ಶಿವನನ್ನು ಆರಾಧಿಸಿದನೋ ಅದು ಚಕ್ರತೀರ್ಥವು.

೩. ಶಿವನು ಪ್ರಸನ್ನನಾಗಿ ಹರಿಗೆ ಚಕ್ರವನ್ನನುಗ್ರಹಿಸಿದ ತೀರ್ಥವು ಪಿಪ್ಪಲತೀರ್ಥವು. ಆ ತೀರ್ಥದ ಮಹಿಮೆಯನ್ನು ಸಾವಿರಮುಖಗಳುಳ್ಳ ಆದಿಶೇಷನೂ ವರ್ಣಿಸಲಾರನು.

ಚಕ್ರೇಶ್ವರೋ ಪಿಪ್ಪಲೇಶೋ ನಾಮಧೇಯಸ್ಯ ಕಾರಣಂ ।
ಶೃಣು ನಾರದ ತನ್ಮಕ್ತ್ಯಾ ಸಾಕ್ಷಾದ್ವೇದೋದಿತಂ ಮಯಾ ॥ ೪ ॥

ದಧೀಚಿರಿತಿ ವಿಖ್ಯಾತೋ ಮುನಿರಾಸೀದ್ಗುಣಾನ್ವಿತಃ ।
ತಸ್ಯ ಭಾರ್ಯಾ ಮಹಾಪ್ರಾಜ್ಞಾ ಕುಲೀನಾ ಚ ಪತಿವ್ರತಾ ॥ ೫ ॥

ಲೋಪಾಮುದ್ರೇತಿ ಯಾ ಖ್ಯಾತಾ ಸ್ವಸಾ ತಸ್ಯಾ ಗಭಸ್ತಿನೀ ।
ಇತಿ ನಾಮ್ನಾ ಚ ವಿಖ್ಯಾತಾ ವಡವೇತಿ ಪ್ರಕೀರ್ತಿತಾ ॥ ೬ ॥

ದಧೀಚೇಃ ಸಾ ಪ್ರಿಯಾ ನಿತ್ಯಂ ತಪಸ್ತೇಪೇ ತಯಾ ಮಹತ್ ।
ದಧೀಚಿರಗ್ನಿಮಾನ್ನಿತ್ಯಂ ಗೃಹಧರ್ಮಪರಾಯಣಃ ॥ ೭ ॥

---

೪. ಚಕ್ರತೀರ್ಥಕ್ಕೆ ಚಕ್ರೇಶ್ವರನೂ, ಪಿಪ್ಪಲತೀರ್ಥಕ್ಕೆ ಪಿಪ್ಪಲೇಶ್ವರನೂ ಆ ಹೆಸರು ಬರಲು ಕಾರಣರು. ಎಲೈ ನಾರದ, ಆ ಪಿಪ್ಪಲತೀರ್ಥದ ಮಹಿಮೆಯು ವೇದದಲ್ಲಿಯೂ ಹೇಳಲ್ಪಟ್ಟಿದೆ. ಅದನ್ನು ಹೇಳುವೆನು ಶ್ರದ್ಧೆಯಿಂದ ಕೇಳು.

೫. ಹಿಂದೆ ದಧೀಚಿಯೆಂಬ ಮಹಾತಪಸ್ವಿಯಾದ ಋಷಿಯಿದ್ದನು. ಆವನಿಗೆ ಮಹಾಪ್ರಾಜ್ಞಳೂ ಒಳ್ಳೆಯ ಕುಲದವಳೂ, ಪತಿವ್ರತೆಯೂ ಆದ ಹೆಂಡತಿಯಿದ್ದಳು.

೬. ಅವಳು ಅಗಸ್ತ್ಯಪತ್ನಿಯೂ, ಪ್ರಸಿದ್ಧಳೂ ಆದ ಲೋಪಾಮುದ್ರೆಯ ಮಗಳು. ಅವಳಿಗೆ ಗಭಸ್ತಿನೀಯೆಂದೂ, ವಡವಾಪ್ರಾಥೇಯಿಯೆಂದೂ ಹೆಸರುಗಳಿದ್ದವು.

೭. ಅವಳು ದಧೀಚಿಮುನಿಗೆ ಪ್ರಿಯಪತ್ನಿಯಾಗಿದ್ದಳು. ಅವಳೊಡನೆ ಗೃಹಸ್ಥಧರ್ಮವನ್ನಾಚರಿಸುತ್ತಾ, ಅಗ್ನಿಹೋತ್ರವನ್ನು ಮಾಡುತ್ತಾ ಆ ದಧೀಚಿಯು ಮಹಾತಪವನ್ನೂ ಆಚರಿಸುತ್ತಿದ್ದನು.

ಭಾಗೀರಥೀಂ ಸಮಾಶ್ರಿತ್ಯ ದೇವಾತಿಥಿಪರಾಯಣಃ ।
ಸ್ವಕಲತ್ರರತಃ ಶಾಂತಃ ಕುಂಭಯೋನಿರಿವಾಪರಃ ॥ ೮ ॥

ತಸ್ಯ ಪ್ರಭಾವಾತ್ತಂ ದೇಶಂ ನಾರಯೋ ದೈತ್ಯದಾನವಾಃ ।
ಆಜಗ್ಮುರ್ಮುನಿಶಾರ್ದೂಲ ಯತ್ರಾಗಸ್ತ್ಯಸ್ಯ ಚಾಶ್ರಮಃ ॥ ೯ ॥

ತತ್ರ ದೇವಾಃ ಸಮಾಜಗ್ಮೂ ರುದ್ರಾದಿತ್ಯಾಸ್ತಥಾಶ್ವಿನೌ ।
ಇಂದ್ರೋ ವಿಷ್ಣುರ್ಯಮೋಽಗ್ನಿಶ್ಚ ಜಿತ್ವಾ ದೈತ್ಯಾನುಪಾಗತಾನ್ ॥ ೧೦ ॥

ಜಯೇನ ಜಾತಸಂಹರ್ಷಾಃ ಸ್ತುತಾಶ್ಚೈವ ಮರುದ್ಗಣೈಃ ।
ದಧೀಚಿಂ ಮುನಿಶಾರ್ದೂಲಂ ದೃಷ್ಟ್ವಾ ನೇಮುಃ ಸುರೇಶ್ವರಾಃ ॥ ೧೧ ॥

ದಧೀಚಿರ್ಜಾತಸಂಹರ್ಷಃ ಸುರಾನ್ಪೂಜ್ಯ ಪೃಥಕ್ಪೃಥಕ್ ।
ಗೃಹಕೃತ್ಯಂ ತತಶ್ಚಕ್ರೇ ಸುರೇಭ್ಯೋ ಭಾರ್ಯಯಾ ಸಹ ॥ ೧೨ ॥

---

೮. ಆ ಮುನಿಯು ಗೌತಮೀತೀರದಲ್ಲಿ ಪತ್ನಿಯೊಡನೆ ವಾಸಿಸುತ್ತಾ ದೇವತೆಗಳು ಮತ್ತು ಅತಿಥಿಗಳನ್ನು ಸತ್ಕರಿಸುತ್ತಾ ಶಾಂತಮನಸ್ಕನಾಗಿ ಎರಡನೆಯ ಅಗಸ್ತ್ಯಮುನಿಯಂತೆ ಪ್ರಕಾಶಿಸುತ್ತಿದ್ದನು.

೯. ದಧೀಚಿಮುನಿಯ ಮಹಿಮೆಯಿಂದ ಆ ಆಶ್ರಮಕ್ಕೆ ಕರ್ಮಶತ್ರುಗಳಾದ ದೈತ್ಯದಾನವರು ಪ್ರವೇಶಿಸುತ್ತಿರಲಿಲ್ಲ.

೧೦. ಒಂದದಿನ ದೈತ್ಯರೊಡನೆ ಯುದ್ಧಮಾಡಿ ಜಯಿಸಿಬಂದ ರುದ್ರರು, ಆದಿತ್ಯರು, ಅಶ್ವಿನೀದೇವತೆಗಳು, ದೇವೇಂದ್ರ, ವಿಷ್ಣು, ಯಮ, ಅಗ್ನಿ ಮೊದಲಾದ ದೇವತೆಗಳು ಆ ದಧೀಚಿಯ ಆಶ್ರಮಕ್ಕೆ ಬಂದರು.

೧೧. ಶತ್ರುಗಳನ್ನು ಜಯಿಸಿದ ಆ ವೀರಸುರನಾಯಕರನ್ನು ಮರುತ್ತುಗಳು ಮತ್ತು ಮಿಕ್ಕ ದೇವತೆಗಳು ಸ್ತುತಿಸುತ್ತಿದ್ದರು. ಇಂತಹ ದೇವನಾಯಕರು ದಧೀಚಿಮುನಿಯ ಬಳಿಗೆ ಬಂದು ನಮಸ್ಕರಿಸಿದರು.

೧೨-೧೪. ಆಗ ದಧೀಚಿಯು ಸಂತಸಗೊಂಡು ದೇವತೆಗಳೆಲ್ಲರನ್ನೂ ಪೂಜಿಸಿ, ಪತ್ನಿಯೊಡನೆ ಅವರಿಗೆ ಅತಿಥಿಸತ್ಕಾರವನ್ನು ಮಾಡಿ, ಕುಶಲಪ್ರಶ್ನೆ

ಪೃಷ್ಟಾಶ್ಚ ಕುಶಲಂ ತೇನ ಕಥಾಶ್ಚಕ್ರುಃ ಸುರಾ ಅಪಿ ।
ದಧೀಚಿಮಬ್ರುವನ್ದೇವಾ ಭಾರ್ಯಯಾ ಸುಖಿತಂ ಪುನಃ ॥ ೧೩ ॥

ಆಸೀನಂ ಹೃಷ್ಟಮನಸ ಋಷಿಂ ನತ್ವಾ ಪುನಃ ಪುನಃ ॥ ೧೪ ॥

॥ ದೇವಾ ಊಚುಃ ॥

ಕಿಮದ್ಯ ದುರ್ಲಭಂ ಲೋಕೇ ಋಷೇಽಸ್ಮಾಕಂ ಭವಿಷ್ಯತಿ ।
ತ್ವಾದೃಶಃ ಸಕೃಪೋ ಯೇಷು ಮುನಿರ್ಭೂಕಲ್ಪಪಾದಪಃ ॥ ೧೫ ॥

ಏತದೇವ ಫಲಂ ಪುಂಸಾಂ ಜೀವತಾಂ ಮುನಿಸತ್ತಮ ।
ತೀರ್ಥಾಪ್ಲುತಿರ್ಭೂತದಯಾ ದರ್ಶನಂ ಚ ಭವಾದೃಶಾಂ ॥ ೧೬ ॥

ಯತ್ಸ್ನೇಹಾದುಚ್ಯತೇಽಸ್ಮಾಭಿರವಧಾರಯ ತನ್ಮುನೇ ।
ಜಿತ್ವಾ ದೈತ್ಯಾನಿಹ ಪ್ರಾಪ್ತಾ ಹತ್ವಾ ರಾಕ್ಷಸಪುಂಗವಾನ್ ॥ ೧೭ ॥

ಯನ್ನು ಮಾಡಲು, ದೇವತೆಗಳು ಯಥೋಚಿತವಾಗಿ ಉತ್ತರವಿತ್ತು, ಆ ಮುನಿಯನ್ನು ನಮಸ್ಕರಿಸಿ, ಸಂತೋಷದಿಂದ ಇಂತೆಂದರು—

೧೫. ಓ ಮುನಿ, ನಮಗೀಗ ದುರ್ಲಭವಾದುದು ಯಾವುದು? ಯಾವುದೂ ಇಲ್ಲ. ಏಕೆಂದರೆ ಭೂಲೋಕದ ಕಲ್ಪವೃಕ್ಷದಂತಿರುವ ನೀನು ನಮ್ಮಲ್ಲಿ ಅನುಗ್ರಹವುಳ್ಳವನಾಗಿರುವೆ.

೧೬. ಮನುಷ್ಯರಿಗೆ ತೀರ್ಥಸ್ನಾನ, ಭೂತದಯೆ, ನಿಮ್ಮಂಥ ಮಹಾತ್ಮರ ದರ್ಶನ ಇವಿಷ್ಟೇ ಸಾಕು. ಇವುಗಳನ್ನು ಪಡೆದವನು ಬೇಕಾದ ಫಲವನ್ನು ಪಡೆಯುವನು.

೧೭. ಓ ಮುನಿ, ಸ್ನೇಹದಿಂದ ನಾವೊಂದುಮಾತನ್ನು ಹೇಳುವೆವು. ಕೇಳು. ಈಗ ನಾವು ರಾಕ್ಷಸವೀರರನ್ನು ಕೊಂದು ಜಯಿಸಿ ಇಲ್ಲಿಗೆ ಬಂದಿರುವೆವು. ವಿಶೇಷವಾಗಿ ನಿನ್ನ ದರ್ಶನದಿಂದ ನಾವು ಸುಖಿತರಾದೆವು.

ವಯಂ ಚ ಸುಖಿನೋ ಬ್ರಹ್ಮಂಸ್ತ್ವಯಿ ದೃಷ್ಟೇ ವಿಶೇಷತಃ ।
ನಾಯುಧೈಃ ಫಲಮಸ್ಮಾಕಂ ವೋಢುಂ ನೈವ ಕ್ಷಮಾ ವಯಂ ॥ ೧೮ ॥

ಸ್ಥಾಪ್ಯದೇಶಂ ನ ಪಶ್ಯಾಮ ಆಯುಧಾನಾಂ ಮುನೀಶ್ವರ ।
ಸ್ವರ್ಗೇ ಸುರದ್ವಿಷೋ ಜ್ಞಾತ್ವಾ ಸ್ಥಾಪಿತಾನಿ ಹರಂತಿ ಚ ॥ ೧೯ ॥

ನಯೇಯುರಾಯುಧಾನೀತಿ ತಥೈವ ಚ ರಸಾತಲೇ ।
ತಸ್ಮಾತ್ತವಾಶ್ರಮೇ ಪುಣ್ಯೇ ಸ್ಥಾಪ್ಯಂತೇಽಸ್ತ್ರಾಣಿ ಮಾನದ ॥ ೨೦ ॥

ನೈವಾತ್ರ ಕಿಂಚಿದ್ಭಯಮಸ್ತಿ ವಿಪ್ರ
ನ ದಾನವೇಭ್ಯೋ ರಾಕ್ಷಸೇಭ್ಯಶ್ಚ ಘೋರಂ ।
ತ್ವದಾಜ್ಞಯಾ ರಕ್ಷಿತಪುಣ್ಯದೇಶೋ
ನ ವಿದ್ಯತೇ ತಪಸಾ ತೇ ಸಮಾನಃ ॥ ೨೧ ॥

ಜಿತಾರಯೋ ಬ್ರಹ್ಮವಿದಾಂ ವರಿಷ್ಠಂ
ವಯಂ ಚ ಪೂರ್ವಂ ನಿಹತಾ ದೈತ್ಯಸಂಘಾಃ ।
ಅಸ್ತ್ರೈರಲಂ ಭಾರಭೂತೈಃ ಕೃತಾರ್ಥೈಃ
ಸ್ಥಾಪ್ಯಂ ಸ್ಥಾನಂ ತೇ ಸಮೀಪೇ ಮುನೀಶ ॥ ೨೨ ॥

---

೧೮. ಇನ್ನು ಈ ನಮ್ಮ ಆಯುಧಗಳಿಂದ ಪ್ರಕೃತಸಂದರ್ಭದಲ್ಲಿ ಪ್ರಯೋಜನವಿಲ್ಲ. ಇವುಗಳನ್ನು ಯಾವಾಗಲೂ ಹೊತ್ತಿರಲಾರೆವು. ಈ ಆಯುಧಗಳನ್ನಿಡುವುದಕ್ಕೆ ಸರಿಯಾದ ಸ್ಥಳವು ಲಭಿಸಲಿಲ್ಲ.

೧೯-೨೦. ಸ್ವರ್ಗದಲ್ಲಿಯಾಗಲಿ ಮತ್ತು ಪಾತಾಳದಲ್ಲಿಯಾಗಲಿ ಈ ಆಯುಧಗಳನ್ನಿರಿಸಿದರೆ ನಮ್ಮ ಶತ್ರುಗಳಾದ ದೈತ್ಯದಾನವರು ಅವುಗಳನ್ನು ಹುಡುಕಿ ಅಪಹರಿಸುವರು. ಆದುದರಿಂದ ನಿನ್ನ ಪುಣ್ಯಾಶ್ರಮದಲ್ಲಿ ನಮ್ಮ ಆಯುಧಗಳನ್ನಿರಿಸುರಿಸುವೆವು.

೨೧. ನಿನ್ನ ತಪಸ್ಸಿನಿಂದ ರಕ್ಷಿತವಾದ ಈ ಆಶ್ರಮದಲ್ಲಿ ಯಾವ ಭಯವೂ ಇಲ್ಲ. ದೈತ್ಯದಾನವರ ಭಯವೂ ಇಲ್ಲ. ಲೋಕದಲ್ಲಿ ಇಷ್ಟು ನಿರ್ಭಯವಾದ ದೇಶವು ಮತ್ತೊಂದಿಲ್ಲ.

೨೨. ಈಗ ನಾವು ಶತ್ರುಗಳೆಲ್ಲರನ್ನೂ ಜಯಿಸಿರುವೆವು. ಶತ್ರುಗಳು ನಾಶವಾಗಿರುವರು ನಮಗೀಗ ಈ ಆಯುಧಗಳಿಂದ ಪ್ರಯೋಜನವಿಲ್ಲ. ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದ ನಿನ್ನ ಬಳಿಯಲ್ಲಿ ಈ ಆಯುಧಗಳನ್ನಿರಿಸುವೆವು.

ದಿವ್ಯಾನ್ಭೋಗಾನ್ಕಾಮಿನೀಭಿಃ ಸಮೇತಾ-
ಸ್ದೇವೋದ್ಯಾನೇ ನಂದನೇ ಸಂಭಜಾಮಃ ।
ತತೋ ಯಾಮಃ ಕೃತಕಾರ್ಯಾಃ ಸಹೇಂದ್ರಾಃ
ಸ್ವಂ ಸ್ವಂ ಸ್ಥಾನಂ ಚಾಯುಧಾನಾಂ ಚ ರಕ್ಷಾ ॥ ೨೩ ॥

ತ್ವಯಾ ಕೃತಾ ಜಾಯತಾಂ ತತ್ಪ್ರಶಾಧಿ
ಸಮರ್ಥಸ್ತ್ವಂ ರಕ್ಷಣೇ ಧಾರಣೇ ಚ ॥ ೨೪ ॥

॥ ಬ್ರಹ್ಮೋವಾಚ ॥

ತದ್ವಾಕ್ಯಮಾಕರ್ಣ್ಯ ದಧೀಚಿರೇವಂ
ವಾಕ್ಯಂ ಜಗೌ ವಿಬುಧಾನೇವಮಸ್ತು ।
ನಿವಾರ್ಯಮಾಣಃ ಪ್ರಿಯಶೀಲಯಾ ಸ್ತ್ರಿಯಾ
ಕಿಂ ದೇವಕಾರ್ಯೇಣ ವಿರುದ್ಧಕಾರಿಣಾ ॥ ೨೫ ॥

ಯೇ ಜ್ಞಾತಶಾಸ್ತ್ರಾಃ ಪರಮಾರ್ಥನಿಷ್ಠಾಃ
ಸಂಸಾರಚೇಷ್ಟಾಸು ಗತಾನುರಾಗಾಃ ।
ತೇಷಾಂ ಪರಾರ್ಥವ್ಯಸನೇನ ಕಿಂ ಮುನೇ
ಯೇನಾತ್ರ ವಾಮುತ್ರ ಸುಖಂ ನ ಕಿಂಚಿತ್ ॥ ೨೬ ॥

೨೩-೨೪. ಕೃತಕೃತ್ಯರಾದ ನಾವು ಮುಂದೆ ದೇವಲೋಕಕ್ಕೆ ತೆರಳಿ, ಮನೋಹರವಾದ ನಂದನವನದಲ್ಲಿ ಸುಂದರಿಯರಾದ ದೇವತರುಣಿಯರೊಡನೆ ವಿಹರಿಸುತ್ತಾ ಸುಖಭೋಗಗಳನ್ನನುಭವಿಸುವೆವು. ನೀನು ನಮ್ಮ ಆಯುಧಗಳನ್ನು ರಕ್ಷಿಸುತ್ತಿರು. ಇವುಗಳನ್ನು ಧರಿಸಲೂ ರಕ್ಷಿಸಲೂ ನೀನು ಸಮರ್ಥನಾಗಿರುವೆ ಎಂದರು.

೨೫. ದೇವತೆಗಳ ಮಾತನ್ನು ದಧೀಚಿಮುನಿಯು ಅಂಗೀಕರಿಸಿದನು. ಆಗ ಅವನ ಪ್ರಿಯಪತ್ನಿಯು ಓ ಸ್ವಾಮಿ, ಈ ದೇವಕಾರ್ಯವನ್ನು ಒಪ್ಪಿಕೊಳ್ಳಬೇಡಿ. ಅದರಿಂದ ಮುಂದೆ ಕೆಡುಕೇ ವಿನಾ ಒಳ್ಳೆಯದಾಗಲಾರದು.

೨೬. ಶಾಸ್ತ್ರರಹಸ್ಯವನ್ನು ತಿಳಿದವರೂ, ಪರವಸ್ತುವನ್ನು ಚಿಂತಿಸುವವರೂ, ಸಂಸಾರದಲ್ಲಿ ವೈರಾಗ್ಯವುಳ್ಳವರೂ ಆದ ನಿಮ್ಮಂತಹವರಿಗೆ ಪರೋಪಕಾರದಿಂದ ಆಗಬೇಕಾದುದೇನು? ಇಹಪರಸುಖಗಳು ಲಭಿಸಬೇಕೆ?

ದೇವದ್ವಿಷೋ ದ್ವೇಷಮನುಪ್ರಯಾಂತಿ
ದತ್ತೇ ಸ್ಥಾನೇ ವಿಪ್ರವರ್ಯ ಶೃಣುಷ್ವ ।
ನಷ್ಟೇ ಹೃತೇ ಚಾಯುಧಾನಾಂ ಮುನೀಶ
ಕುಪ್ಯಂತಿ ದೇವಾ ರಿಪವಸ್ತೇ ಭವಂತಿ ॥ ೨೭ ॥

ತಸ್ಮಾನ್ನೇದಂ ವೇದವಿದಾಂ ವರಿಷ್ಠ
ಯುಕ್ತಂ ದ್ರವ್ಯೇ ಪರಕೀಯೇ ಮಮತ್ವಂ ।
ತಾವಚ್ಚ ಮೈತ್ರೀ ದ್ರವ್ಯಭಾವಶ್ಚ ತಾವ-
ನ್ನಷ್ಟೇ ಹೃತೇ ರಿಪವಸ್ತೇ ಭವಂತಿ ॥ ೨೮ ॥

ಚೇದಸ್ತಿ ಶಕ್ತಿರ್ದ್ರವ್ಯದಾನೇ ತತಸ್ತೇ
ದಾತವ್ಯಮೇವಾರ್ಥಿನೇ ಕಿಂ ವಿಚಾರ್ಯಂ ।
ನೋ ಚೇತ್ಸಂತಃ ಪರಕಾರ್ಯಾಣಿ ಕುರ್ಯು-
ರ್ವಾಗ್ಭಿರ್ಮನೋಭಿಃ ಕೃತಿಭಿಸ್ತಥೈವ ॥ ೨೯ ॥

---

೨೭. ದೇವತೆಗಳ ಆಯುಧಗಳನ್ನು ನಾವಿರಿಸಿಕೊಂಡರೆ ದೇವಶತ್ರುಗಳಾದ ರಾಕ್ಷಸರು ನಮ್ಮಲ್ಲಿ ದ್ವೇಷವುಳ್ಳವರಾಗುವರು. ಅದೃಷ್ಟವಶಾತ್ ಆಯುಧಗಳು ನಷ್ಟವಾದರೆ ಅಥವಾ ಅಪಹರಿಸಲ್ಪಟ್ಟರೆ ಆಗ ದೇವತೆಗಳೇ ಕೋಪಗೊಂಡು ನಮಗೆ ಶತ್ರುಗಳಾಗುವರು.

೨೮. ಆದುದರಿಂದ ಇನ್ನೊಬ್ಬರ ವಸ್ತುವಿನಲ್ಲಿ ಮಮತೆಯನ್ನಿರಿಸಬಾರದು, ನೀನು ಮಹಾಜ್ಞಾನಿಯು. ನಿನಗೆ ಎಲ್ಲವೂ ಗೊತ್ತು. ವಸ್ತುವು ನಷ್ಟವಾಗುವವರೆಗೆ ದೇವತೆಗಳು ನಮ್ಮಲ್ಲಿ ಸ್ನೇಹದಿಂದಿರುವರು. ಏನಾದರೂ ವ್ಯತ್ಯಾಸವಾಗಿ ಆಯುಧಗಳು ನಾಶವಾದರೆ ಅವರೇ ನಮ್ಮ ಶತ್ರುಗಳಾಗುವರು.

೨೯–೩೦, ವಸ್ತುವನ್ನು ದಾನಮಾಡಲು ಶಕ್ತಿಯಿದ್ದರೆ ಯಾಚಕನಿಗೆ ಯೋಚನೆಯಿಲ್ಲದೆಯೇ ದಾನಮಾಡಬೇಕು. ಅದಿಲ್ಲದಿದ್ದರೆ ಇನ್ನೊಬ್ಬರಿಗೆ ತ್ರಿಕರಣಪೂರ್ವಕವಾಗಿ ಉಪಕಾರವನ್ನಾದರೂ ಮಾಡಬೇಕು. ಸತ್ಪುರುಷರು

ಪರಸ್ವಸಂಧಾರಣಮೇತದೇವ
ಸದ್ಭಿರ್ನಿರಸ್ತಂ ತ್ಯಜ ಕಾಂತ ಸದ್ಯಃ ॥ ೩೦ ॥

॥ ಬ್ರಹ್ಮೋವಾಚ ॥

ಏವಂ ಪ್ರಿಯಾಯಾ ವಚನಂ ಸ ವಿಪ್ರೋ
ನಿಶಮ್ಯ ಭಾರ್ಯಾಮಿದಮಾಹ ಸುಭ್ರೂಂ ॥ ೩೧ ॥

॥ ದಧೀಚಿರುವಾಚ ॥

ಪುರಾ ಸುರಾಣಾಮನುಮನ್ಯ ಭದ್ರೇ
ನೇತೀತಿ ವಾಣೀ ನ ಸುಖಂ ಮಮೈತಿ ॥ ೩೨ ॥

॥ ಬ್ರಹ್ಮೋವಾಚ ॥

ಶ್ರುತ್ವೇರಿತಂ ಪತ್ಯುರಿತಿ ಪ್ರಿಯಾಯಾಂ
ದೈವಂ ವಿನಾನ್ಯನ್ನ ನೃಣಾಂ ಸಮರ್ಥಂ ।
ತೂಷ್ಣೀಂ ಸ್ಥಿತಾಯಾಂ ಸುರಸತ್ತಮಾಸ್ತೇ
ಸಂಸ್ಥಾಪ್ಯ ಚಾಸ್ತ್ರಾಣ್ಯತಿದೀಪ್ತಿಮಂತಿ ॥ ೩೩ ॥

ಹೀಗೆ ಆಚರಿಸುವರು. ಆದರೆ (ಶಕ್ತಿಯಿಲ್ಲದಿದ್ದರೆ) ಪರವಸ್ತುವನ್ನು ರಕ್ಷಿಸುವ ಗೊಡವೆಗೆ ಹೋಗಕೂಡದು. ಆದುದರಿಂದ ಓ ಕಾಂತ, ಈ ದೇವಕಾರ್ಯವನ್ನು ತ್ಯಜಿಸು ಎನ್ನಲು,

೩೧-೩೨. ಪ್ರಿಯಪತ್ನಿಯ ಈ ಮಾತನ್ನು ಕೇಳಿ ಆ ದಧೀಚಿಮುನಿಯು ಅವಳನ್ನು ಕುರಿತು ಎಲೌ ಕಾಂತೆ, ಮೊದಲು ದೇವತೆಗಳ ಮಾತನ್ನೊಪ್ಪಿ ಈಗ ಸಾಧ್ಯವಿಲ್ಲವೆಂದು ಹೇಳುವುದು ಸರಿಯಲ್ಲವೆಂದನು.

೩೩-೩೪. ಪತಿಯ ಆ ಮಾತನ್ನು ಕೇಳಿ ದಧೀಚಿಪತ್ನಿಯು ದೈವವನ್ನು ಯಾರೂ ಮೀರಲಾರರು. ಅದೃಷ್ಟವಿದ್ದಂತೆ ಆಗುವುದು ಎಂದು ಹೇಳಿ ಸುಮ್ಮನಾದಳು. ಮುಂದೆ ದೇವತೆಗಳು ತಮ್ಮ ತೇಜಸ್ವಿಯಾದ ಆಯುಧಗಳನ್ನೆಲ್ಲಾ ದಧೀಚಿಮುನಿಯಲ್ಲಿರಿಸಿ, ಕೃತಾರ್ಥರಾಗಿ ಆ ಮುನಿಯನ್ನು ನಮಸ್ಕರಿಸಿ, ತಮ್ಮ

ನತ್ವಾ ಮುನೀಂದ್ರಂ ಯಯುರೇವ ಲೋಕಾ-
ನ್ದೈತ್ಯದ್ವಿಷೋ ನ್ಯಸ್ತಶಸ್ತ್ರಾಃ ಕೃತಾರ್ಥಾಃ ।
ಗತೇಷು ದೇವೇಷು ಮುನಿಪ್ರವರ್ಯೋ
ಹೃಷ್ಟೋऽವಸದ್ಭಾರ್ಯಯಾ ಧರ್ಮಯುಕ್ತಃ ॥ ೩೪ ॥

ಗತೇ ಚ ಕಾಲೇ ಹ್ಯತಿವಿಪ್ರಯುಕ್ತೇ
ದೈವೇ ವರ್ಷೇ ಸಂಖ್ಯಯಾ ವೈ ಸಹಸ್ರೇ ।
ನ ತೇ ಸುರಾ ಆಯುಧಾನಾಂ ಮುನೀಶ
ವಾಚಂ ಮನಶ್ಚಾಪಿ ತಥೈವ ಚಕ್ರುಃ ॥ ೩೫ ॥

ದಧೀಚಿರಪ್ಯಾಹ ಗಭಸ್ತಿನೀಂ ಜಸಾ
ದೇವಾರಯೋ ಮಾಂ ದ್ವಿಷತೀಹ ಭದ್ರೇ ।
ನ ತೇ ಸುರಾ ನೇತುಕಾಮಾ ಭವಂತಿ
ಸಂಸ್ಥಾಪಿತಾನ್ಯತ್ರ ವದಸ್ವ ಯುಕ್ತಂ ॥ ೩೬ ॥

ಲೋಕಗಳಿಗೆ ತೆರಳಿದರು. ದೇವತೆಗಳು ಹೊರಟುಹೋದಮೇಲೆ ಇತ್ತ ದಧೀಚಿ ಮುನಿಯು ಪತ್ನಿಯೊಡನೆ ಸುಖವಾಗಿದ್ದನು.

೩೫. ಹೀಗೆ ಬಹಳಕಾಲವು ಕಳೆಯಿತು. ಸಾವಿರ ದೇವವರ್ಷಗಳು ಗತಿಸಿದುವು. ಆಗಲೂ ದೇವತೆಗಳು ತಮ್ಮ ಆಯುಧಗಳನ್ನು ಕೇಳಲೂ ಇಲ್ಲ, ಅವುಗಳ ಗೊಡೆವೆಗೇ ಬರಲಿಲ್ಲ.

೩೬. ಒಂದುದಿನ ದಧೀಚಿಯು ತನ್ನ ಪ್ರಿಯಪತ್ನಿಯಾದ ಗಭಸ್ತಿದೇವಿಯನ್ನು ಕುರಿತು ಎಲೌ ಪ್ರಿಯೆ, ದೇವಶತ್ರುಗಳು ನಮ್ಮನ್ನು ದ್ವೇಷಿಸುತ್ತಿರುವರು. ದೇವತೆಗಳು ತಮ್ಮ ಆಯುಧಗಳನ್ನು ತೆಗೆದುಕೊಂಡುಹೋಗಲು ಇನ್ನೂ ಬರಲಿಲ್ಲ ಈಗೇನು ಮಾಡಲಿ? ಹೇಳು ಎಂದು ಕೇಳಲು,

ಸಾ ಚಾಹ ಕಾಂತಂ ವಿನಯಾದುಕ್ತಮೇವ
ತ್ವಂ ಜಾನೀಷೇ ನಾಥ ಯದತ್ರ ಯುಕ್ತಂ ।
ದೈತ್ಯಾ ಹರಿಷ್ಯಂತಿ ಮಹಾಪ್ರವೃದ್ಧಾ-
ಸ್ತಪೋಯುಕ್ತಾ ಬಲಿನಃ ಸ್ವಾಯುಧಾನಿ ॥ ೩೭ ॥

ತದಸ್ತ್ರರಕ್ಷಾರ್ಥಮಿದಂ ಸ ಚಕ್ರೇ
ಮಂತ್ರೈಸ್ತು ಸಂಕ್ಷಾಲ್ಯ ಜಲೈಶ್ಚ ಪುಣ್ಯೈಃ ।
ತದ್ವಾರಿ ಸರ್ವಾಸ್ತ್ರಮಯಂ ಸುಪುಣ್ಯಂ
ತೇಜೋಯುಕ್ತಂ ತಚ್ಚ ಪಪೌ ದಧೀಚಿಃ ॥ ೩೮ ॥

ನಿರ್ವೀರ್ಯರೂಪಾಣಿ ತದಾಯುಧಾನಿ
ಕ್ಷಯಂ ಜಗ್ಮುಃ ಕ್ರಮಶಃ ಕಾಲಯೋಗಾತ್ ।
ಸುರಾಃ ಸಮಾಗತ್ಯ ದಧೀಚಿಮೂಚು-
ರ್ಮಹಾಭಯಂ ಹ್ಯಾಗತಂ ಶಾತ್ರವಂ ನಃ ॥ ೩೯ ॥

---

೩೭. ಅದನ್ನು ಕೇಳಿ ಗಭಸ್ತಿದೇವಿಯು ವಿನಯದಿಂದ ಓ ನಾಥ, ನಾನು ಹೇಳಿದಂತೆಯೇ ಆಯಿತು. ಮುಂದೆ ಮಾಡಬೇಕಾದುದನ್ನು ನೀನೇ ಬಲ್ಲೆ. ಹೀಗೆ ಬಿಟ್ಟರೆ ರಾಕ್ಷಸರು ತಪಸ್ಸನ್ನಾಚರಿಸಿ, ಈ ಆಯುಧಗಳನ್ನ ಪಹರಿಸು ವರು ಎಂದಳು.

೩೮. ಆಗ ದಧೀಚಿಯು ದೇವಾಸ್ತ್ರಗಳನ್ನು ರಕ್ಷಿಸಲು ಅವುಗಳೆಲ್ಲವನ್ನೂ ಮಂತ್ರಜಲದಿಂದ ತೊಳೆದು ಅಸ್ತ್ರಗಳನ್ನಾಕರ್ಷಿಸಿ, ಸರ್ವಾಸ್ತ್ರರೂಪವೂ ತೇಜಸ್ವಿಯೂ ಆದ ಆ ಅಸ್ತ್ರಜಲವನ್ನು ತಾನೇ ಕುಡಿದನು.

೩೯. ಆದರಿಂದ ಆ ಆಯುಧಗಳೆಲ್ಲವೂ ಶಕ್ತಿಯುಡುಗಿ ಕಾಲಕ್ರಮೇಣ ನಾಶವಾದುವು. ಕೆಲವುದಿನಗಳ ನಂತರ ದೇವತೆಗಳು ಬಂದು ದಧೀಚಿಯನ್ನು ಕುರಿತು, ಓ ಮುನೀಂದ್ರ! ಶತ್ರುಗಳಿಂದ ಮಹಾಭಯವು ನಮಗೆ ಒದಗಿದೆ. ನಿನ್ನಲ್ಲಿರುವ ನಮ್ಮ ಆಯುಧಗಳನ್ನು ಕೊಡು ಎಂದು ಕೇಳಿದರು.

ದದಸ್ವ ಚಾಸ್ತ್ರಾಣಿ ಮುನಿಪ್ರವೀರ
ಯಾನಿ ತ್ವದಂತೇ ನಿಹಿತಾನಿ ದೇವೈಃ ।
ದಧೀಚಿರಪ್ಯಾಹ ಸುರಾರಿಭೀತ್ಯಾ
ಅನಾಗತ್ಯಾ ಭವತಾಂ ಚಾಚಿರೇಣ ॥ ೪೦ ॥

ಅಸ್ತ್ರಾಣಿ ಪೀತಾನಿ ಶರೀರಸಂಸ್ಥಾ-
ನ್ಯಕ್ತಾನಿ ಯುಕ್ತಂ ಮಮ ತದ್ವದಂತು ।
ಶ್ರುತ್ವಾ ತದುಕ್ತಂ ವಚನಂ ತು ದೇವಾಃ
ಪ್ರೋಚುಸ್ತಮಿತ್ಥಂ ವಿನಯಾವನಮ್ರಾಃ ॥ ೪೧ ॥

ಅಸ್ತ್ರಾಣಿ ದೇಹೀತಿ ಚ ವಕ್ತುಮೇತ-
ಚ್ಛಕ್ಯಂ ನ ನಾನ್ಯತ್ಪ್ರತಿವಕ್ತುಂ ಮುನೀಂದ್ರ ।
ವಿನಾ ಚ ತೈಃ ಪರಿಭೂಯೇಮ ನಿತ್ಯಂ
ಪುಷ್ಟಾರಯಃ ಕ್ವ ಪ್ರಯಾಮೋ ಮುನೀಶ ॥ ೪೨ ॥

೪೦-೪೧. ಆಗ ದಧೀಚಿಯು—ಎಲೈ ದೇವತೆಗಳೇ, ನೀವು ಬಹಳ ಕಾಲವು ಗತಿಸಿದರೂ ಬರಲಿಲ್ಲ. ರಾಕ್ಷಸರು ಪೀಡಿಸತೊಡಗಿದರು. ಅದಕ್ಕಾಗಿ ನಾನು ಅಸ್ತ್ರಗಳೆಲ್ಲವನ್ನೂ ತೊಳೆದು ಕುಡಿದುಬಿಟ್ಟಿರುವೆನು. ಈಗ ಮಾಡುವುದೇನು? ನೀವೇ ಹೇಳಿ ಎನ್ನಲು, ದಧೀಚಿಯ ಮಾತನ್ನು ಕೇಳಿ ದೇವತೆಗಳು ಹೀಗೆ ವಿನಯದಿಂದ–

೪೨. ಓ ಮುನೀಂದ್ರ, ಅಸ್ತ್ರಗಳನ್ನು ಕೊಡು ಎಂದು ಮಾತ್ರ ನಾವು ಕೇಳಬಲ್ಲೆವು. ಇನ್ನೇನನ್ನೂ ನಾವು ಹೇಳಲಾರೆವು. ಆಯುಧಗಳಿಲ್ಲದಿದ್ದರೆ ಶತ್ರುಗಳು ನಿತ್ಯವೂ ನಮ್ಮನ್ನು ಪೀಡಿಸುವರು. ಶತ್ರುಗಳ ಭಯದಿಂದ ನಾವು ಎಲ್ಲಿಗೆ ಹೋಗೋಣ?

ನ ಮರ್ತ್ಯಲೋಕೇ ನ ತಲೇ ನ ನಾಕೇ
ನಾಸಃ ಸುರಾಣಾಂ ಭವಿತಾದ್ಯ ತಾತ ।
ತ್ವಂ ವಿಪ್ರವರ್ಯಸ್ತಪಸಾ ಚೈವ ಯುಕ್ತೋ
ನಾನ್ಯದ್ವಕ್ತುಂ ಯುಜ್ಯತೇ ತೇ ಪುರಸ್ತಾತ್ ॥ ೪೩ ॥

ವಿಪ್ರಸ್ತದೋವಾಚ ಮದಸ್ಥಿಸಂಸ್ಥಾ-
ನ್ಯಸ್ತ್ರಾಣಿ ಗೃಹ್ಣಂತು ನ ಸಂಶಯೋಽತ್ರ ।
ದೇವಾಸ್ತಮುಸ್ಯಾಹುರನೇನ ಕಿಂ ನೋ
ಹ್ಯಸ್ತ್ರೈರ್ಹೀನಾಃ ಸ್ತ್ರೀತ್ವಮಾಪ್ತಾಃ ಸುರೇಂದ್ರಾಃ ॥ ೪೪ ॥

ಪುನಸ್ತದಾ ಚಾಹ ಮುನಿಪ್ರವೀರ-
ಸ್ತ್ಯಕ್ಷ್ಯೇ ಜೀವಾನ್ದೈಹಿಕಾನ್ಯೋಗಯುಕ್ತಃ ।
ಅಸ್ತ್ರಾಣಿ ಕುರ್ವಂತು ಮದಸ್ಥಿಭೂತಾ-
ನ್ಯನುತ್ತಮಾನ್ಯುತ್ತಮರೂಪವಂತಿ ॥ ೪೫ ॥

---

೪೩. ಶತ್ರುಭಯದಿಂದ ನಾವು ಇನ್ನುಮೇಲೆ ಭೂಮಿಯಲ್ಲಾಗಲಿ, ಪಾತಾಳದಲ್ಲಾಗಲೀ, ಸ್ವರ್ಗದಲ್ಲಾಗಲೀ, ವಾಸಮಾಡುವಂತಿಲ್ಲ. ಮಹಾತಪಸಿಯಾದ ದಿನ್ನೆದುರಿನಲ್ಲಿ ನಾವು ಇನ್ನೇನನ್ನೂ ಹೇಳುವಂತಿಲ್ಲ ಎಂದರು. ವ

೪೪. ಆಗ ದಧೀಚಿಯು ಎಲೈ ದೇವತೆಗಳೇ, ನನ್ನ ಅಸ್ಥಿಯ (ಎಲುಬಿನ) ಲ್ಲಿರುವ ಅಸ್ತ್ರಗಳೆಲ್ಲವನ್ನೂ ಧೈರ್ಯದಿಂದ ತೆಗೆದುಕೊಳ್ಳಿರಿ ಎಂದನು. ಅದಕ್ಕೆ ದೇವತೆಗಳು, ಓ ಮುನಿ, ನಿನ್ನ ಅಸ್ಥಿಗಳಿಂದ ನಮಗೇನು ಪ್ರಯೋಜನ? ಒಟ್ಟಿನಲ್ಲಿ ಈಗ ನಾವು ಅಸ್ತ್ರಗಳಿಲ್ಲದೆ ಹೆಂಗಸರಂತೆ ಶಕ್ತಿಯಿಲ್ಲದವರಾದೆವು ಎಂದರು.

೪೫. ಪುನಃ ಆ ದಧೀಚಿಮುನಿಯು–ದೇವಶ್ರೇಷ್ಠರೇ, ನಾನು ಯೋಗಾಭ್ಯಾಸದಿಂದ ಪ್ರಾಣಗಳನ್ನು ಬಿಡುವೆನು. ನನ್ನ ಅಸ್ಥಿಗಳಿಂದ ಉತ್ತಮವಾದ ಆಯುಧಗಳನ್ನು ಮಾಡಿಕೊಳ್ಳಿ ಎಂದು ಹೇಳಿದನು.

ಕುರುಷ್ವ ಚೇತ್ಯಾಹುರದೀನಸತ್ತ್ವಂ
ದಧೀಚಿಮಿತ್ಯುತ್ತರಮಗ್ನಿಕಲ್ಪಂ ।
ತದಾ ತು ತಸ್ಯ ಪ್ರಿಯಮಾರಯಂತೀ
ನ ಸಾಂನಿಧ್ಯೇ ಪ್ರಾತಿಥೇಯಿ ಮುನೀಶ ॥ ೪೬ ॥

ತೇ ಚಾಪಿ ದೇವಾಸ್ತಾಮುದೃಷ್ಟ್ವೈವ ಶೀಘ್ರಂ
ತಸ್ಯಾ ಭೀತಾ ವಿಪ್ರಮೂಚುಃ ಕುರುಷ್ವ ।
ತತ್ಯಾಜ ಜೀವಾನ್ದ್ವಿಸ್ಯಜಾನ್ಪ್ರೀತಿಯುಕ್ತೋ
ಯಥಾಸುಖಂ ದೇಹಮಿಮಂ ಜುಷಧ್ವಂ ॥ ೪೭ ॥

ಮದಸ್ಥಿಭಿಃ ಪ್ರೀತಿಮಂತೋ ಭವಂತು
ಸುರಾಃ ಸರ್ವೇ ಕಿಂತು ದೇಹೇನ ಕಾರ್ಯಂ ॥ ೪೮ ॥

॥ ಬ್ರಹ್ಮೋವಾಚ ॥

ಇತ್ಯುಕ್ತ್ವಾಸೌ ಬದ್ಧಪದ್ಮಾಸನಸ್ಥೋ
ನಾಸಾಗ್ರದತ್ತಾಕ್ಷಿಪ್ರಕಾಶಪ್ರಸನ್ನಃ ।
ವಾಯುಂ ಸವಹ್ನಿಂ ಮಧ್ಯಮೋದ್ಘಾಟಯೋಗಾ-
ನ್ನೀತ್ವಾ ಶನೈರ್ದಹರಾಕಾಶಗರ್ಭಂ ॥ ೪೯ ॥

---

೪೬. ಅದಕ್ಕೆ ದೇವತೆಗಳು ಹಾಗೆಯೇ ಆಗಲಿ ಎಂದು ಅಗ್ನಿಯಂತೆ ತೇಜಸ್ವಿಯಾದಾ ದಧೀಚಿಮುನಿಗೆ ಹೇಳಿದರು. ಆಗ ಆ ಮುನಿಗೆ ಹಿತವನ್ನು ಬಯಸುವ ಅವನ ಪ್ರಿಯಪತ್ನಿಯಾದ ಪ್ರಾತಿಥೇಯೀದೇವಿಯು ಅಲ್ಲಿರಲಿಲ್ಲ.

೪೭-೪೮. ಪ್ರಾತಿಥೇಯಿಯು ಇಲ್ಲದಿರುವುದನ್ನು ನೋಡಿ ದೇವತೆಗಳು ಅವಳು ಬಂದರೆ ಕೆಲಸ ಕೆಡುವುದೆಂದು ಹೆದರಿ ಎಲೈ ಮುನಿ, ಜಾಗ್ರತೆ ನಿನ್ನ ಕಾರ್ಯವನ್ನು ನೆರವೇರಿಸು ಎಂದರು. ಆಗ ದಧೀಚಿಯು ಯಾರಿಂದಲೂ ತಾನಾಗಿ ಬಿಡಲಸಾಧ್ಯವಾದ ಪ್ರಾಣಗಳನ್ನು ಬಿಡಲು ಸಿದ್ಧನಾಗಿ ಎಲೈ ದೇವತೆಗಳೇ, ಶರೀರವನ್ನು ಬಿಡುವೆನು, ನನ್ನ ಅಸ್ಥಿಗಳಿಂದ ಉಪಯೋಗವನ್ನು ಪಡೆದು ಸಂತುಷ್ಟರಾಗಿ. ಅನಿತ್ಯವಾದೀದೇಹದಿಂದೇನು ಪ್ರಯೋಜನ?

೪೯-೫೦. ಹೀಗೆ ಹೇಳಿ ದಧೀಚಿಯು ಬದ್ಧಪದ್ಮಾಸನದಲ್ಲಿ ಕುಳಿತು ಕಣ್ಣುದೃಷ್ಟಿಯನ್ನು ಮೂಗಿನ ತುದಿಯಲ್ಲಿರಿಸಿದನು. ಪ್ರಾಣವಾಯುವನ್ನು ದೇಹ

ಯದಪ್ರಮೇಯಂ ಪರಮಂ ಪದಂ ಯ-
ದ್ವೃದ್ಬ್ರಹ್ಮರೂಪಂ ಯದುಪಾಸಿತವ್ಯಂ ।
ತತ್ರೈವ ವಿನ್ಯಸ್ಯ ಧಿಯಂ ಮಹಾತ್ಮಾ
ಸಾಯುಜ್ಯತಾಂ ಬ್ರಹ್ಮಣೋಽಸೌ ಜಗಾಮ ॥ ೫೦ ॥

ನಿರ್ಜೀವತಾಂ ಪ್ರಾಪ್ತಮುಖೀಕ್ಷ್ಯ ದೇವಾಃ
ಕಲೇಬರಂ ತಸ್ಯ ಸುರಾಶ್ಚ ಸಮ್ಯಕ್ ।
ತ್ವಷ್ಟಾರಮುಪ್ಯೋಚುರತಿತ್ವರಂತಃ
ಕುರುಷ್ವ ಚಾಸ್ತ್ರಾಣಿ ಬಹೂನಿ ಸದ್ಯಃ ॥ ೫೧ ॥

ಸ ಚಾಪಿ ತಾನಾಹ ಕಥಂ ನು ಕಾರ್ಯಂ
ಕಲೇವರಂ ಬ್ರಾಹ್ಮಣಸ್ಯೇಹ ದೇವಾಃ ।
ಬಿಭೇಮಿ ಕರ್ತುಂ ದಾರುಣಂ ಚಾಕ್ಷನೋಽಹಂ
ನಿದಾರಿತಾನ್ಯಾಯುಧಾನ್ಯುತ್ತಮಾನಿ ॥ ೫೨ ॥

ತದಸ್ಥಿಭೂತಾನಿ ಕರೋಮಿ ಸದ್ಯ-
ಸ್ತತೋ ದೇವಾ ಗಾಃ ಸಮೂಚುಸ್ತ್ವರಂತಃ ॥ ೫೩ ॥

ವಲ್ಲಿನ ಅಗ್ನಿಯನ್ನೂ ಉದ್ಘಾಟಯೋಗದಿಂದ ಹೃದಯಸ್ಥಾನಕ್ಕೆ ಸೆಳೆದನು. ಆ ಹೃದಯುವಲ್ಲಿ ಇಂದ್ರಿಯಗಳಿಗೆ ನಿಲುಕದುದೂ ಉಪಾಸ್ಯಸ್ವರೂಪವೂ ಆದ ಪರ ಬ್ರಹ್ಮವಸ್ತುವನ್ನು ಚಿಂತಿಸುತ್ತಾ ಆ ವಸ್ತುವಿನಲ್ಲಿಯೇ ಲೀನನಾಗಿ ಶರೀರವನ್ನು ಬಿಟ್ಟನು.

೫೧. ಸ್ವಲ್ಪಹೊತ್ತಿನಮೇಲೆ ದೇವತೆಗಳು ದಧೀಚಿಮುನಿಯ ಶರೀರ ವಲ್ಲಿ ಪ್ರಾಣವಿಲ್ಲದಿರುವುದನ್ನು ಪರೀಕ್ಷಿಸಿ ನೋಡಿ ವಿಶ್ವಕರ್ಮನನ್ನು ಕುರಿತು ಈ ಮುನಿಯ ಅಸ್ಥಿಗಳಿಂದ ಜಾಗ್ರತೆಯಾಗಿ ಆಯುಧಗಳನ್ನು ಮಾಡು ಎಂದರು.

೫೨-೫೩. ಆಗ ವಿಶ್ವಕರ್ಮನು ಹೇಗೆ ಮಾಡಲಿ? ಬ್ರಾಹ್ಮಣ ಶರೀರ ವನ್ನು ಕತ್ತರಿಸಿ ಆಯುಧಗಳನ್ನು ಮಾಡುವಂತಹ ಘೋರಕರ್ಮವನ್ನು ನಾನು ಮಾಡಲಾರೆನು. ಈ ಶರೀರವು ಒಣಗಿ ಅಸ್ಥಿಮಾತ್ರವಾದರೆ ಕೂಡಲೇ ಆಯುಧ ಗಳನ್ನು ಮಾಡುವೆನು ಎಂದನು, ಆಗ ದೇವತೆಗಳು, ದೇವಧೇನುಗಳನ್ನು ಕರೆದು,

॥ ದೇವಾ ಊಚುಃ ॥

ವಜ್ರಂ ಮುಖಂ ವಃ ಕ್ರಿಯತೇ ಹಿತಾರ್ಥಂ
ಗಾವೋ ದೇವೈರಾಯುಧಾರ್ಥಂ ಕ್ಷಣೇನ ।
ದಧೀಚಿದೇಹಂ ತು ವಿದಾರ್ಯ ಯೂಯ-
ಮಸ್ಥೀನಿ ಶುದ್ಧಾನಿ ಪ್ರಯಚ್ಛತಾದ್ಯ ॥ ೫೪ ॥

॥ ಬ್ರಹ್ಮೋವಾಚ ॥

ತಾ ದೇವವಾಕ್ಯಾಚ್ಚ ತಥೈವ ಚಕ್ರುಃ
ಸಂಲಿಹ್ಯ ಚಾಸ್ಥೀನಿ ದದುಃ ಸುರಾಣಾಂ ।
ಸುರಾಸ್ತ್ವರಾ ಜಗ್ಮುರದೀನಸತ್ತ್ವಾಃ
ಸ್ವಮಾಲಯಂ ಚಾಪಿ ತಥೈವ ಗಾವಃ ॥ ೫೫ ॥

ಕೃತ್ವಾ ತಥಾಸ್ತ್ರಾಣಿ ಚ ದೇವತಾನಾಂ
ತ್ವಷ್ಟಾ ಜಗಾಮಾಥ ಸುರಾಜ್ಞಯಾ ತದಾ ।
ತತಶ್ಚಿರಾಚ್ಛೀಲವತೀ ಸುಭದ್ರಾ
ಭರ್ತುಃ ಪ್ರಿಯಾ ಬಾಲಗರ್ಭಾ ತ್ವರಂತೀ ॥ ೫೬ ॥

---

೫೪. ಎಲೈ ಹಸುಗಳೇ, ನಿಮ್ಮ ಮುಖವನ್ನು ವಜ್ರಮಯವಾಗಿ ಮಾಡುವೆವು. ನಮ್ಮ ಆಯುಧಗಳಿಗಾಗಿ ಈ ದಧೀಚಿ ಶರೀರವನ್ನು ಸೀಳಿ ಪವಿತ್ರವಾದ ಅಸ್ಥಿಯನ್ನು ಸಿದ್ಧಪಡಿಸಿಕೊಡಿ ಎಂದರು.

೫೫. ಆಗ ದೇವಹಸುಗಳು ದೇವತೆಗಳ ಮಾತಿನಂತೆ ದಧೀಚಿ ಶರೀರವನ್ನು ಬಿರುಸಾಗಿ ನೆಕ್ಕಿ ಅಸ್ಥಿಮಾತ್ರ ಉಳಿಯುವಂತೆ ಮಾಡಿದುವು. ದೇವತೆಗಳು ಆ ಅಸ್ಥಿಗಳನ್ನು ತೆಗೆದುಕೊಂಡು ತಮ್ಮ ಸ್ಥಾನಕ್ಕೆ ಬಂದರು. ಹಸುಗಳೂ ಹೊರಟುಹೋದವು.

೫೬. ವಿಶ್ವಕರ್ಮನು ಆ ಅಸ್ಥಿಗಳಿಂದ ಉತ್ತಮವಾದ ಆಯುಧಗಳನ್ನು ಮಾಡಿ ದೇವತೆಗಳಿಗೆ ಕೊಟ್ಟು ತನ್ನ ಮನೆಗೆ ಹೋದನು.

ಕರೇ ಗೃಹೀತ್ವಾ ಕಲಶಂ ವಾರಿಪೂರ್ಣ-
ಮುಮಾಂ ನತ್ವಾ ಫಲಪುಷ್ಪೈಃ ಸಮೇತ್ಯ ।
ಅಗ್ನಿಂ ಚ ಭರ್ತಾರಮಥಾಶ್ರಮಂ ಚ
ಸಂದ್ರಷ್ಟುಕಾಮಾ ಹ್ಯಾಜಗಾಮಾಥ ಶೀಘ್ರಂ ॥ ೫೭ ॥

ಆಗಚ್ಛಂತೀ ತಾಂ ಪ್ರಾತಿಥೇಯೀಂ ತದಾನೀಂ
ನಿವಾರಯಾಮಾಸ ತದೋಲ್ಕಪಾತಃ ।
ಸಾ ಸಂಭ್ರಮಾದಾಗತಾ ಚಾಶ್ರಮಂ ಸ್ವಂ
ನೈವಾಪಶ್ಯತ್ತತ್ರ ಭರ್ತಾರಮಗ್ರೇ ॥ ೫೮ ॥

ಕ್ವ ವಾ ಗತಶ್ಚೇತಿ ಸವಿಸ್ಮಯಾ ಸಾ
ಪಪ್ರಚ್ಛ ಚಾಗ್ನಿಂ ಪ್ರಾತಿಥೇಯೀ ತದಾನೀಂ ।
ಅಗ್ನಿಸ್ತದೋವಾಚ ಸವಿಸ್ತರಂ ತಾಂ
ದೇವಾಗಮಂ ಯಾಚನಂ ವೈ ಶರೀರೇ ॥ ೫೯ ॥

---

೫೭. ಇತ್ತ ಬಾಲಗರ್ಭಿಣಿಯಾದ ದಧೀಚಿಪತ್ನಿಯು ನೀರುತರಲು ನದಿಗೆ ಹೋಗಿದ್ದಳು. ಹೂವುಹಣ್ಣುಗಳನ್ನು ಕೊಯ್ದು ತಂದು, ಪಾರ್ವತೀದೇವಿಯನ್ನು ಪೂಜಿಸಿ ನೀರನ್ನು ತೆಗೆದುಕೊಂಡು ಗೃಹಸ್ಥಾಗ್ನಿಯನ್ನೂ, ಪತಿಯನ್ನೂ ನೋಡುವ ತವಕದಿಂದ ಆಶ್ರಮಕ್ಕೆ

೫೮. ಬರುತ್ತಿರಲು, ಆಗ ಮಾರ್ಗಮಧ್ಯದಲ್ಲಿ ಉಲ್ಕಪಾತ (ಕೆಂಡದ ಮಳೆಯು) ವು ಆಗಿ ಅಪಶಕುನವುಂಟಾಯಿತು. ಗಾಬರಿಗೊಂಡು ಅವಳು ಆಶ್ರಮವನ್ನು ಪ್ರವೇಶಿಸಲು ಅಲ್ಲಿ ಅವಳ ಪತಿಯು ಇರಲಿಲ್ಲ.

೫೯-೬೦. ಆಗ ಆ ಪ್ರಾತಿಥೇಯಿಯು ಅಗ್ನಿಯನ್ನು ಕುರಿತು ನನ್ನ ಪತಿಯು ಎಲ್ಲಿ ಹೋದನು? ಎಂದು ಪ್ರಶ್ನಿಸಲು, ಅಗ್ನಿಯು—ದೇವತೆಗಳು ಬಂದುದು, ದಧೀಚಿ ಶರೀರವನ್ನು ಕೇಳಿದುದು, ಅಸ್ಥಿಯಾಗಿ ಮಾಡಿ ತೆಗೆದುಕೊಂಡು ಹೋದುದು ಮುಂತಾದ ವೃತ್ತಾಂತವೆಲ್ಲವನ್ನೂ ಹೇಳಿದನು. ಅದನ್ನು

ಅಸ್ಥಾ್ನಮುಪಾದಾನಮಥ ಪ್ರಯೋಣಂ
ಶ್ರುತ್ವಾ ಸರ್ವಂ ದುಃಖಿತಾ ಸಾ ಬಭೂವ ।
ದುಃಖೋದ್ವೇಗಾತ್ಸಾ ಪಪಾತಾಥ ಪೃಥ್ವ್ಯಾಂ
ಮಂದಂ ಮಂದಂ ವಹ್ನಿನಾಶ್ವಾಸಿತಾ ಚ ॥ ೬೦ ॥

॥ ಪ್ರಾತಿಥೇಯ್ಯುವಾಚ ॥
ಶಾಪೇಽಮರಾಣಾಂ ತು ನಾಹಂ ಸಮರ್ಥಾ
ಅಗ್ನಿಂ ಪ್ರಾಪ್ಸ್ಯೇ ಕಿಂ ನು ಕಾರ್ಯಂ ಭವೇನ್ಮೇ ॥ ೬೧ ॥

॥ ಬ್ರಹ್ಮೋವಾಚ ॥
ಕೋಪಂ ಚ ದುಃಖಂ ಚ ನಿಯಮ್ಯ ಸಾಧ್ವೀ
ತದಾವಾದೀದ್ಧರ್ಮಯುಕ್ತಂ ಚ ಭರ್ತುಃ ॥ ೬೨ ॥

॥ ಪ್ರಾತಿಥೇಯ್ಯುವಾಚ ॥
ಉತ್ಪದ್ಯತೇ ಯತ್ತು ವಿನಾಶಿ ಸರ್ವಂ
ನ ಶೋಚ್ಯಮಸ್ತೀತಿ ಮನುಷ್ಯಲೋಕೇ ।
ಗೋವಿಪ್ರದೇವಾರ್ಥಮಿಹ ತ್ಯಜಂತಿ
ಪ್ರಾಣಾನ್ಪ್ರಿಯಾನ್ಪುಣ್ಯಭಾಜೋ ಮನುಷ್ಯಾಃ ॥ ೬೩ ॥

ಕೇಳಿ ಆ ಸಾಧ್ವಿಯು ದುಃಖಾತಿಶಯದಿಂದ ಎಚ್ಚರದಪ್ಪಿ ನೆಲಕ್ಕುರುಳಿದಳು. ಆಗ ಅಗ್ನಿಯು ಅವಳನ್ನು ಮೆಲ್ಲಮೆಲ್ಲನೆ ಸಮಾಧಾನಗೊಳಿಸಿದನು.

೬೧. ಆಗ ಪ್ರಾತಿಥೇಯಿಯು ಚೇತರಿಸಿಕೊಂಡೆದ್ದು—ದೇವತೆಗಳನ್ನು ನಾನು ಶಪಿಸಲು ಸಮರ್ಥಳಲ್ಲ. ಪತಿವಿಯುಕ್ತಳಾದ ನನಗೆ ಇನ್ನಿಲ್ಲಿ ಕೆಲಸ ವೇನು? ಅಗ್ನಿಪ್ರವೇಶಮಾಡುವೆನು ಎಂದು ನಿಶ್ಚಯಿಸಿದಳು.

೬೨. ಕೋಪವನ್ನೂ ದುಃಖವನ್ನೂ ತಡೆದುಕೊಂಡು ಆ ಸಾಧ್ವಿಯು ತನ್ನ ಪತಿಯ ಧರ್ಮಬುದ್ಧಿಯನ್ನು ಹೀಗೆ ಕೊಂಡಾಡಿದಳು.

೬೩. ಈ ಜಗತ್ತಿನಲ್ಲಿ ಹುಟ್ಟುವ ವಸ್ತುವೆಲ್ಲವೂ ನಾಶವಾಗುವುದು. ಅದಕ್ಕಾಗಿ ಶೋಕಿಸುವುದು ನ್ಯಾಯವಲ್ಲ. ಆದರೆ ಗೋವುಗಳು, ಬ್ರಾಹ್ಮಣರು ದೇವತೆಗಳು, ಇವರಿಗಾಗಿ ಶರೀರವನ್ನು ತ್ಯಜಿಸುವ ಮನುಷ್ಯರು ಪುಣ್ಯವಂತರು.

ಸಂಸಾರಚಕ್ರೇ ಪರಿವರ್ತಮಾನೇ
ದೇಹಂ ಸಮರ್ಥಂ ಧರ್ಮಯುಕ್ತಂ ತ್ವವಾಪ್ಯ ।
ಪ್ರಿಯಾನ್ಪ್ರಾಣಾನ್ದೇವವಿಪ್ರಾರ್ಥಹೇತೋ-
ಸ್ತೇ ವೈ ಧನ್ಯಾಃ ಪ್ರಾಣಿನೋ ಯೇ ತ್ಯಜಂತಿ ॥ ೭೪ ॥

ಪ್ರಾಣಾಃ ಸರ್ವೇಽಸ್ಯಾಪಿ ದೇಹಾನ್ವಿತಸ್ಯ
ಯಾತಾರೋ ವೈ ನಾತ್ರ ಸಂದೇಹಲೇಶಃ ।
ಏವಂ ಜ್ಞಾತ್ವಾ ವಿಪ್ರಗೋದೇವದೀನಾ-
ದ್ಯರ್ಥಂ ಚೈನಾನುತ್ಸೃಜಂತೀಶ್ವರಾಸ್ತೇ ॥ ೭೫ ॥

ನಿವಾರ್ಯಮಾಣೋಽಪಿ ಮಯಾ ಪ್ರಪನ್ನಯಾ
ಚಕಾರ ದೇವಾಸ್ತ್ರಪರಿಗ್ರಹಂ ಸಃ ।
ಮನೋಗತಂ ವೇತ್ತ್ಯಥವಾ ವಿಧಾತುಃ
ಕೋ ಮರ್ತ್ಯಲೋಕಾತಿಗಚೇಷ್ಟಿತಸ್ಯ ॥ ೭೬ ॥

---

೭೪. ನಡೆಯುತ್ತಿರುವ ಈ ಸಂಸಾರಚಕ್ರದಲ್ಲಿ ಶ್ರೇಷ್ಠವಾದ ಶರೀರರವನ್ನು ಪಡೆದಿದ್ದು ಅಂತಹ ಪ್ರಿಯಶರೀರವನ್ನೂ ದೇವಬ್ರಾಹ್ಮಣರ ಕಾರ್ಯಕ್ಕಾಗಿ ತ್ಯಜಿಸುವ ಪುಣ್ಯಾತ್ಮರೇ ಧನ್ಯರು.

೭೫. ಪ್ರಾಣಗಳೂ ಸಹ ಈ ದೇಹದೊಡನೆ ನಾಶವಾಗುವುವು. ಇದರಲ್ಲ ಸಂದೇಹವಿಲ್ಲ. ಹೀಗೆ ತಿಳಿದು ದೇವಬ್ರಾಹ್ಮಣಗೋವುದೀನರ ಸಲುವಾಗಿ ಪ್ರಾಣಗಳನ್ನು ಬಿಡುವವರು ಮಹಾಜ್ಞಾನಿಗಳು.

೭೬. ಈ ತತ್ವವನ್ನು ತಿಳಿದಿದ್ದರಿಂದಲೇ ಆ ನನ್ನ ಪತಿಯು ನಾನು ತಡೆದರೂ ದೇವತೆಗಳ ಅಸ್ತ್ರಗಳನ್ನು ತೆಗೆದುಕೊಂಡನು. ಅಥವಾ ನಾನಾಲೀಲೆಗಳನ್ನು ಪ್ರದರ್ಶಿಸುವ ವಿಧಿಯ ಅಂತರಂಗವನ್ನು ಬಲ್ಲವರಾರು?

॥ ಬ್ರಹ್ಮೋವಾಚ ॥

ಇತ್ಯೇವಮುಕ್ತ್ವಾ ಪೂಜ್ಯ ಚಾಗ್ನೀನ್ಯಥಾವ-
ದ್ಭರ್ತುಸ್ತ್ವಚಾಲೋಮಭಿಃ ಸಾ ವಿವೇಶ ।
ಗರ್ಭಸ್ಥಿತಂ ಬಾಲಕಂ ಪ್ರಾತಿಥೇಯೀ
ಕುಕ್ಷಿಂ ವಿದಾರ್ಯಾಥ ಕರೇ ಗೃಹೀತ್ವಾ ॥ ೬೭ ॥

ನತ್ವಾ ಚ ಗಂಗಾಂ ಭುವಮಾಶ್ರಮಂ ಚ
ವನಸ್ಪತೀನೋಷಧೀರಾಶ್ರಮಸ್ಥಾನ್ ॥ ೬೮ ॥

॥ ಪ್ರಾತಿಥೇಯ್ಯುವಾಚ ॥

ಪಿತ್ರಾ ಹೀನೋ ಬಂಧುಭಿರ್ಗೋತ್ರಜೈಶ್ಚ
ಮಾತ್ರಾ ಹೀನೋ ಬಾಲಕಃ ಸರ್ವ ಏವ ।
ರಕ್ಷಂತು ಸರ್ವೇಽಪಿ ಚ ಭೂತಸಂಘಾ-
ಸ್ತಥೌಷಧ್ಯೋ ಬಾಲಕಂ ಲೋಕಪಾಲಾಃ ॥ ೬೯ ॥

೬೭-೬೮. ಹೀಗೆ ಹೇಳಿ ಪ್ರಾತಿಥೇಯಿಯಾದೇವಿಯು ಅಗ್ನಿಯನ್ನು ವಿಧಿವತ್ತಾಗಿ ಪೂಜಿಸಿ ಅಲ್ಲಿ ಬಿದ್ದಿದ್ದ ಪತಿಯ ಚರ್ಮಕೂದಲುಗಳನ್ನು ಸಂಗ್ರಹಿಸಿದಳು. ನಂತರ ಗರ್ಭಿಣಿಯಾದ ಅವಳು ಹೊಟ್ಟೆಯನ್ನು ಬಗೆದುಕೊಂಡು ಗರ್ಭದಲ್ಲಿದ್ದ ಶಿಶುವನ್ನು ಹೊರತೆಗೆದು ಕೈಯಲ್ಲಿ ಹಿಡಿದುಕೊಂಡು ಗೌತಮೀನದಿಯನ್ನೂ ಆ ಭೂಮಿಯನ್ನೂ ಆಶ್ರಮವನ್ನೂ ಆಶ್ರಮದ ವನಸ್ಪತಿಗಳನ್ನೂ ಓಷಧಿಗಳೂನ್ನ ನಮಸ್ಕರಿಸಿ ಇಂತು ನುಡಿದಳು.

೬೯. ಈ ಬಾಲಕನಿಗೆ ತಂದೆಯಿಲ್ಲ, ಬಂಧುಗಳಿಲ್ಲ, ಜ್ಞಾತಿಗಳಿಲ್ಲ, ತಾಯಿಯೂ ಇಲ್ಲ. ತಬ್ಬಲಿಯಾದೀ ಬಾಲಕನನ್ನು ಪ್ರಾಣಿಗಳೆಲ್ಲರೂ ಓಷಧಿಗಳೂ, ಲೋಕಪಾಲಕರೂ ರಕ್ಷಿಸಲಿ.

ಯೇ ಬಾಲಕಂ ಮಾತೃಪಿತೃಪ್ರಹೀಣಂ
ಸನಿರ್ನಿರ್ಲೇಪಂ ಸ್ವತನುಪ್ರರೂಢೈಃ ।
ಪಶ್ಯಂತಿ ರಕ್ಷಂತಿ ತ ಏವ ಸೂನಂ
ಬ್ರಹ್ಮಾದಿಕಾನಾಮಪಿ ವಂದನೀಯಾಃ ॥ ೭೦ ॥

॥ ಬ್ರಹ್ಮೋವಾಚ ॥

ಇತ್ಯುಕ್ತ್ವಾ ಚಾತ್ಯಜದ್ಬಾಲಂ ಭರ್ತೃಚಿತ್ತಪರಾಯಣಾ ।
ಪಿಪ್ಪಲಾನಾಂ ಸಮೀಪೇ ತು ನ್ಯಸ್ಯ ಬಾಲಂ ನಮಸ್ಯ ಚ ॥ ೭೧ ॥

ಅಗ್ನಿಂ ಪ್ರದಕ್ಷಿಣೀಕೃತ್ಯ ಯಜ್ಞಪಾತ್ರಸಮನ್ವಿತಾ ।
ವಿವೇಶಾಗ್ನಿಂ ಪ್ರಾತಿಥೇಯೀ ಭರ್ತ್ರಾ ಸಹ ದಿವಂ ಯಯೌ ॥ ೭೨ ॥

ರುರುದುಶ್ಚಾಶ್ರಮಸ್ಥಾ ಯೇ ವೃಕ್ಷಾಶ್ಚ ವನವಾಸಿನಃ ।
ಪುತ್ರವತ್ಪೋಷಿತಾ ಯೇನ ಋಷಿಣಾ ಚ ದಧೀಚಿನಾ ॥ ೭೩ ॥

ವಿನಾ ತೇನ ನ ಜೀವಾಮಸ್ತಯಾ ಮಾತ್ರಾ ವಿನಾ ತಥಾ ।
ಮೃಗಾಶ್ಚ ಪಕ್ಷಿಣಃ ಸರ್ವೇ ವೃಕ್ಷಾಃ ಪ್ರೋಚುಃ ಪರಸ್ಪರಂ ॥ ೭೪ ॥

---

೭೦. ತಾಯಿತಂದೆಯಿಲ್ಲದ ತಬ್ಬಲಿ ಬಾಲಕನನ್ನು ತಮ್ಮ ಮಕ್ಕಳಂತೆ ನೋಡುತ್ತಾ ಪೋಷಿಸುವವರು ಬ್ರಹ್ಮ ಮೊದಲಾದವರಿಗೂ ವಂದ್ಯರಾಗುವರು.

೭೧-೭೨. ಹೀಗೆ ಹೇಳಿ ಮಹಾಸಾಧ್ವಿಯಾದಾ ಪ್ರಾತಿಥೇಯೀ ದೇವಿಯು ಬಾಲಕನನ್ನು ಪಿಪ್ಪಲ (ಅಶ್ವತ್ಥ) ವೃಕ್ಷಗಳ ಕೆಳಗಿರಿಸಿ ಅಗ್ನಿಗೆ ಪ್ರದಕ್ಷಿಣೆ ಬಂದು ನಮಸ್ಕರಿಸಿ, ಯಜ್ಞಪಾತ್ರೆಯೊಡನೆ ಅಗ್ನಿಪ್ರವೇಶಮಾಡಿ ಪತಿಯೊಡನೆ ಸ್ವರ್ಗಕ್ಕೆ ತೆರಳಿದಳು.

೭೩. ದಧೀಚಿಮುನಿಯಿಂದ ಮಕ್ಕಳಂತೆ ಪೋಷಿಸಲ್ಪಟ್ಟ ಆಶ್ರಮವೃಕ್ಷಗಳು ಆಗ ಹೀಗೆ ಶೋಕಿಸಿದುವು.

೭೪-೭೫. ತಂದೆತಾಯಿಗಳಂತೆ ನಮ್ಮನ್ನು ಪೋಷಿಸುತ್ತಿದ್ದ ಆ ದಧೀಚಿ ಪ್ರಾತಿಥೇಯಿದೇವಿಯರಿಲ್ಲದೆ ನಾವು ಇನ್ನು ಜೀವಿಸಲಾರೆವು ಎಂದು ಮೃಗಗಳೂ,

॥ ವೃಕ್ಷಾ ಊಚುಃ ॥

ಸ್ವರ್ಗಮಾಸೇದುಷೋಃ ಪಿತ್ರೋಸ್ತದಪತ್ಯೇಷ್ವಕೃತ್ರಿಮಂ ।
ಯೇ ಕುರ್ವಂತ್ಯನಿಶಂ ಸ್ನೇಹಂ ತ ಏವ ಕೃತಿನೋ ನರಾಃ ॥ ೭೫ ॥

ದಧೀಚಿಃ ಪ್ರಾತಿಥೇಯೀ ವಾ ನೀಕ್ಷತೇಽಸ್ಮಾನ್ಯಥಾ ಪುರಾ ।
ತಥಾ ಪಿತಾ ನ ಮಾತಾ ವಾ ಧಿಗಸ್ಮಾನ್ಪಾಪಿನೋ ವಯಂ ॥ ೭೬ ॥

ಅಸ್ಮಾಕಮಪಿ ಸರ್ವೇಷಾಮತಃ ಪ್ರಭೃತಿ ನಿಶ್ಚಿತಂ ।
ಬಾಲೋ ದಧೀಚಿಃ ಪ್ರಾತಿಥೇಯೀ ಬಾಲೋ ಧರ್ಮಃ ಸನಾತನಃ ॥ ೭೭ ॥

॥ ಬ್ರಹ್ಮೋವಾಚ ॥

ಏವಮುಕ್ತ್ವಾ ತದೌಷಧ್ಯೋ ವನಸ್ಪತಿಸಮನ್ವಿತಾಃ ।
ಸೋಮಂ ರಾಜಾನಮಭ್ಯೇತ್ಯ ಯಾಚಿರೇಽಮೃತಮುತ್ತಮಂ ॥ ೭೮ ॥

ಪಕ್ಷಿಗಳೂ, ವೃಕ್ಷಗಳೂ, ಪರಸ್ಪರ ಶೋಕಿಸಿದುವು. ಆಗ ವೃಕ್ಷಗಳು—ತಂದೆ ತಾಯಿಗಳಿಲ್ಲದ ತಬ್ಬಲಿಯಾದ ಬಾಲಕನಲ್ಲಿ ನಿಜವಾದ ಸ್ನೇಹವನ್ನು ಯಾರು ಪ್ರದರ್ಶಿಸುವರೋ ಅವರು ಧನ್ಯರು.

೭೬. ದಧೀಚಿಪ್ರಾತಿಥೇಯಿದೇವಿಯರು ನಮ್ಮನ್ನು ಸಲುಹುತ್ತಿದ್ದಂತೆ ಯಾವ ತಂದೆತಾಯಿಗಳೂ ಸಲುಹಲಾರರು. ಇಂತಹ ಮಾತಾಪಿತೃಗಳನ್ನು ಕಳೆದುಕೊಂಡ ನಾವು ಮಹಾಪಾಪಿಗಳು. ನಮ್ಮ ಜನ್ಮವು ವ್ಯರ್ಥವು.

೭೭. ಇನ್ನು ಮುಂದೆ ನಮೆಲ್ಲರಿಗೂ ಈ ಬಾಲಕನೇ ದಧೀಚಿ ಮುನಿಯು. ಇವನೇ ಪ್ರಾತಿಥೇಯಿದೇವಿಯು. ಇವನೇ ನಮ್ಮ ಧರ್ಮವು ಇವನೇ ಸರ್ವಸ್ವವು.

೭೮. ಎಂದು ಹೇಳಿ ಆ ವೃಕ್ಷಗಳೂ, ಓಷಧಿಗಳೂ, ತಮ್ಮ ರಾಜನಾದ ಚಂದ್ರನಬಳಿಗೆ ಹೋಗಿ ಅಮೃತವನ್ನು ಯಾಚಿಸಿದುವು.

ಸ ಚಾಪಿ ದತ್ತವಾಂಸ್ತೇಭ್ಯಃ ಸೋಽಸೋಽಮೃತಮನುತ್ತಮಂ ।
ದದುರ್ಬಾಲಾಯ ತೇ ಚಾಪಿ ಅಮೃತಂ ಸುರವಲ್ಲಭಂ ॥ ೭೯ ॥

ಸ ತೇನ ತೃಪ್ತೋ ವವೃಧೇ ಶುಕ್ಲಪಕ್ಷೇ ಯಥಾ ಶಶೀ ।
ಪಿಪ್ಪಲೈಃ ಪಾಲಿತೋ ಯಸ್ಮಾತ್ಪಿಪ್ಪಲಾದಃ ಸ ಬಾಲಕಃ ।
ಪ್ರವೃದ್ಧಃ ಪಿಪ್ಪಲಾನೇವಮುವಾಚ ತ್ವತಿವಿಸ್ಮಿತಃ ॥ ೮೦ ॥

॥ ಪಿಪ್ಪಲಾದ ಉವಾಚ ॥

ಮಾನುಷೇಭ್ಯೋ ಮಾನುಷಾಸ್ತು ಜಾಯಂತೇ ಪಕ್ಷಿಭಿಃ ಖಗಾಃ ।
ಬೀಜೇಭ್ಯೋ ವೀರುಧೋ ಲೋಕೇ ವೈಷಮ್ಯಂ ನೈವ ದೃಶ್ಯತೇ ।
ವಾರ್ಕ್ಷಸ್ತ್ವಹಂ ಕಥಂ ಜಾತೋ ಹಸ್ತಪಾದಾದಿಜೀವವಾನ್ ॥ ೮೧ ॥

॥ ಬ್ರಹ್ಮೋವಾಚ ॥

ವೃಕ್ಷಾಸ್ತದ್ವಚನಂ ಶ್ರುತ್ವಾ ಸರ್ವಮೂಚುರ್ಯಥಾಕ್ರಮಂ ।
ದಧೀಚೇರ್ಮರಣಂ ಸಾಧ್ವ್ಯಾಸ್ತಥಾ ಚಾಗ್ನಿಪ್ರವೇಶನಂ ॥ ೮೨ ॥

---

೭೯. ಆ ಚಂದ್ರನು ವನಸ್ಪತಿಗಳಿಗೆ ದೇವತೆಗಳ ಆಹಾರವಾದಾ ಅಮೃತವನ್ನು ಕೊಟ್ಟನು, ಅವು ಆ ಅಮೃತವನ್ನು ದಧೀಚಿ ಕುಮಾರನಿಗೆ ಕೊಟ್ಟುವು.

೮೦-೮೧. ಆ ಅಮೃತದಿಂದ ತೃಪ್ತಿಪಡೆದು ಆ ಬಾಲಕನು ಶುಕ್ಲಪಕ್ಷದ ಚಂದಿರನಂತೆ ದಿನದಿನಕ್ಕೂ ಬೆಳೆಯತೊಡಗಿದನು. ಪಿಪ್ಪಲ (ಅಶ್ವತ್ಥ) ವೃಕ್ಷಗಳಿಂದ ಪಾಲಿಸಲ್ಪಟ್ಟಿದ್ದರಿಂದ ಆ ಬಾಲಕನಿಗೆ ಮುಂದೆ ಪಿಪ್ಪಲಾದನೆಂದು ಹೆಸರಾಯಿತು. ಬೆಳೆದು ವಯಸ್ಕನಾಗಿ ಆ ಪಿಪ್ಪಲಾದನು ಪಿಪ್ಪಲವೃಕ್ಷಗಳನ್ನು ಕುರಿತು ಆಶ್ಚರ್ಯದಿಂದ ಎಲೈ ವನಸ್ಪತಿಗಳೇ, ಮನುಷ್ಯರಿಂದ ಮನುಷ್ಯರು ಜನಿಸುವರು. ಪಕ್ಷಿಗಳಿಂದ ಪಕ್ಷಿಗಳು ಜನಿಸುವುವು. ಬೀಜಗಳಿಂದ ಲತೆಗಳು ಜನಿಸುವುವು. ಈ ಉತ್ಪತ್ತಿಕ್ರಮದಲ್ಲಿ ಎಲ್ಲಿಯೂ ವ್ಯತ್ಯಾಸ ಕಂಡುಬಂದಿಲ್ಲ. ಹೀಗಿರಲು ಕೈಕಾಲುಗಳುಳ್ಳ ಮನುಷ್ಯನಾದ ನಾನು ವೃಕ್ಷಗಳಿಂದ ಜನಿಸಿದ ಬಗೆ ಹೇಗೆ? ಎಂದು ಕೇಳಲು,

೮೨. ವೃಕ್ಷಗಳು ಆ ಮಾತನ್ನು ಕೇಳಿ, ಕ್ರಮವಾಗಿ ದಧೀಚಿಯ

ಅಸ್ಥ್ನಾಂ ಸಂಹರಣಂ ದೇವೈರೇತತ್ಸರ್ವಂ ಸವಿಸ್ತರಂ ।
ಶ್ರುತ್ವಾ ದುಃಖಸಮಾವಿಷ್ಟೋ ನಿಪಪಾತ ತದಾ ಭುವಿ ॥ ೮೩ ॥

ಆಶ್ವಾಸಿತಃ ಪುನರ್ವೃಕ್ಷೈರ್ವಾಕ್ಯೈರ್ಧರ್ಮಾರ್ಥಸಂಹಿತೈಃ ।
ಆಶ್ವಸ್ತಃ ಸ ಪುನಃ ಪ್ರಾಹ ತದೌಷಧಿವನಸ್ಪತೀನ್ ॥ ೮೪ ॥

॥ ಪಿಪ್ಪಲಾದ ಉವಾಚ ॥

ಪಿತೃಹಂತ್ವಾನ್ಹನಿಷ್ಯೇಽಹಂ ನಾನ್ಯಥಾ ಜೀವಿತುಂ ಕ್ಷಮಃ ।
ಪಿತುರ್ಮಿತ್ರಾಣಿ ಶತ್ರೂಂಶ್ಚ ತಥಾ ಪುತ್ರೋಽನುವರ್ತತೇ ॥ ೮೫ ॥

ಸ ಏವ ಪುತ್ರೋ ಯೋಽನ್ಯಸ್ತು ಪುತ್ರರೂಪೋ ರಿಪುಃ ಸ್ಮೃತಃ ।
ವದಂತಿ ಪಿತೃಮಿತ್ರಾಣಿ ತಾರಯಂತ್ಯಹಿತಾನಪಿ ॥ ೮೬ ॥

ಮರಣ, ದೇವತೆಗಳು ದಧೀಚಿಯ ಅಸ್ಥಿಯನ್ನು ಸಂಗ್ರಹಿಸಿದುದು, ಸಾಧ್ವಿಯಾದ ಪ್ರಾತಿಥೇಯಿಯ ಅಗ್ನಿಪ್ರವೇಶ, ಮೊದಲಾದುದನ್ನು ವಿಸ್ತಾರವಾಗಿ ಹೇಳಿದುವು.

೮೩-೮೪. ಆ ಸಮಾಚಾರವನ್ನು ಕೇಳಿ ಪಿಪ್ಪಲಾದನು ದುಃಖದಿಂದ ನೆಲಕ್ಕುರುಳಿದನು. ಆಗ ಅವನನ್ನು ಓಷಧಿವನಸ್ಪತಿಗಳು ನೀತಿವಾಕ್ಯಗಳಿಂದ ಸಮಾಧಾನಗೊಳಿಸಿದುವು. ಸಮಾಧಾನಗೊಂಡು,

೮೫-೮೬. ನನ್ನ ತಾಯಿತಂದೆಗಳನ್ನು ಸಂಹರಿಸಿದ ಶತ್ರುಗಳು [ದೇವತೆಗಳ]ನ್ನು ನಾನು ಸಂಹರಿಸುವೆನು, ಇಲ್ಲದಿದ್ದರೆ ಜೀವಿಸಲಾರೆನು. ಪುತ್ರನು ತಂದೆಯ ಮಿತ್ರನನ್ನು ಮಿತ್ರನಂತೆಯೂ, ಶತ್ರುವನ್ನು ಶತ್ರುವಿನಂತೆಯೂ ಅನುಸರಿಸಬೇಕು. ಹಾಗೆ ಅನುಸರಿಸದವನು ಪುತ್ರನಲ್ಲ. ಪಿತನ ಶತ್ರುವವನು ಎಂದು ತಿಳಿದವರು ಹೇಳುವರು ಎಂದನು.

॥ ಬ್ರಹ್ಮೋವಾಚ ॥

ವೃಕ್ಷಾಸ್ತಂ ಬಾಲಮಾದಾಯ ಸೋಮಾಂತಿಕಮುಥಾಯಯುಃ ।
ಬಾಲವಾಕ್ಯಂ ತು ತೇ ವೃಕ್ಷಾಃ ಸೋಮಾಯಾಥ ನ್ಯವೇದಯನ್ ।
ಶ್ರುತ್ವಾ ಸೋಮೋಽಪಿ ತಂ ಬಾಲಂ ಪಿಪ್ಪಲಾದಮುಭಾಷತ ॥ ೮೭ ॥

॥ ಸೋಮ ಉವಾಚ ॥

ಗೃಹಾಣ ವಿದ್ಯಾಂ ವಿಧಿವತ್ಸಮಗ್ರಾಂ
ತಪಃಸಮೃದ್ಧಿಂ ಚ ಶುಭಾಂ ಚ ವಾಚಂ ।
ಶೌರ್ಯಂ ಚ ರೂಪಂ ಚ ಬಲಂ ಚ ಬುದ್ಧಿಂ
ಸಂಪ್ರಾಪ್ಸ್ಯಸೇ ಪುತ್ರ ಮದಾಜ್ಞಯಾ ತ್ವಂ ॥ ೮೮ ॥

॥ ಬ್ರಹ್ಮೋವಾಚ ॥

ಪಿಪ್ಪಲಾದಸ್ತಮಪ್ಯಾಹ ಓಷಧೀಶಂ ವಿನೀತವತ್ ॥ ೮೯ ॥

॥ ಪಿಪ್ಪಲಾದ ಉವಾಚ ॥

ಸರ್ವಮೇತದ್ವೃಥಾ ಮನ್ಯೇ ಪಿತೃಹಂತೃವಿನಿಷ್ಕೃತಿಂ ।
ನ ಕರೋಮ್ಯತ್ರ ಯಾವಚ್ಚ ತಸ್ಮಾತ್ತತ್ಪ್ರಥಮಂ ವದ ॥ ೯೦ ॥

೮೭–೮೮. ಆಮೇಲೆ ಪಿಪ್ಪಲವೃಕ್ಷಗಳು ಆ ಬಾಲಕ ಪಿಪ್ಪಲಾದನನ್ನು ಚಂದ್ರನಲ್ಲಿಗೆ ಕರೆದುಕೊಂಡು ಹೋದುವು. ಬಾಲಕನಾಡಿದ ಮಾತನ್ನು ಚಂದ್ರನಿಗೆ ತಿಳಿಸಿದುವು. ಚಂದ್ರನು ಆ ಮಾತನ್ನು ಕೇಳಿ ಬಾಲಕ ಪಿಪ್ಪಲಾದನನ್ನು ಕುರಿತು, ಎಲೈ ಕುಮಾರ, ಸಂಪೂರ್ಣವಾಗಿ ವಿದ್ಯೆಯನ್ನೂ, ತಪಸ್ಸನ್ನೂ, ಉತ್ತಮ ವಾಕ್ಯವನ್ನೂ ನಿನಗೆ ಅನುಗ್ರಹಿಸಿರುವೆನು, ಇವನ್ನು ಸ್ವೀಕರಿಸು. ನನ್ನ ಅನುಗ್ರಹದಿಂದ ನೀನು ಶೌರ್ಯವನ್ನೂ, ರೂಪವನ್ನೂ, ಬಲವನ್ನೂ, ಪ್ರಭೆಯನ್ನೂ ಪಡೆಯುವೆ ಎಂದನು.

೮೯-೯೦. ಆಗ ಪಿಪ್ಪಲಾದನು ಚಂದ್ರನನ್ನು ಕುರಿತು ವಿನಯದಿಂದ ಓ ಚಂದ್ರದೇವ, ನೀನು ಅನುಗ್ರಹಿಸುವುದೆಲ್ಲವೂ ಈಗ ವ್ಯರ್ಥ. ಮೊದಲು ನಾನು ನನ್ನ ತಂದೆಯನ್ನು ಸಂಹರಿಸಿದವರ ಸೇಡನ್ನು ತೀರಿಸಿಕೊಳ್ಳಬೇಕಾಗಿದೆ, ಅದಕ್ಕೆ ತಕ್ಕ ಉಪಾಯವನ್ನು ಹೇಳು.

ಯಸ್ಮಿನ್ದೇಶೇ ಯತ್ರ ಕಾಲೇ ಯಸ್ಮಿನ್ದೇವೇ ಚ ಮಂತ್ರಕೇ ।
ಯತ್ರ ತೀರ್ಥೇ ಚ ಸಿಧ್ಯೇತ ಮತ್ಸಂಕಲ್ಪಃ ಸುರೋತ್ತಮ ॥ ೯೧ ॥

॥ ಬ್ರಹ್ಮೋವಾಚ ॥

ಚಂದ್ರಃ ಪ್ರಾಹ ಚಿರಂ ಧ್ಯಾತ್ವಾ ಭುಕ್ತಿರ್ವಾ ಮುಕ್ತಿರೇವ ವಾ ।
ಸರ್ವಂ ಮಹೇಶ್ವರಾದ್ದೇವಾಜ್ಜಾಯತೇ ನಾತ್ರ ಸಂಶಯಃ ॥ ೯೨ ॥

ಸ ಸೋಮಂ ಪುನರಪ್ಯಾಹ ಕಥಂ ದ್ರಕ್ಷ್ಯೇ ಮಹೇಶ್ವರಂ ।
ಬಾಲೋಽಹಂ ಬಾಲಬುದ್ಧಿಶ್ಚ ನ ಸಾಮರ್ಥ್ಯಂ ತಪಸ್ತಥಾ ॥ ೯೩ ॥

॥ ಚಂದ್ರ ಉವಾಚ ॥

ಗೌತಮೀಂ ಗಚ್ಛ ಭದ್ರ ತ್ವಂ ಸ್ತುಹಿ ಚಕ್ರೇಶ್ವರಂ ಹರಂ ।
ಪ್ರಸನ್ನಸ್ತು ತವೇಶಾನೋ ಹ್ಯಲ್ಪಾಯಾಸೇನ ವತ್ಸಕ ॥ ೯೪ ॥

---

೯೧. ಆ ನನ್ನ ಸಂಕಲ್ಪವು ಯಾವ ತೀರ್ಥದೇಶದಲ್ಲಿ ಸಿದ್ಧಿಸಬಹುದು? ಯಾವಕಾಲದಲ್ಲಿ ಯಾವ ಮಂತ್ರದಿಂದ ಯಾವ ದೇವನನ್ನು ಆರಾಧಿಸಬೇಕು? ಅದನ್ನು ಹೇಳು ಎನಲು,

೯೨. ಆಗ ಚಂದ್ರನು ಬಹಳ ಹೊತ್ತು ಆಲೋಚಿಸಿ ಭೋಗವಾಗಲೀ ಮೋಕ್ಷವಾಗಲೀ ಎಲ್ಲವೂ ಮಹೇಶ್ವರನಿಂದಲೇ ಲಭಿಸುವುವು. ಇದರಲ್ಲಿ ಸಂಶಯ ವಿಲ್ಲ ಎಂದು ಹೇಳಿದನು.

೯೩. ಆಗ ಪುನಃ ಪಿಪ್ಪಲಾದನು ಚಂದ್ರನೊಡನೆ ನಾನು ಶಿವನನ್ನು ನೋಡುವ ಬಗೆ ಹೇಗೆ? ನಾನು ಯಾವ ತಿಳುವಳಿಕೆಯೂ ತಿಳಿಯದ ಬಾಲ ಕನು. ನನಗೆ ಸಾಮರ್ಥ್ಯವೂ, ತಪಸ್ಸೂ ಯಾವುದೂ ಇಲ್ಲ ಎಂದನು.

೯೪. ಅದಕ್ಕೆ ಚಂದ್ರನು—ಎಲೈ ಕುಮಾರ, ಈಗ ನೀನು ಗೌತಮೀ ನದಿಯ ತೀರಕ್ಕೆ ಹೋಗು. ಅಲ್ಲಿ ಶಿವನು ಚಕ್ರೇಶ್ವರನೆಂಬ ಹೆಸರಿನಿಂದ ನೆಲಸಿರು ವನು. ಅವನನ್ನು ಭಕ್ತಿಯಿಂದ ಸ್ತುತಿಸು. ಆ ತೀರ್ಥಕ್ಷೇತ್ರದಲ್ಲಿ ಶಿವನು ಹೆಚ್ಚು ಶ್ರಮವಿಲ್ಲದೆ ನಿನಗೆ ಪ್ರತ್ಯಕ್ಷನಾಗುವನು. ಕರುಣಾಮೂರ್ತಿಯಾದ ಆ ದೇವನು ನಿನಗೆ ವರವನ್ನನುಗ್ರಹಿಸುವನು.

ಪ್ರೀತೋ ಭವೇನ್ಮಹಾದೇವಃ ಸಾಕ್ಷಾತ್ಕಾರುಣಿಕಃ ಶಿವಃ ।
ಆಸ್ತೇ ಸಾಕ್ಷಾತ್ಕೃತಃ ಶಂಭುರ್ವಿಷ್ಣುನಾ ಪ್ರಭವಿಷ್ಣುನಾ ॥ ೯೫ ॥

ವರಂ ಚ ದತ್ತವಾನ್ವಿಷ್ಣೋಶ್ಚಕ್ರಂ ಚ ತ್ರಿದಶಾರ್ಚಿತಂ ।
ಗಚ್ಛ ತತ್ರ ಮಹಾಬುದ್ಧೇ ದಂಡಕೇ ಗೌತಮೀಂ ನದೀಂ ॥ ೯೬ ॥

ಚಕ್ರೇಶ್ವರಂ ನಾಮ ತೀರ್ಥಂ ಜಾನಂತ್ಯೋಷಧಯಸ್ತು ತತ್ ।
ತಂ ಗತ್ವಾ ಸ್ತುಹಿ ದೇವೇಶಂ ಸರ್ವಭಾವೇನ ಶಂಕರಂ ।
ಸ ತೇ ಪ್ರೀತಮನಾಸ್ತಾತ ಸರ್ವಾನ್ಕಾಮಾನ್ಪ್ರದಾಸ್ಯತಿ ॥ ೯೭ ॥

॥ ಬ್ರಹ್ಮೋವಾಚ ॥

ತದ್ರಾಜವಚನಾದ್ಬ್ರಹ್ಮನ್ಪಿಪ್ಪಲಾದೋ ಮಹಾಮುನಿಃ ।
ಆಜಗಾಮ ಜಗನ್ನಾಥೋ ಯತ್ರ ರುದ್ರಃ ಸ ಚಕ್ರದಃ ॥ ೯೮ ॥

---

೯೫. ಆ ಕ್ಷೇತ್ರದಲ್ಲಿ ಮಹಾವಿಷ್ಣುವೂ ಶಿವನನ್ನು ಆರಾಧಿಸಿರುವನು. ಆ ಮಹಾದೇವನು ಸಂತುಷ್ಟನಾಗಿ ಆ ಹರಿಗೆ ವರವನ್ನೂ ಸುದರ್ಶನವೆಂಬ ಚಕ್ರವನ್ನೂ ಅನುಗ್ರಹಿಸಿದನು.

೯೬. ಎಲೈ ಬುದ್ಧಿಶಾಲಿಯಾದ ಪಿಪ್ಪಲಾದನೇ, ದಂಡಕಾರಣ್ಯದಲ್ಲಿ ಹರಿಯುವ ಗೌತಮೀನದಿಗೆ ಹೋಗು. ಅಲ್ಲಿ ಚಕ್ರೇಶ್ವರತೀರ್ಥವಿರುವುದು. ಆ ಸ್ಥಳವನ್ನು ಈ ಓಷಧಿಗಳೂ, ವನಸ್ಪತಿಗಳೂ ತಿಳಿದಿರುವುವು.

೯೭. ಆ ತೀರ್ಥದಲ್ಲಿ ಮಹಾದೇವನನ್ನು ಅನನ್ಯಭಕ್ತಿಯಿಂದ ಸ್ತುತಿಸು. ಆ ದೇವನು ಸುಪ್ರೀತನಾಗಿ ನಿನ್ನ ಇಷ್ಟಾರ್ಥಗಳೆಲ್ಲವನ್ನೂ ಅನುಗ್ರಹಿಸುವನು ಎಂದನು.

೯೮. ಚಂದ್ರನ ಮಾತಿನಂತೆ ಪಿಪ್ಪಲಾದಮುನಿಯು ಚಕ್ರೇಶ್ವರನು ನೆಲಸಿರುವ ತೀರ್ಥಕ್ಷೇತ್ರಕ್ಕೆ ಬಂದನು. ಆ ಬಾಲಕ ಪಿಪ್ಪಲಾದನನ್ನು ಕರುಣೆಯಿಂದ ಪಿಪ್ಪಲವೃಕ್ಷಗಳು ಚಕ್ರೇಶ್ವರತೀರ್ಥದವರೆಗೆ ತಂದು ಬಿಟ್ಟು ತಮ್ಮಾಶ್ರಮಗಳಿಗೆ ತೆರಳಿದವು.

ತಂ ಬಾಲಂ ಕೃಪಯಾವಿಷ್ಟಾಃ ಪಿಪ್ಪಲಾಃ ಸ್ವಾಶ್ರಮಾನ್ಯಯುಃ ।
ಗೋದಾವರ್ಯಾಂ ತತಃ ಸ್ನಾತ್ವಾ ನತ್ವಾ ತ್ರಿಭುವನೇಶ್ವರಂ ।
ತುಷ್ಟಾವ ಸರ್ವಭಾವೇನ ಪಿಪ್ಪಲಾದಃ ಶಿವಂ ಶುಚಿಃ ॥ ೯೯ ॥

॥ ಪಿಪ್ಪಲಾದ ಉವಾಚ ॥

ಸರ್ವಾಣಿ ಕರ್ಮಾಣಿ ವಿಹಾಯ ಧೀರಾ-
ಸ್ತ್ಯಕ್ತೈಷಣಾ ನಿರ್ಜಿತಚಿತ್ತವಾತಾಃ ।
ಯಂ ಯಾಂತಿ ಮುಕ್ತ್ಯೈ ಶರಣಂ ಪ್ರಯತ್ನಾ-
ತ್ತಮಾದಿದೇವಂ ಪ್ರಣಮಾಮಿ ಶಂಭುಂ ॥ ೧೦೦ ॥

ಯಃ ಸರ್ವಸಾಕ್ಷೀ ಸಕಲಾಂತರಾತ್ಮಾ
ಸರ್ವೇಶ್ವರಃ ಸರ್ವಕಲಾನಿಧಾನಂ ।
ವಿಜ್ಞಾಯ ಮಚ್ಚಿತ್ತಗತಂ ಸಮಸ್ತಂ
ಸ ಮೇ ಸ್ಮರಾರಿಃ ಕರುಣಾಂ ಕರೋತು ॥ ೧೦೧ ॥

---

೯೯. ಆಮೇಲೆ ಪಿಪ್ಪಲಾದನು ಗೌತಮೀನದಿಯಲ್ಲಿ ಸ್ನಾನಮಾಡಿ ಪರಿಶುದ್ಧನಾಗಿ ಪರಮೇಶ್ವರನಾದ ಚಕ್ರೇಶ್ವರನನ್ನು ಅನನ್ಯಭಕ್ತಿಯಿಂದ ಸ್ತುತಿಸಿದನು—

೧೦೦. ಮಹಾಜ್ಞಾನಿಗಳು ಕರ್ಮಗಳೆಲ್ಲವನ್ನೂ ಬಿಟ್ಟು ಜಿತೇಂದ್ರಿಯರಾಗಿಯೂ ವಿರಕ್ತರಾಗಿಯೂ ಮುಕ್ತಿಯನ್ನು ಪಡೆಯಲು ಯಾವ ದೇವನನ್ನು ಶರಣುಹೊಂದುವರೋ ಆ ಮಹಾದೇವನನ್ನು ಭಕ್ತಿಯಿಂದ ನಮಸ್ಕರಿಸುವೆನು.

೧೦೧. ಓ ಮದನಾರಿ, ನೀನು ಸರ್ವಾಂತರ್ಯಾಮಿಯು. ಪರಮೇಶ್ವರನು. ಅರವತ್ತುನಾಲ್ಕುಕಲೆಗಳಿಗೂ ಆಶ್ರಯನಾದ ಜಗದ್ಗುರುವು ನೀನು. ಸರ್ವಜ್ಞನು. ಇಂತಹ ನೀನು ನನ್ನ ಇಚ್ಛೆಯನ್ನು ತಿಳಿದು ಅನುಗ್ರಹಿಸು.

ದಿಗೀಶ್ವರಾಙ್ಘ್ರಿತ್ಯ ಸುರಾರ್ಚಿತಸ್ಯ
ಕೈಲಾಸಮಾಂದೋಲಯತಃ ಪುರಾರೇಃ ।
ಅಂಗುಷ್ಠಕೃತ್ಯೈವ ರಸಾತಲಾದಧೋ-
ಗತಸ್ಯ ತಸ್ಯೈವ ದಶಾನನಸ್ಯ ॥ ೧೦೨ ॥

ಆಲೂನಕಾಯಸ್ಯ ಗಿರಂ ನಿಶಮ್ಯ
ವಿಹಸ್ಯ ದೇವ್ಯಾ ಸಹ ದತ್ತಮಿಷ್ಟಂ ।
ತಸ್ಮೈ ಪ್ರಸನ್ನಃ ಕುಪಿತೋಽಪಿ ತದ್ವ-
ದಯುಕ್ತದಾತಾಸಿ ಮಹೇಶ್ವರ ತ್ವಂ ॥ ೧೦೩ ॥

ಸೌತ್ರಾಮಣೇರ್ಮೃದ್ಧಿಮಧಃ ಸ ಚಕ್ರೇ
ಯೋಽರ್ಚಾಂ ಹರೌ ನಿತ್ಯಮತೀವ ಕೃತ್ವಾ ।
ಬಾಣಃ ಪ್ರಶಸ್ಯಃ ಕೃತವಾನುಚ್ಚಪೂಜಾಂ
ರಮ್ಯಾಂ ಮನೋಜ್ಞಾಂ ಶಶಿಖಂಡಮೌಲೇಃ ॥ ೧೦೪ ॥

---

೧೦೨. ಹಿಂದೆ ದಿಕ್ಪಾಲಕರನ್ನೇ ಜಯಿಸಿದ ಮಹಾ ವೀರನಾದ ರಾವಣನು ನಿನ್ನ ವಾಸಸ್ಥಾನವಾದ ಕೈಲಾಸವನ್ನು ಮದದಿಂದ ಹಿಡಿದಲುಗಾಡಿಸತೊಡಗಿದನು. ಆಗ ನೀನು ಕೇವಲ ಒಂದು ಬಲಗಾಲಿನ ಹೆಬ್ಬೆಟ್ಟನ್ನು ಅದುಮಲು ಆ ದೈತ್ಯೇಂದ್ರನು ಪಾತಾಳಕ್ಕೆ ಇಳಿದುಹೋದನು.

೧೦೩. ಶರೀರವೆಲ್ಲವೂ ಜರ್ಝರಿತವಾಗಿ ದೈನ್ಯದಿಂದ ನಿನ್ನನ್ನು ಪ್ರಾರ್ಥಿಸಿದನು. ಪಾರ್ವತೀದೇವಿಯೂ ನಿನ್ನ ದೀನನಾದ ಭಕ್ತನನ್ನು ಮನ್ನಿಸು ಎಂದು ಪ್ರಾರ್ಥಿಸಿದಳು. ರಾವಣನಲ್ಲಿ ಕೋಪಗೊಂಡಿದ್ದರೂ ನೀನು ಆಗ ಸಮಾಧಾನಗೊಂಡು ಪ್ರಸನ್ನನಾಗಿ ಆ ದುಷ್ಟದೈತ್ಯನಿಗೂ ವರವನ್ನನುಗ್ರಹಿಸಿದ ಕರುಣಾಮಯನಲ್ಲವೇ ?

೧೦೪. ಓ ಪರಮೇಶ್ವರ, ಬಾಣಾಸುರನು ಚಂದ್ರಶೇಖರನಾದ ನಿನ್ನನ್ನು ನಿತ್ಯವೂ ಭಕ್ತಿಯಿಂದ ಅರ್ಚಿಸಿ ಧನ್ಯನಾಗಿ ಇಂದ್ರನಿಗೂ ಲಭಿಸದಂತಹ ನಿನ್ನ ಪಾರ್ಷದಗಣಪದವಿಯನ್ನು ಪಡೆದು ವಿಹರಿಸುತ್ತಿರುವನು.

ಜಿತ್ವಾ ರಿಪೂನ್ದೇವಗಣಾನ್ಪ್ರಪೂಜ್ಯ
ಗುರುಂ ನಮಸ್ಕರ್ತುಮಗಾದ್ವಿಶಾಖಃ ।
ಚುಕೋಪ ದೃಷ್ಟ್ವಾ ಗಣನಾಥಮೂಢ-
ಮಂಕೇ ತಮಾರೋಪ್ಯ ಜಹಾಸ ಸೋಮಃ ॥ ೧೦೫ ॥

ಈಶಾಂಕರೂಢೋಽಪಿ ಶಿಶುಸ್ವಭಾವಾ-
ನ್ನ ಮಾತುರಂಕಂ ಪ್ರಮುಮೋಚ ಬಾಲಃ ।
ಕ್ರುದ್ಧಂ ಸುತಂ ಬೋಧಿತುಮಪ್ಯಶಕ್ತ-
ಸ್ತತೋಽರ್ಧನಾರಿತ್ವಮವಾಪ ಸೋಮಃ ॥ ೧೦೬ ॥

॥ ಬ್ರಹ್ಮೋವಾಚ ॥

ತತಃ ಸ್ವಯಂಭೂಃ ಸುಪ್ರೀತಃ ಪಿಪ್ಪಲಾದಮಭಾಷತ ॥ ೧೦೭ ॥

॥ ಶಿವ ಉವಾಚ ॥

ವರಂ ವರಯ ಭದ್ರಂ ತೇ ಪಿಪ್ಪಲಾದ ಯಥೇಪ್ಸಿತಂ ॥ ೧೦೮ ॥

---

೧೦೫. ನಿನ್ನ ಪ್ರಿಯಪುತ್ರನಾದ ಷಣ್ಮುಖನು ತಾರಕ ಮೊದಲಾದ ಅಸುರರನ್ನು ಸಂಹರಿಸಿ ತಂದೆಯಾದ ನಿನ್ನನ್ನು ನಮಸ್ಕರಿಸಲು ಬಂದನು. ಆಗ ನಿನ್ನ ತೊಡೆಯಮೇಲೆ ಗಣೇಶ್ವರನು ಕುಳಿತಿದ್ದನು. ಅದನ್ನು ನೋಡಿ ಕುಮಾರ ಸ್ವಾಮಿಗೆ ಸಿಟ್ಟುಬಂದಿತು. ಆಗ ನೀನು ಪ್ರೀತಿಯಿಂದ ನಕ್ಕು ಆ ಕುಮಾರ ಸ್ವಾಮಿಯನ್ನೂ ನಿನ್ನ ಮತ್ತೊಂದು ತೊಡೆಯಲ್ಲಿ ಕುಳ್ಳಿರಿಸಿಕೊಂಡೆ.

೧೦೬. ಹಾಗೆ ನಿನ್ನ ತೊಡೆಯಲ್ಲಿ ಕುಳಿತಿದ್ದರೂ ಕುಮಾರಸ್ವಾಮಿಯು ಶಿಶುಸ್ವಭಾವದಿಂದ ಮಾತೆಯ ತೊಡೆಯಲ್ಲೇ ಕುಳಿತುಕೊಳ್ಳುವೆನೆಂದು ಹಠ ಹಿಡಿದನು. ಏನುಮಾಡಿದರೂ ಸಮಾಧಾನಹೊಂದಲಿಲ್ಲ. ಆಗ ನೀನು ಆ ಪ್ರಿಯ ಕುವರನನ್ನು ಸಮಾಧಾನಗೊಳಿಸಲು ಅರ್ಧನಾರೀಶ್ವರನಾದೆ. ಎಡಭಾಗದಲ್ಲಿ ಮಾತೆಯ ರೂಪವನ್ನು ನೋಡಿ ಷಣ್ಮುಖನು ಸಮಾಧಾನಗೊಂಡನು ಎಂದು ಸ್ತೋತ್ರಮಾಡಿದನು.

೧೦೭-೧೦೮. ಪಿಪ್ಪಲಾದನ ಆ ಸ್ತುತಿಗೆ ಪ್ರಸನ್ನನಾಗಿ ಶಿವನು ಎಲೈ ಪಿಪ್ಪಲಾದ, ನಿನಗೆ ಮಂಗಳವಾಗಲಿ. ಬೇಕಾದ ವರವನ್ನು ಕೇಳು ಎನ್ನಲು,

॥ ಪಿಪ್ಪಲಾದ ಉವಾಚ ॥

ಹತೋ ದೇವೈರ್ಮಹಾದೇವ ಪಿತಾ ಮಮ ಮಹಾಯಶಾಃ ।
ಅದಾಂಭಿಕಃ ಸತ್ಯವಾದೀ ತಥಾ ಮಾತಾ ಪತಿವ್ರತಾ ॥ ೧೮೯ ॥

ದೇವೇಭ್ಯಶ್ಚ ತಯೋರ್ನಾಶಂ ಶ್ರುತ್ವಾ ನಾಥ ಸವಿಸ್ತರಂ ।
ದುಃಖಶೋಕಸಮಾವಿಷ್ಟೋ ನಾಹಂ ಜೀವಿತುಮುತ್ಸಹೇ ॥ ೧೧೦ ॥

ತಸ್ಮಾನ್ಮೇ ದೇಹಿ ಸಾಮರ್ಥ್ಯಂ ನಾಶಯೇಯಂ ಸುರಾನ್ಯಥಾ ।
ಅವಧ್ಯಸೇವ್ಯಸ್ತ್ರೈಲೋಕ್ಯೇ ತ್ವಮೇವ ಶಶಿಶೇಖರ ॥ ೧೧೧ ॥

॥ ಈಶ್ವರ ಉವಾಚ ॥

ತೃತೀಯಂ ನಯನಂ ದ್ರಷ್ಟುಂ ಯದಿ ಶಕ್ನೋಷಿ ಮೇಽನಘ ।
ತತಃ ಸಮರ್ಥೋ ಭವಿತಾ ದೇವಾಂಶ್ಛೇದಯಿತುಂ ಭವಾನ್ ॥ ೧೧೨ ॥

---

೧೦೯. ಅದಕ್ಕೆ ಪಿಪ್ಪಲಾದನು, ಓ ಮಹಾದೇವ ಜಿತೇಂದ್ರಿಯನೂ ನಿಸ್ಪೃಹನೂ ಸತ್ಯವಾದಿಯೂ ಆದ ನನ್ನ ತಂದೆಯನ್ನೂ, ಪತಿವ್ರತೆಯಾದ ನನ್ನ ತಾಯಿಯನ್ನೂ ದೇವತೆಗಳು ಸ್ವಾರ್ಥಕ್ಕಾಗಿ ಸಂಹರಿಸಿರುವರು.

೧೧೦. ದೇವತೆಗಳ ದೆಸೆಯಿಂದಲೇ ನನ್ನ ಮಾತಾಪಿತೃಗಳು ಹತರಾದುದನ್ನು ಕೇಳಿ ನನಗೆ ತುಂಬಾ ದುಃಖಕೋಪಗಳುಂಟಾಗಿವೆ. ಸೇಡು ತೀರಿಸಿಕೊಳ್ಳದೇ ನಾನು ಜೀವಿಸಲಾರೆನು.

೧೧೧. ಆದುದರಿಂದ ದೇವತೆಗಳನ್ನು ಸಂಹರಿಸುವ ಶಕ್ತಿಯನ್ನು ನನಗನುಗ್ರಹಿಸು. ಓ ಪರಶಿವ, ನಿರಪರಾಧಿಗಳಿಗೆ ನಿನ್ನ ಹೊರತು ಇನ್ನಾರೂ ರಕ್ಷಕರಿಲ್ಲ ಎಂದನು.

೧೧೨. ಈಶ್ವರನು ಹೇಳಿದನು—ಎಲೈ ಪಿಪ್ಪಲಾದ, ನೀನು ನನ್ನ ಮೂರನೇ ಕಣ್ಣನ್ನು ನೋಡಲು ಶಕ್ತಿಯುಳ್ಳವನಾದರೆ ದೇವತೆಗಳನ್ನು ಸಂಹರಿಸಬಲ್ಲೆ ಎನ್ನಲು,

॥ ಬ್ರಹ್ಮೋವಾಚ ॥

ತತೋ ದ್ರಷ್ಟುಂ ಮನಶ್ಚಕ್ರೇ ತೃತೀಯಂ ಲೋಚನಂ ವಿಭೋಃ ।
ನ ಶಶಾಕ ತದೋವಾಚ ನ ಶಕ್ತೋಽಸ್ಮೀತಿ ಶಂಕರಂ ॥ ೧೧೩ ॥

॥ ಈಶ್ವರ ಉವಾಚ ॥

ಕಿಂಚಿತ್ಕುರು ತಪೋ ಬಾಲ ಯದಾ ದ್ರಕ್ಷ್ಯಸಿ ಲೋಚನಂ ।
ತೃತೀಯಂ ತ್ವಂ ತದಾಭೀಷ್ಟಂ ಪ್ರಾಪ್ಸ್ಯಸೇ ನಾತ್ರ ಸಂಶಯಃ ॥ ೧೧೪ ॥

॥ ಬ್ರಹ್ಮೋವಾಚ ॥

ಏತಚ್ಛ್ರುತ್ವೇಶಾನವಾಕ್ಯಂ ತಪಸೇ ಕೃತನಿಶ್ಚಯಃ ।
ದಧೀಚಿಸೂನುರ್ಗೌತಮ್ಯಾಂ ತತ್ರೈವ ಬಹುಲಾಃ ಸಮಾಃ ॥ ೧೧೫ ॥

ಶಿವಧ್ಯಾನೈಕನಿರತೋ ಬಾಲೋಽಪಿ ಬಲವಾನಿವ ।
ಪ್ರತ್ಯಹಂ ಪ್ರಾತರುತ್ಥಾಯ ಸ್ನಾತ್ವಾ ನತ್ವಾ ಗುರೂನ್ಕ್ರಮಾತ್ ॥ ೧೧೬ ॥

---

೧೧೩. ಆಗ ಪಿಪ್ಪಲಾದನು ಶಿವನ ಮೂರನೇ ಕಣ್ಣನ್ನು ನೋಡಲು ಪ್ರಯತ್ನಪಟ್ಟನು. ಆದರೆ ಅವನಿಂದ ನೋಡಲಾಗಲಿಲ್ಲ. ನನ್ನಿಂದ ಸಾಧ್ಯವಿಲ್ಲ ಎಂದು ಶಂಕರನಿಗೆ ಹೇಳಿದನು.

೧೧೪. ಈಶ್ವರನಿಂತೆಂದನು—ಎಲೆ ಬಾಲಕ, ಇನ್ನೂ ತಪಸ್ಸನ್ನು ಮಾಡು. ನನ್ನ ತೃತೀಯಚಕ್ಷುಸ್ಸನ್ನು ನೋಡಲು ಶಕ್ತಿಯುಳ್ಳವನಾದರೆ ನಿನ್ನ ಇಷ್ಟಾರ್ಥವು ಸಿದ್ಧಿಸುವುದು, ಇದರಲ್ಲಿ ಸಂಶಯವಿಲ್ಲ ಎಂದನು.

೧೧೫. ಶಿವನ ಆ ಮಾತನ್ನು ಕೇಳಿ ದಧೀಚಿಪುತ್ರನಾದ ಪಿಪ್ಪಲಾದನು ಗೌತಮೀತೀರದಲ್ಲಿ ತಪಸ್ಸನ್ನು ಮಾಡಬೇಕೆಂದು ನಿಶ್ಚಯಿಸಿ ಬಾಲಕನಾದರೂ ಬಲಿಷ್ಠನಂತೆ ಶಿವನನ್ನು ಅನನ್ಯಭಕ್ತಿಯಿಂದ ಧ್ಯಾನಿಸುತ್ತಾ ಬಹುವರ್ಷಗಳವರೆಗೆ ತಪಸ್ಸನ್ನಾಚರಿಸಿದನು.

೧೧೬–೧೧೭. ಪ್ರತಿದಿನವೂ ಆ ಪಿಪ್ಪಲಾದನು ಗೌತಮೀನದಿಯಲ್ಲಿ ಸ್ನಾನಮಾಡಿ ಗುರುಗಳನ್ನು ನಮಸ್ಕರಿಸಿ ಕೈಕಟ್ಟಿಕೊಂಡು ಸ್ವಸ್ತಿಕಾಸನದಲ್ಲಿ ಕುಳಿತು ಶಿವಧ್ಯಾನವನ್ನು ಮಾಡುತ್ತಿದ್ದನು. ಸುಷುಮ್ನಾನಾಡಿನಲ್ಲಿ ಮನಸ್ಸನ್ನು

ಸುಖಾಸೀನೋ ಮನಃ ಕೃತ್ವಾ ಸುಷುಮ್ನಾಯಾಮನನ್ಯಧೀಃ ।
ಹಸ್ತಸ್ವಸ್ತಿಕಮಾರೋಪ್ಯ ನಾಭೌ ವಿಸ್ಮೃತಸಂಸ್ಮೃತಿಃ ॥ ೧೧೭ ॥

ಸ್ಥಾನಾತ್ಸ್ಥಾನಾಂತರೋತ್ಕರ್ಷಾನ್ವಿದಧ್ಯೌ ಶಾಂಭವಂ ಮಹಃ ।
ದದರ್ಶ ಚಕ್ಷುರ್ದೇವಸ್ಯ ತೃತೀಯಂ ಪಿಪ್ಪಲಾಶನಃ ।
ಕೃತಾಂಜಲಿಪುಟೋ ಭೂತ್ವಾ ವಿನೀತ ಇದಮಬ್ರವೀತ್ ॥ ೧೧೮ ॥

॥ ಪಿಪ್ಪಲಾದ ಉವಾಚ ॥

ಶಂಭುನಾ ದೇವದೇವೇನ ವರೋ ದತ್ತಃ ಪುರಾ ಮಮ ।
ತಾರ್ತೀಯಚಕ್ಷುಷೋ ಜ್ಯೋತಿರ್ಯದಾ ಪಶ್ಯಸಿ ತತ್‌ಕ್ಷಣಾತ್ ॥ ೧೧೯ ॥

ಸರ್ವಂ ತೇ ಪ್ರಾರ್ಥಿತಂ ಸಿಧ್ಯೇದಿತ್ಯಾಹ ತ್ರಿದಶೇಶ್ವರಃ ।
ತಸ್ಮಾದ್ರಿಪುವಿನಾಶಾಯ ಹೇತುಭೂತಾಂ ಪ್ರಯಚ್ಛ ಮೇ ॥ ೧೨೦ ॥

ತದೈವ ಪಿಪ್ಪಲಾಃ ಪ್ರೋಚುರ್ವಡವಾಪಿ ಮಹಾದ್ಯುತೇ ।
ಮಾತಾ ತವ ಪ್ರಾತಿಥೇಯೀ ವದಂತ್ಯೇವಂ ದಿವಂ ಗತಾ ॥ ೧೨೧ ॥

ನಿಲ್ಲಿಸಿ ಹೊರಗಿನ ದೃಷ್ಟಿಯಿಲ್ಲದೇ ಅಂತಃಕರಣದೃಷ್ಟಿಯಿಂದ ಒಂದಕ್ಕಿಂತೊಂದು ಉತ್ಕೃಷ್ಟವಾದ ಸ್ವರೂಪವನ್ನು ನೋಡುತ್ತಾ ಕೊನೆಯಲ್ಲಿ ಸರ್ವಶ್ರೇಷ್ಠವಾದ ಶಿವನ ತೇಜೋಮಯವಾದ ಸ್ವರೂಪವನ್ನು ನೋಡಿದನು.

೧೧೮. ಅಲ್ಲಿಯೇ ಮಹಾದೇವನ ಮೂರನೆಯ ಕಣ್ಣನ್ನೂ ನೋಡಿದನು ಆಗಲವನು ಅಂಜಲಿಬದ್ಧನಾಗಿ ವಿನಯದಿಂದ ಇಂತೆಂದನು.

೧೧೯-೧೨೦. ದೇವದೇವನಾದ ಶಂಕರನು ನನಗೆ ತನ್ನ ಮೂರನೆಯ ಕಣ್ಣಿನ ತೇಜಸ್ಸನ್ನು ನೋಡಿದ ಕೂಡಲೇ ನನ್ನ ಇಷ್ಟಾರ್ಥಗಳೆಲ್ಲವೂ ಸಿದ್ಧಿಸುವುವು ಎಂದು ವರವನ್ನನುಗ್ರಹಿಸಿರುವನು, ಆದುದರಿಂದ ಓ ಶಿವನೇ, ಶತ್ರುಗಳನ್ನು ನಾಶಪಡಿಸುವ ಶಕ್ತಿಯನ್ನು ನನಗನುಗ್ರಹಿಸು ಎಂದು ಪ್ರಾರ್ಥಿಸಿದನು.

೧೨೧-೧೨೨. ಆಗ ಪಿಪ್ಪಲವೃಕ್ಷಗಳು ಎಲೈ ಕುಮಾರ, ನಿನ್ನ ತಾಯಿಯಾದ ಪ್ರಾತಿಥೇಯೀದೇವಿಯು ಸ್ವರ್ಗಕ್ಕೆ ಹೋಗುವಾಗ–ತಮಗೆ ಅನಿಷ್ಟವಾಗು

ಪರಾಭಿದ್ರೋಹನಿರತಾ ವಿಸ್ಮೃತಾತ್ಮಹಿತಾ ನರಾಃ ।
ಇತಸ್ತತೋ ಭ್ರಾಂತಚಿತ್ತಾಃ ಪತಂತಿ ನರಕಾವಟೇ ॥ ೧೨೨ ॥

ತನ್ಮಾತೃವಚನಂ ಶ್ರುತ್ವಾ ಕುಪಿತಃ ಪಿಪ್ಪಲಾಶನಃ ।
ಅಭಿಮಾನೇ ಜ್ವಲತ್ಯಂತಃ ಸಾಧುವಾದೋ ನಿರರ್ಥಕಃ ॥ ೧೨೩ ॥

ದೇಹಿ ದೇಹೀತಿ ತಂ ಪ್ರಾಹ ಕೃತ್ಯಾ ನೇತ್ರವಿನಿರ್ಗತಾ ।
ವಡವೇತಿ ಸ್ಮರನ್ವಿಪ್ರಃ ಕೃತ್ಯಾಪಿ ವಡವಾಕೃತಿಃ ॥ ೧೨೪ ॥

ಸರ್ವಸತ್ತ್ವವಿನಾಶಾಯ ಪ್ರಭೂತಾನಲಗರ್ಭಿಣೀ ।
ಗಭಸ್ತಿನೀ ಬಾಲಗರ್ಭಾ ಯಾ ಮಾತಾ ಪಿಪ್ಪಲಾಶಿನಃ ॥ ೧೨೫ ॥

ತದ್ಧ್ಯಾನಯೋಗಾತ್ತು ಜಾತಾ ಕೃತ್ಯಾ ಸಾನಲಗರ್ಭಿಣೀ ।
ಉತ್ಪನ್ನಾ ಸಾ ಮಹಾರೌದ್ರಾ ಮೃತ್ಯುಜಿಹ್ವೇವ ಭೀಷಣಾ ॥ ೧೨೬ ॥

ವುದನ್ನೂ ಯೋಚಿಸದೆ ಪರರಿಗೆ ಕೇಡುಕನ್ನು ಮಾಡಲು ತೊಡಗುವ ನರರು ಭ್ರಾಂತರಾಗಿ ಮೋಹದಲ್ಲಿ ಸಿಲುಕಿ ಕೊನೆಗೆ ನರಕದಲ್ಲಿ ಬೀಳುವರು ಎಂದು ಹೇಳಿರುವಳು ಎಂದವು.

೧೨೩. ಪಿಪ್ಪಲಗಳು ಹೇಳಿದ ಆ ಮಾತೃವಾಕ್ಯವನ್ನು ಕೇಳಿ ಪಿಪ್ಪಲಾದನಿಗೆ ಬಹುಕೋಪಬಂದಿತು. ಹೃದಯದಲ್ಲಿ ಅಭಿಮಾನವು ಕುದಿಯುತ್ತಿರುವಾಗ ಹಿತವಾಕ್ಯವು ವ್ಯರ್ಥವಾಗುವುದಷ್ಟೆ ?

೧೨೪. ಆಗ ಹರನ ತೃತೀಯ ನೇತ್ರದಿಂದ ಅಗ್ನಿರೂಪವಾದ ವಡವೆಯು ಹುಟ್ಟಿ ನನಗಾಹಾರವನ್ನು ಕೊಡು ಎಂದು ಹೇಳುತ್ತಾ ಹೊರಟಿತು. ಅದರ ಹೆಸರು ಕೃತ್ಯೆಯೆಂದು.

೧೨೫. ಪಿಪ್ಪಲಾದನ ತಾಯಿಯಾದ ಪ್ರಾತಿಥೇಯಿಯೇ ಸಕಲ ಪ್ರಾಣಿಗಳನ್ನೂ ನಾಶಮಾಡುವಂತಹ ವಡವಾರೂಪ [ಕೃತ್ಯಾರೂಪ] ಳಾಗಿ ಜನಿಸಿದಳು.

೧೨೬. ದೇವತೆಗಳ ಸೇಡನ್ನು ತೀರಿಸಿಕೊಳ್ಳುವ ಉದ್ದೇಶಪೂರ್ವಕವಾದ ಧ್ಯಾನದಿಂದ ಜನಿಸಿದ ಆ ಕೃತ್ಯೆಯು ಮೃತ್ಯುವಿನ ನಾಲಿಗೆಯಂತೆ ಮಹಾ ಭಯಂಕರವಾಗಿದ್ದಿತು.

ಅವೋಚತ್ಪಿಪ್ಪಲಾದಂ ತಂ ಕಿಂ ಕೃತ್ಯಂ ಮೇ ವದಸ್ವ ತತ್ ।
ಪಿಪ್ಪಲಾದೋಽಪಿ ತಾಂ ಪ್ರಾಹ ದೇವಾನ್ಖಾದ ರಿಪೂನ್ಮಮ ॥ ೧೨೭ ॥

ಜಗ್ರಾಹ ಸಾ ತಥೇತ್ಯುಕ್ತ್ವಾ ಪಿಪ್ಪಲಾದಂ ಪುರಸ್ಥಿತಂ ।
ಸ ಪ್ರಾಹ ಕಿಮಿದಂ ಕೃತ್ಯೇ ಸಾ ಚಾಪ್ಯಾಹ ತ್ವಯೋದಿತಂ ॥ ೧೨೮ ॥

ದೇವೈಶ್ಚ ನಿರ್ಮಿತಂ ದೇಹಂ ತತೋ ಭೀತಃ ಶಿವಂ ಯಯೌ ।
ತುಷ್ಟಾವ ದೇವಂ ಸ ಮುನಿಃ ಕೃತ್ಯಾಂ ಪ್ರಾಹ ತದಾ ಶಿವಃ ॥ ೧೨೯ ॥

॥ ಶಿವ ಉವಾಚ ॥

ಯೋಜನಾಂತಃಸ್ಥಿತಾನ್ ಜೀವಾನ್ನ ಗೃಹಾಣ ಮದಾಜ್ಞಯಾ ।
ತಸ್ಮಾದ್ಯಾಹಿ ತತೋ ದೂರಂ ಕೃತ್ಯೇ ಕೃತ್ಯಂ ತತಃ ಕುರು ॥ ೧೩೦ ॥

---

೧೨೭. ಆ ಕೃತ್ಯೆಯು ಪಿಪ್ಪಲಾದನಿಗೆ ನಾನು ಮಾಡಬೇಕಾದ ಕಾರ್ಯವೇನು? ಎಂದು ಪ್ರಶ್ನಿಸಲು, ಪಿಪ್ಪಲಾದನು ನನ್ನ ವೈರಿಗಳಾದ ದೇವತೆಗಳನ್ನು ಸಂಹರಿಸು ಎಂದನು.

೧೨೮. ಆಗ ಆ ಕೃತ್ಯೆಯು ಎದುರಿನಲ್ಲಿದ್ದ ಪಿಪ್ಪಲಾದನನ್ನೇ ಹಿಡಿಯಿತು. ಅದನ್ನು ನೋಡಿ ಪಿಪ್ಪಲಾದನು ಇದೇನು? ಎಂದನು. ಅದಕ್ಕೆ ಆ ಕೃತ್ಯೆಯು, ನೀನೇ ದೇವತೆಗಳನ್ನು ತಿನ್ನು ಎಂದಿರುವೆ. ನಿನ್ನ ಶರೀರವೂ ದೇವನಿರ್ಮಿತವಾದುದು. ಆದುದರಿಂದ ನಿನ್ನನ್ನೂ ಹಿಡಿದು ತಿನ್ನುವೆನು ಎಂದಿತು. ಆಗ ಪಿಪ್ಪಲಾದನು ಹೆದರಿ ಶಿವನ ಬಳಿಗೆ ಹೋಗಿ,

೧೨೯. ಈ ಘೋರಕೃತ್ಯೆಯಿಂದ ನನ್ನನ್ನು ರಕ್ಷಿಸು ಎಂದು ಶಿವನನ್ನು ಪ್ರಾರ್ಥಿಸಲು ಶಿವನು ಕೃತ್ಯೆಯನ್ನು ಕುರಿತು,

೧೩೦. ಎಲೌ ಕೃತ್ಯೆಯೇ, ಇಲ್ಲಿಂದ ಒಂದು ಯೋಜನದೊಳಗಿರುವ ಪ್ರಾಣಿಗಳನ್ನು ತಿನ್ನಲಾಗದು. ಹೋಗು. ಒಂದು ಯೋಜನದ ಮುಂದೆ ನಿನ್ನ ಕಾರ್ಯವನ್ನು ನಡೆಯಿಸು, ಎಂದಪ್ಪಣೆಮಾಡಿದನು.

॥ ಬ್ರಹ್ಮೋವಾಚ ॥

ತೀರ್ಥಾತ್ತು ಪಿಪ್ಪಲಾತ್ಪೂರ್ವಂ ಯಾವದ್ಯೋಜನಸಂಖ್ಯಯಾ ।
ಸ್ಥಾಪಿತಷ್ಟದ್ವಡವಾರೂಪಾ ಕೃತ್ಯಾ ಸಾ ಋಷಿನಿರ್ಮಿತಾ ॥ ೧೩೧ ॥

ತಸ್ಯಾಂ ಜಾತೋ ಮಹಾನಗ್ನಿರ್ಲೋಕಸಂಹರಣಕ್ಷಮಃ ।
ತಂ ದೃಷ್ಟ್ವಾ ವಿಬುಧಾಃ ಸರ್ವೇ ತ್ರಸ್ತಾಃ ಶಂಭುಮುಪಾಗಮನ್ ॥ ೧೩೨ ॥

ಚಕ್ರೇಶ್ವರಂ ಪಿಪ್ಪಲೇಶಂ ಪಿಪ್ಪಲಾದೇನ ತೋಷಿತಂ ।
ಸ್ತುವಂತೋ ಭೀತಮನಸಃ ಶಂಭುಮೂಚುರ್ದಿವೌಕಸಃ ॥ ೧೩೩ ॥

॥ ದೇವಾ ಊಚುಃ ॥

ರಕ್ಷಸ್ವ ಶಂಭೋ ಕೃತ್ಯಾಸ್ಮಾನ್ಬಾಧತೇ ತದ್ಭವಾನಲಃ ।
ಶರಣಂ ಭವ ಸರ್ವೇಶ ಭೀತಾನಾಮಭಯಪ್ರದ ॥ ೧೩೪ ॥

ಸರ್ವತಃ ಪರಿಭೂತಾನಾಮಾರ್ತಾನಾಂ ಶ್ರಾಂತಚೇತಸಾಂ ।
ಸರ್ವೇಷಾಮೇವ ಜಂತೂನಾಂ ತ್ವಮೇವ ಶರಣಂ ಶಿವ ॥ ೧೩೫ ॥

---

೧೩೧. ಶಿವನ ಅಪ್ಪಣೆಯಂತೆ ಪಿಪ್ಪಲತೀರ್ಥದಿಂದ ಒಂದು ಯೋಜನದ ಮುಂದಕ್ಕೆ ವಡವಾರೂಪವಾದ ಆ ಕೃತ್ಯೆಯು ನೆಲಸಿತು.

೧೩೨. ಆ ಕೃತ್ಯೆಯಿಂದ ಲೋಕವನ್ನೇ ಸುಡುವಂತಹ ಅಗ್ನಿಯು ಭುಗಿಲೆಂದು ಎದ್ದು ಉರಿಯತೊಡಗಿತು. ಆ ಅಗ್ನಿಯನ್ನು ನೋಡಿ ದೇವತೆಗಳೆಲ್ಲರೂ ಹೆದರಿ ಶಂಕರನ ಬಳಿಗೆ ಓಡಿಬಂದರು.

೧೩೩. ಪಿಪ್ಪಲಾದನಿಂದ ಸೇವಿಸಲ್ಪಟ್ಟು ಪಿಪ್ಪಲೇಶ್ವರನೆಂದು ಹೆಸರು ಪಡೆದ ಚಕ್ರೇಶ್ವರನನ್ನು ಆ ದೇವತೆಗಳು ಭಕ್ತಿಯಿಂದ ಸ್ತುತಿಸಿ, ಪ್ರಾರ್ಥಿಸಿದರು.

೧೩೪. ಓ ಶಂಕರ, ರಕ್ಷಿಸು. ಕೃತ್ಯೆಯಿಂದ ಜನಿಸಿದ ಅಗ್ನಿಯು ನಮ್ಮನ್ನು ಪೀಡಿಸುತ್ತಿರುವುದು. ನಮ್ಮನ್ನು ಕಾಪಾಡು. ಭೀತರಾದ ನಮಗೆ ಅಭಯವನ್ನು ನೀಡು.

೧೩೫. ತಾಪತ್ರಯಗಳಿಗೆ ಸಿಲುಕಿದವರಿಗೂ ದುಃಖದಿಂದ ಬಳಲಿದವರಿಗೂ ದೀನರಿಗೂ ನೀನೇ ಶರಣು.

ಋಷಿಣಾಭ್ಯರ್ಥಿತಾ ಕೃತ್ಯಾ ತ್ವಚ್ಚಕ್ಷುರ್ವಹ್ನಿನಿರ್ಗತಾ ।
ಸಾ ಜಿಘಾಂಸತಿ ಲೋಕಾಂಸ್ತ್ರೀಂಸ್ತ್ವಂ ನಸ್ತ್ರಾತಾ ನ ಚೇತರಃ ॥ ೧೩೬ ॥

॥ ಬ್ರಹ್ಮೋವಾಚ ॥

ತಾನಬ್ರವೀಜ್ಜಗನ್ನಾಥೋ ಯೋಜನಾಂತರ್ನಿವಾಸಿನಃ ।
ನ ಬಾಧತೇ ತ್ವಸೌ ಕೃತ್ಯಾ ತಸ್ಮಾದ್ಭ್ಯೋಯುಮಹರ್ನಿಶಂ ॥ ೧೩೭ ॥

ಇಶ್ಯೈವಾಸಧ್ವಮುಸುರಾಸ್ತಸ್ಯಾ ವೋ ನ ಭಯಂ ಭವೇತ್ ॥ ೧೩೮ ॥

॥ ಬ್ರಹ್ಮೋವಾಚ ॥

ಪುನರೂಚುಃ ಸುರೇಶಾನಂ ತ್ವಯಾ ದತ್ತಂ ತ್ರಿವಿಷ್ಟಪಂ ।
ತತ್ತ್ಯಕ್ತ್ವಾತ್ರ ಕಥಂ ನಾಥ ವತ್ಸ್ಯಾಮಸ್ತ್ರಿದಶಾರ್ಚಿತ ॥ ೧೩೯ ॥

॥ ಬ್ರಹ್ಮೋವಾಚ ॥

ದೇವಾನಾಂ ವಚನಂ ಶ್ರುತ್ವಾ ಶಿವೋ ವಾಕ್ಯಮಥಾಬ್ರವೀತ್ ॥ ೧೪೦ ॥

---

೧೩೬. ಪಿಪ್ಪಲಾದಮುನಿಯ ಪ್ರಾರ್ಥನೆಯಂತೆ ನಿನ್ನ ಮೂರನೆಯ ಕಣ್ಣಿನಿಂದ ಹೊರಟ ಕೃತ್ಯೆಯು ಮೂರು ಲೋಕಗಳನ್ನೂ ನಾಶಮಾಡುವುದು. ಈ ಕೃತ್ಯೆಯಿಂದ ರಕ್ಷಿಸುವವರು ನಿನ್ನ ಹೊರತು ಇನ್ನಾರೂ ಇಲ್ಲ ಎಂದು ಸ್ತೋತ್ರಮಾಡುತ್ತಿರಲು,

೧೩೭-೧೩೮. ಆ ದೇವತೆಗಳನ್ನು ಕುರಿತು ಶಿವನು ಎಲೈ ದೇವತೆಗಳೇ, ಈ ಪಿಪ್ಪಲೇಶತೀರ್ಥದಿಂದ ಒಂದು ಯೋಜನದ ಒಳಗಿರುವ ಮನುಷ್ಯರನ್ನು ಈ ಕೃತ್ಯೆಯು ಬಾಧಿಸುವುದಿಲ್ಲ. ಆದುದರಿಂದ ನೀವೆಲ್ಲರೂ ಇಲ್ಲಿಯೇ ಸದಾ ವಾಸವಾಗಿರಿ. ಇಲ್ಲಿ ನಿಮಗೆ ಯಾವ ಭಯವೂ ಇಲ್ಲ ಎಂದನು.

೧೩೯-೧೪೨. ಪುನಃ ದೇವತೆಗಳು ಮಹಾದೇವನನ್ನು ಕುರಿತು ಓ ದೇವ, ನೀನೇ ನಮಗೆ ವಾಸಕ್ಕಾಗಿ ಸ್ವರ್ಗವನ್ನು ಕಲ್ಪಿಸಿರುವೆ. ಅದನ್ನು ಬಿಟ್ಟು ನಾವು ಇಲ್ಲಿ ವಾಸಮಾಡುವುದು ಹೇಗೆ? ಎಂದರು. ದೇವತೆಗಳ ಆ ಮಾತನ್ನು ಕೇಳಿ ಶಿವನು ಹೇಳಿದನು—ಜಗಚ್ಚಕ್ಷುವೂ, ಜಗತ್ತೆಲ್ಲವನ್ನೂ ಸಂಚರಿಸುವವನೂ

॥ ಶಿವ ಉವಾಚ ॥

ದೇವೋऽಸೌ ವಿಶ್ವತಶ್ಚಕ್ಷುರ್ಯೋ ದೇವೋ ವಿಶ್ವತೋಮುಖಃ ।
ಯೋ ರಶ್ಮಿಭಿಸ್ತು ಧಮತೇ ನಿತ್ಯಂ ಯೋ ಜನಕೋ ಮತಃ ॥ ೧೪೧ ॥

ಸ ಸೂರ್ಯ ಏಕ ಏವಾತ್ರ ಸಾಕ್ಷಾದ್ರೂಪೇಣ ಸರ್ವದಾ ।
ಸ್ಥಿತಿಂ ಕರೋತು ತನ್ಮೂರ್ತೌ ಭವಿಷ್ಯಂತ್ಯಖಿಲಾಃ ಸ್ಥಿತಾಃ ॥ ೧೪೨ ॥

॥ ಬ್ರಹ್ಮೋವಾಚ ॥

ತಥೇತಿ ಶಂಭುವಚನಾದ್ಪಾರಿಜಾತತರೋಸ್ತದಾ ।
ದೇವಾ ದಿವಾಕರಂ ಚಕ್ರುಸ್ತ್ವಷ್ಟ್ವಾ ಭಾಸ್ಕರಮಬ್ರವೀತ್ ॥ ೧೪೩ ॥

॥ ತ್ವಷ್ಟ್ರೋವಾಚ ॥

ಇಹೈವಾಸ್ಸ್ವ ಜಗತ್ಸ್ವಾಮಿನ್ರಕ್ಷೇಮಾನ್ವಿಬುಧಾನ್ಸ್ವಯಂ ।
ಸ್ವಾಂಶೈಶ್ಚ ವಯಮಪ್ಯತ್ರ ತಿಷ್ಠಾಮಃ ಶಂಭುಸಂನಿಧೌ ॥ ೧೪೪ ॥

ಚಕ್ರೇಶ್ವರಸ್ಯ ಪರಿತೋ ಯಾವದ್ಯೋಜನಸಂಖ್ಯಯಾ ।
ಗಂಗಾಯಾ ಉಭಯಂ ತೀರಮಾಸಾದ್ಯಾಸನ್ಸುರೋತ್ತಮಾಃ ॥ ೧೪೫ ॥

ಕಿರಣಗಳಿಂದ ಮಿಕ್ಕ ತೇಜಸ್ಸುಗಳೆಲ್ಲವನ್ನೂ ತಿರಸ್ಕರಿಸುವವನೂ, ತೇಜೋಮಯನೂ ಆದ ಸೂರ್ಯದೇವನೊಬ್ಬನೇ ಈ ಸ್ಥಳದಲ್ಲಿ ಪ್ರತ್ಯಕ್ಷರೂಪದಿಂದ ಸದಾ ನೆಲಸಿರಲಿ. ಆ ಸೂರ್ಯನ ಮೂರ್ತಿಯಲ್ಲಿ ನೀವೆಲ್ಲರೂ ಅಂಶದಿಂದ ನೆಲಸಿರಿ ಎಂದನು.

೧೪೩. ಶಂಕರನ ಮಾತಿನಂತೆ ದೇವತೆಗಳು ಪಾರಿಜಾತಮರದಿಂದ ಸೂರ್ಯನ ವಿಗ್ರಹವನ್ನು ವಿಶ್ವಕರ್ಮನ ಮೂಲಕ ಮಾಡಿಸಿದರು. ಆಗ ವಿಶ್ವಕರ್ಮನು ಸೂರ್ಯನನ್ನು ಕುರಿತು,

೧೪೪. ಜಗಚ್ಚಕ್ಷುವಾದ ಓ ಸೂರ್ಯನೇ, ನೀನು ಇಲ್ಲಿಯೇ ನೆಲಸಿದ್ದು ಈ ದೇವತೆಗಳೆಲ್ಲರನ್ನೂ ರಕ್ಷಿಸುತ್ತಿರು. ನಾವೂ ಸಹ ಈ ಶಂಕರನ ಸನ್ನಿಧಿಯಲ್ಲಿ ಅಂಶದಿಂದ ನೆಲಸಿರುವೆವು ಎಂದು ಹೇಳಿದನು.

೧೪೫. ಚಕ್ರೇಶ್ವರನ ಸುತ್ತಲೂ ಒಂದು ಯೋಜನದೂರದೊಳಗೆ ಗೌತಮೀನದಿಯ ಎರಡು ತೀರಗಳಲ್ಲೂ ದೇವತೆಗಳು ಅರ್ಧಅಂಗುಲದಪ್ರಮಾಣ ಸ್ಥಳಗಳಲ್ಲಿ ನೆಲಸಿದರು.

ಅಂಗುಲ್ಯರ್ಧಾರ್ಧಮಾತ್ರಂ ತು ಗಂಗಾತೀರಂ ಸಮಾಶ್ರಿತಾಃ ।
ತಿಸ್ರಃ ಕೋಟ್ಯಸ್ತಥಾ ಪಂಚ ಶತಾನಿ ಮುನಿಸತ್ತಮ ।
ತೀರ್ಥಾನಾಂ ತತ್ರ ವ್ಯುಷ್ಟಿಂ ಚ ಕಃ ಶೃಣೋತಿ ಬ್ರವೀತಿ ವಾ ॥ ೧೪೬ ॥

॥ ಬ್ರಹ್ಮೋವಾಚ ॥

ತತಃ ಸುರಗಣಾಃ ಸರ್ವೇ ವಿನೀತಾಃ ಶಿವಮಬ್ರುವನ್ ॥ ೧೪೭ ॥

॥ ದೇವಾ ಊಚುಃ ॥

ಪಿಪ್ಪಲಾದಂ ಸುರೇಶಾನ ಶಮಂ ನಯ ಜಗನ್ಮಯ ॥ ೧೪೮ ॥

॥ ಬ್ರಹ್ಮೋವಾಚ ॥

ಓಮಿತ್ಯುಕ್ತ್ವಾ ಜಗನ್ನಾಥಃ ಪಿಪ್ಪಲಾದಮುವಾಚ ತ ॥ ೧೪೯ ॥

॥ ಶಿವ ಉವಾಚ ॥

ನಾಶಿತೇಷ್ವಪಿ ದೇವೇಷು ಪಿತಾ ತೇ ನಾಗಮಿಷ್ಯತಿ ।
ದತ್ತಾಃ ಪಿತ್ರಾ ತವ ಪ್ರಾಣಾ ದೇವಾನಾಂ ಕಾರ್ಯಸಿದ್ಧಯೇ ॥ ೧೫೦ ॥

---

೧೪೬. ಹಾಗೆ ದೇವತೆಗಳು ನೆಲಸಿದುದರಿಂದ ಆ ಗೌತಮೀತೀರವಲ್ಲಿ ಮೂರುಕೋಟಿ ಐನೂರು ತೀರ್ಥಗಳಾಗಿರುವುವು. ಆ ತೀರ್ಥಗಳ ಭೇದವನ್ನು ವಿಸ್ತರಿಸಿ ಹೇಳಲೂ ಸಾಧ್ಯವಿಲ್ಲ, ಕೇಳಲೂ ಸಾಧ್ಯವಿಲ್ಲ.

೧೪೭. ಆಮೇಲೆ ದೇವತೆಗಳೆಲ್ಲರೂ ಶಿವನನ್ನು ಕುರಿತು ವಿನಯದಿಂದ,

೧೪೮. ಜಗದ್ರೂಪನಾದ ಓ ಪರಮೇಶ್ವರ, ಪಿಪ್ಪಲಾದಮುನಿಯನ್ನು ಸಮಾಧಾನಗೊಳಿಸು. ಅವನು ನಮ್ಮಲ್ಲಿ ತುಂಬಾ ಕೋಪಗೊಂಡಿರುವನು ಎನ್ನಲು,

೧೪೯–೧೫೦. ಅದಕ್ಕೆ ಶಿವನು ಹಾಗೆಯೇ ಆಗಲೆಂದೊಪ್ಪಿ ಪಿಪ್ಪಲಾದನಿಗೆ ಎಲೈ ಪಿಪ್ಪಲಾದ, ದೇವತೆಗಳೆಲ್ಲರನ್ನು ನಾಶಪಡಿಸಿದರೂ ನಿನ್ನ ತಂದೆಯು ಪುನಃ ಬದುಕಿ ಬರಲಾರನು. ದೇವತೆಗಳ ಕಾರ್ಯಸಿದ್ಧಿಗಾಗಿ ನಿನ್ನ ತಂದೆಯು ಮನಃಪೂರ್ವಕವಾಗಿಯೇ ತನ್ನ ಪ್ರಾಣಗಳನ್ನರ್ಪಿಸಿರುವನು.

ದೀನಾರ್ತಕರುಣಾಬಂಧುಃ ಕೋ ಹಿ ತಾದೃಗ್ಭವೇ ಭವೇತ್ ।
ತಥಾ ಯಾತಾ ದಿವಂ ತಾತ ತವ ಮಾತಾ ಪತಿವ್ರತಾ ॥ ೧೫೧ ॥

ಸಮಾ ಕಾಪ್ಯತ್ರ ಮತಯಾ ಲೋಪಾಮುದ್ರಾಪ್ಯರುಂಧತೀ ।
ಯದಸ್ಥಿಭಿಃ ಸುರಾಃ ಸರ್ವೇ ಜಯಿನಃ ಸುಖಿನಃ ಸದಾ ॥ ೧೫೨ ॥

ತೇನಾವಾಪ್ತಂ ಯಶಃ ಸ್ಫೀತಂ ತವ ಮಾತಾಕ್ಷಯಂ ಕೃತಂ ।
ತ್ವಯಾ ಪುತ್ರೇಣ ಸರ್ವತ್ರ ನಾತಃ ಪರತರಂ ಕೃತಂ ॥ ೧೫೩ ॥

ತ್ವತ್ಪ್ರತಾಪಭಯಾತ್ಸ್ವರ್ಗಾಚ್ಚ್ಯುತಾಂಸ್ತ್ವಂ ಪಾತುಮರ್ಹಸಿ ।
ಕಾಂದಿಶೀಕಾಂಸ್ತವ ಭಯಾದಮರಾಂಸ್ತ್ರಾತುಮರ್ಹಸಿ ।
ನಾರ್ತತ್ರಾಣಾದಭ್ಯಧಿಕಂ ಸುಕೃತಂ ಕ್ವಾಪಿ ವಿದ್ಯತೇ ॥ ೧೫೪ ॥

---

೧೫೧. ದಳಿತದುಃಖಿತರಲ್ಲಿ ಕೃಪೆಯುಳ್ಳ ಅಂತಹ (ದಧೀಚಿಯಂತಹ) ಬಂಧುವು ಮತ್ತೊಬ್ಬನಿಲ್ಲ. ಧನ್ಯಾತ್ಮನಾದ ಅವನು ಸ್ವರ್ಗವನ್ನೇರಿರುವನು. ಪತಿವ್ರತೆಯಾದ ನಿನ್ನ ತಾಯಿಯೂ ಸ್ವರ್ಗವನ್ನು ಪಡೆದಿರುವಳು. ಆಕೆಯು ಲೋಪಾಮುದ್ರೆ ಅರುಂಧತಿಯರಿಗೆ ಸಮನಾದ ಪತಿವ್ರತೆಯು.

೧೫೨. ಯಾವನ ಅಸ್ಥಿಯಿಂದ ದೇವತೆಗಳು ಜಯಶಾಲಿಗಳಾಗಿ ಸುಖಿಗಳಾದರೋ ಅ ದಧೀಚಿಮುನಿಗೆ ಮಹಾ ಯಶಸ್ಸು ಪ್ರಾಪ್ತವಾಯಿತು. ಆ ಯಶಸ್ಸನ್ನು ನಿನ್ನ ಮಾತೆಯು ಸ್ಥಿರವಾಗಗೊಳಿಸಿದಳು.

೧೫೩. ಆದರೆ ಅಂತಹ ಧನ್ಯದಂಪತಿಗಳ ಪುತ್ರನಾದ ನೀನು ಯಾವುದನ್ನೂ ಮಾಡಿದಂತಾಗಲಿಲ್ಲ. ನಿನ್ನ ತೇಜಸ್ಸಿಗೆ ಹೆದರಿ ದೇವತೆಗಳು ಸ್ವರ್ಗದಲ್ಲಿರಲಾರದವರಾಗಿರುವರು. ಆ ದೇವತೆಗಳನ್ನು ರಕ್ಷಿಸು.

೧೫೪. ನಿನ್ನ ಭಯದಿಂದ ಹೆದರಿ ಸ್ವರ್ಗದಿಂದ ಓಡಿಬಂದಿರುವ ಈ ಆರ್ತರಾದ ದೇವತೆಗಳನ್ನು ರಕ್ಷಿಸು, ಆರ್ತರನ್ನು ರಕ್ಷಿಸುವುದಕ್ಕಿಂತಲೂ ಮಿಗಿಲಾದ ಪುಣ್ಯವು ಬೇರೆ ಇಲ್ಲ.

ಯಾವದ್ಯಶಃ ಸ್ಫುರತಿ ಚಾರು ಮನುಷ್ಯಲೋಕೇ
ಅಹಾನಿ ತಾವಂತಿ ದಿವಂ ಗತಸ್ಯ ।
ದಿನೇ ದಿನೇ ವರ್ಷಸಂಖ್ಯಾ ಪರಸ್ಮಿಂ-
ಲ್ಲೋಕೇ ವಾಸೋ ಜಾಯತೇ ನಿರ್ವಿಕಾರಃ ॥ ೧೫೫ ॥

ಮೃತಾಸ್ತ ಏವಾತ್ರ ಯಶೋ ನ ಯೇಷಾ-
ಮನ್ಧಾಸ್ತ ಏವ ಶ್ರುತವರ್ಜಿತಾ ಯೇ ।
ಯೇ ದಾನಶೀಲಾ ನ ನಪುಂಸಕಾಸ್ತೇ
ಯೇ ಧರ್ಮಶೀಲಾ ನ ತ ಏವ ಶೋಚ್ಯಾಃ ॥ ೧೫೬ ॥

॥ ಬ್ರಹ್ಮೋವಾಚ ॥

ಭಾಷಿತಂ ದೇವದೇವಸ್ಯ ಶ್ರುತ್ವಾ ಶಾಂತೋಽಭವನ್ಮುನಿಃ ।
ಕೃತಾಂಜಲಿಪುಟೋ ಭೂತ್ವಾ ನತ್ವಾ ನಾಥಮಥಾಬ್ರವೀತ್ ॥ ೧೫೭ ॥

॥ ಪಿಪ್ಪಲಾದ ಉವಾಚ ॥

ವಾಗ್ಭಿರ್ಮನೋಭಿಃ ಕೃತಿಭಿಃ ಕದಾಚಿ-
ನ್ಮಮೋಪಕುರ್ವಂತಿ ಹಿತೇ ರತಾ ಯೇ ।
ತೇಭ್ಯೋ ಹಿತಾರ್ಥಂ ತ್ವಿಹ ಚಾಪರೇಷಾಂ
ಸೋಮಂ ನಮಸ್ಯಾಮಿ ಸುರಾದಿಪೂಜ್ಯಂ ॥ ೧೫೮ ॥

---

೧೫೫. ದಿವಂಗತನಾದ ನರನ ಯಶಸ್ಸು ಮನುಷ್ಯಲೋಕದಲ್ಲಿ ಹರಡಿರುವಷ್ಟು ದಿನ ಅವನು ಸ್ವರ್ಗದಲ್ಲಿರುವನು, ಅಷ್ಟುಕಾಲ ಅಲ್ಲಿ ಸುಖವನ್ನನುಭವಿಸುವನು.

೧೫೬. ಮನುಷ್ಯಲೋಕದಲ್ಲಿ ಯಶಸ್ಸನ್ನು ಸಂಪಾದಿಸದವರು ಬದುಕಿದ್ದರೂ ಸತ್ತಂತೆಯೇ. ಶಾಸ್ತ್ರವನ್ನು ಪರಿಶೀಲಿಸದವರು ಕಣ್ಣಿದ್ದರೂ ಕುರುಡರು. ದಾನಶೀಲರು. ನಪುಂಸಕರಲ್ಲ. ಜಗತ್ತೇ ಅವರನ್ನು ತಂದೆಯಂತೆ ಆದರಿಸುವುದು. ಧರ್ಮನಿಷ್ಠರು ಎಂದಿಗೂ ಹಾಳಾಗುವುದಿಲ್ಲ ಎಂದನು.

೧೫೭. ಮಹಾದೇವನ ಆ ಮಾತನ್ನು ಕೇಳಿ ಪಿಪ್ಪಲಾದನು ಶಾಂತನಾದನು. ಅಂಜಲಿಬದ್ಧನಾಗಿ—

೧೫೮. ನನಗೆ ಮನೋವಾಕ್ಕಾಯಗಳಿಂದ ಉಪಕಾರವನ್ನು ಮಾಡಿದವರಿಗೂ, ಮಾಡದಿದ್ದವರಿಗೂ ಕ್ಷೇಮವಾಗಲೆಂದು ದೇವವಂದ್ಯನಾದ ಶಿವನನ್ನು ನಮಸ್ಕರಿಸುವೆನು.

ಸಂರಕ್ಷಿತೋ ಯೈರಭಿವರ್ಧಿತಶ್ಚ
ಸಮಾನಗೋತ್ರಶ್ಚ ಸಮಾನಧರ್ಮಾ ।
ತೇಷಾಮಭೀಷ್ಟಾನಿ ಶಿವಃ ಕರೋತು
ಬಾಲೇಂದುಮೌಲಿಂ ಪ್ರಣತೋಽಸ್ಮಿ ನಿತ್ಯಂ ॥ ೧೪೯ ॥

ಯೈರಹಂ ವರ್ಧಿತೋ ನಿತ್ಯಂ ಮಾತೃವತ್ಪಿತೃವತ್ಪ್ರಭೋ ।
ತನ್ನಾಮ್ನಾ ಜಾಯತಾಂ ತೀರ್ಥಂ ದೇವದೇವ ಜಗತ್ತ್ರಯೇ ॥ ೧೫೦ ॥

ಯಶಸ್ತು ತೇಷಾಂ ಭವಿತಾ ತೇಭ್ಯೋಽಹಮನೃಣಸ್ತತಃ ।
ಯಾನಿ ಕ್ಷೇತ್ರಾಣಿ ದೇವಾನಾಂ ಯಾನಿ ತೀರ್ಥಾನಿ ಭೂತಲೇ ॥ ೧೫೧ ॥

ತೇಭ್ಯೋ ಯದಿದಮಧಿಕಮನುಮನ್ಯಂತು ದೇವತಾಃ ।
ತತಃ ಕ್ಷಮೋಽಹಂ ದೇವಾನಾಮಪರಾಧಂ ನಿರಂಜನಃ ॥ ೧೫೨ ॥

---

೧೪೯. ನನ್ನನ್ನು ರಕ್ಷಿಸಿದವರಿಗೂ, ಪೋಷಿಸಿದವರಿಗೂ ನನ್ನ ಕುಲದವರಿಗೂ ಸಹ ಶಿವನು ಇಷ್ಟಾರ್ಥಗಳನ್ನು ಕರುಣಿಸಲಿ. ಬಾಲಚಂದ್ರಶೇಖರನಾದ ಮಹಾದೇವನನ್ನು ಸದಾ ಭಕ್ತಿಯಿಂದ ನಮಸ್ಕರಿಸುವೆನು.

೧೫೦. ನನ್ನನ್ನು ತಾಯಿತಂದೆಗಳಂತೆ ಸಲಹಿದ ಪಿಪ್ಪಲವೃಕ್ಷಗಳ ಹೆಸರಿನಿಂದ ಈ ತೀರ್ಥವು ಜಗತ್ತಿನಲ್ಲಿ ಪ್ರಸಿದ್ಧವಾಗಲಿ. ಆ ಪಿಪ್ಪಲಗಳ ಯಶಸ್ಸು ಜಗತ್ತಿನಲ್ಲಿ ಹರಡಲಿ. ಅದರಿಂದ ನಾನು ಪಿಪ್ಪಲಗಳ ವಿಷಯದಲ್ಲಿ ಋಣ ವಿಮೋಚನನಾಗುವೆನು.

೧೫೧-೧೫೨. ಭೂಮಿಯಲ್ಲಿರುವ ಎಲ್ಲಾ ತೀರ್ಥಕ್ಷೇತ್ರಗಳಿಗಿಂತಲೂ ಈ ತೀರ್ಥವು ಸರ್ವಶ್ರೇಷ್ಠವಾಗಲಿ. ಹಾಗೆ ಅನುಗ್ರಹಿಸಿದರೆ ನಾನು ವೈರವನ್ನು ಬಿಟ್ಟು ದೇವತೆಗಳ ಅಪರಾಧವನ್ನು ಮನ್ನಿಸುವೆನು ಎಂದನು.

॥ ಬ್ರಹ್ಮೋವಾಚ ॥

ತತಃ ಸಮುಕ್ಷಂ ಸುರಸಾಕ್ಷರಾಂ ಗಿರಂ
ಸಹಸ್ರಚಕ್ಷುಃ ಪ್ರಮುಖಾಂಸ್ತಥಾಗ್ರತಃ ।
ಉವಾಚ ದೇವಾ ಅಪಿ ಮೇನಿರೇ ವಚೋ
ದಧೀಚಿಪುತ್ರೋದಿತಮಾದರೇಣ ॥ ೧೬೩ ॥

ಬಾಲಸ್ಯ ಬುದ್ಧಿಂ ವಿನಯಂ ಚ ವಿದ್ಯಾಂ
ಶೌರ್ಯಂ ಬಲಂ ಸಾಹಸಂ ಸತ್ಯವಾಚಂ ।
ಪಿತ್ರೋರ್ಭಕ್ತಿಂ ಭಾವಶುದ್ಧಿಂ ವಿದಿತ್ವಾ
ತದಾವಾದೀಚ್ಛಂಕರಃ ಪಿಪ್ಪಲಾದಂ ॥ ೧೬೪ ॥

॥ ಶಂಕರ ಉವಾಚ ॥

ವತ್ಸ ಯದ್ವೈ ಪ್ರಿಯಂ ಕಾಮಂ ಯಚ್ಚಾಪಿ ಸುರವಲ್ಲಭಂ ।
ಪ್ರಾಪ್ಸ್ಯಸೇ ವದ ಕಲ್ಯಾಣಂ ನಾನ್ಯಥಾ ತ್ವಂ ಮನಃ ಕೃಥಾಃ ॥ ೧೬೫ ॥

---

೧೬೩. ಹೀಗೆ ಪಿಪ್ಪಲಾದನು ಸ್ಪಷ್ಟವಾಗಿ ನುಡಿಯಲು ದೇವೇಂದ್ರ ಮೊದಲಾದವರೆಲ್ಲರೂ ಅವನ ಮಾತನ್ನು ಸಂತೋಷದಿಂದ ಒಪ್ಪಿಕೊಂಡರು.

೧೬೪. ಬಾಲಕನಾದ ಪಿಪ್ಪಲಾದನ ಬುದ್ಧಿಯನ್ನೂ, ವಿನಯವನ್ನೂ ವಿದ್ಯೆಯನ್ನೂ, ಶಕ್ತಿಯನ್ನೂ, ಬಲವನ್ನೂ, ಸಾಹಸವನ್ನೂ, ಸತ್ಯವಾಕ್ಕನ್ನೂ ಪಿತೃಭಕ್ತಿಯನ್ನೂ, ಶುದ್ಧಮನಸ್ಕತೆಯನ್ನೂ ನೋಡಿ ಶಂಕರನು,

೧೬೫. ಎಲೈ ಕುಮಾರ, ನಿನಗೆ ಬೇಕಾದ ವರವನ್ನು ಕೇಳು. ದೇವತೆಗಳಿಗೆ ಪ್ರಿಯವಾದಂತಹುದನ್ನೂ ಕೊಡುವೆನು, ಇದರಲ್ಲಿ ಸಂಶಯವಿಲ್ಲ ಎಂದನು.

॥ ಪಿಪ್ಪಲಾದ ಉವಾಚ ॥

ಯೇ ಗಂಗಾಯಾಮಾಪ್ಲುತಾ ಧರ್ಮನಿಷ್ಠಾಃ
ಸಂಪಶ್ಯಂತಿ ತ್ವತ್ಪದಾಬ್ಜಂ ಮಹೇಶ ।
ಸರ್ವಾನ್ಕಾಮಾನಾಪ್ನುವಂತು ಪ್ರಸಹ್ಯ
ದೇಹಾಂತೇ ತೇ ಪದಮಾಯಾಂತು ಶೈವಂ ॥ ೧೬೬ ॥

ತಾತಃ ಪ್ರಾಪ್ತಸ್ತ್ವತ್ಪದಂ ಚಾಂಬಿಕಾ ಮೇ
ನಾಥ ಪ್ರಾಪ್ತಾ ಪಿಪ್ಪಲಶ್ಚಾಮರಾಶ್ಚ ।
ಸುಖಂ ಪ್ರಾಪ್ತಾ ನಾಥನಾಥಂ ವಿಲೋಕ್ಯ
ತ್ವಾಂ ಪಶ್ಯೇಯುಸ್ತ್ವತ್ಪದಂ ತೇ ಪ್ರಯಾಂತು ॥ ೧೬೭ ॥

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಪಿಪ್ಪಲಾದಂ ದೇವದೇವೋ ಮಹೇಶ್ವರಃ ।
ಅಭಿನಂದ್ಯ ಚ ತಂ ದೇವೈಃ ಸಾರ್ಧಂ ವಾಕ್ಯಮಥಾಬ್ರವೀತ್ ॥ ೧೬೮ ॥

---

೧೬೬. ಆದಕ್ಕೆ ಪಿಪ್ಪಲಾದನು ಓ ಶಂಕರ, ಗೌತಮೀನದಿಯಲ್ಲಿ ಸ್ನಾನ ಮಾಡಿ ಇಲ್ಲಿ ನಿನ್ನ ಪಾದಕಮಲಗಳನ್ನು ದರ್ಶನಮಾಡುವ ಧಾರ್ಮಿಕರು ಇಹ ಲೋಕದಲ್ಲಿ ಇಷ್ಟಾರ್ಥಗಳೆಲ್ಲವನ್ನೂ ಪಡೆಯಲಿ. ಪರದಲ್ಲಿ ಶಿವಲೋಕವನ್ನು ಹೊಂದಲಿ.

೧೬೭. ಓ ಪರಮೇಶ್ವರ, ನನ್ನ ಮಾತಾಪಿತೃಗಳು ನಿನ್ನ ಲೋಕವನ್ನು ಪಡೆದಿರುವರು, ನನ್ನನ್ನು ಸಲಹಿದ ಪಿಪ್ಪಲವೃಕ್ಷಗಳು ಚಿರಂಜೀವಿಗಳಾದವು, ನಿನ್ನ ದರ್ಶನವನ್ನು ಮಾಡಿ ದೇವತೆಗಳೂ ಸುಖಿಗಳಾದರು. ಮುಖ್ಯವಾಗಿ ಇಲ್ಲಿ ನಿನ್ನ ದರ್ಶನವನ್ನು ಮಾಡುವವರೆಲ್ಲರೂ ಶಿವಲೋಕವನ್ನು ಪಡೆಯುವಂತಾಗಲಿ. ಈರೀತಿ ವರವನ್ನನುಗ್ರಹಿಸಬೇಕೆಂದು ಬೇಡಿಕೊಂಡನು

೧೬೮. ಹಾಗೆಯೇ ಆಗಲೆಂದು ವರವನ್ನನುಗ್ರಹಿಸಿ ದೇವದೇವನಾದ ಮಹೇಶ್ವರನು ಪಿಪ್ಪಲಾದನನ್ನು ಅಭಿನಂದಿಸಿದನು.

ದೇವಾ ಅಪಿ ಮುದಾ ಯುಕ್ತಾ ನಿರ್ಭಯಾಸ್ತತ್ಕ್ಷತಾದ್ಭಯಾತ್ ।
ಇದಮೂಚುಃ ಸರ್ವ ಏವ ದಾಧೀಚಂ ಶಿವಸಂನಿಧೌ ॥ ೧೬೯ ॥

॥ ದೇವಾ ಊಚುಃ ॥

ಸುರಾಣಾಂ ಯದಭೀಷ್ಟಂ ಚ ತ್ವಯಾ ಕೃತಮಸಂಶಯಂ ।
ಪಾಲಿತಾ ದೇವದೇವಸ್ಯ ಆಜ್ಞಾ ತ್ರೈಲೋಕ್ಯಮಂಡನೀ ॥ ೧೭೦ ॥

ಯಾಚಿತಂ ಚ ತ್ವಯಾ ಪೂರ್ವಂ ಪರಾರ್ಥಂ ನಾತ್ಮನೇ ದ್ವಿಜ ।
ತಸ್ಮಾದನ್ಯತಮಂ ಬ್ರೂಹಿ ಕಿಂಚಿದ್ದಾಸ್ಯಾಮಹೇ ವಯಂ ॥ ೧೭೧ ॥

॥ ಬ್ರಹ್ಮೋವಾಚ ॥

ಪುನಃ ಪುನಸ್ತದೇವೋಚುಃ ಸುರಸಂಘಾ ದ್ವಿಜೋತ್ತಮಂ ।
ಕೃತಾಂಜಲಿಪುಟಃ ಪೂರ್ವಂ ನತ್ವಾ ಶಂಭುಸುರಾನಿದಂ ।
ಉವಾಚ ಪಿಪ್ಪಲಾದಶ್ಚ ಉಮಾಂ ನತ್ವಾ ಚ ಪಿಪ್ಪಲಾನ್ ॥ ೧೭೨ ॥

---

೧೬೯. ಪಿಪ್ಪಲಾದನ ಭಯವು ಹೋದುದರಿಂದ ಸಂತಸಗೊಂಡ ದೇವತೆಗಳು ಶಿವನೆದುರಿಗೆ ಆ ಪಿಪ್ಪಲಾದನನ್ನು ಕುರಿತು ಇಂತೆಂದರು.

೧೭೦. ಎಲೈ ಪಿಪ್ಪಲಾದ, ನೀನು ದೇವತೆಗಳ ಭಯವನ್ನು ಹೋಗಲಾಡಿಸಿ ಉಪಕಾರವನ್ನು ಮಾಡಿರುವೆ. ದೇವದೇವನಾದ ಮಹೇಶ್ವರನ ಅಮೋಘವಾದ ಆಜ್ಞೆಯನ್ನೂ ನಡೆಸಿರುವೆ.

೧೭೧. ಶಿವನಿಂದ ನೀನು ಪರಾರ್ಥಕ್ಕಾಗಿ ವರಗಳನ್ನು ಕೇಳಿರುವೆ, ನಿನಗಾಗಿ ಯಾವ ವರವನ್ನೂ ಕೇಳಲಿಲ್ಲ. ಆದುದರಿಂದ ನಿನಗೆ ಇಷ್ಟವಾದ ವರವನ್ನು ಕೇಳು, ಕೊಡುವೆವು ಎಂದರು.

೧೭೨. ದೇವತೆಗಳು ವರವನ್ನು ಕೇಳೆಂದು ಪುನಃಪುನಃ ನಿರ್ಬಂಧಪಡಿಸಲು ಪಿಪ್ಪಲಾದನು ಅಂಜಲಿಯನ್ನು ಧರಿಸಿ, ದೇವತೆಗಳನ್ನೂ ಶಿವಪಾರ್ವತಿಯರನ್ನೂ ಪಿಪ್ಪಲವೃಕ್ಷಗಳನ್ನೂ ನಮಸ್ಕರಿಸಿ,

॥ ಪಿಪ್ಪಲಾದ ಉವಾಚ ॥

ಪಿತರೌ ದ್ರಷ್ಟುಕಾಮೋಽಸ್ಮಿ ಸದಾ ಮೇ ಶಬ್ದಗೋಚರೌ ।
ತೇ ಧನ್ಯಾಃ ಪ್ರಾಣಿನೋ ಲೋಕೇ ಮಾತಾಪಿತ್ರೋರ್ವಶೇ ಸ್ಥಿತಾಃ ॥೧೭೩॥

ಶುಶ್ರೂಷಣಪರಾ ನಿತ್ಯಂ ತತ್ಪಾದಾಜ್ಞಾಪ್ರತೀಕ್ಷಕಾಃ ।
ಇಂದ್ರಿಯಾಣಿ ಶರೀರಂ ಚ ಕುಲಂ ಶಕ್ತಿಂ ಧಿಯಂ ವಪುಃ ॥ ೧೭೪ ॥

ಪರಿಲಭ್ಯ ತಯೋಃ ಕೃತ್ಯೇ ಕೃತಕೃತ್ಯೋ ಭವೇತ್ಸ್ವಯಂ ।
ಪಶೂನಾಂ ಪಕ್ಷಿಣಾಂ ಚಾಪಿ ಸುಲಭಂ ಮಾತೃದರ್ಶನಂ ॥ ೧೭೫ ॥

ದುರ್ಲಭಂ ಮಮ ತಚ್ಚಾಪಿ ಪೃಚ್ಛೇ ಪಾಪಫಲಂ ನು ಕಿಂ ।
ದುರ್ಲಭಂ ಚ ತಥಾ ಚೇತ್ಸ್ಯಾತ್ಸರ್ವೇಷಾಂ ಯಸ್ಯ ಕಸ್ಯಚಿತ್ ॥ ೧೭೬ ॥

ನೋಪಪದ್ಯೇತ ಸುಲಭಂ ಮತ್ತೋ ನಾನ್ಯೋಽಸ್ತಿ ಪಾಪಕೃತ್ ।
ತಯೋರ್ದರ್ಶನಮಾತ್ರಂ ಚ ಯದಿ ಪ್ರಾಪ್ಸ್ಯೇ ಸುರೋತ್ತಮಾಃ ॥ ೧೭೭ ॥

---

೧೭೩. ಓ ದೇವತೆಗಳೇ, ನಾನು ಈವರೆಗೆ ತಾಯಿತಂದೆಗಳ ಹೆಸರನ್ನು ಕೇಳುತ್ತಿರುವೆನೇ ಹೊರತು ನೋಡಿಲ್ಲ. ಅವರನ್ನು ನೋಡಬೇಕು. ಮಾತಾ ಪಿತೃಗಳ ಅಧೀನವಲ್ಲಿರುವವರೇ ಧನ್ಯರು.

೧೭೪. ದೃಢವಾದ ಶರೀರ, ಇಂದ್ರಿಯಗಳು, ಸತ್ಕುಲ, ಶಕ್ತಿ, ಬುದ್ಧಿಗಳನ್ನು ಪಡೆದು ಮಾತಾಪಿತೃಗಳ ಸೇವೆಯನ್ನು ಮಾಡುವವನೇ ಧನ್ಯನು, ಅವನೇ ಕೃತಕೃತ್ಯನು.

೧೭೫. ಪಶುಪಕ್ಷಿಗಳು ತಾಯಿತಂದೆಗಳನ್ನು ನೋಡುವುವು. ಆದರೆ ನನಗೆ ಆ ಭಾಗ್ಯವೂ ಇಲ್ಲವಾಗಿದೆ, ನಾನು ಅಂತಹ ಪಾಪಿಯೇ ?

೧೭೬. ಕೆಲವರಿಗೆ ಮಾತಾಪಿತೃಗಳ ದರ್ಶನವು ದುರ್ಲಭವಾದರೂ ಪ್ರಯತ್ನದಿಂದ ಲಭಿಸುವುದು. ಆದರೆ ನನಗೆ ಎಷ್ಟು ಪ್ರಯತ್ನಪಟ್ಟರೂ ಲಭಿಸದಾಗಿದೆ. ನನಗಿಂತ ಮಹಾಪಾಪಿಯು ಮತ್ತೊಬ್ಬನಿಲ್ಲ.

೧೭೭. ಓ ದೇವತೆಗಳೇ ಮಾತಾಪಿತೃಗಳ ದರ್ಶನವೊಂದು ನನಗಾದರೆ ನನ್ನ ಈ ಮನೋವಾಕ್ಕಾಯಗಳಿಗೂ ಕರ್ಮಕ್ಕೂ ಫಲವು ಲಭಿಸಿದಂತಾಗುವುದು.

ಮನೋವಾಕ್ಕಾಯಕರ್ಮಭ್ಯಃ ಫಲಂ ಪ್ರಾಪ್ತುಂ ಭವಿಷ್ಯತಿ ।
ಪಿತರೌ ಯೇ ನ ಪಶ್ಯಂತಿ ಸಮುತ್ಪನ್ನಾ ನ ಸಂಸ್ಕೃತೌ ।
ತೇಷಾಂ ಮಹಾಪಾತಕಾನಾಂ ಕಃ ಸಂಖ್ಯಾಂ ಕರ್ತುಮೀಶ್ವರಃ ॥ ೧೭೮ ॥

॥ ಬ್ರಹ್ಮೋವಾಚ ॥

ತದೃಷೇರ್ವಚನಂ ಶ್ರುತ್ವಾ ಮಿಥಃ ಸಂಮಂತ್ರ್ಯ ತೇ ಸುರಾಃ ।
ವಿಮಾನವರಮಾರೂಢೌ ಪಿತರೌ ದಂಪತೀ ಶುಭೌ ॥ ೧೭೯ ॥

ತವ ಸಂದರ್ಶನಾಕಾಂಕ್ಷೌ ದ್ರಕ್ಷ್ಯಸೇ ವಾದ್ಯ ನಿಶ್ಚಿತಂ ।
ವಿಷಾದಂ ಲೋಭಮೋಹೌ ಚ ತ್ಯಕ್ತ್ವಾ ಚಿತ್ತಂ ಶಮಂ ನಯ ॥ ೧೮೦ ॥

ಪಶ್ಯ ಪಶ್ಯೇತಿ ತಂ ಪ್ರಾಹುರ್ದಾಧೀಚಂ ಸುರಸತ್ತಮಾಃ ।
ವಿಮಾನವರಮಾರೂಢೌ ಸ್ವರ್ಗಿಣೌ ಸ್ವರ್ಣಭೂಷಣೌ ॥ ೧೮೧ ॥

ತವ ಸಂದರ್ಶನಾಕಾಂಕ್ಷೌ ಪಿತರೌ ದಂಪತೀ ಶುಭೌ ।
ವೀಜ್ಯಮಾನೌ ಸುರಸ್ತ್ರೀಭಿಃ ಸ್ತೂಯಮಾನೌ ಚ ಕಿಂನರೈಃ ॥ ೧೮೨ ॥

---

೧೭೮. ಭೂಮಿಯಲ್ಲಿ ಜನ್ಮಕಳೆದು ತಾಯಿತಂದೆಗಳನ್ನು ನೋಡದ ಮಹಾಪಾಪಿಗಳ ಪಾಪಗಳಿಗೆ ಗಣನೆಯೇ ಇಲ್ಲ ಎಂದನು.

೧೭೯-೧೮೦. ಪಿಪ್ಪಲಾದನ ಆ ಮಾತನ್ನು ಕೇಳಿ ದೇವತೆಗಳು ಎಲೈ ಕುಮಾರ, ನಿನ್ನನ್ನು ನೋಡಲು ಆತುರರಾಗಿ ನಿನ್ನ ಮಾತಾಪಿತೃಗಳು ವಿಮಾನವನ್ನೇರಿ ಬಂದು ನಿನಗೆ ಕಾಣಿಸುವರು. ವಿಷಾದ ಲೋಭಗಳನ್ನು ಬಿಟ್ಟು ಸಮಾಧಾನದಿಂದ ನೋಡು.

೧೮೧-೧೮೨. ನೋಡು, ವಿಮಾನವನ್ನೇರಿ ದೇವತೆಗಳಂತೆ ವೇಷಭೂಷಣಗಳುಳ್ಳವರಾಗಿ ಶೋಭಿಸುತ್ತಿರುವ ಆ ದಂಪತಿಗಳನ್ನು ನೋಡು. ಅವರೇ ನಿನ್ನ ತಂದೆತಾಯಿಗಳು. ಅವರಿಗೆ ಅಪ್ಸರೆಯರು ಚಾಮರವನ್ನು ಬೀಸುತ್ತಿರುವರು, ಕಿನ್ನರರು ಅವರನ್ನು ಸ್ತುತಿಸುತ್ತಿರುವರು. ನಿನ್ನನ್ನು ನೋಡಲು ಅವರೂ ಆತುರವುಳ್ಳವರಾಗಿರುವರು ಎಂದರು.

ದೃಷ್ಟ್ವಾ ಸ ಮಾತಾಪಿತರೌ ನನಾಮ ಶಿವಸಂನಿಧೌ ।
ಹರ್ಷಬಾಷ್ಪಾಶ್ರುನಯನೌ ಸ ಕಥಂಚಿದುವಾಚ ತೌ ॥ ೧೮೩ ॥

॥ ಪುತ್ರ ಉವಾಚ ॥
ತಾರಯಂತ್ಯೇವ ಪಿತರಾವನ್ಯೇ ಪುತ್ರಾಃ ಕುಲೋದ್ವಹಾಃ ।
ಅಹಂ ತು ಮಾತುರುದರೇ ಕೇವಲಂ ಭೇದಕಾರಣಂ ।
ಏವಂಭೂತೋಽಪಿ ತೌ ಮೋಹಾತ್ಪಶ್ಯೇಯಮತಿದುರ್ಮತಿಃ ॥ ೧೮೪ ॥

॥ ಬ್ರಹ್ಮೋವಾಚ ॥
ತಾವಾಲೋಕ್ಯ ತತೋ ದುಃಖಾದ್ವಕ್ತುಂ ನೈವ ಶಶಾಕ ಸಃ ।
ದೇವಾಶ್ಚ ಮಾತಾಪಿತರೌ ಪಿಪ್ಪಲಾದಮಥಾಬ್ರುವನ್ ॥ ೧೮೫ ॥

॥ ದೇವಾ ಊಚುಃ ॥
ಧನ್ಯಸ್ತ್ವಂ ಪುತ್ರ ಲೋಕೇಷು ಯಸ್ಯ ಕೀರ್ತಿರ್ಗತಾ ದಿವಂ ।
ಸಾಕ್ಷಾತ್ಕೃತಸ್ತ್ವಯಾ ತ್ರ್ಯಕ್ಷೋ ದೇವಾಶ್ಚಾಶ್ವಾಸಿತಾಸ್ತ್ವಯಾ ।
ತ್ವಯಾ ಪುತ್ರೇಣ ಸಲ್ಲೋಕಾ ನ ಕ್ಷೀಯಂತೇ ಕದಾಚನ ॥ ೧೮೬ ॥

---

೧೮೩. ಮಾತಾಪಿತೃಗಳನ್ನು ನೋಡಿ ಆ ಪಿಪ್ಪಲಾದನು ಶಿವನ ಸನ್ನಿಧಿಯಲ್ಲಿ ಅವರನ್ನು ನಮಸ್ಕರಿಸಿದನು. ಆನಂದಾತಿಶಯದಿಂದ ಅವನಿಗೆ ಬಾಯಿಯಲ್ಲಿ ಮಾತುಗಳೇ ಹೊರಡಲಿಲ್ಲ. ಆಮೇಲೆ ಕಷ್ಟಪಟ್ಟು ಮನಸ್ಸನ್ನು ಸ್ಥಿರಮಾಡಿಕೊಂಡು ಇಂತೆಂದನು.

೧೮೪. ಮಿಕ್ಕ ಕುಲೋದ್ಧಾರಕರಾದ ಪುತ್ರರು ತಂದೆತಾಯಿಗಳನ್ನು ಉದ್ಧರಿಸುವರು. ಆದರೆ ನಾನು ಹುಟ್ಟುವಾಗಲೇ ಮಾತೆಯ ಗರ್ಭವನ್ನು ಭೇದಿಸಿದವನು. ಇಂತಹ ಮಹಾ ಪಾಪಿಯಾದರೂ ನಾನು ಮಾತಾಪಿತೃಗಳನ್ನು ನೋಡುವೆನು ಎಂದನು.

೧೮೫. ದೇವತೆಗಳಾದ ಆ ಮಾತಾಪಿತೃಗಳನ್ನು ನೋಡಿ ದುಃಖದಿಂದ ಪಿಪ್ಪಲಾದನು ಇನ್ನೇನನ್ನೂ ಹೇಳಲಾರದವನಾದನು. ಆಗ ಅವರೇ ಅವನನ್ನು ಕುರಿತು,

೧೮೬. ಎಲೈಮಗನೇ, ನೀನೇ ಧನ್ಯನು. ನಿನ್ನ ಕೀರ್ತಿಯು ಸ್ವರ್ಗದಲ್ಲಿಯೂ ಹರಡಿರುವುದು. ತ್ರಿಲೋಚನನನ್ನು ನೀನು ಪ್ರತ್ಯಕ್ಷಗೊಳಿಸಿಕೊಂಡಿರುವೆ. ದೇವತೆಗಳನ್ನೂ ಮನ್ನಿಸಿರುವೆ. ಪುತ್ರನಾದ ನಿನ್ನಿಂದ ನಮಗೆ ಸ್ವರ್ಗಲೋಕವು ಸ್ಥಿರವಾಯಿತು ಎಂದರು.

॥ ಬ್ರಹ್ಮೋವಾಚ ॥

ಪುಷ್ಪವೃಷ್ಟಿಸ್ತದಾ ಸ್ವರ್ಗಾತ್ಪಪಾತ ತಸ್ಯ ಮೂರ್ಧನಿ ।
ಜಯಶಬ್ದಃ ಸುರೈರುಕ್ತಃ ಪ್ರಾದುರ್ಭೂತೋ ಮಹಾಮುನೇ ॥ ೧೮೭ ॥

ಆಶಿಷಂ ತು ಸುತೇ ದತ್ವಾ ದಧೀಚಿಃ ಸಹ ಭಾರ್ಯಯಾ ।
ಶಂಭುಂ ಗಂಗಾಂ ಸುರಾನ್ನತ್ವಾ ಪುತ್ರಂ ವಾಕ್ಯಮಥಾಬ್ರವೀತ್ ॥ ೧೮೮ ॥

॥ ದಧೀಚಿರುವಾಚ ॥

ಪ್ರಾಪ್ಯ ಭಾರ್ಯಾಂ ಶಿವೇ ಭಕ್ತಿಂ ಕುರು ಗಂಗಾಂ ಚ ಸೇವಯ ।
ಪುತ್ರಾನುತ್ಪಾದ್ಯ ವಿಧಿವದ್ಯಜ್ಞಾನಿಷ್ಟ್ವಾ ಸದಕ್ಷಿಣಾನ್ ।
ಕೃತಕೃತ್ಯಸ್ತತೋ ವತ್ಸ ಆಕ್ರಮಸ್ವ ಚಿರಂ ದಿವಂ ೧೮೯ ॥

॥ ಬ್ರಹ್ಮೋವಾಚ ॥

ಕರೋಮ್ಯೇವಮಿತಿ ಪ್ರಾಹ ದಧೀಚಿಂ ಪಿಪ್ಪಲಾಶನಃ ।
ದಧೀಚಿಃ ಪುತ್ರಮಾಶ್ವಾಸ್ಯ ಭಾರ್ಯಯಾ ಚ ಪುನಃ ಪುನಃ ॥ ೧೯೦ ॥

---

೧೮೭. ಆಗ ಪಿಪ್ಪಲಾದನ ತಲೆಯಮೇಲೆ ಸ್ವರ್ಗದಿಂದ ಹೂಮಳೆಯು ಸುರಿಯಿತು. ದೇವತೆಗಳು ಜಯಧ್ವನಿಯನ್ನು ಮಾಡಿದರು.

೧೮೮. ಆಮೇಲೆ ದಧೀಚಿಮುನಿಯು ಪತ್ನಿಯೊಡನೆ ಪುತ್ರನನ್ನು ಆಶೀರ್ವದಿಸಿ ಶಂಕರನನ್ನೂ, ಗೌತಮೀನದಿಯನ್ನೂ, ದೇವತೆಗಳನ್ನೂ ನಮಸ್ಕರಿಸಿ ಪುತ್ರನನ್ನುದ್ದೇಶಿಸಿ,

೧೮೯. ಎಲೈ ಪುತ್ರ, ಗೃಹಸ್ಥಾಶ್ರಮಿಯಾಗಿ ನೀನು ಶಿವನನ್ನು ಅನನ್ಯಭಕ್ತಿಯಿಂದ ಆರಾಧಿಸು. ಗೌತಮಿಯನ್ನು ಸೇವಿಸು. ಸತ್ಪುತ್ರರನ್ನು ಉತ್ಪಾದನೆಮಾಡು. ಆಮೇಲೆ ವಿಧಿವತ್ತಾಗಿ ಯಾಗಗಳನ್ನು ಮಾಡಿ ಸ್ವರ್ಗವನ್ನು ಹೊಂದು ಎನ್ನಲು.

೧೯೦. ಪಿಪ್ಪಲಾದನು ಹಾಗೆಯೇ ಮಾಡುವೆನೆಂದು ದಧೀಚಿಗೆ ಹೇಳಿದನು. ಆಮೇಲೆ ದಧೀಚಿಮುನಿಯು ಪುತ್ರನನ್ನು ಪುನಃಪುನಃ ಸಮಾಧಾನ ಮಾಡಿ ದೇವತೆಗಳ ಅನುಮತಿಯನ್ನು ಪಡೆದು ಪತ್ನಿಯೊಡನೆ ಸ್ವರ್ಗಕ್ಕೆ ಹೊರಟುಹೋದನು.

ಅನುಜ್ಞಾತಃ ಸುರಗಣೈಃ ಪುನಃ ಸ ದಿವಮಾಕ್ರಮತ್ ।
ದೇವಾ ಅಪ್ಯೂಚಿರೇ ಸರ್ವೇ ಪಿಪ್ಪಲಾದಂ ಸಸಂಭ್ರಮಾಃ ॥ ೧೯೧ ॥

॥ ದೇವಾ ಊಚುಃ ॥

ಕೃತ್ಯಾಂ ಶಮಯ ಭದ್ರಂ ತೇ ತದುತ್ಪನ್ನಂ ಮಹಾನಲಂ ॥ ೧೯೨ ॥

॥ ಬ್ರಹ್ಮೋವಾಚ ॥

ಪಿಪ್ಪಲಾದಸ್ತು ತಾನಾಹ ನ ಶಕ್ತೋಽಹಂ ನಿವಾರಣೇ ।
ಅಸತ್ಯಂ ನೈವ ವಕ್ತಾಽಹಂ ಯೂಯಂ ಕೃತ್ಯಾಂ ತು ಬ್ರೂತ ತಾಂ ॥ ೧೯೩॥

ಮಾಂ ದೃಷ್ಟ್ವಾ ಸಾ ಮಹಾರೌದ್ರಾ ವಿಪರೀತಂ ಕರಿಷ್ಯತಿ ।
ತಾಮೇವ ಗತ್ವಾ ವಿಬುಧಾಃ ಪ್ರೋಚುಸ್ತೇ ಶಾಂತಿಕಾರಣಂ ॥ ೧೯೪ ॥

ಅನಲಂ ಚ ಯಥಾಪ್ರೀತಿ ತೇ ಉಭೇ ನೇತ್ಯವೋಚತಾಂ ।
ಸರ್ವೇಷಾಂ ಭಕ್ಷಣಾಯೈವ ಸೃಷ್ಟಾ ಚಾಹಂ ದ್ವಿಜನ್ಮನಾ ॥ ೧೯೫ ॥

೧೯೧-೧೯೨. ಆಗ ದೇವತೆಗಳು ಪಿಪ್ಪಲಾದನಿಗೆ ಪ್ರೀತಿಯಿಂದ ಎಲೈ ಪಿಪ್ಪಲಾದ, ಈ ಕೃತ್ಯೆಯನ್ನೂ ಅದರಿಂದ ಜನಿಸಿದ ಮಹಾಗ್ನಿಯನ್ನೂ ಶಾಂತಿಗೊಳಿಸು, ಹೋಗಲಾಡಿಸು ಎನ್ನಲು,

೧೯೩. ಅದಕ್ಕೆ ಪಿಪ್ಪಲಾದನು—ಓ ದೇವತೆಗಳೇ, ಕೃತ್ಯೆಯನ್ನು ನಿವಾರಿಸಲು ನನಗೆ ಶಕ್ತಿಯಿಲ್ಲ. ನಿಜವನ್ನೇ ಹೇಳುವೆನು. ನೀವೇ ಹೋಗಿ ಕೃತ್ಯೆಗೆ ಹೇಳಿರಿ, ನನ್ನನ್ನು ನೋಡಿದರೆ ಅದು ನನ್ನನ್ನೇ ಭಸ್ಮಮಾಡೀತು ಎಂದನು.

೧೯೪. ಆಮೇಲೆ ದೇವತೆಗಳೇ ,ಕೃತ್ಯೆಯ ಬಳಿಗೆ ಹೋಗಿ ಅದನ್ನೂ ಅದರ ಅಗ್ನಿಯನ್ನೂ ಕುರಿತು ನೀವು ಶಾಂತವಾಗಲು ಏನು ಮಾಡಬೇಕು ಎಂದು ಕೇಳಿದರು.

೧೯೫. ಅದಕ್ಕೆ ಕೃತ್ಯೆಯು ಹೀಗೆ ಎಲ್ಲರನ್ನೂ ಭಕ್ಷಿಸುವುದಕ್ಕಾಗಿಯೇ ಪಿಪ್ಪಲಾದನು ನನ್ನನ್ನೂ ನನ್ನ ಅಗ್ನಿಯನ್ನೂ ಸೃಜಿಸಿರುವನು. ನಾವು ಶಾಂತರಾಗುವುದಿಲ್ಲ.

ತಥಾ ಚ ಮತ್ಪ್ರಸೂತೋಽಗ್ನಿರನ್ಯಥಾ ತತ್ಕಥಂ ಭವೇತ್ ।
ಮಹಾಭೂತಾನಿ ಪಂಚಾಪಿ ಸ್ಥಾವರಂ ಜಂಗಮಂ ತಥಾ ॥ ೧೯೬ ॥

ಸರ್ವಮಸ್ಮನ್ಮುಖೇ ವಿದ್ಯಾದ್ವಕ್ತವ್ಯಂ ನಾವಶಿಷ್ಯತೇ ।
ಮಯಾ ಸಂಮಂತ್ರ್ಯ ತೇ ದೇವಾಃ ಪುನರೂಚುರುಭಾವಪಿ ॥ ೧೯೭ ॥

ಭಕ್ಷಯೇತಾಮುಭೌ ಸರ್ವಂ ಯಥಾನುಕ್ರಮತಸ್ತಥಾ ।
ವಡವಾಪಿ ಸುರಾನೇವಮುವಾಚ ಶೃಣು ನಾರದ ॥ ೧೯೮ ॥

॥ ವಡವೋವಾಚ ॥

ಭವತಾಮಿಚ್ಛಯಾ ಸರ್ವಂ ಭಕ್ಷ್ಯಂ ಮೇ ಸುರಸತ್ತಮಾಃ ॥ ೧೯೯ ॥

॥ ಬ್ರಹ್ಮೋವಾಚ ॥

ವಡವಾ ಸಾ ನದೀ ಜಾತಾ ಗಂಗಯಾ ಸಂಗತಾ ಮುನೇ ।
ತದ್ಭವಸ್ತು ಮಹಾನಗ್ನಿರ್ಯ ಆಸೀದತಿಭೀಷಣಃ ।
ತಮಾಹುರಮರಾ ವಹ್ನಿಂ ಭೂತಾನಾಮಾದಿತೋ ವಿದುಃ ॥ ೨೦೦ ॥

---

೧೯೬. ಪಂಚ ಮಹಾಭೂತಗಳು, ಸ್ಥಿರಚರಪ್ರಾಣಿಗಳು ಎಲ್ಲವೂ ನಮ್ಮ ಬಾಯಿಗೆ ಆಹುತಿಯಾಗಬೇಕು. ಇನ್ನೇನನ್ನೂ ಹೇಳುವುದಿಲ್ಲ. ಇದೇ ನಿಶ್ಚಯವು ಎಂದು ಹೇಳಿತು.

೧೯೭. ಆಗ ದೇವತೆಗಳು ನನ್ನೊಡನೆ ಆಲೋಚಿಸಿ ವಡವಾದೇವಿಗೆ—ನೀವೀರ್ವರೂ ಜಗತ್ತೆಲ್ಲವನ್ನೂ ಕ್ರಮವಾಗಿ ಭಕ್ಷಿಸಿ ಎಂದು ಹೇಳಿದರು.

೧೯೮-೧೯೯. ವಡವೆಯು ಪುನಃ ದೇವತೆಗಳನ್ನು ಕುರಿತು ಎಲೈ ದೇವತೆಗಳೇ, ನಿಮ್ಮ ಮಾತಿನಂತೆ ಜಗತ್ತೆಲ್ಲವೂ ನನಗೆ ಭಕ್ಷಿಸಲು ಯೋಗ್ಯವು ಎಂದಿತು.

೨೦೦. ಆಮೇಲಾ ವಡವೇ ಕೃತ್ಯೆಯು ನದಿಯಾಗಿ ಗಂಗಾನದಿಯನ್ನು ಸೇರಿತು. ವಡವೆಯಿಂದ ಜನಿಸಿದ ಭಯಂಕರವಾದ ಆ ಅಗ್ನಿಯು ಪಂಚಭೂತಗಳಿಗೆ ಆದಿಯಾಯಿತು.

॥ ಸುರಾ ಊಚುಃ ॥

ಆಪೋ ಜ್ಯೇಷ್ಠತಮಾ ಜ್ಞೇಯಾಸ್ತಥೈವ ಪ್ರಥಮಂ ಭವಾನ್ ।
ತತ್ರಾಪ್ಯಪಾಂ ಪತಿಂ ಜ್ಯೇಷ್ಠಂ ಸಮುದ್ರಮಶನಂ ಕುರು ।
ಯಥೈವ ತು ವಯಂ ಬ್ರೂಮೋ ಗಚ್ಛ ಭುಂಕ್ಷ್ವ ಯಥಾಸುಖಂ ॥ ೨೦೧ ॥

॥ ಬ್ರಹ್ಮೋವಾಚ ॥

ಅನಲಸ್ತ್ವಮರಾನಾಹ ಆಪಸ್ತತ್ರ ಕಥಂ ತ್ವಹಂ ।
ವ್ರಜೇಯಂ ಯದಿ ಮಾಂ ತತ್ರ ಪ್ರಾಪಯಂತ್ವ್ಯುದಕಂ ಮಹತ್ ॥ ೨೦೨ ॥

ಭವಂತ ಏವ ತೇsಪ್ಯಾಹುಃ ಕಥಂ ತೇsಗ್ನೇ ಗತಿರ್ಭವೇತ್ ।
ಅಗ್ನಿರಪ್ಯಾಹ ತಾನ್ದೇವಾನ್ ಕನ್ಯಾ ಮಾಂ ಗುಣಶಾಲಿನೀ ॥ ೨೦೩ ॥

ಹಿರಣ್ಯಕಲಶೇ ಸ್ಥಾಪ್ಯ ನಯೇದ್ಯತ್ರ ಗತಿರ್ಮಮ ।
ತಸ್ಯ ತದ್ವಚನಂ ಶ್ರುತ್ವಾ ಕನ್ಯಾಮೂಚುಃ ಸರಸ್ವತೀಂ ॥ ೨೦೪ ॥

॥ ದೇವಾ ಊಚುಃ ॥

ನಯೈನಮನಲಂ ಶೀಘ್ರಂ ಶಿರಸಾ ವರುಣಾಲಯಂ ॥ ೨೦೫ ॥

---

೨೦೧. ದೇವತೆಗಳು ವಡವಾಗ್ನಿಗೆ ಎಲೈ ಅಗ್ನಿ, ಜಲವು ಭೂತಗಳಲ್ಲಿ ಶ್ರೇಷ್ಠವಾದುದು. ಅದರಂತೆ ನೀನು ಭೂತಗಳಿಗೆ ಆದಿಯು. ಜಲವಲ್ಲಿಯೂ ಜಲಗಳಿಗೆ ಪತಿಯಾದ ಸಮುದ್ರವನ್ನು ನೀನು ಕುಡಿ. ನಮ್ಮಮಾತಿನಂತೆ ಸಮುದ್ರಕ್ಕೆ ಹೋಗು ಎಂದರು.

೨೦೨. ಆಗ ವಡವಾಗ್ನಿಯು ಓ ದೇವತೆಗಳೇ, ಸಮುದ್ರಕ್ಕೆ ನಾನು ಹೋಗುವುದು ಹೇಗೆ? ನೀವೇ ನನ್ನನ್ನಲ್ಲಿಗೆ ಒಯ್ಯಿರಿ, ಎನ್ನಲು, ಅದಕ್ಕೆ ದೇವತೆಗಳು ಅಲ್ಲಿಗೆ ನಿನ್ನನ್ನು ಒಯ್ಯುವುದು ಹೇಗೆ ? ಎಂದು ಪ್ರಶ್ನಿಸಿದರು.

೨೦೩. ಆಗ ಅಗ್ನಿಯು ಗುಣವತಿಯಾದ ಕನ್ಯೆಯು ನನ್ನನ್ನು ಚಿನ್ನದ ಕಲಶದಲ್ಲಿರಿಸಿ ಸಮುದ್ರಕ್ಕೆ ಒಯ್ಯಬಹುದು ಎಂದಿತು.

೨೦೪–೨೦೫. ವಡವಾಗ್ನಿಯ ಆ ಮಾತನ್ನು ಕೇಳಿ ದೇವತೆಗಳು ಕನ್ಯೆಯಾದ ಸರಸ್ವತಿಯನ್ನು ಕುರಿತು ಎಲೌ ಸರಸ್ವತಿ, ಈ ವಡವಾಗ್ನಿಯನ್ನು ತಲೆಯಮೇಲಿಟ್ಟುಕೊಂಡು ಸಮುದ್ರಕ್ಕೆ ತೆಗೆದುಕೊಂಡು ಹೋಗೆನಲು,

॥ ಬ್ರಹ್ಮೋವಾಚ ॥

ಸರಸ್ವತೀ ಸುರಾನಾಹ ನೈಕಾ ಶಕ್ತಾ ಚ ಧಾರಣೇ ।
ಯುಕ್ತಾ ಚತಸೃಭಿಃ ಶೀಘ್ರಂ ವಹೇಯಂ ವರುಣಾಲಯಂ ॥ ೨೦೬ ॥

ಸರಸ್ವತ್ಯಾ ವಚಃ ಶ್ರುತ್ವಾ ಗಂಗಾಂ ಚ ಯಮುನಾಂ ತಥಾ ।
ನರ್ಮದಾಂ ತಪತೀಂ ಚೈವ ಸುರಾಃ ಪ್ರೋಚುಃ ಪೃಥಕ್ಪೃಥಕ್ ॥ ೨೦೭ ॥

ತಾಭಿಃ ಸಮನ್ವಿತೋವಾಹ ಹಿರಣ್ಯಕಲಶೇಽನಲಂ ।
ಸಂಸ್ಥಾಪ್ಯ ಶಿರಸಾಽಽಧಾರ್ಯ ತಾ ಜಗ್ಮುರ್ವರುಣಾಲಯಂ ॥ ೨೦೮ ॥

ಸಂಸ್ಥಾಪ್ಯ ಯತ್ರ ದೇವೇಶಃ ಸೋಮನಾಥೋ ಜಗತ್ಪತಿಃ ।
ಅಧ್ಯಾಸ್ತೇ ವಿಬುಧೈಃ ಸಾರ್ಧಂ ಪ್ರಭಾಸೇ ಶಶಿಭೂಷಣಃ ॥ ೨೦೯ ॥

---

೨೦೬. ಅದಕ್ಕೆ ಸರಸ್ವತಿಯು ನಾನೊಬ್ಬಳೇ ಈ ಅಗ್ನಿಯನ್ನು ಧರಿಸಲಾರೆನು. ನನಗೆ ಸಹಾಯವಾಗಿ ನಾಲ್ವರನ್ನು ಕೊಟ್ಟರೆ ಅಗ್ನಿಯನ್ನು ಸಮುದ್ರಕ್ಕೊಯ್ಯುವೆನು ಎಂದು ಹೇಳಿದಳು.

೨೦೭. ಸರಸ್ವತಿಯ ಮಾತನ್ನು ಕೇಳಿ ದೇವತೆಗಳು ಗಂಗೆ, ಯಮುನೆ ನರ್ಮದೆ, ತಪತಿ, ಇವರಿಗೆ ಅಗ್ನಿಯನ್ನೊಯ್ಯುವಂತೆ ಹೇಳಿದರು.

೨೦೮. ಆ ಸರಸ್ವತಿ, ಗಂಗೆ, ಯಮುನೆ, ನರ್ಮದೆ, ತಪತಿಯರು ವಡವಾಗ್ನಿಯನ್ನು ಚಿನ್ನದ ಕಲಶದಲ್ಲಿರಿಸಿ ತಲೆಯಮೇಲೆ ಹೊತ್ತು ಸಮುದ್ರಕ್ಕೆ ಒಯ್ದರು.

೨೦೯. ಸಮುದ್ರತೀರದಲ್ಲಿ ಸೋಮನಾಥನು ನೆಲಸಿರುವ ಪ್ರಭಾಸತೀರ್ಥದಲ್ಲಿ ಆ ವಡವಾಗ್ನಿಯನ್ನು ಸರಸ್ವತಿ ಮೊದಲಾದ ಐದು ನದಿಗಳು ದೇವತೆಗಳೊಡನೆ ಒಯ್ದು ಅಲ್ಲಿ ಸಮುದ್ರದೊಳಗೆ ಬಿಟ್ಟರು.

ಪ್ರಾಪಯಾಮಾಸುರನಲಂ ಪಂಚನದ್ಯಃ ಸರಸ್ವತಿ ।
ಅಧ್ಯಾಸ್ತೇ ಚ ಮಹಾನಗ್ನಿಃ ಪಿಬನ್ವಾರಿ ಶನೈಃ ಶನೈಃ ॥ ೨೧೦ ॥

ತತಃ ಸುರಗಣಾಃ ಸರ್ವೇ ಶಿವಮೂಚುಃ ಸುರೋತ್ತಮಂ । ॥ ೨೧೧ ॥

॥ ದೇವಾ ಊಚುಃ ॥

ಅಸ್ಥ್ನಾಂ ಚ ಪಾವನಂ ಬ್ರೂಹಿ ಅಸ್ಮಾಕಂ ಚ ಗವಾಂ ತಥಾ । ॥ ೨೧೨ ॥

॥ ಬ್ರಹ್ಮೋವಾಚ ॥

ಶಿವಃ ಪ್ರಾಹ ತದಾ ಸರ್ವಾನ್ಗಂಗಾಮಾಪ್ಲುತ್ಯ ಯತ್ನತಃ ।
ದೇವಾಶ್ಚ ಗಾವಸ್ತತ್ಪಾಪಾನ್ಮುಚ್ಯಂತೇ ನಾತ್ರ ಸಂಶಯಃ ॥ ೨೧೩ ॥

ಪ್ರಕ್ಷಾಲಿತಾನಿ ಚಾಸ್ಥೀನಿ ಋಷಿದೇಹಭವಾನ್ಯಥ ।
ತಾನಿ ಪ್ರಕ್ಷಾಲನಾದೇವ ತತ್ರ ಪ್ರಾಪ್ತಾನಿ ಪೂತತಾಂ ॥ ೨೧೪ ॥

೨೧೦-೨೧೧. ಅದು ಮೊದಲುಗೊಂಡು ವಡವಾಗ್ನಿಯು ಸಮುದ್ರದಲ್ಲಿರುತ್ತಾ ಸಮುದ್ರದ ನೀರನ್ನು ಸ್ವಲ್ಪಸ್ವಲ್ಪವಾಗಿ ಕುಡಿಯುತ್ತಲಿರುವುದು. ಆಮೇಲೆ ದೇವತೆಗಳು ಮಹಾದೇವನನ್ನು ಕುರಿತು,

೨೧೨. ಓ ಪರಮೇಶ್ವರ, ದಧೀಚಿಯ ಅಸ್ಥಿಗಳೂ, ಅಸ್ಥಿಯಾಗಿ ಮಾಡಿದ ಗೋವುಗಳೂ ಪರಿಶುದ್ಧವಾಗಬೇಕು. ಆದಕ್ಕೆ ಈಗ ಏನುಮಾಡಬೇಕೆಂದು ಕೇಳಲು,

೨೧೩. ಆಗ ಶಿವನು ಎಲೈ ದೇವತೆಗಳೇ, ನೀವೂ ನಿಮ್ಮ ಆಯುಧಗಳೂ ಗೋವುಗಳೂ ಈ ಗೌತಮೀನದಿಯಲ್ಲಿ ಸ್ನಾನಮಾಡಿದರೆ ಪರಿಶುದ್ಧಿಯಾಗುವುದು ಎಂದನು.

೨೧೪. ಹಾಗೆಯೇ ಆಗಲೆಂದು ದೇವತೆಗಳು ದಧೀಚಿ ಶರೀರದ ಅಸ್ಥಿಗಳೆಲ್ಲವನ್ನೂ ಗೌತಮೀನದಿಯಲ್ಲಿ ತೊಳೆದರು. ಅದರಿಂದ ಅವು ಪರಿಶುದ್ಧವಾಗಿ ಆಯುಧೋತ್ತಮಗಳಾದುವು.

ಯತ್ರ ದೇವಾ ಮುಕ್ತಪಾಪಾಸ್ತತ್ತೀರ್ಥಂ ಪಾಪನಾಶನಂ ।
ತತ್ರ ಸ್ನಾನಂ ಚ ದಾನಂ ಚ ಬ್ರಹ್ಮಹತ್ಯಾವಿನಾಶನಂ ॥ ೨೧೫ ॥

ಗವಾಂ ಚ ಪಾವನಂ ಯತ್ರ ಗೋತೀರ್ಥಂ ತದುದಾಹೃತಂ ।
ತತ್ರ ಸ್ನಾನಾನ್ಮಹಾಬುದ್ಧಿರ್ಗೋಮೇಧಫಲಮಾಪ್ನುಯಾತ್ ॥ ೨೧೬ ॥

ಯತ್ರ ತದ್ಬ್ರಾಹ್ಮಣಾಸ್ಥೀನಿ ಆಸನ್ಪುಣ್ಯಾನಿ ನಾರದ ।
ಪಿತೃತೀರ್ಥಂ ತು ವೈ ಜ್ಞೇಯಂ ಪಿತೄಣಾಂ ಪ್ರೀತಿವರ್ಧನಂ ॥ ೨೧೭ ॥

ಭಸ್ಮಾಸ್ಥಿನಖರೋಮಾಣಿ ಪ್ರಾಣಿನೋ ಯಸ್ಯ ಕಸ್ಯಚಿತ್ ।
ತತ್ರ ತೀರ್ಥೇ ಸಂಕ್ರಮೇರನ್ಯಾವಚ್ಚಂದ್ರಾರ್ಕತಾರಕಂ ॥ ೨೧೮ ॥

---

೨೧೫. ದೇವತೆಗಳು ಸ್ನಾನಮಾಡಿ ಪರಿಶುದ್ಧರಾದ ತೀರ್ಥವು ಪಾಪನಾಶನತೀರ್ಥವು. ಆ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ಬ್ರಹ್ಮಹತ್ಯೆಯು ನಾಶವಾಗುವುದು.

೨೧೬. ಗೋವುಗಳು ಸ್ನಾನಮಾಡಿ ಪರಿಶುದ್ಧವಾದ ತೀರ್ಥಕ್ಕೆ ಗೋತೀರ್ಥವೆಂದು ಹೆಸರು. ಆ ತೀರ್ಥದಲ್ಲಿ ಸ್ನಾನಮಾಡಿದರೆ ಗೋಮೇಧಯಾಗದ ಫಲವು ಲಭಿಸುವುದು.

೨೧೭. ದಧೀಚಿಮುನಿಯ ಅಸ್ಥಿಗಳನ್ನು ತೊಳೆದ ಸ್ಥಳವು ತೀರ್ಥವು, ಅದು ಪಿತೃದೇವತೆಗಳಿಗೆ ತುಂಬಾ ಪ್ರಿಯವಾದುದು.

೨೧೮. ಆ ಪಿತೃತೀರ್ಥದಲ್ಲಿ ಮೃತನಾದ ಪುರುಷನ ಬೂದಿ, ಎಲುಬು ಉಗುರು ರೋಮಗಳು ಸೇರಿದರೆ ಅವನೆಷ್ಟುಪಾಪಿಯಾಗಿದ್ದರೂ ಸ್ವರ್ಗವನ್ನು ಪಡೆದು ಚಂದ್ರಸೂರ್ಯನಕ್ಷತ್ರಗಳಿರುವವರೆಗೆ ಅಲ್ಲಿ ಸುಖವಾಗಿ ವಿಹರಿಸುವನು.

ಸ್ವರ್ಗೇ ವಾಸೋ ಭವೇತ್ತಸ್ಯ ಅಪಿ ದುಷ್ಕೃತಕರ್ಮಣಃ ।
ತಥಾ ಚಕ್ರೇಶ್ವರಾತ್ತೀರ್ಥಾತ್ತ್ರೀಣಿ ತೀರ್ಥಾನಿ ನಾರದ ।
ತತಃ ಪ್ರೀತಾಃ ಸುರಗಣಾ ಗಾವಃ ಶಂಭುಮಥಾಬ್ರುವನ್ ॥ ೨೧೯ ॥

॥ ಗೋಸುರಾ ಊಚುಃ ॥

ಯಾಮಃ ಸ್ವಂ ಸ್ವಮಧಿಷ್ಠಾನಮತ್ರ ಸೂರ್ಯಃ ಪ್ರತಿಷ್ಠಿತಃ ।
ಅಸ್ಮಿನ್ಸ್ಥಿತೇ ದಿನಕರೇ ಸುರಾಃ ಸರ್ವೇ ಪ್ರತಿಷ್ಠಿತಾಃ ॥ ೨೨೦ ॥

ಭವೇಯುರ್ಜಗತಾಮೀಶ ತದನುಜ್ಞಾತುಮರ್ಹಸಿ ।
ಸೂರ್ಯೋ ಹ್ಯಾತ್ಮಾಽಸ್ಯ ಜಗತಸ್ತಸ್ಥುಷಶ್ಚ ಸನಾತನಃ ॥ ೨೨೧ ॥

ದಿವಾಕರೋ ದೇವಮಯಸ್ತತ್ರಾಸ್ಮಾಭಿಃ ಪ್ರತಿಷ್ಠಿತಃ ।
ಯತ್ರ ಗಂಗಾ ಜಗದ್ಧಾತ್ರೀ ಯತ್ರ ವೈ ತ್ರ್ಯಂಬಕಃ ಸ್ವಯಂ ।
ಸುರವಾಸಂ ಪ್ರತಿಷ್ಠಾನಂ ಭವೇದ್ಯತ್ರ ಚ ತ್ರ್ಯಂಬಕಂ ॥ ೨೨೨ ॥

---

೨೧೯. ಪಾಪನಾಶನತೀರ್ಥ, ಗೋತೀರ್ಥ, ಪಿತೃತೀರ್ಥಗಳೆಂಬ ಈ ಮೂರು ತೀರ್ಥಗಳು ಚಕ್ರೇಶ್ವರತೀರ್ಥದಿಂದ ಮುಂದಿರುವುವು. ಆಮೇಲೆ ಗೋವುಗಳೂ ದೇವತೆಗಳೂ ಶಿವನನ್ನು ಕುರಿತು,

೨೨೦. ಓ ದೇವ, ಇನ್ನು ನಮ್ಮ ನಮ್ಮ ಸ್ಥಾನಗಳಿಗೆ ತೆರಳುವೆವು. ಇಲ್ಲಿ ಸೂರ್ಯನು ನೆಲಸಿರುವನು. ಆ ಸೂರ್ಯನಲ್ಲಿ ನಮ್ಮನಮ್ಮ ಅಂಶದಿಂದ ನಾವೂ ನೆಲಸುವೆವು. ಹಾಗೆ ಈ ಸೂರ್ಯನಲ್ಲಿ ಅಂಶದಿಂದ ನಾವು ನೆಲಸಿರಲು ಅನುಮತಿಯನ್ನು ಕೊಡು.

೨೨೧. ಸೂರ್ಯನು ಸ್ಥಿರಚರರೂಪವಾದ ಜಗತ್ತಿಗೆ ಆತ್ಮನು. ಪುರಾಣ ಪುರುಷನು, ದೇವಮಯನು ಎಂದರೆ ಎಲ್ಲ ದೇವತೆಗಳೂ ಅವನಲ್ಲಿ ನೆಲಸಿರುವರು. ಇಂತಹ ಸೂರ್ಯನು ಇಲ್ಲಿ ಪ್ರತಿಷ್ಠಿಸಲ್ಪಟ್ಟಿರುವನು.

೨೨೨. ಜಗನ್ಮಾತೆಯಾದ ಗೌತಮೀನದಿಯ ಈ ತೀರದಲ್ಲಿ ಪರಮೇಶ್ವರನಾದ ನೀನು ನೆಲಸಿರುವೆ. ದೇವತೆಗಳೂ ಸೂರ್ಯನೂ ಪ್ರತಿಷ್ಠಿಸಲ್ಪಟ್ಟಿರುವರು. ಆದುದರಿಂದ ಈ ತೀರ್ಥವು ಪ್ರತಿಷ್ಠಾನತೀರ್ಥವೆಂದು ಪ್ರಸಿದ್ಧವಾಗಲಿ ಎಂದು ಪ್ರಾರ್ಥಿಸಿದರು.

॥ ಬ್ರಹ್ಮೋವಾಚ ॥

ಆಪೃಚ್ಛ್ಯ ಪಿಪ್ಪಲಾದಂ ತಂ ಸುರಾಃ ಸ್ವಂ ಸದನಂ ಯಯುಃ ।
ಪಿಪ್ಪಲಾಃ ಕಾಲಪರ್ಯಾಯೇ ಸ್ವರ್ಗಂ ಜಗ್ಮುರಥಾಕ್ಷಯಂ ॥ ೨೨೩ ॥

ಪಾದಪಾನಾಂ ಪದಂ ವಿಪ್ರಃ ಪಿಪ್ಪಲಾದಃ ಪ್ರತಾಪವಾನ್ ।
ಕ್ಷೇತ್ರಾಧಿಪತ್ಯೇ ಸಂಸ್ಥಾಪ್ಯ ಪೂಜಯಾಮಾಸ ಶಂಕರಂ ॥ ೨೨೪ ॥

ದಧೀಚಿಸೂನುರ್ಮುನಿರುಗ್ರತೇಜಾ
ಅವಾಪ್ಯ ಭಾರ್ಯಾಂ ಗೌತಮಸ್ಯಾತ್ಮಜಾಂ ಚ ।
ಪುತ್ರಾನಥಾವಾಪ್ಯ ಶ್ರಿಯಂ ಯಶಶ್ಚ
ಸುಹೃಜ್ಜನೈಃ ಸ್ವರ್ಗಮವಾಪ ಧೀರಃ ॥ ೨೨೫ ॥

ತತಃ ಪ್ರಭೃತಿ ತತ್ತೀರ್ಥಂ ಪಿಪ್ಪಲೇಶ್ವರಮುಚ್ಯತೇ ।
ಸರ್ವಕ್ರತುಫಲಂ ಪುಣ್ಯಂ ಸ್ಮರಣಾದಘನಾಶನಂ ॥ ೨೨೬ ॥

---

೨೨೩. ಆಮೇಲೆ ಪಿಪ್ಪಲಾದನಿಂದ ಬೀಳ್ಕೊಂಡು ದೇವತೆಗಳು ಸ್ವರ್ಗಕ್ಕೆ ತೆರಳಿದರು. ಪಿಪ್ಪಲ ವೃಕ್ಷಗಳೂ ಕಾಲಕ್ರಮೇಣ ಸ್ವರ್ಗವನ್ನು ಪಡೆದುವು.

೨೨೪. ನಂತರ ಪಿಪ್ಪಲಾದನು ಪಿಪ್ಪಲಾದವೃಕ್ಷಗಳ ಸ್ಥಾನವನ್ನು ಕ್ಷೇತ್ರಾಧಿಪತಿಯ ರಕ್ಷಣೆಯಲ್ಲಿರಿಸಿ ಅಲ್ಲಿ ಶಂಕರನನ್ನು ಪ್ರತಿಷ್ಠಿಸಿ ಪೂಜಿಸಿದನು.

೨೨೫. ಆಮೇಲೆ ದಧೀಚಿಪುತ್ರನೂ ಮಹಾತೇಜಸ್ವಿಯೂ ಆದ ಆ ಪಿಪ್ಪಲಾದನು ಗೌತಮಮುನಿಯ ಮಗಳನ್ನು ಮದುವೆಯಾದನು. ಅವಳಲ್ಲಿ ಸುಪುತ್ರರನ್ನು ಪಡೆದನು. ಇಹದಲ್ಲಿ ಮಹಾಯಶಸ್ಸನ್ನೂ ಐಶ್ವರ್ಯವನ್ನೂ ಅನುಭವಿಸಿ ಕೊನೆಯಲ್ಲಿ ಸ್ವರ್ಗವನ್ನು ಪಡೆದನು.

೨೨೬. ಅದುಮೊದಲುಗೊಂಡು ಆ ತೀರ್ಥವು ಪಿಪ್ಪಲೇಶ್ವರತೀರ್ಥವೆಂದು ಹೆಸರಾಯಿತು. ಅದು ಸಕಲ ಯಾಗಗಳ ಫಲವನ್ನುಂಟುಮಾಡುವುದು. ಸ್ಮರಿಸಿದ ಮಾತ್ರದಿಂದಲೇ ಪಾಪವನ್ನು ನಾಶಮಾಡುವುದು. ಇನ್ನು ಆ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿ ಆದಿತ್ಯನನ್ನು ದರ್ಶನಮಾಡಿದರೆ ಹೇಳುವುದೇನು ?

ಕಿಂ ಪುನಃ ಸ್ನಾನದಾನಾಭ್ಯಾಮಾದಿತ್ಯಸ್ಯ ತು ದರ್ಶನಾತ್ ।
ಚಕ್ರೇಶ್ವರಃ ಪಿಪ್ಪಲೇಶೋ ದೇವದೇವಸ್ಯ ನಾಮನೀ ॥ ೨೨೭ ॥

ಸರಹಸ್ಯಂ ವಿದಿತ್ವಾ ತು ಸರ್ವಕಾಮಾನವಾಪ್ನುಯಾತ್ ।
ಸೂರ್ಯಸ್ಯ ಚ ಪ್ರತಿಷ್ಠಾನಾತ್ಸುರವಾಸೇ ಪ್ರತಿಷ್ಠಿತೇ ।
ಪ್ರತಿಷ್ಠಾನಂ ತು ತತ್ಕ್ಷೇತ್ರಂ ಸುರಾಣಾಮಪಿ ವಲ್ಲಭಂ ॥ ೨೨೮ ॥

ಇತೀದಮಾಖ್ಯಾನಮತೀವ ಪುಣ್ಯಂ
ಪಠೇತ ವಾ ಯಃ ಶೃಣುಯಾತ್ಸ್ಮರೇದ್ವಾ ।
ಸ ದೀರ್ಘಜೀವೀ ಧನವಾನ್ಸ್ವಧರ್ಮಯುಕ್ತ-
ಶ್ಶಾಂತೇ ಸ್ಮರಜ್ಶಂಭುಮುಪೈತಿ ನಿತ್ಯಂ ॥ ೨೨೯ ॥

ಇತಿ ಶ್ರೀ ಮಹಾಪುರಾಣೇ ಆದಿಬ್ರಾಹ್ಮೇ ಚಕ್ರೇಶ್ವರ ಪಿಪ್ಪಲೇಶ್ವರ ಪಾಪಪ್ರ-
ಣಾಶನ ಗೋತೀರ್ಥ ಪಿತೃತೀರ್ಥ ಸೂರ್ಯಪ್ರತಿಷ್ಠಾನಕೋಟ್ಯಾದಿ
ತೀರ್ಥವರ್ಣನಂ ನಾಮ ದಶಾಧಿಕಶತತಮೋಽಧ್ಯಾಯಃ

---

೨೨೭. ಆ ತೀರ್ಥದಲ್ಲಿ ನೆಲಸಿರುವ ಶಿವನಿಗೆ ಪಿಪ್ಪಲೇಶನೆಂದೂ, ಚಕ್ರೇಶ್ವರನೆಂದೂ ಎರಡು ಹೆಸರುಗಳು. ಈ ತೀರ್ಥಮಾಹಾತ್ಮ್ಯವನ್ನು ಸಂಪೂರ್ಣವಾಗಿ ತಿಳಿದವನು ಇಷ್ಟಾರ್ಥಗಳೆಲ್ಲವನ್ನೂ ಪಡೆಯುವನು.

೨೨೮. ಆ ತೀರ್ಥದಲ್ಲಿ ಸೂರ್ಯನೂ, ಸೂರ್ಯನಲ್ಲಿ ದೇವತೆಗಳೂ ಪ್ರತಿಷ್ಠಿತರಾಗುವುದರಿಂದ ಆ ಕ್ಷೇತ್ರಕ್ಕೆ ಪ್ರತಿಷ್ಠಾನಕ್ಷೇತ್ರವೆಂದು ಹೆಸರು. ಅದು ದೇವತೆಗಳಿಗೆ ತುಂಬಾ ಪ್ರಿಯವಾದುದು.

೨೨೯. ಹೀಗೆ ಹೇಳಿದ ಈ ಪವಿತ್ರವಾದ ತೀರ್ಥಮಾಹಾತ್ಮ್ಯವನ್ನು ಯಾವನು ಓದುವನೋ, ಕೇಳುವನೋ, ಸ್ಮರಿಸುವನೋ ಅವನು ಚಿರಂಜೀವಿಯಾಗುವನು, ಐಶ್ವರ್ಯವಂತನಾಗುವನು, ಧಾರ್ಮಿಕನಾಗುವನು. ಪರದಲ್ಲಿ ಶಿವಲೋಕವನ್ನು ಪಡೆಯುವನು-

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಚಕ್ರೇಶ್ವರ, ಪಿಪ್ಪಲೇಶ್ವರ, ಪಾಪಪ್ರಣಾಶನ,
ಗೋತೀರ್ಥ, ಪಿತೃತೀರ್ಥ, ಸೂರ್ಯಪ್ರತಿಷ್ಠಾನ ಮೊದಲಾದ ಕೋಟಿ
ತೀರ್ಥಗಳವರ್ಣನವೆಂಬ ನೂರಹತ್ತನೆಯ ಅಧ್ಯಾಯವು
ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ನಲವತ್ತೊಂದನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಏಕಾದಶಾಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ನಾಗತೀರ್ಥಮಿತಿ ಖ್ಯಾತಂ ಸರ್ವಕಾಮಪ್ರದಂ ಶುಭಂ ।
ಯತ್ರ ನಾಗೇಶ್ವರೋ ದೇವಃ ಶೃಣು ತಸ್ಯಾಪಿ ವಿಸ್ತರಂ ॥ ೧ ॥

ಪ್ರತಿಷ್ಠಾನಪುರೇ ರಾಜಾ ಶೂರಸೇನ ಇತಿ ಶ್ರುತಃ ।
ಸೋಮವಂಶಭವಃ ಶ್ರೀಮಾನ್ಮತಿಮಾನ್ಗುಣಸಾಗರಃ ॥ ೨ ॥

ಪುತ್ರಾರ್ಥಂ ಸ ಮಹಾಯತ್ನಮಕರೋತ್ಪ್ರಿಯಯಾ ಸಹ ।
ತಸ್ಯ ಪುತ್ರಶ್ಚಿರಾದಾಸೀತ್ಸರ್ಪೋ ವೈ ಭಿಷಣಾಕೃತಿಃ ॥ ೩ ॥

ನೂರಹನ್ನೊಂದನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ನಾಗತೀರ್ಥವೆಂಬ ತೀರ್ಥವೊಂದಿರುವುದು. ಅದು ಸಕಲೇಷ್ಟಾರ್ಥಗಳನ್ನೂ ಉಂಟುಮಾಡುವುದು. ಆ ತೀರ್ಥದಲ್ಲಿ ಶಿವನು ನಾಗಲಿಂಗೇಶ್ವರನೆಂಬ ಹೆಸರಿನಿಂದ ನೆಲಸಿರುವನು.

೨. ಹಿಂದೆ ಪ್ರತಿಷ್ಠಾನಪುರದಲ್ಲಿ ಶೂರಸೇನನೆಂಬ ಚಂದ್ರವಂಶದ ರಾಜನು ಆಳುತ್ತಿದ್ದನು. ಅವನು ಶ್ರೀಮಂತನೂ, ಬುದ್ಧಿವಂತನೂ, ಸುಗುಣಿಯೂ ಆಗಿದ್ದನು.

೩. ಆ ರಾಜನು ಮಕ್ಕಳನ್ನು ಪಡೆಯಲು ಪತ್ನಿಯೊಡನೆ ಬಹು ಕಷ್ಟಪಟ್ಟನು. ಬಹಳಕಾಲದಮೇಲೆ ಅವನಿಗೆ ಭಯಂಕರ ಸರ್ಪವೊಂದು ಪುತ್ರನಾಗಿ ಜನಿಸಿತು.

ಪುತ್ರಂ ತಂ ಗೋಪಯಾಮಾಸ ಶೂರಸೇನೋ ಮಹೀಪತಿಃ ।
ರಾಜ್ಞಃ ಪುತ್ರಃ ಸರ್ಪ ಇತಿ ನ ಕಶ್ಚಿದ್ವಿಂದತೇ ಜನಃ ॥ ೪ ॥

ಅಂತರ್ವರ್ತೀ ಪರೋ ವ್ಯಾಪಿ ಮಾತರಂ ಪಿತರಂ ವಿನಾ ।
ಧಾತ್ರೇಯ್ಯಪಿ ನ ಜಾನಾತಿ ನಾಮಾತ್ಯೋ ನ ಪುರೋಹಿತಃ ॥ ೫ ॥

ತಂ ದೃಷ್ಟ್ವಾ ಭೀಷಣಂ ಸರ್ಪಂ ಸಭಾರ್ಯೋ ನೃಪಸತ್ತಮಃ ।
ಸಂತಾಪಂ ನಿತ್ಯಮಾಪ್ನೋತಿ ಸರ್ಪಾದ್ವರಮಪುತ್ರತಾ ॥ ೬ ॥

ಏತದಸ್ತಿ ಮಹಾಸರ್ಪೋ ವಕ್ತಿ ನಿತ್ಯಂ ಮನುಷ್ಯವತ್ ।
ಸ ಸರ್ಪಃ ಪಿತರಂ ಪ್ರಾಹ ಕುರು ಚೂಡಾಮಪಿ ಕ್ರಿಯಾಂ ॥ ೭ ॥

ತಥೋಪನಯನಂ ಚಾಪಿ ವೇದಾಧ್ಯಯನಮೇವ ಚ ।
ಯಾವದ್ವೇದಂ ನ ಚಾಧೀತೇ ತಾವಚ್ಛೂದ್ರಸಮೋ ದ್ವಿಜಃ ॥ ೮ ॥

---

೪. ಈ ಜನಿಸಿದ ಸರ್ಪವನ್ನು ರಾಜನು ಗುಟ್ಟಾಗಿರಿಸಿದನು. ರಾಜನಿಗೆ ಸರ್ಪವು ಹುಟ್ಟಿರುವುದೆಂದು ಯಾರಿಗೂ ತಿಳಿಯಲಿಲ್ಲ.

೫. ತಂದೆತಾಯಿಗಳಿಗೆ ಹೊರತು ಅರಮನೆಯೊಳಗಿದ್ದವರಿಗೂ ಸರ್ಪವು ಜನಿಸಿದ ಸಮಾಚಾರವು ತಿಳಿಯಲಿಲ್ಲ, ದಾಸಿಯರು, ಮಂತ್ರಿಗಳು, ಪುರೋಹಿತರು ಇವರಿಗೂ ತಿಳಿದಿರಲಿಲ್ಲ.

೬. ಭಯಂಕರವಾದ ಆ ಸರ್ಪವು ಜನಿಸಿದುದರಿಂದ ಶೂರಸೇನನೂ ಅವನ ರಾಣಿಯೂ ಈ ಸರ್ಪವು ಹುಟ್ಟುವುದಕ್ಕಿಂತಲೂ ಮಕ್ಕಳಿಲ್ಲದಿರುವುದೇ ಲೇಸು ಎಂದು ಚಿಂತಿಸುತ್ತಿದ್ದರು.

೭-೮. ಆದರೆ ಆ ಸರ್ಪವು ಮನುಷ್ಯರಂತೆ ಮಾತನಾಡುತ್ತಿದ್ದಿತು. ಆ ಸರ್ಪವು ತಂದೆಗೆ ಹೀಗೆ ಹೇಳಿತು—ಓ ತಂದೆ, ನನಗೆ ಚೂಡಾಕರ್ಮವನ್ನೂ ಉಪನಯನವನ್ನೂ ಸಕಾಲಕ್ಕೆ ಮಾಡಿಸು. ವೇದಾಧ್ಯಯನವನ್ನು ಮಾಡಿಸು. ವೇದವನ್ನು ಅಧ್ಯಯನಮಾಡದವನು ಶೂದ್ರನಿಗೆ ಸಮಾನನು ಎಂದಿತು.

॥ ಬ್ರಹ್ಮೋವಾಚ ॥

ಏತಚ್ಛ್ರುತ್ವಾ ಪುತ್ರವಚಃ ಶೂರಸೇನೋಽತಿದುಃಖಿತಃ ।
ಬ್ರಾಹ್ಮಣಂ ಕಂಚನಾಽನೀಯ ಸಂಸ್ಕಾರಾದಿ ತದಾಽಕರೋತ್ ।
ಅಧೀತವೇದಃ ಸರ್ಪೋಽಪಿ ಪಿತರಂ ಚಾಬ್ರವೀದಿದಂ ॥ ೯ ॥

॥ ಸರ್ಪ ಉವಾಚ ॥

ವಿವಾಹಂ ಕುರು ಮೇ ರಾಜನ್ ಸ್ತ್ರೀಕಾಮೋಽಹಂ ನೃಪೋತ್ತಮ ।
ಅನ್ಯಥಾಽಪಿ ಚ ಕೃತ್ಯಂ ತೇ ನ ಸಿಧ್ಯೇದಿತಿ ಮೇ ಮತಿಃ ॥ ೧೦ ॥

ಜನಯಿತ್ವಾಽತ್ಮಜಾನ್ವೇದವಿಧಿನಾಽಖಿಲಸಂಸ್ಕೃತೀಃ ।
ನ ಕುರ್ಯಾದ್ಯಃ ಪಿತಾ ತಸ್ಯ ನರಕಾನ್ನಾಸ್ತಿ ನಿಷ್ಕೃತಿಃ ॥ ೧೧ ॥

॥ ಬ್ರಹ್ಮೋವಾಚ ॥

ವಿಸ್ಮಿತಃ ಸ ಪಿತಾ ಪ್ರಾಹ ಸುತಂ ತಮುರಗಾಕೃತಿಂ ॥ ೧೨ ॥

---

೯. ಪುತ್ರನ ಮಾತನ್ನು ಕೇಳಿ ಶೂರಸೇನರಾಜನು ದುಃಖಗೊಂಡು ಬ್ರಾಹ್ಮಣನೋರ್ವನನ್ನು ಕರೆಯಿಸಿ ಆ ಸರ್ಪಕ್ಕೆ ಚೂಡಾಕರ್ಮವೇ ಮೊದಲಾದ ಸಂಸ್ಕಾರಗಳನ್ನು ಮಾಡಿಸಿದನು. ವೇದಾಧ್ಯಯನವನ್ನು ಮಾಡಿ ಆಸರ್ಪವು ತಂದೆಯನ್ನು ಕುರಿತು.

೧೦. ಓ ರಾಜ, ನನಗೆ ಓರ್ವ ಸ್ತ್ರೀಯು ಬೇಕಾಗಿರುವಳು. ನನಗೆ ಮದುವೆಮಾಡು. ನನಗೆ ಮದುವೆಮಾಡಿದರೆ ನೀನು ಸಂಪೂರ್ಣವಾಗಿ ಕೃತಕೃತ್ಯನಾಗುವೆ.

೧೧. ಪುತ್ರರನ್ನು ಪಡೆದು ಅವರಿಗೆ ಸಂಸ್ಕಾರಗಳೆಲ್ಲವನ್ನೂ ವೇಧವಿಧಿಯಿಂದ ಮಾಡದೇ ಇದ್ದರೆ ತಂದೆಗೆ ಉತ್ತಮಗತಿಯು ಲಭಿಸುವುದಿಲ್ಲ. ನರಕವೇ ಗತಿ ಎಂದಿತು.

೧೨- ತಂದೆಯಾದ ಆ ಶೂರಸೇನನು ಆಶ್ಚರ್ಯಗೊಂಡು ಸರ್ಪರೂಪವಾದ ಆ ಪುತ್ರನಿಗೆ

॥ ಶೂರಸೇನ ಉವಾಚ ॥
ಯಸ್ಯ ಶಬ್ದಾದಪಿ ತ್ರಾಸಂ ಯಾಂತಿ ಶೂರಾಶ್ಚ ಪೂರುಷಾಃ ।
ತಸ್ಮೈ ಕನ್ಯಾಂ ತು ಕೋ ದದ್ಯಾದ್ವದ ಪುತ್ರ ಕರೋಮಿ ಕಿಂ ॥ ೧೩ ॥

॥ ಬ್ರಹ್ಮೋವಾಚ ॥
ತತ್ಪಿತುರ್ವಚನಂ ಶ್ರುತ್ವಾ ಸರ್ಪಃ ಪ್ರಾಹ ವಿಚಕ್ಷಣಃ ॥ ೧೪ ॥

॥ ಸರ್ಪ ಉವಾಚ ॥
ವಿವಾಹಾ ಬಹವೋ ರಾಜನ್ರಾಜ್ಞಾಂ ಸಂತಿ ಜನೇಶ್ವರ ।
ಪ್ರಸಹ್ಯಾಹರಣಂ ಚಾಪಿ ಶಸ್ತ್ರೈರ್ವೈವಾಹ ಏವ ಚ ॥ ೧೫ ॥

ಜಾತೇ ವಿವಾಹೇ ಪುತ್ರಸ್ಯ ಪಿತಾಽಸೌ ಕೃತಕೃದ್ಭವೇತ್ ।
ನೋ ಚೇದತ್ರೈವ ಗಂಗಾಯಾಂ ಮರಿಷ್ಯೇ ನಾತ್ರ ಸಂಶಯಃ ॥ ೧೬ ॥

॥ ಬ್ರಹ್ಮೋವಾಚ ॥
ತತ್ಪುತ್ರನಿಶ್ಚಯಂ ಜ್ಞಾತ್ವಾ ಅಪುತ್ರೋ ನೃಪಸತ್ತಮಃ ।
ವಿವಾಹಾರ್ಥಮಮಾತ್ಯಾಂಸ್ತಾನಾಹೂಯೇದಂ ವಚೋಽಬ್ರವೀತ್ ॥ ೧೭ ॥

---

೧೩. ಸರ್ಪದ ಹೆಸರನ್ನು ಕೇಳಿದ ಮಾತ್ರಕ್ಕೆ ಎಂತಹ ಶೂರರೂ ಭಯಗೊಳ್ಳುವರು. ಹೀಗಿರಲು ಘೋರಸರ್ಪವಾದ ನಿನಗೆ ಕನ್ಯೆಯನ್ನು ಕೊಡುವವರಾರು? ಏನುಮಾಡಲಿ? ಹೇಳೆನಲು,

೧೪-೧೫. ತಂದೆಯಮಾತನ್ನು ಕೇಳಿ ಸರ್ಪವು ಓ ರಾಜ, ರಾಜರಿಗೆ ಅನೇಕತರಹೆಯ ವಿವಾಹಗಳಿರುವುವು. ಯುದ್ಧವನ್ನು ಮಾಡಿ ಬಲಾತ್ಕಾರದಿಂದ ವಧೂವನ್ನು ಅಪಹರಿಸಬಹುದು. ಇದು ಕ್ಷತ್ರಿಯರಿಗೆ ವಿಹಿತವಾದುದೇ ಆಗಿರುವುದು.

೧೬. ಪುತ್ರನಿಗೆ ಮದುವೆಮಾಡಿದರೆ ಪಿತನು ಕೃತಕೃತ್ಯನಾಗುವನು. ನನಗೆ ಮದುವೆಯಾಗದಿದ್ದರೆ ಇಲ್ಲಿಯೇ ಗಂಗೆಯಲ್ಲಿ ಬಿದ್ದು ಪ್ರಾಣಗಳನ್ನು ಕಳೆದುಕೊಳ್ಳುವೆನು ಎನ್ನಲು,

೧೭. ಪುತ್ರನ ಆ ಮಾತನ್ನು ಕೇಳಿ ಬೇರೆ ಮಕ್ಕಳಿಲ್ಲದ ಆ ರಾಜನು ಮದುವೆಯ ವಿಚಾರವನ್ನು ಚರ್ಚಿಸಲು ಮಂತ್ರಿಗಳೆಲ್ಲರನ್ನೂ ಕರೆಯಿಸಿ,

॥ ಶೂರಸೇನ ಉವಾಚ ॥

ನಾಗೇಶ್ವರೋ ಮಮ ಸುತೋ ಯುವರಾಜೋ ಗುಣಾಕರಃ ।
ಗುಣವಾನ್ಮತಿಮಾಞ್ಛೂರೋ ದುರ್ಜಯಃ ಶತ್ರುತಾಪನಃ ॥ ೧೮ ॥

ರಥೇ ನಾಗೇ ಸ ಧನುಷಿ ಪೃಥಿವ್ಯಾಂ ನೋಪಮೀಯತೇ ।
ವಿವಾಹಸ್ತಸ್ಯ ಕರ್ತವ್ಯೋ ಹ್ಯಹಂ ವೃದ್ಧಸ್ತಥೈವ ಚ ॥ ೧೯ ॥

ರಾಜ್ಯಭಾರಂ ಸುತೇ ನ್ಯಸ್ಯ ನಿಶ್ಚಿಂತೋಽಹಂ ಭವಾಮ್ಯತಃ ।
ನ ದಾರಸಂಗ್ರಹೋ ಯಾವತ್ತಾವತ್ಪುತ್ರೋ ಮಮ ಪ್ರಿಯಃ ॥ ೨೦ ॥

ಬಾಲಭಾವಂ ನೋ ಜಹಾತಿ ತಸ್ಮಾತ್ಸರ್ವೇಽನುಮನ್ಯ ಚ ।
ವಿವಾಹಾಯಾಥ ಕುರ್ವಂತು ಯತ್ನಂ ಮಮ ಹಿತೇ ರತಾಃ ॥ ೨೧ ॥

---

೧೮. ಎಲೈ ಮಂತ್ರಿಗಳೇ, ನನ್ನ ಪುತ್ರನೂ ಯುವರಾಜನೂ ಆದ ನಾಗೇಶ್ವರನು ಗುಣವಂತನಾಗಿರುವನು. ಅವನು ಬುದ್ಧಿವಂತನೂ ಶೂರನೂ ಆಗಿರುವನು. ಅಜೇಯನವನು, ಶತ್ರುಗಳನ್ನು ಪರಾಕ್ರಮದಿಂದ ಸಂಹರಿಸುವವನು.

೧೯. ಭೂಮಿಯಲ್ಲಿ ರಥಯುದ್ಧದಲ್ಲಿಯೂ, ಗಜಯುದ್ಧದಲ್ಲಿಯೂ ಧನುರ್ಯುದ್ಧದಲ್ಲಿಯೂ ಅವನಿಗೆ ಸಾಟಿಯಾದವರಿಲ್ಲ. ಆ ನನ್ನ ಕುವರನಿಗೆ ಮದುವೆಯನ್ನು ಮಾಡಬೇಕು.

೨೦. ನಾನು ಮುದುಕನಾದೆನು. ಮದುವೆಮಾಡಿ ಆ ಕುವರನಲ್ಲಿ ರಾಜ್ಯಭಾರವನ್ನಿರಿಸಿ ನಾನು ನಿಶ್ಚಿಂತತೆಯಿಂದ ಕಾಲಕಳೆಯುವೆನು. ಮದುವೆಯನ್ನು ಮಾಡುವವರಿಗೆ ಪುತ್ರನು ನನಗೆ ಪ್ರಿಯನು. ಪುತ್ರನಿಗೆ ಮದುವೆಮಾಡುವುದು ತಂದೆಗೆ ಕರ್ತವ್ಯವು.

೨೧. ಆ ಪುತ್ರನಿನ್ನೂ ಬಾಲ್ಯವನ್ನು ಬಿಟ್ಟಿಲ್ಲ, ಮದುವೆಯಾದರೆ ಬಿಡುವನು. ಆದುದರಿಂದ ನನ್ನ ಹಿತಚಿಂತಕರಾದ ನೀವೆಲ್ಲರೂ ನನ್ನ ಕುಮಾರನಿಗೆ ಮದುವೆಮಾಡಲು ಯತ್ನವನ್ನು ಮಾಡಿರಿ.

ನ ಮೇ ಕಾಚಿತ್ತದಾ ಚಿಂತಾ ಕೃತೋದ್ವಾಹೋ ಯದಾSತ್ಮಜಃ ।
ಸುತೇ ನ್ಯಸ್ತಭರಾ ಯಾಂತಿ ಕೃತಿನಸ್ತಪಸೇ ವನಂ ॥ ೨೨ ॥

॥ ಬ್ರಹ್ಮೋವಾಚ ॥

ಅಮಾತ್ಯಾ ರಾಜವಚನಂ ಶ್ರುತ್ವಾ ಸರ್ವೇ ವಿನೀತವತ್ ।
ಊಚುಃ ಪ್ರಾಂಜಲಯೋ ಹರ್ಷಾದ್ರಾಜಾನಂ ಭೂರಿತೇಜಸಂ ॥ ೨೩ ॥

॥ ಅಮಾತ್ಯಾ ಊಚುಃ ॥

ತವ ಪುತ್ರೋ ಗುಣಜ್ಯೇಷ್ಠಸ್ತ್ವಂ ಚ ಸರ್ವತ್ರ ವಿಶ್ರುತಃ ।
ವಿವಾಹೇ ತವ ಪುತ್ರಸ್ಯ ಕಿಂ ಮಂತ್ರ್ಯಂ ಕಿಂತು ಚಿಂತ್ಯತೇ ॥ ೨೪ ॥

॥ ಬ್ರಹ್ಮೋವಾಚ ॥

ಅಮಾತ್ಯೇಷು ತಥೋಕ್ತೇಷು ಗಂಭೀರೋ ನೃಪಸತ್ತಮಃ ।
ಪುತ್ರಂ ಸರ್ಪಂ ತ್ವಮಾತ್ಯಾನಾಂ ನ ಚಾSSಖ್ಯಾತಿ ನ ತೇ ವಿದುಃ ॥ ೨೫ ॥

---

೨೨. ಪುತ್ರನಿಗೆ ಮದುವೆಯಾದರೆ ನನ್ನ ಚಿಂತೆಯೆಲ್ಲವೂ ಕಳೆಯುವುದು. ಪುಣ್ಯವಂತರು ಪುತ್ರನಲ್ಲಿ ರಾಜ್ಯಭಾರವನ್ನಿರಿಸಿ ತಪಸ್ಸಿಗಾಗಿ ವನಕ್ಕೆ ತೆರಳುವರು ಎಂದನು,

೨೩. ಮಂತ್ರಿಗಳು ರಾಜನ ಆ ಮಾತನ್ನು ಕೇಳಿ ಎಲ್ಲರೂ ಸಂತಸ ಗೊಂಡು ವಿನಯದಿಂದ.

೨೪. ನಿನ್ನ ಪುತ್ರನು ಗುಣವಂತನೆಂದು ಪ್ರಸಿದ್ಧನಾಗಿರುವನು. ಅವನ ಮದುವೆಗೆ ಚಿಂತೆಯೇನು? ಈ ವಿಷಯದಲ್ಲಿ ಆಲೋಚಿಸುವುದೇನಿರುವುದು? ಎಂದರು.

೨೫. ಮಂತ್ರಿಗಳು ಹಾಗೆ ಹೇಳಲು ರಾಜನು ಗಂಭೀರನಾಗಿ ತನ್ನ ಪುತ್ರನು ಸರ್ಪವೆಂದು ಹೇಳಲಿಲ್ಲ. ಆ ಮಂತ್ರಿಗಳಿಗೂ ಆ ರಹಸ್ಯವು ತಿಳಿದಿರಲಿಲ್ಲ.

ರಾಜಾ ಪುನಸ್ತಾನುವಾಚ ಕಾ ಸ್ಯಾತ್ಕನ್ಯಾ ಗುಣಾಧಿಕಾ ।
ಮಹಾವಂಶಭವಃ ಶ್ರೀಮಾನ್ಕೋ ರಾಜಾ ಸ್ಯಾದ್ಗುಣಾಶ್ರಯಃ ॥ ೨೬ ॥

ಸಂಬಂಧಯೋಗ್ಯಃ ಶೂರಶ್ಚ ಯತ್ಸಂಬಂಧಃ ಪ್ರಶಸ್ಯತೇ ।
ತದ್ರಾಜವಚನಂ ಶ್ರುತ್ವಾ ಅಮಾತ್ಯಾನಾಂ ಮಹಾಮತಿಃ ॥ ೨೭ ॥

ಕುಲೀನಃ ಸಾಧುರತ್ಯಂತಂ ರಾಜಕಾರ್ಯಹಿತೇ ರತಃ ।
ರಾಜ್ಞೋ ಮತಿಂ ವಿದಿತ್ವಾ ತು ಇಂಗಿತಜ್ಞೋಽಬ್ರವೀದಿದಂ ॥ ೨೮ ॥

॥ ಅಮಾತ್ಯ ಉವಾಚ ॥

ಪೂರ್ವದೇಶೇ ಮಹಾರಾಜ ವಿಜಯೋ ನಾಮ ಭೂಪತಿಃ ।
ವಾಜಿವಾರಣರತ್ನಾನಾಂ ಯಸ್ಯ ಸಂಖ್ಯಾ ನ ವಿದ್ಯತೇ ॥ ೨೯ ॥

---

೨೬. ಆಗ ರಾಜನು ಮಂತ್ರಿಗಳಿಗೆ—ಗುಣವತಿಯಾದ ಕನ್ನೆಯು ಎಲ್ಲಿರುವಳು? ಕುಲೀನನೂ ಗುಣವಂತನೂ ಶೂರನೂ ಆದ ರಾಜನಾರು? ಯಾವ ರಾಜನೊಡನೆ ನಾವು ಸಂಬಂಧವನ್ನು ಬೆಳೆಸಬಹುದು ಎಂದು ಕೇಳಿದನು

೨೭-೨೮. ಆ ರಾಜನ ಮಂತ್ರಿಗಳಲ್ಲಿ ತುಂಬಾ ಬುದ್ಧಿಶಾಲಿಯಾದ ಮಂತ್ರಿಯೊಬ್ಬನಿದ್ದನು. ಅವನು ಕುಲೀನನೂ ಸತ್ಪುರುಷನೂ ಆಗಿದ್ದನು. ರಾಜಕಾರ್ಯವನ್ನು ಶ್ರದ್ಧೆಯಿಂದ ನಿರ್ವಹಿಸುತ್ತಿದ್ದನು. ಇನ್ನೊಬ್ಬರ ರಹಸ್ಯವನ್ನು ತಿಳಿಯಬಲ್ಲ ಚತುರನು. ಇಂತಹ ಆ ಮಂತ್ರಿಯು ರಾಜನ ಅಭಿಪ್ರಾಯವನ್ನು ತಿಳಿದು,

೨೯. ಓ ಮಹಾರಾಜ, ಪೂರ್ವದೇಶದಲ್ಲಿ ವಿಜಯನೆಂಬ ರಾಜನಿರುವನು. ಅವನಲ್ಲಿರುವ ಕುದುರೆ ಆನೆ ರತ್ನಗಳಿಗೆ ಲೆಖ್ಖವೇ ಇಲ್ಲ.

ಅಷ್ಟೌ ಪುತ್ರಾ ಮಹೇಷ್ವಾಸಾ ಮಹಾರಾಜಸ್ಯ ಧೀಮತಃ ।
ತೇಷಾಂ ಸ್ವಸಾ ಭೋಗವತೀ ಸಾಕ್ಷಾಲ್ಲಕ್ಷ್ಮೀರಿವಾಪರಾ ।
ತವ ಪುತ್ರಸ್ಯ ಯೋಗ್ಯಾ ಸಾ ಭಾರ್ಯಾರ್ಥ ರಾಜಸತ್ತಮ ಯೋದಿತಾ ॥ ೩೦ ॥

॥ ಬ್ರಹ್ಮೋವಾಚ ॥

ವೃದ್ಧಾಮಾತ್ಯವಚಃ ಶ್ರುತ್ವಾ ರಾಜಾ ತಂ ಪ್ರತ್ಯಭಾಷತ ॥ ೩೧ ॥

॥ ರಾಜೋವಾಚ ॥

ಸುತಾ ತಸ್ಯ ಕಥಂ ಮೇಽಸ್ಯ ಸುತಸ್ಯ ಸ್ಯಾದ್ವದಸ್ವ ತತ್ ॥ ೩೨ ॥

ವೃದ್ಧಾಮಾತ್ಯ ಉವಾಚ ॥

ಲಕ್ಷಿತೋಽಸಿ ಮಹಾರಾಜ ಯತ್ತೇ ಮನಸಿ ವರ್ತತೇ ।
ಯಚ್ಛೂರಸೇನ ಕೃತ್ಯಂ ಸ್ಯಾದನುಜಾನೀಹಿ ಮಾಂ ತತಃ ॥ ೩೩ ॥

॥ ಬ್ರಹ್ಮೋವಾಚ ॥

ವೃದ್ಧಾಮಾತ್ಯವಚಃ ಶ್ರುತ್ವಾ ಭೂಷಣಾಚ್ಛಾದನೋಕ್ತಿಭಿಃ ।
ಸಂಪೂಜ್ಯ ಪ್ರೇಷಯಾಮಾಸ ಮಹತ್ಯಾ ಸೇನಯಾ ಸಹ ॥ ೩೪ ॥

---

೩೦. ಆ ವಿಜಯರಾಜನಿಗೆ ಎಂಟುಮಂದಿ ಶೂರರಾದ ಮಕ್ಕಳಿರುವರು. ಅವರಿಗೆ ಭೋಗವತಿಯೆಂಬ ಸಹೋದರಿಯು ಇರುವಳು. ಅವಳು ತುಂಬಾ ಸುಂದರಿಯು. ಎರಡನೆಯ ಲಕ್ಷ್ಮಿಯಂತಿರುವಳು. ಆ ಭೋಗವತಿಯು ನಿನ್ನ ಮಗನಿಗೆ ಅನುರೂಪಳಾದ ಮಡದಿಯಾಗಬಲ್ಲಳು ಎಂದನು.

೩೧-೩೩. ವೃದ್ಧಮಂತ್ರಿಯು ಹೇಳಿದ ಮಾತನ್ನು ಕೇಳಿ ರಾಜನು ವಿಜಯರಾಜನ ಮಗಳು ನನ್ನ ಈ ಮಗನಿಗೆ ಪತ್ನಿಯಾಗುವುದು ಹೇಗೆ? ಅದನ್ನು ಹೇಳೆನಲು, ಅದಕ್ಕೆ ವೃದ್ಧಮಂತ್ರಿಯು ಓ ಶೂರಸೇನ ಮಹಾರಾಜ, ನಿನ್ನ ಮನಸ್ಸಿನ ಅಭಿಪ್ರಾಯವು ತಿಳಿಯಿತು. ನಾನು ಮುಂದೆ ಮಾಡಬೇಕಾದ ಕಾರ್ಯಕ್ಕೆ ಅನುಮತಿ ಕೊಡು ಎಂದನು.

೩೪. ವೃದ್ಧಮಂತ್ರಿಯ ಮಾತನ್ನು ಕೇಳಿ ರಾಜನು ಅವನನ್ನು ವಸ್ತ್ರಾಲಂಕಾರಗಳಿಂದ ಗೌರವಿಸಿ ಸೇನೆಯೊಡನೆ ಕಳುಹಿಸಿದನು.

ಸ ಪೂರ್ವದೇಶಮಾಗತ್ಯ ಮಹಾರಾಜಂ ಸಮೇತ್ಯ ಚ ।
ಸಂಪೂಜ್ಯ ವಿವಿಧೈರ್ವಾಕ್ಯೈರುಪಾಯೈರ್ನೀತಿಸಂಭವೈಃ ॥ ೩೫ ॥

ಮಹಾರಾಜಸುತಾಯಾಶ್ಚ ಭೋಗವತ್ಯಾ ಮಹೀಪತಿಃ ।
ಶೂರಸೇನಸ್ಯ ನೃಪತೇಃ ಸೂನೋರ್ನಾಗಸ್ಯ ಧೀಮತಃ ॥ ೩೬ ॥

ವಿವಾಹಾಯಾಕರೋತ್ಸಂಧಿಂ ಮಿಥ್ಯಾಮಿಥ್ಯಾವಚೋಕ್ತಿಭಿಃ ।
ಪೂಜಯಾಮಾಸ ನೃಪತಿಂ ಭೂಷಣಾಚ್ಛಾದನಾದಿಭಿಃ ॥ ೩೭ ॥

ಅವಾಪ್ಯ ಪೂಜಾಂ ನೃಪತಿರ್ದದಾಮೀತ್ಯವದತ್ತದಾ ।
ತತ ಆಗತ್ಯ ರಾಜ್ಞೋಽಸೌ ವೃದ್ಧಾಮಾತ್ಯೋ ಮಹಾಮತಿಃ ॥ ೩೮ ॥

ಶೂರಸೇನಾಯ ತದ್ವೃತ್ತಂ ವೈವಾಹಿಕಮವೇದಯತ್ ।
ತತೋ ಬಹುತಿಥೇ ಕಾಲೇ ವೃದ್ಧಾಮಾತ್ಯೋ ಮಹಾಮತಿಃ ॥ ೩೯ ॥

೩೫-೩೬. ಆ ಮಂತ್ರಿಯು ಪೂರ್ವದೇಶಕ್ಕೆ ಬಂದು ವಿಜಯರಾಜನನ್ನು ಕಂಡು ಶೂರಸೇನನಿತ್ತ ಖಿಲ್ಲತ್ತುಗಳಿಂದ ಗೌರವಿಸಿದನು. ನೀತಿವಾಕ್ಯಗಳಿಂದಲೂ ಕೆಲವು ಸುಳ್ಳು, ಕೆಲವು ನಿಜವಾದ ಮಾತುಗಳಿಂದಲೂ ವಿಜಯರಾಜನನ್ನೊಡಂಬಡಿಸಿ ಅವನ ಮಗಳಾದ ಭೋಗವತಿಗೂ ಶೂರಸೇನರಾಜನ ಮಗನಾದ ನಾಗೇಶ್ವರನಿಗೂ ಮದುವೆಯಾಗುವ ನಿಶ್ಚಯವನ್ನು ಮಾಡಿಸಿದನು.

೩೭. ಆ ವಿಜಯರಾಜನಿಗೆ ಬೆಲೆಬಾಳುವ ವಸ್ತ್ರಾಲಂಕಾರಗಳನ್ನು ಕೊಟ್ಟು ಗೌರವಿಸಿದನು. ಹೀಗೆ ಗೌರವಿಸಲ್ಪಟ್ಟು ಆ ರಾಜನು ಕನ್ಯೆಯನ್ನು ಕೊಡುವೆನೆಂದೊಪ್ಪಿಕೊಂಡನು.

೩೮. ಆಮೇಲೆ ವೃದ್ಧಮಂತ್ರಿಯು ಅಲ್ಲಿಂದ ಹೊರಟು ತನ್ನ ಊರಿಗೆ ಬಂದು ಶೂರಸೇನನಿಗೆ ಮದುವೆಯ ನಿಶ್ಚಯಮಾಡಿದುದನ್ನು ಹೇಳಿದನು.

೩೯-೪೧. ಆಮೇಲೆ ಕೆಲವು ಕಾಲವು ಕಳೆಯಲು ವೃದ್ಧಮಂತ್ರಿಯು ಬೆಲೆಬಾಳುವ ವಸ್ತ್ರಾಲಂಕಾರಗಳನ್ನು ತೆಗೆದುಕೊಂಡು ರಾಜಪರಿವಾರದೊಡ

ಪುನರ್ಬಲೇನ ಮಹತಾ ವಸ್ತ್ರಾಲಂಕಾರಭೂಷಿತಃ ।
ಜಗಾಮ ತರಸಾ ಸರ್ವೈರನ್ಯೈಶ್ಚ ಸಚಿವೈರ್ವೃತಃ ॥ ೪೦ ॥

ವಿವಾಹಾಯ ಮಹಾಮಾತ್ಯೋ ಮಹಾರಾಜಾಯ ಬುದ್ಧಿಮಾನ್ ।
ಸರ್ವಂ ಪ್ರೋವಾಚ ವೃದ್ಧೋಽಸಾವಮಾತ್ಯಃ ಸಚಿವೈರ್ವೃತಃ ॥ ೪೧ ॥

॥ ವೃದ್ಧಾಮಾತ್ಯ ಉವಾಚ ॥

ಅತ್ರಾಗಂತು ನ ಚಾಯಾತಿ ಶೂರಸೇನಸ್ಯ ಭೂಪತೇಃ ।
ಪುತ್ರೋ ನಾಗ ಇತಿ ಖ್ಯಾತೋ ಬುದ್ಧಿಮಾನ್ಗುಣಸಾಗರಃ ॥ ೪೨ ॥

ಕ್ಷತ್ರಿಯಾಣಾಂ ವಿವಾಹಾಶ್ಚ ಭವೇಯುರ್ಬಹುಧಾ ನೃಪ ।
ತಸ್ಮಾಚ್ಛಸ್ತ್ರೈರಲಂಕಾರೈರ್ವಿವಾಹಃ ಸ್ಯಾನ್ಮಹಾಮತೇ ॥ ೪೩ ॥

ಕ್ಷತ್ರಿಯಾ ಬ್ರಾಹ್ಮಣಾಶ್ಚೈವ ಸತ್ಯಾಂ ವಾಚಂ ವದಂತಿ ಹಿ ।
ತಸ್ಮಾಚ್ಛಸ್ತ್ರೈರಲಂಕಾರೈರ್ವಿವಾಹಸ್ತ್ವನುಮನ್ಯತಾಂ ॥ ೪೪ ॥

ನೆಯೂ ಮಂತ್ರಿಗಳೊಡನೆಯೂ ಸೈನ್ಯದೊಡನೆಯೂ ರಾಜಪುತ್ರನ ಮದುವೆಗಾಗಿ ವಿಜಯರಾಜನಪಟ್ಟಣಕ್ಕೆ ಬಂದು ಅವನನ್ನು ಕಂಡು ಮಿಕ್ಕ ಮಂತ್ರಿಗಳೊಡನೆ ಆ ರಾಜನಿಗೆ ಇಂತು ನುಡಿದನು.

೪೨. ಓ ರಾಜನೇ, ಶೂರಸೇನರಾಜನ ಮಗನಾದ, ಗುಣವಂತನೂ ಬುದ್ಧಿವಂತನೂ ಆದ ನಾಗೇಶ್ವರನು ಇಲ್ಲಿಗೆ ಬರಲಿಷ್ಟಪಡುವುದಿಲ್ಲ.

೪೩. ಕ್ಷತ್ರಿಯರಿಗೆ ನಾನಾಬಗೆಯಿಂದ ವಿವಾಹಗಳಾಗುವುವು. ಆದುದರಿಂದ ಈ ರಾಜಪುತ್ರನ ಶಸ್ತ್ರ ಮತ್ತು ಅಲಂಕಾರಗಳೊಡನೆ ಕನ್ಯೆಗೆ ವಿವಾಹವಾಗಲಿ.

೪೪. ಕ್ಷತ್ರಿಯರೂ ಬ್ರಾಹ್ಮಣರೂ ಸತ್ಯವನ್ನೇ ಹೇಳುವರು. ಆದುದರಿಂದ ರಾಜಪುತ್ರನ ಈ ಅಸ್ತ್ರ ಮತ್ತು ಅಲಂಕಾರಗಳೊಡನೆ ವಿವಾಹವಾಗಲು ಅನುಮತಿಸು ಎಂದು ಕೇಳಿಕೊಳ್ಳಲು,

॥ ಬ್ರಹ್ಮೋವಾಚ ॥

ವೃದ್ಧಾಮಾತ್ಯವಚಃ ಶ್ರುತ್ವಾ ವಿಜಯೋ ರಾಜಸತ್ತಮಃ ।
ಮೇನೇ ವಾಕ್ಯಂ ತಥಾ ಸತ್ಯಮಮಾತ್ಯಂ ಭೂಪತಿಂ ತದಾ ॥ ೪೫ ॥

ವಿವಾಹಮಕರೋದ್ರಾಜಾ ಭೋಗವತ್ಯಾಃ ಸವಿಸ್ತರಂ ।
ಶಸ್ತ್ರೇಣ ಚ ಯಥಾಶಾಸ್ತ್ರಂ ಪ್ರೇಷಯಾಮಾಸ ತಾಂ ಪುನಃ ॥ ೪೬ ॥

ಸ್ವಾನಮಾತ್ಯಾಂಸ್ತಥಾ ಗಾಶ್ಚ ಹಿರಣ್ಯತುರಗಾದಿಕಂ ।
ಬಹು ದತ್ವಾಽಥ ವಿಜಯೋ ಹರ್ಷೇಣ ಮಹತಾ ಯುತಃ ॥ ೪೭ ॥

ತಾಮಾದಾಯಾಥ ಸಚಿವಾ ವೃದ್ಧಾಮಾತ್ಯಪುರೋಗಮಾಃ ।
ಪ್ರತಿಷ್ಠಾನಮಥಾಭ್ಯೇತ್ಯ ಶೂರಸೇನಾಯ ತಾಂ ಸ್ನುಷಾಂ ॥ ೪೮ ॥

ನ್ಯವೇದಯಂಸ್ತಥೋಚುಸ್ತೇ ವಿಜಯಸ್ಯ ವಚೋ ಬಹು ।
ಭೂಷಣಾನಿ ವಿಚಿತ್ರಾಣಿ ದಾಸ್ಯೋ ವಸ್ತ್ರಾದಿಕಂ ಚ ಯತ್ ॥ ೪೯ ॥

---

೪೫. ವೃದ್ಧಮಂತ್ರಿಯ ಮಾತನ್ನು ಕೇಳಿ ಕ್ಷತ್ರಿಯನಾದ ಶೂರಸೇನನ ಮಾತೂ ಬ್ರಾಹ್ಮಣನಾದ ಆ ಮಂತ್ರಿಯ ಮಾತೂ ಸತ್ಯವಾದುದೆಂದು ತಿಳಿದನು.

೪೬. ನಂತರ ರಾಜಕುಮಾರನ ಶಸ್ತ್ರದೊಡನೆ ಭೋಗವತಿಯ ಮದುವೆಯನ್ನು ವಿಜೃಂಭಣೆಯಿಂದ ಮಾಡಿದನು. ಆಮೇಲವಳನ್ನು ಗಂಡನ ಮನೆಗೆ ಕಳುಹಿಸಿದನು.

೪೭. ಮಗಳಿಗೆ ಸುವರ್ಣ ಕುದುರೆ ಗೋವುಗಳು ಮೊದಲಾದುವನ್ನು ಬಳುವಳಿಯಾಗಿ ಕೊಟ್ಟನು. ಜೊತೆಗೆ ತನ್ನ ಮಂತ್ರಿಗಳನ್ನು ಕಳುಹಿಸಿದನು.

೪೮. ರಾಜಕುಮಾರಿಯಾದ ಆ ಭೋಗವತಿಯನ್ನು ಕರೆದುಕೊಂಡು ಮಂತ್ರಿಗಳು ಪ್ರತಿಷ್ಠಾನಪುರಕ್ಕೆ ಬಂದು ಶೂರಸೇನರಾಜನಿಗೆ ಅವನ ಸೊಸೆಯನ್ನೊಪ್ಪಿಸಿದರು. ವಿಜಯರಾಜನು ಹೇಳಿದ ಮಾತುಗಳನ್ನೂ ಹೇಳಿದರು.

೪೯. ವಿಜಯರಾಜನು ಕೊಟ್ಟ ವಿಚಿತ್ರವಾದ ಆಭರಣಗಳು, ವಸ್ತ್ರಗಳು, ದಾಸಿಯರು ಮೊದಲಾದುವೆಲ್ಲವನ್ನೂ ಶೂರಸೇನನಿಗೆ ಸಮರ್ಪಿಸಿ ಆ ಮಂತ್ರಿಗಳು ಕೃತಾರ್ಥರಾದರು.

ನಿವೇದ್ಯ ಶೂರಸೇನಾಯ ಕೃತಕೃತ್ಯಾ ಬಭೂವಿರೇ ।
ವಿಜಯಸ್ಯ ತು ಯೇಽಮಾತ್ಯಾ ಭೋಗವತ್ಯಾ ಸಹಾಗತಾಃ ॥ ೫೦ ॥

ತಾನ್ ಪೂಜಯಿತ್ವಾ ರಾಜಾಽಸೌ ಬಹುಮಾನಪುರಃಸರಂ ।
ವಿಜಯಾಯ ಯಥಾ ಪ್ರೀತಿಸ್ತಥಾ ಕೃತ್ವಾ ವ್ಯಸರ್ಜಯತ್ ॥ ೫೧ ॥

ವಿಜಯಸ್ಯ ಸುತಾ ಬಾಲಾ ರೂಪಯೌವನಶಾಲಿನೀ ।
ಶ್ವಶ್ರೂಶ್ವಶುರಯೋರ್ನಿತ್ಯಂ ಶುಶ್ರೂಷಂತೀ ಸುಮಧ್ಯಮಾ ॥ ೫೨ ॥

ಭೋಗವತ್ಯಾಶ್ಚ ಯೋ ಭರ್ತಾ ಮಹಾಸರ್ಪೋಽತಿಭೀಷಣಃ ।
ಏಕಾಂತದೇಶೇ ವಿಜನೇ ಗೃಹೇ ರತ್ನಸುಶೋಭಿತೇ ॥ ೫೩ ॥

ಸುಗಂಧಕುಸುಮಾಕೀರ್ಣೇ ತತ್ರಾಽಸ್ತೇ ಸುಖಶೀತಲೇ ।
ಸ ಸರ್ಪೋ ಮಾತರಂ ಪ್ರಾಹ ಪಿತರಂ ಚ ಪುನಃ ಪುನಃ ॥ ೫೪ ॥

೫೦–೫೧. ಭೋಗವತಿಯ ಜೊತೆಗೆ ಬಂದಿದ್ದ ವಿಜಯರಾಜನ ಮಂತ್ರಿಗಳನ್ನು ಶೂರಸೇನರಾಜನು ವಿಜಯರಾಜನಿಗೆ ಸಂತೋಷವಾಗುವಂತೆ ಬಹುಮಾನದಿಂದ ಗೌರವಿಸಿ ಕಳುಹಿಸಿದನು.

೫೨. ವಿಜಯರಾಜನ ಕುಮಾರಿಯಾದ ಭೋಗವತಿಯು ರೂಪವತಿಯೂ ತರುಣಿಯೂ ಆಗಿದ್ದು ನಿತ್ಯವೂ ಅತ್ತೆಮಾವಂದಿರನ್ನು ಭಕ್ತಿಯಿಂದ ಸೇವಿಸುತ್ತಿದ್ದಳು.

೫೩. ಭೋಗವತಿಯ ಪತಿಯಾದ ಆ ಘೋರಸರ್ಪವು ಒಂದು ನಿರ್ಜನವಾದ ಏಕಾಂತಮಂದಿರದಲ್ಲಿದ್ದಿತು. ಆ ಮಂದಿರವು ರತ್ನಮಯವಾಗಿದ್ದಿತು. ತಂಪಾದ ಸುಗಂಧಪುಷ್ಪಗಳಿಂದ ತುಂಬಿ ಮನೋಹರವಾಗಿದ್ದಿತು.

೫೪. ಆ ಸರ್ಪವು ತನ್ನ ತಂದೆತಾಯಿಗಳನ್ನು ಕುರಿತು ನನ್ನ ಹೆಂಡತಿಯಾದ ರಾಜಕುವರಿಯು ಇನ್ನೂ ನನ್ನ ಬಳಿಗೆ ಬರದಿರಲು ಕಾರಣವೇನು ? ಎಂದು ಪುನಃಪುನಃ ಪ್ರಶ್ನಿಸಿತು.

ಮಮ ಭಾರ್ಯಾ ರಾಜಪುತ್ರೀ ಕಿಂ ಮಾಂ ನೈವೋಪಸರ್ಪತಿ ।
ತತ್ಪುತ್ರವಚನಂ ಶ್ರುತ್ವಾ ಸರ್ಪಮಾತೇದಮಬ್ರವೀತ್ ॥ ೫೫ ॥

॥ ರಾಜಪತ್ನ್ಯುವಾಚ ॥

ಧಾತ್ರಿಕೇ ಗಚ್ಛ ಸುಭಗೇ ಶೀಘ್ರಂ ಭೋಗವತೀಂ ವದ ।
ತವ ಭರ್ತಾ ಸರ್ಪ ಇತಿ ತತಃ ಸಾ ಕಿಂ ವದಿಷ್ಯತಿ ॥ ೫೬ ॥

॥ ಬ್ರಹ್ಮೋವಾಚ ॥

ಧಾತ್ರಿಕಾ ಚ ತಥೇತ್ಯುಕ್ತ್ವಾ ಗತ್ವಾ ಭೋಗವತೀಂ ತದಾ ।
ರಹೋಗತಾ ಉವಾಚೇದಂ ವಿನೀತವದಪೂರ್ವವತ್ ॥ ೫೭ ॥

॥ ಧಾತ್ರಿಕೋವಾಚ ॥

ಜಾನೇಽಹಂ ಸುಭಗೇ ಭದ್ರೇ ಭರ್ತಾರಂ ತವ ದೈವತಂ ।
ನ ಚಾಖ್ಯೇಯಂ ತ್ವಯಾ ಕ್ವಾಪಿ ಸರ್ಪೋ ನ ಪುರುಷೋ ಧ್ರುವಂ ॥ ೫೮ ॥

॥ ಬ್ರಹ್ಮೋವಾಚ ॥

ತಸ್ಯಾಸ್ತದ್ವಚನಂ ಶ್ರುತ್ವಾ ಭೋಗವತ್ಯಬ್ರವೀದಿದಂ ॥ ೫೯ ॥

೫೫-೫೬. ಪುತ್ರನ ಮಾತನ್ನು ಕೇಳಿ ತಾಯಿಯು ಎಲೌ ದಾಸಿ, ಹೋಗು. ಭೋಗವತಿಗೆ ನಿನ್ನ ಗಂಡನು ಘೋರಸರ್ಪವೆಂದು ಹೇಳು. ಅವಳು ಏನು ಹೇಳುವಳೋ ನೋಡೋಣ ಎನ್ನಲು,

೫೭-೫೮. ದಾಸಿಯು ಭೋಗವತಿಯ ಬಳಿಗೆ ಹೋಗಿ ಏಕಾಂತದಲ್ಲಿ ವಿನಯದಿಂದ ರಹಸ್ಯವಾಗಿ ಎಲೌ ಕಲ್ಯಾಣಿ, ನಿನ್ನ ಗಂಡನು ಮನುಷ್ಯನಲ್ಲ ದೇವನು ಅಂದರೆ ಸರ್ಪವು. ಈ ವಿಷಯವನ್ನು ನೀನು ಯಾರಿಗೂ ಹೇಳಕೂಡದು ಎಂದಳು.

೫೯-೬೦. ದಾಸಿಯ ಆ ಮಾತನ್ನು ಕೇಳಿ ಭೋಗವತಿಯು ಇಂತೆಂದಳು. ಸಾಮಾನ್ಯವಾಗಿ ಮನುಷ್ಯ ಸ್ತ್ರೀಯರಿಗೆ ಮನುಷ್ಯಪುರುಷನೇ ಪತಿಯು.

॥ ಭೋಗವತ್ಯುವಾಚ ॥

ಮಾನುಷೀಣಾಂ ಮನುಷ್ಯೋ ಹಿ ಭರ್ತಾ ಸಾಮಾನ್ಯತೋ ಭವೇತ್ ।
ಕಿಂ ಪುನರ್ದೇವಜಾತಿಸ್ತು ಭರ್ತಾ ಪುಣ್ಯೇನ ಲಭ್ಯತೇ ॥ ೬೦ ॥

॥ ಬ್ರಹ್ಮೋವಾಚ ॥

ಭೋಗವತ್ಯಾಸ್ತು ತದ್ವಾಕ್ಯಂ ಸಾ ಚ ಸರ್ವಂ ನ್ಯವೇದಯತ್ ।
ಸರ್ಪಾಯ ಸರ್ಪಮಾತ್ರೇ ಚ ರಾಜ್ಞೇ ಚೈವ ಯಥಾಕ್ರಮಂ ॥ ೬೧ ॥

ರುರೋದ ರಾಜಾ ತದ್ವಾಕ್ಯಾತ್ಸ್ಮೃತ್ವಾ ತಾಂ ಕರ್ಮಣೋ ಗತಿಂ ।
ಭೋಗವತ್ಯಪಿ ತಾಂ ಪ್ರಾಹ ಉಕ್ತಪೂರ್ವಾಂ ಪುನಃ ಸಖೀಂ ॥ ೬೨ ॥

॥ ಭೋಗವತ್ಯುವಾಚ ॥

ಕಾಂತಂ ದರ್ಶಯ ಭದ್ರಂ ತೇ ವೃಥಾ ಯಾತಿ ವಯೋ ಮಮ ॥ ೬೩ ॥

॥ ಬ್ರಹ್ಮೋವಾಚ ॥

ತತಃ ಸಾ ದರ್ಶಯಾಮಾಸ ಸರ್ಪಂ ತಮತಿಭೀಷಣಂ ।
ಸುಗಂಧಕುಸುಮಾಕೀರ್ಣೇ ಶಯನೇ ಸಾ ರಹೋಗತಾ ॥ ೬೪ ॥

ಹೀಗಿರಲು ದೇವಪುರುಷನು ಪತಿಯಾಗಿ ಲಭಿಸುವುದು ಪುಣ್ಯದಿಂದಲೇ ಸರಿ ಎಂದಳು.

೬೧. ಭೋಗವತಿಯ ಆ ಮಾತನ್ನು ದಾಸಿಯು ಬಂದು ಸರ್ಪಕ್ಕೂ ರಾಣಿಗೂ ರಾಜನಿಗೂ ತಿಳಿಸಿದಳು.

೬೨. ಆಮಾತನ್ನು ಕೇಳಿ ರಾಜನು ಭೋಗವತಿಯ ದುರದೃಷ್ಟವನ್ನು ನೆನೆದು ದುಃಖಿಸಿದನು. ಅತ್ತ ಭೋಗವತಿಯು ಆ ದಾಸಿಯನ್ನು ಕರೆದು,

೬೩. ಎಲೌ ದಾಸಿ, ನಿನಗೆ ಮಂಗಳವಾಗಲಿ. ನನ್ನ ಪತಿಯನ್ನು ತೋರಿಸು. ನನ್ನ ವಯಸ್ಸು ವ್ಯರ್ಥವಾಗಿ ಕಳೆಯುತ್ತಿರುವುದು ಎಂದಳು.

೬೪. ಆಮೇಲೆ ಆ ದಾಸಿಯು ಭಯಂಕರವಾದ ಆ ಸರ್ಪವನ್ನು ತೋರಿಸಿದಳು. ಭೋಗವತಿಯು ಏಕಾಂತದಲ್ಲಿ ಸುಗಂಧಕುಸುಮಗಳಿಂದ ತುಂಬಿದ ಹಾಸಿಗೆಯಲ್ಲಿ ಮಲಗಿದ ಆ ಸರ್ಪವನ್ನು ನೋಡಿದಳು.

ತಂ ದೃಷ್ಟ್ವಾ ಭೀಷಣಂ ಸರ್ಪಂ ಭರ್ತಾರಂ ರತ್ನಭೂಷಿತಂ ।
ಕೃತಾಂಜಲಿಪುಟಾ ವಾಕ್ಯಮುವದತ್ಕಾಂತಮಂಜಸಾ ॥ ೬೫ ॥

॥ ಭೋಗವತ್ಯುವಾಚ ॥

ಧನ್ಯಾಽಸ್ಮ್ಯನುಗೃಹೀತಾಽಸ್ಮಿ ಯಸ್ಯಾ ಮೇ ದೈವತಂ ಪತಿಃ ॥ ೬೬ ॥

॥ ಬ್ರಹ್ಮೋವಾಚ ॥

ಇತ್ಯುಕ್ತ್ವಾ ಶಯನೇ ಸ್ಥಿತ್ವಾ ತಂ ಸರ್ಪಂ ಸರ್ಪಭಾವನೈಃ ।
ಖೇಲಯಾಮಾಸ ತನ್ವಂಗೀ ಗೀತೈಶ್ಚೈವಾಂಗಸಂಗಮೈಃ ॥ ೬೭ ॥

ಸುಗಂಧಕುಸುಮೈಃ ಪಾನೈಸ್ತೋಷಯಾಮಾಸ ತಂ ಪತಿಂ ।
ತಸ್ಯಾಶ್ಚೈವ ಪ್ರಸಾದೇನ ಸರ್ಪಸ್ಯಾಭೂತ್ಸ್ಮೃತಿರ್ಮುನೇ ।
ಸ್ಮೃತ್ವಾ ಸರ್ವಂ ದೈವಕೃತಂ ರಾತ್ರೌ ಸರ್ಪೋಽಬ್ರವೀತ್ಪ್ರಿಯಾಂ ॥ ೬೮ ॥

॥ ಸರ್ಪ ಉವಾಚ ॥

ರಾಜಕನ್ಯಾಽಪಿ ಮಾಂ ದೃಷ್ಟ್ವಾ ನ ಭೀತಾಽಸಿ ಕಥಂ ಪ್ರಿಯೇ ।
ಸೋವಾಚ ದೈವವಿಹಿತಂ ಕೋಽತಿಕ್ರಮಿತುಮೀಶ್ವರಃ ।
ಪತಿರೇವ ಗತಿಃ ಸ್ತ್ರೀಣಾಂ ಸರ್ವದೈವ ವಿಶೇಷತಃ ॥ ೬೯ ॥

೬೫-೬೬. ತನ್ನ ಪತಿಯಾದ ರತ್ನಭೂಷಿತವಾದ ಆ ಘೋರಸರ್ಪವನ್ನು ನೋಡಿ ಭೋಗವತಿಯು ವಿನಯದಿಂದ ಅಂಜಲಿಯನ್ನು ಧರಿಸಿ ಓನಾಥ, ದೇವನನ್ನು ಪತಿಯಾಗಿ ಪಡೆದ ನಾನು ಧನ್ಯಳೂ ಕೃತಕೃತ್ಯಳೂ ಆದೆನು.

೬೭. ಎಂದು ಹೇಳಿ ಭೋಗವತಿಯು ಹಾಸಿಗೆಯಲ್ಲಿ ಕುಳಿತು ಆ ಸರ್ಪವನ್ನು ಸಂಗೀತ ಮತ್ತು ಕ್ರೀಡೆಗಳಿಂದ ಸಂತೋಷಗೊಳಿಸಿದಳು. ಸುಗಂಧ ಕುಸುಮ ಮತ್ತು ರುಚಿಯಾದ ಪಾನಗಳಿಂದ ಸಂತೋಷಗೊಳಿಸಿದಳು.

೬೮. ಆ ಭೋಗವತಿಯ ಉಪಚಾರದಿಂದ ಸರ್ಪಕ್ಕೆ ತನ್ನ ಹಿಂದಿನ ಜನ್ಮದ ಸ್ಮರಣವುಂಟಾಯಿತು. ಅದು ತನ್ನ ದುರದೃಷ್ಟದಿಂದಾದುದೆಲ್ಲವನ್ನೂ ಸ್ಮರಿಸಿ ರಾತ್ರಿಯಲ್ಲಿ ತನ್ನ ಪತ್ನಿಯನ್ನು ಕುರಿತು ಎಲೌ ಪ್ರಿಯೆ, ರಾಜಪುತ್ರಿಯಾದರೂ ನೀನು ನನ್ನನ್ನು ನೋಡಿ ಹೆದರದಿರಲು ಕಾರಣವೇನು ? ಎಂದಿತು.

೬೯. ಆಗ ಭೋಗವತಿಯು ವಿಧಿಲಿಪಿಯನ್ನು ಮೀರುವವರಾರು ? ಅದರಲ್ಲಿಯೂ ಸ್ತ್ರೀಯರಿಗೆ ಪತಿಯೇ ಸದಾ ದೈವವು ಎಂದಳು.

॥ ಬ್ರಹ್ಮೋವಾಚ ॥

ಶ್ರುತ್ವೇತಿ ಹೃಷ್ಟಸ್ತಾಮಾಹ ನಾಗಃ ಪ್ರಹಸಿತಾನನಃ ॥ ೭೦ ॥

॥ ಸರ್ಪ ಉವಾಚ ॥

ತುಷ್ಟೋಽಸ್ಮಿ ತವ ಭಕ್ತ್ಯಾಽಹಂ ಕಿಂ ದದಾಮಿ ತವೇಪ್ಸಿತಂ ।
ತವ ಪ್ರಸಾದಾಚ್ಚಾರ್ವಾಂಗಿ ಸರ್ವಸ್ಮೃತಿರಭೂದಿಯಂ ॥ ೭೧ ॥

ಶಪ್ತೋಽಹಂ ದೇವದೇವೇನ ಕುಪಿತೇನ ಪಿನಾಕಿನಾ ।
ಮಹೇಶ್ವರಕರೇ ನಾಗಃ ಶೇಷಪುತ್ರೋ ಮಹಾಬಲಃ ॥ ೭೨ ॥

ಸೋಽಹಂ ಪತಿಸ್ತ್ವಂ ಚ ಭಾರ್ಯಾ ನಾಮ್ನಾ ಭೋಗವತೀ ಪುರಾ ।
ಉಮಾವಾಕ್ಯಾಜ್ಜಹಾಸೋಚ್ಚೈಃ ಶಂಭುಃ ಪ್ರೀತೋ ರಹೋಗತಃ ॥ ೭೩ ॥

೭೦-೭೧. ಭೋಗವತಿಯ ಆ ಮಾತನ್ನು ಕೇಳಿ ಸರ್ಪವು ಸಂತಸಗೊಂಡು ಪ್ರೀತಿಯಿಂದ ಎಲೌ ಕಾಂತೆ, ನಿನ್ನ ಭಕ್ತಿಗೆ ಮೆಚ್ಚಿದೆನು. ನಿನಗೇನು ಕೊಡಲಿ? ನಿನ್ನ ಅನುಗ್ರಹದಿಂದ ನನಗೆ ಪೂರ್ವಜನ್ಮದ ಸ್ಮರಣವೆಲ್ಲವೂ ಉಂಟಾಗಿದೆ.

೭೨. ಕುಪಿತನಾದ ಮಹಾದೇವನಿಂದ ನಾನು ಶಾಪಹೊಂದಿರುವೆನು. ನಾನು ಆದಿಶೇಷನ ಪುತ್ರನು. ನಾಗನೆಂದು ನನ್ನ ಹೆಸರು. ಶಿವನ ಕೈಯ್ಯಲ್ಲಿ ಆಭರಣವಾಗಿ ನಾನಿರುತ್ತಿದ್ದೆನು. ಹಿಂದಿನ ಜನ್ಮದಲ್ಲೂ ನೀನು ನನ್ನ ಪತ್ನಿಯಾಗಿದ್ದೆ. ಭೋವತಿಯೆಂದೇ ನಿನಗೆ ಹೆಸರಿದ್ದಿತು.

೭೩. ಒಂದುದಿನ ಪಾರ್ವತೀಪರಮೇಶ್ವರರು ಏಕಾಂತದಲ್ಲಿ ಸೇರಿದ್ದರು. ಆಗ ಶಿವನು ಗಿರಿಜೆಯ ಯಾವುದೋ ಒಂದು ಮಾತಿಗೆ ಗಟ್ಟಿಯಾಗಿ ನಕ್ಕುಬಿಟ್ಟನು. ಅದನ್ನು ಕೇಳಿ ಅವನ ಕೈಯ್ಯಲ್ಲಿದ್ದ ನನಗೂ ಅಕಸ್ಮಾತ್ತಾಗಿ ನಗು ಬಂದಿತು.

ಮಮಾಪಿ ಚಾಗತಂ ಭದ್ರೇ ಹಾಸ್ಯಂ ತದ್ದೇವಸನ್ನಿಧೌ ।
ತತಸ್ತು ಕುಪಿತಃ ಶಂಭುಃ ಪ್ರಾದಾಚ್ಛಾಪಂ ಮಮೋದೃಶಂ ॥ ೭೪ ॥

॥ ಶಿವ ಉವಾಚ ॥

ಮನುಷ್ಯಯೋನೌ ತ್ವಂ ಸರ್ಪೋ ಭವಿತಾ ಜ್ಞಾನವಾನಿತಿ ॥ ೭೫ ॥

॥ ಸರ್ಪ ಉವಾಚ ॥

ತತಃ ಪ್ರಸಾದಿತಃ ಶಂಭುಸ್ತ್ವಯಾ ಭದ್ರೇ ಮಯಾ ಸಹ ।
ತತಶ್ಚೋಕ್ತಂ ತೇನ ಭದ್ರೇ ಗೌತಮ್ಯಾಂ ಮಮ ಪೂಜನಂ ॥ ೭೬ ॥

ಕುರ್ವತೋ ಜ್ಞಾನಮಾಧಾಸ್ಯೇ ಯದಾ ಸರ್ಪಾಕೃತೇಸ್ತವ ।
ತದಾ ವಿಶಾಪೋ ಭವಿತಾ ಭೋಗವತ್ಯಾಃ ಪ್ರಸಾದತಃ ॥ ೭೭ ॥

ತಸ್ಮಾದಿದಂ ಮಮಾಪನ್ನಂ ತವ ಚಾಪಿ ಶುಭಾನನೇ ।
ತಸ್ಮಾನ್ನೀತ್ವಾ ಗೌತಮೀಂ ಮಾಂ ಪೂಜಾಂ ಕುರು ಮಯಾ ಸಹ ॥ ೭೮ ॥

೭೪-೭೫. ಆಪಕ್ಕೆ ಶಿವನು ಕೋಪಗೊಂಡು ನೀನು ಮನುಷ್ಯಗರ್ಭದಲ್ಲಿ ಸರ್ಪವಾಗಿ ಜನಿಸು. ಆದರೆ ನಿನಗೆ ಅಲ್ಲಿಯೂ ಪೂರ್ವಜನ್ಮದ ಜ್ಞಾನವುಂಟಾಗುವುದು ಎಂದು ಶಾಪವನ್ನು ಕೊಟ್ಟನು.

೭೬-೭೭. ಆಮೇಲೆ ನಾನೂ ನೀನೂ ಶಿವನನ್ನು ಸ್ತುತಿಸಿ ಸಂತೋಷಗೊಳಿಸಿದೆವು. ಆಗ ಶಿವನು ಪ್ರಸನ್ನನಾಗಿ ಗೌತಮೀತೀರದಲ್ಲಿ ನನ್ನನ್ನು ಪೂಜಿಸುವರೆ ನಿನಗೆ ಜ್ಞಾನವನ್ನನುಗ್ರಹಿಸುವೆನು. ಆಗ ನಿನಗೆ ಈ ಭೋಗವತಿಯ ಸಹಾಯದಿಂದ ಶಾಪನಿವೃತ್ತಿಯಾಗುವುದು ಎಂದು ಅನುಗ್ರಹಿಸಿದನು.

೭೮. ಶಿವನ ಶಾಪದಿಂದ ನನಗೆ ಸರ್ಪಜನ್ಮವೂ ನಿನಗೆ ಮನುಷ್ಯಜನ್ಮವೂ ಬಂದಿರುವುವು. ಆದುದರಿಂದ ಈಗ ನೀನು ನನ್ನನ್ನು ಗೌತಮೀತೀರಕ್ಕೆ ಒಯ್ದು ಅಲ್ಲಿ ನನ್ನೊಡನೆ ಶಿವಪೂಜೆಯನ್ನು ಮಾಡು.

ತತೋ ವಿಶಾಪೌ ಭವಿತಾ ಆವಾಂ ಯಾವಃ ಶಿವಂ ಪುನಃ ।
ಸರ್ವೇಷಾಂ ಸರ್ವದಾರ್ತಾನಾಂ ಶಿವ ಏವ ಪರಾ ಗತಿಃ ॥೭೯ ॥

॥ ಬ್ರಹ್ಮೋವಾಚ ॥

ತಚ್ಛ್ರುತ್ವಾ ಭರ್ತೃವಚನಂ ಸಾ ಭರ್ತ್ರಾ ಗೌತಮೀಂ ಯಯೌ ।
ತತಃ ಸ್ನಾತ್ವಾ ತು ಗೌತಮ್ಯಾಂ ಪೂಜಾಂ ಚಕ್ರೇ ಶಿವಸ್ಯ ತು ॥ ೮೦ ॥

ತತಃ ಪ್ರಸನ್ನೋ ಭಗವಾನ್ದಿವ್ಯರೂಪಂ ದದೌ ಮುನೇ ।
ಆಪೃಚ್ಛ್ಯ ಪಿತರೌ ಸರ್ಪೋ ಭಾರ್ಯಯಾ ಗಂತುಮುದ್ಯತಃ ।
ಶಿವಲೋಕಂ ತತೋ ಜ್ಞಾತ್ವಾ ಪಿತಾ ಪ್ರಾಹ ಮಹಾಮತಿಃ ॥ ೮೧ ॥

॥ ಪಿತೋವಾಚ ॥

ಯುವರಾಜ್ಯಧರೋ ಜ್ಯೇಷ್ಠಃ ಪುತ್ರ ಏಕೋ ಭವಾನಿತಿ ।
ತಸ್ಮಾದ್ರಾಜ್ಯಮಶೇಷೇಣ ಕೃತ್ವೋತ್ಪಾದ್ಯ ಸುತಾನ್ಬಹೂನ್ ।
ಯಾತೇ ಮಯಿ ಪರಂ ಧಾಮ ತತೋ ಯಾಹಿ ಶಿವಂ ಪುರಂ ॥ ೮೨ ॥

---

೭೯. ಅದರಿಂದ ನಾವು ಶಾಪನಿವೃತ್ತಿಯನ್ನು ಹೊಂದಿ ಪುನಃ ಶಿವನ ಬಳಿಗೆ ತೆರಳೋಣ. ದುಃಖಿತರೆಲ್ಲರಿಗೂ ಶಿವನೇ ಯಾವಾಗಲೂ ಗತಿಯು ಎಂದಿತು.

೮೦. ಪತಿಯ ಮಾತನ್ನು ಕೇಳಿ ಭೋಗವತಿಯು ಪತಿಯೊಡನೆ ಗೌತಮೀನದಿಗೆ ಹೋಗಿ ಆ ನದಿಯಲ್ಲಿ ಸ್ನಾನಮಾಡಿ ಶಿವನನ್ನು ಭಕ್ತಿಯಿಂದ ಪೂಜಿಸಿದಳು.

೮೧. ಆಗ ಶಿವನು ಪ್ರಸನ್ನನಾಗಿ ಆ ಸರ್ಪಕ್ಕೆ ದಿವ್ಯರೂಪವನ್ನು ಕೊಟ್ಟನು. ಆಮೇಲ ಆ ನಾಗನು ತಂದೆಯಾದ ಶೂರಸೇನನ್ನು ತಾನು ಶಿವ ಲೋಕಕ್ಕೆ ಹೊರಟುಹೋಗಲು ಅನುಮತಿಯನ್ನು ಕೇಳಿದನು.

೮೨. ಅದಕ್ಕೆ ತಂದೆಯಾದ ಶೂರಸೇನನು ಎಲೈ ಕುಮಾರ, ನೀನೋ ರ್ವನೇ ನನಗೆ ಮಗನು. ಯುವರಾಜಪದವಿಯನ್ನು ಅಲಂಕರಿಸಿ ರಾಜ್ಯವನ್ನಾಳು. ಸುಪುತ್ರರನ್ನು ಪಡೆದು ಸುಖವಾಗಿ ಬಾಳು. ನಾನು ದಿವಂಗತನಾದಮೇಲೆ ನೀನು ಶಿವಲೋಕಕ್ಕೆ ತೆರಳಬಹುದು ಎಂದನು

॥ ಬ್ರಹ್ಮೋವಾಚ ॥

ಏತಚ್ಛ್ರುತ್ವಾ ಪಿತೃವಚಸ್ತಥೇತ್ಯಾಹ ಸ ನಾಗರಾಟ್ ।
ಕಾಮರೂಪಮವಾಪ್ಯಾಥ ಭಾರ್ಯಯಾ ಸಹ ಸುವ್ರತಃ ॥ ೮೩ ॥

ಪಿತ್ರಾ ಮಾತ್ರಾ ತಥಾ ಪುತ್ರೈ ರಾಜ್ಯಂ ಕೃತ್ವಾ ಸುವಿಸ್ತರಂ ।
ಯಾತೇ ಪಿತರಿ ಸ್ವರ್ಲೋಕಂ ಪುತ್ರಾನ್ಸ್ಥಾಪ್ಯ ಸ್ವಕೇ ಪದೇ ॥ ೮೪ ॥

ಭಾರ್ಯಾಮಾತ್ಯಾದಿಸಹಿತಸ್ತತಃ ಶಿವಪುರಂ ಯಯೌ ।
ತತಃ ಪ್ರಭೃತಿ ತತ್ತೀರ್ಥಂ ನಾಗತೀರ್ಥಮಿತಿ ಶ್ರುತಂ ॥ ೮೫ ॥

ಯತ್ರ ನಾಗೇಶ್ವರೋ ದೇವೋ ಭೋಗವತ್ಯಾ ಪ್ರತಿಷ್ಠಿತಃ ।
ತತ್ರ ಸ್ನಾನಂ ಚ ದಾನಂ ಚ ಸರ್ವಕ್ರತುಫಲಪ್ರದಂ ॥ ೮೬ ॥

ಇತಿ ಶ್ರೀ ಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ನಾಗತೀರ್ಥವರ್ಣನಂನಾಮೈಕಾದಶಾಧಿಕಶತತಮೋಽಧ್ಯಾಯಃ

---

೮೩. ತಂದೆಯ ಮಾತನ್ನು ಕೇಳಿ ನಾಗಪುರುಷನು ಹಾಗೆಯೇ ಆಗಲೆಂದೊಪ್ಪಿದನು. ಶಿವನ ಅನುಗ್ರಹದಿಂದ ದಿವ್ಯರೂಪವನ್ನು ಪಡೆದು ಪತ್ನಿಯೊಡನೆ ರಾಜ್ಯವನ್ನಾಳತೊಡಗಿದನು.

೮೪-೮೫. ತಂದೆತಾಯಿಗಳೊಡನೆ ರಾಜ್ಯವಾಳುತ್ತಾ ರಾಜ್ಯವನ್ನು ವಿಸ್ತರಿಸಿದನು. ಸುಪುತ್ರರನ್ನೂ ಪಡೆದನು. ಕೆಲವು ಕಾಲದಮೇಲೆ ತಂದೆಯಾದ ಶೂರಸೇನನು ದಿವಂಗನಾದನು. ಆಮೇಲೆ ಆ ನಾಗಪುರುಷನು ಪುತ್ರರಲ್ಲಿ ರಾಜ್ಯಭಾರವನ್ನಿರಿಸಿ ಹೆಂಡತಿಯೊಡನೆ ಶಿವಲೋಕಕ್ಕೆ ತೆರಳಿದನು. ಅದು ಮೊದಲುಗೊಂಡು ಭೋಗವತೀನಾಗರು ಶಿವನನ್ನು ಪೂಜಿಸಿದ ತೀರ್ಥವು ನಾಗತೀರ್ಥವೆಂದು ಪ್ರಸಿದ್ಧವಾಯಿತು.

೮೬. ಆ ತೀರ್ಥದಲ್ಲಿ ಭೋಗವತಿಯು ಶಿವನನ್ನು ಪ್ರತಿಷ್ಠಿಸಿರುವಳು. ಆ ಶಿವನಿಗೆ ನಾಗೇಶ್ವರನೆಂದು ಹೆಸರು. ಆ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ಸಕಲ ಯಾಗಗಳ ಫಲವೂ ಲಭಿಸುವುದು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ನಾಗತೀರ್ಥವರ್ಣನವೆಂಬ ನೂರಹನ್ನೊಂದನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ನಲವತ್ತೆರಡನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ದ್ವಾದಶಾಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಮಾತೃತೀರ್ಥಮಿತಿ ಖ್ಯಾತಂ ಸರ್ವಸಿದ್ಧಿಕರಂ ನೃಣಾಂ ।
ಆಧಿಭಿರ್ಮುಚ್ಯತೇ ಜಂತುಸ್ತತ್ತೀರ್ಥಸ್ಮರಣಾದಪಿ ॥ ೧ ॥

ದೇವಾನಾಮಸುರಾಣಾಂ ಚ ಸಂಗರೋಽಭೂತ್ಸುದಾರುಣಃ ।
ನಾಶಕ್ನುವಂಸ್ತದಾ ಜೇತುಂ ದೇವಾ ದಾನವಸಂಗರಂ ॥ ೨ ॥

ನೂರಹನ್ನೆರಡನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಮಾತೃತೀರ್ಥವೆಂಬ ತೀರ್ಥವಿರುವುದು. ಅದು ಸಕಲಸಿದ್ಧಿಯನ್ನೂ ಉಂಟುಮಾಡುವುದು. ಆ ತೀರ್ಥವನ್ನು ಸ್ಮರಿಸಿದ ಮಾತ್ರದಿಂದ ದುಃಖವೆಲ್ಲವೂ ನಾಶವಾಗುವುದು.

೨. ಹಿಂದೊಂದು ಸಾರಿ ದೇವತೆಗಳಿಗೂ ಅಸುರರಿಗೂ ಘೋರಯುದ್ಧವಾಯಿತು. ಆ ಯುದ್ಧದಲ್ಲಿ ದೇವತೆಗಳು ರಾಕ್ಷಸರನ್ನು ಜಯಿಸಲಾರದೇ ಹೋದರು.

ತದಾಪ್ರಭೃತಿ ಸುಗಣಂ ದೇವೈಸ್ತ್ರಿಷ್ಟಂತಂ ಶೂಲಪಾಣಿನಂ ।
ಅಸ್ತವಂ ವಿವಿಧೈರ್ವಾಕ್ಯೈಃ ಕೃತಾಂಜಲಿಪುಟಃ ಶನೈಃ ॥ ೩ ॥

ಸಂಮಂತ್ರ್ಯ ದೇವೈರಸುರೈಶ್ಚ ಸರ್ವೈ
ರ್ಯದಾಪ್ಯತಂ ಸಂಮಥಿತಂ ಸಮುದ್ರಂ ।
ಯತ್ಕಾಲಕೂಟಂ ಸಮುಭೂನ್ಮಹೇಶ
ತತ್ತ್ವಾಂ ವಿನಾ ಕೋ ಗ್ರಸಿತುಂ ಸಮರ್ಥಃ । ॥ ೪ ॥

ಪುಷ್ಪಪ್ರಹಾರೇಣ ಜಗತ್ತ್ರಯಂ ಯಃ
ಸ್ವಾಧೀನಮಾಪಾದಯಿತುಂ ಸಮರ್ಥಃ ।
ಮಾರೋ ಹರೇಽಸ್ಯನ್ಯಸುರಾದಿವಂದ್ಯೋ
ವಿತಾಯಮಾನೋ ವಿಲಯಂ ಪ್ರಯಾತಃ ॥ ೫ ॥

ವಿಮಥ್ಯ ವಾರೀಶಮನಂಗಶತ್ರೋ
ಯದುತ್ತಮಂ ತತ್ತು ದಿವೌಕಸೇಭ್ಯಃ ।
ದತ್ವಾ ವಿಷಂ ಸಂಹರನ್ನೀಲಕಂಠ
ಕೋ ವಾ ಧರ್ತುಂ ತ್ವಾಮೃತೇ ವೈ ಸಮರ್ಥಃ ॥ ೬ ॥

---

೩. ಆಗ ನಾನು (ಬ್ರಹ್ಮನು) ದೇವತೆಗಳೊಡನೆ ಶಿವನ ಬಳಿಗೆ ಹೋಗಿ ಅಂಜಲಿಯನ್ನು ಧರಿಸಿ ಅವನನ್ನು ನಾನಾ ವಾಕ್ಯಗಳಿಂದ ಸ್ತುತಿಸಿದೆನು.

೪. ದೇವದಾನವರೆಲ್ಲರೂ ಸೇರಿ ಅಮೃತಕ್ಕಾಗಿ ಕಡಲನ್ನು ಕಡೆದರು. ಆಗ ಮೊದಲು ಘೋರವಾದ ಕಾಲಕೂಟವಿಷವು ಹುಟ್ಟಿತು. ಅದರಿಂದ ಪ್ರಪಂಚ ವೆಲ್ಲವೂ ನಾಶವಾಗತೊಡಗಿತು. ಯಾರೂ ಆ ವಿಷವನ್ನು ತಡೆಯುದಾದರು ಆಗ ನಿನ್ನಹೊರತು ಆ ವಿಷವನ್ನು ಯಾರು ಕುಡಿಯುತ್ತಿದ್ದರು ? ನೀನೇ ಆ ವಿಷವನ್ನು ಕುಡಿದು ನಮ್ಮೆಲ್ಲರನ್ನೂ ರಕ್ಷಿಸಿರುವೆ.

೫. ಓ ಶಂಕರ, ಮನ್ಮಥನು ತನ್ನ ಕುಸುಮಬಾಣಗಳಿಂದ ಜಗತ್ತೆಲ್ಲ ವನ್ನೂ ಸ್ವಾಧೀನಮಾಡಿಕೊಳ್ಳಲು ಸಮರ್ಥನು. ಅದಕ್ಕಾಗಿ ದೇವತೆಗಳು ಮೊದ ಲಾದವರೂ ಅವನನ್ನು ವಂದಿಸುವರು. ಇಂತಹ ಮನ್ಮಥನೂ ನಿನ್ನಲ್ಲಿ ದೀಪದ ಹುಳುವಿನಂತೆ ಉರಿದು ಭಸ್ಮವಾದನು.

೬–೭. ಸಮುದ್ರವನ್ನು ಕಡೆಯಿಸಿ, ಮೊದಲು ಜನಿಸಿದ ವಿಷವನ್ನು ಕುಡಿದು, ಕಂಠದಲ್ಲಿ ಧರಿಸಿ ಮಿಕ್ಕ ಶ್ರೇಷ್ಠವಸುಗಳೆಲ್ಲವನ್ನೂ ದೇವತೆಗಳಿಗೆ ಅನು

ತತಶ್ಚ ತುಷ್ಟೋ ಭಗವಾನಾದಿಕರ್ತಾ ತ್ರಿಲೋಚನಃ ॥ ೭ ॥

॥ ಶಿವ ಉವಾಚ ॥

ದಾಸ್ಯೇಽಹಂ ಯದಭೀಷ್ಟಂ ವೋ ಬ್ರುವಂತು ಸುರಸತ್ತಮಾಃ ॥ ೮ ॥

॥ ದೇವಾ ಊಚುಃ ॥

ದಾನವೇಭ್ಯೋ ಭಯಂ ಘೋರಂ ತತ್ರೈಹಿ ವೃಷಭಧ್ವಜ ।
ಜಹಿ ಶತ್ರೂನ್ಸುರಾನ್ಪಾಹಿ ನಾಥವಂತಸ್ತ್ವಯಾ ಪ್ರಭೋ ॥ ೯ ॥

ನಿಷ್ಕಾರಣಃ ಸುಹೃಚ್ಛಂಭೋ ನಾಭವಿಷ್ಯದ್ಭವಾನ್ಯದಿ ।
ತದಾ ಕರಿಷ್ಯನ್ಕಿಮಿವ ದುಃಖಾರ್ತಾಃ ಸರ್ವದೇಹಿನಃ ॥ ೧೦ ॥

॥ ಬ್ರಹ್ಮೋವಾಚ ॥

ಇತ್ಯುಕ್ತಸ್ತತ್‌ಕ್ಷಣಾತ್ಪ್ರಾಯಾದ್ಯತ್ರ ತೇ ದೇವಶತ್ರವಃ ।
ತತ್ರ ತದ್ಯುದ್ಧಮಭವಚ್ಛಂಕರೇಣ ಸುರದ್ವಿಷಾಂ ॥ ೧೧ ॥

ಗ್ರಹಿಸಿರುವೆ. ಹೀಗೆ ನಿಸ್ಪೃಹತೆಯಿಂದ ವರ್ತಿಸಲೂ ವಿಷವನ್ನು ಪಾನಮಾಡಲೂ ನೀಲಕಂಠನಾದ ನೀನೇ ಸಮರ್ಥನು ಎಂದು ಸ್ತೋತ್ರಮಾಡಲು ಈ ಸ್ತುತಿಗೆ ಮೆಚ್ಚಿ ಭಗವಾನ್ ಶಂಕರನು

೮. ಎಲೈ ದೇವನಾಯಕರೇ ನಿಮಗೆ ಬೇಕಾದುದೇನು ? ಹೇಳಿ. ಕೊಡುವೆನು ಎಂದನು.

೯. ದೇವತೆಗಳು ಓ ದೇವ, ದಾನವರಿಂದ ನಮಗೆ ಭಯವೊದಗಿದೆ. ಯುದ್ಧರಂಗಕ್ಕೆ ಬಂದು ರಾಕ್ಷಸರನ್ನು ಸಂಹರಿಸು. ನಮ್ಮನ್ನು ಸಲಹು. ನೀನೇ ನಮಗೆ ಸ್ವಾಮಿಯು.

೧೦. ಅಕಾರಣಬಂಧುವಾದ ನೀನೊಬ್ಬನಿರದಿದ್ದಲ್ಲಿ ದುಃಖಿತರಾದ ಪ್ರಾಣಿಗಳೆಲ್ಲರೂ ಏನುಮಾಡುತ್ತಿದ್ದರು ?

೧೧. ದೇವತೆಗಳು ಹೀಗೆ ಹೇಳಲು ಶಂಕರನು ಆ ಕೂಡಲೇ ರಾಕ್ಷಸರಿದ್ದೆಡೆಗೆ ಹೋದನು ಅಲ್ಲಿ ರಾಕ್ಷಸರಿಗೂ ಶಂಕರನಿಗೂ ಘೋರ ಯುದ್ಧವಾಯಿತು.

ತತಸ್ತ್ರಿಲೋಚನಃ ಶ್ರಾಂತಸ್ತನೋರೂಪಧರಃ ಶಿವಃ ।
ಲಲಾಟಾದ್ವ್ಯಪತಂಸ್ತಸ್ಯ ಯುಧ್ಯತಃ ಸ್ವೇದಬಿಂದವಃ ॥ ೧೨ ॥

ಸ ಸಂಹರನ್ದೈತ್ಯಗಣಾಂಸ್ತಾಮುಸೀಂ ಮೂರ್ತಿಮಾಶ್ರಿತಃ ।
ತಾಂ ಮೂರ್ತಿಮಸುರಾ ದೃಷ್ಟ್ವಾ ನೋತುಸ್ಪೃಷ್ಟಾದ್ಭುವಂ ಯಯುಃ॥ ೧೩ ॥

ಸ ಸಂಹರನ್ಸರ್ವದೈತ್ಯಾಂಸ್ತದ್ವಾಽಗಚ್ಛದ್ಭುವಂ ಹರಃ ।
ಇತಶ್ಚೇತಶ್ಚ ಭೀತಾಸ್ತೇಽಧಾವನ್ಸರ್ವಾಂ ಮಹೀಮಿಮಾಂ ॥ ೧೪ ॥

ತಥೈವ ಕೋಪಾದ್ರುದ್ರೋಽಪಿ ಶತ್ರೂಂಸ್ತಾನನುಧಾವತಿ ।
ತಥೈವ ಯುಧ್ಯತಃ ಶಂಭೋಃ ಪತಿತಾಃ ಸ್ವೇದಬಿಂದವಃ ॥ ೧೫ ॥

ಯತ್ರ ಯತ್ರ ಭುವಂ ಪ್ರಾಪ್ತೋ ಬಿಂದುರ್ಮಾಹೇಶ್ವರೋ ಮುನೇ ।
ತತ್ರ ತತ್ರ ಶಿವಾಕಾರಾ ಮಾತರೋ ಜಜ್ಞಿರೇ ತತಃ ॥ ೧೬ ॥

---

೧೨. ಕತ್ತಲೆಯ (ಘೋರ) ರೂಪದಿಂದ ಶಿವನು ಯುದ್ಧಮಾಡು ತ್ತಿದ್ದನು. ಯುದ್ಧಮಾಡಿ ಆಯಾಸಗೊಂಡ ಆ ಶಂಕರನ ನೊಸಲಿನಿಂದ ಬೆವರು ಹನಿಗಳು ಬಿದ್ದುವು.

೧೩. ಘೋರರೂಪದಿಂದ ದೈತ್ಯರನ್ನು ಶಿವನು ಸಂಹರಿಸತೊಡಗಿದನು ರಾಕ್ಷಸರೆಲ್ಲರೂ ಭಯಗೊಂಡು ಸ್ವರ್ಗದಿಂದ ಭೂಮಿಗೆ ಓಡಿದರು.

೧೪. ದೈತ್ಯರನ್ನು ಸಂಹರಿಸುತ್ತಾ ಹರನೂ ಭೂಮಿಗೆ ಬಂದನು. ದೈತ್ಯರು ಹೆದರಿ ಭೂಮಿಯಲ್ಲೆಲ್ಲಾ ಅಲೆದಾಡಿದರು.

೧೫. ರುದ್ರನೂ ಕೋಪದಿಂದ ರಾಕ್ಷಸರನ್ನಟ್ಟಿಕೊಂಡು ಹೋದನು. ಹಾಗೆ ಯುದ್ಧಮಾಡುತ್ತಾ ಹೋಗುತ್ತಿರುವ ಆ ಶಿವನಿಂದ ಬೆವರುಹನಿಗಳು ಅಲ್ಲಲ್ಲಿ ಬಿದ್ದವು.

೧೬. ಶಿವನ ಬೆವರುಹನಿಗಳು ಬಿದ್ದಲ್ಲಿ ಮಂಗಳರೂಪೆಯರಾದ ಮಾತೃ ದೇವತೆಯರು ಅಲ್ಲಲ್ಲಿ ಜನಿಸಿದರು.

ಪ್ರೋಚುರ್ಮಹೇಶ್ವರಂ ಸರ್ವಾಃ ಖಾದಾಮಸ್ತ್ವಸುರಾನಿತಿ ।
ತತಃ ಪ್ರೋವಾಚ ಭಗವಾನ್ಸರ್ವೈಃ ಸುರಗಣೈರ್ವೃತಃ ॥ ೧೭ ॥

॥ ಶಿವ ಉವಾಚ ॥

ಸ್ವರ್ಗಾದ್ಭುವಮನುಪ್ರಾಪ್ತಾ ರಾಕ್ಷಸಾಸ್ತೇ ರಸಾತಲಂ ।
ಅನುಪ್ರಾಪ್ತಾಸ್ತತಃ ಸರ್ವಾಃ ಶೃಣ್ವಂತು ಮಮ ಭಾಷಿತಂ ॥ ೧೮ ॥

ಯತ್ರ ಯತ್ರ ದ್ವಿಷೋ ಯಾಂತಿ ತತ್ರ ಗಚ್ಛಂತು ಮಾತರಃ ।
ರಸಾತಲಮನುಪ್ರಾಪ್ತಾ ಇದಾನೀಂ ಮದ್ಭಯಾದ್ದ್ವಿಷಃ ।
ಭವತ್ಯೋಽಪ್ಯನುಗಚ್ಛಂತು ರಸಾತಲಮನು ದ್ವಿಷಃ ॥ ೧೯ ॥

॥ ಬ್ರಹ್ಮೋವಾಚ ॥

ತಾಶ್ಚ ಜಗ್ಮುರ್ಭುವಂ ಭಿತ್ತ್ವಾ ಯತ್ರ ತೇ ದೈತ್ಯದಾನವಾಃ ।
ತಾನ್ ಹತ್ವಾ ಮಾತರಃ ಸರ್ವಾನ್ದೇವಾರೀನತಿಭೀಷಣಾನ್ ॥ ೨೦ ॥

---

೧೭. ಆ ಮಾತೃಕಾದೇವಿಯರು ರುದ್ರನನ್ನು ಕುರಿತು ನಾವು ರಾಕ್ಷಸರನ್ನು ಸಂಹರಿಸುವೆವು ಎಂದರು. ಅದಕ್ಕೆ ದೇವತೆಗಳೊಡನಿದ್ದ ಭಗವಾನ್ ಶಂಕರನು

೧೮. ರಾಕ್ಷಸರು ಸ್ವರ್ಗದಿಂದ ಭೂಮಿಗೆಬಂದರು. ಭೂಮಿಯಿಂದ ಪುನಃ ಪಾತಾಳಕ್ಕೆ ಓಡಿಹೋಗಿರುವರು.

೧೯. ಎಲೌ ಮಾತೃಕೆಯರೇ, ನೀವು ರಾಕ್ಷಸರು ಎಲ್ಲೆಲ್ಲಿಗೆ ಹೋದರೂ ಅಲ್ಲಲ್ಲಿ ನೀವವರನ್ನು ಬೆನ್ನಟ್ಟಿಹೋಗಿ ಸಂಹರಿಸಿ. ಈಗ ನನ್ನ ಭಯದಿಂದ ಪಾತಾಳಕ್ಕೆ ಹೋಗಿರುವರು. ನೀವೂ ಅಲ್ಲಿಗೇ ಹೋಗಿ ಎಂದನು.

೨೦. ಆಮೇಲೆ ಆ ಮಾತೃಕೆಯರು ಭೂಮಿಯನ್ನು ಭೇದಿಸಿ ಪಾತಾಳಕ್ಕೆ ಹೋಗಿ ಅಲ್ಲಿದ್ದ ದೇವಶತ್ರುಗಳಾದ ಘೋರರಾಕ್ಷಸರೆಲ್ಲರನ್ನೂ ಸಂಹರಿಸಿದರು. ಆಮೇಲೆ ಅದೇದಾರಿಯಿಂದ ದೇವತೆಗಳ ಬಳಿಗೆ ಬಂದರು.

ಪುನರ್ದೇವಾನುಪಾಜಗ್ಮುಃ ಪಥಾ ತೇನೈವ ಮಾತರಃ ।
ಗತಾಶ್ಚ ಮಾತರೋ ಯಾವದ್ಯಾವಚ್ಚ ಪುನರಾಗತಾಃ ॥ ೨೦ ॥

ತಾವದ್ದೇವಾಃ ಸ್ಥಿತಾ ಆಸನ್ಗೌತಮೀತೀರಮಾಶ್ರಿತಾಃ ।
ಪ್ರಸ್ಥಾನಾತ್ತತ್ರ ಮಾತೄಣಾಂ ಸುರಾಣಾಂ ಚ ಪ್ರತಿಷ್ಠಿತೇಃ ॥ ೨೨ ॥

ಪ್ರತಿಷ್ಠಾನಂ ತು ತತ್ಕ್ಷೇತ್ರಂ ಪುಣ್ಯಂ ವಿಜಯವರ್ಧನಂ ।
ಮಾತೄಣಾಂ ಯತ್ರ ಚೋತ್ಪತ್ತಿರ್ಮಾತೃತೀರ್ಥಂ ಪೃಥಕ್ಪೃಥಕ್ ॥ ೨೩ ॥

ತತ್ರ ತತ್ರ ಬಿಲಾನ್ಯಾಸನ್ರಸಾತಲಗತಾನಿ ಚ ।
ಸುರಾಸ್ತಾಭ್ಯೋ ವರಾನ್ಪ್ರೋಚುರ್ಲೋಕೇ ಪೂಜಾಂ ಯಥಾ ಶಿವಃ ೨೪॥

ಪ್ರಾಪ್ನೋತಿ ತದ್ವನ್ಮಾತೃಭ್ಯಃ ಪೂಜಾ ಭವತು ಸರ್ವದಾ ।
ಇತ್ಯುಕ್ತ್ವಾಽಂತರ್ದಧುರ್ದೇವಾ ಆಸಂಸ್ತತ್ರೈವ ಮಾತರಃ ॥ ೨೫ ॥

---

೨೧. ಮಾತೃಕಾದೇವತೆಯರು ಪಾತಾಳಕ್ಕೆ ಹೋಗಿ ಪುನಃ ಹಿಂತಿರುಗಿ ಬರುವವರೆಗೆ ದೇವತೆಗಳು ಗೌತಮೀನದಿಯ ತೀರದಲ್ಲಿಯೇ ಇದ್ದರು.

೨೨-೨೩. ಆ ತೀರದಿಂದ ಮಾತೃಕೆಯರು ಪಾತಾಳಕ್ಕೆ ಹೊರಟು ಹೋದುದರಿಂದಲೂ ಮಾತೃಕೆಯರು ಬರುವವರೆಗೆ ದೇವತೆಗಳು ಅಲ್ಲಿಯೇ ನೆಲಸಿದ್ದುದರಿಂದಲೂ ಆ ಕ್ಷೇತ್ರವು ಪ್ರತಿಷ್ಠಾನಕ್ಷೇತ್ರವೆಂದು ಪ್ರಸಿದ್ಧವಾಯಿತು. ಆ ಕ್ಷೇತ್ರವು ಪುಣ್ಯಪ್ರದವಾದುದು. ವಿಜಯವನ್ನುಂಟುಮಾಡುವುದು. ಮಾತೃಕೆಯರು ಜನಿಸಿದ ಸ್ಥಳಗಳೆಲ್ಲವೂ ಮಾತೃತೀರ್ಥವೆಂದು ಪ್ರಸಿದ್ಧವಾದುವು.

೨೪. ಮಾತೃಕೆಯರು ಭೂಮಿಯನ್ನು ಭೇದಿಸಿ ಪಾತಾಳಕ್ಕೆ ತೆರಳಿದ ಸ್ಥಳಗಳಲ್ಲಿ ಅನೇಕ ಬಿಲಗಳಾದುವು. ಆಮೇಲೆ ದೇವತೆಗಳು ಮಾತೃಕೆಯರಿಗೆ ಲೋಕದಲ್ಲಿ ಶಿವನು ಪೂಜಿಸಲ್ಪಡುವಂತೆ ಮಾತೃಕೆಯರಿಗೂ ಪೂಜೆಯು ನಡೆಯಲಿ ಎಂದು ವರವನ್ನು ಕೊಟ್ಟರು.

೨೫-೨೬. ಹೀಗೆ ಹೇಳಿ ದೇವತೆಗಳು ಅಂತರ್ಧಾನರಾದರು. ಮಾತೃಕಾದೇವಿಯರು ಅಲ್ಲಲ್ಲಿಯೇ ನೆಲಸಿದರು. ಮಾತೃಕೆಯರು ನೆಲಸಿದ ತೀರ್ಥಗಳು

ಯತ್ರ ಯತ್ರ ಸ್ಥಿತಾ ದೇವ್ಯೋ ಮಾತೃತೀರ್ಥಂ ತತೋ ವಿದುಃ ।
ಸುರಾಣಾಮಪಿ ಸೇವ್ಯಾನಿ ಕಿಂ ಪುನರ್ಮಾನುಷಾದಿಭಿಃ ॥ ೨೬ ॥

ತೇಷು ಸ್ನಾನಮಥೋ ದಾನಂ ಪಿತ್ರ್ಯಾಣಾಂ ಚೈವ ತರ್ಪಣಂ ।
ಸರ್ವಂ ತದಕ್ಷಯಂ ಜ್ಞೇಯಂ ಶಿವಸ್ಯ ವಚನಂ ಯಥಾ ॥ ೨೭ ॥

ಯಸ್ತ್ವಿದಂ ಶೃಣುಯಾನ್ನಿತ್ಯಂ ಸ್ಮರೇದಪಿ ಪಠೇತ್ತಥಾ ।
ಆಖ್ಯಾನಂ ಮಾತೃತೀರ್ಥಾನಾಮಾಯುಷ್ಮಾನ್ಸ ಸುಖೀ ಭವೇತ್ ॥ ೨೮ ॥

ಇತಿ ಶ್ರೀ ಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ದೇವತೀರ್ಥ ಮಾತೃತೀರ್ಥ ಪ್ರತಿಷ್ಠಾನವರ್ಣನಂ ನಾಮ
ದ್ವಾದಶಾಧಿಕಶತತಮೋಽಧ್ಯಾಯಃ

ಮಾತೃತೀರ್ಥವೆಂದು ಪ್ರಸಿದ್ಧವಾಗಿರುವುವು. ಆ ತೀರ್ಥಗಳನ್ನು ದೇವತೆಗಳೂ ಸೇವಿಸುವರು. ಇನ್ನು ಮನುಷ್ಯರು ಸೇವಿಸುವರೆಂದು ಪುನಃ ಹೇಳಬೇಕಾಗಿಲ್ಲವಷ್ಟೆ?

೨೭. ಮಾತೃಕಾತೀರ್ಥಗಳಲ್ಲಿ ಸ್ನಾನದಾನಗಳನ್ನೂ ಪಿತೃತರ್ಪಣವನ್ನೂ ಮಾಡಿದರೆ ಅಕ್ಷಯವಾದ ಪುಣ್ಯವು ಲಭಿಸುವುದೆಂದು ಶಿವನು ವರವನ್ನನುಗ್ರಹಿಸಿರುವನು.

೨೮. ಈ ಮಾತೃಕಾತೀರ್ಥಗಳ ಮಾಹಾತ್ಮ್ಯವನ್ನು ಕೇಳಿದರೂ ಹೇಳಿದರೂ ಸ್ಮರಿಸಿದರೂ ಆಯುಸ್ಸೂ ಸುಖವೂ ಲಭಿಸುವುವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ದೇವತೀರ್ಥ, ಮಾತೃತೀರ್ಥ ಪ್ರತಿಷ್ಠಾನವರ್ಣನವೆಂಬ ನೂರಹನ್ನೆರಡನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ನಲವತ್ತನೂರನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ತ್ರಯೋದಶಾಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಇದಮುಪ್ಯಪರಂ ತೀರ್ಥಂ ದೇವಾನಾಮಪಿ ದುರ್ಲಭಂ ।
ಬ್ರಹ್ಮತೀರ್ಥಮಿತಿ ಖ್ಯಾತಂ ಭುಕ್ತಿಮುಕ್ತಿಪ್ರದಂ ನೃಣಾಂ ॥ ೧ ॥

ಸ್ಥಿತೇಷು ದೇವಸೈನ್ಯೇಷು ಪ್ರವಿಷ್ಟೇಷು ರಸಾತಲಂ ।
ದೈತ್ಯೇಷು ಚ ಮುನಿಶ್ರೇಷ್ಠ ತಥಾ ಮಾತೃಷು ತಾನನು ॥ ೨ ॥

ನೂರಹದಿಮೂರನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಬ್ರಹ್ಮತೀರ್ಥವೆಂದು ಪ್ರಸಿದ್ಧವಾದ ತೀರ್ಥವಿರುವುದು. ಭೋಗಮೋಕ್ಷಗಳನ್ನು ಕೊಡುವ ಆ ತೀರ್ಥವು ದೇವತೆಗಳಿಗೂ ದುರ್ಲಭವಾಗಿರುವುದು.

೨. ಹಿಂದೆ ಹೇಳಿದ ದೇವಾಸುರಯುದ್ಧದಲ್ಲಿ ಶಿವನ ಭಯದಿಂದ ರಾಕ್ಷಸರೆಲ್ಲರೂ ಪಾತಾಳಕ್ಕೆ ಓಡಿದರಷ್ಟೆ? ಮಾತೃಕಾದೇವಿಯರು ಆ ದೈತ್ಯರನ್ನು ಬೆನ್ನಟ್ಟಿ ಹೋದಾಗ ದೇವಸೈನ್ಯಗಳು ಯುದ್ಧರಂಗದಲ್ಲಿ ಹಾಗೆಯೇ ನಿಂತಿದ್ದುವು.

ಮದೀಯಂ ಪಂಚಮಂ ವಕ್ತ್ರಂ ಗರ್ದಭಾಕೃತಿ ಭೀಷಣಂ ।
ತದ್ವಕ್ತ್ರಂ ದೇವಸೈನ್ಯೇಷು ಮಯಿ ತಿಷ್ಠತ್ಯುವಾಚ ಹ ॥ ೩ ॥

ಹೇ ದೈತ್ಯಾಃ ಕಿಂ ಪಲಾಯಂತೇ ನ ಭಯಂ ವೋಽಸ್ತು ಸತ್ವರಂ ।
ಆಗಚ್ಛಂತು ಸುರಾಸ್ಸರ್ವಾನ್ಭಕ್ಷಯಿಷ್ಯೇ ಕ್ಷಣಾದಿತಿ ॥ ೪ ॥

ನಿವಾರಯಂತಂ ಮಾಮೇವಂ ಭಕ್ಷಣಾಯೋದ್ಯತಂ ತಥಾ ।
ತಂ ದೃಷ್ಟ್ವಾ ವಿಬುಧಾಃ ಸರ್ವೇ ವಿತ್ರಸ್ತಾ ವಿಷ್ಣುಮಬ್ರುವನ್ ॥ ೫ ॥

ತ್ರಾಹಿ ವಿಷ್ಣೋ ಜಗನ್ನಾಥ ಬ್ರಹ್ಮಣೋಽಸ್ಯ ಮುಖಂ ಲುನ ।
ಚಕ್ರಧೃಗ್ವಿಬುಧಾನಾಹ ಚ್ಛೇದ್ಮಿ ಚಕ್ರೇಣ ವೈ ಶಿರಃ ॥ ೬ ॥

ಕಿಂ ತು ತಚ್ಛಿನ್ನಮೇವೇದಂ ಸಂಹರೇತ್ಸಚರಾಚರಂ ।
ಮಂತ್ರಂ ಬ್ರೂಮೋಽತ್ರ ವಿಬುಧಾಃ ಶ್ರೂಯತಾಂ ಸರ್ವಮೇವ ಹಿ ॥ ೭ ॥

೩-೪. ಆಗ ನನ್ನ (ಬ್ರಹ್ಮನ) ಕತ್ತೆಯ ಆಕಾರವುಳ್ಳ ಭಯಂಕರವಾದ ಐದನೆಯ ಮುಖವು ದೇವಸೈನ್ಯ ಮತ್ತು ನಾನೂ ಕೇಳುವಂತೆ ಎಲೈ ದೈತ್ಯರೇ, ಹೆದರಿ ಏಕೆ ಓಡುವಿರಿ? ನಾನು ದೇವತೆಗಳೆಲ್ಲರನ್ನೂ ಈ ಕೂಡಲೇ ನುಂಗುವೆನು ಎಂದಿತು.

೫. ನಾನೆಷ್ಟು ತಡೆದರೂ ಕೇಳದೆ ಆ ಮುಖವು ದೇವತೆಗಳನ್ನು ನುಂಗಲು ಸಿದ್ಧವಾಯಿತು. ಆಗ ದೇವತೆಗಳು ಹೆದರಿ ಎಲೈ ವಿಷ್ಣುವೇ, ನಮ್ಮನ್ನು ಕಾಪಾಡು. ಬ್ರಹ್ಮನ ಈ ಮುಖವನ್ನು ಕತ್ತರಿಸು ಎಂದು ಹರಿಯನ್ನು ಪ್ರಾರ್ಥಿಸಿದರು.

೬-೭. ಆಗ ವಿಷ್ಣುವು ಚಕ್ರದಿಂದ ಈ ಕತ್ತೆಯನ್ನು ಕತ್ತರಿಸಿದರೆ ಅದು ಜಗತ್ತೆಲ್ಲವನ್ನೂ ನಾಶಮಾಡುವುದು. ಆದುದರಿಂದ ಓ ದೇವತೆಗಳೇ, ನಾನೊಂದು ಪಾಯವನ್ನು ಹೇಳುವೆನು ಎಲ್ಲರೂ ಕೇಳಿರಿ,

ತ್ರಿನೇತ್ರಃ ಶಿರಶ್ಛೇತ್ತಾ ಸ ಚ ಧರ್ತೇ ನ ಸಂಶಯಃ ।
ಮಯಾ ಚ ಶಂಭುಃ ಸರ್ವೈಶ್ಚ ಸ್ತುತಃ ಪ್ರೋಕ್ತಸ್ತಥೈವ ಚ ॥ ೮ ॥

ಯಾಗಃ ಕ್ಷಣೀ ದೃಷ್ಟಫಲೇSಸಮರ್ಥಃ
ಸ ನೈವ ಕರ್ತುಃ ಫಲತೀತಿ ಮತ್ವಾ ।
ಫಲಸ್ಯ ದಾನೇ ಪ್ರತಿಭೂರ್ಜಟೀತಿ
ನಿಶ್ಚಿತ್ಯ ಲೋಕಃ ಪ್ರತಿಕರ್ಮ ಯಾತಃ ॥ ೯ ॥

ತತಃ ಸುರೇಶಃ ಸಂತುಷ್ಟೋ ದೇವಾನಾಂ ಕಾರ್ಯಸಿದ್ಧಯೇ ।
ಲೋಕಾನಾಮುಪಕಾರಾರ್ಥಂ ತಥೇತ್ಯಾಹ ಸುರಾನ್ಪ್ರತಿ ॥ ೧೦ ॥

ತದ್ವಕ್ತ್ರಂ ಪಾಪರೂಪಂ ಯದ್ಭೀಷಣಂ ಲೋಮಹರ್ಷಣಂ ।
ನಿಕೃತ್ಯ ನಖಶಸ್ತ್ರೈಶ್ಚ ಕ್ವ ಸ್ಥಾಪ್ಯಂ ಚೇತ್ಯಥಾಬ್ರವೀತ್ ॥ ೧೧ ॥

---

೮. ತ್ರಿಲೋಚನನು ಈ ಬ್ರಹ್ಮಶಿರವನ್ನು ಕತ್ತರಿಸಿ ಅದು ಜಗತ್ತನ್ನು ನಾಶಮಾಡದಂತೆ ಧರಿಸಬಲ್ಲನು. ಆದುದರಿಂದ ನಾನೂ ನೀವೂ ಶಿವನನ್ನು ಸ್ತುತಿಸೋಣ ಎಂದನು.

೯. ಕ್ಷಣಿಕವಾದ ಯಾಗವು ಇಹಲೋಕದಲ್ಲಿ ಫಲವನ್ನು ಕೊಡುವುದಿಲ್ಲ. ಈ ಜನ್ಮದಲ್ಲಿ ಯಾಗದಿಂದ ಏನೂ ಉಪಯೋಗವಿಲ್ಲ ಎಂದು ತಿಳಿದು ಪಂಡಿತರು ಪ್ರತಿಕರ್ಮದಲ್ಲಿಯೂ ಶಿವನನ್ನೇ ಭಜಿಸುತ್ತಾ ಇಷ್ಟಾರ್ಥಗಳನ್ನು ಪಡೆಯುತ್ತಿರುವರು. ಓ ಶಂಕರ, ನೀನೇ ದೃಷ್ಟಫಲಗಳನ್ನೂ ಅದೃಷ್ಟಫಲಗಳನ್ನೂ ಕೊಡುವವನು ಎಂದು ದೇವತೆಗಳು ಶಂಕರನನ್ನು ಸ್ತುತಿಸಿದರು.

೧೦. ಆಗ ಶಿವನು ಪ್ರಸನ್ನನಾಗಿ ದೇವತೆಗಳಿಗಾಗಿಯೂ ಲೋಕೋಪಕಾರಕ್ಕಾಗಿಯೂ ಬ್ರಹ್ಮಶಿರವನ್ನು ಕತ್ತರಿಸಲು ಒಪ್ಪಿಕೊಂಡನು.

೧೧. ಆಮೇಲಾ ಶಂಕರನು ಭಯಂಕರವಾದಾ ಬ್ರಹ್ಮಶಿರವನ್ನು ತನ್ನ ಉಗುರುಗಳಿಂದಲೇ ಕತ್ತರಿಸಿ ಇದನ್ನು ಎಲ್ಲಿರಸಲಿ ಎಂದು ದೇವತೆಗಳನ್ನು ಕೇಳಿದನು.

ತತ್ರೇಲಾ ವಿಬುಧಾನಾಹ ನಾಹಂ ವೋಢುಂ ಶಿರಃ ಕ್ಷಮಾ ।
ರಸಾತಲಮಥೋ ಯಾಸ್ಯೇ ಉದಧಿಶ್ಚಾಪ್ಯಥಾಬ್ರವೀತ್ ॥ ೧೨ ॥

ಶೇಷಂ ಯಾಸ್ಯೇ ಕ್ಷಣಾದೇವ ಪುನಶ್ಚೋಚುಃ ಶಿವಂ ಸುರಾಃ ।
ತ್ವಯ್ಯೈವೈತದ್ಬ್ರಹ್ಮಶಿರೋ ಧಾರ್ಯಂ ಲೋಕಾನುಕಂಪಯಾ ॥ ೧೩ ॥

ಅಚ್ಛೇದೇ ಜಗತಾಂ ನಾಶಶ್ಛೇದೇ ದೋಷಶ್ಚ ತಾದೃಶಃ ।
ಏವಂ ವಿಮೃಶ್ಯ ಸೋಮೇಶೋ ದಧಾರ ಕಶಿರಸ್ತದಾ ॥ ೧೪ ॥

ತದ್ದೃಷ್ಟ್ವಾ ದುಷ್ಕರಂ ಕರ್ಮ ಗೌತಮೀಂ ಪ್ರಾಪ್ಯ ಪಾವನೀಂ ।
ಅಸ್ತುವಞ್ಗತಾಮೀಶಂ ಪ್ರಣಯಾದ್ಭಕ್ತಿತಃ ಸುರಾಃ ॥ ೧೫ ॥

---

೧೨. ಆಗ ಭೂಮಿಯು ಈ ಶಿರಸ್ಸನ್ನು ನನ್ನಲ್ಲಿರಿಸಬೇಡಿ. ನಾನದನ್ನು ಧರಿಸಲಾರೆನು. ಹಾಗಲ್ಲದೆ ನನ್ನಲ್ಲಿಡುವುದಾದರೆ ಪಾತಾಳದಲ್ಲಿ ಹುಗಿದುಹೋಗುವೆನು ಎಂದಿತು.

೧೩. ಸಮುದ್ರನೂ ಸಹ ನನ್ನಲ್ಲಿರಿಸಬೇಡಿ. ನಾನು ಇನ್ನೂ ಕೆಳಗೆ ಆದಿಶೇಷನ ಬಳಿಗೆ ತೆರಳಬೇಕಾಗುವುದು ಎಂದನು. ಆಗ ದೇವತೆಗಳು ಪುನಃ ಶಿವನನ್ನು ಪ್ರಾರ್ಥಿಸಿದರು.

೧೪. ಓ ಶಂಕರ, ನೀನೇ ಲೋಕೋಪಕಾರಕ್ಕಾಗಿ ಈ ಬ್ರಹ್ಮಶಿರಸ್ಸನ್ನು ಧರಿಸು ಎಂದು ಪ್ರಾರ್ಥಿಸಿದರು. ಆಗ ಶಿವನು ಕತ್ತರಿಸದಿದ್ದರೂ ಈ ತಲೆಯು ಜಗತ್ತನ್ನು ಸಂಹರಿಸುತ್ತಿತ್ತು. ಕತ್ತರಿಸಿ ಈಗ ಭೂಮಿಯಲ್ಲಿರಿಸಿದರೂ ಜಗತ್ತನ್ನು ನಾಶಮಾಡುವುದು ಎಂದು ಯೋಚಿಸಿ ಪರಮೇಶ್ವರನು ಬ್ರಹ್ಮಶಿರವನ್ನು ತಾನೇ ಧರಿಸಿದನು.

೧೫. ಶಿವನ ಆ ಅದ್ಭುತಕಾರ್ಯವನ್ನು ನೋಡಿ ದೇವತೆಗಳು ಆಶ್ಚರ್ಯಗೊಂಡು ಗೌತಮೀನದಿಗೆ ಹೋಗಿ ಅಲ್ಲಿ ಪ್ರೀತಿಯಿಂದಲೂ ಭಕ್ತಿಯಿಂದಲೂ ಶಿವನನ್ನು ಪ್ರಾರ್ಥಿಸಿದರು.

ದೇವೇಷ್ವಮಿತ್ರಂ ಕಶಿರೋಽತಿಭೀಮಂ
ತಾನ್ಭಕ್ಷಣಾಯೋಪಗತಂ ನಿಕೃತ್ಯ ।
ನಖಾಗ್ರಸೂಚ್ಯಾ ಶಕಲೇಂದುಮೌಲಿ-
ಸ್ತ್ಯಾಗೇಽಪಿ ದೋಷಾತ್ಕೃಪಯಾನುಧತ್ತೇ ॥ ೧೬ ॥

ತತ್ರ ತೇ ವಿಬುಧಾಃ ಸರ್ವೇ ಸ್ಥಿತಾ ಯೇ ಬ್ರಹ್ಮಣೋಽಂತಿಕೇ ।
ತುಷ್ಟುವುರ್ವಿಬುಧೇಶಾನಂ ಕರ್ಮ ದೃಷ್ಟ್ವಾತಿದೈವತಂ ॥ ೧೭ ॥

ತತಃ ಪ್ರಭೃತಿ ತತ್ತೀರ್ಥಂ ಬ್ರಹ್ಮತೀರ್ಥಮಿತಿ ಶ್ರುತಂ ।
ಅದ್ಯಾಪಿ ಬ್ರಹ್ಮಣೋ ರೂಪಂ ಚತುರ್ಮುಖಮವಸ್ಥಿತಂ ॥ ೧೮ ॥

ಶಿರೋಮಾತ್ರಂ ತು ಯಃ ಪಶ್ಯೇತ್ಸ ಗಚ್ಛೇದ್ಬ್ರಹ್ಮಣಃ ಪದಂ ।
ಯತ್ರ ಸ್ಥಿತ್ವಾ ಸ್ವಯಂ ರುದ್ರೋ ಲೂನವಾನ್ಬ್ರಹ್ಮಣಃ ಶಿರಃ ॥ ೧೯ ॥

ರುದ್ರತೀರ್ಥಂ ತದೇವ ಸ್ಯಾತ್ತತ್ರ ಸಾಕ್ಷಾದ್ದಿವಾಕರಃ ।
ದೇವಾನಾಂ ಚ ಸ್ವರೂಪೇಣ ಸ್ಥಿತೋ ಯಸ್ಮಾತ್ತದುತ್ತಮಂ ॥ ೨೦ ॥

---

೧೬. ಬ್ರಹ್ಮನ ಭಯಂಕರವಾದ ಶಿರಸ್ಸು ದೇವತೆಗಳನ್ನು ನುಂಗಲು ಬಂದಿತು. ಅವನ್ನು ಶಿವನು ಉಗುರಿನಿಂದ ಕತ್ತರಿಸಿದನು. ಕೆಳಗಿರಿಸಿದರೆ ಪ್ರಪಂಚವನ್ನೇ ನಾಶಮಾಡುವುವೆಂದು ತಿಳಿದು ಶಂಕರನು ಕೃಪೆಯಿಂದ ಆ ಶಿರಸ್ಸನ್ನು ತಾನೇ ಧರಿಸಿದನು. ಇಂತಹ ನಿನಗೆ ನಮಸ್ಕಾರವು.

೧೭. ಶಿವನ ಆ ಅದ್ಭುತಕಾರ್ಯವನ್ನು ನೋಡಿ ಬ್ರಹ್ಮನ ಬಳಿಯಲ್ಲಿದ್ದ ದೇವತೆಗಳೂ ಆ ಮಹಾದೇವನನ್ನು ಭಕ್ತಿಯಿಂದ ಸ್ತುತಿಸಿದರು.

೧೮-೧೯. ಆ ಮೊದಲುಗೊಂಡು ಆ ತೀರ್ಥಕ್ಕೆ ಬ್ರಹ್ಮತೀರ್ಥವೆಂದು ಹೆಸರಾಯಿತು. ಶಿವನು ಬ್ರಹ್ಮನ ಐದನೇ ಶಿರವನ್ನು ಕತ್ತರಿಸಿದುದರಿಂದ ಬ್ರಹ್ಮನು ಈಗಲೂ ಚತುರ್ಮುಖನಾಗಿರುವನು. ಬ್ರಹ್ಮ ತೀರ್ಥಕ್ಕೆ ಹೋಗಿ ಬ್ರಹ್ಮಶಿರವನ್ನು ದರ್ಶನಮಾಡಿದಮಾತ್ರದಿಂದಲೇ ನರನು ಬ್ರಹ್ಮಲೋಕವನ್ನು ಪಡೆಯುವನು.

೨೦-೨೧. ರುದ್ರನು ಬ್ರಹ್ಮಶಿರವನ್ನು ಕತ್ತರಿಸಿದ ಸ್ಥಳವು ರುದ್ರತೀರ್ಥವೆಂದು ಪ್ರಸಿದ್ಧವಾಯಿತು. ದೇವತೆಗಳ ಸ್ವರೂಪದಿಂದ ಸೂರ್ಯನು ನೆಲಸಿರುವ

ಸೌರ್ಯಂ ತೀರ್ಥಂ ತದಾಖ್ಯಾತಂ ಸರ್ವಕ್ರತುಫಲಪ್ರದಂ ।
ತತ್ರ ಸ್ನಾತ್ವಾ ರವಿಂ ದೃಷ್ಟ್ವಾ ಪುನರ್ಜನ್ಮ ನ ವಿದ್ಯತೇ ॥ ೨೦ ॥

ಮಹಾದೇವೇನ ಯಚ್ಛಿನ್ನಂ ಬ್ರಹ್ಮಣಃ ಪಂಚಮಂ ಶಿರಃ ।
ಕ್ಷೇತ್ರೇಽವಿಮುಕ್ತೇ ಸಂಸ್ಥಾಪ್ಯ ದೇವತಾನಾಂ ಹಿತಂ ಕೃತಂ ॥ ೨೨ ॥

ಬ್ರಹ್ಮತೀರ್ಥೇ ಶಿರೋಮಾತ್ರಂ ಯೋ ದೃಷ್ಟ್ವಾ ಗೌತಮೀತಟೇ ।
ಕ್ಷೇತ್ರೇಽವಿಮುಕ್ತೇ ತಸ್ಯೈವ ಸ್ಥಾಪಿತಂ ಯೋಽನುಪಶ್ಯತಿ ।
ಕಪಾಲಂ ಬ್ರಹ್ಮಣಃ ಪುಣ್ಯಂ ಬ್ರಹ್ಮಹಾ ಪೂತತಾಂ ವ್ರಜೇತ್ ॥ ೨೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಬ್ರಹ್ಮ-ತೀರ್ಥಬ್ರಹ್ಮಶಿರೋಲಿಂಗಶಿವತೀರ್ಥಸೂರ್ಯತೀರ್ಥಾದಿಷಡಶೀತಿ ತೀರ್ಥವರ್ಣನಂ ನಾಮ ತ್ರಯೋದಶಾಧಿಕಶತತಮೋಽಧ್ಯಾಯಃ

ತೀರ್ಥವು ಸೌರ್ಯತೀರ್ಥವು. ಆ ತೀರ್ಥದಲ್ಲಿ ಸ್ನಾನಮಾಡಿ ಸೂರ್ಯದರ್ಶನವನ್ನು ಮಾಡಿದರೆ ಪುನಃ ಜನ್ಮವೇ ಇಲ್ಲ. ಮುಕ್ತಿಯು ಲಭಿಸುವುದು. ಇಂತಹ ಸೌರ್ಯತೀರ್ಥವು ಈ ಬ್ರಹ್ಮತೀರ್ಥಕ್ಕೆ ಹತ್ತಿರದಲ್ಲಿರುವುದು.

೨೨. ಬ್ರಹ್ಮಶಿರಸ್ಸನ್ನು ಕತ್ತರಿಸಿ ಮಹಾದೇವನು ಅದನ್ನು ದೇವತೆಗಳ ಕ್ಷೇಮಕ್ಕಾಗಿ ಅವಿಮುಕ್ತವೆಂಬ ಕ್ಷೇತ್ರದಲ್ಲಿ ಪ್ರತಿಷ್ಠಿಸಿದನು.

೨೩. ಗೌತಮೀತೀರದಲ್ಲಿರುವ ಬ್ರಹ್ಮತೀರ್ಥದಲ್ಲಿ ಬ್ರಹ್ಮಶಿರವನ್ನೂ, ಅವಿಮುಕ್ತಕ್ಷೇತ್ರದಲ್ಲಿ ಸ್ಥಾಪಿಸಿದ ಬ್ರಹ್ಮಕಪಾಲವನ್ನೂ, ದರ್ಶನಮಾಡಿದವನು ಬ್ರಹ್ಮಹತ್ಯೆಯನ್ನು ಮಾಡಿದ್ದರೂ ಪರಿಶುದ್ಧನಾಗುವನು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ಬ್ರಹ್ಮತೀರ್ಥ, ಶಿರೋಲಿಂಗಶಿವತೀರ್ಥ, ಸೂರ್ಯತೀರ್ಥವೇ ಮೊದಲಾದ ಎಂಭತ್ತಾರು ತೀರ್ಥಗಳ ವರ್ಣನವೆಂಬ ನೂರಹದಿಮೂರನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ನಲವತ್ತನಾಲ್ಕನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಚತುರ್ದಶಾಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಅವಿಘ್ನಂ ತೀರ್ಥಮಾಖ್ಯಾತಂ ಸರ್ವವಿಘ್ನವಿನಾಶನಂ ।
ತತ್ರಾಪಿ ವೃತ್ತಮಾಖ್ಯಾಸ್ಯೇ ಶೃಣು ನಾರದ ಭಕ್ತಿತಃ ॥ ೧ ॥

ದೇವಸತ್ರೇ ಪ್ರವೃತ್ತೇ ತು ಗೌತಮ್ಯಾಶ್ಚೋತ್ತರೇ ತಟೇ ।
ಸಮಾಪ್ತಿರ್ನೈವ ಸತ್ರಸ್ಯ ಸಂಜಾತಾ ವಿಘ್ನದೋಷತಃ ॥ ೨ ॥

ನೂರಹದಿನಾಲ್ಕನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಸಕಲ ವಿಘ್ನಗಳನ್ನೂ ನಾಶಮಾಡುವಂತಹ ಅವಿಘ್ನವೆಂಬ ತೀರ್ಥವಿರುವುದು. ಆ ತೀರ್ಥದ ಮಹಾತ್ಮ್ಯವನ್ನು ಹೇಳುವೆನು ಕೇಳು.

೨. ಗೌತಮೀನದಿಯ ಉತ್ತರತೀರದಲ್ಲಿ ದೇವತೆಗಳು ದೊಡ್ಡ ಯಾಗವನ್ನು ಪ್ರಾರಂಭಿಸಿದರು. ಆದರಾಯಾಗವು ವಿಘ್ನದೋಷದಿಂದ ಸರಿಯಾಗಿ ಮುಗಿಯಲೇ ಇಲ್ಲ.

ತತಃ ಸುರಗಣಾಃ ಸರ್ವೇ ಮಾಮುಪ್ರೋಚನ್ಸ್ಥಿರಿಂ ತದಾ ।
ತತೋ ಧ್ಯಾನಗತೋಽಹಂ ತಾನಪ್ರೋಚಂ ವೀಕ್ಷ್ಯ ಕಾರಣಂ ॥ ೩ ॥

ವಿನಾಯಕಕೃತೈರ್ವಿಘ್ನೈರ್ನೈತತ್ಸತ್ರಂ ಸಮಾಪ್ಯತೇ ।
ತಸ್ಮಾತ್ತುಷ್ಟವಂತು ತೇ ಸರ್ವೇ ಆದಿದೇವಂ ವಿನಾಯಕಂ ॥ ೪ ॥

ತಥೇತ್ಯುಕ್ತ್ವಾ ಸುರಗಣಾಃ ಸ್ನಾತ್ವಾ ತೇ ಗೌತಮೀತಟೇ ।
ಅಸ್ತುವನ್ಭಕ್ತಿತೋ ದೇವಾ ಆದಿದೇವಂ ಗಣೇಶ್ವರಂ ॥ ೫ ॥

॥ ದೇವಾ ಊಚುಃ ॥

ಯಃ ಸರ್ವಕಾರ್ಯೇಷು ಸದಾ ಸುರಾಣಾ-
ಮಪೀಶವಿಷ್ಣ್ವಂಬುಜಸಂಭವಾನಾಂ ।
ಪೂಜ್ಯೋ ನಮಸ್ಯಃ ಪರಿಚಿಂತನೀಯ-
ಸ್ತಂ ವಿಘ್ನರಾಜಂ ಶರಣಂ ವ್ರಜಾಮಃ ॥ ೬ ॥

---

೩. ಆಗ ದೇವತೆಗಳು ನನ್ನ ಬಳಿಗೆ ಬಂದು ಹೇಳಿಕೊಂಡರು. ನಾನು ಹರಿಯನ್ನು ಧ್ಯಾನಿಸಿ ಕಾರಣವನ್ನು ತಿಳಿದು,

೪. ವಿನಾಯಕನಿಂದ ವಿಘ್ನಗಳು ಒದಗಿ ಈ ಯಾಗವು ಮುಗಿಯುತ್ತಿಲ್ಲ. ಆದುದರಿಂದ ನೀವೆಲ್ಲರೂ ಆದಿದೇವನಾದ ಆ ವಿನಾಯಕನನ್ನು ಪ್ರಾರ್ಥಿಸಿರಿ ಎಂದೆನು.

೫. ಹಾಗೆಯೇ ಆಗಲೆಂದು ಒಪ್ಪಿ ದೇವತೆಗಳು ಗೌತಮೀನದಿಯಲ್ಲಿ ಸ್ನಾನಮಾಡಿ ದೇವದೇವನಾದ ಗಣೇಶ್ವರನನ್ನು ಭಕ್ತಿಯಿಂದ ಸ್ತುತಿಸಿದರು.

೬. ಓ ದೇವ, ನೀನು ಸಮಸ್ತ ಕಾರ್ಯಗಳ ಪ್ರಾರಂಭದಲ್ಲಿಯೂ ಚಿಂತಿಸಲ್ಪಡತಕ್ಕವನು. ಬ್ರಹ್ಮವಿಷ್ಣುಮಹೇಶ್ವರರಿಗೂ ಪೂಜ್ಯನು. ವಂದ್ಯನು. ವಿಘ್ನಗಳಿಗೆ ಅಧಿಪತಿಯಾದ ಇಂತಹ ಗಣೇಶ್ವರನನ್ನು ಮರೆಹೊಕ್ಕಿರುವೆವು.

ನ ವಿಘ್ನರಾಜೇನ ಸಮೋಽಸ್ತಿ ಕಶ್ಚಿ-
ದ್ದೇವೋ ಮನೋವಾಂಛಿತಸಂಪ್ರದಾತಾ ।
ನಿಶ್ಚಿತ್ಯ ಚೈತತ್ತ್ರಿಪುರಾಂತಕೋಽಪಿ
ತಂ ಪೂಜಯಾಮಾಸ ವಧೇ ಪುರಾಣಾಂ ॥ ೭ ॥

ಕರೋತು ಸೋಽಸ್ಮಾಕಮವಿಘ್ನಮಸ್ಮಿ-
ನ್ಮಹಾಕ್ರತೌ ಸತ್ವರಮಾಂಬಿಕೇಯಃ ।
ಧ್ಯಾತೇನ ಯೇನಾಖಿಲದೇಹಭಾಜಾಂ
ಪೂರ್ಣಾ ಭವಿಷ್ಯಂತಿ ಮನೋಭಿಲಾಷಾಃ ॥ ೮ ॥

ಮಹೋತ್ಸವೋಽಭೂದಖಿಲಸ್ಯ ದೇವ್ಯಾ
ಜಾತಃ ಸುತಶ್ಚಿಂತಿತಮಾತ್ರ ಏವ ।
ಅತೋಽವದನ್ಸುರಸಂಘಾಃ ಕೃತಾರ್ಥಾಃ
ಸದ್ಯೋಜಾತಂ ವಿಘ್ನರಾಜಂ ನಮಂತಃ ॥ ೯ ॥

---

೭. ವಿಘ್ನೇಶ್ವರನಂತೆ ಇಷ್ಟಾರ್ಥವನ್ನು ಕರುಣಿಸುವ ದೇವನು ಮತ್ತೊಬ್ಬನಿಲ್ಲ. ಇದನ್ನು ತಿಳಿದು ಈಶ್ವರನು ತ್ರಿಪುರಾಸುರರ ಸಂಹಾರಕಾಲದಲ್ಲಿ ಗಣೇಶನನ್ನು ಪೂಜಿಸಿರುವನು.

೮. ಅಂತಹ ಗಣೇಶನು ನಮ್ಮ ಈ ಯಾಗದ ವಿಘ್ನವನ್ನು ಹೋಗಲಾಡಿಸಲಿ. ವಿನಾಯಕನನ್ನು ಧ್ಯಾನಿಸಿದರೆ ಇಷ್ಟಾರ್ಥಗಳೆಲ್ಲವೂ ಸಿದ್ಧಿಸುವುದರಲ್ಲಿ ಸಂದೇಹವಿಲ್ಲ.

೯. ಓ ವಿನಾಯಕ, ಪಾರ್ವತೀದೇವಿಯು ಚಿಂತಿಸಿದೊಡನೆಯೇ ನೀನು ಜನಿಸಿರುವೆ. ಆದುದರಿಂದ ದೇವತೆಗಳು ನಿನ್ನನ್ನು ಸದ್ಯೋಜಾತನೆಂದು ಕರೆದರು. ನೀನು ಜನಿಸಿದುದರಿಂದ ಪ್ರಪಂಚದಲ್ಲೆಲ್ಲಾ ಉತ್ಸವವು ಜರುಗಿತು.

ಯೋ ಮಾತುರುತ್ಸಂಗಗತೋಽಥ ಮಾತ್ರಾ
ನಿವಾರ್ಯಮಾಣೋಽಪಿ ಬಲಾಚ್ಚ ಚಂದ್ರಂ ।
ಸಂಗೋಪಯಾಮಾಸ ಪಿತುರ್ಜಟಾಸು
ಗಣಾಧಿನಾಥಸ್ಯ ವಿನೋದ ಏಷಃ ॥ ೧೦ ॥

ಪಪೌ ಸ್ತನಂ ಮಾತುರಥಾಪಿ ತೃಪ್ತೋ
ಯೋ ಭ್ರಾತೃಮಾತ್ಸರ್ಯಕಷಾಯಬುದ್ಧಿಃ ।
ಲಂಬೋದರಸ್ತ್ವಂ ಭವ ವಿಘ್ನರಾಜೋ
ಲಂಬೋದರಂ ನಾಮ ಚಕಾರ ಶಂಭುಃ ॥ ೧೧ ॥

ಸಂವೇಷ್ಟಿತೋ ದೇವಗಣೈರ್ಮಹೇಶಃ
ಪ್ರವರ್ತತಾಂ ನೃತ್ಯಮಿತೀತ್ಯುವಾಚ ।
ಸಂತೋಷಿತೋ ನೂಪುರರಾವಮಾತ್ರಾ-
ದ್ಗಣೇಶ್ವರತ್ವೇಽಭಿಷಿಷೇಚ ಪುತ್ರಂ ॥ ೧೨ ॥

---

೧೦. ಒಂದುದಿನ ವಿನಾಯಕನು ತಾಯಿಯ ತೊಡೆಯಮೇಲೆ ಕುಳಿತಿದ್ದನು. ಆಗ ಅವನು ತಾಯಿಯು ತಡೆದರೂ ಕೇಳದೆ ಶಿವನ ಶಿರಸ್ಸಿನಲ್ಲಿದ್ದ ಚಂದ್ರನನ್ನು ತಂದೆಯ [ಶಿವನ] ಜಡೆಯಲ್ಲಿ ಬಚ್ಚಿಟ್ಟನು. ಗಣೇಶ್ವರನ ಆಟಗಳಲ್ಲಿ ಇದೊಂದು.

೧೧. ತಾಯಿಯ ಸ್ತನವನ್ನು ಕುಡಿದು ತೃಪ್ತನಾಗಿದ್ದರೂ ವಿನಾಯಕನು ಸಹೋದರನಾದ ಷಣ್ಮುಖನಿಗೆ ಕೊಡಬಾರದೆಂಬ ಬುದ್ಧಿಯಿಂದ (ಮೊಲೆಯ) ಹಾಲೆಲ್ಲವನ್ನೂ ತಾನೇ ಕುಡಿಯುತ್ತಿದ್ದನು. ಅದನ್ನು ನೋಡಿ ಶಿವನು ನೀನು ಹೊಟ್ಟೆಬಾಕನಾದುದರಿಂದ ಲಂಬೋದರನೆಂದು ನಿನಗೆ ಹೆಸರಾಗಲಿ ಎಂದನು.

೧೨. ಒಮ್ಮೆ ದೇವತೆಗಳು ಸಭೆಸೇರಿದ್ದರು. ಆಗ ಶಿವನು ಅಗ್ರಾಸನದಲ್ಲಿ ಮಂಡಿಸಿದ್ದನು. ಆಗವನು ವಿನಾಯಕನಿಗೆ ನೃತ್ಯವನ್ನು ಮಾಡು ಎಂದನು. ವಿನಾಯಕನು ನೃತ್ಯಮಾಡಿದನು. ಆಗ ವಿನಾಯಕನ ಕಾಲುಕಡಗಧ್ವನಿಯಿಂದಲೇ ಸಂತುಷ್ಟನಾಗಿ ಶಿವನು ಅವನಿಗೆ ಗಣೇಶಪದವಿಯನ್ನು ಕೊಟ್ಟನು.

ಯೋ ವಿಘ್ನಪಾಶಂ ಚ ಕರೇಣ ಬಿಭ್ರ-
ತ್ಸ್ಕಂಧೇ ಕುಠಾರಂ ಚ ತಥಾ ಪರೇಣ ।
ಅಪೂಜಿತೋ ವಿಘ್ನಮಥೋಽಪಿ ಮಾತುಃ
ಕರೋತಿ ಕೋ ವಿಘ್ನಪತೇಃ ಸಮೋಽನ್ಯಃ ॥ ೧೩ ॥

ಧರ್ಮಾರ್ಥಕಾಮಾದಿಷು ಪೂರ್ವಪೂಜ್ಯೋ
ದೇವಾಸುರೈಃ ಪೂಜ್ಯತ ಏವ ನಿತ್ಯಂ ।
ಯಸ್ಯಾರ್ಚನಂ ಸ್ಯೈವ ವಿನಾಶಮಸ್ತಿ
ತಂ ಪೂರ್ವಪೂಜ್ಯಂ ಪ್ರಥಮಂ ನಮಾಮಿ ॥ ೧೪ ॥

ಯಸ್ಯಾರ್ಚನಾತ್ಪ್ರಾರ್ಥನಯಾನುರೂಪಾಂ
ದೃಷ್ಟ್ವಾ ತು ಸರ್ವಸ್ಯ ಫಲಸ್ಯ ಸಿದ್ಧಿಂ ।
ಸ್ವತಂತ್ರಸಾಮರ್ಥ್ಯಕೃತಾತಿಗರ್ವಂ
ಭ್ರಾತೃಪ್ರಿಯಂ ತ್ವಾಖುರಥಂ ತಮೀಡೇ ॥ ೧೫ ॥

---

೧೩. ಗಣೇಶನ ಬಲಗೈನಲ್ಲಿ ವಿಘ್ನಪಾಶವಿದೆ. ಎಡಗೈಯಲ್ಲಿ ಕೊಡಲಿಯನ್ನು ಹಿಡಿದು ಹೆಗಲಮೇಲಿರಿಸಿಕೊಂಡಿರುವನು. ತನ್ನ ಮಾತೆಯಾದರೂ ಸಹ ಪೂಜಿಸದಿದ್ದರೆ ವಿಘ್ನವನ್ನುಂಟುಮಾಡುವನು. ಇಂತಹ ವಿಘ್ನೇಶ್ವರನಿಗೆ ಸಮಾನರಾರು ?

೧೪. ಧರ್ಮಾರ್ಥಕಾಮಗಳನ್ನು ಪಡೆಯಲು ಎಲ್ಲಾ ಕಾರ್ಯಗಳಲ್ಲಿಯೂ ಮೊದಲು ಈ ವಿನಾಯಕನನ್ನೇ ಪೂಜಿಸಬೇಕು. ದೇವಾಸುರರೂ ಇವನನ್ನು ನಿತ್ಯವೂ ಪೂಜಿಸುವರು. ವಿನಾಯಕನನ್ನು ಪೂಜಿಸಿದರೆ ಯಾವ ಅಡ್ಡಿಯೂ ಬರಲಾರದು ಇಂತಹ ವಿನಾಯಕನನ್ನು ಮೊದಲು ನಮಸ್ಕರಿಸುವೆವು.

೧೫. ವಿನಾಯಕನನ್ನು ದರ್ಶನಮಾಡಿದರೆ, ಅರ್ಚಿಸಿದರೆ, ಪ್ರಾರ್ಥಿಸಿದರೆ ಇಷ್ಟಾರ್ಥಗಳೆಲ್ಲವೂ ಸಿದ್ಧಿಸುವುವು. ಅಂತಹ ಮಹಾಮಹಿಮನಾದ ಸ್ವತಂತ್ರಶಕ್ತಿಯುಳ್ಳ ಷಣ್ಮುಖಪ್ರಿಯನಾದ ಮೂಷಕವಾಹನನನ್ನು ಭಕ್ತಿಯಿಂದ ಸ್ತುತಿಸುವೆವು.

ಯೋ ಮಾತರಂ ಸರಸೈರ್ನೃತ್ಯಗೀತೈ-
ಸ್ತಥಾಭಿಲಾಷೈರಖಿಲೈರ್ವಿನೋದೈಃ ।
ಸಂತೋಷಯಾಮಾಸ ತದಾತಿತುಷ್ಟಂ
ತಂ ಶ್ರೀಗಣೇಶಂ ಶರಣಂ ಪ್ರಪದ್ಯೇ ॥ ೧೬ ॥

ಸುರೋಪಕಾರೈರಸುರೈಶ್ಚ ಯುದ್ಧೈಃ
ಸ್ತೋತ್ರೈರ್ನಮಸ್ಕಾರಪರೈಶ್ಚ ಮಂತ್ರೈಃ ।
ಪಿತೃಪ್ರಸಾದೇನ ಸದಾ ಸಮೃದ್ಧಂ
ತಂ ಶ್ರೀಗಣೇಶಂ ಶರಣಂ ಪ್ರಪದ್ಯೇ ॥ ೧೭ ॥

ಜಯೇ ಪುರಾಣಾಮುಕರೋತ್ಪ್ರತೀಪಂ
ಪಿತ್ರಾಪಿ ಹರ್ಷಾತ್ಪ್ರತಿಪೂಜಿತೋ ಯಃ ।
ನಿರ್ವಿಘ್ನತಾಂ ಚಾಪಿ ಪುನಶ್ಚಕಾರ
ತಸ್ಮೈ ಗಣೇಶಾಯ ನಮಸ್ಕರೋಮಿ ॥ ೧೮ ॥

---

೧೬. ತಾಯಿಯಾದ ಗಿರಿಜೆಯನ್ನು ಮನೋಹರವಾದ ನರ್ತನ, ಇಂಪಾದ ಗಾನ, ಮುದ್ದಾದ ಆಟ ಇವುಗಳಿಂದ ಸಂತೋಷಪಡಿಸುತ್ತಾ ಯಾವಾಗಲೂ ಸಂತಸದಿಂದ ಕೂಡಿರುವ ಶ್ರೀ ಗಣೇಶನನ್ನು ಶರಣು ಹೊಂದಿರುವೆವು.

೧೭. ಓ ವಿನಾಯಕ, ದೇವಾಸುರರೀರ್ವರೂ ತಮ್ಮ ಕಾರ್ಯಸಿದ್ಧಿಗಾಗಿ ನಿನ್ನನ್ನು ಸ್ತುತಿಸುವರು. ನಮಸ್ಕರಿಸುವರು. ವೇದಮಂತ್ರಗಳು ನಿನ್ನನ್ನು ಹೊಗಳುವುವು. ತಂದೆಯಾದ ಶಿವನು ನಿನ್ನಲ್ಲಿ ಸದಾ ಪ್ರೀತಿಯಿರಿಸಿರುವನು. ಇಂತಹ ಗಣೇಶನನ್ನು ಶರಣು ಹೊಂದಿರುವೆವು.

೧೮. ಶಿವನು ತ್ರಿಪುರಾಸುರರನ್ನು ಸಂಹರಿಸಲು ಹೊರಡುವಾಗ ಗಣೇಶನನ್ನು ಪೂಜಿಸಲು ಮರೆತನು. ಅದಕ್ಕೆ ಕೋಪಗೊಂಡು ವಿನಾಯಕನು ಯುದ್ಧದಲ್ಲಿ ಶಿವನಿಗೆ ಅಡ್ಡಿಯನ್ನೊಡ್ಡಿದನು. ಆಗ ಶಿವನು ವಿನಾಯಕನನ್ನು ಪೂಜಿಸಿ ಯುದ್ಧದಲ್ಲಿ ಜಯಶಾಲಿಯಾದನು. ಇಂತಹ ಮಹಾಮಹಿಮನಾದ ಗಣೇಶನನ್ನು ಭಕ್ತಿಯಿಂದ ನಮಸ್ಕರಿಸುವೆವು.

॥ ಬ್ರಹ್ಮೋವಾಚ ॥

ಇತಿ ಸ್ತುತಃ ಸುರಗಣೈರ್ವಿಘ್ನೇಶಃ ಪ್ರಾಹ ತಾನ್ಪುನಃ ॥ ೧೯ ॥

॥ ಗಣೇಶ ಉವಾಚ ॥

ಇತೋ ನಿರ್ವಿಘ್ನತಾ ಸತ್ರೇ ಮತ್ತಃ ಸ್ಯಾದಸುರಾರಿಣಃ ॥ ೨೦ ॥

॥ ಬ್ರಹ್ಮೋವಾಚ ॥

ದೇವಸತ್ರೇ ನಿವೃತ್ತೇ ತು ಗಣೇಶಃ ಪ್ರಾಹ ತಾನ್ಸುರಾನ್ ॥ ೨೧ ॥

॥ ಗಣೇಶ ಉವಾಚ ॥

ಸ್ತೋತ್ರೇಣಾನೇನ ಯೇ ಭಕ್ತ್ಯಾ ಮಾಂ ಸ್ತೋಷ್ಯಂತಿ ಯತವ್ರತಾಃ ।
ತೇಷಾಂ ದಾರಿದ್ರ್ಯದುಃಖಾನಿ ನ ಭವೇಯುಃ ಕದಾಚನ ॥ ೨೨ ॥

ಅತ್ರ ಯೇ ಭಕ್ತಿತಃ ಸ್ನಾನಂ ದಾನಂ ಕುರ್ಯುರತಂದ್ರಿತಾಃ ।
ತೇಷಾಂ ಸರ್ವಾಣಿ ಕಾರ್ಯಾಣಿ ಭವೇಯುರಿತಿ ಮನ್ಯತಾಂ ॥ ೨೩ ॥

॥ ಬ್ರಹ್ಮೋವಾಚ ॥

ತದ್ವಾಕ್ಯಸಮಕಾಲಂ ತು ತಥೇತ್ಯೂಚುಃ ಸುರಾ ಅಪಿ ।
ನಿವೃತ್ತೇ ತು ಮಖೇ ತಸ್ಮಿನ್ ಸುರಾ ಜಗ್ಮುಃ ಸ್ವಮಾಲಯಂ ॥ ೨೪ ॥

೧೯-೨೦. ಹೀಗೆ ದೇವತೆಗಳು ಸ್ತುತಿಸಲು ವಿಘ್ನೇಶ್ವರನು ಸಂತುಷ್ಟನಾಗಿ ಎಲೈ ದೇವತೆಗಳೇ, ಇನ್ನು ಮೇಲೆ ನನ್ನ ಅನುಗ್ರಹದಿಂದ ಯಜ್ಞದಲ್ಲಿ ನಿಮಗಾವ ವಿಘ್ನವೂ ಬರುವುದಿಲ್ಲ ಎಂದನುಗ್ರಹಿಸಿದನು.

೨೧. ದೇವಯಾಗವು ನಿರ್ವಿಘ್ನವಾಗಿ ಮುಗಿಯಿತು. ಆಗ ಗಣೇಶನು ದೇವತೆಗಳಿಗೆ

೨೨. ಈ ಸ್ತುತಿಯಿಂದ ನನ್ನನ್ನು ಸ್ತುತಿಸುವ ಭಕ್ತರರಿಗೆ ಬಡತನ ಮತ್ತು ದುಃಖಗಳು ಎಂದಿಗೂ ಬರಲಾರವು.

೨೩. ಈ ಗೌತಮೀತೀರ್ಥದಲ್ಲಿ ಭಕ್ತಿಯಿಂದ ಸ್ನಾನದಾನಗಳನ್ನು ಮಾಡುವವರಿಗೆ ಎಲ್ಲಾ ಕಾರ್ಯಗಳೂ ಅಡ್ಡಿಯಿಲ್ಲದೇ ಸಿದ್ಧಿಸುವುವು ಎಂದನು.

೨೪. ದೇವತೆಗಳೂ ಆ ಮಾತನ್ನೊಪ್ಪಿದರು. ದೇವಯಾಗವು ಮುಗಿದ ಮೇಲೆ ದೇವತೆಗಳೆಲ್ಲರೂ ತಮ್ಮ ಸ್ಥಾನಗಳಿಗೆ ತೆರಳಿದರು.

ತತಃ ಪ್ರಭೃತಿ ತತ್ತೀರ್ಥಮವಿಘ್ನಮಿತಿ ಗದ್ಯತೇ ।
ಸರ್ವಕಾಮಪ್ರದಂ ಪುಂಸಾಂ ಸರ್ವವಿಘ್ನವಿನಾಶನಂ　　॥ ೨೫ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇಽ-
ವಿಘ್ನತೀರ್ಥವರ್ಣನಂ ನಾಮ ಚತುರ್ದಶಾಧಿಕ-
ಶತತಮೋಽಧ್ಯಾಯಃ

---

೨೫. ಆ ಮೊದಲುಗೊಂಡು ಆ ತೀರ್ಥವು ಅವಿಘ್ನತೀರ್ಥವೆಂದು ಪ್ರಸಿದ್ಧವಾಯಿತು. ಆ ತೀರ್ಥವು ಇಷ್ಟಾರ್ಥಗಳೆಲ್ಲವನ್ನೂ ಉಂಟುಮಾಡುವುದು. ಸಕಲ ವಿಘ್ನಗಳನ್ನೂ ನಾಶಮಾಡುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಅವಿಘ್ನತೀರ್ಥವರ್ಣನವೆಂಬ ನೂರಹದಿನಾಲ್ಕನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ನಲವತ್ತೈದನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಪಂಚದಶಾಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಶೇಷತೀರ್ಥಮಿತಿ ಖ್ಯಾತಂ ಸರ್ವಕಾಮಪ್ರದಾಯಕಂ ।
ತಸ್ಯ ರೂಪಂ ಪ್ರವಕ್ಷ್ಯಾಮಿ ಯನ್ಮಯಾ ಪರಿಭಾಷಿತಂ ॥ ೧ ॥

ಶೇಷೋ ನಾಮ ಮಹಾನಾಗೋ ರಸಾತಲಪತಿಃ ಪ್ರಭುಃ ।
ಸರ್ವನಾಗೈಃ ಪರಿವೃತೋ ರಸಾತಲಮಥಾಭ್ಯಗಾತ್ ॥ ೨ ॥

ನೂರಹದಿನೈದನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಶೇಷತೀರ್ಥವೆಂಬೊಂದು ಸಕಲೇಷ್ಟಪ್ರದವಾದ ತೀರ್ಥವಿರುವುದು. ಆ ತೀರ್ಥದ ಮಾಹಾತ್ಮ್ಯವನ್ನು ಹೇಳುವೆನು.

೨. ಆದಿಶೇಷನೆಂಬುವನು ಸರ್ಪಗಳಿಗೆ ರಾಜನು. ಅವನಿಗೆ ಪಾತಾಳದ ಒಡೆತನವನ್ನು ಕೊಟ್ಟು ನಾನು ಅವನನ್ನು ಅಲ್ಲಿಗೆ ಕಳುಹಿದೆನು. ನಾಗಗಳೊಡನೆ ಆ ಶೇಷನು ಪಾತಾಳಕ್ಕೆ ಹೋದನು.

ರಾಕ್ಷಸಾ ದೈತ್ಯದನುಜಾಃ ಪ್ರವಿಷ್ಟಾ ಯೇ ರಸಾತಲಂ ।
ತೈರ್ನಿರಸ್ತೋ ಭೋಗಿಪತಿರ್ಮಾಮುವಾಚಾಥ ವಿಹ್ವಲಃ ॥ ೩ ॥

॥ ಶೇಷ ಉವಾಚ ॥

ರಸಾತಲಂ ತ್ವಯಾ ದತ್ತಂ ರಾಕ್ಷಸಾನಾಂ ಮಮಾಪಿ ಚ ।
ತೇ ಮೇ ಸ್ಥಾನಂ ನ ದಾಸ್ಯಂತಿ ತಸ್ಮಾತ್ತ್ವಾಂ ಶರಣಂ ಗತಃ ॥ ೪ ॥

ತತೋಽಹಮಬ್ರುವಂ ನಾಗಂ ಗೌತಮೀಂ ಯಾಹಿ ಪನ್ನಗ ।
ತತ್ರ ಸ್ತುತ್ವಾ ಮಹಾದೇವಂ ಲಪ್ಸ್ಯಸೇ ತ್ವಂ ಮನೋರಥಂ ॥ ೫ ॥

ನಾನ್ಯೋಽಸ್ತಿ ಲೋಕೇತ್ರಿತಯೇ ಮನೋರಥಸಮರ್ಪಕಃ ।
ಮದ್ವಾಕ್ಯಪ್ರೇರಿತೋ ನಾಗೋ ಗಂಗಾಮಾಪ್ಲುತ್ಯ ಯತ್ನತಃ ।
ಕೃತಾಂಜಲಿಪುಟೋ ಭೂತ್ವಾ ತುಷ್ಟಾವ ತ್ರಿದಶೇಶ್ವರಂ ॥ ೬ ॥

---

೩. ಆಗ ಪಾತಾಳದಲ್ಲಿದ್ದ ದೈತ್ಯದಾನವರು ಆ ಸರ್ಪರಾಜನನ್ನು ಅಲ್ಲಿಂದ ಓಡಿಸಿದರು. ಶೇಷನು ನನ್ನಲ್ಲಿಗೆ ಬಂದು

೪. ಎಲೈ ಬ್ರಹ್ಮನೇ, ಪಾತಾಳವನ್ನು ನೀನು ನನಗೂ ರಾಕ್ಷಸರಿಗೂ ಕೊಟ್ಟಿರುವೆ. ಆದರೆ ರಾಕ್ಷಸರು ಪಾತಾಳದಲ್ಲಿ ನನ್ನನ್ನಿರಗೊಡಿಸುವುದಿಲ್ಲ. ಆದುದರಿಂದ ನಿನ್ನನ್ನೇ ಮರೆಹೊಕ್ಕಿರುವೆನು ಎಂದನು.

೫. ಆಗ ನಾನು ಶೇಷನಿಗೆ ನೀನು ಗೌತಮಿಯತೀರಕ್ಕೆ ಹೋಗಿ ಅಲ್ಲಿ ಮಹಾದೇವನನ್ನು ಸ್ತುತಿಸು. ನಿನ್ನ ಇಷ್ಟಾರ್ಥವು ಸಿದ್ಧಿಸುವುದು.

೬. ಮೂರು ಲೋಕಗಳಲ್ಲಿ ಶಿವನು ಹೊರತು ಭಕ್ತರ ಇಷ್ಟಾರ್ಥಗಳೆಲ್ಲವನ್ನೂ ಕೊಡುವವನು ಮತ್ತೆ ಯಾರೂ ಇಲ್ಲ ಎಂದೆನು. ನನ್ನ ಮಾತನ್ನು ಕೇಳಿ ಶೇಷನು ಗೌತಮೀನದಿಗೆ ಹೋಗಿ ಅಲ್ಲಿ ಸ್ನಾನಮಾಡಿ ಅಂಜಲಿಯನ್ನು ಧರಿಸಿ ಇಂತು ಸ್ತುತಿಸಿದನು.

॥ ಶೇಷ ಉವಾಚ ॥

ನಮಸ್ತ್ರೈಲೋಕ್ಯನಾಥಾಯ ದಕ್ಷಯಜ್ಞವಿಭೇದಿನೇ ।
ಆದಿಕರ್ತ್ರೇ ನಮಸ್ತುಭ್ಯಂ ನಮಸ್ತ್ರೈಲೋಕ್ಯರೂಪಿಣೇ ॥ ೭ ॥

ನಮಸ್ಸಹಸ್ರಶಿರಸೇ ನಮಸ್ಸಂಹಾರಕಾರಿಣೇ ।
ಸೋಮಸೂರ್ಯಾಗ್ನಿರೂಪಾಯ ಜಲರೂಪಾಯ ತೇ ನಮಃ ॥ ೮ ॥

ಸರ್ವದಾ ಸರ್ವರೂಪಾಯ ಕಾಲರೂಪಾಯ ತೇ ನಮಃ ।
ಪಾಹಿ ಶಂಕರ ಸರ್ವೇಶ ಪಾಹಿ ಸೋಮೇಶ ಸರ್ವಗ ।
ಜಗನ್ನಾಥ ನಮಸ್ತುಭ್ಯಂ ದೇಹಿ ಮೇ ಮನಸೇಪ್ಸಿತಂ ॥ ೯ ॥

॥ ಬ್ರಹ್ಮೋವಾಚ ॥

ತತೋ ಮಹೇಶ್ವರಃ ಪ್ರೀತಃ ಪ್ರಾದಾನ್ನಾಗೇಪ್ಸಿತಾನ್ ವರಾನ್ ।
ವಿನಾಶಾಯ ಸುರಾರೀಣಾಂ ದೈತ್ಯದಾನವರಕ್ಷಸಾಂ ॥ ೧೦ ॥

---

೭. ಜಗದೀಶ್ವರನೂ, ದಕ್ಷಯಜ್ಞವನ್ನು ಧ್ವಂಸಮಾಡಿದವನೂ, ಆದಿಕರ್ತನೂ, ಜಗನ್ಮಯನೂ ಆದ ಪರಮೇಶ್ವರನಿಗೆ ನಮಸ್ಕಾರವು.

೮. ಸಾವಿರಾರು ಶಿರಸ್ಸುಳ್ಳ ವಿರಾಟ್ಪುರುಷನೂ, ಸಂಹಾರವನ್ನು ಮಾಡುವ ರುದ್ರಸ್ವರೂಪನೂ, ಚಂದ್ರಸೂರ್ಯಅಗ್ನಿಜಲಗಳ ಸ್ವರೂಪನೂ ಆದ ಜಗನ್ಮಯನಿಗೆ ನಮಸ್ಕಾರವು.

೯. ಸರ್ವಸ್ವರೂಪನೂ ಕಾಲರೂಪನೂ ಆದ ದೇವನಿಗೆ ನಮಸ್ಕಾರವು. ಪರಮೇಶ್ವರನಾದ ಓ ಶಂಕರ, ಪಾಲಿಸು. ಅಂತರ್ಯಾಮಿಯಾದ ಓ ಚಂದ್ರಶೇಖರ, ರಕ್ಷಿಸು. ಜಗದೊಡೆಯನಾದ ನಿನಗೆ ನಮಸ್ಕಾರವು. ನನ್ನ ಇಷ್ಟಾರ್ಥವನ್ನು ಸಲ್ಲಿಸು. ನಿನಗೆ ಪುನಃ ನಮಸ್ಕಾರವು ಎಂದು ಸ್ತೋತ್ರಮಾಡಿದನು.

೧೦. ಆಗ ಮಹೇಶ್ವರನು ಪ್ರಸನ್ನನಾಗಿ ಆದಿಶೇಷನಿಗೆ ಬೇಕಾದ ವರವನ್ನು ಕೊಟ್ಟನು. ದೈತ್ಯದಾನವರಾಕ್ಷಸರು ನಾಶವಾಗುವಂತೆ ಅನುಗ್ರಹಿಸಿದನು. ಶೇಷನಿಗೆ ತ್ರಿಶೂಲವನ್ನು ಕೊಟ್ಟು ಇದರಿಂದ ನೀನು ಶತ್ರುಗಳನ್ನು ಸಂಹರಿಸು ಎಂದು ಹೇಳಿದನು.

ಶೇಷಾಯ ಪ್ರದದೌ ಶೂಲಂ ಜಹ್ಯಸೇನಾರಿಪುಂಗವಾನ್ ।
ತತಃ ಪ್ರೋಕ್ತಃ ಶಿವೇನಾಸೌ ಶೇಷಃ ಶೂಲೇನ ಭೋಗಿಭಿಃ ॥ ೧೧ ॥

ರಸಾತಲಮಥೋ ಗತ್ವಾ ನಿಜಘಾನ ರಿಪೂನ್ ರಣೇ ।
ನಿಹತ್ಯ ನಾಗಶ್ಶೂಲೇನ ದೈತ್ಯದಾನವರಾಕ್ಷಸಾನ್ ॥ ೧೨ ॥

ನ್ಯವರ್ತತ ಪುನರ್ದೇವೋ ಯತ್ರ ಶೇಷೇಶ್ವರೋ ಹರಃ ।
ಪಥಾ ಯೇನ ಸಮಾಯಾತೋ ದೇವಂ ದ್ರಷ್ಟುಂ ಸ ನಾಗರಾಟ್ ॥ ೧೩ ॥

ರಸಾತಲಾದ್ಯತ್ರ ದೇವೋ ಬಿಲಂ ತತ್ರ ವ್ಯಜಾಯತ ।
ತಸ್ಮಾದ್ಬಿಲತಲಾದ್ಯಾತಂ ಗಾಂಗಂ ವಾರ್ಯತಿಪುಣ್ಯದಂ ॥ ೧೪ ॥

ತದ್ವಾರಿ ಗಾಂಗಮುಗಮದ್ಗಂಗಾಯಾ ಸಂಗಮಸ್ತತಃ ।
ದೇವಸ್ಯ ಪುರತಶ್ಚಾಪಿ ಕುಂಡಂ ತತ್ರ ಸುವಿಸ್ತರಂ ॥ ೧೫ ॥

---

೧೧. ಆ ಶೂಲವನ್ನು ತೆಗೆದುಕೊಂಡು ಶೇಷನು ಸರ್ಪಗಳೊಡನೆ ಪಾತಾಳಕ್ಕೆ ಹೋಗಿ ಶತ್ರುಗಳೆಲ್ಲರನ್ನೂ ಯುದ್ಧದಲ್ಲಿ ಸದೆಬಡಿದು ಅವರನ್ನು ಸಂಹರಿಸಿದನು.

೧೨. ಹೀಗೆ ಶೇಷನು ಶೂಲದಿಂದ ದೈತ್ಯದಾನವರಾಕ್ಷಸರನ್ನು ಸಂಹರಿಸಿ ಪುನಃ ಶೇಷೇಶ್ವರನಾದ ಶಿವನ ಬಳಿಗೆ ಬಂದನು.

೧೩. ಪಾತಾಳದಿಂದ ಶೇಷನು ಶಿವನನ್ನು ನೋಡಲು ಯಾವ ದಾರಿಯಿಂದ ಭೂಮಿಗೆ ಬಂದನೋ ಆ ಸ್ಥಳದಲ್ಲಿ ಬಿಲವೊಂದು ಉಂಟಾಯಿತು.

೧೪. ಆ ಬಿಲದಿಂದ ಪಾತಾಳಗಂಗೆಯ ಜಲವು ಹೊರಟು ಬಂದು ಗೌತಮೀನದಿಯಲ್ಲಿ ಸೇರಿತು. ಆದುದರಿಂದ ಅಲ್ಲಿ ಸಂಗಮಸ್ಥಳವಾಯಿತು.

೧೫-೧೬. ಶೇಷೇಶ್ವರದೇವನೆದುರಿಗೆ ಶೇಷನು ವಿಶಾಲವಾದ ಕುಂಡವನ್ನು ನಿರ್ಮಿಸಿ ಅಲ್ಲಿ ಅಗ್ನಿಯನ್ನು ಪ್ರತಿಷ್ಠಿಸಿ ಹೋಮಮಾಡಿದನು. ಆಮೊದಲು

ನಾಗಸ್ತತ್ರಾಕರೋದ್ಧೋಮಂ ಯತ್ರ ಚಾಗ್ನಿಃ ಸದಾ ಸ್ಥಿತಃ ।
ಸೋಽಷ್ಣಂ ತದಭವದ್ವಾರಿ ಗಂಗಾಯಾಸ್ತತ್ರ ಸಂಗಮಃ ॥ ೧೬ ॥

ದೇವದೇವಂ ಸಮಾರಾಧ್ಯ ನಾಗಃ ಪ್ರೀತೋ ಮಹಾಯಶಾಃ ।
ರಸಾತಲಂ ತತೋಽಭೀಷ್ಟಂ ಶಿವಾತ್ಪ್ರಾಪ್ಯ ತಲಂ ಯಯೌ ॥ ೧೭ ॥

ತತಃ ಪ್ರಭೃತಿ ತತ್ತೀರ್ಥಂ ನಾಗತೀರ್ಥಮುದಾಹೃತಂ ।
ಸರ್ವಕಾಮಪ್ರದಂ ಪುಣ್ಯಂ ರೋಗದಾರಿದ್ರ್ಯನಾಶನಂ ॥ ೧೮ ॥

ಆಯುರ್ಲಕ್ಷ್ಮೀಕರಂ ಪುಣ್ಯಂ ಸ್ನಾನದಾನಾಚ್ಚ ಮುಕ್ತಿದಂ ।
ಶೃಣುಯಾದ್ವಾ ಪಠೇದ್ಭಕ್ತ್ಯಾ ಯೋ ವಾಪಿ ಸ್ಮರತೇ ತು ತತ್ ॥ ೧೯ ॥

ಗೊಂಡು ಅಲ್ಲಿ ಅಗ್ನಿಯು ಸದಾ ನೆಲಸಿರುವುದರಿಂದ ಅಲ್ಲಿನ ನೀರು ಬಿಸಿಯಾಯಿತು. ಆ ಸಂಗಮದ ಜಲವೂ ಬಿಸಿಯಾದುದಾಯಿತು.

೧೭. ಆಮೇಲೆ ಆದಿಶೇಷನು ಮಹಾದೇವನನ್ನು ಆರಾಧಿಸಿ ಅವನು ಅನುಗ್ರಹಿಸಿದ ಪಾತಾಳಕ್ಕೆ ಸಂತೋಷದಿಂದ ತೆರಳಿದನು.

೧೮. ಆ ಮೊದಲುಗೊಂಡು ಆ ತೀರ್ಥವು ನಾಗತೀರ್ಥವೆಂದು ಪ್ರಸಿದ್ಧವಾಯಿತು. ಪವಿತ್ರವಾದಾತೀರ್ಥವು ಇಷ್ಟಾರ್ಥಗಳೆಲ್ಲವನ್ನೂ ಉಂಟುಮಾಡುವುದು. ರೋಗ ಮತ್ತು ಬಡತನಗಳನ್ನು ಹೋಗಲಾಡಿಸುವುದು.

೧೯. ಆ ತೀರ್ಥಗಳಲ್ಲಿ ಸ್ನಾನದಾನಗಳನ್ನು ಮಾಡಿದರೆ ಆಯುಸ್ಸೂ ಐಶ್ವರ್ಯವೂ ಮುಕ್ತಿಯೂ ಲಭಿಸುವುವು. ಅಲ್ಲಿ ಶಿವನು ಶೇಷೇಶ್ವರನೆಂಬ ಹೆಸರಿನಿಂದ ನೆಲಸಿರುವನು. ಈ ತೀರ್ಥಮಾಹಾತ್ಮ್ಯವನ್ನು ಕೇಳಿದರೂ ಓದಿದರೂ ಸ್ಮರಿಸಿದರೂ ಮುಕ್ತಿಯೂ ಶಕ್ತಿಯೂ ಲಭಿಸುವುವು.

ತೀರ್ಥಂ ಶೇಷೇಶ್ವರೋ ಯತ್ರ ಯತ್ರ ಶಕ್ತಿಪ್ರದಃ ಶಿವಃ ।
ಏಕವಿಂಶತಿತೀರ್ಥಾನಾಮುಭಯೋಸ್ತತ್ರ ತೀರಯೋಃ ।
ಶತಾನಿ ಮುನಿಶಾರ್ದೂಲ ಸರ್ವಸಂಪತ್ಪ್ರದಾಯಿನಾಂ ॥ ೨೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಉಭಯತೀರಗತಶೇಷತೀರ್ಥಶೇಷೇಶ್ವರಶೂಲೇಶ್ವರಾಗ್ನಿ-
ಕುಂಡರಸಾತಲಗಂಗಾಸಂಗಮೋಷ್ಣತೀರ್ಥಾದ್ಯೇಕ-
ವಿಂಶತಿಶತತೀರ್ಥವರ್ಣನಂ ನಾಮ
ಪಂಚದಶಾಧಿಕಶತತಮೋಽಧ್ಯಾಯಃ

---

೨೦. ಆ ತೀರ್ಥದಲ್ಲಿನ ಗೌತಮೀನದಿಯ ಎರಡುತೀರಗಳಲ್ಲೂ ಇಪ್ಪತ್ತೊಂದು ಸಾವಿರ ತೀರ್ಥಗಳಿರುವುವು. ಅವೆಲ್ಲವೂ ಸಕಲೈಶ್ವರ್ಯವನ್ನುಂಟುಮಾಡುವುವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಶೇಷತೀರ್ಥ, ಶೇಷೇಶ್ವರ, ಶೂಲೇಶ್ವರ, ಅಗ್ನಿ ಕುಂಡ ರಸಾತಲ, ಗಂಗಾಸಂಗಮ ಉಷ್ಣತೀರ್ಥವೇ ಮೊದಲಾದ ನೂರಇಪ್ಪತ್ತೊಂದು ತೀರ್ಥಗಳ ವರ್ಣನವೆಂಬ ನೂರಹದಿನೈದನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ನಲತ್ತಾರನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಷೋಡಶಾಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಮಹಾನಲಮಿತಿ ಖ್ಯಾತಂ ವಡವಾನಲಮುಚ್ಯತೇ ।
ಮಹಾನಲೋ ಯತ್ರ ದೇವೋ ವಡವಾ ಯತ್ರ ಸಾ ನದೀ ॥ ೧ ॥

ತತ್ತೀರ್ಥಂ ಪುತ್ರ ವಕ್ಷ್ಯಾಮಿ ಮೃತ್ಯುದೋಷಜರಾಪಹಂ ।
ಪುರಾಸನ್ನೈಮಿಷಾರಣ್ಯೇ ಋಷಯಃ ಸತ್ರಕಾರಿಣಃ ॥ ೨ ॥

ನೂರಹದಿನಾರನೆಯ ಅಧ್ಯಾಯವು

೧. ಮಹಾನಲ ಮತ್ತು ವಡವಾನಲವೆಂದು ಎರಡು ಹೆಸರುಳ್ಳ ತೀರ್ಥ ಶ್ರೇಷ್ಠವಿರುವುದು. ಆ ತೀರ್ಥದಲ್ಲಿ ಶಿವನು ಮಹಾನಲವೆಂಬ ಹೆಸರಿನಿಂದ ನೆಲಸಿರುವನು. ವಡವಾನದಿಯೂ ಅಲ್ಲಿಯೇ ಹರಿಯುವುದು. ಜರಾಮರಣಗಳ ಭಯವನ್ನು ಹೋಗಲಾಡಿಸುವ ಆ ತೀರ್ಥದ ಮಹಾತ್ಮ್ಯವನ್ನು ಹೇಳುವೆನು ಕೇಳು.

೨. ಹಿಂದೆ ನೈಮಿಷಾರಣ್ಯದಲ್ಲಿ ಕೆಲವರು ಮಹಾಮುನಿಗಳು ಮಹಾಯಾಗವೊಂದನ್ನು ಆರಂಭಿಸಿದರು. ಆ ಯಾಗದಲ್ಲಿ ಪಶುವನ್ನು ಕೊಲ್ಲುವ ಶಮಿತ್ರನನ್ನಾಗಿ ಮೃತ್ಯುವನ್ನು ನಿಯಮಿಸಿದರು.

ಶಮಿತಾರಂ ಚ ಋಷಯೋ ಮೃತ್ಯುಂ ಚಕ್ರುಸ್ತಪಸ್ವಿನಃ ।
ವರ್ತಮಾನೇ ಸತ್ರಯಾಗೇ ಮೃತ್ಯೌ ಶಮಿತರಿ ಸ್ಥಿತೇ ॥ ೩ ॥

ನ ಮಮಾರ ತದಾ ಕಶ್ಚಿದುಭಯಂ ಸ್ಥಾಸ್ನು ಜಂಗಮಂ ।
ವಿನಾ ಪಶೂನ್ಮುನಿಶ್ರೇಷ್ಠ ಮರ್ತ್ಯಂ ಚಾಮರ್ತ್ಯತಾಂ ಗತಂ ॥ ೪ ॥

ತತಸ್ತ್ರಿವಿಷ್ಟಪೇ ಶೂನ್ಯೇ ಮರ್ತ್ಯೇ ಚೈವಾತಿಸಂಭೃತೇ ।
ಮೃತ್ಯುನೋಪೇಕ್ಷಿತೇ ದೇವಾ ರಾಕ್ಷಸಾನೂಚಿರೇ ತದಾ ॥ ೫ ॥

॥ ದೇವಾ ಊಚುಃ ॥

ಗಚ್ಛಧ್ವಮೃಷಿಸತ್ರಂ ತನ್ನಾಶಯಧ್ವಂ ಮಹಾಧ್ವರಂ ।

॥ ಬ್ರಹ್ಮೋವಾಚ ॥

ಇತಿ ದೇವವಚಃ ಶ್ರುತ್ವಾ ಪ್ರೋಚುಸ್ತೇ ರಾಕ್ಷಸಾಃ ಸುರಾನ್ ॥ ೬ ॥

॥ ಅಸುರಾ ಊಚುಃ ॥

ವಿಧ್ವಂಸಯಾಮಸ್ತಂ ಯಜ್ಞಮಸ್ಮಾಕಂ ಕಿಂ ಫಲಂ ತತಃ ।
ಪ್ರವರ್ತತೇ ವಿನಾ ಹೇತುಂ ನ ಕೋಽಪಿ ಕ್ವಾಪಿ ಜಾತುಚಿತ್ ॥ ೭ ॥

೩-೪. ಆ ಯಾಗವು ಬಹುಕಾಲದವರೆಗೆ ನಡೆಯಿತು. ಮೃತ್ಯುವು ಶಾಮಿತ್ರನಾಗಿ ಅಲ್ಲಿಯೇ ನೆಲಸಿದ್ದನು. ಆದುದರಿಂದ ಪ್ರಾಣಿಗಳ ಜೀವವನ್ನಪಹರಿಸುವವರಿಲ್ಲದೆ ಆಗ ಪ್ರಪಂಚದಲ್ಲಿ ಯಾರೂ ಮರಣಹೊಂದಲಿಲ್ಲ. ಆ ಯಾಗದ ಪಶುಗಳು ಹೊರತು ಮಿಕ್ಕ ಯಾವ ಜಂತುಗಳೂ ಸಾಯಲಿಲ್ಲ.

೫. ಭೂಮಿಯಿಂದ ಸ್ವರ್ಗಕ್ಕೆ ಯಾರೂ ಬರದೆ ಸ್ವರ್ಗವು ಶೂನ್ಯವಾಯಿತು ಭೂಲೋಕವು ಜನಗಳಿಂದ ತುಂಬಿಹೋಯಿತು ಆಗ ದೇವತೆಗಳು ರಾಕ್ಷಸರನ್ನು ಕುರಿತು

೫-೭. ಎಲೈ ರಾಕ್ಷಸರೇ, ನೈಮಿಷಾರಣ್ಯದಲ್ಲಿ ನಡೆಯುವ ಋಷಿಗಳ ಯಾಗಕ್ಕೆ ನಡೆಯಿರಿ. ಆ ಮಹಾಯಾಗವನ್ನು ನಾಶಮಾಡಿ ಎನ್ನಲು, ದೇವತೆಗಳ ಮಾತನ್ನು ಕೇಳಿ ರಾಕ್ಷಸರು ಯಜ್ಞವನ್ನು ನಾಶಮಾಡಿದರೆ ನಮಗೆ ಆಗುವ ಪ್ರಯೋಜನವೇನು ? ಪ್ರಯೋಜನವಿಲ್ಲದೇ ಯಾವನೂ ಯಾವಾಗಲೂ ಯಾವ ಕೆಲಸವನ್ನೂ ಮಾಡುವುದಿಲ್ಲವಷ್ಟೆ ? ಎಂದರು.

॥ ಬ್ರಹ್ಮೋವಾಚ ॥

ದೇವಾ ಅಪ್ಯಸುರಾನೂಚುರ್ಯಜ್ಞಾರ್ಧಂ ಭವತಾಮಪಿ ।
ಭವೇದೇವ ತತೋ ಯಾಂತು ಋಷೀಣಾಂ ಸತ್ರಮುತ್ತಮಂ ॥ ೮ ॥

ತೇ ಶ್ರುತ್ವಾ ತ್ವರಿತಾಃ ಸರ್ವೇ ಯತ್ರ ಯಜ್ಞಃ ಪ್ರವರ್ತತೇ ।
ಜಗ್ಮುಸ್ತತ್ರ ವಿನಾಶಾಯ ದೇವವಾಕ್ಯಾದ್ವಿಶೇಷತಃ ॥ ೯ ॥

ತಜ್ಜ್ಞಾತ್ವಾ ಋಷಯೋ ಮೃತ್ಯುಮೂಚುಃ ಕಿಂ ಕುರ್ಮಹೇ ವಯಂ ।
ಆಗತಾ ದೇವವಚನಾದ್ರಾಕ್ಷಸಾ ಯಜ್ಞನಾಶಿನಃ ॥ ೧೦ ॥

ಮೃತ್ಯುನಾ ಸಹ ಸಂಮಂತ್ರ್ಯ ನೈಮಿಷಾರಣ್ಯವಾಸಿನಃ ।
ಸರ್ವೇ ತ್ಯಕ್ತ್ವಾ ಸ್ವಾಶ್ರಮಂ ತಂ ಶಮಿತ್ರಾ ಸಹ ನಾರದ ॥ ೧೧ ॥

ಅಗ್ನಿಮಾತ್ರಮುಪಾದಾಯ ತ್ಯಕ್ತ್ವಾ ಪಾತ್ರಾದಿಕಂ ತು ಯತ್ ।
ಕ್ರತುನಿಷ್ಪತ್ತಯೇ ಜಗ್ಮುರ್ಗೌತಮೀಂ ಪ್ರತಿ ಸತ್ವರಾಃ ॥ ೧೨ ॥

---

೮. ಅವಕ್ಕೆ ದೇವತೆಗಳು ನಿಮಗೂ ಯಜ್ಞದಲ್ಲಿ ಅರ್ಧ ಭಾಗವನು ಕೊಡುವೆವು. ಇನ್ನಾದರೂ ಋಷಿಗಳ ಯಾಗವನ್ನು ನಾಶಮಾಡಲು ಹೊರಡಿ ಎಂದರು.

೯. ದೇವತೆಗಳ ಮಾತನ್ನು ಕೇಳಿ ರಾಕ್ಷಸರೆಲ್ಲರೂ ಯಜ್ಞನಾಶಕ್ಕಾಗಿ ಋಷಿಗಳ ಯಾಗವು ನಡೆಯುತ್ತಲಿರುವ ನೈಮಿಷಾರಣ್ಯಕ್ಕೆ ಹೊರಟರು.

೧೦. ಅದನ್ನು ತಿಳಿದು ಯಜ್ಞಮಾಡುತ್ತಲಿದ್ದ ಋಷಿಗಳು ಮೃತ್ಯುವಿನೊಡನೆ ಓ ಮೃತ್ಯು, ಈಗೇನು ಮಾಡೋಣ ? ದೇವತೆಗಳ ಮಾತಿನಂತೆ ಈ ಯಜ್ಞವನ್ನು ನಾಶಮಾಡಲು ರಾಕ್ಷಸರು ಬರುತ್ತಲಿರುವರು ಎಂದು ಹೇಳಿದರು.

೧೧-೧೨. ಆಮೇಲಾ ಮುನಿಗಳು ಮೃತ್ಯುವಿನೊಡನೆ ಆಲೋಚಿಸಿ ಎಲ್ಲರೂ ಶಾಮಿತ್ರನಾದ ಮೃತುವಿನೊಡನೆ ಅಗ್ನಿಯನ್ನು ಮಾತ್ರ ತೆಗೆದುಕೊಂಡು, ಮಿಕ್ಕ ಪಾತ್ರೆಗಳನ್ನು ಅಲ್ಲಿಯೇ ಬಿಟ್ಟು ಯಜ್ಞವನ್ನು ಪೂರಯಿಸಲು ಗೌತಮೀ ನದಿಯತೀರಕ್ಕೆ ಹೋಗಿ,

ತತ್ರ ಸ್ನಾತ್ವಾ ಮಹೇಶಾನಂ ರಕ್ಷಣಾಯೋಪತಸ್ಥಿರೇ ।
ಕೃತಾಂಜಲಿಪುಟಾಸ್ತೇ ತು ತುಷ್ಟುವುಸ್ತ್ರಿದಶೇಶ್ವರಂ ॥ ೧೩ ॥

॥ ಋಷಯ ಊಚುಃ ॥

ಯೋ ಲೀಲಯಾ ವಿಶ್ವಮಿದಂ ಚಕಾರ
ಧಾತಾ ವಿಧಾತಾ ಭುವನತ್ರಯಸ್ಯ ।
ಯೋ ವಿಶ್ವರೂಪಃ ಸದಸತ್ಪರೋ ಯಃ
ಸೋಮೋಶ್ವರಂ ತಂ ಶರಣಂ ವ್ರಜಾಮಃ ॥ ೧೪ ॥

॥ ಮೃತ್ಯುರುವಾಚ ॥

ಇಚ್ಛಾಮಾತ್ರೇಣ ಯಃ ಸರ್ವಂ ಹಂತಿ ಪಾತಿ ಕರೋತಿ ಚ ।
ತಮಹಂ ತ್ರಿದಶೇಶಾನಂ ಶರಣಂ ಯಾಮಿ ಶಂಕರಂ ॥ ೧೫ ॥

ಮಹಾನಲಂ ಮಹಾಕಾಯಂ ಮಹಾನಾಗವಿಭೂಷಣಂ ।
ಮಹಾಮೂರ್ತಿಧರಂ ದೇವಂ ಶರಣಂ ಯಾಮಿ ಶಂಕರಂ ॥ ೧೬ ॥

---

೧೩. ಗೌತಮೀನದಿಯಲ್ಲಿ ಸ್ನಾನಮಾಡಿ ಅಂಜಲಿಯನ್ನು ಧರಿಸಿ ಯಜ್ಞರಕ್ಷಣೆಗಾಗಿ ಶಿವನನ್ನು ಹೀಗೆ ಸ್ತುತಿಸಿದರು.

೧೪. ಸರ್ವೋತ್ತಮವಾದ ಓ ಚಂದ್ರಶೇಖರನೇ, ನೀನು ಮಾಯೆಯಿಂದ ಜಗತ್ತನ್ನು ಸೃಷ್ಟಿಸುವವನೂ ಧರಿಸುವವನೂ ಸಂಹರಿಸುವವನೂ ಆಗಿರುವೆ. ಇಂತಹ ಜಗನ್ಮಯನಾದ ಪರಮೇಶ್ವರನನ್ನು ಶರಣುಹೊಂದಿರುವೆವು.

೧೫. ಮೃತ್ಯುವು ಇಂತೆಂದಿತು—ಕೇವಲ ಇಚ್ಛೆಯಿಂದಲೇ ಜಗತ್ತನ್ನು ಸೃಷ್ಟಿಸುವವನೂ ಪಾಲಿಸುವವನೂ ಸಂಹರಿಸುವವನೂ ಆದ ಮಹಾದೇವನನ್ನು ಶರಣುಹೊಂದಿರುವೆನು.

೧೬. ಪ್ರಳಯಾಗ್ನಿಸ್ವರೂಪನೂ ವಿರಾಟ್ಪುರುಷನೂ ಆದಿಶೇಷನೇ ಅಲಂಕಾರವಾಗುಳ್ಳವನೂ ಆದ ಶಂಕರನನ್ನು ಶರಣುಹೊಂದಿರುವೆನು ಎಂದು ಸ್ತೋತ್ರಮಾಡಲು,

॥ ಬ್ರಹ್ಮೋವಾಚ ॥

ತತಃ ಪ್ರೋವಾಚ ಭಗವಾನ್ಮೃತ್ಯೋ ಕಾ ಪ್ರೀತಿರಸ್ತು ತೇ ॥ ೧೭ ॥

॥ ಮೃತ್ಯುರುವಾಚ ॥

ರಾಕ್ಷಸೇಭ್ಯೋ ಭಯಂ ಘೋರಮಾಪನ್ನಂ ತ್ರಿದಶೇಶ್ವರ ।
ಯಜ್ಞಮಸ್ಮಾಂಶ್ಚ ರಕ್ಷಸ್ವ ಯಾವತ್ಸತ್ರಂ ಸಮಾಪ್ಯತೇ ॥ ೧೮ ॥

॥ ಬ್ರಹ್ಮೋವಾಚ ॥

ತಥಾ ಚಕಾರ ಭಗವಾಂಸ್ತ್ರಿನೇತ್ರೋ ವೃಷಭಧ್ವಜಃ ।
ಶಮಿತ್ರಾ ಮೃತ್ಯುನಾ ಸತ್ರಮೃಷೀಣಾಂ ಪೂರ್ಣತಾಂ ಯಯೌ ॥ ೧೯ ॥

ಹವಿಷಾಂ ಭಾಗಧೇಯಾಯ ಆಜಗ್ಮುರಸುರಾಃ ಕ್ರಮಾತ್ ।
ತಾನವೋಚನ್ಮುನಿಗಣಾಃ ಸಂಕ್ಷುಬ್ಧಾ ಮೃತ್ಯುನಾ ಸಹ ॥ ೨೦ ॥

---

೧೭. ಆಗ ಭಗವಾನ್ ಶಂಕರನು ಪ್ರಸನ್ನನಾಗಿ ಎಲೈ ಮೃತ್ಯು, ನಿನಗೆ ಬೇಕಾದುದೇನು ? ಹೇಳು ಎಂದನು.

೧೮. ಅದಕ್ಕೆ ಮೃತ್ಯುವು ಓ ಮಹಾದೇವ, ರಾಕ್ಷಸರಿಂದ ನಮಗೆ ಭಯವು ಬಂದೊದಗಿದೆ. ಯಜ್ಞವನ್ನೂ ನಮ್ಮನ್ನೂ ರಕ್ಷಿಸು. ಯಾಗವನ್ನು ಪೂರ್ತಿಯಾಗುವಂತೆ ಅನುಗ್ರಹಿಸು ಎಂದಿತು.

೧೯. ಅದರಂತೆ ತ್ರಿಲೋಚನನೂ ನಂದಿವಾಹನೂ ಆದ ಶಿವನು ಋಷಿಗಳ ಆ ಯಾಗವನ್ನು ರಕ್ಷಿಸಿದನು. ಶಾಮಿತ್ರನಾದ ಮೃತ್ಯುವಿನ ಸಹಾಯದಿಂದ ಆ ಮಹಾಯಾಗವು ಪೂರ್ಣವಾಯಿತು.

೨೦. ಆ ಯಾಗದಲ್ಲಿ ಹವಿಸ್ಸನ್ನು ತೆಗೆದುಕೊಳ್ಳಲು ದೇವತೆಗಳೆಲ್ಲರೂ ಕ್ರಮವಾಗಿ ಬಂದರು. ಅವರನ್ನು ನೋಡಿ ಮುನಿಗಳೂ ಮೃತ್ಯುವೂ ಕೋಪಗೊಂಡು

॥ ಋಷಯ ಊಚುಃ ॥

ಅಸ್ಮನ್ಮಖವಿನಾಶಾಯ ರಾಕ್ಷಸಾಃ ಪ್ರೇಷಿತಾ ಯತಃ ।
ತಸ್ಮಾದ್ಭವದ್ಭ್ಯಃ ಪಾಪಿಷ್ಠಾ ರಾಕ್ಷಸಾಃ ಸಂತು ಶತ್ರವಃ ॥ ೨೧ ॥

॥ ಬ್ರಹ್ಮೋವಾಚ ॥

ತತಃ ಪ್ರಭೃತಿ ದೇವಾನಾಂ ರಾಕ್ಷಸಾ ವೈರಿಣೋಽಭವನ್ ।
ಕೃತ್ಯಾಂ ಚ ವಡವಾಂ ತತ್ರ ದೇವಾಶ್ಚ ಋಷಯೋಽಮಲಾಃ ॥ ೨೨ ॥

ಮೃತ್ಯೋರ್ಭಾರ್ಯಾ ಭವ ತ್ವಂ ತಾಮಿತ್ಯುಕ್ತ್ವಾ ತೇಽಭ್ಯಷೇಚಯನ್ ।
ಅಭಿಷೇಕೋದಕಂ ಯತ್ತು ಸಾ ನದೀ ವಡವಾಭವತ್ ॥ ೨೩ ॥

ಮೃತ್ಯುನಾ ಸ್ಥಾಪಿತಂ ಲಿಂಗಂ ಮಹಾನಲಮಿತಿ ಶ್ರುತಂ ।
ತತಃ ಪ್ರಭೃತಿ ತತ್ತೀರ್ಥಂ ವಡವಾಸಂಗಮಂ ವಿದುಃ ॥ ೨೪ ॥

---

೨೧. ಎಲೈ ದೇವತೆಗಳೇ, ನಮ್ಮ ಯಾಗವನ್ನು ನಾಶಮಾಡಲು ರಾಕ್ಷಸರನ್ನು ಕಳುಹಿಸಿದರಲ್ಲವೇ? ಇನ್ನು ಮುಂದೆ ನಿಮಗೂ ರಾಕ್ಷಸರಿಗೂ ಘೋರ ವೈರವು ಉಂಟಾಗಲಿ. ಪಾಪಿಗಳಾದ ರಾಕ್ಷಸರು ನಿಮಗೆ ಯಾವಾಗಲೂ ಶತ್ರುಗಳಾಗಲಿ ಎಂದು ಶಾಪವನ್ನಿತ್ತರು.

೨೨. ಆಮೊದಲುಗೊಂಡು ರಾಕ್ಷಸರು ದೇವತೆಗಳಿಗೆ ಶತ್ರುಗಳಾದರು. ಆಮೇಲೆ ದೇವತೆಗಳೂ ಋಷಿಗಳೂ ವಡವಾದೇವಿಯನ್ನು ಕರೆದು, ನೀನು ಮೃತ್ಯುವಿನ ಹೆಂಡತಿಯಾಗು ಎಂದು ಹೇಳಿ ಮೃತ್ಯುಪತ್ನಿಯಾಗಿ ಅವಳನ್ನಭಿಷೇಕಿಸಿದರು.

೨೩. ವಡವಾದೇವಿಯನ್ನಭಿಷೇಕಿಸಿದ ಜಲವು ವಡವಾನದಿಯಾಯಿತು. ಮೃತ್ಯುವು ಅಲ್ಲಿ ಸ್ಥಾಪಿಸಿದ ಶಿವಲಿಂಗವು ಮಹಾನಲೇಶ್ವರವೆಂದು ಪ್ರಸಿದ್ಧವಾಯಿತು.

೨೪. ಅದುಮೊದಲುಗೊಂಡು ಆ ತೀರ್ಥವು ವಡವಾಸಂಗಮವೆಂದು ಪ್ರಸಿದ್ಧವಾಯಿತು. ಮಹಾನಲೇಶ್ವರನು ನೆಲಸಿರುವ ಆ ತೀರ್ಥವು ಭೋಗಮೋಕ್ಷಗಳನ್ನು ಉಂಟುಮಾಡುವುದು.

ಮಹಾನಲೋ ಯತ್ರ ದೇವಸ್ತತ್ತೀರ್ಥಂ ಭುಕ್ತಿಮುಕ್ತಿದಂ ।
ಸಹಸ್ರಂ ತತ್ರ ತೀರ್ಥಾನಾಂ ಸರ್ವಾಭೀಷ್ಟಪ್ರದಾಯಿನಾಂ ।
ಉಭಯೋಸ್ತೀರಯೋಸ್ತತ್ರ ಸ್ಮರಣಾದಘಘಾತಿನಾಂ ॥ ೨೫ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ವಡವಾದಿಸಹಸ್ರತೀರ್ಥವರ್ಣನಂ ನಾಮ
ಷೋಡಶಾಧಿಕಶತತಮೋಽಧ್ಯಾಯಃ

---

೨೫. ಆ ತೀರ್ಥದ ತೀರದಲ್ಲಿ ಸಾವಿರಾರು ತೀರ್ಥಗಳಿರುವುವು. ಅವೆಲ್ಲವೂ ಇಷ್ಟಾರ್ಥಗಳೆಲ್ಲವನ್ನೂ ಉಂಟುಮಾಡುವುವು. ಆ ತೀರ್ಥಗಳ ಸ್ಮರಣಮಾತ್ರದಿಂದ ಪಾಪವೆಲ್ಲವೂ ನಾಶವಾಗುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ವಡವಾತೀರ್ಥ ಮೊದಲಾದ ಸಹಸ್ರತೀರ್ಥಗಳ ವರ್ಣನವೆಂಬ ನೂರಹದಿನಾರನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ನಲವತ್ತೇಳನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತದಶಾಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಆತ್ಮತೀರ್ಥಮಿತಿ ಖ್ಯಾತಂ ಭುಕ್ತಿಮುಕ್ತಿಪ್ರದಂ ನೃಣಾಂ ।
ತಸ್ಯ ಪ್ರಭಾವಂ ವಕ್ಷ್ಯಾಮಿ ಯತ್ರ ಜ್ಞಾನೇಶ್ವರಃ ಶಿವಃ ॥ ೧ ॥

ದತ್ತ ಇತ್ಯಪಿ ವಿಖ್ಯಾತಃ ಸೋಽತ್ರಿಪುತ್ರೋ ಹರಪ್ರಿಯಃ ।
ದುರ್ವಾಸಸಃ ಪ್ರಿಯೋ ಭ್ರಾತಾ ಸರ್ವಜ್ಞಾನವಿಶಾರದಃ ।
ಸ ಗತ್ವಾ ಪಿತರಂ ಪ್ರಾಹ ವಿನಯೇನ ಪ್ರಣಮ್ಯ ಚ ॥ ೨ ॥

ನೂರಹದಿನೇಳನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಆತ್ಮತೀರ್ಥವೆಂಬ ಭೋಗಮೋಕ್ಷಗಳನ್ನು ಉಂಟುಮಾಡುವಂತಹ ತೀರ್ಥವಿರುವುದು. ಆ ತೀರ್ಥದಲ್ಲಿ ಶಿವನು ಜ್ಞಾನೇಶ್ವರನೆಂಬ ಹೆಸರಿನಿಂದ ನೆಲಸಿರುವನು. ಅದರ ಮಾಹಾತ್ಮ್ಯವನ್ನು ಹೇಳುವೆನು ಕೇಳು.

೨. ದತ್ತನೆಂಬ ಓರ್ವ ಮಹಾಜ್ಞಾನಿಯು ಇದ್ದನು. ಅವನು ಅತ್ರಿ ಮುನಿಯ ಮಗನು. ದುರ್ವಾಸಮುನಿಯ ಸಹೋದರನು. ಶಿವನ ಪ್ರಿಯಭಕ್ತನು. ಅವನು ಒಂದುದಿನ ತಂದೆಯಬಳಿಗೆ ಹೋಗಿ ನಮಸ್ಕರಿಸಿ ವಿನಯದಿಂದ,

॥ ದತ್ತ ಉವಾಚ ॥

ಬ್ರಹ್ಮಜ್ಞಾನಂ ಕಥಂ ಮೇ ಸ್ಯಾತ್ಕಂ ಪೃಚ್ಛಾಮಿ ಕ್ವ ಯಾಮಿ ಚ ॥ ೩ ॥

॥ ಬ್ರಹ್ಮೋವಾಚ ॥

ತಚ್ಛ್ರುತ್ವಾತ್ರಿಃ ಪುತ್ರವಾಕ್ಯಂ ಧ್ಯಾತ್ವಾ ವಚನಮಬ್ರವೀತ್ ॥ ೪ ॥

॥ ಅತ್ರಿರುವಾಚ ॥

ಗೌತಮೀಂ ಪುತ್ರ ಗಚ್ಛ ತ್ವಂ ತತ್ರ ಸ್ತುಹಿ ಮಹೇಶ್ವರಂ ।
ಸ ತು ಪ್ರೀತೋ ಯದೈವ ಸ್ಯಾತ್ತದಾ ಜ್ಞಾನಮವಾಪ್ಸ್ಯಸಿ ॥ ೫ ॥

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ತದಾತ್ರೇಯೋ ಗಂಗಾಂ ಗತ್ವಾ ಶುಚಿರ್ಯತಃ ।
ಕೃತಾಂಜಲಿಪುಟೋ ಭೂತ್ವಾ ಭಕ್ತ್ಯಾ ತುಷ್ಟಾವ ಶಂಕರಂ ॥ ೬ ॥

॥ ದತ್ತ ಉವಾಚ ॥

ಸಂಸಾರಕೂಪೇ ಪತಿತೋಽಸ್ಮಿ ದೈವಾ-
ನ್ಮೋಹೇನ ಗುಪ್ತೋ ಭವದುಃಖಪಂಕೇ ।
ಅಜ್ಞಾನನಾಮ್ನಾ ತಮಸಾವೃತೋಽಹಂ
ಪರಂ ನ ವಿಂದಾಮಿ ಸುರಾಧಿನಾಥ ॥ ೭ ॥

---

೩. ಓ ತಂದೆಯೇ, ನನಗೆ ಬ್ರಹ್ಮಜ್ಞಾನವು ಹೇಗೆ ಲಭಿಸುವುದು? ಯಾರನ್ನು ಕೇಳಲಿ? ಯಾರಬಳಿಗೆ ಹೋಗಲಿ? ಎಂದು ಬೆಸಗೊಳ್ಳಲು,

೪. ಪುತ್ರನ ಆ ಮಾತನ್ನು ಕೇಳಿ ಅತ್ರಿಮುನಿಯು ಧ್ಯಾನಿಸಿ ಇಂತೆಂದನು.

೫. ಎಲೈ ಮಗನೇ, ಗೌತಮೀತೀರಕ್ಕೆ ಹೋಗಿ ಅಲ್ಲಿ ಶಿವನನ್ನು ಸ್ತುತಿಸು. ಶಿವನು ಪ್ರಸನ್ನನಾದರೆ ನಿನಗೆ ಬ್ರಹ್ಮಜ್ಞಾನವು ಲಭಿಸುವುದು ಎಂದನು.

೬. ಅತ್ರಿಮುನಿಯ ಮಾತಿನಂತೆ ದತ್ತಾತ್ರೇಯನು ಗೌತಮೀನದಿಗೆ ಹೋಗಿ ಆ ನದಿಯಲ್ಲಿ ಸ್ನಾನಮಾಡಿ ಶುಚಿರ್ಭೂತನಾಗಿ ಅಂಜಲಿಯನ್ನು ಧರಿಸಿ ಶಂಕರನನ್ನು ಭಕ್ತಿಯಿಂದ ಸ್ತುತಿಸಿದನು.

೭. ದುಃಖಗಳೆಂಬ ಕೆಸರುಮುಳ್ಳುಗಳಿಂದ ಕೂಡಿದ ಸಂಸಾರವೆಂಬ

ಭಿನ್ನಸ್ತ್ರಿಶೂಲೇನ ಬಲೀಯಸಾಹಂ
ಪಾಪೇನ ಚಿಂತಾಕ್ಷುರಪಾಟಿತಶ್ಚ ।
ತಪ್ತೋಽಸ್ಮಿ ಪಂಚೇಂದ್ರಿಯತೀವ್ರತಾಪೈಃ
ಶ್ರಾಂತೋಽಸ್ಮಿ ಸಂತಾರಯ ಸೋಮನಾಥ ॥ ೮ ॥

ಬದ್ಧೋಽಸ್ಮಿ ದಾರಿದ್ರ್ಯಮಯೈಶ್ಚ ಬಂಧೈ-
ರ್ಹತೋಽಸ್ಮಿ ರೋಗಾನಲತೀವ್ರತಾಪೈಃ ।
ಕ್ರಾಂತೋಽಸ್ಮ್ಯಹಂ ಮೃತ್ಯುಭುಜಂಗಮೇನ
ಭೀತೋ ಭೃಶಂ ಕಿಂ ಕರವಾಣಿ ಶಂಭೋ ॥ ೯ ॥

ಭವಾಭವಾಭ್ಯಾಮತಿಪೀಡಿತೋಽಹಂ
ತೃಷ್ಣಾಕ್ಷುಧಾಭ್ಯಾಂ ಚ ರಜಸ್ತಮೋಭ್ಯಾಂ ।
ಈದೃಕ್ಷಯಾ ಜರಯಾ ಚಾಭಿಭೂತಃ
ಪಶ್ಯಾವಸ್ಥಾಂ ಕೃಪಯಾ ಮೇಽದ್ಯ ನಾಥ ॥ ೧೦ ॥

ಭಾವಿಯಲ್ಲಿ ಬಿದ್ದಿರುವೆನು ಅಲ್ಲಿಯೂ ಅಜ್ಞಾನವೆಂಬ ಕತ್ತಲೆಯು ನನ್ನನ್ನು ಮುಸುಕಿ ದಿಕ್ಕನ್ನು ಕಾಣದವನಾಗಿದ್ದೇನೆ. ಓ ಮಹಾದೇವ, ನನ್ನನ್ನು ಉದ್ಧರಿಸು.

೮. ಆಧ್ಯಾತ್ಮಿಕ, ಆಧಿದೈವಿಕ ಆದಿಭೌತಿಕಗಳೆಂಬ ಬಲವಾದ ತ್ರಿಶೂಲದಿಂದ ನಾನು ಭೇದಿಸಲ್ಪಟ್ಟಿರುವೆನು. ಪಂಚೇಂದ್ರಿಯಗಳ ದುರಾಸೆಯೆಂಬ ತಾಪಗಳಿಂದ ಬಳಲಿರುವೆನು. ಓ ಚಂದ್ರಶೇಖರ, ನನ್ನನ್ನು ರಕ್ಷಿಸು.

೯. ಬಡತನದ ಬಂಧನಗಳು ನನ್ನನ್ನು ಬಂಧಿಸಿವೆ. ರೋಗಗಳೆಂಬ ಬೆಂಕಿಯ ಉರಿಯು ನನ್ನನ್ನು ಸುಡುತ್ತಲಿದೆ. ಮರಣವೆಂಬ ಸರ್ಪವು ನನ್ನನ್ನು ಬೆನ್ನಟ್ಟುತ್ತಲಿದೆ. ಇವುಗಳಿಂದ ನಾನು ತುಂಬಾ ಭಯಗೊಂಡಿರುವೆನು. ಓ ಶಂಕರ, ಏನುಮಾಡಲಿ ?

೧೦. ರೋಗಮರಣಗಳು ನನ್ನನ್ನು ಆವರಿಸಿವೆ. ಹಸಿವು ನೀರಡಿಕೆ ಡಂಭ ಅಜ್ಞಾನ ಇವುಗಳು ನನ್ನನ್ನು ಸದಾ ಪೀಡಿಸುತ್ತಲಿರುವುವು. ಜನನಮರಣಗಳಿಂದ ಪುನಃಪುನಃ ಬಳಲಿರುವೆನು. ಓ ದೇವ, ಇಂತಹ ನನ್ನ ಅವಸ್ಥೆಯನ್ನು ಕರುಣೆಯಿಂದ ನೋಡು.

ಕಾಮೇನ ಕೋಪೇನ ಚ ಮತ್ಸರೇಣ
ದಂಭೇನ ದರ್ಪಾದಿಭಿರಪ್ಯನೇಕೈಃ ।
ಏಕೈಕಶಃ ಕಷ್ಟಗತೋಽಸ್ಮಿ ವಿದ್ಧ-
ಸ್ತ್ವಂ ನಾಥವದ್ವಾರಯ ನಾಥ ಶತ್ರೂನ್ ॥ ೧೧ ॥

ಕಸ್ಯಾಪಿ ಕಸ್ಚಿತ್ಪತಿತಸ್ಯ ಪುಂಸೋ
ದುಃಖಪ್ರಣೋದೀ ಭವತೀತಿ ಸತ್ಯಂ ।
ವಿನಾ ಭವಂತಂ ಮಮ ಸೋಮನಾಥ
ಕುತ್ರಾಪಿ ಕಾರುಣ್ಯವಚೋಽಪಿ ನಾಸ್ತಿ ॥ ೧೨ ॥

ತಾವತ್ಸ ಕೋಪೋ ಭಯಮೋಹದುಃಖಾ-
ನ್ಯಜ್ಞಾನದಾರಿದ್ರ್ಯರುಜಸ್ತಥೈವ ।
ಕಾಮಾದಯೋ ಮೃತ್ಯುರಪೀಹ ಯಾವ-
ನ್ನಮಃ ಶಿವಾಯೇತಿ ನ ವಚ್ಮಿ ವಾಕ್ಯಂ ॥ ೧೩ ॥

---

೧೧. ಕಾಮ ಮೋಹ ಅಸೂಯೆ ಜಂಭ ದರ್ಪ ಮೊದಲಾದ ಶತ್ರುಗಳು ಒಂದೊಂದೂ ನನ್ನನ್ನು ಪೀಡಿಸುತ್ತಲಿವೆ. ಓ ಪರಮೇಶ್ವರ, ಆ ನನ್ನ ಶತ್ರುಗಳನ್ನು ಸಂಹರಿಸಿ ಕಾಪಾಡು, ಉದ್ಧರಿಸು.

೧೨. ಓ ಸೋಮನಾಥ, ಲೋಕದಲ್ಲಿ ಯಾವನೋ ಒಬ್ಬದೇವನು ಯಾವನೋ ಒಬ್ಬ ದುಃಖಿತನ ದುಃಖವನ್ನು ಹೋಗಲಾಡಿಸಬಹುದು. ಆದರೆ ನನಗೆ ಈವರೆವಿಗೂ ನಿನ್ನ ಹೊರತು ಇನ್ನಾವನೂ ಕರುಣೆಯ ಮಾತನ್ನೂ ಆಡಿಲ್ಲ.

೧೩. ನಮಃ ಶಿವಾಯ ಎಂಬ ಪಂಚಾಕ್ಷರೀವಾಕ್ಯವನ್ನು ಹೇಳುವವರೆಗೆ ಕೋಪ ಭಯ ಮೋಹ ದುಃಖ ಅಜ್ಞಾನ ದಾರಿದ್ರ್ಯ ರೋಗ ಕಾಮ ಮೊದಲಾದುವುಗಳು ಮೃತ್ಯುವಿನಂತೆ ಬೆನ್ನಟ್ಟುವುವು. ಆ ಪಂಚಾಕ್ಷರಮಂತ್ರವನ್ನು ಪಠಿಸಿದೊಡನೆ ಭಯಮೋಹಾದಿಗಳು ತೊಲಗುವುವು.

ನ ಮೇಽಸ್ತಿ ಧರ್ಮೋ ನ ಚ ಮೇಽಸ್ತಿ ಭಕ್ತಿ-
ರ್ನಾಹಂ ವಿವೇಕೀ ಕರುಣಾ ಕುತೋ ಮೇ ।
ದಾತಾಸಿ ತೇನಾಶು ಶರಣ್ಯ ಚಿತ್ತೇ
ನಿಧೇಹಿ ಸೋಮೇತಿ ಪದಂ ಮದೀಯೇ ॥ ೧೪ ॥

ಯಾಚೇ ನ ಚಾಹಂ ಸುರಭೂಪತಿತ್ವಂ
ಹೃತ್ಪದ್ಮಮಧ್ಯೇ ಮಮ ಸೋಮನಾಥ ।
ಶ್ರೀಸೋಮಪಾದಾಂಬುಜಸಂನಿಧಾನಂ
ಯಾಚೇ ವಿಚಾರ್ಯೈವ ಚ ತತ್ಕುರುಷ್ವ ॥ ೧೫ ॥

ಯಥಾ ತವಾಹಂ ವಿದಿತೋಽಸ್ಮಿ ಪಾಪ-
ಸ್ತಥಾಪಿ ವಿಜ್ಞಾಪನಮಾಶೃಣುಷ್ವ ।
ಸಂಶ್ರೂಯತೇ ಯತ್ರ ವಚಃ ಶಿವೇತಿ
ತತ್ರ ಸ್ಥಿತಿಃ ಸ್ಯಾನ್ಮಮ ಸೋಮನಾಥ ॥ ೧೬ ॥

ಗೌರೀಪತೇ ಶಂಕರ ಸೋಮನಾಥ
ವಿಶ್ವೇಶ ಕಾರುಣ್ಯನಿಧೇಽಖಿಲಾತ್ಮನ್ ।
ಸಂಸ್ತೂಯತೇ ಯತ್ರ ಸದೇತಿ ತತ್ರ
ಕೇಷಾಮಪಿ ಸ್ಯಾತ್ಕೃತಿನಾಂ ನಿವಾಸಃ ॥ ೧೭ ॥

---

೧೪. ಓ ಸೋಮನಾಥ, ನಾನು ಧರ್ಮಿಷ್ಠನಲ್ಲ. ಭಕ್ತಿಯು ನನಲ್ಲಿಲ್ಲ. ವಿವೇಕಿಯೂ ನಾನಲ್ಲ. ಇಂತಹ ನನ್ನ ಮನಸ್ಸಿನಲ್ಲಿ ಸೋಮನಾಥನೆಂಬ ನಿನ್ನ ಹೆಸರು ನೆಲಸುವಂತೆ ಅನುಗ್ರಹಿಸು, ಕರುಣಿಸು.

೧೫. ಓ ದೇವ, ದೇವೇಂದ್ರಪದವಿಯನ್ನೂ ನಾನು ಕೇಳುವುದಿಲ್ಲ. ನನ್ನ ಹೃದಯಕಮಲದಲ್ಲಿ ಸೋಮನಾಥನ ಪಾದಕಮಲವು ಸದಾ ನೆಲಸಿರಲಿ ಎಂದು ಮಾತ್ರ ಯಾಚಿಸುವೆನು. ಓ ಸೋಮನಾಥ, ನನ್ನ ಆ ಇಷ್ಟವನ್ನು ನೆರವೇರಿಸು.

೧೬. ಓ ಸೋಮನಾಥ ಸರ್ವಜ್ಞನಾದ ನೀನು ಪಾಪಿಯಾದ ನನ್ನ ಅಂತರಂಗವೆಲ್ಲವನ್ನೂ ತಿಳಿದಿರುವೆ. ಆದರೂ ನನ್ನ ಈ ವಿಜ್ಞಾಪನೆಯನ್ನು ಕೇಳು. ಶಿವ ಎಂಬ ಪದವು ಎಲ್ಲಿ ಕೇಳಿ ಬರುವುದೋ ಅಲ್ಲಿ ನಾನು ಇರುವಂತೆ ಅನುಗ್ರಹಿಸು.

೧೭. ಓ ಗೌರೀಪತಿ, ಓ ಶಂಕರ, ಓ ಚಂದ್ರಶೇಖರ, ಓ ಪರಮೇಶ್ವರ

॥ ಬ್ರಹ್ಮೋವಾಚ ॥
ಇತ್ಯಾತ್ರೇಯಸ್ತುತಿಂ ಶ್ರುತ್ವಾ ತುತೋಷ ಭಗವಾನ್ಹರಃ ।
ವರದೋಽಸ್ಮೀತಿ ತಂ ಪ್ರಾಹ ಯೋಗಿನಂ ವಿಶ್ವಕೃದ್ಭವಃ ॥ ೧೮ ॥

॥ ಆತ್ರೇಯ ಉವಾಚ ॥
ಆತ್ಮಜ್ಞಾನಂ ಚ ಮುಕ್ತಿಂ ಚ ಭುಕ್ತಿಂ ಚ ವಿಪುಲಾಂ ತ್ವಯಿ ।
ತೀರ್ಥಸ್ಯಾಪಿ ಚ ಮಾಹಾತ್ಮ್ಯಂ ವರೋಽಯಂ ತ್ರಿದಶಾರ್ಚಿತ ॥ ೧೯ ॥

॥ ಬ್ರಹ್ಮೋವಾಚ ॥
ಏವಮಸ್ತ್ವಿತಿ ತಂ ಶಂಭುರುಕ್ತ್ವಾ ಚಾಂತರಧೀಯತ ।
ತತಃ ಪ್ರಭೃತಿ ತತ್ತೀರ್ಥಮಾತ್ಮತೀರ್ಥಂ ವಿದುರ್ಬುಧಾಃ ।
ತತ್ರ ಸ್ನಾನೇನ ದಾನೇನ ಮುಕ್ತಿಃ ಸ್ಯಾದಿಹ ನಾರದ ॥ ೨೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಆತ್ಮತೀರ್ಥ ವರ್ಣನಂ ನಾಮ ಸಪ್ತದಶಾಧಿಕಶತತಮೋಽಧ್ಯಾಯಃ

ಓ ಕರುಣಾಮೂರ್ತಿ, ಓ ಜಗನ್ಮಯ, ರಕ್ಷಿಸು ಎಂದು ಎಲ್ಲಿ ನಿನ್ನ ಸ್ತುತಿಯು ಸದಾ ನಡೆಯುವುದೋ ಅಲ್ಲಿ ನಾನು ವಾಸವಾಗಿರುವಂತೆ ಅನುಗ್ರಹಿಸು. ಓ ಶಂಕರ, ನಿನ್ನನ್ನು ಸ್ತುತಿಸುವಲ್ಲಿ ಪುಣ್ಯವಂತರು ಮಾತ್ರ ವಾಸವಾಗಿರುವರು.

೧೮. ದತ್ತಾತ್ರೇಯನ ಈ ಸ್ತುತಿಯನ್ನು ಕೇಳಿ ಭಗವಾನ್ ಶಂಕರನು ಪ್ರಸನ್ನನಾದನು. ಮತ್ತು ವರವನ್ನು ಕೇಳು ಕೊಡುವೆನು ಎಂದನು.

೧೯. ಅದಕ್ಕೆ ದತ್ತಾತ್ರೇಯನು ಓ ಮಹಾದೇವ, ನನಗೆ ಆತ್ಮಜ್ಞಾನವನ್ನೂ ನಿನ್ನಲ್ಲಿ ದೃಢವಾದ ಭಕ್ತಿಯನ್ನೂ ಮುಕ್ತಿಯನ್ನೂ ಕರುಣಿಸು. ಈ ತೀರ್ಥವು ಪುಣ್ಯತಮವಾಗುವಂತೆಯೂ ಅನುಗ್ರಹಿಸು ಎಂದು ಕೇಳಿಕೊಂಡನು.

೨೦. ಶಂಕರನು ಹಾಗೆಯೇ ಆಗಲೆಂದು ದತ್ತಾತ್ರೇಯನಿಗೆ ವರವನ್ನನುಗ್ರಹಿಸಿ ಅಲ್ಲಿಯೇ ಅಂತರ್ಧಾನನಾದನು. ಅದುಮೊದಲುಗೊಂಡು ಆ ತೀರ್ಥವನ್ನು ಋಷಿಗಳು ಆತ್ಮತೀರ್ಥವೆಂದು ಕರೆದರು. ಆ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ತಪ್ಪದೇ ಮುಕ್ತಿಯು ಲಭಿಸುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಆತ್ಮತೀರ್ಥವರ್ಣನವೆಂಬ ನೂರಹದಿನೇಳನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ನಲವತ್ತೆಂಟನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಅಷ್ಟಾದಶಾಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಅಶ್ವತ್ಥತೀರ್ಥಮಾಖ್ಯಾತಂ ಪಿಪ್ಪಲಂ ಚ ತತಃ ಪರಂ ।
ಉತ್ತರೇ ಮಂದತೀರ್ಥಂ ತು ತತ್ರ ವ್ಯುಷ್ಟಿಮಿತಃ ಶೃಣು ॥ ೧ ॥

ಪುರಾ ತ್ವಗಸ್ತ್ಯೋ ಭಗವಾನ್ದಕ್ಷಿಣಾಶಾಪತಿಃ ಪ್ರಭುಃ ।
ದೇವೈಸ್ತು ಪ್ರೇರಿತಃ ಪೂರ್ವಂ ವಿಂಧ್ಯಸ್ಯ ಪ್ರಾರ್ಥನಂ ಪ್ರತಿ ॥ ೨ ॥

ನೂರಹದಿನೆಂಟನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಅಶ್ವತ್ಥತೀರ್ಥವೆಂದು ಪ್ರಸಿದ್ಧವಾದ ಪಿಪ್ಪಲ ತೀರ್ಥವಿರುವುದು. ಆ ತೀರ್ಥಕ್ಕುತ್ತರದಲ್ಲಿ ಮಂದತೀರ್ಥವಿರುವುದು. ಆ ತೀರ್ಥ ಗಳ ಮಾಹಾತ್ಮ್ಯವನ್ನು ಹೇಳುವೆನು.

೨. ಹಿಂದೆ ಪೂಜ್ಯನಾದ ಅಗಸ್ತ್ಯಮುನಿಯೆಂಬ ತಪಸ್ವಿಯಿದ್ದನು. ಅವ ನೀಗ ದಕ್ಷಿಣದಿಕ್ಕಿಗೆ ಒಡೆಯನಾಗಿರುವನು. ಅವನನ್ನು ದೇವತೆಗಳು ವಿಂಧ್ಯಗಿರಿ ಯನ್ನು ಶಿಕ್ಷಿಸುವಂತೆ ಪ್ರಾರ್ಥಿಸಿದರು.

ಸ ಶಪ್ತೈರ್ವಿಂಧ್ಯಮಭ್ಯಾಗಾತ್ಸಹಸ್ರಮುನಿಭಿರ್ವೃತಃ ।
ತಮಾಗತ್ಯ ನಗಶ್ರೇಷ್ಠಂ ಬಹುವೃಕ್ಷಸಮಾಕುಲಂ ॥ ೩ ॥

ಸ್ಪರ್ಧಿನಂ ಮೇರುಭಾನುಭ್ಯಾಂ ವಿಂಧ್ಯಂ ಶೃಂಗಶತೈರ್ವೃತಂ ।
ಅತ್ಯುನ್ನತಂ ನಗಂ ಧೀರೋ ಲೋಪಾಮುದ್ರಾಪತಿರ್ಮುನಿಃ ॥ ೪ ॥

ಕೃತಾತಿಥ್ಯೋ ದ್ವಿಜೈಃ ಸಾರ್ಧಂ ಪ್ರಶಸ್ಯ ಚ ನಗಂ ಪುನಃ ।
ಇದಮಾಹ ಮುನಿಶ್ರೇಷ್ಠೋ ದೇವಕಾರ್ಯಾರ್ಥಸಿದ್ಧಯೇ ॥ ೫ ॥

॥ ಅಗಸ್ತ್ಯ ಉವಾಚ ॥

ಅಹಂ ಯಾಮಿ ನಗಶ್ರೇಷ್ಠ ಮುನಿಭಿಸ್ತತ್ತ್ವದರ್ಶಿಭಿಃ ।
ತೀರ್ಥಯಾತ್ರಾಂ ಕರೋಮೀತಿ ದಕ್ಷಿಣಾಶಾಂ ವ್ರಜಾಮ್ಯಹಂ ॥ ೬ ॥

ದೇಹಿ ಮಾರ್ಗಂ ನಗಪತೇ ಆತಿಥ್ಯಂ ದೇಹಿ ಯಾಚತೇ ।
ಯಾವದಾಗಮನಂ ಮೇ ಸ್ಯಾತ್ತಾವತ್ಸ್ಥಾತವ್ಯಂ ತಾವದೇವ ಹಿ ॥ ೭ ॥

---

೩. ದೇವತೆಗಳ ಪ್ರಾರ್ಥನೆಯಂತೆ ಅಗಸ್ತ್ಯಮುನಿಯು ಸಾವಿರಾರು ಮುನಿಗಳೊಡನೆ ಆ ವಿಂಧ್ಯಗಿರಿಗೆ ಬಂದನು.

೪. ಆ ವಿಂಧ್ಯಗಿರಿಯು ಮೇರುವಿಗಿಂತಲೂ ಎತ್ತರವಾಗಿ ಬೆಳೆಯ ಬೇಕೆಂದೂ ಸೂರ್ಯನ ಮಾರ್ಗವನ್ನಡ್ಡಗಟ್ಟಬೇಕೆಂದೂ ಪಣತೊಟ್ಟು ನೂರಾರು ಶಿಖರಗಳೊಡನೆ ಅತ್ಯುನ್ನತವಾಗಿ ಬೆಳೆದಿದ್ದಿತು. ಇಂತಹ ಗಿರಿಯ ಸಮೀಪಕ್ಕೆ ಲೋಪಾಮುದ್ರೆಯ ಪತಿಯೂ ಜ್ಞಾನಿಯೂ ಧೀರನೂ ಆದ ಅಗಸ್ತ್ಯನು ಬಂದು ಸೇರಿದನು.

೫. ವಿಂಧ್ಯಗಿರಿಯಿಂದ ಸತ್ಕಾರಹೊಂದಿ ಆ ಮುನಿಯು ಆ ಗಿರಿಯನ್ನು ಹೊಗಳಿ ದೇವತೆಗಳ ಕಾರ್ಯಸಿದ್ಧಿಗಾಗಿ ಇಂತೆಂದನು.

೬. ಎಲೈ ಗಿರಿಶ್ರೇಷ್ಠ, ಈಗ ನಾನು ತತ್ತ್ವದರ್ಶಿಗಳಾದ ಈ ಮುನಿಗಳೊಡನೆ ತೀರ್ಥಯಾತ್ರೆಗೆ ಹೊರಟಿರುವೆನು, ದಕ್ಷಿಣದಿಕ್ಕಿಗೆ ತೆರಳುವೆನು.

೭. ಎಲೈ ಪರ್ವತರಾಜ, ದಕ್ಷಿಣದಿಕ್ಕಿಗೆ ಹೊರಟಿರುವ ನನಗೆ ದಾರಿಯನ್ನು ಬಿಡು. ನಿನ್ನ ಶರೀರವನ್ನು ತಗ್ಗಿಸಿ ಮಲಗಿರು. ನಾನು ಬರುವವರೆಗೆ ಹೀಗೆಯೇ ಮಲಗಿದ್ದು ದಾರಿಯನ್ನು ಅನುಕೂಲಪಡಿಸಿರು ಎಂದು ಅಗಸ್ತ್ಯ ಮುನಿಯು ನುಡಿಯಲು ವಿಂಧ್ಯಗಿರಿಯು ಒಪ್ಪಿಕೊಂಡಿತು.

ನಾನ್ಯಥಾ ಭವಿತವ್ಯಂ ತೇ ತಥೇತ್ಯಾಹ ನಗೋತ್ತಮಃ ।
ಆಕ್ರಾಮನ್ದಕ್ಷಿಣಾಮಾಶಾಂ ತೈರ್ವೃತೋ ಮುನಿಭಿರ್ಮುನಿಃ ॥ ೮ ॥

ಶನೈಃ ಸ ಗೌತಮೀಮಾಗಾತ್ಸತ್ರಯಾಗಾಯ ದೀಕ್ಷಿತಃ ।
ಯಾವತ್ಸಂವತ್ಸರಂ ಸತ್ರಮಕರೋದೃಷಿಭಿರ್ವೃತಃ ॥ ೯ ॥

ಕೈಟಭಸ್ಯ ಸುತೌ ಪಾಪೌ ರಾಕ್ಷಸೌ ಧರ್ಮಕಂಟಕೌ ।
ಅಶ್ವತ್ಥಃ ಪಿಪ್ಪಲಶ್ಚೇತಿ ವಿಖ್ಯಾತೌ ತ್ರಿದಶಾಲಯೇ ॥ ೧೦ ॥

ಅಶ್ವತ್ಥೋಽಶ್ವತ್ಥರೂಪೇಣ ಪಿಪ್ಪಲೋ ಬ್ರಹ್ಮರೂಪಧೃಕ್ ।
ತಾವುಭಾವಂತರಂ ಪ್ರೇಪ್ಸೂ ಯಜ್ಞವಿಧ್ವಂಸನಾಯ ತು ॥ ೧೧ ॥

ಕುರುತಾಂ ಕಾಂಕ್ಷಿತಂ ರೂಪಂ ದಾನವೌ ಪಾಪಚೇತಸೌ ।
ಅಶ್ವತ್ಥೋ ವೃಕ್ಷರೂಪೇಣ ಪಿಪ್ಪಲೋ ಬ್ರಾಹ್ಮಣಾಕೃತಿಃ ॥ ೧೨ ॥

೮-೯. ಮುಂದೆ ಆ ಅಗಸ್ತ್ಯಮುನಿಯು ದಕ್ಷಿಣದಿಕ್ಕಿನಲ್ಲಿ ಮುನಿಗಳೊಡನೆ ಸಂಚರಿಸುತ್ತಾ ಗೌತಮೀತೀರಕ್ಕೆ ಬಂದನು. ಅಲ್ಲಿ ಸತ್ರಯಾಗವನ್ನು ಕೈಗೊಂಡು ಆ ಯಾಗವನ್ನು ಒಂದು ವರ್ಷದವರೆಗೆ ಮಾಡಿದನು.

೧೦. ಅಶ್ವತ್ಥಪಿಪ್ಪಲರೆಂಬೀರ್ವರು ರಾಕ್ಷಸರು ಆಗ ದಕ್ಷಿಣದಿಕ್ಕಿನಲ್ಲಿದ್ದರು. ಅವರು ಕೈಟಭಾಸುರನಮಕ್ಕಳು. ಧರ್ಮವಿರೋಧಿಗಳಾಗಿದ್ದರು. ಆ ದುಷ್ಟರ ಹೆಸರು ದೇವಲೋಕದವರೆಗೂ ಹರಡಿದ್ದಿತು.

೧೧. ಮಾಯಾವಿಗಳಾದ ಆ ರಾಕ್ಷಸರು ನಾನಾರೂಪಗಳನ್ನು ಧರಿಸಬಲ್ಲವರಾಗಿದ್ದರು. ಅಶ್ವತ್ಥಾಸುರನು ಅಶ್ವತ್ಥಮರದ ರೂಪದಿಂದಿರುತ್ತಿದ್ದನು. ಪಿಪ್ಪಲಾಸುರನು ಬ್ರಾಹ್ಮಣರೂಪದಿಂದಿರುತ್ತಿದ್ದನು. ಅವರೀರ್ವರೂ ಯಜ್ಞವನ್ನು ನಾಶಮಾಡಲು ಸಮಯವನ್ನು ಕಾಯುತ್ತಿದ್ದರು.

೧೨. ಅಶ್ವತ್ಥರೂಪದಿಂದ ಅಶ್ವತ್ಥಾಸುರನೂ ಬ್ರಾಹ್ಮಣರೂಪದಿಂದ ಪಿಪ್ಪಲಾಸುರನೂ ನಿತ್ಯವೂ ಬ್ರಾಹ್ಮಣರನ್ನು ಹಿಂಸಿಸುತ್ತಿದ್ದರು.

ಉಭೌ ತೌ ಬ್ರಾಹ್ಮಣಾನ್ನಿತ್ಯಂ ಪೀಡಯೇತಾಂ ತಪೋಧನ ।
ಆಲಭಂತೇ ಚ ಯೇಽಶ್ವತ್ಥಂ ತಾಂಸ್ತಾನಶ್ನಾತ್ಯಸೌ ತರುಃ ॥ ೧೩ ॥

ಪಿಪ್ಪಲಃ ಸಾಮಗೋ ಭೂತ್ವಾ ಶಿಷ್ಯಾನಶ್ನಾತಿ ರಾಕ್ಷಸಃ ।
ತಸ್ಮಾದದ್ಯಾಪಿ ವಿಪ್ರೇಷು ಸಾಮಗೋಽತೀವ ನಿಷ್ಕೃಪಃ ॥ ೧೪ ॥

ಕ್ಷೀಯಮಾಣಾನ್ದ್ವಿಜಾನ್ದೃಷ್ಟ್ವಾ ಮುನಯೋ ರಾಕ್ಷಸಾವಿಮೌ ।
ಇತಿ ಬುದ್ಧ್ವಾ ಮಹಾಪ್ರಾಜ್ಞಾ ದಕ್ಷಿಣಂ ತೀರಮಾಶ್ರಿತಂ ॥ ೧೫ ॥

ಸೌರಿಂ ಶನೈಶ್ಚರಂ ಮನ್ದಂ ತಪಸ್ಯಂತಂ ಧೃತವ್ರತಂ ।
ಗತ್ವಾ ಮುನಿಗಣಾಃ ಸರ್ವೇ ರಕ್ಷಃಕರ್ಮ ನ್ಯವೇದಯನ್ ॥ ೧೬ ॥

ಸೌರಿರ್ಮುನಿಗಣಾನಾಹ ಪೂರ್ಣೇ ತಪಸಿ ಮೇ ದ್ವಿಜಾಃ ।
ರಾಕ್ಷಸೌ ಹನ್ಮ್ಯಪೂರ್ಣೇ ತು ತಪಸ್ಯಕ್ಷಮ ಏವ ಹಿ ॥ ೧೭ ॥

೧೩-೧೪. ಅಶ್ವತ್ಥರೂಪನಾದ ಅಸುರನು ಆ ಮರವನ್ನಾಶ್ರಯಿಸುತ್ತಿದ್ದವರನ್ನು ಕೊಂದು ತಿನ್ನುತ್ತಿದ್ದನು. ಪಿಪ್ಪಲನು ಸಾಮವೇದಿಯಂತೆ ನಟಿಸುತ್ತಾ ಅಧ್ಯಯನಕ್ಕೆ ಬರುವ ಶಿಷ್ಯರನ್ನು ತಿನ್ನುತ್ತಿದ್ದನು. ಆದುದರಿಂದ ಇಂದಿಗೂ ಸಾಮವೇದಿಗಳು ತುಂಬಾ ನಿಷ್ಕರುಣಿಗಳಾಗಿರುವರು.

೧೫-೧೬. ಬ್ರಾಹ್ಮಣರು ನಾಶವಾಗುತ್ತಿರುವುದನ್ನು ನೋಡಿ ಮಹಾಜ್ಞಾನಿಗಳಾದ ಮುನಿಗಳು ಈ ಅಶ್ವತ್ಥಪಿಪ್ಪಲರು ರಾಕ್ಷಸರು ಎಂದು ತಿಳಿದು ಗೌತಮೀನದಿಯ ದಕ್ಷಿಣತೀರದಲ್ಲಿ ತಪಸ್ಸುಮಾಡುತ್ತಿದ್ದ ಸೂರ್ಯಪುತ್ರನಾದ ಮಂದಗತಿಯುಳ್ಳ ಮಂದನನ್ನು (ಶನಿ) ಕಂಡು ರಾಕ್ಷಸರ ಹಿಂಸೆಯನ್ನು ಅವನಿಗೆ ತಿಳಿಸಿದರು.

೧೭. ಆಗ ಮಂದನು—ಓ ಬ್ರಾಹ್ಮಣೋತ್ತಮರೇ, ನನ್ನ ಈ ತಪಸ್ಸು ಪೂರ್ಣವಾದರೆ ರಾಕ್ಷಸರನ್ನು ಸಂಹರಿಸುವೆನು. ಪೂರ್ಣವಾಗದೆ ಸಂಹರಿಸಲು ನಾನು ಸಮರ್ಥನಲ್ಲ ಎಂದನು.

ಪುನಃ ಪ್ರೋಚುರ್ಮುನಿಗಣಾ ದಾಸ್ಯಾಮಸ್ತೇ ತಪೋ ಮಹತ್ ।
ಇತ್ಯುಕ್ತೋ ಬ್ರಾಹ್ಮಣೈಃ ಸೌರಿಃ ಕೃತಮಿತ್ಯಾಹ ತಾನಪಿ ॥ ೧೮ ॥

ಸೌರಿರ್ಬ್ರಾಹ್ಮಣವೇಷೇಣ ಪ್ರಾಯಾದಶ್ವತ್ಥರೂಪಿಣಂ ।
ರಾಕ್ಷಸಂ ಬ್ರಾಹ್ಮಣೋ ಭೂತ್ವಾ ಪ್ರದಕ್ಷಿಣಮಥಾಕರೋತ್ ॥ ೧೯ ॥

ಪ್ರದಕ್ಷಿಣಂ ತು ಕುರ್ವಾಣಂ ಮೇನೇ ಬ್ರಾಹ್ಮಣಮೇವ ತಂ ।
ನಿತ್ಯವದ್ರಾಕ್ಷಸಃ ಪಾಪೋ ಭಕ್ಷಯಾಮಾಸ ಮಾಯಯಾ ॥ ೨೦ ॥

ತಸ್ಯ ಕಾಯಂ ಸಮಾವಿಶ್ಯ ಚಕ್ಷುಷಾಂತ್ರಾಣ್ಯಪಶ್ಯತ ।
ದೃಷ್ಟಃ ಸ ರಾಕ್ಷಸಃ ಪಾಪೋ ಮಂದೇನ ರವಿಸೂನುನಾ ॥ ೨೧ ॥

---

೧೮. ಪುನಃ ಆ ಮುನಿಗಳು—ನಾವು ನಿನಗೆ ನಮ್ಮ ತಪಸ್ಸನ್ನು ಕೊಡುವೆವು ಎಂದರು. ಅದಕ್ಕೆ ಶನಿಯು ಹಾಗಾದರೆ ಈಗಲೇ ರಾಕ್ಷಸರನ್ನು ಸಂಹರಿಸುವೆನು ಎಂದನು.

೧೯. ಆಮೇಲೆ ಶನೈಶ್ಚರನು ಬ್ರಾಹ್ಮಣರೂಪವನ್ನು ಧರಿಸಿ ಅಶ್ವತ್ಥರೂಪದಿಂದಿದ್ದ ರಾಕ್ಷಸನ ಬಳಿಗೆ ಹೋಗಿ ಆ ಅಶ್ವತ್ಥವೃಕ್ಷವನ್ನು ಪ್ರದಕ್ಷಿಣೆಮಾಡತೊಡಗಿದನು.

೨೦. ಪ್ರದಕ್ಷಿಣೆಮಾಡುತ್ತಲಿದ್ದ ಶನಿಯನ್ನು ಬ್ರಾಹ್ಮಣನೆಂದೇ ಆ ಅಶ್ವತ್ಥರಾಕ್ಷಸನು ತಿಳಿದನು. ನಿತ್ಯದಂತೆ ಆ ದುಷ್ಟನು ಮಾಯೆಯಿಂದ ಶನೈಶ್ಚರನನ್ನೂ ಭಕ್ಷಿಸಿದನು.

೨೧. ಅಶ್ವತ್ಥರಾಕ್ಷಸನ ಶರೀರವನ್ನು ಪ್ರವೇಶಿಸಿದ ಶನಿಯು ಕ್ರೂರದೃಷ್ಟಿಯಿಂದ ಒಳಗಿನ ಅವಯವಗಳೆಲ್ಲವನ್ನೂ ನೋಡಿದನು. ಸೂರ್ಯಪುತ್ರನ ಆ ತೀಕ್ಷ್ಣದೃಷ್ಟಿಯಿಂದ ಅಶ್ವತ್ಥಾಸುರನು ಭಸ್ಮವಾಗಿ ವಜ್ರದಿಂದ ಹೊಡೆಯಲ್ಪಟ್ಟ ಗಿರಿಯಂತೆ ನೆಲಕ್ಕುರುಳಿದನು.

ಭಸ್ಮೀಭೂತಃ ಕ್ಷಣೇನೈವ ಗಿರಿರ್ವಜ್ರಹತೋ ಯಥಾ ।
ಅಶ್ವತ್ಥಂ ಭಸ್ಮಸಾತ್ಕೃತ್ವಾ ಅನ್ಯಂ ಬ್ರಾಹ್ಮಣರೂಪಿಣಂ ॥ ೨೨ ॥

ರಾಕ್ಷಸಂ ಪಾಪನಿಲಯಮೇಕ ಏವ ತಮಭ್ಯಗಾತ್ ।
ಅಧೀಯಾನೋ ವಿಪ್ರ ಇವ ಶಿಷ್ಯರೂಪೋ ವಿನೀತವತ್ ॥ ೨೩ ॥

ಪಿಪ್ಪಲಃ ಪೂರ್ವವಚ್ಚಾಪಿ ಭಕ್ಷಯಾಮಾಸ ಭಾನುಜಂ ।
ಸ ಭಕ್ಷಿತಃ ಪೂರ್ವವಚ್ಚ ಕುಕ್ಷಾವಂತ್ರಾಣ್ಯವೈಕ್ಷತ ॥ ೨೪ ॥

ತೇನಾಲೋಕಿತಮಾತ್ರೋಽಸೌ ರಾಕ್ಷಸೋ ಭಸ್ಮಸಾದಭೂತ್ ।
ಉಭೌ ಹತ್ವಾ ಭಾನುಸುತಃ ಕಿಂ ಕೃತ್ಯಂ ಮೇ ವದಂತ್ವಥ ॥ ೨೫ ॥

ಮುನಯೋ ಜಾತಸಂಹರ್ಷಾಃ ಸರ್ವ ಏವ ತಪಸ್ವಿನಃ ।
ತತಃ ಪ್ರಸನ್ನಾ ಹ್ಯಭವನ್ನೃಷಯೋಽಗಸ್ತ್ಯಪೂರ್ವಕಾಃ ॥ ೨೬ ॥

೨೨-೨೩. ಅಶ್ವತ್ಥನನ್ನು ಭಸ್ಮಮಾಡಿ ಶನಿಯು ಪಿಪ್ಪಲಾಸುರನಬಳಿಗೆ ಶಿಷ್ಯನಂತೆ ವಿನಯದಿಂದ ತೆರಳಿ ಅವನಲ್ಲಿ ಅಧ್ಯಯನಮಾಡುವವನಂತೆ ನಟಿಸಿದನು.

೨೪. ಪಿಪ್ಪಲಾಸುರನು ಎಂದಿನಂತೆ ಬ್ರಾಹ್ಮಣರೂಪನಾದ ಆ ಶನಿಯನ್ನೂ ಭಕ್ಷಿಸಿದನು. ಹೊಟ್ಟೆಯಲ್ಲಿ ಸೇರಿ ಶನಿಯು ಮೊದಲಿನಂತೆ ಆ ದುಷ್ಟನ (ಕರುಳು ಮಾಲೆಗಳನ್ನು) ಒಳ ಅವಯವಗಳನ್ನು ತೀಕ್ಷ್ಣದೃಷ್ಟಿಯಿಂದ ನೋಡಿದನು.

೨೫. ಸೂರ್ಯಪುತ್ರನ ಆ ತೀಕ್ಷ್ಣದೃಷ್ಟಿಯ ಮಾತ್ರದಿಂದ ಪಿಪ್ಪಲಾಸುರನು ಭಸ್ಮನಾದನು. ಹೀಗೆ ಅಸುರರಿಬ್ಬರನ್ನೂ ಸಂಹರಿಸಿದ ಶನಿಯು ಮುನಿಗಳನ್ನು ಕುರಿತು—ಇನ್ನು ನಾನು ಮಾಡಬೇಕಾದುದೇನಿರುವುದು ? ಎಂದು ಪ್ರಶ್ನಿಸಿದನು.

೨೬. ಆಗ ಅಗಸ್ತ್ಯ ಮೊದಲಾದ ಮುನಿಗಳೆಲ್ಲರೂ ಸಂತಸಗೊಂಡು ಪ್ರಸನ್ನರಾಗಿ ಸೂರ್ಯಪುತ್ರನಾದ ಶನೈಶ್ಚರನಿಗೆ ಬೇಕಾದ ವರಗಳನ್ನು ಕೊಟ್ಟರು.

ವರಾನ್ವದುರ್ಯಥಾಕಾಮಂ ಸೌರಯೇ ಮಂದಗಾಮಿನೇ ।
ಸ ಪ್ರೀತೋ ಬ್ರಾಹ್ಮಣಾನಾಹ ಶನಿಃ ಸೂರ್ಯಸುತೋ ಬಲೀ ॥ ೨೭ ॥

॥ ಸೌರಿರುವಾಚ ॥

ಮದ್ವಾರೇ ನಿಯತಾ ಯೇ ಚ ಕುರ್ವಂತ್ಯಶ್ವತ್ಥಲಂಭನಂ ।
ತೇಷಾಂ ಸರ್ವಾಣಿ ಕಾರ್ಯಾಣಿ ಸ್ಯುಃ ಪೀಡಾ ಮದ್ಭವಾ ನ ಚ ॥ ೨೮ ॥

ತೀರ್ಥೇ ಚಾಶ್ವತ್ಥಸಂಜ್ಞೇ ವೈ ಸ್ನಾನಂ ಕುರ್ವಂತಿ ಯೇ ನರಾಃ ।
ತೇಷಾಂ ಸರ್ವಾಣಿ ಕಾರ್ಯಾಣಿ ಭವೇಯುರಪರೋ ವರಃ ॥ ೨೯ ॥

ಮಂದವಾರೇ ತು ಯೇಽಶ್ವತ್ಥಂ ಪ್ರಾತರುತ್ಥಾಯ ಮಾನವಾಃ ।
ಆಲಭಂತೇ ಚ ತೇಷಾಂ ವೈ ಗ್ರಹಪೀಡಾ ವ್ಯಪೋಹತು ॥ ೩೦ ॥

॥ ಬ್ರಹ್ಮೋವಾಚ ॥

ತತಃ ಪ್ರಭೃತಿ ತತ್ತೀರ್ಥಮಶ್ವತ್ಥಂ ಪಿಪ್ಪಲಂ ವಿದುಃ ।
ತೀರ್ಥಂ ಶನೈಶ್ಚರಂ ತತ್ರ ತತ್ರಾಗಸ್ತ್ಯಂ ಚ ಸಾತ್ರಿಕಂ ॥ ೩೧ ॥

೨೭-೨೮. ಶನೈಶ್ಚರನು ಸಂತೋಷಗೊಂಡು ಆ ಬ್ರಾಹ್ಮಣೋತ್ತಮರೊಡನೆ ಇಂತೆಂದನು—ನನ್ನ (ಶನಿ) ವಾರದಲ್ಲಿ ಅಶ್ವತ್ಥಪ್ರದಕ್ಷಿಣೆಯನ್ನು ಮಾಡುವವರ ಕಾರ್ಯಗಳೆಲ್ಲವೂ ಸಿದ್ಧಿಸಲಿ. ನನ್ನ ಪೀಡೆಯು ಅವರಿಗುಂಟಾಗದಿರಲಿ.

೨೯. ಈ ಅಶ್ವತ್ಥತೀರ್ಥದಲ್ಲಿ ಸ್ನಾನವನ್ನು ಮಾಡುವವರ ಕಾರ್ಯಗಳೆಲ್ಲವೂ ಸಿದ್ಧಿಸಲಿ. ಇದು ಎರಡನೆಯ ವರವು.

೩೦. ಶನಿವಾರದಲ್ಲಿ ಬೆಳಗ್ಗೆ ಶುಚಿಯಾಗಿ ಅಶ್ವತ್ಥಪ್ರದಕ್ಷಿಣೆಯನ್ನು ಮಾಡುವವರ ಗ್ರಹಚಾರವೆಲ್ಲವೂ ನಾಶವಾಗಲಿ ಎಂದು ವರಗಳನ್ನಿತ್ತನು.

೩೧-೩೨. ಅದುಮೊದಲುಗೊಂಡು ಆ ತೀರ್ಥವು ಅಶ್ವತ್ಥತೀರ್ಥವೆಂದೂ ಪಿಪ್ಪಲತೀರ್ಥವೆಂದೂ ಪ್ರಸಿದ್ಧವಾಯಿತು. ಶನೈಶ್ಚರತೀರ್ಥ, ಅಗಸ್ತ್ಯತೀರ್ಥ,

ಯಾಜ್ಞಿಕಂ ಚಾಪಿ ತತ್ತೀರ್ಥಂ ಸಾಮಗಂ ತೀರ್ಥಮೇವ ಚ ।
ಇತ್ಯಾದ್ಯಷ್ಟೋತ್ತರಾಣ್ಯಾಸನ್ಸಹಸ್ರಾಣ್ಯಥ ಷೋಡಶ ।
ತೇಷು ಸ್ನಾನಂ ಚ ದಾನಂ ಚ ಸತ್ರಯಾಗಫಲಪ್ರದಂ ॥ ೩೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಗೌತಮೀಮಾಹಾತ್ಮ್ಯೇಽ-
ಶ್ವತ್ಥಾದ್ಯಷ್ಟೋತ್ತರಷೋಡಶಸಹಸ್ರತೀರ್ಥವರ್ಣನಂ
ನಾಮಾಷ್ಟಾಧಿಕಶತತಮೋಽಧ್ಯಾಯಃ

ಯಾಜ್ಞಿಕತೀರ್ಥ, ಸಾಮಗತೀರ್ಥ ಮೊದಲಾದ ಹದಿನಾರುಸಾವಿರದ ಎಂಟು ತೀರ್ಥಗಳು ಅಲ್ಲಿರುವುವು. ಆ ತೀರ್ಥಗಳಲ್ಲಿ ಸ್ನಾನದಾನಗಳನ್ನು ಮಾಡಿದರೆ ಸತ್ರ ಯಾಗದ ಫಲವು ಲಭಿಸುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಅಶ್ವತ್ಥತೀರ್ಥವೇ ಮೊದಲಾದ ಹದಿನಾರು ಸಾವಿರದಎಂಟು ತೀರ್ಥಗಳ ವರ್ಣನವೆಂಬ ನೂರಹದಿನೆಂಟನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ನಲವತ್ತೊಂಭತ್ತನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಏಕೋನವಿಂಶತ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಸೋಮತೀರ್ಥಮಿತಿ ಖ್ಯಾತಂ ತದಪ್ಯುಕ್ತಂ ಮಹಾತ್ಮಭಿಃ ।
ತತ್ರ ಸ್ನಾನೇನ ದಾನೇನ ಸೋಮಪಾನಫಲಂ ಲಭೇತ್ ॥ ೧ ॥

ಜಗತಾಂ ಮಾತರಃ ಪೂರ್ವಮೋಷಧ್ಯೋ ಜೀವಸಂಮತಾಃ ।
ಮಮಾಪಿ ಮಾತರೋ ದೇವ್ಯಃ ಪೂರ್ವಾಸಾಂ ಪೂರ್ವತ್ತರಾಃ ॥ ೨ ॥

ನೂರಹತ್ತೊಂಭತ್ತನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಸೋಮತೀರ್ಥವೆಂಬ ಪ್ರಸಿದ್ಧವಾದ ತೀರ್ಥವಿರುವುದು. ಆ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ಸೋಮಪಾನ (ಸೋಮಯಾಗ) ಮಾಡಿದ ಫಲವು ಲಭಿಸುವುದು.

೨. ಜಗನ್ಮಾತೆಯರಾದ ಓಷಧಿಲತೆಗಳು ಹಿಂದೆ ಮನುಷ್ಯರಂತೆ ಜೀವವುಳ್ಳವುಗಳಾಗಿದ್ದುವು. ಆ ಓಷಧಿಗಳು ನನ (ಬ್ರಹ್ಮನಿ) ಗಿಂತಲೂ ಹಿಂದಿನವುಗಳು.

ಆಸು ಪ್ರತಿಷ್ಠಿತೋ ಧರ್ಮಃ ಸ್ವಾಧ್ಯಾಯೋ ಯಜ್ಞಕರ್ಮ ಚ ।
ಆಭಿರೇವ ಧೃತಂ ಸರ್ವಂ ತ್ರೈಲೋಕ್ಯಂ ಸಚರಾಚರಂ ॥ ೩ ॥

ಅಶೇಷರೋಗೋಪಶಮೋ ಭವತ್ಯಾಭಿರಸಂಶಯಂ ।
ಅನ್ನಮೇತಾಭಿರೇವ ಸ್ಯಾದಶೇಷಪ್ರಾಣರಕ್ಷಣಂ ।
ಅತ್ರೌಷಧ್ಯೋ ಜಗದ್ವಂದ್ಯಾ ಮಾಮೂಚುರನಹಂಕೃತಾಃ ॥ ೪ ॥

॥ ಓಷಧ್ಯ ಊಚುಃ ॥

ಅಸ್ಮಾಕಂ ತ್ವಂ ಪತಿಂ ದೇಹಿ ರಾಜಾನಂ ಸುರಸತ್ತಮ ॥ ೫ ॥

॥ ಬ್ರಹ್ಮೋವಾಚ ॥

ತಚ್ಛ್ರುತ್ವಾ ವಚನಂ ತಾಸಾಂ ಮಯೋಕ್ತಾ ಓಷಧೀರಿದಂ ।
ಪತಿಂ ಪ್ರಾಪ್ಸ್ಯಥ ಸರ್ವಾಶ್ಚ ರಾಜಾನಂ ಪ್ರೀತಿವರ್ಧನಂ ॥ ೬ ॥

---

೩. ಓಷಧಿಲತೆಗಳಲ್ಲಿ ಧರ್ಮವು ನೆಲಸಿರುವುದು. ವೇದ್ಯಾಧ್ಯಯನವು ಓಷಧಿಗಳ ಸಹಾಯದಿಂದಲೇ ನಡೆಯುವುದು. ಯಜ್ಞಗಳೂ ನಡೆಯುವುವು. ಓಷಧಲತೆಗಳಿಂದಲೇ ಜಗತ್ತೆಲ್ಲವೂ ನಿಂತಿರುವುದು.

೪. ಓಷಧಿಲತೆಗಳಿಂದ ರೋಗಗಳೆಲ್ಲವೂ ನಾಶವಾಗುವುವು. ಜೀವನಾಧಾರವಾದ ಆಹಾರವೆಲ್ಲವೂ ಓಷಧಿಗಳಿಂದಲೇ ಲಭಿಸುವುವು. ಓಷಧೀಭ್ಯೋಽನ್ನಂ ಎಂದು ಶ್ರುತಿಯಿರುವುದು (ತೈ. ಉ. ೨-೧).

೫. ಒಂದುಸಾರಿ ಓಷಧಿಗಳು ನನ್ನಲ್ಲಿ ಬಂದು ವಿನಯದಿಂದ ಓ ಬ್ರಹ್ಮದೇವ, ನಮ್ಮಗಳಿಗೆ ಪತಿಯಾಗಿರುವಂತೆ ಓರ್ವ ರಾಜನನ್ನು ಕರುಣಿಸು ಎನ್ನಲು,

೬. ಓಷಧಿಗಳ ಮಾತನ್ನು ಕೇಳಿ ನಾನು ಎಲೈ ಓಷಧಿಗಳೇ, ಪ್ರೀತಿಮಯನಾದಂತಹ ರಾಜನನ್ನೇ ಪತಿಯನ್ನಾಗಿ ಪಡೆಯುವಿರಿ ಎಂದು ಹೇಳಿದೆನು.

ರಾಜಾನಮಿತಿ ತಚ್ಛ್ರುತ್ವಾ ತಾ ಮಾಮೂಚುಃ ಪುನರ್ಮುನೇ ।
ಗಂತವ್ಯಂ ಕ್ವ ಪುನಶ್ಚೋಕ್ತಾ ಗೌತಮೀಂ ಯಾಂತು ಮಾತರಃ ॥ ೭ ॥

ತುಷ್ಟಾಯಾಮಥ ತಸ್ಯಾಂ ವೋ ರಾಜಾ ಸ್ಯಾಲ್ಲೋಕಪೂಜಿತಃ ।
ತಾಶ್ಚ ಗತ್ವಾ ಮುನಿಶ್ರೇಷ್ಠ ತುಷ್ಟುವುರ್ಗೌತಮೀಂ ನದೀಂ ॥ ೮ ॥

॥ ಓಷಧ್ಯ ಊಚುಃ ॥

ಕಿಂ ವಾಕರಿಷ್ಯನ್ಭುವವರ್ತಿನೋ ಜನಾ
ನಾನಾಘಸಂಘಾಭಿಭವಾಚ್ಚ ದುಃಖಿತಾಃ ।
ನ ಚಾಗಮಿಷ್ಯದ್ಭುವತೀ ಭುವಂ ಚೇ-
ತ್ಪುಣ್ಯೋದಕೇ ಗೌತಮಿ ಶಂಭುಕಾಂತೇ ॥ ೯ ॥

ಕೋ ವೇತ್ತಿ ಭಾಗ್ಯಂ ನರದೇಹಭಾಜಾಂ
ಮಹೀಗತಾನಾಂ ಸರಿತಾಮಧೀಶೇ ।
ಏಷಾಂ ಮಹಾಪಾತಕಸಂಘಹಂತ್ರೀ
ತ್ವಮಂಬ ಗಂಗೇ ಸುಲಭಾ ಸದೈವ ॥ ೧೦ ॥

---

೭. ಆ ನನ್ನ ಮಾತನ್ನು ಕೇಳಿ ಓಷಧಿಗಳು ಅಂತಹ ಪತಿಯನ್ನು ಪಡೆಯಲು ಎಲ್ಲಿಗೆ ಹೋಗಬೇಕು? ಎಂದು ಪ್ರಶ್ನಿಸಿದರು. ನಾನು ಗೌತಮೀ ನದಿಗೆ ಹೋಗಿರಿ.

೮. ಆ ಗೌತಮೀನದಿಯು ಪ್ರಸನ್ನವಾದರೆ ಲೋಕವಂದ್ಯನಾದ ರಾಜನು ನಿಮಗೆ ಪತಿಯಾಗಿ ಲಭಿಸುವನು ಎಂದು ಹೇಳಿದೆನು. ಆಮೇಲಾ ಓಷಧಿಗಳು ಗೌತಮೀನದಿಗೆ ಹೋಗಿ ಆ ನದಿಯನ್ನು ಭಕ್ತಿಯಿಂದ ಸ್ತುತಿಸಿದವು.

೯. ಶಂಕರಪ್ರಿಯೆಯೂ ಪವಿತ್ರಳೂ ಆದ ಓ ಗೌತಮಿ, ನೀನು ಭೂಮಿಗೆ ಬರದಿದ್ದರೆ ಸಂಸಾರತಾಪತ್ರಯಗಳಿಗೆ ಶಿಲುಕಿ ಪಾಪಸಮೂಹಗಳಿಂದ ಕೂಡಿ ದುಃಖಿತರಾದ ಮಾನವರು ಏನು ಮಾಡುತ್ತಿದ್ದರು?

೧೦. ಓ ಗೌತಮೀಮಾತೆ, ಮಾನವರ ಮಹಾಪಾಪಗಳೆಲ್ಲವನ್ನೂ ನೀನು ಸುಲಭವಾಗಿ ಹೋಗಲಾಡಿಸುವೆ. ಇಂತಹ ನಿನ್ನನ್ನು ಪಡೆದ ಮಾನವರ ಭಾಗ್ಯವನ್ನು ವರ್ಣಿಸಲಸಾಧ್ಯವು.

ನ ತೇ ವಿಭೂತಿಂ ನನು ವೇತ್ತಿ ಕೋಽಪಿ
ತ್ರೈಲೋಕ್ಯವಂದ್ಯೇ ಜಗದಂಬ ಗಂಗೇ ।
ಗೌರೀಸಮಾಲಿಂಗಿತವಿಗ್ರಹೋಽಪಿ
ಧತ್ತೇ ಸ್ಮರಾರಿಃ ಶಿರಸಾಽಪಿ ಯತ್ತ್ವಾಂ ॥ ೧೧ ॥

ನಮೋಽಸ್ತು ತೇ ಮಾತರಭೀಷ್ಟದಾಯಿನಿ
ನಮೋಽಸ್ತು ತೇ ಬ್ರಹ್ಮಮಯೇಽಘನಾಶಿನಿ ।
ನಮೋಽಸ್ತು ತೇ ವಿಷ್ಣುಪದಾಬ್ಜನಿಃಸೃತೇ
ನಮೋಽಸ್ತು ತೇ ಶಂಭುಜಟಾವಿನಿಃಸೃತೇ ॥ ೧೨ ॥

॥ ಬ್ರಹ್ಮೋವಾಚ ॥

ಇತ್ಯೇವಂ ಸ್ತುವತಾಮಾಶಾ ಕಿಂ ದದಾಮೀತ್ಯವೋಚತ ॥ ೧೩ ॥

॥ ಓಷಧ್ಯ ಊಚುಃ ॥

ಪತಿಂ ದೇಹಿ ಜಗನ್ಮಾತಾ ರಾಜಾನಮತಿತೇಜಸಂ ॥ ೧೪ ॥

---

೧೧. ಜಗನ್ಮಾತೆಯಾದ ಗಂಗೆ, ಜಗದ್ವಂದ್ಯಳಾದ ನಿನ್ನ ಮಹಿಮೆಯನ್ನು ಯಾರೂ ತಿಳಿಯಲಾರರು. ಮದನವೈರಿಯಾದ ಶಿವನು ಸದಾ ಗೌರಿಯನ್ನು ಆಲಿಂಗಿಸಿಕೊಂಡಿದ್ದರೂ ನಿನ್ನನ್ನು ಪ್ರೀತಿಯಿಂದ ಸದಾ ತಲೆಯಲ್ಲಿ ಧರಿಸಿರುವನು.

೧೨. ಇಷ್ಟಾರ್ಥಗಳನ್ನು ಕರುಣಿಸುವ ಓ ಗಂಗಾಮಾತೆ, ನಿನಗೆ ನಮಸ್ಕಾರವು. ಬ್ರಹ್ಮಸ್ವರೂಪಳೂ ಬ್ರಹ್ಮನ ಪಾಪವನ್ನು ಹೋಗಲಾಡಿಸಿದವಳೂ ಬ್ರಹ್ಮಕಮಂಡಲುವಿನಿಂದ ಹೊರಟವಳೂ ಆದ ಗೌತಮಿಗೆ ನಮಸ್ಕಾರವು. ಹರಿಯ ಪಾದದಿಂದ ಹೊರಟ ಗಂಗೆಗೆ ನಮಸ್ಕಾರವು. ಶಂಕರನ ಜಟೆಯಿಂದ ಹೊರಟ ಗೌತಮಾಮಾತೆಗೆ ನಮಸ್ಕಾರವು.

೧೩. ಹೀಗೆ ಓಷಧಿಗಳು ಸ್ತುತಿಸಲು ಗೌತಮಿಯು ಪ್ರಸನ್ನಳಾಗಿ ನಿಮಗೆ ಏನು ವರವನ್ನು ಕೊಡಲಿ ? ಎಂದಳು.

೧೪. ಅದಕ್ಕೆ ಓಷಧಿಗಳು ಜಗನ್ಮಾತೆಯಾದ ಓ ಗಂಗೆ, ಮಹಾ ತೇಜಸ್ವಿಯಾದ ರಾಜನು ನಮಗೆ ಪತಿಯಾಗುವಂತೆ ಕರುಣಿಸು ಎನ್ನಲು,

॥ ಬ್ರಹ್ಮೋವಾಚ ॥

ತದೋವಾಚ ನದೀ ಗಂಗಾ ಓಷಧೀಸ್ತಾ ಇದಂ ವಚಃ ॥ ೧೫ ॥

॥ ಗಂಗೋವಾಚ ॥

ಅಹಂ ಚಾಮೃತರೂಪಾಸ್ಮಿ ಓಷಧ್ಯೋ ಮಾತರೋಽಮೃತಾಃ ।
ತಾದೃಶಂ ಚಾಮೃತಾತ್ಮಾನಂ ಪತಿಂ ಸೋಮಂ ದದಾಮಿ ವಃ ॥ ೧೬ ॥

॥ ಬ್ರಹ್ಮೋವಾಚ ॥

ದೇವಾಶ್ಚ ಋಷಯೋ ವಾಕ್ಯಂ ಮೇನಿರೇ ಸೋಮ ಏವ ಚ ।
ಓಷಧ್ಯಶ್ಚಾಪಿ ತದ್ವಾಕ್ಯಂ ತತೋ ಜಗ್ಮುಃ ಸ್ವಮಾಲಯಂ ॥ ೧೭ ॥

ಯತ್ರ ಚಾಪುರ್ಮಹೌಷಧ್ಯೋ ರಾಜಾನಮಮೃತಾತ್ಮಕಂ ।
ಸೋಮಂ ಸಮಸ್ತಸಂತಾಪಪಾಪಸಂಘನಿವಾರಕಂ ॥ ೧೮ ॥

೧೫-೧೬. ಆಗ ಗಂಗೆಯು ಓಷಧಿಗಳಿಗೆ ಎಲೌ ಓಷಧೀಯರೇ, ನಾನು ಅಮೃತಸ್ವರೂಪಳಾಗಿರುವೆನು. ಜಗನ್ಮಾತೆಯರಾದ ನೀವೂ ಅಮೃತರೂಪರಾಗಿರುವಿರಿ. ಆದುದರಿಂದ ನಿಮಗನುರೂಪನಾದ ಅಮೃತಮಯನಾದ ಚಂದ್ರನನ್ನೇ ಪತಿಯನ್ನಾಗಿ ಕರುಣಿಸುವೆನು ಎಂದಳು.

೧೭. ದೇವತೆಗಳೂ ಋಷಿಗಳೂ ಗೌತಮಿಯ ಆ ಮಾತನ್ನನುಮೋದಿಸಿದರು. ಚಂದ್ರನೂ ಓಷಧಿಗಳೂ ಒಪ್ಪಿಕೊಂಡರು. ಆಮೇಲೆ ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು.

೧೮-೧೯. ಗೌತಮಿಯ ಅನುಗ್ರಹದಿಂದ ಅಮೃತಮಯನಾದ ಚಂದ್ರನನ್ನು ಓಷಧಿಗಳು ಪತಿಯನ್ನಾಗಿ ಪಡೆದ ಸ್ಥಳವು ಸೋಮತೀರ್ಥವೆಂದು ಪ್ರಸಿದ್ಧವಾಯಿತು. ಆ ತೀರ್ಥವು ಪಾಪಗಳಿಲ್ಲವನ್ನೂ ದುಃಖಗಳಿಲ್ಲವನ್ನೂ ಹೋಗಲಾಡಿಸುವುದು. ಸೋಮಪಾನ (ಸೋಮಯಾಗ) ಮಾಡಿದ ಫಲವನ್ನುಂಟುಮಾ

ಸೋಮತೀರ್ಥಂ ತು ತತ್ಖ್ಯಾತಂ ಸೋಮಪಾನಫಲಪ್ರದಂ ।
ತತ್ರ ಸ್ನಾನೇನ ದಾನೇನ ಪಿತರಃ ಸ್ವರ್ಗಮಾಪ್ನುಯುಃ ॥ ೧೯ ॥

ಯ ಇದಂ ಶೃಣುಯಾನ್ನಿತ್ಯಂ ಪಠೇದ್ವಾ ಭಕ್ತಿತಃ ಸ್ಮರೇತ್ ।
ದೀರ್ಘಮಾಯುರವಾಪ್ನೋತಿ ಸ ಪುತ್ರೀ ಧನವಾನ್ಭವೇತ್ ॥ ೨೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಸೋಮತೀರ್ಥವರ್ಣನಂ ನಾಮೋನವಿಂಶತ್ಯಧಿಕ-ಶತತಮೋಽಧ್ಯಾಯಃ

ಡುವುದು. ಆ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದವನ ಪಿತೃಗಳು ಸ್ವರ್ಗವನ್ನು ಪಡೆಯುವರು.

೨೦. ಈ ಸೋಮತೀರ್ಥಮಾಹಾತ್ಮ್ಯವನ್ನು ಭಕ್ತಿಯಿಂದ ಕೇಳುವವನೂ ಓದುವವನೂ ಸ್ಮರಿಸುವವನೂ ದೀರ್ಘಾಯುವಾಗುವನು. ಸತ್ಪುತ್ರರನ್ನು ಪಡೆಯುವನು. ಐಶ್ವರ್ಯವಂತನಾಗುವನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಸೋಮತೀರ್ಥವರ್ಣನವೆಂಬ ನೂರಹತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ಐವತ್ತನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ವಿಂಶತ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಧಾನ್ಯತೀರ್ಥಮಿತಿ ಖ್ಯಾತಂ ಸರ್ವಕಾಮಪ್ರದಂ ನೃಣಾಂ ।
ಸುಭಿಕ್ಷಂ ಕ್ಷೇಮದಂ ಪುಂಸಾಂ ಸರ್ವಾಪದ್ವಿನಿವಾರಣಂ ॥ ೧ ॥

ಓಷಧ್ಯಃ ಸೋಮರಾಜಾನಂ ಪತಿಂ ಪ್ರಾಪ್ಯ ಮುದಾನ್ವಿತಾಃ ।
ಊಚುಃ ಸರ್ವಸ್ಯ ಲೋಕಸ್ಯ ಗಂಗಾಯಾಶ್ಚೇಪ್ಸಿತಂ ವಚಃ ॥ ೨ ॥

ನೂರಿಪ್ಪತ್ತನೆಯ ಅಧ್ಯಾಯವು

೧. ಬ್ರಹನು ಹೇಳಿದನು—ಧ್ಯಾನತೀರ್ಥವೆಂಬ ಪ್ರಸಿದ್ಧವಾದ ತೀರ್ಥವಿರುವುದು. ಆ ತೀರ್ಥವು ಸುಭಿಕ್ಷಕ್ಷೇಮಗಳನ್ನುಂಟುಮಾಡುವುದು. ಆಪತ್ತುಗಳನ್ನು ಪರಿಹರಿಸುವುದು.

೨. ಓಷಧಿಲತೆಗಳು ಚಂದ್ರನನ್ನು ಪತಿಯನ್ನಾಗಿ ಪಡೆದು ಸಂತಸಗೊಂಡು ಗಂಗೆಗೂ ಇಷ್ಟವಾದಂತಹ ವಾಕ್ಯಗಳನ್ನಾಡಿದುವು.

॥ ಓಷಧ್ಯ ಊಚುಃ ॥

ವೈದಿಕೀ ಪುಣ್ಯಗಾಥಾಸ್ತಿ ಯಾಂ ವೈ ವೇದವಿದೋ ವಿದುಃ ।
ಭೂಮಿಂ ಸಸ್ಯವತೀಂ ಕಶ್ಚಿನ್ಮಾತರಂ ಮಾತೃಸಂಮಿತಾಂ ॥ ೩ ॥

ಗಂಗಾಸಮೀಪೇ ಯೋ ದದ್ಯಾತ್ಸರ್ವಕಾಮಾನವಾಪ್ನುಯಾತ್ ।
ಭೂಮಿಂ ಸಸ್ಯವತೀಂ ಗಾಶ್ಚ ಓಷಧೀಶ್ಚ ಮುದಾನ್ವಿತಃ ॥ ೪ ॥

ವಿಷ್ಣುಬ್ರಹ್ಮೇಶರೂಪಾಯ ಯೋ ದದ್ಯಾದ್ಭಕ್ತಿಮಾನ್ನರಃ ।
ಸರ್ವಂ ತದಕ್ಷಯಂ ವಿದ್ಯಾತ್ಸರ್ವಕಾಮಾನವಾಪ್ನುಯಾತ್ ॥ ೫ ॥

ಓಷಧ್ಯಃ ಸೋಮರಾಜನ್ಯಾಃ ಸೋಮಶ್ಚಾಪ್ಯೋಷಧೀಪತಿಃ ।
ಇತಿ ಜ್ಞಾತ್ವಾ ಬ್ರಹ್ಮವಿದ ಓಷಧೀರ್ಯಃ ಪ್ರದಾಸ್ಯತಿ ॥ ೬ ॥

ಸರ್ವಾನ್ಕಾಮಾನವಾಪ್ನೋತಿ ಬ್ರಹ್ಮಲೋಕೇ ಮಹೀಯತೇ ।
ತಾ ಏವ ಸೋಮರಾಜನ್ಯಾಃ ಪ್ರೀತಾಃ ಪ್ರೋಚುಃ ಪುನಃ ಪುನಃ ॥ ೭ ॥

---

೩. ಓ ಚಂದ್ರದೇವ, ಸಮೃದ್ಧವೂ ಜಗತ್ತಿಗೆ ತಾಯಿಯಂತೆಯೂ ಇರುವ ಭೂಮಿಯನ್ನು ಗಂಗೆಯ ಸನ್ನಿಧಿಯಲ್ಲಿ ದಾನಮಾಡಿದರೆ ಎಂದರೆ ಭೂದಾನಮಾಡಿದರೆ ಇಷ್ಟಾರ್ಥಗಳೆಲ್ಲವೂ ಸಿದ್ಧಿಸುವುವು ಎಂದು ವೇದವನ್ನು ತಿಳಿದವರು ಹೇಳುವರು. ವೇದವಾಕ್ಯಗಳೂ ಹಾಗೆಯೇ ಹೇಳುವುವು.

೪-೫. ಸಸ್ಯಸಂಪನ್ನವಾದ ಭೂಮಿಯನ್ನೂ ಹಸುವನ್ನೂ ಓಷಧಿಗಳನ್ನೂ ಹರಿಹರಬ್ರಹ್ಮಸ್ವರೂಪನಾದ ಬ್ರಾಹ್ಮಣನಿಗೆ ದಾನಮಾಡಿದರೆ ಅಕ್ಷಯ ಪುಣ್ಯವು ಲಭಿಸುವುದು. ಇಹದಲ್ಲಿ ಇಷ್ಟಾರ್ಥಗಳೆಲ್ಲವೂ ಸಿದ್ಧಿಸುವುವು.

೬. ಓಷಧಿಗಳು ಚಂದ್ರನ ರಾಣಿಯರು. ಚಂದ್ರನು ಓಷಧಿಗಳ ಪತಿಯು. ಹೀಗೆ ತಿಳಿದು ಬ್ರಹ್ಮನಿಷ್ಠನಾದ ಬ್ರಾಹ್ಮಣನಿಗೆ ಓಷಧಿಗಳನ್ನು ದಾನ ಮಾಡುವವನು ಇಹದಲ್ಲಿ ಇಷ್ಟಾರ್ಥಗಳೆಲ್ಲವನ್ನೂ ಪಡೆಯುವನು. ಪರದಲ್ಲಿ ಬ್ರಹ್ಮಲೋಕವನ್ನು ಪಡೆದು ವಿಹರಿಸುವನು.

೭. ಆ ಓಷಧಿಗಳು ಪುನಃಪುನಃ ಸಂತೋಷದಿಂದ ಚಂದ್ರನನ್ನು ಕುರಿತು ಓ ಚಂದ್ರದೇವ, 'ಗಂಗೆಯ ಸನ್ನಿಧಿಯಲ್ಲಿ ನಮ್ಮನ್ನು ದಾನಮಾಡುವವನನ್ನು ನೀನು ಉದ್ಧರಿಸು.

॥ ಓಷಧ್ಯ ಊಚುಃ ॥

ಯೋಽಸ್ಮಾನ್ದದಾತಿ ಗಂಗಾಯಾಂ ತಂ ರಾಜನ್ಪಾರಯಾಮಸಿ ।
ತ್ವಮುತ್ತಮಶ್ಚೌಷಧೀಶ ತ್ವದಧೀನಂ ಚರಾಚರಂ ॥ ೮ ॥

ಓಷಧಯಃ ಸಂವದಂತೇ ಸೋಮೇನ ಸಹ ರಾಜ್ಞಾ ।
ಯೋಽಸ್ಮಾನ್ದದಾತಿ ವಿಪ್ರೇಭ್ಯಸ್ತಂ ರಾಜನ್ಪಾರಯಾಮಸಿ ॥ ೯ ॥

ವಯಂ ಚ ಬ್ರಹ್ಮರೂಪಿಣ್ಯಃ ಪ್ರಾಣರೂಪಿಣ್ಯ ಏವ ಚ ।
ಯೋಽಸ್ಮಾನ್ದದಾತಿ ವಿಪ್ರೇಭ್ಯಸ್ತಂ ರಾಜನ್ಪಾರಯಾಮಸಿ ॥ ೧೦ ॥

ಅಸ್ಮಾನ್ದದಾತಿ ಯೋ ನಿತ್ಯಂ ಬ್ರಾಹ್ಮಣೇಭ್ಯೋ ಜಿತವ್ರತಃ ।
ಉಪಾಸ್ತಿರಸ್ತಿ ಸಾಸ್ಮಾಕಂ ತಂ ರಾಜನ್ಪಾರಯಾಮಸಿ ॥ ೧೧ ॥

ಸ್ಥಾವರಂ ಜಂಗಮಂ ಕಿಂಚಿದಸ್ಮಾಭಿರ್ವ್ಯಾಪ್ತಂ ಜಗತ್ ।
ಯೋಽಸ್ಮಾನ್ದದಾತಿ ವಿಪ್ರೇಭ್ಯಸ್ತಂ ರಾಜನ್ಪಾರಯಾಮಸಿ ॥ ೧೨ ॥

೮-೯. ಓ ಸ್ವಾಮಿ, ನೀನು ಸರ್ವೋತ್ತಮನು. ಜಗತ್ತು ನಿನ್ನಧೀನದಲ್ಲಿರುವುದು. ಓಷಧಿಗಳಾದ ನಾವು ಹೀಗೆ ಪ್ರಾರ್ಥಿಸುವೆವು. ನಮ್ಮನ್ನು ಬ್ರಾಹ್ಮಣರಿಗೆ ದಾನಮಾಡುವವನನ್ನು ಪಾಲಿಸು.

೧೦. ನಾವು ಸೃಷ್ಟಿಕರ್ತನಾದ ಬ್ರಹ್ಮನ ಸ್ವರೂಪರು, ಪ್ರಾಣಸ್ವರೂಪಿಗಳು. ಇಂತಹ ನಮ್ಮನ್ನು ಬ್ರಾಹ್ಮಣರಿಗೆ ದಾನಮಾಡುವವನನ್ನು ನೀನು ಉದ್ಧರಿಸು.

೧೧. ನಮ್ಮನ್ನು ಬ್ರಾಹ್ಮಣನಿಗೆ ನಿಸ್ಪೃಹತೆಯಿಂದ ದಾನಮಾಡುವವನನ್ನು ನೀನು ಉದ್ಧರಿಸು. ನಮ್ಮನ್ನು ದಾನಮಾಡಿದರೆ ನಮ್ಮ ಸೇವೆಮಾಡಿದಂತಾಗುವುದು.

೧೨. ಸ್ಥಿರಚರರೂಪವಾದ ಜಗತ್ತೆಲ್ಲವನ್ನೂ ನಾವು ವ್ಯಾಪಿಸಿರುವೆವು. ಇಂತಹ ನಮ್ಮನ್ನು ಬ್ರಾಹ್ಮಣರಿಗೆ ದಾನಮಾಡುವವನನ್ನು ನೀನು ರಕ್ಷಿಸು.

ಹವ್ಯಂ ಕವ್ಯಂ ಯದಮೃತಂ ಯತ್ಕಿಂಚಿದುಪಭುಜ್ಯತೇ ।
ತದ್ಗರೀಯಶ್ಚ ಯೋ ದದ್ಯಾತ್ತಂ ರಾಜನ್ಪಾರಯಾಮುಷಿ ॥ ೧೩ ॥

ಇತ್ಯೇತಾಂ ವೈದಿಕೀಂ ಗಾಥಾಂ ಯಃ ಶೃಣೋತಿ ಸ್ಮರೇತ ವಾ ।
ಪಠತೇ ಭಕ್ತಿಮಾಪನ್ನಸ್ತಂ ರಾಜನ್ಪಾರಯಾಮುಷಿ ॥ ೧೪ ॥

॥ ಬ್ರಹ್ಮೋವಾಚ ॥

ಯತ್ರೈಷಾ ಪಠಿತಾ ಗಾಥಾ ಸೋಮೇನ ಸಹ ರಾಜ್ಞಾ ।
ಗಂಗಾತೀರೇ ಚೌಷಧೀಭಿರ್ಧಾನ್ಯತೀರ್ಥಂ ತದುಚ್ಯತೇ ॥ ೧೫ ॥

ತತಃ ಪ್ರಭೃತಿ ತತ್ತೀರ್ಥಮೌಷಧ್ಯಂ ಸೌಮ್ಯಮೇವ ಚ ।
ಅಮೃತಂ ವೇದಗಾಥಂ ಚ ಮಾತೃತೀರ್ಥಂ ತಥೈವ ಚ ॥ ೧೬ ॥

ಏಷು ಸ್ನಾನಂ ಜಪೋ ಹೋಮೋ ದಾನಂ ಚ ಪಿತೃತರ್ಪಣಂ ।
ಅನ್ನದಾನಂ ತು ಯಃ ಕುರ್ಯಾತ್ತದಾನಂತ್ಯಾಯ ಕಲ್ಪತೇ ೧೭ ॥

---

೧೩. ಯಜ್ಞಗಳನ್ನೂ ಪಿತೃಕರ್ಮಗಳನ್ನೂ ಮಾಡಿ ಹವ್ಯಕವ್ಯಗಳನ್ನು ಸೇವಿಸುವುದಕ್ಕಿಂತಲೂ ಓಷಧಿಗಳನ್ನು ದಾನಮಾಡುವುದು ಉತ್ತಮವಾದುದು. ಹಾಗೆ ಓಷಧಿದಾನಮಾಡುವವನನ್ನು ನೀನು ಉದ್ಧರಿಸು.

೧೪. ಓ ಚಂದ್ರದೇವ, ಈ ವೇದಗಾದೆಗಳನ್ನು ಭಕ್ತಿಯಿಂದ ಯಾವನು ಕೇಳುವನೋ ಸ್ಮರಿಸುವನೋ ಪಠಿಸುವನೋ ಅವನನ್ನೂ ನೀನು ಉದ್ಧರಿಸು ಎಂದು ಕೇಳಿಕೊಂಡವು.

೧೫. ಈ ವೇದಗಾದೆಯನ್ನು ಚಂದ್ರಗಂಗೆಯರ ಸನ್ನಿಧಿಯಲ್ಲಿ ಹೇಳಿದ ಸ್ಥಳವು ಧಾನ್ಯತೀರ್ಥವೆಂದು ಪ್ರಸಿದ್ಧವಾಗಿರುವುದು.

೧೬. ಆ ಮೊದಲುಗೊಂಡು ಆ ತೀರ್ಥಸ್ಥಳದಲ್ಲಿ ಓಷಧಿತೀರ್ಥ ಸೋಮತೀರ್ಥ ಅಮೃತತೀರ್ಥ ವೇದಗಾಥತೀರ್ಥ ಮಾತೃತೀರ್ಥಗಳೆಂಬ ಅನೇಕತೀರ್ಥಗಳಾದುವು.

೧೭. ಈ ತೀರ್ಥಗಳಲ್ಲಿ ಸ್ನಾನಜಪಹೋಮದಾನಪಿತೃತರ್ಪಣ ಅನ್ನದಾನಗಳನ್ನು ಮಾಡಿದರೆ ಅನಂತಪುಣ್ಯವು ಲಭಿಸುವುದು.

ಷಟ್ಶತಾಧಿಕಸಾಹಸ್ರಂ ತೀರ್ಥಾನಾಂ ತೀರಯೋರ್ದ್ವಯೋಃ ।
ಸರ್ವಪಾಪನಿಹಂತ್ರೂಣಾಂ ಸರ್ವಸಂಪದ್ವಿವರ್ಧನಂ ॥ ೧೮ ॥

ಇತಿ ಶ್ರೀ ಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಧಾನ್ಯತೀರ್ಥಾದಿಷಟ್ಶತಾಧಿಕಸಹಸ್ರತೀರ್ಥವರ್ಣನಂ ನಾಮ
ವಿಂಶತ್ಯಧಿಕಶತತಮೋಽಧ್ಯಾಯಃ

---

೧೮. ಈ ತೀರ್ಥಗಳ ಎರಡುತೀರಗಳಲ್ಲೂ ಅರವತ್ತುಸಾವಿರಕ್ಕೆ ಮೇಲ್ಪಟ್ಟುತೀರ್ಥಗಳಿರುವುವು. ಆ ತೀರ್ಥಗಳೆಲ್ಲವೂ ಪಾಪನಾಶಕವಾದುವುಗಳು. ಸಕಲ ಸಂಪತ್ತುಗಳನ್ನೂ ಉಂಟುಮಾಡುವುವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಧ್ಯಾನತೀರ್ಥವೇ ಮೊದಲಾದ ಆರುಸಾವಿರ
ತೀರ್ಥಗಳ ವರ್ಣನವೆಂಬ ನೂರಿಪ್ಪತ್ತನೆಯ
ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಐವತ್ತೊಂದನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಏಕವಿಂಶತ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ವಿದರ್ಭಾಸಂಗಮಂ ಪುಣ್ಯಂ ರೇವತೀಸಂಗಮಂ ತಥಾ ।
ತತ್ರ ಯದ್ವೃತ್ತಮಾಖ್ಯಾಸ್ಯೇ ಯತ್ಪುರಾಣವಿದೋ ವಿದುಃ ॥ ೧ ॥

ಭರದ್ವಾಜ ಇತಿ ಖ್ಯಾತ ಋಷಿರಾಸೀತ್ತಪೋಧಿಕಃ ।
ತಸ್ಯ ಸ್ವಸಾ ರೇವತೀತಿ ಕುರೂಪಾ ವಿಕೃತಸ್ವರಾ ॥ ೨ ॥

ನೂರಿಪ್ಪತ್ತೊಂದನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ವಿದರ್ಭಾಸಂಗಮ ರೇವತೀಸಂಗಮಗಳೆಂಬ ಪುಣ್ಯತೀರ್ಥಗಳಿರುವುವು. ಆ ತೀರ್ಥಗಳ ಮಾಹಾತ್ಮ್ಯವನ್ನು ಹೇಳುವೆನು.

೨. ಹಿಂದೆ ಭರದ್ವಾಜನೆಂಬ ತಪಸ್ವಿಯಿದ್ದನು. ಅವನಿಗೆ ರೇವತಿಯೆಂಬ ಸಹೋದರಿಯಿದ್ದಳು. ಅವಳು ಕುರೂಪಿಯಾಗಿದ್ದಳು. ಮಾತನಾಡುವಾಗ ಅವಳ ಧ್ವನಿಯು ಕರ್ಕಶವಾಗಿಯೂ ಕರ್ಣಕಠೋರವಾಗಿಯೂ ಇದ್ದಿತು.

ತಾಂ ದೃಷ್ಟ್ವಾ ವಿಕೃತಾಂ ಭ್ರಾತಾ ಭರದ್ವಾಜಃ ಪ್ರತಾಪವಾನ್ ।
ಚಿಂತಯಾ ಪರಯಾ ಯುಕ್ತೋ ಗಂಗಾಯಾ ದಕ್ಷಿಣೇ ತಟೇ ॥ ೩ ॥

ಕಸ್ಮೈ ದದ್ಯಾಮಿಮಾಂ ಕನ್ಯಾಂ ಸ್ವಸಾರಂ ಭೀಷಣಾಕೃತಿಂ ।
ನ ಕಶ್ಚಿತ್ಪ್ರತಿಗೃಹ್ಣಾತಿ ದಾತವ್ಯಾ ಚ ಸ್ವಸಾ ತಥಾ ॥ ೪ ॥

ಅಹೋ ಭೂಯಾನ್ನ ಕಸ್ಯಾಪಿ ಕನ್ಯಾ ದುಃಖೈಕಕಾರಣಂ ।
ಮರಣಂ ಜೀವತೋಽಪ್ಯಸ್ಯ ಪ್ರಾಣಿನಸ್ತು ಪದೇ ಪದೇ ॥ ೫ ॥

ಏವಂ ವಿಮೃಶತಸ್ತಸ್ಯ ಸ್ವಾಶ್ರಮೇ ಚಾತಿಶೋಭನೇ ।
ದ್ರಷ್ಟುಂ ಮುನಿವರಃ ಪ್ರಾಯಾದ್ಭರದ್ವಾಜಂ ಯತವ್ರತಂ ॥ ೬ ॥

ದ್ವ್ಯಷ್ಟವರ್ಷಃ ಶುಭವಪುಃ ಶಾಂತೋ ದಾಂತೋ ಗುಣಾಕರಃ ।
ನಾಮ್ನಾ ಕಠ ಇತಿ ಖ್ಯಾತೋ ಭರದ್ವಾಜಂ ನನಾಮ ಸಃ ॥ ೭ ॥

---

೩. ಗೌತಮೀನದಿಯ ದಕ್ಷಿಣತೀರದಲ್ಲಿ ಆ ಭರದ್ವಾಜರೇವತಿಯರು ವಾಸಿಸುತ್ತಿದ್ದರು. ಕುರೂಪಿಯಾದಾ ಸಹೋದರಿಯನ್ನು ನೋಡಿ ಭರದ್ವಾಜನು ಬಹಳವಾಗಿ ಚಿಂತಿಸುತ್ತಿದ್ದನು.

೪. ಈ ನನ್ನ ಸಹೋದರಿಯನ್ನು ಯಾರಿಗೆ ಮದುವೆಮಾಡಿ ಕೊಡಲಿ? ಕುರೂಪಿಯಾದ ಇವಳನ್ನು ಯಾರೂ ಮದುವೆಯಾಗಲು ಇಷ್ಟಪಡುವುದಿಲ್ಲ. ಆದರೂ ಕನ್ಯೆಯಾದಿವಳನ್ನು ಮದುವೆಮಾಡಿ ಕೊಡಲೇಬೇಕು.

೫. ಆಹಾ!! ದುಃಖವನ್ನುಂಟುಮಾಡುವ ಇಂತಹ ಕನ್ಯೆಯು ಯಾರಿಗೂ ಜನಿಸಬಾರದು. ಇಂತಹ ಕನ್ಯೆಯನ್ನು ಹಡೆದವನು ಜೀವಿಸಿದ್ದರೂ ಸತ್ತಂತೆಯೇ.

೬. ಹೀಗೆ ಭರದ್ವಾಜನು ಚಿಂತಿಸುತ್ತಿರಲು ಅವನ ಪುಣ್ಯಾಶ್ರಮಕ್ಕೆ ಭರದ್ವಾಜನನ್ನು ನೋಡಲು ಕಠನೆಂಬ ಓರ್ವ ಮುನಿಕುಮಾರನು ಬಂದನು.

೭. ಆ ಕಠನು ಹದಿನಾರುವರ್ಷದ ತರುಣನಾಗಿದ್ದು ಸುಂದರನಾಗಿದ್ದನು. ಶಾಂತನೂ ಜಿತೇಂದ್ರಿಯನೂ ಗುಣವಂತನೂ ಆಗಿದ್ದನು. ಇಂತಹ ಆ ಮುನಿಕುಮಾರನು ಬಂದು ಭರದ್ವಾಜನನ್ನು ನಮಸ್ಕರಿಸಿದನು.

ವಿಧಿವತ್ಪೂಜ್ಯ ತಂ ವಿಪ್ರಂ ಭರದ್ವಾಜಃ ಕಠಂ ತದಾ ।
ತಸ್ಯಾಗಮನಕಾರ್ಯಂ ಚ ಪಪ್ರಚ್ಛ ಪುರತಃ ಸ್ಥಿತಃ ॥ ೮ ॥

ಕಠೋಽಸ್ಯಾಹ ಭರದ್ವಾಜಂ ವಿದ್ಯಾರ್ಥ್ಯಹಮುಪಾಗತಃ ।
ತಥಾಚ ದರ್ಶನಾಕಾಂಕ್ಷೀ ಯದ್ಯುಕ್ತಂ ತದ್ವಿಧೀಯತಾಂ ॥ ೯ ॥

ಭರದ್ವಾಜಃ ಕಠಂ ಪ್ರಾಹ ಅಧೀಷ್ವ ಯದಭೀಪ್ಸಿತಂ ।
ಪುರಾಣಂ ಸ್ಮೃತಯೋ ವೇದಾ ಧರ್ಮಶಾಸ್ತ್ರಾಣ್ಯನೇಕಶಃ ॥ ೧೦ ॥

ಸರ್ವಂ ವೇದ್ಮಿ ಮಹಾಪ್ರಾಜ್ಞ ರುಚಿರಂ ವದ ಮಾ ಚಿರಂ ।
ಕುಲೀನೋ ಧರ್ಮನಿರತೋ ಗುರುಶುಶ್ರೂಷಣೇ ರತಃ ।
ಅಭಿಮಾನೀ ಶ್ರುತಧರಃ ಪುಣ್ಯೈರವಾಪ್ಯತೇ ॥ ೧೧ ॥

॥ ಕಠ ಉವಾಚ ॥

ಅಧ್ಯಾಪಯಸ್ವ ಭೋ ಬ್ರಹ್ಮನ್ ಶಿಷ್ಯಂ ಮಾಂ ವೀತಕಲ್ಮಷಂ ।
ಶುಶ್ರೂಷಣರತಂ ಭಕ್ತಂ ಕುಲೀನಂ ಸತ್ಯವಾದಿನಂ ॥ ೧೨ ॥

---

೮. ಆ ಕಠನನ್ನು ಭರದ್ವಾಜನು ವಿಧಿವತ್ತಾಗಿ ಸತ್ಕರಿಸಿ ಬಂದ ಕಾರ್ಯವೇನೆಂದು ಕೇಳಿದನು.

೯. ಅದಕ್ಕೆ ಕಠನು ಭರದ್ವಾಜನಿಗೆ ನಾನು ವಿದ್ಯಾರ್ಥಿಯಾಗಿ ನಿನ್ನ ಬಳಿಗೆ ಬಂದಿರುವೆನು. ನಿಮಗೆ ಸೂಕ್ತತೋರಿದಂತೆ ಮಾಡಬಹುದು ಎಂದನು.

೧೦. ಅದಕ್ಕೆ ಭರದ್ವಾಜನು ಬೇಕಾದುದನ್ನು ನನ್ನಲ್ಲಿ ಓದು. ಪುರಾಣ ಸ್ಮೃತಿಗಳು ವೇದಗಳು ಮೊದಲಾದ ಧರ್ಮಪರವಾದ ವಿದ್ಯೆಗಳೆಲ್ಲವನ್ನೂ ಬಲ್ಲೆನು. ನಿನಗಿಷ್ಟವಾದುದೆಲ್ಲವನ್ನೂ ವ್ಯಾಸಂಗಮಾಡು.

೧೧. ಶಿಷ್ಯನು ಕುಲೀನನಾಗಿರಬೇಕು. ಧರ್ಮಪರನಾಗಿರಬೇಕು, ಗುರು ಸೇವೆಯಲ್ಲಿ ನಿರತನಾಗಿರಬೇಕು, ವಿದ್ಯಾಭಿಮಾನಿಯಾಗಿರಬೇಕು, ಹೇಳಿಕೊಟ್ಟದ್ದನ್ನು ಮರೆಯದೆ ಕಲಿತು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಇಂತಹ ಶಿಷ್ಯನು ಅದೃಷ್ಟದಿಂದಲೇ ಲಭಿಸುವನು ಎಂದನು.

೧೨. ಅದನ್ನು ಕೇಳಿ ಓ ಬ್ರಾಹ್ಮಣೋತ್ತಮ, ನಾನು ವಿನೀತನಾಗಿ ನಿನ್ನನ್ನು ಸೇವಿಸುವೆನು. ಪರಿಶುದ್ಧನೂ ವಿದ್ಯಾರ್ಥಿಯೂ ಕುಲೀನನೂ ಸತ್ಯವಾದಿಯೂ ಆದ ನನಗೆ ದಯವಿಟ್ಟು ವಿದ್ಯೆಯನ್ನು ಹೇಳಿಕೊಡು ಎಂದು ಪ್ರಾರ್ಥಿಸಿದನು.

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಭರದ್ವಾಜಃ ಪ್ರಾದಾದ್ವಿದ್ಯಾಮಶೇಷತಃ ।
ಪ್ರಾಪ್ತವಿದ್ಯಃ ಕಠಃ ಪ್ರೀತೋ ಭರದ್ವಾಜಮಥಾಬ್ರವೀತ್ ॥ ೧೩ ॥

॥ ಕಠ ಉವಾಚ ॥

ಇಚ್ಛೇಯಂ ದಕ್ಷಿಣಾಂ ದಾತುಂ ಗುರೋ ತವ ಮನಃಪ್ರಿಯಾಂ ।
ವದಸ್ವ ದುರ್ಲಭಂ ವಾಪಿ ಗುರೋ ತುಭ್ಯಂ ನಮೋಽಸ್ತು ತೇ ॥ ೧೪ ॥

ವಿದ್ಯಾಂ ಪ್ರಾಪ್ಯಾಪಿ ಯೇ ಮೋಹಾತ್ಸ್ವಗುರೋಃ ಪಾರಿತೋಷಿಕಂ ।
ನ ಪ್ರಯಚ್ಛಂತಿ ನಿರಯಂ ತೇ ಯಾಂತ್ಯಾಚಂದ್ರತಾರಕಂ ॥ ೧೫ ॥

॥ ಭರದ್ವಾಜ ಉವಾಚ ॥

ಗೃಹಾಣ ಕನ್ಯಾಂ ವಿಧಿವದ್ಭಾರ್ಯಾಂ ಕುರು ಮಮ ಸ್ವಸಾಂ ।
ಅಸ್ಯಾಂ ಪ್ರೀತ್ಯಾ ವರ್ತಿತವ್ಯಂ ಯಾಚೇಯಂ ದಕ್ಷಿಣಾಮಿಮಾಂ ॥ ೧೬ ॥

---

೧೩. ಭರದ್ವಾಜನು ಆಗಲೆಂದೊಪ್ಪಿ ಕಠನಿಗೆ ವಿದ್ಯೆಯೆಲ್ಲವನ್ನೂ ಉಪದೇಶಮಾಡಿದನು. ವಿದ್ಯಾವಂತನಾಗಿ ಕಠನು ಸಂತಸದಿಂದ ಭರದ್ವಾಜನನ್ನು ಕುರಿತು,

೧೪. ಓ ಗುರುವೇ, ನಿನಗೆ ಇಷ್ಟವಾದ ಗುರುದಕ್ಷಿಣೆಯನ್ನು ಕೊಡಲಪೇಕ್ಷೆಯಿರುವುದು. ನಿನಗೇನುಬೇಕೆಂಬುವುದನ್ನು ಹೇಳು. ಅಸಾಧ್ಯವಾದುದಾದರೂ ತಂದು ಕೊಡುವೆನು. ಇಗೋ ನಿನಗೆ ನಮಸ್ಕಾರವು.

೧೫. ವಿದ್ಯೆಯನ್ನು ಪಡೆದೂ ಗುರುವಿಗೆ ಲೋಭದಿಂದ ಗುರುದಕ್ಷಿಣೆಯನ್ನು ಕೊಡದವರು ಚಂದ್ರನಕ್ಷತ್ರಗಳಿರುವವರೆಗೆ ನರಕದಲ್ಲಿ ಕೊಳೆಯುವರು ಎಂದನು.

೧೬. ಭರದ್ವಾಜನು ಹೇಳಿದನು—ಎಲೈ ಕಠಕುಮಾರ, ಕನ್ನೆಯಾದ ನನ್ನ ಈ ಸಹೋದರಿಯನ್ನು ವಿಧಿವತ್ತಾಗಿ ಮದುವೆಯಾಗು. ಇವಳಲ್ಲಿ ಪ್ರೀತಿಯಿಂದ ಇರಬೇಕು. ಇದೇ ನೀನು ನನಗೆ ಕೊಡಬೇಕಾದ ಗುರುದಕ್ಷಿಣೆಯು ಎಂದನು.

॥ ಕಠ ಉವಾಚ ॥
ಭ್ರಾತೃವತ್ಪುತ್ರವಚ್ಚಾಪಿ ಶಿಷ್ಯಃ ಸ್ಯಾತ್ತು ಗುರೋಃ ಸದಾ ।
ಗುರುಶ್ಚ ಪಿತೃವಚ್ಚ ಸ್ಯಾತ್ಸಂಬಂಧೋಽತ್ರ ಕಥಂ ಭವೇತ್ ॥ ೧೭ ॥

॥ ಭರದ್ವಾಜ ಉವಾಚ ॥
ಮದ್ವಾಕ್ಯಂ ಕುರು ಸತ್ಯಂ ತ್ವಂ ಮಮಾಜ್ಞಾ ತವ ದಕ್ಷಿಣಾ ।
ಸರ್ವಂ ಸ್ಮೃತ್ವಾ ಕಠಾದ್ಯ ತ್ವಂ ರೇವತೀಂ ಭರ ತನ್ಮನಾಃ ॥ ೧೮ ॥

॥ ಬ್ರಹ್ಮೋವಾಚ ॥
ತಥೇತ್ಯುಕ್ತ್ವಾ ಗುರೋರ್ವಾಕ್ಯಾತ್ಕಠೋ ಜಗ್ರಾಹ ಪಾಣಿನಾ ।
ರೇವತೀಂ ವಿಧಿವದ್ದತ್ತಾಂ ತಾತ ಸನ್ನಿರೀಕ್ಷ್ಯ ಕಠಸ್ತ್ವಥ ॥ ೧೯ ॥

ತತ್ರೈವ ಪೂಜಯಾಮಾಸ ದೇವೇಶಂ ಶಂಕರಂ ತದಾ ।
ರೇವತ್ಯಾ ರೂಪಸಂಪತ್ತ್ಯೈ ಶಿವಪ್ರೀತ್ಯೈ ಚ ರೇವತೀ ॥ ೨೦ ॥

---

೧೭. ಅದಕ್ಕೆ ಗುರುವಿಗೆ ಶಿಷ್ಯನು ಸಹೋದರನಿಗೆ ಸಮಾನನು. ಪುತ್ರ ಸಮಾನನು. ಶಿಷ್ಯನಿಗೆ ಗುರುವು ತಂದೆಯ ಸಮಾನನು. ಹೀಗಿರಲು ನಿನ್ನ ಸಹೋದರಿಯನ್ನು ನಾನು ಮದುವೆಯಾಗುವುದು ಹೇಗೆ ? ಸಂಬಂಧವು ನ್ಯಾಯವಾಗಲಾರದು ಎನ್ನಲು,

೧೮. ಭರಧ್ವಾಜನು—ಎಲೈ ಕಠ, ನನ್ನ ಮಾತನ್ನು ನಡೆಸು. ನನ್ನಾಜ್ಞೆಯೇ ನಿನ್ನ ಗುರುದಕ್ಷಿಣೆಯು. ಧರ್ಮವನ್ನು ಸ್ಮರಿಸಿ ಈ ರೇವತಿಯನ್ನು ಮದುವೆಯಾಗು. ಪ್ರೀತಿಯಿಂದ ಅವಳನ್ನು ಸಲಹು ಎಂದನು.

೧೯. ಕಠನು ಗುರುವಿನ ಮಾತನ್ನಂಗೀಕರಿಸಿ ರೇವತಿಯನ್ನು ವಿಧಿವತ್ತಾಗಿ ಮದುವೆಯಾದನು.

೨೦. ಆಮೇಲೆ ಕಠನು ರೇವತಿಯು ರೂಪವತಿಯಾಗಲೋಸುಗ ಅಲ್ಲಿಯೇ ದೇವದೇವನಾದ ಶಂಕರನನ್ನು ಪೂಜಿಸಿದನು. ಶಿವನ ಪ್ರಸನ್ನತೆಗಾಗಿ ರೇವತಿಯೂ ಪೂಜಿಸಿದಳು. ಶಿವನ ಅನುಗ್ರಹದಿಂದ ರೇವತಿಯು ತನ್ನ ಸಾಟಿಯಿಲ್ಲದಂತಹ ರೂಪವತಿಯೂ ಸುಂದರಿಯೂ ಆದಳು. ಗೌತಮೀಜಲದಿಂದ ಕಠನು ರೇವತಿಗೆ ಅಭಿಷೇಕಮಾಡಿಸಿದನು

ಸುರೂಪಾ ಚಾರುಸರ್ವಾಂಗೀ ನ ರೂಪೇಣೋಪಮೀಯತೇ ।
ಅಭಿಷೇಕೋದಕಂ ತತ್ರ ರೇವತ್ಯಾ ಯದ್ವಿನಿಃಸೃತಂ ॥ ೨೧ ॥

ಸಾಭವತ್ತತ್ರ ಗಂಗಾಯಾಂ ತಸ್ಮಾತ್ತನ್ನಾಮತೋ ನದೀ ।
ರೇವತೀತಿ ಸಮಾಖ್ಯಾತಾ ರೂಪಸೌಭಾಗ್ಯದಾಯಿನೀ ॥ ೨೨ ॥

ಪುನರ್ದರ್ಭೈಃಶ್ಚ ವಿವಿಧೈರಭಿಷೇಕಂ ಚಕಾರ ಸಃ ।
ಪುಣ್ಯರೂಪತ್ವಸಂಸಿದ್ಧ್ಯೈ ವಿದರ್ಭಾ ತದಭೂನ್ನದೀ ॥ ೨೩ ॥

ಶ್ರದ್ಧಯಾ ಸಂಗಮೇ ಸ್ನಾತ್ವಾ ರೇವತೀಗಂಗಯೋರ್ನರಃ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕೇ ಮಹೀಯತೇ ॥ ೨೪ ॥

ತಥಾ ವಿದರ್ಭಾಗೌತಮ್ಯೋಃ ಸಂಗಮೇ ಶ್ರದ್ಧಯಾ ಮುನೇ ।
ಸ್ನಾನಂ ಕರೋತ್ಯಸೌ ಯಾತಿ ಭುಕ್ತಿಂ ಮುಕ್ತಿಂ ಚ ತತ್ಕ್ಷಣಾತ್ ॥ ೨೫ ॥

೨೧-೨೨. ರೇವತಿಯ ಶರೀರದಿಂದ ಕೆಳಗೆ ಬಿದ್ದ ಜಲವು ರೇವತಿಯ ಹೆಸರಿನಿಂದ ನದಿಯಾಗಿ ಗೌತಮಿಯಲ್ಲಿ ಸೇರಿತು. ಆ ರೇವತೀನದಿಯಲ್ಲಿ ಸ್ನಾನ ಮಾಡಿದರೆ ರೂಪಸೌಂದರ್ಯಗಳು ಲಭಿಸುವುವು.

೨೩. ಪುನಃ ಆ ಕಠನು ರೇವತಿಯ ರೂಪವು ಪರಿಶುದ್ಧವಾಗಲೋಸುಗ ವಿವಿಧದರ್ಭೆಗಳಿಂದ ರೇವತಿಗೆ ಜಲವನ್ನು ಅಭಿಷೇಕಿಸಿದನು. ಆ ಅಭಿಷೇಕಜಲ ದಿಂದ ವಿದರ್ಭಾ ಎಂಬ ನದಿಯು ಜನಿಸಿ ಗಂಗೆಯಲ್ಲಿ ಸೇರಿತು.

೨೪. ಗೌತಮೀನದಿಯಲ್ಲಿನ ರೇವತೀಸಂಗಮ ಸ್ಥಳದಲ್ಲಿ ಶ್ರದ್ಧೆಯಿಂದ ಸ್ನಾನಮಾಡಿದವನು ಪಾಪಗಳೆಲ್ಲವನ್ನೂ ಕಳೆದುಕೊಂಡು ವಿಷ್ಣುಲೋಕವನ್ನು ಪಡೆದು ವಿಹರಿಸುವನು.

೨೫. ಮತ್ತು ವಿದರ್ಭಾಗೌತಮಿಗಳ ಸಂಗಮಸ್ಥಳದಲ್ಲಿ ಶ್ರದ್ಧೆಯಿಂದ ಸ್ನಾನಮಾಡುವವನು ಭೋಗಮೋಕ್ಷಗಳೆರಡನ್ನೂ ಪಡೆಯುವನು.

ಉಭಯೋಸ್ತೀರಯೋಸ್ತತ್ರ ತೀರ್ಥಾನಾಂ ಶತಮುತ್ತಮಂ ।
ಸರ್ವಪಾಪಕ್ಷಯಕರಂ ಸರ್ವಸಿದ್ಧಿಪ್ರದಾಯಕಂ ॥ ೨೬ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ವಿದರ್ಭಾಸಂಗಮರೇವತೀಸಂಗಮಾದಿತೀರ್ಥವರ್ಣನಂ
ನಾಮೈಕವಿಂಶತ್ಯಧಿಕಶತತಮೋಽಧ್ಯಾಯಃ

---

೨೬. ಎಲೈ ನಾರದ, ಆ ರೇವತೀಸಂಗಮಗಳ ಎರಡುತೀರಗಳಲ್ಲೂ ನೂರಾರು ಶ್ರೇಷ್ಠತೀರ್ಥಗಳಿರುವುವು. ಆ ತೀರ್ಥದಲ್ಲಿ ಸ್ನಾನಮಾಡಿದರೆ ಪಾಪವೆಲ್ಲವೂ ನಾಶವಾಗುವುದು. ಸಕಲ ಸಿದ್ಧಿಗಳೂ ಲಭಿಸುವುವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ವಿದರ್ಭಾಸಂಗಮ ರೇವತೀಸಂಗಮ ಮೊದಲಾದ ತೀರ್ಥಗಳ ವರ್ಣನವೆಂಬ ನೂರಿಪ್ಪತೊಂದನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ಐವತ್ತೆರಡನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ದ್ವಾವಿಂಶತ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಪೂರ್ಣತೀರ್ಥಮಿತಿ ಖ್ಯಾತಂ ಗಂಗಾಯಾ ಉತ್ತರೇ ತಟೇ ।
ತತ್ರ ಸ್ನಾತ್ವಾ ನರೋಽಜ್ಞಾನಾತ್ತಥಾಪಿ ಶುಭಮಾಪ್ನುಯಾತ್ ॥ ೧ ॥

ಪೂರ್ಣತೀರ್ಥಸ್ಯ ಮಾಹಾತ್ಮ್ಯಂ ವರ್ಣ್ಯತೇ ಕೇನ ಜಂತುನಾ ।
ಸ್ವಯಂ ಸಂಸ್ಥೀಯತೇ ಯತ್ರ ಚಕ್ರಿಣಾ ಚ ಪಿನಾಕಿನಾ ॥ ೨ ॥

ನೂರಿಪ್ಪತ್ತೆರಡನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಗೌತಮೀನದಿಯ ಉತ್ತರತೀರದಲ್ಲಿ ಪೂರ್ಣತೀರ್ಥವೆಂಬ ತೀರ್ಥವಿರುವುದು; ಅಜ್ಞಾನದಿಂದಲೇ ಆಗಲಿ ಆ ತೀರ್ಥದಲ್ಲಿ ಸ್ನಾನಮಾಡಿದರೆ ಶುಭಫಲವು ಲಭಿಸುವುದು.

೨. ಪೂರ್ಣತೀರ್ಥದ ಮಾಹಾತ್ಮ್ಯವನ್ನು ಯಾವನೂ ವರ್ಣಿಸಲಾರನು. ಆ ತೀರ್ಥದಲ್ಲಿ ವಿಷ್ಣುಮಹೇಶ್ವರರು ಸಾಕ್ಷಾತ್ ನೆಲಸಿರುವರು.

ಪುರಾ ಧನ್ವಂತರಿರ್ನಾಮ ಕಲ್ಪಾದಾವಾಯುಷಃ ಸುತಃ ।
ಇಷ್ಟ್ವಾ ಬಹುವಿಧೈರ್ಯಜ್ಞೈರಶ್ವಮೇಧಪುರಃಸರೈಃ ॥ ೩ ॥

ದತ್ವಾ ದಾನಾನ್ಯನೇಕಾನಿ ಭುಕ್ತ್ವಾ ಭೋಗಾಂಶ್ಚ ಪುಷ್ಕಲಾನ್ ।
ವಿಜ್ಞಾಯ ಭೋಗನೈಷ್ಫಲ್ಯಂ ಪರಂ ವೈರಾಗ್ಯಮಾಶ್ರಿತಃ ॥ ೪ ॥

ಗಿರಿಶೃಂಗೇಽಂಬುಧೇಃ ಪಾರೇ ತಥಾ ಗಂಗಾನದೀತಟೇ ।
ಶಿವವಿಷ್ಣ್ವೋರ್ಗೃಹೇ ವಾಪಿ ವಿಶೇಷಾತ್ಪುಣ್ಯಸಂಗಮೇ ॥ ೫ ॥

ತಪ್ತಂ ಹುತಂ ಚ ಜಪ್ತಂ ಚ ಸರ್ವಮಕ್ಷಯತಾಂ ವ್ರಜೇತ್ ।
ಧನ್ವಂತರಿರಿತಿ ಜ್ಞಾತ್ವಾ ತತ್ರ ತೇಪೇ ತಪೋ ಮಹತ್ ॥ ೬ ॥

ಜ್ಞಾನವೈರಾಗ್ಯಸಂಪನ್ನೋ ಭೀಮೇಶಚರಣಾಶ್ರಯಃ ।
ತಪಶ್ಚಕಾರ ವಿಪುಲಂ ಗಂಗಾಸಾಗರಸಂಗಮೇ ॥ ೭ ॥

೩–೪. ಹಿಂದೆ ಕಲ್ಪದ ಆದಿಯಲ್ಲಿ ಧನ್ವಂತರಿಯೆಂಬುವನಿದ್ದನು. ಅವನು ಆಯುಸ್ಸು ಎಂಬುವವನ ಮಗನು. ಆ ಧನ್ವಂತರಿಯು ಅಶ್ವಮೇಧ ಮೊದಲಾದ ಅನೇಕ ಯಾಗಗಳನ್ನು ಮಾಡಿ ದಾನಗಳನ್ನು ಹೇರಳವಾಗಿ ಮಾಡಿದನು. ಬೇಕಾದಂತಹ ಭೋಗಗಳನ್ನನುಭವಿಸಿದನು. ಕೊನೆಗೆ ಭೋಗಗಳಿಂದ ಮನುಷ್ಯನು ಅಧೋಗತಿಗಿಳಿಯುವನೆಂದು ತಿಳಿದು ಆ ಧನ್ವಂತರಿಯು ತುಂಬಾ ವೈರಾಗ್ಯವುಳ್ಳವನಾದನು.

೫-೭. ಬೆಟ್ಟದ ಶಿಖರ, ಸಮುದ್ರದತೀರ, ಗಂಗಾತೀರ, ಶಿವವಿಷ್ಣುದೇವಾಲಯಗಳು, ಪವಿತ್ರವಾದ ಸಂಗಮಸ್ಥಳಗಳು ಇವುಗಳಲ್ಲಿ ತಪಸ್ಸು ಹೋಮ ಜಪಗಳನ್ನು ಮಾಡಿದರೆ ಅಕ್ಷಯಪುಣ್ಯವು ಲಭಿಸುವುದೆಂದು ತಿಳಿದು ಆ ಧನ್ವಂತರಿಯು ಸಂಗಮಸ್ಥಳದಲ್ಲಿ ಕುಳಿತು ಜ್ಞಾನವೈರಾಗ್ಯಗಳಿಂದ ಕೂಡಿ ಶಿವನಲ್ಲಿ ನಟ್ಟಮನಸ್ಸುಳ್ಳವನಾಗಿ ಘೋರ ತಪವನ್ನಾಚರಿಸಿದನು.

ಪುರಾ ಚ ನಿಕೃತೋ ರಾಜ್ಞಾ ರಣಂ ಹಿತ್ವಾ ಮಹಾಸುರಃ ।
ಸಹಸ್ರಮೇಕಂ ವರ್ಷಾಣಾಂ ಸಮುದ್ರಂ ಪ್ರಾವಿಶದ್ಭಯಾತ್ ॥ ೮ ॥

ಧನ್ವಂತರೌ ವನಂ ಪ್ರಾಪ್ತೇ ರಾಜ್ಯಂ ಪ್ರಾಪ್ತೇ ತು ತತ್ಸುತೇ ।
ವಿರಾಗಂ ಚ ಗತೇ ರಾಜ್ಞಿ ತತಃ ಪ್ರಾಯಾದಥಾರ್ಣವಾತ್ ॥ ೯ ॥

ತಪಸ್ಯಂತಂ ತಮೋ ನಾಮ ಬಲವಾನಸುರೋ ಮುನೇ ।
ಗಂಗಾತೀರಂ ಸಮಾಶ್ರಿತ್ಯ ರಾಜಾ ಧನ್ವಂತರಿರ್ಯತಃ ॥ ೧೦ ॥

ಜಪಹೋಮರತೋ ನಿತ್ಯಂ ಬ್ರಹ್ಮಜ್ಞಾನಪರಾಯಣಃ ।
ತಂ ರಿಪುಂ ನಾಶಯಾಮೀತಿ ತಮಃ ಪ್ರಾಯಾದಥಾರ್ಣವಾತ್ ॥ ೧೧ ॥

ನಾಶಿತೋ ಬಹುಶೋऽನೇನ ರಾಜ್ಞಾ ಬಲವತಾ ತ್ವಹಂ ।
ತಂ ರಿಪುಂ ನಾಶಯಾಮೀತಿ ತಮಃ ಪ್ರಾಯಾದಥಾರ್ಣವಾತ್ ॥ ೧೨ ॥

---

೮. ಹಿಂದೆ ಧನ್ವಂತರಿರಾಜನು ತಮನೆಂಬ ಅಸುರನನ್ನು ಜಯಿಸಿ ಓಡಿಸಿದ್ದನು. ಆ ಅಸುರನು ಭಯದಿಂದ ಸಮುದ್ರದಲ್ಲಿ ಅವಿತುಕೊಂಡು ಒಂದಸಾವಿರ ವರ್ಷಗಳವರೆಗೆ ಅಲ್ಲಿಯೇ ವಾಸವಾಗಿದ್ದನು.

೯. ಮುಂದೆ ಧನ್ವಂತರಿಯು ವೈರಾಗ್ಯಹೊಂದಿ ರಾಜ್ಯವನ್ನು ಬಿಟ್ಟು ಕಾಡಿಗೆ ಹೋದಬಳಿಕ ಧನ್ವಂತರಿಯ ಪುತ್ರನು ರಾಜ್ಯವಾಳತೊಡಗಿದನು. ಆಗ ಆ ತಮಾಸುರನು,

೧೦–೧೧. ಈ ಧನ್ವಂತರಿಯು ಗಂಗಾತೀರದಲ್ಲಿ ಜಪಹೋಮಗಳನ್ನು ಮಾಡುತ್ತಾ ಆತ್ಮಚಿಂತನೆಯನ್ನು ಮಾಡುತ್ತಾ ತಪವನ್ನಾಚರಿಸುತ್ತಿರುವನು. ತನ್ನ ಶತ್ರುವಾದೀ ಧನ್ವಂತರಿಯನ್ನು ನಾಶಮಾಡುವೆನು.

೧೨. ಬಲಿಷ್ಠನಾದೀರಾಜನು ಹಿಂದೆ ನನ್ನನ್ನು ಅನೇಕ ವಿಧವಾಗಿ ಪೀಡಿಸಿರುವನು. ಇಂತಹ ಶತ್ರುವನ್ನು ಈಗ ನಾಶಮಾಡುವೆನು ಎಂದು ನಿಶ್ಚಯಿಸಿ ತಮಾಸುರನು ಸಮುದ್ರದಿಂದ ಹೊರಟುಬಂದನು.

ಮಾಯಂಪಾ ಪ್ರಮದಾರೂಪಂ ಕೃತ್ವಾ ರಾಜಾನಮಭ್ಯಗಾತ್ ।
ನೃತ್ಯಗೀತವತೀ ಸುಭ್ರೂರ್ಹಸಂತೀ ಚಾರುದರ್ಶನಾ ॥ ೧೩ ॥

ತಾಂ ದೃಷ್ಟ್ವಾ ಚಾರುಸರ್ವಾಂಗೀಂ ಬಹುಕಾಲಂ ನಯಾನ್ವಿತಾಂ ।
ಶಾಂತಾಮನುವ್ರತಾಂ ಭಕ್ತಾಂ ಕೃಪಯಾ ಚಾಬ್ರವೀನ್ನೃಪಃ ॥ ೧೪ ॥

॥ ನೃಪ ಉವಾಚ ॥

ಕಾಸಿ ತ್ವಂ ಕಸ್ಯ ಹೇತೋರ್ವಾ ವರ್ತಸೇ ಗಹನೇ ವನೇ ।
ಕಂ ದೃಷ್ಟ್ವಾ ಹರ್ಷಸೀವ ತ್ವಂ ವದ ಕಲ್ಯಾಣಿ ಪೃಚ್ಛತೇ ॥ ೧೫ ॥

॥ ಬ್ರಹ್ಮೋವಾಚ ॥

ಪ್ರಮದಾ ಚಾಪಿ ತದ್ವಾಕ್ಯಂ ಶ್ರುತ್ವಾ ರಾಜಾನಮಬ್ರವೀತ್ ॥ ೧೬ ॥

॥ ಪ್ರಮದೋವಾಚ ॥

ತ್ವಯಿ ತಿಷ್ಠತಿ ಕೋ ಲೋಕೇ ಹೇತುರ್ಹರ್ಷಸ್ಯ ಮೇ ಭವೇತ್ ।
ಅಹಮಿಂದ್ರಸ್ಯ ಯಾ ಲಕ್ಷ್ಮೀಸ್ತ್ವಾಂ ದೃಷ್ಟ್ವಾ ಕಾಮಸಂಭೃತಂ ॥ ೧೭ ॥

---

೧೩. ಆ ಅಸುರನು ಮಾಯೆಯಿಂದ ಸ್ತ್ರೀರೂಪವನ್ನು ಧರಿಸಿ ರಾಜನ ಬಳಿಗೆ ಬಂದನು. ಆ ಮಾಯಾಸುಂದರಿಯು ಗಾನನರ್ತನಗಳನ್ನು ಮಾಡುತ್ತಾ ಮುಂದಸ್ಮಿತವನ್ನು ಬೀರುತ್ತಾ ರಾಜನ ಬಳಿಗೆ ಬಂದಳು.

೧೪. ಆ ಸುಂದರಿಯು ಧನ್ವಂತರಿಯನ್ನು ನಟನೆಯಭಕ್ತಿಯಿಂದಲೂ ವಿನಯದಿಂದಲೂ ಶಾಂತಿಯಿಂದಲೂ ಬಹುಕಾಲ ಸೇವಿಸಿದಳು. ಅವಳನ್ನು ನೋಡಿ ರಾಜನು ಪ್ರೀತಿಯಿಂದ

೧೫. ಎಲೌ ಸುಂದರಿ, ನೀನಾರು? ಯಾವ ಉದ್ದೇಶದಿಂದ ಈ ಘೋರಾರಣ್ಯದಲ್ಲಿ ನೆಲಸಿರುವೆ? ಯಾವನನ್ನು ನೋಡಿ ನೀನು ಸಂತಸಗೊಳ್ಳುತ್ತಿರುವೆ? ಹೇಳು ಎಂದನು.

೧೬-೧೭. ರಾಜನಮಾತನ್ನು ಕೇಳಿ ಸುಂದರಿಯು ಓ ರಾಜ, ನೀನಿರಲು ನನಗೆ ಇನ್ನಾವುದೂ ಸಂತೋಷವನ್ನುಂಟುಮಾಡಲಾರದು. ನಾನು ಇಂದ್ರನ

ಹರ್ಷಾಚ್ಚರಾಮಿ ಪುರತೋ ರಾಜಂಸ್ತವ ಪುನಃ ಪುನಃ ।
ಅಗಣ್ಯಪುಣ್ಯವಿರಹಾದಹಂ ಸರ್ವಸ್ಯ ದುರ್ಲಭಾ ॥ ೧೮ ॥

॥ ಬ್ರಹ್ಮೋವಾಚ ॥

ಏತದ್ವಚೋ ನಿಶಮ್ಯಾಶು ತಪಸ್ತ್ಯಕ್ತ್ವಾ ಸುದುಷ್ಕರಂ ।
ತಾಮೇವ ಮನಸಾ ಧ್ಯಾಯಂಸ್ತನ್ನಿಷ್ಠಸ್ತತ್ಪರಾಯಣಃ ॥ ೧೯ ॥

ತದೇಕಶರಣೋ ರಾಜಾ ಬಭೂವ ಸ ಯದಾ ತಮಃ ।
ಅಂತರ್ಧಾನಂ ಗತೋ ಬ್ರಹ್ಮನ್ನಾಶಯಿತ್ವಾ ತಪೋ ಬೃಹತ್ ॥ ೨೦ ॥

ಏತಸ್ಮಿನ್ನಂತರೇಽಹಂ ವೈ ವರಾನ್ದಾತುಂ ಸಮಭ್ಯಗಾಂ ।
ತಂ ದೃಷ್ಟ್ವಾ ವಿಹ್ವಲೀಭೂತಂ ತಪೋಭ್ರಷ್ಟಂ ಯಥಾಮೃತಂ ॥ ೨೧ ॥

ತಮಾಶ್ವಾಸ್ಯಾಥ ವಿವಿಧೈರ್ಹೇತುಭಿರ್ನೃಪಸತ್ತಮಂ ।
ತವ ಶತ್ರುಸ್ತಮೋ ನಾಮ ಕೃತ್ವಾ ತಾಂ ತಪಸಶ್ಚ್ಯುತಿಂ ॥ ೨೨ ॥

ರಾಜ್ಯಲಕ್ಷ್ಮಿಯು. ಸುಂದರವಾದ ನಿನ್ನನ್ನು ನೋಡಿ ಸಂತಸದಿಂದ ವರ್ತಿಸುತ್ತಿರುವೆನು. ಮಹಾಪುಣ್ಯವಂತರಲ್ಲದವರಿಗೆ ನಾನು ಲಭಿಸಲಾರೆನು ಎಂದಳು.

೧೯-೨೦. ಮಾಯಾಸುಂದರಿಯ ಆ ಮಾತನ್ನು ಕೇಳಿ ಧನ್ವಂತರಿಯು ಮೋಹಗೊಂಡು ಘೋರತಪಸ್ಸನ್ನು ಬಿಟ್ಟನು. ಸದಾ ಆ ಸುಂದರಿಯನ್ನೇ ಧ್ಯಾನಿಸತೊಡಗಿದನು. ಹೀಗೆ ರಾಜನನ್ನು ಮೋಹಿತನನ್ನಾಗಿ ಮಾಡಿ ಅವನ ತಪಸ್ಸೆಲ್ಲವನ್ನೂ ಕೆಡಿಸಿ ತಮಾಸುರನು ಅಂತರ್ಧಾನನಾದನು.

೨೧. ಈ ಸಮಯದಲ್ಲಿ ನಾನು ಧನ್ವಂತರಿಗೆ ಅನುಗ್ರಹಮಾಡಲು ಅವನ ಬಳಿಗೆ ಹೋದೆನು.

೨೨. ಸುಂದರಿಯನ್ನು ಕಾಣದೆ ವಿರಹಗೊಂಡು ತಪಸ್ಸನ್ನೂ ಕಳೆದುಕೊಂಡು ವ್ಯಥೆಪಡುತ್ತಿದ್ದ ಆ ಧನ್ವಂತರಿಯನ್ನು ನೋಡಿ ಹಿತವಾಕ್ಯಗಳಿಂದ ಸಮಾಧಾನಮಾಡಿದೆನು.

ಚರಿತಾರ್ಥೋ ಗತೋ ರಾಜನ್ನ ತ್ವಂ ಶೋಚಿತುಮರ್ಹಸಿ ।
ಆನಂದಯಂತಿ ಪ್ರಮದಾಸ್ತಾಪಯಂತಿ ಚ ಮಾನವಂ ॥ ೨೩ ॥

ಸರ್ವಾ ಏವ ವಿಶೇಷೇಣ ಕಿಮು ಮಾಯಾಮಯೀ ತು ಸಾ ।
ತತಃ ಕೃತಾಂಜಲೀ ರಾಜಾ ಮಾಮಾಹ ವಿಗತಭ್ರಮಃ ॥ ೨೪ ॥

॥ ರಾಜೋವಾಚ ॥
ಕಿಂ ಕರೋಮಿ ಕಥಂ ಬ್ರಹ್ಮಂಸ್ತಪಸಃ ಪಾರಮಾಪ್ನುಯಾಂ ॥ ೨೫ ॥

॥ ಬ್ರಹ್ಮೋವಾಚ ॥
ತತಸ್ತಸ್ಯೋತ್ತರಂ ಪ್ರಾದಾಂ ದೇವದೇವಂ ಜನಾರ್ದನಂ ।
ಸ್ತುಹಿ ಸರ್ವಪ್ರಯತ್ನೇನ ತತಃ ಸಿದ್ಧಿಮವಾಪ್ಸ್ಯಸಿ ॥ ೨೬ ॥

ಸ ಹ್ಯಶೇಷಜಗತ್ಸ್ರಷ್ಟಾ ವೇದವೇದ್ಯಃ ಪುರಾತನಃ ।
ಸರ್ವಾರ್ಥಸಿದ್ಧಿದಃ ಪುಂಸಾಂ ನಾನ್ಯೋಽಸ್ತಿ ಭುವನತ್ರಯೇ ॥ ೨೭ ॥

---

೨೩. ಎಲೈ ರಾಜ, ನಿನ್ನ ಶತ್ರುವಾದ ತಮನೆಂಬ ಅಸುರನು ಸ್ತ್ರೀರೂಪದಿಂದ ಬಂದು ನಿನ್ನ ತಪಸ್ಸೆಲ್ಲವನ್ನೂ ಕೆಡಸಿ ಕೃತಾರ್ಥನಾಗಿ ಹೊರಟುಹೋದನು. ಅದರೂ ಚಿಂತಿಸಬೇಡ.

೨೪. ಸಾಮಾನ್ಯರಾದ ಯುವತಿಯರೇ ಪುರುಷನನ್ನು ಆನಂದಗೊಳಿಸುವರು. ಹಾಗೆಯೇ ವ್ಯಥೆಪಡಿಸುವರು. ಹೀಗಿರಲು ಇನ್ನು ಮಾಯಾಮಯಳಾದ ಆ ಸುಂದರಿಯು ನಿನ್ನನ್ನು ಮೋಹಗೊಳಿಸಿದುದರಲ್ಲಿ ಆಶ್ಚರ್ಯವಿಲ್ಲ ಎಂದೆನು.

೨೫. ಆಗ ಧನ್ವಂತರಿಯು ಸಮಾಧಾನಗೊಂಡು ವಿನಯದಿಂದ ಓ ಬ್ರಹ್ಮದೇವ, ಈಗ ಏನುಮಾಡಲಿ? ನನ್ನ ತಪಸ್ಸು ಸಂಪೂರ್ಣವಾಗಿ ಸಿದ್ಧಿಸುವ ಬಗೆ ಹೇಗೆ? ಎಂದು ಕೇಳಲು

೨೬. ಆಗ ನಾನು ಆ ಧನ್ವಂತರಿಗೆ ಎಲೈ ರಾಜ, ದೇವದೇವನಾದ ನಾರಾಯಣನನ್ನು ಭಕ್ತಿಯಿಂದ ಸ್ತುತಿಸು. ನಿನ್ನ ತಪಸ್ಸು ಸಿದ್ಧಿಸುವುದು.

೨೭. ಆ ನಾರಾಯಣನೇ ಜಗತ್ತೆಲ್ಲವನ್ನೂ ಸೃಷ್ಟಿಸುವನು. ವೇದಗಳು ಆ ದೇವನನ್ನು ಸ್ತುತಿಸುವುವು. ಪುರಾಣಪುರುಷನವನು. ಅವನ ಹೊರತು

ಸ ಜಗಾಮ ನಗಶ್ರೇಷ್ಠಂ ಹಿಮವಂತಂ ನೃಪೋತ್ತಮಃ ।
ಕೃತಾಂಜಲಿಪುಟೋ ಭೂತ್ವಾ ವಿಷ್ಣುಂ ತುಷ್ಟಾವ ಭಕ್ತಿತಃ ॥ ೨೮ ॥

॥ ಧನ್ವಂತರಿರುವಾಚ ॥

ಜಯ ವಿಷ್ಣೋ ಜಯಾಚಿಂತ್ಯ ಜಯ ಜಿಷ್ಣೋ ಜಯಾಚ್ಯುತ ।
ಜಯ ಗೋಪಾಲ ಲಕ್ಷ್ಮೀಶ ಜಯ ಕೃಷ್ಣ ಜಗನ್ಮಯ ॥ ೨೯ ॥

ಜಯ ಭೂತಪತೇ ನಾಥ ಜಯ ಪನ್ನಗಶಾಯಿನೇ ।
ಜಯ ಸರ್ವಗ ಗೋವಿಂದ ಜಯ ವಿಶ್ವಕೃತೇ ನಮಃ ॥ ೩೦ ॥

ಜಯ ವಿಶ್ವಭುಜೇ ದೇವ ಜಯ ವಿಶ್ವಧೃತೇ ನಮಃ ।
ಜಯೇಶ ಸದಸತ್ತ್ವಂ ವೈ ಜಯ ಮಾಧವ ಧರ್ಮಿಣೇ ॥ ೩೧ ॥

ಇನ್ನಾರೂ ಮಾನವರ ಇಷ್ಟಾರ್ಥಗಳನ್ನು ಸಲ್ಲಿಸುವವರು ಜಗತ್ತಿನಲ್ಲಿಲ್ಲ ಎಂದೆನು.

೨೮. ನನ್ನ ಮಾತನ್ನು ಕೇಳಿ ಆ ಧನ್ವಂತರಿಯು ಹಿಮಾಲಯಕ್ಕೆ ಹೋಗಿ ಅಲ್ಲಿ ತಪಸ್ಸನ್ನಾಚರಿಸುತ್ತಾ ಅಂಜಲಿಯನ್ನು ಧರಿಸಿ ವಿಷ್ಣುವನ್ನು ಭಕ್ತಿಯಿಂದ ಸ್ತುತಿಸಿದನು.

೨೯. ಮಹಾಮಹಿಮನಾದ ಓ ವಿಷ್ಣು, ನಿನಗೆ ಜಯವಾಗಲಿ. ಜಯಶಾಲಿಯಾದ ಓ ಅಚ್ಯುತ, ನಿನಗೆ ಜಯಕಾರವು. ಗೋಪಾಲನಾದ ಓ ಲಕ್ಷ್ಮೀರಮಣ, ನಿನಗೆ ಜಯಕಾರವು. ಜಗನ್ಮಯನಾದ ಓ ಕೃಷ್ಣ, ನೀನುಸರ್ವೋತ್ಕೃಷ್ಟನಾಗಿರು.

೩೦. ಸರ್ವೇಶ್ವರನಾದ ಹರಿಗೆ ಜಯಕಾರವು. ಶೇಷಶಾಯಿಯಾದ ಹರಿಗೆ ಜಯಕಾರವು. ಸರ್ವಾಂತರ್ಯಾಮಿಯಾದ ಓಗೋವಿಂದ, ಜಯಿಸು. ಜಗತ್ಕರ್ತನಾದ ನಿನಗೆ ನಮಸ್ಕಾರವು.

೩೧. ಜಗತ್ತನ್ನು ಧರಿಸುವವನೂ ಸಂಹರಿಸುವವನೂ ಆದ ಹರಿಗೆ ಜಯಜಯಕಾರವು. ಓ ಹರಿ, ನೀನು ಜಗನ್ಮಯನು. ಧರ್ಮಸಂಸ್ಥಾಪಕನಾದ ನಿನಗೆ ಜಯಕಾರವು, ನಮಸ್ಕಾರವು.

ಜಯ ಕಾಮದ ಕಾಮ ತ್ವಂ ಜಯ ರಾಮ ಗುಣಾರ್ಣವ ।
ಜಯಪುಷ್ಟಿದ ಪುಷ್ಟೀಶ ಜಯ ಕಲ್ಯಾಣದಾಯಿನೇ ॥ ೩೨ ॥

ಜಯ ಭೂತಪ ಭೂತೇಶ ಜಯ ಮಾನವಿಧಾಯಿನೇ ।
ಜಯ ಕರ್ಮದ ಕರ್ಮ ತ್ವಂ ಜಯ ಪೀತಾಂಬರಚ್ಛದ ॥ ೩೩ ॥

ಜಯ ಸರ್ವೇಶ ಸರ್ವಸ್ತ್ವಂ ಜಯ ಮಂಗಲರೂಪಿಣೇ ।
ಜಯ ಸತ್ತ್ವಾಧಿನಾಥಾಯ ಜಯ ವೇದವಿದೇ ನಮಃ ॥ ೩೪ ॥

ಜಯ ಜನ್ಮದ ಜನ್ಮಸ್ಥ ಪರಮಾತ್ಮನ್ನಮೋಽಸ್ತು ತೇ ।
ಜಯ ಮುಕ್ತಿದ ಮುಕ್ತಿಸ್ತ್ವಂ ಜಯ ಭುಕ್ತಿದ ಕೇಶವ ॥ ೩೫ ॥

---

೩೨. ಭಕ್ತರ ಇಷ್ಟಾರ್ಥಗಳನ್ನು ಸಲ್ಲಿಸುವ ಹರಿಗೆ ಜಯಕಾರವು. ಗುಣಸಾಗರನಾದ ರಾಮನಿಗೆ ಜಯಕಾರವು. ಪುಷ್ಟಿಯನ್ನು ಕೊಡುವ ದೇವನಿಗೆ ಜಯಕಾರವು. ಮಂಗಳವನ್ನುಂಟುಮಾಡುವ ಹರಿಗೆ ಜಯಜಯಕಾರವು.

೩೩. ಜಗತ್ತನ್ನು ಪಾಲಿಸುವ ಸರ್ವೇಶ್ವರನಿಗೆ ಜಯಕಾರವು. ಪ್ರತಿ ವಸ್ತುವಿಗೂ ಪರಿಮಿತಿಯನ್ನು ಕಲ್ಪಿಸಿದ ಅಪರಿಮಿತನಾದ ಹರಿಗೆ ಜಯಕಾರವು. ಕರ್ಮಫಲವನ್ನು ಕೊಡುವ ಕರ್ಮಮಯನಾದ ಹರಿಗೆ ನಮಸ್ಕಾರವು. ಪೀತಾಂಬರಧಾರಿಯಾದ ನಾರಾಯಣನಿಗೆ ಜಯಜಯಕಾರವು.

೩೪. ಸರ್ವಸ್ವರೂಪನಾದ ಸರ್ವೇಶ್ವರನಿಗೆ ಜಯಕಾರವು. ಮಂಗಳ ರೂಪನಾದ ಹರಿಗೆ ನಮಸ್ಕಾರವು. ಸತ್ತ್ವಗುಣಪ್ರಧಾನನಾದ ವಿಷ್ಣುವಿಗೆ ಜಯಕಾರವು. ವೇದವೇತ್ತನಾದ ನಾರಾಯಣನಿಗೆ ನಮಸ್ಕಾರವು.

೩೫. ಜನಗಳಿಗೆ ಜನ್ಮವನ್ನುಂಟುಮಾಡುವ ಮತ್ತು ಪ್ರಾಣಿಗಳ ಹೃದಯಾಕಾಶದಲ್ಲಿ ನೆಲಸಿರುವ ಪರಮಾತ್ಮನಾದ ಹರಿಗೆ ಜಯಕಾರವು, ನಮಸ್ಕಾರವು. ಓ ಹರಿ, ಮುಕ್ತಿಯನ್ನು ಕೊಡುವವನೂ ನೀನು, ಮುಕ್ತಿಯೂ ನೀನು, ಭಕ್ತಿಯನ್ನುಂಟುಮಾಡುವವನೂ ನೀನು.

ಜಯ ಲೋಕಪ ಲೋಕೇಶ ಜಯ ಪಾಪವಿನಾಶನ ।
ಜಯ ವತ್ಸಲ ಭಕ್ತಾನಾಂ ಜಯ ಚಕ್ರಧೃತೇ ನಮಃ ॥ ೩೬ ॥

ಜಯ ಮಾನದ ಮಾನಸ್ತ್ವಂ ಜಯ ಲೋಕನಮಸ್ಕೃತ ।
ಜಯ ಧರ್ಮದ ಧರ್ಮಸ್ತ್ವಂ ಜಯ ಸಂಸಾರಪಾರಗ ॥ ೩೭ ॥

ಜಯ ಅನ್ನದ ಅನ್ನಂ ತ್ವಂ ಜಯ ವಾಚಸ್ಪತೇ ನಮಃ ।
ಜಯ ಶಕ್ತಿದ ಶಕ್ತಿಸ್ತ್ವಂ ಜಯ ಜೈತ್ರವರಪ್ರದ ॥ ೩೮ ॥

ಜಯ ಯಜ್ಞದ ಯಜ್ಞಸ್ತ್ವಂ ಜಯ ಪದ್ಮದಲೇಕ್ಷಣ ।
ಜಯ ದಾನದ ದಾನಂ ತ್ವಂ ಜಯ ಕೈಟಭಸೂದನ ॥ ೩೯ ॥

---

೩೬. ಲೋಕವನ್ನು ಸೃಷ್ಟಿಸುವ ಲೋಕೇಶ್ವರನಿಗೆ ನಮಸ್ಕಾರವು. ಪಾಪನಾಶಕನಾದ ಹರಿಗೆ ಜಯಕಾರವು. ಭಕ್ತವತ್ಸಲನೂ ಚಕ್ರಧಾರಿಯೂ ಆದ ವಿಷ್ಣುವಿಗೆ ನಮಸ್ಕಾರವು.

೩೭. ಗೌರವಸ್ಥರಿಗೆ ಗೌರವವನ್ನುಂಟುಮಾಡುವ ಗೌರವಶಾಲಿಯಾದ ಹರಿಗೆ ನಮಸ್ಕಾರವು. ಜಗದ್ವಂದ್ಯನೂ ಧರ್ಮವನ್ನು ರಕ್ಷಿಸುವ ಧರ್ಮರೂಪನೂ ಆದ ಹರಿಗೆ ಜಯಜಯಕಾರವು. ಸಂಸಾರತಾಪತ್ರಯಗಳಿಲ್ಲದ ಆನಂದಮಯನಾದ ವಿಷ್ಣುವಿಗೆ ಜಯಕಾರವು.

೩೮. ಓ ಹರಿ, ನೀನು ಪ್ರಾಣಿಗಳಿಗೆ ಅನ್ನವನ್ನು ಕೊಡುವವನೂ ಅನ್ನಸ್ವರೂಪನೂ ಆಗಿರುವೆ. ವಿದ್ಯೆಗಳಿಗಧೀಶನಾದ ಹರಿಗೆ ನಮಸ್ಕಾರವು. ಓ ವಿಷ್ಣು, ಜನಗಳಿಗೆ ಶಕ್ತಿಯನ್ನು ಕೊಡುವವನೂ ಶಕ್ತಿಸ್ವರೂಪನೂ ಶ್ರೇಷ್ಠ ವರವನ್ನು ಕರುಣಿಸುವವನೂ ನೀನು. ಇಂತಹ ನಿನಗೆ ಜಯಜಯಕಾರವು.

೩೯. ಯಜ್ಞಫಲವನ್ನು ಕೊಡುವವನೂ ಯಜ್ಞಸ್ವರೂಪನೂ ಪುಂಡರೀಕಾಕ್ಷನೂ ಆದ ಹರಿಗೆ ಜಯಜಯಕಾರವು. ದಾನಫಲವನ್ನು ಕೊಡುವವನೂ ದಾನಸ್ವರೂಪನೂ ಕೈಟಭಾಸುರನನ್ನು ಸಂಹರಿಸಿದವನೂ ಆದ ನಾರಾಯಣನಿಗೆ ಜಯಜಯಕಾರವು.

ಜಯ ಕೀರ್ತಿದ ಕೀರ್ತಿಸ್ತ್ವಂ ಜಯ ಮೂರ್ತಿದ ಮೂರ್ತಿಧೃಕ್ ।
ಜಯ ಸೌಖ್ಯದ ಸೌಖ್ಯಾತ್ಮನ್ ಜಯ ಪಾವನಪಾವನ ॥ ೪೦ ॥
ಜಯ ಶಾಂತಿದ ಶಾಂತಿಸ್ತ್ವಂ ಜಯ ಶಂಕರಸಂಭವ ।
ಜಯ ಪಾನದ ಪಾನಸ್ತ್ವಂ ಜಯ ಜ್ಯೋತಿಃಸ್ವರೂಪಿಣೇ ॥ ೪೧ ॥
ಜಯ ವಾಮನ ವಿತ್ತೇಶ ಜಯ ಧೂಮಪತಾಕಿನೇ ।
ಜಯ ಸರ್ವಸ್ಯ ಜಗತೋ ದಾತೃಮೂರ್ತೇ ನಮೋಽಸ್ತು ತೇ ॥ ೪೨ ॥

ತ್ವಮೇವ ಲೋಕತ್ರಯವರ್ತಿಜೀವ-
ನಿಕಾಯಸಂಕ್ಲೇಶವಿನಾಶದಕ್ಷ ।
ಶ್ರೀಪುಂಡರೀಕಾಕ್ಷ ಕೃಪಾನಿಧೇ ತ್ವಂ
ನಿಧೇಹಿ ಪಾಣಿಂ ಮಮ ಮೂರ್ಧ್ನಿ ವಿಷ್ಣೋ ॥ ೪೩ ॥

---

೪೦. ಓ ಹರಿ, ನೀನು ಕೀರ್ತಿಯನ್ನುಂಟುಮಾಡುವವನೂ ಕೀರ್ತಿ ಸ್ವರೂಪನೂ ಆಗಿರುವೆ. ಪ್ರಾಣಿಗಳಿಗೆ ಜನ್ಮವನ್ನುಂಟುಮಾಡುವವನೂ ಅವರ ಉದ್ಧಾರಕಾಗಿ ನಾನಾ ಜನ್ಮಗಳಲ್ಲಿ ಅವತರಿಸುವವನೂ ಆಗಿರುವೆ. ಸುಖವನ್ನು ಕೊಡುವವನೂ ಸುಖಸ್ವರೂಪನೂ ಆಗಿರುವೆ. ಮಹಾಪವಿತ್ರನು ನೀನು ಇಂತಹ ನಿನಗೆ ಜಯಕಾರವು.

೪೧. ಓ ನಾರಾಯಣ, ಶಾಂತಿಯನ್ನುಂಟುಮಾಡುವವನೂ ಶಾಂತಿ ಸ್ವರೂಪನೂ ನೀನು. ಜಗತ್ತಿನಲ್ಲಿ ನಿನ್ನ ಅವತಾರದಿಂದ ಕ್ಷೇಮವಾಗುವುದು. ಜಲತೇಜಸ್ಸುಗಳನ್ನುಂಟುಮಾಡುವವನೂ ಜಲತೇಜೋರೂಪನೂ ಆದ ನಾರಾಯಣನಿಗೆ ಜಯಜಯಕಾರವು.

೪೨. ಓ ವಾಮನಾವತಾರಿಯಾದ ನಾರಾಯಣ, ನೀನು ಧನೇಶ್ವರನು. ಧರ್ಮಸಂರಕ್ಷಕನು. ಪ್ರಾಣಿಗಳೆಲ್ಲರಿಗೂ ಸುಖವನ್ನುಂಟುಮಾಡುವವನು ನೀನು. ಇಂತಹ ನಿನಗೆ ಜಯಜಯಕಾರವು ನಮಸ್ಕಾರವು.

೪೩. ಓ ಪುಂಡರೀಕಾಕ್ಷ, ನೀನು ಜಗತ್ತಿನಲ್ಲಿರುವ ಎಲ್ಲ ಪ್ರಾಣಿಗಳ ಕಷ್ಟವನ್ನು ಹೋಗಲಾಡಿಸಲು ಸಮರ್ಥನು. ಕರುಣಾಮಯನಾದ ಓ ಹರಿ, ನಿನ್ನ ವರದ ಹಸ್ತವನ್ನು ನನ್ನ ಶಿರಸ್ಸಿನಲ್ಲಿರಿಸಿ ಅನುಗ್ರಹಿಸು ಎಂದು ಸ್ತೋತ್ರ ಮಾಡಿದನು.

॥ ಬ್ರಹ್ಮೋವಾಚ ॥

ಏವಂ ಸ್ತುವಂತಂ ಭಗವಾನ್ ಶಂಖಚಕ್ರಗದಾಧರಃ ।
ವರೇಣ ಚ್ಛಂದಯಾಮಾಸ ಸರ್ವಕಾಮಸಮೃದ್ಧಿದಃ ॥ ೪೪ ॥

ಧನ್ವಂತರಿಃ ಪ್ರೀತಮನಾ ವರದಾನೇನ ಚಕ್ರಿಣಃ ।
ವರದಾನಾಯ ದೇವೇಶಂ ಗೋವಿಂದಂ ಸಂಸ್ಥಿತಂ ಪುರಃ ॥ ೪೫ ॥

ತಮಾಹ ನೃಪತಿಃ ಪ್ರಹೃಷ್ಟಃ ಸುರರಾಜ್ಯಂ ಮಮೇಪ್ಸಿತಂ ।
ತಚ್ಚ ದತ್ತಂ ತ್ವಯಾ ವಿಷ್ಣೋ ಪ್ರಾಪ್ತೋಽಸ್ಮಿ ಕೃತಕೃತ್ಯತಾಂ ॥ ೪೬ ॥

ಸ್ತುತಃ ಸಂಪೂಜಿತೋ ವಿಷ್ಣುಸ್ತತ್ರೈವಾಂತರಧೀಯತ ।
ತತ್ರೈವ ತ್ರಿದಶೇಶತ್ವಮವಾಪ ನೃಪತಿಃ ಕ್ರಮಾತ್ ॥ ೪೭ ॥

ಪ್ರಾಗರ್ಜಿತಾನೇಕಕರ್ಮಪರಿಪಾಕವಶಾತ್ತತಃ ।
ತ್ರಿಃಕೃತ್ವೋ ನಾಶಮಗಮತ್ಸಹಸ್ರಾಕ್ಷಃ ಸ್ವಕಾತ್ಪದಾತ್ ॥ ೪೮ ॥

---

೪೪. ಹೀಗೆ ಧನ್ವಂತರಿಯು ಸ್ತುತಿಸಲು ಶಂಖಚಕ್ರಧಾರಿಯೂ ಸಕಲೇಷ್ಟಾರ್ಥಗಳನ್ನು ಕರುಣಿಸುವವನೂ ಆದ ಭಗವಾನ್ ಹರಿಯು ಪ್ರಸನ್ನನಾಗಿ ವರದಹಸ್ತವನ್ನು ನೀಡಿದನು.

೪೫. ವರವನ್ನು ನೀಡಲು ಸಿದ್ಧನಾದ ಹರಿಯನ್ನು ನೋಡಿ ಧನ್ವಂತರಿಯು ಸಂತಸಗೊಂಡು ವಿನಯದಿಂದ ನನಗೆ ದೇವರಾಜ್ಯವು ಬೇಕು ಎಂದು ಕೇಳಿದನು.

೪೬. ಹರಿಯು ದೇವರಾಜ್ಯವನ್ನನುಗ್ರಹಿಸಲು ಧನ್ವಂತರಿಯು ಓ ಹರಿ, ನಿನ್ನ ಅನುಗ್ರಹದಿಂದ ನಾನು ಕೃತಕೃತ್ಯನಾದೆನು ಎಂದು ಸ್ತುತಿಸಲು ಆ ಹರಿಯು ಅಲ್ಲಿಯೇ ಅಂತರ್ಧಾನನಾದನು.

೪೭. ವಿಷ್ಣುವಿನ ಅನುಗ್ರಹದಿಂದ ಧನ್ವಂತರಿಯು ಕ್ರಮವಾಗಿ ದೇವೇಂದ್ರಪದವಿಯನ್ನು ಪಡೆದನು.

೪೮. ಹಿಂದೆ ಮಾಡಿದ ಅನೇಕಪಾಪಗಳ ಫಲವಾಗಿ ಇಂದ್ರನು ಮೂರು ಬಾರಿ ತನ್ನ ಪದವಿಯನ್ನು ಕಳೆದುಕೊಂಡನು.

ನಹುಷಾದ್ವೃತ್ರಹತ್ಯಾಯಾಃ ಸಿಂಧುಸೇನವಧಾತ್ತತಃ ।
ಅಹಲ್ಯಾಯಾಂ ಚ ಗಮನಾದ್ಯೇನ ಕೇನ ಚ ಹೇತುನಾ ॥ ೪೯ ॥

ಸ್ಮಾರಂ ಸ್ಮಾರಂ ತತ್ತದಿಂದ್ರಶ್ಚಿಂತಾಸಂತಾಪದುರ್ಮನಾಃ ।
ತತಃ ಸುರಪತಿಃ ಪ್ರಾಹ ವಾಚಸ್ಪತಿಮಿದಂ ವಚಃ ॥ ೫೦ ॥

॥ ಇಂದ್ರ ಉವಾಚ ॥

ಹೇತುನಾ ಕೇನ ವಾಗೀಶ ಭ್ರಷ್ಟರಾಜ್ಯೋ ಭವಾಮ್ಯಹಂ ।
ಮಧ್ಯೇ ಮಧ್ಯೇ ಪದಭ್ರಂಶಾದ್ವರಂ ನಿಃಶ್ರೀಕತಾ ನೃಣಾಂ ॥ ೫೧ ॥

ಗಹನಾಂ ಕರ್ಮಣಾಂ ಜೀವಗತಿಂ ಕೋ ವೇತ್ತಿ ತತ್ತ್ವತಃ ।
ರಹಸ್ಯಂ ಸರ್ವಭಾವಾನಾಂ ಜ್ಞಾತುಂ ನಾನ್ಯಃ ಪ್ರಗಲ್ಭತೇ ॥ ೫೨ ॥

---

೪೯. ವೃತ್ರವಧೆಯನ್ನು ಮಾಡಿದ ಬ್ರಹ್ಮಹತ್ಯೆಯಿಂದ ಒಂದುಬಾರಿ ಇಂದ್ರಪದವಿಯನ್ನು ಕಳೆದುಕೊಂಡನು. ಸಿಂಧುಸೇನನ ವಧೆಯಿಂದ ಎರಡನೆಬಾರಿ ಇಂದ್ರನ ರಾಜ್ಯವು ಹೋಯಿತು. ಅಹಲ್ಯಾಸಂಗದಿಂದ ಮೂರನೆಯಬಾರಿ ಇಂದ್ರ ಪದವಿಯನ್ನು ಕಳೆದುಕೊಂಡನು.

೫೦. ಹೀಗೆ ದೇವರಾಜ್ಯವು ಆಗಾಗ ತಪ್ಪಿಹೋಗುತ್ತಿರುವುದನ್ನು ಚಿಂತಿಸಿ ಚಿಂತಿಸಿ ಇಂದ್ರನು ವ್ಯಥೆಗೊಂಡು ಬೃಹಸ್ಪತಿಯನ್ನು ಕುರಿತು

೫೧. ಓ ಬೃಹಸ್ಪತಿ, ನನಗೆ ಹೀಗೆ ರಾಜ್ಯಭ್ರಂಶವಾಗುತ್ತಿರಲು ಕಾರಣ ವೇನು ? ಮಧ್ಯಮಧ್ಯದಲ್ಲಿ ಸ್ಥಾನಭ್ರಂಶವಾಗುವುದಕ್ಕಿಂತಲೂ ಐಶ್ವರ್ಯವಿಲ್ಲ ದಿರುವುದೇ ಲೇಸು.

೫೨. ಓ ವಾಚಸ್ಪತಿ, ಗಹನವಾದ ಕರ್ಮಗತಿಯನ್ನು ಯಾರೂ ಸರಿ ಯಾಗಿ ತಿಳಿಯಲಾರರು. ಜೀವಿಗಳ ಜೀವತತ್ವವನ್ನು ನಿನ್ನಹೊರತು ಯಾವನೂ ಸರಿಯಾಗಿ ತಿಳಿದಿಲ್ಲವು ಎಂದನು.

॥ ಬ್ರಹ್ಮೋವಾಚ ॥

ಬೃಹಸ್ಪತಿರ್ಹರಿಂ ಪ್ರಾಹ ಬ್ರಹ್ಮಾಣಂ ಪೃಚ್ಛ ಗಚ್ಛ ತಂ ।
ಸ ತು ಜಾನಾತಿ ಯದ್ಭೂತಂ ಭವಿಷ್ಯಚ್ಚಾಪಿ ವರ್ತನಂ ॥ ೫೩ ॥

ಸ ತು ವಕ್ಷ್ಯತಿ ಯೇನೇದಂ ಜಾತಂ ತಚ್ಚ ಮಹಾಮತೇ ।
ತಾವಾಗತ್ಯ ಮಹಾಪ್ರಾಜ್ಞೌ ನಮಸ್ಕೃತ್ಯ ಮಮಾಂತಿಕಂ ।
ಕೃತಾಂಜಲಿಪುಟೌ ಭೂತ್ವಾ ಮಾಮೂಚತುರಿದಂ ವಚಃ ॥ ೫೪ ॥

॥ ಇಂದ್ರಬೃಹಸ್ಪತೀ ಊಚತುಃ ॥

ಭಗವನ್ಕೇನ ದೋಷೇಣ ಶಚೀಭರ್ತಾ ಉದಾರಧೀಃ ।
ರಾಜ್ಯಾತ್ಪ್ರಭ್ರಶ್ಯತೇ ನಾಥ ಸಂಶಯಂ ಛೇತ್ತುಮರ್ಹಸಿ ॥ ೫೫ ॥

॥ ಬ್ರಹ್ಮೋವಾಚ ॥

ತದಾಹಮಬ್ರವಂ ಬ್ರಹ್ಮಂಶ್ಚಿರಂ ಧ್ಯಾತ್ವಾ ಬೃಹಸ್ಪತಿಂ ।
ಖಂಡಧರ್ಮಾಖ್ಯದೋಷೇಣ ತೇನ ರಾಜ್ಯಪದಾಚ್ಚ್ಯುತಃ ॥ ೫೬ ॥

---

೫೩. ಆಗ ಬೃಹಸ್ಪತಿಯು ಇಂದ್ರನಿಗೆ—ಬ್ರಹ್ಮನಲ್ಲಿಗೆ ಹೋಗಿ ಅವನನ್ನು ಕೇಳು ? ಭೂತಭವಿಷ್ಯತ್ಕಾಲಗಳ ಸಮಾಚಾರವನ್ನು ಅವನು ಬಲ್ಲನು. ನಿನ್ನ ರಾಜ್ಯಭ್ರಂಶಕ್ಕೆ ಕಾರಣವನ್ನೂ ಆ ಬ್ರಹ್ಮನು ಹೇಳುವನು ಎಂದು ಹೇಳಿದನು.

೫೪. ಆಮೇಲಾ ಇಂದ್ರಬೃಹಸ್ಪತಿಗಳು ನನ್ನ ಬಳಿಗೆ ಬಂದು ನಮಸ್ಕರಿಸಿ ವಿನಯದಿಂದ ಅಂಜಲಿಯನ್ನು ಧರಿಸಿ,

೫೫. ಓ ಭಗವರ್ನ, ಮಹಾಮಹಿಮನಾದ ದೇವೇಂದ್ರನು ಆಗಾಗ ರಾಜ್ಯಭ್ರಂಶವನ್ನು ಹೊಂದಲು ಕಾರಣವೇನು ? ಕೃಪೆಯಿಟ್ಟು ಹೇಳು ಎಂದು ಕೇಳಿದರು.

೫೬. ಆಗ ನಾನು ಬಹಳಹೊತ್ತು ಧ್ಯಾನಿಸಿ ಗುರುವಿಗೆ ಹೀಗೆ ಹೇಳಿದೆನು—ಎಲೈ ಬೃಹಸ್ಪತಿ, ಈ ಇಂದ್ರನು ಖಂಡಧರ್ಮವೆಂಬ ದೋಷದಿಂದ ಆಗಾಗ ರಾಜ್ಯಭ್ರಂಶವನ್ನನುಭವಿಸುತ್ತಿರುವನು.

ದೇಶಕಾಲಾದಿದೋಷೇಣ ಶ್ರದ್ಧಾಮಂತ್ರವಿಪರ್ಯಯಾತ್ ।
ಯಥಾವದ್ದಕ್ಷಿಣಾದಾನಾದಸದ್ದ್ರವ್ಯಪ್ರದಾನತಃ ॥ ೫೭ ॥

ದೇವಭೂದೇವತಾವಜ್ಞಾಪಾತಕಾಚ್ಚ ವಿಶೇಷತಃ ।
ಯತ್ಖಂಡತ್ವಂ ಸ್ವಧರ್ಮಸ್ಯ ದೇಹಿನಾಮುಪಜಾಯತೇ ॥ ೫೮ ॥

ತೇನಾತಿಮಾನಸಸ್ತಾಪಃ ಪದಹಾನಿಶ್ಚ ದುಸ್ತ್ಯಜಾ ।
ಕೃತೋಽಪಿ ಧರ್ಮೋಽನಿಷ್ಟಾಯ ಜಾಯತೇ ಕ್ಷುಬ್ಧಚೇತಸಾ ॥ ೫೯ ॥

ಕಾರ್ಯಸ್ಯ ನ ಭವೇತ್ಸಿದ್ಧಿಃ ತಸ್ಮಾದವ್ಯಾಕುಲಾಯ ಚ ।
ಅಸಂಪೂರ್ಣೇ ಸ್ವಧರ್ಮೇ ಹಿ ಕಿಮನಿಷ್ಟಂ ನ ಜಾಯತೇ ॥ ೬೦ ॥

ತಾಭ್ಯಾಂ ಯತ್ಪೂರ್ವವೃತ್ತಾಂತಂ ತದಪ್ಯುಕ್ತಂ ಮಯಾನಘ ।
ಆಯುಷಸ್ತು ಸುತಃ ಶ್ರೀಮಾನ್ಧನ್ವಂತರಿರುದಾರಧೀಃ ॥ ೬೧ ॥

೫೭–೫೮. ಕರ್ಮವನ್ನು ಮಾಡುವಾಗ ಉಕ್ತಕಾಲವನ್ನು ಮೀರಿ ಮಾಡುವುದು, ಶ್ರದ್ಧೆಯಿಲ್ಲದೆ ಮಂತ್ರಗಳನ್ನು ತಪ್ಪಾಗುಚ್ಚರಿಸುವುದು, ನ್ಯಾಯವಾದ ದಕ್ಷಿಣೆಯನ್ನು ಕೊಡದಿರುವುದು, ದಕ್ಷಿಣೆಗೆ ಯೋಗ್ಯವಲ್ಲದ ವಸ್ತುವನ್ನು ದಾನಮಾಡುವುದು, ದೇವಬ್ರಾಹ್ಮಣರಲ್ಲಿ ಅಶ್ರದ್ಧೆಯಿಂದ ವರ್ತಿಸುವುದು ಇವೇ ಮೊದಲಾದುವುಗಳಿಂದ ಖಂಡಧರ್ಮವೆಂಬ ದೋಷವು ಜನಿಸುವುದು. ಅದರಿಂದ ಮನೋವ್ಯಥೆಯೂ ಸ್ಥಾನಭ್ರಂಶವೂ ಆಗುವುವು.

೫೯–೬೦. ಹಾಗೆ ಕಾಲಮೊದಲಾದುವುಗಳನ್ನು ಮೀರಿ ಚಂಚಲ ಮನಸ್ಸಿನಿಂದ ಕರ್ಮವನ್ನಾಚರಿಸಿದರೆ ಅದರಿಂದ ಅನಿಷ್ಟವೇ ಆಗುವುದು. ಯಾವ ಸಿದ್ಧಿಯೂ ಆಗಲಾರದು. ದುಃಖವು ಉಂಟಾಗುವುದು. ಧರ್ಮವು ಸಂಪೂರ್ಣವಾಗದಿದ್ದರೆ ಅನಿಷ್ಟಗಳಾಗದಿರಲಾರವು ಎಂದೆನು.

೬೧-೬೨. ಎಲೈ ನಾರದ, ಆಮೇಲೆ ನಾನು ಬೃಹಸ್ಪತಿದೇವೇಂದ್ರರಿಗೆ ಪೂರ್ವಜನ್ಮದ ಕಥೆಯನ್ನು ಹೀಗೆ ಹೇಳಿದೆನು. ಆಯುಷರಾಜನ ಮಗನಾದ

ತಮಸಾ ಚ ಕೃತಂ ವಿಘ್ನಂ ವಿಷ್ಣುನಾ ತಚ್ಚ ನಾಶಿತಂ ।
ಪೂರ್ವಜನ್ಮಸು ವೃತ್ತಾಂತಮಿತ್ಯಾದಿ ಪರಿಕೀರ್ತಿತಂ ॥ ೬೨ ॥

ತಚ್ಛ್ರುತ್ವಾ ವಿಸ್ಮಿತೌ ಚೋಭೌ ಮಾಮೇವ ಪುನರೂಚತುಃ ॥ ೬೩ ॥

॥ ಇಂದ್ರಬೃಹಸ್ಪತೀ ಊಚತುಃ ॥

ತದ್ದೋಷಪ್ರತಿಬಂಧಸ್ತು ಕೇನ ಸ್ಯಾತ್ಸುರಸತ್ತಮ ॥ ೬೪ ॥

॥ ಬ್ರಹ್ಮೋವಾಚ ॥

ಪುನರ್ಧ್ಯಾತ್ವಾ ತಾವವದಂ ಶ್ರೂಯತಾಂ ದೋಷಕಾರಕಂ ।
ಕಾರಣಂ ಸರ್ವಸಿದ್ಧೀನಾಂ ದುಃಖಸಂಸಾರತಾರಣಂ ॥ ೬೫ ॥

ಧನ್ವಂತರಿಯೆಂಬ ಪುರುಷನೋರ್ವನಿದ್ದನು. ಅವನು ತಪಸ್ಸುಮಾಡುತ್ತಿರಲು ತಮಾಸುರನು ಅವನ ತಪಸ್ಸನ್ನು ಕೆಡಿಸಿದನು. ವಿಷ್ಣುವು ಆ ತಪೋವಿಘ್ನವನ್ನು ಪರಿಹರಿಸಿ ಅವನಿಗೆ ದೇವೇಂದ್ರಪದವಿಯನ್ನು ಕರುಣಿಸಿದನು ಎಂದು ಇಂದ್ರನ ಪೂರ್ವಜನ್ಮ ವೃತ್ತಾಂತವನ್ನು ಹೇಳಿದೆನು.

೬೩. ಅದನ್ನು ಕೇಳಿ ಆಶ್ಚರ್ಯಗೊಂಡು ಇಂದ್ರಬೃಹಸ್ಪತಿಗಳು ನನ್ನನ್ನು ಮತ್ತೆ ಕೇಳಿದರು.

೬೪. ಓ ಬ್ರಹ್ಮದೇವ, ಆ ಖಂಡಧರ್ಮದೋಷವು ಯಾವುದರಿಂದ ಪರಿಹಾರವಾಗುವುದು? ಅದನ್ನು ಹೇಳಬೇಕೆನಲು,

೬೫. ಆಗ ನಾನು ಪುನಃ ಧ್ಯಾನಿಸಿ ಹೀಗೆ ಹೇಳಿದೆನು—ಎಲೈ ಇಂದ್ರ ಬ್ರಹಸ್ಪತಿಗಳೇ, ನೀವು ಗೌತಮೀತೀರಕ್ಕೆ ಹೋಗಿ. ಆ ನದಿಯು ಸಕಲ ದೋಷಗಳನ್ನೂ ಹೋಗಲಾಡಿಸಿ ದುಃಖವನ್ನು ಪರಿಹರಿಸುವುದು. ಸಕಲ ಸಿದ್ಧಿಗಳನ್ನೂ ಉಂಟುಮಾಡುವುದು. ದುಃಖಿತರಿಗೆ ಆ ನದಿಯು ಆಶ್ರಯವು. ಜೀವಿಗಳೆಲ್ಲರಿಗೂ ಸುಖವನ್ನುಂಟುಮಾಡುವುದು.

ಶರಣಂ ತಪ್ತಚಿತ್ತಾನಾಂ ನಿರ್ವಾಣಂ ಜೀವತಾಮಪಿ ।
ಗತ್ವಾ ತು ಗೌತಮೀಂ ದೇವೀಂ ಸ್ತೂಯೇತಾಂ ಹರಿಶಂಕರೌ ॥ ೬೬ ॥

ನೋಪಾಯೋಽನ್ಯೋಽಸ್ತಿ ಸಂಶುದ್ಧ್ಯೈ ತೌ ತಾಂ ಹಿತ್ವಾ ಜಗತ್ತ್ರಯೇ ।
ತದೈವ ಜಗ್ಮತುರುಭೌ ಗೌತಮೀಂ ಮುನಿಸತ್ತಮ ।
ಸ್ನಾತೌ ಕೃತಕ್ಷಣೌ ಚೋಭೌ ದೇವೌ ತುಷ್ಟುವತುರ್ಮುದಾ ॥ ೬೭ ॥

॥ ಇಂದ್ರ ಉವಾಚ ॥

ನಮೋ ಮತ್ಸ್ಯಾಯ ಕೂರ್ಮಾಯ ವರಾಹಾಯ ನಮೋ ನಮಃ ।
ನರಸಿಂಹಾಯ ದೇವಾಯ ವಾಮನಾಯ ನಮೋ ನಮಃ ॥ ೬೮ ॥

ನಮೋಽಸ್ತು ಹಯರೂಪಾಯ ತ್ರಿವಿಕ್ರಮ ನಮೋಽಸ್ತು ತೇ ।
ನಮೋಽಸ್ತು ಬುದ್ಧರೂಪಾಯ ರಾಮರೂಪಾಯ ಕಲ್ಕಿನೇ ॥ ೬೯ ॥

ಅನಂತಾಯಾಚ್ಯುತಾಯೇಶ ಜಾಮದಗ್ನ್ಯಾಯ ತೇ ನಮಃ ।
ವರುಣೇಂದ್ರಸ್ವರೂಪಾಯ ಯಮರೂಪಾಯ ತೇ ನಮಃ ॥ ೭೦ ॥

---

೬೬. ಇಂತಹ ಗೌತಮೀನದಿಗೆ ತೆರಳಿ ಹರಿಹರರನ್ನು ಸ್ತುತಿಸಿ. ಗೌತಮೀ ಮತ್ತು ಹರಿಹರರು ಹೊರತು ಇನ್ನಾರೂ ದೋಷಪರಿಹಾರ ಮಾಡುವವರು ಈ ಜಗತ್ತಿನಲ್ಲಿಲ್ಲ ಎಂದೆನು.

೬೭. ಆಕೂಡಲೇ ಇಂದ್ರಬೃಹಸ್ಪತಿಗಳು ಗೌತಮೀನದಿಗೆ ಹೋಗಿ ಆ ನದಿಯಲ್ಲಿ ಸ್ನಾನಮಾಡಿ ಹರಿಹರರನ್ನು ಹೀಗೆ ಸ್ತುತಿಸಿದರು.

೬೮. ಇಂದ್ರನಿಂತೆಂದನು—ಜಗತ್ಕಲ್ಯಾಣಕ್ಕಾಗಿ ಮತ್ಸ್ಯ, ಕೂರ್ಮ ವರಾಹ, ನರಸಿಂಹ, ವಾಮನ ಮೊದಲಾದ ಅವತಾರಗಳನ್ನು ಮಾಡಿದ ದೇವನಿಗೆ ನಮಸ್ಕಾರವು.

೬೯. ಹಯಗ್ರೀವಾವತಾರಿಯೂ ತ್ರಿವಿಕ್ರಮಾವತಾರಿಯೂ ಬುದ್ಧ ರೂಪನೂ ಶ್ರೀರಾಮರೂಪನೂ ಕಲ್ಕಿಸ್ವರೂಪನೂ ಆದ ದೇವನಿಗೆ ನಮಸ್ಕಾರವು.

೭೦. ಆದಿಅಂತ್ಯಗಳಿಲ್ಲದವನೂ ಬಲರಾಮಾವತಾರಿಯೂ ಆದ ಹರಿಗೆ ನಮಸ್ಕಾರವು. ವರುಣ ಇಂದ್ರ ಯಮಸ್ವರೂಪನಾದ ವಿಷ್ಣುವಿಗೆ ನಮಸ್ಕಾರವು.

ಪರಮೇಶಾಯ ದೇವಾಯ ನಮಸ್ತ್ರೈಲೋಕ್ಯರೂಪಿಣೇ ।
ಬಿಭ್ರತ್ಸರಸ್ವತೀಂ ವಕ್ತ್ರೇ ಸರ್ವಜ್ಞೋಽಸಿ ನಮೋಽಸ್ತು ತೇ ॥ ೭೧ ॥

ಲಕ್ಷ್ಮೀವಾನಸ್ಯತೋ ಲಕ್ಷ್ಮೀಂ ಬಿಭ್ರದ್ವಕ್ಷಸಿ ಚಾನಘ ।
ಬಹುಬಾಹೂರುಪಾದಸ್ತ್ವಂ ಬಹುಕರ್ಣಾಕ್ಷಿಶೀರ್ಷಕಃ ।
ತ್ವಾಮೇವ ಸುಖಿನಂ ಪ್ರಾಪ್ಯ ಬಹವಃ ಸುಖಿನೋಽಭವನ್ ॥ ೭೨ ॥

ತಾವನ್ನಿಃಶ್ರೀಕತಾ ಪುಂಸಾಂ ಮಾಲಿನ್ಯಂ ದೈನ್ಯಮೇವ ವಾ ।
ಯಾವನ್ನ ಯಾಂತಿ ಶರಣಂ ಹರೇ ತ್ವಾಂ ಕರುಣಾರ್ಣವಂ ॥ ೭೩ ॥

॥ ಬೃಹಸ್ಪತಿರುವಾಚ ॥

ಸೂಕ್ಷ್ಮಂ ಪರಂ ಜ್ಯೋತಿರನಂತರೂಪ-
ಮೋಂಕಾರಮಾತ್ರಂ ಪ್ರಕೃತೇಃ ಪರಂ ಯತ್ ।
ಚಿದ್ರೂಪಮಾನಂದಮಯಂ ಸಮಸ್ತ-
ಮೇವಂ ವದಂತೀಶ ಮುಮುಕ್ಷವಸ್ತ್ವಾಂ ॥ ೭೪ ॥

---

೭೧. ಓ ನಾರಾಯಣ ನೀನು ಸರ್ವೇಶ್ವರನು, ಜಗನ್ಮಯನು, ಮುಖದಲ್ಲಿ ಸರಸ್ವತಿಯನ್ನು ಧರಿಸಿದ ಸರ್ವಜ್ಞನು ನೀನು. ಇಂತಹ ನಿನಗೆ ನಮಸ್ಕಾರ.

೭೨. ನೀನೇ ಲಕ್ಷ್ಮಿಯುಳ್ಳವನು. ಆದುದರಿಂದಲೇ ನಿನ್ನ ಎದೆಯಲ್ಲಿ ಲಕ್ಷ್ಮಿಯು ನೆಲಸಿರುವಳು. ಅನೇಕ ತೋಳು, ಪಾದ, ಕಿವಿ, ಕಣ್ಣು, ತಲೆಗಳುಳ್ಳ ವಿರಾಟ್ಪುರುಷನು ನೀನು. ಸುಖಸ್ವರೂಪನಾದ ನಿನ್ನನ್ನು ಪಡೆದು ಎಷ್ಟೋ ಮಂದಿ ಸುಖಿಗಳಾಗಿರುವರು.

೭೩. ಓ ಹರಿ, ಜನಗಳು ಎಲ್ಲಿಯವರೆಗೆ ನಿನ್ನನ್ನು ಶರಣುಹೊಂದುವುದಿಲ್ಲವೋ ಅಲ್ಲಿಯವರೆಗೆ ದಾರಿದ್ರ್ಯವಾಗಲೀ, ಮಲಿನತೆಯಾಗಲೀ, ದೈನ್ಯವಾಗಲೀ ಇರುವುದು. ಆಮೇಲೆ ಇವಾವುದೂ ಇರಲಾರವು ಎಂದನು.

೭೪. ಬೃಹಸ್ಪತಿಯು ಹೇಳಿದನು—ಓ ಮಹಾದೇವ, ಮುಮುಕ್ಷುಗಳಾದ ಜ್ಞಾನಿಗಳು ನಿನ್ನನ್ನು ಅತೀಂದ್ರಿಯವೂ ಪ್ರಕಾಶಸ್ವರೂಪವೂ ಮಾಯಾಮಯವಾದ ನಾನಾಜೀವರೂಪವುಳ್ಳದುದೂ, ಓಂಕಾರಸ್ವರೂಪವೂ, ಮಾಯಾ

ಆರಾಧಯಂತ್ಯತ್ರ ಭವಂತಮೀಶಂ
ಮಹಾಮಖೈಃ ಪಂಚಭಿರಪ್ಯಕಾಮಾಃ ।
ಸಂಸಾರಸಿಂಧೋಃ ಪರಮಾಪ್ತುಕಾಮಾ
ವಿಶಂತಿ ದಿವ್ಯಂ ಭುವನಂ ವಪುಸ್ತೇ ॥ ೭೫ ॥

ಸರ್ವೇಷು ಸತ್ತ್ವೇಷು ಸಮತ್ವಬುದ್ಧ್ಯಾ
ಸಂವೀಕ್ಷ್ಯ ಷಟ್ಸೂರ್ಮಿಷು ಶಾಂತಭಾವಾಃ ।
ಜ್ಞಾನೇನ ತೇ ಕರ್ಮಫಲಾನಿ ಹಿತ್ವಾ
ಧ್ಯಾನೇನ ತೇ ತ್ವಾಂ ಪ್ರವಿಶಂತಿ ಶಂಭೋ ॥ ೭೬ ॥

ನ ಜಾತಿಧರ್ಮಾಣಿ ನ ವೇದಶಾಸ್ತ್ರಂ
ನ ಧ್ಯಾನಯೋಗೋ ನ ಸಮಾಧಿಧರ್ಮಾಃ ।
ರುದ್ರಂ ಶಿವಂ ಶಂಕರಂ ಶಾಂತಚಿತ್ತಂ
ಭಕ್ತ್ಯಾ ದೇವಂ ಸೋಮಮಹಂ ನಮಸ್ಯೇ ॥ ೭೭ ॥

ಶಕ್ತಿಯಿಂದ ಭಿನ್ನವಾದುದೂ, ಜ್ಞಾನಸ್ವರೂಪವೂ, ಆನಂದಸ್ವರೂಪವೂ, ಆದ ಪರಮಾತ್ಮವಸ್ತುವೆಂದು ವರ್ಣಿಸುವರು.

೭೫. ಓ ಶಂಕರ, ಕರ್ಮನಿಷ್ಠರು ನಿನ್ನನ್ನು ದೇವಯಜ್ಞ, ಪಿತೃಯಜ್ಞ, ಮನುಷ್ಯಯಜ್ಞ, ಬ್ರಹ್ಮಯಜ್ಞ, ಭೂತಯಜ್ಞಗಳೆಂಬ ಐದು ಯಜ್ಞಗಳಿಂದ ಆರಾಧಿಸುವರು. ವಿರಕ್ತರಾದ ಜ್ಞಾನಿಗಳು ನಿನ್ನನ್ನು ಚಿಂತಿಸಿ ನಿನ್ನ ದಿವ್ಯ ಸ್ವರೂಪದಲ್ಲಿ ಐಕ್ಯರಾಗುವರು.

೭೬. ಆ ಜ್ಞಾನಿಗಳು ಸಮಸ್ತಪ್ರಾಣಿಗಳಲ್ಲಿಯೂ ಸಮದೃಷ್ಟಿಯುಳ್ಳವರಾಗಿರುವರು. ರಾಗ, ದ್ವೇಷ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಆರು ವಿಷಯತರಂಗಗಳನ್ನು ಶಾಂತಿಯಿಂದ ನಿಗ್ರಹಿಸುತ್ತಾ ನಿಷ್ಕಾಮಬುದ್ಧಿಯಿಂದ ಕರ್ಮಫಲಗಳೆಲ್ಲವನ್ನೂ ತ್ಯಜಿಸಿ ಆತ್ಮಚಿಂತನೆಯಿಂದ ನಿನ್ನ ಪರಮಾತ್ಮ ಸ್ವರೂಪದಲ್ಲಿ ಸೇರಿಹೋಗುವರು.

೭೭. ಜಾತಿಧರ್ಮಗಳು, ವೇದಶಾಸ್ತ್ರಗಳು, ಧ್ಯಾನಯೋಗ, ಸಮಾಧಿ ಇವುಗಳಿಂದ ಶಂಕರನನ್ನು ಪಡೆಯಲು ಸಾಧ್ಯವಿಲ್ಲ. ಪ್ರಳಯಕರ್ತನೂ ಮಂಗಳ ರೂಪನೂ ಸುಖವನ್ನುಂಟುಮಾಡುವವನೂ ಶಾಂತಸ್ವಭಾವದವನೂ ಆದ ಚಂದ್ರ ಶೇಖರನನ್ನು ನಮಸ್ಕರಿಸುವೆನು.

ಮೂರ್ಖೋಽಪಿ ಶಂಭೋ ತವ ಪಾದಭಕ್ತ್ಯಾ
ಸಮಾಪ್ನುಯಾನ್ಮುಕ್ತಿಮಯೀಂ ತನುಂ ತೇ ।
ಜ್ಞಾನೇಷು ಯಜ್ಞೇಷು ತಪಃಸು ಚೈವ
ಧ್ಯಾನೇಷು ಹೋಮೇಷು ಮಹಾಫಲೇಷು ॥ ೭೮ ॥

ಸಂಪನ್ನಮೇತತ್ಫಲಮುತ್ತಮಂ ಯ-
ತ್ಸೋಮೇಶ್ವರೇ ಭಕ್ತಿರಹರ್ನಿಶಂ ಯತ್ ।
ಸರ್ವಸ್ಯ ಜೀವಸ್ಯ ಸದಾ ಪ್ರಿಯಸ್ಯ
ಫಲಸ್ಯ ದೃಷ್ಟಸ್ಯ ತಥಾ ಶ್ರುತಸ್ಯ ॥ ೭೯ ॥

ಸ್ವರ್ಗಸ್ಯ ಮೋಕ್ಷಸ್ಯ ಜಗನ್ನಿವಾಸ
ಸೋಪಾನಪಂಕ್ತಿಸ್ತವ ಭಕ್ತಿರೇಷಾ ।
ತ್ವತ್ಪಾದಸಂಪ್ರಾಪ್ತಿಫಲಾಪ್ತಯೇ ತು
ಸೋಪಾನಪಂಕ್ತಿಂ ನ ವದಂತಿ ಧೀರಾಃ ॥ ೮೦ ॥

ತಸ್ಮಾದ್ದಯಾಲೋ ಮಮ ಭಕ್ತಿರಸ್ತು
ನ್ಯೈವಾಸ್ತ್ಯುಪಾಯಸ್ತವ ರೂಪಸೇವಾ ।
ಆತ್ಮೀಯಮಾಲೋಕ್ಯ ಮಹತ್ತ್ವಮೀಶ
ಪಾಪೇಷು ಚಾಸ್ಮಾಸು ಕುರು ಪ್ರಸಾದಂ ॥ ೮೧ ॥

---

೭೮. ಓ ಶಂಕರ, ಮೂರ್ಖನಾದರೂ ನಿನ್ನಲ್ಲಿ ಭಕ್ತಿಯುಳ್ಳವನಾದರೆ ಸಂಸಾರತಾಪತ್ರಯಗಳನ್ನು ಕಳೆದುಕೊಂಡು ಮುಕ್ತಿಯನ್ನು ಪಡೆಯುವನು. ಸೋಮೇಶ್ವರನಲ್ಲಿ ಸದಾ ಭಕ್ತಿಯನ್ನಿರಿಸಿದರೆ ಜ್ಞಾನ, ಯಜ್ಞ, ತಪಸ್ಸು, ಧ್ಯಾನ, ಹೋಮಗಳಲ್ಲಿ ಲಭಿಸುವ ಮಹಾಫಲವು ಲಭಿಸುವುದು.

೭೯-೮೦. ಓ ಶಂಕರ, ಸಕಲಜೀವರೂ ದೃಷ್ಟಾದೃಷ್ಟಫಲಗಳನ್ನೂ ಸ್ವರ್ಗಮೋಕ್ಷಗಳನ್ನೂ ಪಡೆಯಲು ನಿನ್ನ ಅಡಿದಾವರೆಯ ಭಕ್ತಿಯು ಮೆಟ್ಟಿಲಾಗಿರುವುದು. ಆದರೆ ಈ ವಿಷಯವು ಎಂತಹ ಪಂಡಿತರಿಗೂ ತಿಳಿಯದು.

೮೧. ಆದುದರಿಂದ ಓ ಕರುಣಾಮೂರ್ತಿ, ನನಗೆ ನಿನ್ನಲ್ಲಿ ಭಕ್ತಿಯೇ ಸ್ಥಿರವಾಗಿರಲಿ, ಬೇರೆ ಉಪಾಯವು ನನಗೆ ತಿಳಿಯದು. ನಿನ್ನ ಮಹೋದಾರತೆಯಿಂದ ಪಾಪಿಗಳಾದ ನಮ್ಮಲ್ಲಿ ಅನುಗ್ರಹವನ್ನು ತೋರು.

ಸ್ಥೂಲಂ ಚ ಸೂಕ್ಷ್ಮಂ ತ್ವಮನಾದಿ ನಿತ್ಯಂ
ಪಿತಾ ಚ ಮಾತಾ ಯದಸಚ್ಚ ಸಚ್ಚ ।
ಏವಂ ಸ್ತುತೋ ಯಃ ಶ್ರುತಿಭಿಃ ಪುರಾಣೈ-
ರ್ನಮಾಮಿ ಸೋಮೇಶ್ವರಮೀಶಿತಾರಂ ॥ ೮೨ ॥

॥ ಬ್ರಹ್ಮೋವಾಚ ॥

ತತಃ ಪ್ರೀತೌ ಹರಿಹರಾವೂಚತುಸ್ತ್ರಿದಶೇಶ್ವರೌ ॥ ೮೩ ॥

॥ ಹರಿಹರಾವೂಚತುಃ ॥

ವ್ರಿಯತಾಂ ಯನ್ಮನೋಭೀಷ್ಟಂ ಯದ್ವರಂ ಚಾತಿದುರ್ಲಭಂ ॥ ೮೪ ॥

॥ ಬ್ರಹ್ಮೋವಾಚ ॥

ಇಂದ್ರಃ ಪ್ರಾಹ ಸುರೇಶಾನಂ ಮದ್ರಾಜ್ಯಂ ತು ಪುನಃ ಪುನಃ ।
ಜಾಯತೇ ಭ್ರಶ್ಯತೇ ಚೈವ ತತ್ಪಾಪಮುಪಶಾಮ್ಯತಾಂ ॥ ೮೫ ॥

ಯಥಾ ಸ್ಥಿರೋಽಹಂ ರಾಜ್ಯೇ ಸ್ಯಾಂ ಸರ್ವಂ ಸ್ಯಾನ್ನಿಶ್ಚಲಂ ಮಮ ।
ಸುಪ್ರೀತೌ ಯದಿ ದೇವೇಶೌ ಸರ್ವಂ ಸ್ಯಾನ್ನಿಶ್ಚಲಂ ಸದಾ ॥ ೮೬ ॥

---

೮೨. ಶಂಕರನು ಸ್ಥೂಲ ಮತ್ತು ಸೂಕ್ಷ್ಮವಾದ ರೂಪವುಳ್ಳವನು, ಆದಿಯಿಲ್ಲದವನು. ನಿತ್ಯನು. ಜಗತ್ತಿಗೆ ತಂದೆಯೂ ಅವನೇ. ತಾಯಿಯೂ ಅವನೇ. ಸತ್ಯವೂ ಅವನೇ ಅಸತ್ಯವೂ ಅವನೇ ಎಂದು ಪುರಾಣಗಳು ಸ್ತುತಿಸುವುವು. ಇಂತಹ ಪರಮೇಶ್ವರನನ್ನು ನಮಸ್ಕರಿಸುವೆನು.

೮೩-೮೪. ಹೀಗೆ ಇಂದ್ರಬೃಹಸ್ಪತಿಗಳು ಸ್ತುತಿಸಲು ಹರಿಹರರು ಪ್ರಸನ್ನರಾಗಿ ಎಲೈ ಇಂದ್ರಬೃಹಸ್ಪತಿಗಳೇ ನಿಮಗೆ ಬೇಕಾದ ವರವನ್ನು ಕೇಳಿ. ದುರ್ಲಭವಾದಂತಹುದನ್ನೂ ಕೊಡುವೆವು ಎಂದರು.

೮೫. ಆಗ ದೇವೇಂದ್ರನು ಓ ಮಹಾದೇವ, ನನ್ನ ರಾಜ್ಯವು ಆಗಾಗ ತಪ್ಪಿಹೋಗುತ್ತಿರುವುದು. ನನ್ನ ಪಾಪವನ್ನು ಪರಿಹರಿಸಿ ಅನುಗ್ರಹಿಸಿರಿ.

೮೬. ದೇವದೇವರಾದ ನೀವು ನಿಶ್ಚಯವಾಗಿಯೂ ಸುಪ್ರೀತರಾಗಿದ್ದರೆ ನನ್ನ ರಾಜ್ಯವೂ ಐಶ್ವರ್ಯವೂ ಸ್ಥಿರವಾಗಿರುವಂತೆ ಅನುಗ್ರಹಿಸಿ ಎಂದನು.

ತಥೇತಿ ಹರಿವಾಕ್ಯಂ ತಾವಭಿನಂದ್ಯೇದಮೂಚತುಃ ।
ಪರಂ ಪ್ರಸಾದಮಾಪನ್ನೌ ತಾವಾಲೋಕ್ಯ ಸ್ಮಿತಾನನೌ ॥ ೮೭ ॥

ನಿರಪಾಯನಿರಾಧಾರನಿರ್ವಿಕಾರಸ್ವರೂಪಿಣೌ ।
ಶರಣ್ಯೌ ಸರ್ವಲೋಕಾನಾಂ ಭುಕ್ತಿಮುಕ್ತಿಪ್ರದಾವುಭೌ ॥ ೮೮ ॥

॥ ಹರಿಹರಾವೂಚತುಃ ॥

ತ್ರಿದೈವತ್ಯಂ ಮಹಾತೀರ್ಥಂ ಗೌತಮೀ ವಾಂಛಿತಪ್ರದಾ ।
ತಸ್ಯಾಮನೇನ ಮಂತ್ರೇಣ ಕುರುತಾಂ ಸ್ನಾನಮಾದರಾತ್ ॥ ೮೯ ॥

ಅಭಿಷೇಕಂ ಮಹೇಂದ್ರಸ್ಯ ಮಂಗಲಾಯ ಬೃಹಸ್ಪತಿಃ ।
ಕರೋತು ಸಂಸ್ಮರನ್ನಾವಾಂ ಸಂಪದಾಂ ಸ್ಥೈರ್ಯಸಿದ್ಧಯೇ ॥ ೯೦ ॥

ಇಹ ಜನ್ಮನಿ ಪೂರ್ವಸ್ಮಿನ್ಯತ್ಕಿಂಚಿತ್ಸುಕೃತಂ ಕೃತಂ ।
ತತ್ಸರ್ವಂ ಪೂರ್ಣತಾಮೇತು ಗೋದಾವರಿ ನಮೋಽಸ್ತು ತೇ ॥ ೯೧ ॥

೮೭-೮೮. ಆ ಹರಿಹರರು ಆದಿ ಅಂತ್ಯಗಳಿಲ್ಲದವರು. ವಿಕಾರರಹಿತರು. ಆನಂದಮಯವಾದ ಸ್ವರೂಪವುಳ್ಳವರು, ದೀನಜನಗಳಿಗೆ ಅವರೇ ರಕ್ಷಕರು, ಭೋಗಮೋಕ್ಷಗಳನ್ನು ಅವರೇ ಕೊಡುವವರು. ಇಂತಹ ಹರಿಹರರು ಭಕ್ತರಾದ ಇಂದ್ರಬೃಹಸ್ಪತಿಗಳಿಗೆ ಪ್ರಸನ್ನರಾಗಿ ಮತ್ತೆ ಅವರನ್ನು ಕುರಿತು,

೮೯-೯೦. ಎಲೈ ಇಂದ್ರಬೃಹಸ್ಪತಿಗಳೇ, ಗೌತಮೀನದಿಯಲ್ಲಿ ತ್ರಿದೈವತ್ಯ, ವೆಂಬ ತೀರ್ಥವಿರುವುದು. ಅದು ಇಷ್ಟಾರ್ಥಗಳೆಲ್ಲವನ್ನೂ ಉಂಟುಮಾಡುವುದು ಆ ತೀರ್ಥದಲ್ಲಿ ಮುಂದೆ ಹೇಳುವ ಮಂತ್ರದಿಂದ ಸ್ನಾನಮಾಡಿರಿ. ಆ ಮಂತ್ರ ದಿಂದ ಬೃಹಸ್ಪತಿಯು ನಮ್ಮನ್ನು ಧ್ಯಾನಿಸುತ್ತಾ ಇಂದ್ರನಿಗೆ ಅಭಿಷೇಕಮಾಡಿಸಲಿ, ಆದರಿಂದ ಇಂದ್ರನ ಐಶ್ವರ್ಯವು ಸ್ಥಿರವಾಗುವುದು.

೯೧. ಈ ಜನ್ಮದಲ್ಲಾಗಲೀ ಹಿಂದಿನ ಜನ್ಮದಲ್ಲಾಗಲೀ ಮಾಡಿದ ಪುಣ್ಯ ಕರ್ಮವೆಲ್ಲವೂ ಪೂರ್ಣವಾಗಲಿ. ಓ ಗೋದಾವರಿ ನಿನಗೆ ನಮಸ್ಕಾರವು (ಸ್ನಾನ ಮಂತ್ರವಿದು).

ಏವಂ ಸ್ಮೃತ್ವಾ ತು ಯಃ ಕಶ್ಚಿದ್ಗೌತಮ್ಯಾಂ ಸ್ನಾನಮಾಚರೇತ್ ।
ಆವಾಭ್ಯಾಂ ತು ಪ್ರಸಾದೇನ ಧರ್ಮಃ ಸಂಪೂರ್ಣತಾಮಿಯಾತ್ ।
ಪೂರ್ವಜನ್ಮಕೃತಾದ್ದೋಷಾತ್ಸ ಮುಕ್ತಃ ಪುಣ್ಯವಾನ್ಭವೇತ್ ॥ ೯೨ ॥

॥ ಬ್ರಹ್ಮೋವಾಚ ॥

ತಥೇತಿ ಚಕ್ರತುಃ ಪ್ರೀತೌ ಸುರೇಂದ್ರಧಿಷಣೌ ತತಃ ।
ಮಹಾಭಿಷೇಕಮಿಂದ್ರಸ್ಯ ಚಕಾರ ದ್ಯುಸದಾಂ ಗುರು । ॥ ೯೩ ॥

ತೇನಾಭೂದ್ಯಾ ನದೀ ಪುಣ್ಯಾ ಮಂಗಲೇತ್ಯುದಿತಾ ತು ಸಾ ।
ತಯಾ ಚ ಸಂಗಮಃ ಪುಣ್ಯೋ ಗಂಗಾಯಾಃ ಶುಭದಸ್ತ್ವಸೌ ॥ ೯೪ ॥

ಇಂದ್ರೇಣ ಸಂಸ್ತುತೋ ವಿಷ್ಣುಃ ಪ್ರತ್ಯಕ್ಷೋಽಭೂಜ್ಜಗನ್ಮಯಃ ।
ತ್ರಿಲೋಕಸಂಮಿತಾಂ ಶಕ್ರೋ ಭೂಮಿಂ ಲೇಭೇ ಜಗತ್ಪತೇಃ ॥ ೯೫ ॥

---

೯೨. ಹೀಗೆ ಸ್ಮರಿಸಿ ಗೌತಮೀನದಿಯಲ್ಲಿ ಸ್ನಾನಮಾಡಿದರೆ ನಮ್ಮಿಬ್ಬರ ಅನುಗ್ರಹದಿಂದ ಧರ್ಮವು ಸಂಪೂರ್ಣವಾಗುವುದು. ಹಿಂದಿನ ಜನ್ಮದ ಖಂಡಧರ್ಮದೋಷವೂ ಪರಿಹಾರವಾಗಿ ಪುಣ್ಯವು ಲಭಿಸುವುದು ಎಂದರು.

೯೩. ಹರಿಹರರು ಹೇಳಿದಂತೆ ಇಂದ್ರಬೃಹಸ್ಪತಿಗಳು ಮಾಡಿದರು. ದೇವಗುರುವಾದ ಬೃಹಸ್ಪತಿಯು ಇಂದ್ರನಿಗೆ ಗೌತಮೀನದಿಯಲ್ಲಿ ಅಭಿಷೇಕಮಾಡಿಸಿದನು.

೯೪. ಆ ಅಭಿಷೇಕಜಲದಿಂದ ನದಿಯೊಂದು ಜನಿಸಿ ಮಂಗಲಾನದಿಯೆಂದು ಪ್ರಸಿದ್ಧವಾಯಿತು. ಆ ನದಿಯು ಗೌತಮೀನದಿಗೆ ಸೇರಿ ಪುಣ್ಯತಮವಾದ ಸಂಗಮಸ್ಥಳವಾಯಿತು.

೯೫. ಇಂದ್ರನು ಹರಿಯನ್ನು ಸ್ತುತಿಸಲು, ಜಗತ್ಪತಿಯಾದಾ ಹರಿಯು ಪ್ರತ್ಯಕ್ಷನಾಗಿ ಮೂರುಲೋಕಗಳಲ್ಲಿ ಒಡೆತನವುಳ್ಳ ದೇವರಾಜ್ಯವನ್ನು ಅನುಗ್ರಹಿಸಿದನು.

ತನ್ನಾಮ್ನಾ ಚಾಪಿ ವಿಖ್ಯಾತೋ ಗೋವಿಂದ ಇತಿ ತತ್ರ ಚ ।
ತ್ರಿಲೋಕಸಂಮಿತಾ ಲಬ್ಧಾ ತೇನ ಗೌರ್ವಜ್ರಧಾರಿಣಾ ॥ ೭೯ ॥

ದತ್ತಾ ಚ ಹರಿಣಾ ತತ್ರ ಗೋವಿಂದಸ್ತದಭೂದ್ಧರಿಃ ।
ತ್ರೈಲೋಕ್ಯರಾಜ್ಯಂ ಯತ್ಪ್ರಾಪ್ತಂ ಹರಿಣಾ ಚ ಹರೇರ್ಮುನೇ ॥ ೯೭ ॥

ನಿಶ್ಚಲಂ ಯೇನ ಸಂಜಾತಂ ದೇವದೇವಾನ್ಮಹೇಶ್ವರಾತ್ ।
ಬೃಹಸ್ಪತಿರ್ದೇವಗುರುರ್ಯತ್ರಾಸ್ತೌಷೀನ್ಮಹೇಶ್ವರಂ ॥ ೯೮ ॥

ರಾಜ್ಯಸ್ಯ ಸ್ಥಿರಭಾವಾಯ ದೇವೇಂದ್ರಸ್ಯ ಮಹಾತ್ಮನಃ ।
ಸಿದ್ಧೇಶ್ವರಸ್ತತ್ರ ದೇವೋ ಲಿಂಗಂ ತು ತ್ರಿದಶಾರ್ಚಿತಂ ॥ ೯೯ ॥

ತತಃ ಪ್ರಭೃತಿ ತತ್ತೀರ್ಥಂ ಗೋವಿಂದಮಿತಿ ವಿಶ್ರುತಂ ।
ಮಂಗಲಾಸಂಗಮಂ ಚೈವ ಪೂರ್ಣತೀರ್ಥಂ ತತಃ ಪರಂ ॥ ೧೦೦ ॥

---

೯೬. ಇಂದ್ರನಿಗೆ ತ್ರಿಲೋಕರಾಜ್ಯವನ್ನು ಕೊಟ್ಟುದರಿಂದ ಹರಿಗೆ ಗೋವಿಂದನೆಂಬ ಹೆಸರು ಬಂದಿತು. (ಗೋ=ಎಂದರ ಮೂರುಲೋಕವನ್ನೊಳಗೊಂಡ ಭೂಮಿಯನ್ನು, ವಿಂದ=ಇಂದ್ರನಿಗೆ ದಯಪಾಲಿಸಿದವನು ವಿಷ್ಣುವೆಂದರ್ಥವು).

೯೭. ಹರಿಯಿಂದ ಇಂದ್ರನಿಗೆ ಕೊಟ್ಟ ದೇವರಾಜ್ಯವು ದೇವದೇವನಾದ ಮಹಾದೇವನ ಅನುಗ್ರಹದಿಂದ ಸ್ಥಿರವಾಯಿತು.

೯೮-೯೯. ಇಂದ್ರನ ರಾಜ್ಯವು ಸ್ಥಿರವಾಗಲೋಸುಗ ದೇವಗುರುವು ಮಹೇಶ್ವರನನ್ನು ಸ್ತುತಿಸಿದ ಸ್ಥಳದಲ್ಲಿ ಮಹಾದೇವನು ಸಿದ್ಧೇಶ್ವರನೆಂಬ ಹೆಸರಿನಿಂದ ಲಿಂಗರೂಪದಿಂದ ನೆಲಸಿರುವನು. ಆ ಸಿದ್ಧೇಶ್ವರಲಿಂಗವು ಇಂದಿಗೂ ದೇವತೆಗಳಿಂದ ಪೂಜಿಸಲ್ಪಡುವುದು.

೧೦೦. ಆ ಮೊದಲುಗೊಂಡು ಆ ಸ್ಥಳದಲ್ಲಿ ಗೋವಿಂದತೀರ್ಥ, ಮಂಗಲಾಸಂಗಮ, ಪೂರ್ಣತೀರ್ಥ, ಇಂದ್ರತೀರ್ಥ, ಬಾರ್ಹಸ್ಪತ್ಯಗಳೆಂಬ ನಾನಾತೀರ್ಥಗಳಾಗಿರುವುವು.

ಇಂದ್ರತೀರ್ಥಮಿತಿ ಖ್ಯಾತಂ ಬಾರ್ಹಸ್ಪತ್ಯಂ ಚ ವಿಶ್ರುತಂ ।
ಯತ್ರ ಸಿದ್ಧೇಶ್ವರೋ ದೇವೋ ವಿಷ್ಣುರ್ಗೋವಿಂದ ಏವ ಚ ॥ ೧೦೧ ॥

ತೇಷು ಸ್ನಾನಂ ಚ ದಾನಂ ಚ ಯತ್ಕಿಂಚಿತ್ಸುಕೃತಾರ್ಜನಂ ।
ಸರ್ವಂ ತದಕ್ಷಯಂ ವಿದ್ಯಾತ್ಪಿತೃಣಾಮತಿವಲ್ಲಭಂ ॥ ೧೦೨ ॥

ಶೃಣೋತಿ ಯಶ್ಚಾಪಿ ಪಠೇದ್ಯಶ್ಚ ಸ್ಮರತಿ ನಿತ್ಯಶಃ ।
ತಸ್ಯ ತೀರ್ಥಸ್ಯ ಮಾಹಾತ್ಮ್ಯಂ ಭ್ರಷ್ಟರಾಜ್ಯಪ್ರದಾಯಕಂ ॥ ೧೦೩ ॥

ಸಪ್ತತ್ರಿಂಶತ್ಸಹಸ್ರಾಣಿ ತೀರ್ಥಾನಾಂ ತೀರಯೋರ್ದ್ವಯೋಃ ।
ಉಭಯೋರ್ಮುನಿಶಾರ್ದೂಲ ಸರ್ವಸಿದ್ಧಿಪ್ರದಾಯಿನಾಂ ॥ ೧೦೪ ॥

---

೧೦೧. ಆ ತೀರ್ಥಗಳಲ್ಲಿ ಶಂಕರನು ಸಿದ್ಧೇಶ್ವರನೆಂಬ ಹೆಸರಿನಿಂದಲೂ, ವಿಷ್ಣುವು ಗೋವಿಂದನೆಂಬ ಹೆಸರಿನಿಂದಲೂ ನೆಲಸಿರುವರು.

೧೦೨. ಆ ತೀರ್ಥಗಳಲ್ಲಿ ಸ್ನಾನದಾನಮೊದಲಾದ ಯಾವುದಾದರೊಂದು ಚಿಕ್ಕ ಪುಣ್ಯಕರ್ಮವನ್ನು ಆಚರಿಸಿದರೂ ಅದರಿಂದ ಮಹಾಪುಣ್ಯವು ಲಭಿಸುವುದು ಪಿತೃಗಳಿಗೆ ಆ ತೀರ್ಥಗಳು ಅತಿಪ್ರಿಯವಾದವು.

೧೦೩. ರಾಜ್ಯವನ್ನು ಕಳೆದುಕೊಂಡ ರಾಜನು ಈ ತೀರ್ಥಮಾಹಾತ್ಮ್ಯವನ್ನು ಕೇಳಿದರೆ ಅಥವಾ ಪಠಿಸಿದರೆ ಅಥವಾ ನಿತ್ಯವೂ ಸ್ಮರಿಸಿದರೆ ರಾಜ್ಯವು ಪುನಃ ಲಭಿಸುವುದು.

೧೦೪. ಪೂರ್ಣತೀರ್ಥದ ಎರಡು ತೀರಗಳಲ್ಲೂ ಮೂವತ್ತೇಳುಸಾವಿರ ತೀರ್ಥಗಳಿರುವುವು. ಆ ತೀರ್ಥಗಳೆಲ್ಲವೂ ಇಷ್ಟಾರ್ಥಗಳೆಲ್ಲವನ್ನೂ ಉಂಟು ಮಾಡುವುವು.

ನ ಪೂರ್ಣತೀರ್ಥಸದೃಶಂ ತೀರ್ಥಮಸ್ತಿ ಮಹಾಫಲಂ ।
ನಿಷ್ಫಲಂ ತಸ್ಯ ಜನ್ಮಾದಿ ಯೋ ನ ಸೇವೇತ ತನ್ನರಃ ॥ ೧೦೫ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಉಭಯೋಸ್ತೀರಯೋಃ ಪೂರ್ಣತೀರ್ಥಮಂಗಲಾಸಂಗಮ-
ಗೋವಿಂದಸಿದ್ಧೇಶ್ವರಾದಿಸಪ್ತತ್ರಿಂಶತ್ಸಹಸ್ರತೀರ್ಥವರ್ಣನಂ
ನಾಮ ದ್ವಾವಿಂಶಾಧಿಕಶತತಮೋಽಧ್ಯಾಯಃ

---

೧೦೫. ಪೂರ್ಣತೀರ್ಥದಂತೆ ಮಹಾಫಲವನ್ನು ಕೊಡುವ ತೀರ್ಥವು ಮತ್ತೊಂದಿಲ್ಲ, ಆ ತೀರ್ಥವನ್ನು ಸೇವಿಸದವನ ಜನ್ಮವೇ ವ್ಯರ್ಥವು.

ಇಲ್ಲಿಗೆ ಬ್ರಹ್ಮಮಹಾಪುರಾಣದಲ್ಲಿ ಪೂರ್ಣತೀರ್ಥ, ಮಂಗಲಾಸಂಗಮ,
ಗೋವಿಂದ, ಸಿದ್ಧೇಶ್ವರತೀರ್ಥಮೊದಲಾದ ಮೂವತ್ತೇಳುಸಾವಿರ
ತೀರ್ಥಗಳವರ್ಣನವೆಂಬ ನೂರಿಪ್ಪತ್ತೆರಡನೆಯ
ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯಯಲ್ಲಿ ಐವತ್ತಮೂರನೆಯ ಅಧ್ಯಾಯವು

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ತ್ರಯೋವಿಂಶತ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ರಾಮತೀರ್ಥಮಿತಿ ಖ್ಯಾತಂ ಭ್ರೂಣಹತ್ಯಾವಿನಾಶನಂ ।
ತಸ್ಯ ಶ್ರವಣಮಾತ್ರೇಣ ಸರ್ವಪಾಪೈಃ ಪ್ರಮುಚ್ಯತೇ ॥ ೧ ॥

ಇಕ್ಷ್ವಾಕುವಂಶಪ್ರಭವಃ ಕ್ಷತ್ರಿಯೋ ಲೋಕವಿಶ್ರುತಃ ।
ಬಲವಾನ್ಮತಿಮಾನ್ ಶೂರೋ ಯಥಾ ಶಕ್ರಃ ಪುರಂದರಃ ॥ ೨ ॥

ನೂರಿಪ್ಪತ್ತಮೂರನೆಯ ಅಧ್ಯಾಯವು.

೧. ಬ್ರಹ್ಮನು ಹೇಳಿದನು—ಭ್ರೂಣಹತ್ಯೆಯನ್ನೂ ಹೋಗಲಾಡಿಸುವ ರಾಮತೀರ್ಥವೆಂಬೊಂದು ತೀರ್ಥವಿರುವುದು. ಆ ತೀರ್ಥದ ನಾಮಶ್ರವಣವನ್ನು ಮಾಡುವುದರಿಂದಲೇ ಪಾಪಗಳೆಲ್ಲವೂ ನಾಶವಾಗುವುವು.

೨. ಸೂರ್ಯವಂಶದಲ್ಲಿ ಜನಿಸಿದ ದಶರಥನೆಂಬ ಪ್ರಸಿದ್ಧನಾದ ರಾಜನಿದ್ದನು. ದೇವೇಂದ್ರನಂತೆ ಬಲಿಷ್ಠನೂ ಬುದ್ಧಿಶಾಲಿಯೂ ಶೂರನೂ ಆಗಿದ್ದನು. ಆ ದಶರಥನು ತಂದೆತಾತಂದಿರಿಂದ ಬಂದ ರಾಜ್ಯವನ್ನು ಬಲಿಚಕ್ರವರ್ತಿಯಂತೆ ವೈಭವದಿಂದ ಆಳುತ್ತಿದ್ದನು.

ಪಿತೃಸ್ಯೈತಾಮಹಂ ರಾಜ್ಯಂ ಕುರ್ವನ್ನಾಸ್ತೇ ಯಥಾ ಬಲಿಃ ।
ತಸ್ಯ ತಿಸ್ರೋ ಮಹಿಷ್ಯಃ ಸ್ಯೂ ರಾಜ್ಞೋ ದಶರಥಸ್ಯ ಹಿ ॥ ೩ ॥

ಕೌಶಲ್ಯಾ ಚ ಸುಮಿತ್ರಾ ಚ ಕೈಕೇಯಿಾ ಚ ಮಹಾಮತೇ ।
ಏತಾಃ ಕುಲೀನಾಃ ಸುಭಗಾ ರೂಪಲಕ್ಷಣಸಂಯುತಾಃ ॥ ೪ ॥

ತಸ್ಮಿನ್ರಾಜನಿ ರಾಜ್ಯೇ ತು ಸ್ಥಿತೇಽಯೋಧ್ಯಾಪತೌ ಮುನೇ ।
ವಸಿಷ್ಠೋ ಬ್ರಹ್ಮವಿಚ್ಛ್ರೇಷ್ಠೋ ಪುರೋಧಸಿ ವಿಶೇಷತಃ ॥ ೫ ॥

ನ ಚ ವ್ಯಾಧಿರ್ನ ದುರ್ಭಿಕ್ಷಂ ನ ಚಾವೃಷ್ಟಿರ್ನ ಚಾಧಯಃ ।
ಬ್ರಹ್ಮಕ್ಷತ್ರವಿಶಾಂ ನಿತ್ಯಂ ಶೂದ್ರಾಣಾಂ ಚ ವಿಶೇಷತಃ ॥ ೬ ॥

ಆಶ್ರಮಾಣಾಂ ತು ಸರ್ವೇಷಾಮಾನಂದೋಽಭೂತ್ಪೃಥಕ್ಪೃಥಕ್ ।
ತಸ್ಮಿನ್ ಶಾಸತಿ ರಾಜೇಂದ್ರೆ ಇಕ್ಷ್ವಾಕೂಣಾಂ ಕುಲೋದ್ವಹೇ ॥ ೭ ॥

೩–೪. ದಶರಥರಾಜನಿಗೆ ಕೌಸಲ್ಯಾ, ಸುಮಿತ್ರಾ, ಕೈಕೇಯಿಾಯರೆಂಬ ಮೂರುಮಂದಿ ರಾಣಿಯರಿದ್ದರು. ಆ ಮೂವರು ರಾಣಿಯರೂ ಕುಲಸ್ತ್ರೀಯರೂ ಲಕ್ಷಣವಂತೆಯರೂ, ರೂಪವತಿಯರಾದ ಸುಂದರಿಯರೂ ಆಗಿದ್ದರು.

೫. ಅಯೋಧ್ಯೆಯಲ್ಲಿ ದಶರಥನು ರಾಜ್ಯವಾಳುತ್ತಿದ್ದನು. ಬ್ರಹ್ಮಜ್ಞಾನಿಯಾದ ವಸಿಷ್ಠಮುನಿಯು ಆ ರಾಜನ ಪುರೋಹಿತನಾಗಿದ್ದನು. ಇಂತಹ ರಾಜನ ರಾಜ್ಯದಲ್ಲಿ ರೋಗಗಳು, ಬರಗಾಲ, ಮಳೆಯಿಲ್ಲದಿರುವುದು, ಮನೋವ್ಯಥೆ ಮುಂತಾದುದು ಯಾವುದೂ ಇರಲಿಲ್ಲ.

೬. ದಶರಥನ ರಾಜ್ಯದಲ್ಲಿ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕುವರ್ಣಗಳೂ, ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿಗಳೆಂಬ ನಾಲ್ಕು ಆಶ್ರಮಗಳೂ ಇದ್ದುವು. ಆ ವರ್ಣಾಶ್ರಮಗಳ ಜನಗಳೆಲ್ಲರೂ ಸುಖವಾಗಿದ್ದರು.

೭-೮. ದಶರಥನು ರಾಜ್ಯವಾಳುತ್ತಿದ್ದಾಗ ಒಮ್ಮೆ ದೇವತೆಗಳಿಗೂ ದಾನವರಿಗೂ ರಾಜ್ಯಕ್ಕಾಗಿ ಘೋರಯುದ್ಧವಾಯಿತು. ಆ ಯುದ್ಧದಲ್ಲಿ ಕೆಲವೊಮ್ಮೆ

ದೇವಾನಾಂ ದಾನವಾನಾಂ ತು ರಾಜ್ಯಾರ್ಥೇ ವಿಗ್ರಹೋಽಭವತ್ ।
ಕ್ವಾಪಿ ತತ್ರ ಜಯಂ ಪ್ರಾಪುರ್ದೇವಾಃ ಕ್ವಾಪಿ ತಥೇತರೇ ॥ ೮ ॥

ಏವಂ ಪ್ರವರ್ತಮಾನೇ ತು ತ್ರೈಲೋಕ್ಯಮತಿಪೀಡಿತಂ ।
ಅಭೂನ್ನಾರದ ತತ್ರಾಹಮನುವದಂ ದೈತ್ಯದಾನವಾನ್ ॥ ೯ ॥

ದೇವಾಂಶ್ಚಾಪಿ ವಿಶೇಷೇಣ ನ ಕೃತಂ ತೈರ್ಮದೀರಿತಂ ।
ಪುನಶ್ಚ ಸಂಗರಸ್ತೇಷಾಂ ಬಭೂವ ಸುಮಹಾನ್ಮಿಥಃ ॥ ೧೦ ॥

ವಿಷ್ಣುಂ ಗತ್ವಾ ಸುರಾಃ ಪ್ರೋಚುಸ್ತಥೇಶಾನಂ ಜಗನ್ಮಯಂ ।
ತಾವೂಚತುರುಭೌ ದೇವಾನಸುರಾನ್ದೈತ್ಯದಾನವಾನ್ ॥ ೧೧ ॥

ತಪಸಾ ಬಲಿನೋ ಯೂಂತು ಪುನಃ ಕುರ್ವಂತು ಸಂಗರಂ ।
ತಥೇತ್ಯಾಹುರ್ಯಯುಃ ಸರ್ವೇ ತಪಸೇ ನಿಯತವ್ರತಾಃ ॥ ೧೨ ॥

ಯಯುಸ್ತು ರಾಕ್ಷಸಾನ್ದೇವಾಃ ಪುನಸ್ತೇ ಮತ್ಸರಾನ್ವಿತಾಃ ।
ದೇವಾನಾಂ ದಾನವಾನಾಂ ಚ ಸಂಗರೋಽಭೂತ್ಸುದಾರುಣಃ ॥ ೧೩ ॥

ದೇವತೆಗಳಿಗೆ ಜಯವಾಗುತ್ತಿತ್ತು. ಒಮ್ಮೆ ದಾನವರಿಗೆ ಜಯವಾಗುತ್ತಿತ್ತು ಹೀಗೆ ಯುದ್ಧವು ನಡೆಯುತ್ತಲೇ ಇದ್ದು ಪ್ರಪಂಚವೆಲ್ಲವೂ ಕಷ್ಟಕ್ಕೊಳಗಾಯಿತು.

೯-೧೦. ಆಗ ನಾನು (ಬ್ರಹ್ಮನು) ದೈತ್ಯದಾನವರಿಗೂ ದೇವತೆಗಳಿಗೂ ಹಿತವಾಕ್ಯವನ್ನು ಹೇಳಿದನು. ಆದರೂ ಆ ದೇವದಾನವರು ಕೇಳದೆ ಘೋರ ಯುದ್ಧವನ್ನೇ ಪುನಃ ಮಾಡಿದರು.

೧೧. ಆಗ ದೇವದಾನವರು ಹರಿಹರರಲ್ಲಿಗೆ ಹೋಗಿ ಪ್ರಾರ್ಥಿಸಿದರು. ಆ ಹರಿಹರರು—ಎಲೈ ದೇವದಾನವರೇ ನೀವು ತಪಸ್ಸುಮಾಡಿ. ' ಅದರಿಂದ ಬಲಿಷ್ಠರಾಗಿ ಯುದ್ಧದಲ್ಲಿ ಜಯವನ್ನು ಪಡೆಯುವಿರಿ ಎಂದರು.

೧೨-೧೩. ಹರಿಹರರ ಆ ಮಾತಿನಂತೆ ದೇವದಾನವರು ತಪಸ್ಸನ್ನಾಚರಿಸಿದರು. ಪುನಃ ದೇವತೆಗಳು ವೈರದಿಂದ ದಾನವರ ಮೇಲೆ ಯುದ್ಧಕ್ಕೆ ಹೊರಟರು. ದಾನವರಿಗೂ ದೇವತೆಗಳಗೂ ಮತ್ತೆ ಘೋರಯುದ್ಧವಾಯಿತು.

ನ ತತ್ರ ದೇವಾ ಜೇತಾರೋ ನೈವ ದೈತ್ಯಾಶ್ಚ ದಾನವಾಃ ।
ಸಂಯುಗೇ ವರ್ತಮಾನೇ ತು ವಾಗುವಾಚಾಶರೀರಿಣೀ ॥ ೧೪ ॥

॥ ಆಕಾಶವಾಗುವಾಚ ॥

ಯೇಷಾಂ ದಶರಥೋ ರಾಜಾ ತೇ ಜೇತಾರೋ ನ ಚೇತರೇ ॥ ೧೫ ॥

॥ ಬ್ರಹ್ಮೋವಾಚ ॥

ಇತಿ ಶ್ರುತ್ವಾ ಜಯಾಯೋಭೌ ಜಗ್ಮತುರ್ದೇವದಾನವೌ ।
ತತ್ರ ವಾಯುಸ್ತ್ವರನ್ಪ್ರಾಪ್ತೋ ರಾಜಾನಮುವದತ್ತದಾ ॥ ೧೬ ॥

॥ ವಾಯುರುವಾಚ ॥

ಆಗಂತವ್ಯಂ ತ್ವಯಾ ರಾಜನ್ದೇವದಾನವಸಂಗರೇ ।
ಯತ್ರ ರಾಜಾ ದಶರಥೋ ಜಯಸ್ತತ್ರೇತಿ ವಿಶ್ರುತಂ ॥ ೧೭ ॥

ತಸ್ಮಾತ್ತ್ವಂ ದೇವಪಕ್ಷೇ ಸ್ಯಾ ಭವೇಯುರ್ಜಯಿನಃ ಸುರಾಃ ॥ ೧೮ ॥

---

೧೪. ಆ ಯುದ್ಧದಲ್ಲಿ ದೇವತೆಗಳಿಗೂ ಜಯವಾಗದೆ ದೈತ್ಯದಾನವರಿಗೂ ಜಯವಾಗದೆ ಘೋರಯುದ್ಧವು ನಡೆಯುತ್ತಿತ್ತು. ಆಗ ಅಶರೀರವಾಣಿಯೊಂದು ಹೀಗೆ ಕೇಳಿಸಿತು.

೧೫. ಯಾರ ಪಕ್ಷಕ್ಕೆ ದಶರಥರಾಜನು ಬರುವನೋ ಅವರೇ ಜಯಿಸುವರು, ಮಿಕ್ಕವರು ಸೋಲುವರು.

೧೬. ಆ ಆಕಾಶವಾಣಿಯನ್ನು ಕೇಳಿ ದೇವದಾನವರೀರ್ವರೂ ದಶರಥರಾಜನಲ್ಲಿಗೆ ಹೊರಟರು. ಆಗ ವಾಯುವು ಎಲ್ಲರಿಗೆ ಮುಂದಾಗಿ ದಶರಥರಾಜನ ಬಳಿಗೆ ಬಂದು,

೧೭-೧೮. ಓ ದಶರಥರಾಜ, ದೇವದಾನವರ ಯುದ್ಧಕ್ಕೆ ನೀನು ಬರಬೇಕು. ದಶರಥನಿರುವ ಪಕ್ಷಕ್ಕೆ ಜಯವು ಲಭಿಸುವುದೆಂದು ಪ್ರಸಿದ್ಧವಾಗಿರುವುದು. ಆದುದರಿಂದ ನೀನು ದೇವತೆಗಳ ಪಕ್ಷಕ್ಕೆ ಬಾ, ಅದರಿಂದ ದೇವತೆಗಳು ಜಯಶಾಲಿಗಳಾಗುವರು ಎಂದನು.

॥ ಬ್ರಹ್ಮೋವಾಚ ॥

ತದ್ವಾಯುವಚನಂ ಶ್ರುತ್ವಾ ರಾಜಾ ದಶರಥೋ ನೃಪಃ ।
ಆಗಮ್ಯತೇ ಮಯಾ ಸತ್ಯಂ ಗಚ್ಛ ವಾಯೋ ಯಥಾಸುಖಂ ॥ ೧೯ ॥

ಗತೇ ವಾಯೌ ತದಾ ದೈತ್ಯಾ ಆಜಗ್ಮುರ್ಭೂಪತಿಂ ಪ್ರತಿ ।
ತೇಽಪ್ಯೂಚುರ್ಭಗವನ್ನಸ್ಮತ್ಸಾಹಾಯ್ಯಂ ಕರ್ತುಮರ್ಹಸಿ ॥ ೨೦ ॥

ರಾಜನ್ದಶರಥ ಶ್ರೀಮನ್ನಿಜಯಸ್ತ್ವಯಿ ಸಂಸ್ಥಿತಃ ।
ತಸ್ಮಾತ್ತ್ವಂ ವೈ ದೈತ್ಯಪತೇಃ ಸಾಹಾಯ್ಯಂ ಕರ್ತುಮರ್ಹಸಿ ॥ ೨೧ ॥

ತತಃ ಪ್ರೋವಾಚ ನೃಪತಿರ್ವಾಯುನಾ ಪ್ರಾರ್ಥಿತಃ ಪುರಾ ।
ಪ್ರತಿಜ್ಞಾತಂ ಮಯಾ ತಚ್ಚ ಯಾಂತು ದೈತ್ಯಾಶ್ಚ ದಾನವಾಃ ॥ ೨೨ ॥

ಸ ತು ರಾಜಾ ತಥಾ ಚಕ್ರೇ ಗತ್ವಾ ಚೈವ ತ್ರಿವಿಷ್ಟಪಂ ।
ಯುದ್ಧಂ ಚಕ್ರೇ ತಥಾ ದೈತ್ಯೈರ್ದಾನವೈಃ ಸಹ ರಾಕ್ಷಸೈಃ ॥ ೨೩ ॥

---

೧೯. ವಾಯುವಿನ ಆ ಮಾತನ್ನು ಕೇಳಿ ದಶರಥರಾಜನು ಎಲೈ ವಾಯುದೇವನೇ, ಹಾಗೆಯೇ ಆಗಲಿ. ನಾನು ದೇವತೆಗಳ ಪಕ್ಷಕ್ಕೆ ಬರುವೆನು. ಸಂತೋಷದಿಂದ ನಿನ್ನ ಸ್ಥಾನಕ್ಕೆ ಹೊರಡು ಎಂದನು.

೨೦-೨೧. ವಾಯುವು ಹೊರಟುಹೋದಮೇಲೆ ದಾನವರು ದಶರಥರಾಜನಲ್ಲಿಗೆ ಬಂದು ಓ ದಶರಥರಾಜ, ವೀರನಾದ ನೀನು ಯುದ್ಧದಲ್ಲಿ ನಮಗೆ ಸಹಾಯಮಾಡು. ನೀನಿದ್ದಲ್ಲಿ ಜಯವು ಲಭಿಸುವುದು. ಆದುದರಿಂದ ನಮ್ಮ ದೈತ್ಯರಾಜನಿಗೆ ಸಹಾಯವನ್ನು ಮಾಡು ಎಂದರು.

೨೨. ಆಗ ದಶರಥನು ನಾನು ದೇವಪಕ್ಷಕ್ಕೆ ಸಹಾಯಮಾಡುವೆನೆಂದು ಈ ಮೊದಲೇ ವಾಯುವಿಗೆ ಮಾತುಕೊಟ್ಟಿರುವೆನು. ಅದನ್ನು ಮೀರಲು ಸಾಧ್ಯವಿಲ್ಲ. ಆದುದರಿಂದ ದೈತ್ಯದಾನವರೆಲ್ಲರೂ ಹೊರಟುಹೋಗಿ ಎಂದು ಹೇಳಿದನು.

೨೩. ಆಮೇಲಾ ದಶರಥನು ಸ್ವರ್ಗಕ್ಕೆ ಹೋಗಿ ಅಲ್ಲಿ ದೈತ್ಯದಾನವರಾಕ್ಷಸರೊಡನೆ ಘೋರಯುದ್ಧವನ್ನು ಮಾಡಿದನು.

ಪಶ್ಯತ್ಸು ದೇವಸಂಘೇಷು ನಮುಚೇರ್ಭ್ರಾತರಸ್ತದಾ ।
ವಿವಿಧುರ್ನಿಶಿತೈರ್ಬಾಣೈರಥಾಕ್ಷಂ ನೃಪತೇಸ್ತಥಾ ॥ ೨೪ ॥

ಭಿನ್ನಾಕ್ಷಂ ತಂ ರಥಂ ರಾಜಾ ನ ಜಾನಾತಿ ಸ ಸಂಭ್ರಮಾತ್ ।
ರಾಜಾಂತಿಕೇ ಸ್ಥಿತಾ ಸುಭ್ರೂಃ ಕೈಕೇಯ್ಯಾಜ್ಞಾಯಿ ನಾರದ ॥ ೨೫ ॥

ನ ಜ್ಞಾಪಿತಂ ತಥಾ ರಾಜ್ಞೇ ಸ್ವಯಮಾಲೋಕ್ಯ ಸುವ್ರತಾ ।
ಭಗ್ನಮಕ್ಷಂ ಸಮಾಲಕ್ಷ್ಯ ಚಕ್ರೇ ಹಸ್ತಂ ತದಾ ಸ್ವಕಂ ॥ ೨೬ ॥

ಅಕ್ಷವನ್ಮುನಿಶಾರ್ದೂಲ ತದೇತನ್ಮಹದದ್ಭುತಂ ।
ರಥೇನ ರಥಿನಾಂ ಶ್ರೇಷ್ಠಸ್ತಯಾ ದತ್ತಕರೇಣ ಚ ॥ ೨೭ ॥

ಜಿತವಾನ್ದೈತ್ಯದನುಜಾನ್ದೇವೈಃ ಪ್ರಾಪ್ಯ ವರಾನ್ಬಹೂನ್ ।
ತತೋ ದೇವೈರನುಜ್ಞಾತಸ್ತ್ವಯೋಧ್ಯಾಂ ಪುನರಭ್ಯಗಾತ್ ॥ ೨೮ ॥

---

೨೪. ದೇವತೆಗಳು ನೋಡುತ್ತಿದ್ದಂತೆಯೇ ಅಸುರರು ಹರಿತವಾದ ಬಾಣಗಳಿಂದ ದಶರಥನ ರಥದ ಚಕ್ರದ ಕೀಲುನ್ನು ಮುರಿದರು.

೨೫. ರಥದ ಚಕ್ರದ ಕೀಲು ಮುರಿದುಹೋದುದು ಯುದ್ಧದ ಸಡಗರದಲ್ಲಿದ್ದ ದಶರಥನಿಗೆ ತಿಳಿಯಲಿಲ್ಲ. ಅವನ ಪಕ್ಕದಲ್ಲಿಯೇ ಕೈಕೇಯಿಯು ಇದ್ದಳು. ಅವಳಿಗೆ ಆ ವಿಷಯುವು ಗೊತ್ತಾಯಿತು.

೨೬. ಆ ಕೈಕೇಯಿಯು ದಶರಥನಿಗೆ ತಿಳಿಸದೆಯೇ ಚಕ್ರದಲ್ಲಿ ಕೀಲಿನಂತೆ ತನ್ನ ಕೈಯನ್ನೇ ಇರಿಸಿ ರಥವು ಬೀಳದಂದೆ ಮಾಡಿದಳು. ಇದು ತುಂಬಾ ಆಶ್ಚರ್ಯವು.

೨೭-೨೮. ಕೈಕೇಯಿಯು ಹಿಡಿದಿದ್ದ ರಥದ ಸಹಾಯದಿಂದ ದಶರಥ ರಾಜನು ದೈತ್ಯದಾನವರೆಲ್ಲರನ್ನೂ ಜಯಿಸಿ ದೇವತೆಗಳಿಂದ ವರವನ್ನು ಪಡೆದು ಅವರ ಅನುಮತಿಯನ್ನು ಹೊಂದಿ ಕೈಕೇಯಿಯೊಡನೆ ಅಯೋಧ್ಯೆಗೆ ಹಿಂತಿರುಗಿದನು.

ಸ ತು ಮಧ್ಯೇ ಮಹಾರಾಜೋ ಮಾರ್ಗೇ ವೀಕ್ಷ್ಯ ತದಾ ಪ್ರಿಯಾಂ ।
ಕೈಕೇಯ್ಯಾಃ ಕರ್ಮ ತದ್ದೃಷ್ಟ್ವಾ ವಿಸ್ಮಯಂ ಪರಮಂ ಗತಃ ॥ ೨೯ ॥

ತತಸ್ತಸ್ಯೈ ವರಾನ್ಪ್ರಾದಾತ್ತ್ರೀಂಸ್ತು ನಾರದ ಸಾ ಅಪಿ ।
ಅನುಮಾನ್ಯ ನೃಪಪ್ರೋಕ್ತಂ ಕೈಕೇಯೀ ವಾಕ್ಯಮಬ್ರವೀತ್ ॥ ೩೦ ॥

॥ ಕೈಕೇಯ್ಯುವಾಚ ॥
ತ್ವಯಿ ತಿಷ್ಠಂತು ರಾಜೇಂದ್ರ ತ್ವಯಾ ದತ್ತಾ ವರಾ ಅಮೀ ॥ ೩೧ ॥

॥ ಬ್ರಹ್ಮೋವಾಚ ॥
ವಿಭೂಷಣಾನಿ ರಾಜೇಂದ್ರೋ ದತ್ವಾ ಸ ಪ್ರಿಯಯಾ ಸಹ ।
ರಥೇನ ವಿಜಯೀ ರಾಜಾ ಯಯೌ ಸ್ವನಗರಂ ಸುಖೀ ॥ ೩೨ ॥

ಯೋಷಿತಾಂ ಕಿಮದೇಯಂ ಹಿ ಪ್ರಿಯಾಣಾಮುಚಿತಾಗಮೇ ।
ಸ ಕದಾಚಿದ್ದಶರಥೋ ಮೃಗಯಾಶೀಲಿಭಿರ್ವೃತಃ ॥ ೩೩ ॥

---

೨೯. ದಾರಿಯಲ್ಲಿ ಬರುತ್ತಿರುವಾಗ ದಶರಥನು ಕೈಕೇಯಿಯು ರಥ ಚಕ್ರಕ್ಕೆ ಕೀಲಾಗಿ ತನ್ನ ಕೈಕೊಟ್ಟಿರುವುದನ್ನು ನೋಡಿ ತುಂಬಾ ಆಶ್ಚರ್ಯ ಗೊಂಡನು.

೩೦. ಆಗ ಆ ದಶರಥನು ಕೈಕೇಯಿಗೆ ಪ್ರೀತಿಯಿಂದ ಮೂರು ವರ ಗಳನ್ನು ಕೊಟ್ಟನು. ವರಗಳನ್ನು ಅಂಗೀಕರಿಸಿ ಕೈಕೇಯಿಯು,

೩೧. ಓ ರಾಜೇಂದ್ರ, ನೀನು ಕೊಟ್ಟ ವರಗಳು ಸದ್ಯಕ್ಕೆ ನಿನ್ನಲ್ಲಿಯೇ ಇರಲಿ, ಬೇಕಾದಾಗ ಕೇಳುವೆನು ಎಂದಳು.

೩೨. ರಾಜನು ಅದಕ್ಕೆ ಒಪ್ಪಿ ಕೈಕೇಯಿಗೆ ಆಗ ಆಭರಣಗಳನ್ನು ಬಹು ಮಾನವಾಗಿ ಕೊಟ್ಟು ರಥವನ್ನೇರಿ ವಿಜಯಶಾಲಿಯಾಗಿ ಅಯೋಧ್ಯೆಗೆ ಬಂದನು. ಯೋಗ್ಯಕಾಲದಲ್ಲಿ ಪ್ರಿಯಪತ್ನಿಯರಿಗೆ ಕೊಡದಿರುವಂತಹ ವಸ್ತುವು ಯಾವು ದಿರುವುದು ?

೩೩. ಆ ದಶರಥನು ಅಮೇಲೊಂದುಸಾರಿ ಬೇಟೆಗಾರರೊಡನೆ ಬೇಟೆ ಗಾಗಿ ಕಾಡಿಗೆ ಹೋದನು. ಕಾಡಿನಲ್ಲಿ ಸರೋವರೊಂದರ ಸಮೀಪದಲ್ಲಿ ಮರೆ ಯಾಗಿದ್ದುಕೊಂಡು ನೀರುಕುಡಿಯುವುದಕ್ಕೆ ಕೊಳಕ್ಕೆಬರುವ ಪ್ರಾಣಿಗಳನ್ನು ಬೇಟೆ ಯಾಡಲು ಸಮಯಕಾಯುತ್ತಿದ್ದನು.

ಅಟನ್ನರಣ್ಯೇ ಶರ್ವರ್ಯಾಂ ವಾರಿಬಂಧಮಥಾಕರೋತ್ ।
ಸಪ್ತವ್ಯಸನಹೀನೇನ ಭವಿತವ್ಯಂ ತು ಭೂಭುಜಾ ॥ ೩೪ ॥

ಇತಿ ಜಾನನ್ನಪಿ ಚ ತಚ್ಚಕಾರ ತು ವಿಧೇರ್ವಶಾತ್ ।
ಗರ್ತಂ ಪ್ರವಿಶ್ಯ ಪಾನಾರ್ಥಮಾಗತಾನ್ನಿಶಿತೈಃ ಶರೈಃ ॥ ೩೫ ॥

ಮೃಗಾನ್ಹಂತಿ ಮಹಾಬಾಹುಃ ಶೃಣು ಕಾಲವಿಪರ್ಯಯಂ ।
ಗರ್ತಂ ಪ್ರವಿಷ್ಟೇ ನೃಪತೌ ತಸ್ಮಿನ್ನೇವ ನಗೋತ್ತಮೇ ॥ ೩೬ ॥

ವೃದ್ಧೋ ವೈ ಶ್ರವಣೋ ನಾಮ ನ ಶೃಣೋತಿ ನ ಪಶ್ಯತಿ ।
ತಸ್ಯ ಭಾರ್ಯಾ ತಥಾಭೂತಾ ತಾವಬ್ರೂತಾಂ ತದಾ ಸುತಂ ॥ ೩೭ ॥

---

೩೪. ಜೂಜು, ಬೇಟೆ ಮುಂತಾದ ಸಪ್ತದುರ್ವ್ಯಸನಗಳನ್ನು ರಾಜನು ಬಿಡಬೇಕು. ಇದನ್ನು ತಿಳಿದಿದ್ದರೂ ದಶರಥನು ಭವಿತವ್ಯತೆಯ (ವಿಧಿಯ) ಬಲದಿಂದ ಅಂತಹ ಬೇಟೆಯಲ್ಲಿಯೇ ಆಸಕ್ತನಾಗಿದ್ದನು.

೩೫. ಮರೆಯಾಗಿದ್ದೊಂದು ಹಳ್ಳಪ್ರದೇಶದಲ್ಲಿ ನಿಂತು ನೀರುಕುಡಿಯುವುದಕ್ಕೆ ಬಂದು ಮೃಗಗಳನ್ನು ಹರಿತವಾದ ಬಾಣಗಳಿಂದ ಕೊಲ್ಲುತ್ತಿದ್ದನು. ಕಾಲವು ಒಂದೇ ರೀತಿಯಾಗಿ ಇರುವುದಿಲ್ಲ. ಕಾಲವಶದಿಂದಾದ ಮುಂದೆ ನಡೆದ ದುರಂತವೃತ್ತಾಂತವನ್ನು ಕೇಳು.

೩೬. ಮೃಗಗಳನ್ನು ಕೊಲ್ಲಲು ದಶರಥನು ಪ್ರವೇಶಿಸಿದ ತಗ್ಗುಪ್ರದೇಶದ ಮೇಲ್ಭಾಗದಲ್ಲಿ ಸ್ವಲ್ಪದೂರದಲ್ಲಿಯೇ ಪರ್ವತದ ತಪ್ಪಲಲ್ಲಿ ಮುದುಕನಾದ ಶ್ರವಣನೆಂಬ ಮುನಿಯು ವಾಸವಾಗಿದ್ದನು. ಆ ಮುನಿಯು ಕುರುಡನೂ ಕಿವುಡನೂ ಆಗಿದ್ದನು.

೩೭. ಆ ಮುನಿಯ ಹೆಂಡತಿಯೂ ಕುರುಡಳು ಮತ್ತು ಕಿವುಡಳು. ಆ ವೃದ್ಧದಂಪತಿಗಳು ಓರ್ವನೇ ಆದ ತಮ್ಮ ಪುತ್ರನನ್ನು ಕರೆದು,

॥ ಮಾತಾಪಿತರಾವೂಚತುಃ ॥

ಆವಾಂ ತೃಷಾರ್ತೌ ರಾತ್ರಿಶ್ಚ ಕೃಷ್ಣಾ ಚಾಪಿ ಪ್ರವರ್ತತೇ ।
ವೃದ್ಧಾನಾಂ ಜೀವಿತಂ ಕೃತ್ಸ್ನಂ ಬಾಲಸ್ತ್ವಮಸಿ ಪುತ್ರಕ ॥ ೩೮ ॥

ಅಂಧಾನಾಂ ಬಧಿರಾಣಾಂ ಚ ವೃದ್ಧಾನಾಂ ಧಿಕ್ಚ ಜೀವಿತಂ ।
ಜರಾಜರ್ಜರದೇಹಾನಾಂ ಧಿಗ್ಧಿಕ್ಪುತ್ರಕ ಜೀವಿತಂ ॥ ೩೯ ॥

ತಾವತ್ಪುಂಭಿರ್ಜೀವಿತವ್ಯಂ ಯಾವಲ್ಲಕ್ಷ್ಮೀರ್ದೃಢಂ ವಪುಃ ।
ಯಾವದಾಜ್ಞಾಪ್ರತಿಹತಾ ತೀರ್ಥಾದಾವನ್ಯಥಾ ಮೃತಿಃ ॥ ೪೦ ॥

॥ ಬ್ರಹ್ಮೋವಾಚ ॥

ಇತ್ಯೇತದ್ವಚನಂ ಶ್ರುತ್ವಾ ವೃದ್ಧಯೋರ್ಗುರುವತ್ಸಲಃ ।
ಪುತ್ರಃ ಪ್ರೋವಾಚ ತದ್ದುಃಖಂ ಗಿರಾ ಮಧುರಯಾ ಹರನ್ ॥ ೪೧ ॥

---

೩೮. ಎಲೈ ಮಗನೇ, ನಮಗೆ ನೀರಡಿಕೆಯಾಗಿದೆ, ಈಗ ಕತ್ತಲೆಮುಸುಕಿದ ರಾತ್ರಿಯಾಗಿದೆ. ಮುದುಕರಾದ ನಮಗೆ ನೀನೇ ಜೀವನಾಧಾರವು, ನೀನೇ ಗತಿಯು.

೩೯. ಕುರುಡರ ಮತ್ತು ಕಿವುಡರ ಜೀವಿತವೇ ನಿಂದನೀಯವು. ಅವರಲ್ಲಿಯೂ ಮುಪ್ಪಿನಿಂದ ಜರ್ಜರನಾದ ಶರೀರವುಳ್ಳ ನಮ್ಮಂತಹ ಕುರುಡಕಿವುಡರ ಜೀವನವು ಮತ್ತೂ ನಿಂದನೀಯವು. ಇಂತಹ ನಮ್ಮ ಜೀವನಕ್ಕೆ ಧಿಕ್ಕಾರವಿರಲಿ.

೪೦. ಐಶ್ವರ್ಯವಿರುವವರೆಗೂ ಶರೀರವು ದೃಢವಾಗಿರುವವರೆಗೂ ಮತ್ತು ಮಾತು ನಡೆಯುತ್ತಿರುವವರೆಗೂ ಮನುಷ್ಯನು ಬದುಕಿರಬೇಕು. ಆಮೇಲೆ ಅವನು ಬದುಕಿದ್ದರೂ ಸತ್ತಂತೆಯೇ. ಅದರ ಬದಲು ಪವಿತ್ರವಾದ ತೀರ್ಥವಲ್ಲಿ ಪ್ರಾಣಬಿಡುವುದು ಲೇಸು ಎಂದರು.

೪೧. ವೃದ್ಧರಾದ ತಂದೆತಾಯಿಗಳ ಆ ಮಾತನ್ನು ಕೇಳಿ ಪಿತೃವತ್ಸಲನಾದ ಮಗನು ಮಧುರವಾದ ಮಾತಿನಿಂದ ಅವರನ್ನು ಸಮಾಧಾನಗೊಳಿಸುತ್ತಾ,

॥ ಪುತ್ರ ಉವಾಚ ॥

ಮಯಿ ಜೀವತಿ ಕಿಂ ನಾಮ ಯುವಯೋರ್ದುಃಖಮಿದೃಶಂ ।
ನ ಹರತ್ಯಾತ್ಮಜಃ ಪಿತ್ರೋರ್ಯಶ್ಚರಿತ್ರೈರ್ದುನೋರುಜಂ ॥ ೪೨ ॥

ತೇನ ಕಿಂ ತನುಜೇನೇಹ ಕುಲೋದ್ವೇಗನಿಧಾಯಿನಾ ॥ ೪೩ ॥

॥ ಬ್ರಹ್ಮೋವಾಚ ॥

ಇತ್ಯುಕ್ತ್ವಾ ಪಿತರೌ ನತ್ವಾ ತಾವಾಶ್ವಾಸ್ಯ ಮುಹಾಮುನಾಃ ।
ತರುಸ್ಕಂಧೇ ಸಮಾರೋಪ್ಯ ವೃದ್ಧೌ ಚ ಪಿತರೌ ತದಾ ॥ ೪೪ ॥

ಹಸ್ತೇ ಗೃಹೀತ್ವಾ ಕಲಶಂ ಜಗಾಮ ಋಷಿಪುತ್ರಕಃ ।
ಸ ಋಷಿರ್ನ ತು ರಾಜಾನಂ ಜಾನಾತಿ ನೃಪತಿರ್ದ್ವಿಜಂ ॥ ೪೫ ॥

ಉಭೌ ಸರಭಸೌ ತತ್ರ ದ್ವಿಜೋ ವಾರಿ ಸಮಾವಿಶತ್ ।
ಸತ್ವರಂ ಕಲಶೇ ನ್ಯುಬ್ಜೇ ವಾರಿ ಗೃಹ್ಣಂತಮಾಶುಗೈಃ ॥ ೪೬ ॥

೪೨-೪೩. ಓ ತಂದೆತಾಯಿಗಳೇ, ನಾನು ಬದುಕಿರಲು ನಿಮ್ಮ ಈ ದುಃಖವನ್ನು ಪರಿಹರಿಸದೇ ಇರಲಾರೆನು. ತಂದೆತಾಯಿಗಳ ದುಃಖವನ್ನು ಹೋಗಲಾಡಿಸದಂತಹ ಪುತ್ರನಿದ್ದೇನು ಪ್ರಯೋಜನ? ಅವನಿಂದ ಕುಲಕ್ಕೇ ಕೆಟ್ಟಹೆಸರು ಎಂದನು.

೪೪. ಹೀಗೆ ಹೇಳಿ ಆ ಋಷಿಕುಮಾರನು ತಾಯಿತಂದೆಗಳನ್ನು ಒಂದು ಮರದ ತುಂಡಿನ ಮೇಲೆ ಕುಳ್ಳಿರಿಸಿ ಕಲಶವನ್ನು ಹಿಡಿದು ನೀರುತರಲು ಹೊರಟನು.

೪೫. ಋಷಿಕುಮಾರನಿಗೆ ದಶರಥನು ಬೇಟೆಗಾಗಿ ಅಲ್ಲಿ ನಿಂತಿದ್ದುದು ತಿಳಿಯಲಿಲ್ಲ. ರಾಜನಿಗೂ ಋಷಿಯು ನೀರಿಗೆ ಬಂದುದು ತಿಳಿಯದು. ಋಷಿ ಕುಮಾರನು ನೀರುತುಂಬಲು ಸರೋವರಕ್ಕಿಳಿದನು.

೪೬. ತವಕದಿಂದ ಕಲಶವನ್ನು ಮುಳುಗಿಸಿ ಋಷಿಯು ನೀರುತುಂಬಿ ದನು. ಆ ಶಬ್ದವನ್ನು ಕೇಳಿ ದಶರಥನು ಆನೆಯು ಬಂದು ನೀರುಕುಡಿಯು ತ್ತಿದೆಯೆಂದು ತಿಳಿದು ಹರಿತವಾದ ಬಾಣವನ್ನು ಪ್ರಯೋಗಿಸಿದನು.

ದ್ವಿಜಂ ರಾಜಾ ದ್ವಿಪಂ ಮತ್ವಾ ವಿವ್ಯಾಧ ನಿಶಿತೈಃ ಶರೈಃ ।
ವಸದ್ವಿಪ್ರೋಽಪಿ ಭೂಪಾನಾಮವಧ್ಯಸ್ತದ್ವಿದನ್ನಪಿ ॥ ೪೭ ॥

ವಿವ್ಯಾಧ ತಂ ನೃಪಃ ಕುರ್ಯಾನ್ನ ಕಿಂ ಕಿಂ ವಿಧಿವಂಚಿತಃ ।
ಸ ವಿದ್ಧೋ ಮರ್ಮದೇಶೇ ತು ದುಃಖಿತೋ ವಾಕ್ಯಮಬ್ರವೀತ್ ॥ ೪೮ ॥

॥ ದ್ವಿಜ ಉವಾಚ ॥

ಕೇನೇದಂ ದುಃಖದಂ ಕರ್ಮ ಕೃತಂ ಸದ್ಬ್ರಾಹ್ಮಣಸ್ಯ ಮೇ ।
ಮೈತ್ರೋ ಬ್ರಾಹ್ಮಣ ಇತ್ಯುಕ್ತೋ ನಾಪರಾಧೋಽಸ್ತಿ ಕಶ್ಚನ ॥ ೪೯ ॥

॥ ಬ್ರಹ್ಮೋವಾಚ ॥

ತದೇತದ್ವಚನಂ ಶ್ರುತ್ವಾ ಮುನೇರಾರ್ತಸ್ಯ ಭೂಪತಿಃ ।
ನಿಶ್ಚೇಷ್ಟಶ್ಚ ನಿರುತ್ಸಾಹೋ ಶನೈಸ್ತಂ ದೇಶಮಭ್ಯಗಾತ್ ॥ ೫೦ ॥

---

೪೭. ಕಾಡಾನೆಯನ್ನಾದರೂ ರಾಜರು ಕೊಲ್ಲಬಾರದು. ಈ ವಿಷಯವನ್ನು ತಿಳಿದಿದ್ದರೂ ದಶರಥನು ವಿಧಿವಶಾತ್ ಬಾಣಪ್ರಯೋಗಮಾಡಿದನು. ಅದೃಷ್ಟವಂಚಿತರಾದವರು ಏನನ್ನು ತಾನೇ ಮಾಡಲಾರರು? ಮಾಡಬಾರದುದನ್ನೆಲ್ಲಾ ಮಾಡುವರು.

೪೮. ಅಪಾಯಸ್ಥಳಕ್ಕೆ ಏಟುಬಿದ್ದು ಋಷಿಕುಮಾರನು ದುಃಖಿತನಾಗಿ ಇಂತೆಂದನು.

೪೯. ಸದ್ಬ್ರಾಹ್ಮಣನಾದ ನನಗೆ ಹಿಂಸೆಯನ್ನು ಮಾಡಿದವನು ಯಾರು? ಬ್ರಾಹ್ಮಣನು ದಯಾಪರನು, ನಾನಾರಿಗೂ ಕೇಡನ್ನು ಮಾಡಿದವನಲ್ಲ ಎಂದು ದುಃಖಿಸಿದನು.

೫೦. ದುಃಖಿತನಾದ ಮುನಿಯ ಆ ಮಾತನ್ನು ಕೇಳಿ ದಶರಥರಾಜನು ಏನೂ ತೋಚದೆ ನಿರುತ್ಸಾಹಿಯಾದನು. ಆಮೇಲೆ ಮೆಲ್ಲಗೆ ಋಷಿಕುಮಾರನ ಬಳಿಗೆ ಹೋಗಿನೋಡಲು,

ತಂ ತು ದೃಷ್ಟ್ವಾ ದ್ವಿಜವರಂ ಜ್ವಲಂತಮಿವ ತೇಜಸಾ ।
ಅಸಾವಪ್ಯಭವತ್ತತ್ರ ಸಶಲ್ಯ ಇವ ಮೂರ್ಛಿತಃ ॥ ೫೧ ॥

ಆತ್ಮಾನಮಾತ್ಮನಾ ಕೃತ್ವಾ ಸ್ಥಿರಂ ರಾಜಾಬ್ರವೀದಿದಂ ॥ ೫೨ ॥

॥ ರಾಜೋವಾಚ ॥

ಕೋ ಭವಾನ್ದ್ವಿಜಶಾರ್ದೂಲ ಕಿಮರ್ಥಮಿಹ ಚಾಗತಃ ।
ವದ ಪಾಪಕೃತೇ ಮಹ್ಯಂ ವದ ಮೇ ನಿಷ್ಕೃತಿಂ ಪರಾಂ ॥ ೫೩ ॥

ಬ್ರಹ್ಮಹಾ ವರ್ಣಿಭಿಃ ಕಿಂತು ಶ್ವಪಚೈರಪಿ ಜಾತುಚಿತ್ ।
ನ ಸ್ಪ್ರಷ್ಟವ್ಯೋ ಮಹಾಬುದ್ಧೇ ದ್ರಷ್ಟವ್ಯೋ ನ ಕದಾಚನ ॥ ೫೪ ॥

॥ ಬ್ರಹ್ಮೋವಾಚ ॥

ತದ್ರಾಜವಚನಂ ಶ್ರುತ್ವಾ ಮುನಿಪುತ್ರೋಽಬ್ರವೀದ್ವಚಃ ॥ ೫೫ ॥

॥ ಮುನಿಪುತ್ರ ಉವಾಚ ॥

ಉತ್ಕ್ರಮಿಷ್ಯಂತಿ ಮೇ ಪ್ರಾಣಾ ಅತೋ ವಕ್ಷ್ಯಾಮಿ ಕಿಂಚನ ।
ಸ್ವಚ್ಛಂದವೃತ್ತಿತಾಜ್ಞಾನೇ ವಿದ್ಧಿ ಪಾಕಂ ಚ ಕರ್ಮಣಾಂ ॥ ೫೬ ॥

೫೧-೫೨. ಮಹಾತೇಜಸ್ವಿಯಾದ ಋಷಿಕುಮಾರನು ಏಟುತಿಂದು ಬಿದ್ದಿದ್ದನು. ಅದನ್ನು ನೋಡಿ ದಶರಥನೂ ಅಸ್ತ್ರಪ್ರಹಾರವನ್ನು ತಿಂದವನಂತೆ ಮೂರ್ಛಿತನಾದನು. ಆಮೇಲೆ ತಾನೇ ಸಮಾಧಾನಗೊಂಡು,

೫೩. ಓ ಮುನಿಶ್ರೇಷ್ಠ, ನೀನಾರು? ಇಲ್ಲಿಗೇಕೆ ಬಂದೆ? ಪಾಪಿಷ್ಠನಾದ ನನಗೆ ಹೇಳು. ನಿನ್ನನ್ನು ವಧಿಸಿದುದಕ್ಕೆ ಪ್ರಾಯಶ್ಚಿತ್ತವೇನು? ಹೇಳು.

೫೪. ಬ್ರಹ್ಮಹತ್ಯೆ ಮಾಡಿದವನನ್ನು ನಾಲ್ಕು ವರ್ಣದವರೂ ಹೊಲೆಯರೂ ಸಹ ಮುಟ್ಟಬಾರದು. ನೋಡಲೂಬಾರದು ಎಂದು ಪ್ರಲಾಪಿಸುತ್ತಿರಲು,

೫೫. ದಶರಥನ ಆ ಮಾತನ್ನು ಕೇಳಿ ಮುನಿಕುಮಾರನು,

೫೬. ಎಲೈ ರಾಜ, ನನ್ನ ಪ್ರಾಣಗಳು ಹೊರಟುಹೋಗಲು ಸಿದ್ಧವಾಗಿವೆ. ಅವಸಾನಕಾಲವು ಸಮೀಪಿಸಿತು. ಹೆಚ್ಚು ತಡೆಯಲಾರೆ. ಕೆಲವು ಮಾತನ್ನು ಹೇಳುವೆನು. ಯುಕ್ತಾಯುಕ್ತವಿವೇಕವಿಲ್ಲದೇ ಮನಬಂದಂತೆ ಮಾಡಿದರೆ ತಕ್ಕ ಫಲವು ಲಭಿಸುವುದೆಂಬುದನ್ನು ಮಾತ್ರ ತಿಳಿದಿರು.

ಆತ್ಮಾರ್ಥಂ ತು ನ ಶೋಚಾಮಿ ವೃದ್ಧೌ ತು ಪಿತರೌ ಮಮ ।
ತಯೋಃ ಶುಶ್ರೂಷಕಃ ಕಃ ಸ್ಯಾದನ್ಧಯೋರೇಕಪುತ್ರಯೋಃ ॥ ೫೭ ॥

ವಿನಾ ಮಯಾ ಮಹಾರಣ್ಯೇ ಕಥಂ ತೌ ಜೀವಯಿಷ್ಯತಃ ।
ಮಮಾಭಾಗ್ಯಮಹೋ ಕೀದೃಕ್ಪಿತೃಶುಶ್ರೂಷಣೇ ಕ್ಷತಿಃ ॥ ೫೮ ॥

ಜಾತಾ ಮೇಽದ್ಯ ವಿನಾ ಪ್ರಾಣೈರ್ಹಾ ವಿಧೇ ಕಿಂ ಕೃತಂ ತ್ವಯಾ ।
ತಥಾಪಿ ಗಚ್ಛ ತತ್ರ ತ್ವಂ ಗೃಹೀತಕಲಶಸ್ತ್ವರನ್ ॥ ೫೯ ॥

ತಾಭ್ಯಾಂ ದೇಹ್ಯುದಪಾನಂ ತ್ವಂ ಯಥಾ ತೌ ನ ಮರಿಷ್ಯತಃ ॥ ೬೦ ॥

॥ ಬ್ರಹ್ಮೋವಾಚ ॥

ಇತ್ಯೇವಂ ಬ್ರುವತಸ್ತಸ್ಯ ಗತಾಃ ಪ್ರಾಣಾ ಮಹಾವನೇ ।
ವಿಸೃಜ್ಯ ಸಶರಂ ಚಾಪಮಾದಾಯ ಕಲಶಂ ನೃಪಃ ॥ ೬೧ ॥

---

೫೭. ನನಗಾಗಿ ನಾನು ದುಃಖಿಸುವುದಿಲ್ಲ. ನನ್ನ ತಂದೆತಾಯಿಗಳು ವೃದ್ಧರು. ಮೇಲಾಗಿ ಕುರುಡರು. ಅವರ ಸೇವೆಯನ್ನು ನಾನು ಮಾಡುತ್ತಿದ್ದೆನು. ನಾನೋರ್ವನೇ ಅವರಿಗೆ ಮಗನು.

೫೮. ನಾನಿಲ್ಲದೆ ಈ ದೊಡ್ಡ ಕಾಡಿನಲ್ಲಿ ವೃದ್ಧರಾದ ತಾಯಿತಂದೆಗಳು ಹೇಗೆ ಜೀವಿಸುವರು ? ತಾಯಿತಂದೆಗಳ ಶುಶ್ರೂಷಣೆಯ ಭಾಗ್ಯವಿಲ್ಲದೇ ನಾನು ಮಹಾಪಾಪಿಯಾದೆನು.

೫೯-೬೦. ಓ ವಿಧಿಯೇ, ಪಿತೃಸೇವೆಯನ್ನು ತಪ್ಪಿಸಿ ನನಗೆ ಇದೇನು ಮಾಡಿರುವೆ? ಎಲೈ ರಾಜನೇ, ಚಿಂತೆಯಿಲ್ಲ, ನೀರಿನ ಕಲಶವನ್ನು ತೆಗೆದು ಕೊಂಡು ಜಾಗ್ರತೆ ಹೋಗಿ ನೀರಡಿಕೆಯಿಂದ ಬಳಲಿರುವ ನನ್ನ ತಾಯಿತಂದೆ ಗಳಿಗೆ ನೀರನ್ನು ಕೊಟ್ಟು ಬದುಕಿಸು ಎಂದನು.

೬೧-೬೨. ಎಲೈ ನಾರದ, ಹೀಗೆ ಹೇಳುತ್ತಿರುವಂತೆಯೇ ಮುನಿಕುಮಾ ರನು ಪ್ರಾಣಬಿಟ್ಟನು. ಬಳಿಕ ದಶರಥನು ಬಿಲ್ಲುಬಾಣಗಳನ್ನಲ್ಲಿಯೇ ಬಿಟ್ಟು

ತತ್ರಾಗಾತ್ಸ ತು ವೇಗೇನ ಯತ್ರ ವೃದ್ಧೌ ಮಹಾವನೇ ।
ವೃದ್ಧೌ ಚಾಪಿ ತದಾ ರಾತ್ರೌ ತಾವನ್ಯೋನ್ಯಂ ಸಮೂಚತುಃ ॥ ೬೨ ॥

॥ ವೃದ್ಧಾವೂಚತುಃ ॥

ಉದ್ವಿಗ್ನಃ ಕುಪಿತೋ ವಾ ಸ್ಯಾದಥ ವಾ ಭಕ್ಷಿತಃ ಕಥಂ ।
ನ ಪ್ರಾಪ್ತಶ್ಚಾವಯೋರ್ಯಷ್ಟಿಃ ಕಿಂ ಕುರ್ಮಃ ಕಾ ಗತಿರ್ಭವೇತ್ ॥ ೬೩ ॥

ನ ಕೋಽಪಿ ತಾದೃಶಃ ಪುತ್ರೋ ವಿದ್ಯತೇ ಸಚರಾಚರೇ ।
ಯಃ ಪಿತ್ರೋರನ್ಯಥಾ ವಾಕ್ಯಂ ನ ಕರೋತ್ಯಪಿ ನಿಂದಿತಃ ॥ ೬೪ ॥

ವಜ್ರಾದಪಿ ಕಠೋರಂ ವಾ ಜೀವಿತಂ ತಮಪಶ್ಯತೋಃ ।
ಶೀಘ್ರಂ ನ ಯಾಂತಿ ಯತ್ಪ್ರಾಣಾಸ್ತದೇಕಾಯತ್ತಜೀವಯೋಃ ॥ ೬೫ ॥

ನೀರಿನ ಕಲಶವನ್ನು ತೆಗದುಕೊಂಡು ವೃದ್ಧದಂಪತಿಗಳೆಡೆಗೆ ಹೋದನು. ಆಗ ಆ ರಾತ್ರಿಯಲ್ಲಿ ವೃದ್ಧದಂಪತಿಗಳು ಪರಸ್ಪರ ಮಾತನಾಡುತ್ತಿದ್ದರು.

೬೩. ನಮಗೆ ಊರುಗೋಲಂತಿರುವ ಪುತ್ರನು ಇನ್ನೂ ಏಕೆ ಬರಲಿಲ್ಲ? ನಮ್ಮಲ್ಲಿ ಅವನು ಬೇಸರಗೊಂಡಿರುವನೆ? ಅಥವಾ ಕೋಪಗೊಂಡಿರುವನೆ? ಇಲ್ಲವೇ ಕ್ರೂರಪ್ರಾಣಿಗಳು ಆ ನಮ್ಮ ಕುವರನನ್ನು ತಿಂದಿರಬಹುದೆ? ಅಯ್ಯೋ ನಮ್ಮ ಗತಿಯೇನು ?

೬೪. ಅವನಂತಹ ಪುತ್ರನು ಈ ಪ್ರಪಂಚದಲ್ಲಿಯೇ ಇಲ್ಲ ನಾವು ನಿಂದಿಸಿದರೂ ಅವನು ನಮಗೆಂದಿಗೂ ಎದುರಾಡಿದವನಲ್ಲ, ಬೇಸರಗೊಂಡವನಲ್ಲ.

೬೫. ಅಂತಹ ಪುತ್ರನನ್ನು ನೋಡದಿರುವ ನಮ್ಮ ಜೀವನವು ವಜ್ರಕ್ಕಿಂತಲೂ ಕಠಿಣವಾಗಿದೆ. ಅವನೊಬ್ಬನಿಂದಲೇ ನಮ್ಮ ಜೀವನವು ನಡೆಯಬೇಕಾಗಿದೆ. ನಮ್ಮ ಪ್ರಾಣಗಳಾದರೂ ಬೇಗನೆ ಹೋಗುವುದಿಲ್ಲವಲ್ಲ? ಏನು ಮಾಡೋಣ? ಎಂದು ಪರಿಪರಿಯಾಗಿ ಚಿಂತಿಸುತ್ತಿದ್ದರು.

॥ ಬ್ರಹ್ಮೋವಾಚ ॥

ಏವಂ ಬಹುವಿಧಾ ವಾಚೋ ವೃದ್ಧಯೋರ್ವದತೋರ್ವನೇ ।
ತದಾ ದಶರಥೋ ರಾಜಾ ಶನೈಸ್ತಂ ದೇಶಮಭ್ಯಗಾತ್ ॥ ೬೬ ॥

ಪಾದಸಂಚಾರಶಬ್ದೇನ ಮೇನಾತೇ ಸುತಮಾಗತಂ ॥ ೬೭ ॥

। ವೃದ್ಧಾವೂಚತುಃ ॥

ಕುತೋ ವತ್ಸ ಚಿರಾತ್ಪ್ರಾಪ್ತಸ್ತ್ವಂ ದೃಷ್ಟಿಸ್ತ್ವಂ ಪರಾಯಣಂ ।
ನ ಬ್ರೂಷೇ ಕಿಂತು ರುಷ್ಟೋಽಸಿ ವೃದ್ಧಯೋರಂಧಯೋಃ ಸುತಃ ॥ ೬೮ ॥

॥ ಬ್ರಹ್ಮೋವಾಚ ॥

ಸಶಲ್ಯ ಇವ ದುಃಖಾರ್ತಃ ಶೋಚನ್ದುಷ್ಕೃತಮಾತ್ಮನಃ ।
ಸ ಭೀತ ಇವ ರಾಜೇಂದ್ರಸ್ತಾವುವಾಚಾಥ ನಾರದ ॥ ೬೯ ॥

ಉದಪಾನಂ ಚ ಕುರುತಾಂ ತಚ್ಛ್ರುತ್ವಾ ನೃಪಭಾಷಿತಂ ।
ನಾಯಂ ವಕ್ತಾ ಸುತೋಽಸ್ಮಾಕಂ ಕೋ ಭವಾಂಸ್ತತ್ಪುರಾ ವದ ॥ ೭೦ ॥

೬೬-೬೭. ಹೀಗೆ ವೃದ್ಧದಂಪತಿಗಳು ಬಹುವಿಧವಾಗಿ ಮಾತನಾಡಿಕೊಳ್ಳುತ್ತಿದ್ದರು. ಆಗ ದಶರಥನು ಮೆಲ್ಲಗೆ ಅವರ ಬಳಿಗೆ ಹೋದನು. ಹೆಜ್ಜೆಯ ಸಪ್ಪಳನ್ನು ಕೇಳಿ ಮಗನು ಬಂದನೆಂದು ತಿಳಿದು ಆ ದಂಪತಿಗಳು,

೬೮. ಎಪ್ಪೈ ಮಗನೇ, ಏಕೆ ಇಷ್ಟು ಹೊತ್ತಾಯಿತು? ನೀನೇ ನಮಗೆ ಕಣ್ಣು. ನೀನೇ ನಮಗೆ ಆಧಾರವು. ಏಕೆ ಮಾತನಾಡುವುದಿಲ್ಲ? ಕುರುಡರೂ ಮುದುಕರೂ ಆದ ನಮ್ಮ ಮೇಲೆ ಕೋಪಗೊಂಡಿರುವೆಯೇನು? ಎಂದು ಕೇಳಿದರು.

೬೯. ವೃದ್ಧದಂಪತಿಗಳ ಆ ಮಾತನ್ನು ಕೇಳಿ ಶಸ್ತ್ರಪ್ರಹಾರವನ್ನು ಹೊಂದಿದವನಂತೆ ದಶರಥನು ವ್ಯಥೆಗೊಂಡು ತನ್ನ ನೀಚಕಾರ್ಯವನ್ನು ನಿಂದಿಸುತ್ತಾ ಹೆದರಿಹೆದರಿ ಇಗೋ ನೀರನ್ನು ತಂದಿರುವೆನು. ಇದನ್ನು ಕುಡಿಯಿರಿ ಎಂದು ಮುನಿದಂಪತಿಗಳಿಗೆ ಹೇಳಿದನು.

೭೦. ರಾಜನ ಆ ಮಾತನ್ನು ಕೇಳಿ ವೃದ್ಧದಂಪತಿಗಳು ಇವನು ನಮ್ಮ ಮಗನಲ್ಲವೆಂದು ತಿಳಿದು ನೀನಾರು? ಮೊದಲು ಅದನ್ನು ಹೇಳು. ಆಮೇಲೆ ನೀರನ್ನು ಕುಡಿಯುವೆವು ಎಂದರು.

ಪಶ್ಚಾತ್ಪಿಬಾವಃ ಪಾನೀಯಂ ತತೋ ರಾಜಾಬ್ರವೀಚ್ಚ ತೌ ॥ ೭೦ ॥

॥ ರಾಜೋವಾಚ ॥

ತತ್ರ ತಿಷ್ಠತಿ ವಾಂ ಪುತ್ರೋ ಯತ್ರ ವಾರಿಸಮಾಶ್ರಯಃ ॥ ೭೨ ॥

॥ ಬ್ರಹ್ಮೋವಾಚ ॥

ತಚ್ಛ್ರುತ್ವೋಚತುರಾರ್ತೌ ತೌ ಸತ್ಯಂ ಬ್ರೂಹಿ ನ ಚಾನ್ಯಥಾ ।
ಆಚಚಕ್ಷೇ ತತೋ ರಾಜಾ ಸರ್ವಮೇವ ಯಥಾತಥಂ ॥ ೭೩ ॥

ತತಸ್ತು ಪತಿತೌ ವೃದ್ಧೌ ತತ್ರಾವಾಂ ನಯ ಮಾ ಸ್ಪೃಶ ।
ಬ್ರಹ್ಮಘ್ನಸ್ಪರ್ಶನಂ ಪಾಪಂ ನ ಕದಾಚಿದ್ವಿನಶ್ಯತಿ ॥ ೭೪ ॥

ನಿನ್ಯೇ ವೈ ಶ್ರವಣಂ ವೃದ್ಧಂ ಸಭಾರ್ಯಂ ನೃಪಸತ್ತಮಃ ।
ಯತ್ರಾಸೌ ಪತಿತಃ ಪುತ್ರಸ್ತಂ ಸ್ಪೃಷ್ಟ್ವಾ ತೌ ವಿಲೇಪತುಃ ॥ ೭೫ ॥

೭೧-೭೨. ಆಗ ದಶರಥರಾಜನು ಓ ದಂಪತಿಗಳೇ, ನಿಮ್ಮ ಮಗನು ಕೆರೆಯ ಬಳಿಯಲ್ಲಿರುವನು ಎಂದನು.

೭೩. ಆ ಮಾತನ್ನು ಕೇಳಿ ವೃದ್ಧದಂಪತಿಗಳು ವ್ಯಥೆಗೊಂಡು ನಿಜವಾದ ಸಮಾಚಾರವನ್ನು ಹೇಳು, ಸುಳ್ಳು ಹೇಳಬೇಡ ಎನ್ನಲು ದಶರಥನು ನಡೆದ ವೃತ್ತಾಂತವೆಲ್ಲವನ್ನೂ ಹೇಳಿದನು.

೭೪. ಆಗ ಮುನಿದಂಪತಿಗಳು ದುಃಖದಿಂದ ನೆಲಕ್ಕುರುಳಿ ಎಲೈ ರಾಜನೆ, ಪುತ್ರನ ಬಳಿಗೆ ನಮ್ಮನ್ನೂ ಒಯ್ಯು. ಆದರೆ ನಮ್ಮನ್ನು ಮುಟ್ಟಬೇಡ. ಬ್ರಹ್ಮಹತ್ಯೆ ಮಾಡಿದವನನ್ನು ಮುಟ್ಟಿದರೆ ಪಾಪವು ಎಂದಿಗೂ ಹೋಗಲಾರದು ಎಂದು ಹೇಳಿದರು.

೭೫. ದಶರಥನು ವೈಶ್ರವಣನನ್ನೂ ಅವನ ಹೆಂಡತಿಯನ್ನೂ ಮುನಿಕುಮಾರನು ಬಿದ್ದಿರುವ ಸ್ಥಳಕ್ಕೆ ಕರೆದುಕೊಂಡು ಬಂದನು. ಪುತ್ರನು ಸತ್ತು ಬಿದ್ದಿರುವುದನ್ನು ನೋಡಿ ಆ ದಂಪತಿಗಳು ತುಂಬಾ ಪ್ರಲಾಪಿಸಿದರು.

॥ ವೃದ್ಧಾವೂಚತುಃ ॥

ಯಥಾ ಪುತ್ರವಿಯೋಗೇನ ಮೃತ್ಯುರ್ನೌ ವಿಹಿತಸ್ತಥಾ ।
ತ್ವಂ ಚಾಪಿ ಪಾಪ ಪುತ್ರಸ್ಯ ವಿಯೋಗಾನ್ಮೃತ್ಯುಮಾಪ್ಸ್ಯಸಿ ॥ ೭೬ ॥

॥ ಬ್ರಹ್ಮೋವಾಚ ॥

ಏವಂ ತು ಜಲ್ಪತೋರ್ಬ್ರಹ್ಮನ್ಗತಾಃ ಪ್ರಾಣಾಸ್ತತೋ ನೃಪಃ ।
ಅಗ್ನಿನಾ ಯೋಜಯಾಮಾಸ ವೃದ್ಧೌ ಚ ಋಷಿಪುತ್ರಕಂ ॥ ೭೭ ॥

ತತೋ ಜಗಾಮ ನಗರಂ ದುಃಖಿತೋ ನೃಪತಿರ್ಮುನೇ ।
ವಸಿಷ್ಠಾಯ ಚ ತತ್ಸರ್ವಂ ನ್ಯವೇದಯದಶೇಷತಃ ॥ ೭೮ ॥

ನೃಪಾಣಾಂ ಸೂರ್ಯವಂಶ್ಯಾನಾಂ ವಸಿಷ್ಠೋ ಹಿ ಪರಾ ಗತಿಃ ।
ವಸಿಷ್ಠೋಽಪಿ ದ್ವಿಜಶ್ರೇಷ್ಠೈಃ ಸಂಮಂತ್ರ್ಯಾಹ ಚ ನಿಷ್ಕೃತಿಂ ॥ ೭೯ ॥

॥ ವಸಿಷ್ಠ ಉವಾಚ ॥

ಗಾಲವಂ ವಾಮದೇವಂ ಚ ಜಾಬಾಲಿಮಥ ಕಶ್ಯಪಂ ।
ಏತಾನನ್ಯಾನ್ಸಮಾಹೂಯ ಹಯಮೇಧಾಯ ಯತ್ನತಃ ॥ ೮೦ ॥

---

೭೬. ವೃದ್ಧದಂಪತಿಗಳು ಹೇಳಿದರು—ಪಾಪಿಯಾದ ಎಲೈ ದಶರಥ ರಾಜನೆ, ನಾವು ಈಗ ಪುತ್ರವಿಯೋಗದಿಂದ ಮರಣಹೊಂದುವಂತೆ ನೀನೂ ಸಹ ಮುಂದೆ ಪುತ್ರಶೋಕದಿಂದ ಮರಣವನ್ನು ಹೊಂದುವೆ.

೭೭. ಎಂದು ಹೇಳಿ ಆ ದಂಪತಿಗಳು ಪ್ರಾಣಗಳನ್ನು ಬಿಟ್ಟರು. ದಶರಥನು ಚಿತೆಯುರಿಸಿ ಆ ವೃದ್ಧದಂಪತಿಗಳಿಗೂ ಅವರ ಕುಮಾರನಿಗೂ ದಹನ ಸಂಸ್ಕಾರಮಾಡಿದನು.

೭೮. ಆಮೇಲೆ ದಶರಥನು ದುಃಖದಿಂದ ರಾಜಧಾನಿಗೆ ಹೋಗಿ ನಡೆದ ಸಮಾಚಾರವೆಲ್ಲವನ್ನೂ ಪುರೋಹಿತನಾದ ವಸಿಷ್ಠಮುನಿಗೆ ತಿಳಿಸಿದನು.

೭೯. ಸೂರ್ಯವಂಶದ ರಾಜರಿಗೆ ಪುರೋಹಿತನಾದ ವಸಿಷ್ಠಮುನಿಯೇ ಗತಿಯು. ಆ ವಸಿಷ್ಠಮುನಿಯು ವಿಪ್ರೋತ್ತಮರೊಡನೆ ಯೋಚಿಸಿ ಬ್ರಹ್ಮಹತ್ಯೆಗೆ ಪ್ರಾಯಶ್ಚಿತ್ತವನ್ನು ಹೇಳಿದನು.

೮೦-೮೧. ಎಲೈ ದಶರಥರಾಜ, ಗಾಲವ ವಾಮದೇವ ಜಾಬಾಲಿ ಕಾಶ್ಯಪ

ಯಜಸ್ವ ಹಯಮೇಧೈಶ್ಚ ಬಹುಭಿರ್ಬಹುದಕ್ಷಿಣೈಃ ॥ ೮೧ ॥

॥ ಬ್ರಹ್ಮೋವಾಚ ॥

ಅಕರೋದ್ಧಯಮೇಧಾಂಶ್ಚ ರಾಜಾ ದಶರಥೋ ದ್ವಿಜೈಃ ।
ಏತಸ್ಮಿನ್ನಂತರೇ ತತ್ರ ವಾಗುವಾಚಾಶರೀರಿಣೀ ॥ ೮೨ ॥

॥ ಆಕಾಶವಾಣ್ಯುವಾಚ ॥

ಪೂತಂ ಶರೀರಮಭವದ್ರಾಜ್ಞೋ ದಶರಥಸ್ಯ ಹಿ
ವ್ಯವಹಾರ್ಯಶ್ಚ ಭವಿತಾ ಭವಿಷ್ಯಂತಿ ತಥಾ ಸುತಾಃ ।
ಜ್ಯೇಷ್ಠಪುತ್ರಪ್ರಸಾದೇನ ರಾಜಾಪಾಪೋ ಭವಿಷ್ಯತಿ ॥ ೮೩ ॥

॥ ಬ್ರಹ್ಮೋವಾಚ ॥

ತತೋ ಬಹುತಿಥೇ ಕಾಲೇ ಋಷ್ಯಶೃಂಗಾನ್ಮುನೀಶ್ವರಾತ್ ।
ದೇವಾನಾಂ ಕಾರ್ಯಸಿದ್ಧ್ಯರ್ಥಂ ಸುತಾ ಆಸನ್ಸುರೋಪಮಾಃ ॥ ೮೪ ॥

ಮೊದಲಾದ ಮುನಿಗಳನ್ನು ಕರೆಯಿಸಿ ಶ್ರದ್ಧೆಯಿಂದ ಅಶ್ವಮೇಧಯಾಗಗಳನ್ನು ಮಾಡು. ಯಥೇಚ್ಛವಾಗಿ ದಕ್ಷಿಣೆಯನ್ನು ಕೊಡು. ಅದರಿಂದ ನಿನ್ನದೇಹವು ಪರಿಶುದ್ಧವಾಗುವುದು ಎಂದನು. ವಸಿಷ್ಠನ ಮಾತಿನಂತೆ ದಶರಥನು ಬ್ರಾಹ್ಮಣರನ್ನು ಕರೆಯಿಸಿ ಅಶ್ವಮೇಧಯಾಗಗಳನ್ನು ಮಾಡಿದನು.

೮೨-೮೩. ಈ ಸಮಯದಲ್ಲಿ ಅಶರೀರವಾಣಿಯು ಹೀಗೆ ಕೇಳಿಸಿತು. ದಶರಥನ ಶರೀರವು ಪವಿತ್ರವಾಯಿತು. ಇವನೊಡನೆ ಮಿಕ್ಕವರು ವ್ಯವಹರಿಸಬಹುದು. ಈ ರಾಜನಿಗೆ ಮುಂದೆ ಮಕ್ಕಳೂ ಜನಿಸುವರು. ಹಿರಿಯಮಗನ ಮಹಿಮೆಯಿಂದ ದಶರಥನ ಪಾಪವೆಲ್ಲವೂ ಹೋಗುವುದು ಎಂದಿತು.

೮೪. ಆಮೇಲೆ ಕೆಲವು ಕಾಲವು ಕಳೆಯಲು ಮುನಿಶ್ರೇಷ್ಠನಾದ ಋಷ್ಯಶೃಂಗನ ಅನುಗ್ರಹದಿಂದ ದೇವತೆಗಳಂತೆ ತೇಜಸ್ವಿಗಳಾದ ನಾಲ್ವರು ಕುಮಾರರು ದಶರಥನಿಗೆ ಜನಿಸಿದರು. ಅವರು ದೇವಕಾರ್ಯಕ್ಕಾಗಿ ಜನಿಸಿದ ಮಹಾತ್ಮರು.

ಕೌಶಲ್ಯಾಯಾಂ ತಥಾ ರಾಮಃ ಸುಮಿತ್ರಾಯಾಂ ಚ ಲಕ್ಷ್ಮಣಃ ।
ಶತ್ರುಘ್ನಶ್ಚಾಪಿ ಕೈಕೇಯ್ಯಾಂ ಭರತೋ ಮತಿಮತ್ತರಃ ॥ ೮೫ ॥

ತೇ ಸರ್ವೇ ಮತಿಮಂತಶ್ಚ ಪ್ರಿಯಾ ರಾಜ್ಞೋ ವಶೇ ಸ್ಥಿತಾಃ ।
ತಂ ರಾಜಾನಮೃಷಿಃ ಪ್ರಾಪ್ಯ ವಿಶ್ವಾಮಿತ್ರಃ ಪ್ರಜಾಪತಿಃ ॥ ೮೬ ॥

ರಾಮಂ ಚ ಲಕ್ಷ್ಮಣಂ ಚಾಪಿ ಅಯಾಚತ ಮಹಾಮತೇ ।
ಯಜ್ಞಸಂರಕ್ಷಣಾರ್ಥಾಯ ಜ್ಞಾತತನ್ಮಹಿಮಾ ಮುನಿಃ ॥ ೮೭ ॥

ಚಿರಪ್ರಾಪ್ತಸುತೋ ವೃದ್ಧೋ ರಾಜಾ ನೈವೇತ್ಯಭಾಷತ ॥ ೮೮ ॥

॥ ರಾಜೋವಾಚ ॥

ಮಹತಾ ದೈವಯೋಗೇನ ಕಥಂಚಿದ್ವಾರ್ಧಕೇ ಮುನೇ ।
ಜಾತಾವಾನಂದಸಂದೋಹದಾಯಕೌ ಮಮ ಬಾಲಕೌ ॥ ೮೯ ॥

---

೮೫. ಕೌಸಲ್ಯೆಯಲ್ಲಿ ರಾಮನು ಜನಿಸಿದನು: ಸುಮಿತ್ರೆಯಲ್ಲಿ ಲಕ್ಷ್ಮಣ ಶತ್ರುಘ್ನರು ಜನಿಸಿದರು. ಭರತನು ಕೈಕೇಯಿಯಲ್ಲಿ ಜನಿಸಿದನು.

೮೬. ಆ ಕುಮಾರರೆಲ್ಲರೂ ಬುದ್ಧಿವಂತರು. ತಂದೆಗನುಸಾರವಾಗಿ ನಡೆಯುತ್ತಿದ್ದರು. ಹೀಗಿರಲು ಒಂದುದಿನ ವಿಶ್ವಾಮಿತ್ರಮುನಿಯು ದಶರಥನ ಬಳಿಗೆ ಬಂದನು.

೮೭. ರಾಮಲಕ್ಷ್ಮಣರ ಮಹಿಮೆಯನ್ನು ಬಲ್ಲ ಆ ವಿಶ್ವಾಮಿತ್ರನು ತನ್ನ ಯಜ್ಞರಕ್ಷಣೆಗಾಗಿ ರಾಮಲಕ್ಷ್ಮಣರನ್ನು ಕಳುಹಿಸು ಎಂದು ದಶರಥನೊಡನೆ ಕೇಳಿದನು.

೮೮. ಬಹುಕಾಲದಮೇಲೆ ಬಯಸಿಬಯಸಿ ಮಕ್ಕಳನ್ನು ಪಡೆದ, ಮೇಲಾಗಿ ವೃದ್ಧನಾದ ದಶರಥನು ರಾಮಲಕ್ಷ್ಮಣರನ್ನು ಕಳುಹಿಸಲು ಒಪ್ಪಲಿಲ್ಲ.

೮೯-೯೦. ಆದುದರಿಂದ ರಾಜನು ವಿಶ್ವಾಮಿತ್ರನನ್ನು ಕುರಿತು ಓ ಮುನೀಂದ್ರ, ನನ್ನ ಪೂರ್ವಸುಕೃತದಿಂದ ಈ ಮಕ್ಕಳನ್ನು ಪಡೆದಿರುವೆನು.

ಸಶರೀರಮಿದಂ ರಾಜ್ಯಂ ದಾಸ್ಯೇ ನೈವ ಸುತಾವಿಮೌ ॥ ೯೦ ॥

॥ ಬ್ರಹ್ಮೋವಾಚ ॥

ವಸಿಷ್ಠೇನ ತದಾ ಪ್ರೋಕ್ತೋ ರಾಜಾ ದಶರಥಸ್ತ್ವಿತಿ ॥ ೯೧ ॥

॥ ವಸಿಷ್ಠ ಉವಾಚ ॥

ರಘುವಃ ಪ್ರಾರ್ಥನಾಭಂಗಂ ನ ರಾಜನ್ಕ್ವಾಪಿ ಶಿಕ್ಷಿತಾಃ ॥ ೯೨ ॥

॥ ಬ್ರಹ್ಮೋವಾಚ ॥

ರಾಮಂ ಚ ಲಕ್ಷ್ಮಣಂ ಚೈವ ಕಥಂಚಿದವದನ್ನೃಪಃ ॥ ೯೩ ॥

॥ ರಾಜೋವಾಚ ॥

ವಿಶ್ವಾಮಿತ್ರಸ್ಯ ಬ್ರಹ್ಮರ್ಷೇಃ ಕುರುತಾಂ ಯಜ್ಞರಕ್ಷಣಂ ॥ ೯೪ ॥

॥ ಬ್ರಹ್ಮೋವಾಚ ॥

ವದನ್ನಿತಿ ಸುತೌ ಸೋಷ್ಣಂ ನಿಶ್ವಸನ್ಗ್ಲಪಿತಾಧರಃ ।
ಪುತ್ರೌ ಸಮರ್ಪಯಾಮಾಸ ವಿಶ್ವಾಮಿತ್ರಸ್ಯ ಶಾಸ್ತ್ರಕೃತ್ ॥ ೯೫ ॥

ಆನಂದವನ್ನುಂಟುಮಾಡುವ ಈ ಪುತ್ರರನ್ನು ಕಳುಹಿಸಲಾರೆನು. ಇವರಿನ್ನೂ ಬಾಲಕರು. ನಾನೇ ನಿನಗೆ ಸಹಾಯಮಾಡುವೆನು. ರಾಜ್ಯವನ್ನೇ ಬೇಕಾದರೆ ಕೊಡುವೆನು ಎಂದನು.

೯೧-೯೨. ಆಗ ವಸಿಷ್ಠಮುನಿಯು ಎಲೈ ರಾಜ, ರಘುವಂಶದ ರಾಜರಾರೂ ಕೇಳಿದವರಿಗೆ ಎಂತಹ ವಸ್ತುವನ್ನು ಕೇಳಿದರೂ ಇಲ್ಲವೆನ್ನುವುದನ್ನು ಕಲಿತಿರಲಿಲ್ಲ. ರಘುವಂಶದವನಾದ ನೀನೂ ಇಲ್ಲವೆನ್ನದೆ ರಾಮಲಕ್ಷ್ಮಣರನ್ನು ವಿಶ್ವಾಮಿತ್ರನೊಡನೆ ಕಳುಹಿಸು ಎಂದನು.

೯೩-೯೪, ಆಗ ದಶರಥನು ಬಹುಕಷ್ಟದಿಂದ ರಾಮಲಕ್ಷ್ಮಣರನ್ನು ಕರೆದು ಎಲೈ ರಾಮಲಕ್ಷ್ಮಣರೇ, ಬ್ರಹ್ಮರ್ಷಿಯಾದ ವಿಶ್ವಾಮಿತ್ರನ ಯಜ್ಞವನ್ನು ರಕ್ಷಿಸಿರಿ ಹೋಗಿ ಎಂದನು.

೯೫. ಹೀಗೆ ಹೇಳಿ ದುಃಖದಿಂದ ಬಿಸಿಯಾದ ನಿಟ್ಟುಸಿರನ್ನು ಬಿಡುತ್ತಾ ರಾಮಲಕ್ಷ್ಮಣರನ್ನು ವಿಶ್ವಾಮಿತ್ರನಿಗೆ ಒಪ್ಪಿಸಿದನು.

ತಥೇತ್ಯುಕ್ತ್ವಾ ದಶರಥಂ ನಮಸ್ಕೃ ಚ ಪುನಃ ಪುನಃ ।
ಜಗ್ಮತುಃ ರಕ್ಷಣಾರ್ಥಾಯ ವಿಶ್ವಾಮಿತ್ರೇಣ ತೌ ಮುದಾ ॥ ೯೬ ॥

ತತಃ ಪ್ರಹೃಷ್ಟಃ ಸ ಮುನಿರ್ಮುದಾ ಪ್ರಾದಾತ್ತದೋರ್ಭಯೋಃ ।
ಮಾಹೇಶ್ವರೀಂ ಮಹಾವಿದ್ಯಾಂ ಧನುರ್ವಿದ್ಯಾಪುರಃಸರಾಂ ॥ ೯೭ ॥

ಶಾಸ್ತ್ರೀಮಾಸ್ತ್ರೀಂ ಲೌಕಿಕೀಂ ಚ ರಥವಿದ್ಯಾಂ ಗಜೋದ್ಭವಾಂ ।
ಅಶ್ವವಿದ್ಯಾಂ ಗದಾವಿದ್ಯಾಂ ಮಂತ್ರಾಹ್ವಾನವಿಸರ್ಜನೇ ॥ ೯೮ ॥

ಸರ್ವವಿದ್ಯಾಮಥಾವಾಪ್ಯ ಉಭೌ ತೌ ರಾಮಲಕ್ಷ್ಮಣೌ ।
ವನೌಕಸಾಂ ಹಿತಾರ್ಥಾಯ ಜಘ್ನತುಸ್ತಾಟಕಾಂ ವನೇ ॥ ೯೯ ॥

ಅಹಲ್ಯಾಂ ಶಾಪನಿರ್ಮುಕ್ತಾಂ ಪಾದಸ್ಪರ್ಶಾಚ್ಚ ಚಕ್ರತುಃ ।
ಯಜ್ಞವಿಧ್ವಂಸನಾಯಾತಾನ್ ಜಘ್ನತುಸ್ತತ್ರ ರಾಕ್ಷಸಾನ್ ॥ ೧೦೦ ॥

---

೯೬. ರಾಮಲಕ್ಷ್ಮಣರು ತಂದೆಯ ಮಾತನ್ನಂಗೀಕರಿಸಿ ಪುನಃಪುನಃ ನಮಸ್ಕರಿಸಿ ಯಜ್ಞರಕ್ಷಣೆಗಾಗಿ ವಿಶ್ವಾಮಿತ್ರನೊಡನೆ ಅವನ ಆಶ್ರಮಕ್ಕೆ ಹೊರಟರು.

೯೭. ಆಮೇಲೆ ವಿಶ್ವಾಮಿತ್ರಮುನಿಯು ಮಹೇಶ್ವರನಿಂದ ಪಡೆದ ಮಹಾವಿದ್ಯೆಯಾದ ಧನುರ್ವಿದ್ಯೆಯನ್ನು ರಾಮಲಕ್ಷ್ಮಣರಿಗೆ ಉಪದೇಶಿಸಿದನು.

೯೮. ಶಸ್ತ್ರವಿದ್ಯೆ ಅಸ್ತ್ರವಿದ್ಯೆ ಲೌಕಿಕವಿದ್ಯೆ ರಥವಿದ್ಯೆ ಗಜವಿದ್ಯೆ ಅಶ್ವವಿದ್ಯೆ ಗದಾವಿದ್ಯೆ ಮಂತ್ರಪ್ರಯೋಗ ಮತ್ತು ಉಪಸಂಹಾರಗಳು ಇವುಗಳನ್ನೂ ಉಪದೇಶಿಸಿದನು.

೯೯. ಹೀಗೆ ವಿದ್ಯೆಯೆಲ್ಲವನ್ನೂ ಪಡೆದು ರಾಮಲಕ್ಷ್ಮಣರು ವನವಾಸಿಗಳಾದ ಮುನಿಗಳ ಕ್ಷೇಮಕ್ಕಾಗಿ ತಾಟಕೆಯೆಂಬ ರಾಕ್ಷಸಿಯನ್ನು ಸಂಹರಿಸಿದರು.

೧೦೦. ಆಮೇಲಾ ರಾಮಲಕ್ಷ್ಮಣರು ಪಾದಸ್ಪರ್ಶದಿಂದ ಅಹಲ್ಯಾದೇವಿಯ ಶಾಪವನ್ನು ಹೋಗಲಾಡಿಸಿದರು. ಯಜ್ಞನಾಶವನ್ನು ಮಾಡಲು ಬಂದ ರಾಕ್ಷಸರನ್ನು ಸಂಹರಿಸಿದರು. ಹೀಗೆ ಆ ರಾಮಲಕ್ಷ್ಮಣರು ವಿಶ್ವಾಮಿತ್ರನುಪದೇಶಿಸಿದ ವಿದ್ಯೆಯ ಬಲದಿಂದ ಯಜ್ಞರಕ್ಷಣವನ್ನು ಮಾಡಿದರು.

ಕೃತವಿದ್ಯೌ ಧನುಷ್ಪಾಣೀ ಚಕ್ರತುರ್ಯಜ್ಞರಕ್ಷಣಂ ।
ತತೋ ಮಹಾಮಖೇ ವೃತ್ತೇ ವಿಶ್ವಾಮಿತ್ರೋ ಮುನೀಶ್ವರಃ ॥ ೧೦೧ ॥

ಪುತ್ರಾಭ್ಯಾಂ ಸಹಿತೋ ರಾಜ್ಞೋ ಜನಕಂ ದ್ರಷ್ಟುಮಭ್ಯಗಾತ್ ।
ಚಿತ್ರಾಮದರ್ಶಯತ್ತತ್ರ ರಾಜಮಧ್ಯೇ ನೃಪಾತ್ಮಜಃ ॥ ೧೦೨ ॥

ರಾಮಃ ಸೌಮಿತ್ರಿಸಹಿತೋ ಧನುರ್ವಿದ್ಯಾಂ ಗುರೋರ್ಮತಾಂ ।
ತತ್ಪ್ರೀತೋ ಜನಕಃ ಪ್ರಾದಾತ್ಸೀತಾಂ ಲಕ್ಷ್ಮೀಮಯೋನಿಜಾಂ ॥ ೧೦೩ ॥

ತಥೈವ ಲಕ್ಷ್ಮಣಸ್ಯಾಪಿ ಭರತಸ್ಯಾನುಜಸ್ಯ ಚ ।
ಶತ್ರುಘ್ನ ಭರತಾದೀನಾಂ ವಸಿಷ್ಠಾದಿಮತೇ ಸ್ಥಿತಃ ॥ ೧೦೪ ॥

ರಾಜಾ ದಶರಥಃ ಶ್ರೀಮಾನ್ವಿವಾಹಮಕರೋನ್ಮನೇ ।
ತತೋ ಬಹುತಿಥೇ ಕಾಲೇ ರಾಜ್ಯಂ ತಸ್ಯ ಪ್ರಯಚ್ಛತಿ ॥ ೧೦೫ ॥

---

೧೦೧. ಬಳಿಕ ರಾಮಲಕ್ಷ್ಮಣರನ್ನು ಕರೆದುಕೊಂಡು ವಿಶ್ವಾಮಿತ್ರನು ಜನಕರಾಜನ ಯಜ್ಞಕ್ಕೆ ತೆರಳಿದನು.

೧೦೨-೧೦೩. ಜನಕರಾಜನ ಸಭೆಯಲ್ಲಿ ರಾಮನು ಅದ್ಭುತವಾದ ಧನುರ್ವಿದ್ಯೆಯನ್ನು ಪ್ರದರ್ಶಿಸಿ ಶಿವಧನುಸ್ಸನ್ನು ಮುರಿದನು. ಆಗ ಜನಕನು ಪ್ರೀತನಾಗಿ ಅಯೋನಿಜೆಯೂ ಲಕ್ಷ್ಮೀರೂಪಳೂ ಆದ ಸೀತೆಯನ್ನು ರಾಮನಿಗೆ ಮದುವೆಮಾಡಿಕೊಟ್ಟನು.

೧೦೪. ಮತ್ತು ವಸಿಷ್ಠಮುನಿ ಮೊದಲಾದವರ ಇಷ್ಟದಂತೆ ಲಕ್ಷ್ಮಣ ಭರತ ಶತ್ರುಘ್ನರಿಗೂ ಕನ್ಯೆಯರನ್ನು ಕೊಟ್ಟು ಮದುವೆಮಾಡಿದನು. ಈರೀತಿ ದಶರಥರಾಜನ ಮಕ್ಕಳೆಲ್ಲರಿಗೂ ವಿಜೃಂಭಣೆಯಿಂದ ಮದುವೆಯಾಯಿತು.

೧೦೫. ಹೀಗೆ ಕೆಲವುಕಾಲವು ಕಳೆಯಲು ದಶರಥನು ಪ್ರಜೆಗಳ ಮತ್ತು ವಸಿಷ್ಠಗುರುವಿನ ಇಷ್ಟದಂತೆ ರಾಮನಿಗೆ ರಾಜ್ಯವನ್ನು ವಹಿಸುವ ಇಚ್ಛೆಯುಳ್ಳವನಾದನು.

ನೃಪತೌ ಸರ್ವಲೋಕಾನಾಮನುಮತ್ಯಾ ಗುರೋರಪಿ ।
ಮಂಥರಾತ್ಮಕದುರ್ದೈವಪ್ರೇರಿತಾ ಮತ್ಸರಾಕುಲಾ ॥ ೧೦೬ ॥

ಕೈಕೇಯಿಯಾ ವಿಘ್ನಮಾತಸ್ಥೇ ವನಪ್ರವ್ರಾಜನಂ ತಥಾ ।
ಭರತಸ್ಯ ಚ ತದ್ರಾಜ್ಯಂ ರಾಜ್ಞಾ ನೈವ ಚ ದತ್ತವಾನ್ ॥ ೧೦೭ ॥

ಪಿತರಂ ಸತ್ಯವಾಕ್ಯಂ ತಂ ಕುರ್ವನ್ರಾಮೋ ಮಹಾವನಂ ।
ವಿವೇಶ ಸೀತಯಾ ಸಾರ್ಧಂ ತಥಾ ಸೌಮಿತ್ರಿಣಾ ಸಹ ॥ ೧೦೮ ॥

ಸತಾಂ ಚ ಮಾನಸಂ ಶುದ್ಧಂ ಸ ವಿವೇಶ ಸ್ವಕೈರ್ಗುಣೈಃ ।
ತಸ್ಮಿನ್ವಿನಿರ್ಗತೇ ರಾಮೇ ವನವಾಸಾಯ ದೀಕ್ಷಿತೇ ॥ ೧೦೯ ॥

ಸಮಂ ಲಕ್ಷ್ಮಣಸೀತಾಭ್ಯಾಂ ರಾಜ್ಯತೃಷ್ಣಾವಿವರ್ಜಿತೇ ।
ತಂ ರಾಮಂ ಚಾಪಿ ಸೌಮಿತ್ರಿಂ ಸೀತಾಂ ಚ ಗುಣಶಾಲಿನೀಂ ॥ ೧೧೦ ॥

ದುಃಖೇನ ಮಹತಾವಿಷ್ಟೋ ಬ್ರಹ್ಮಶಾಪಂ ಚ ಸಂಸ್ಮರನ್ ।
ತದಾ ದಶರಥೋ ರಾಜಾ ಪ್ರಾಣಾಂಸ್ತತ್ಯಾಜ ದುಃಖಿತಃ ॥ ೧೧೧ ॥

೧೦೬-೧೦೭. ಆದರೆ ಮಂಥರೆಯೆಂಬ ದುರದೃಷ್ಟದಿಂದ ಪ್ರೇರಿಸಲ್ಪಟ್ಟ ಕೈಕೇಯಿಯು ಅಸೂಯಾಪರಳಾಗಿ ರಾಮನ ರಾಜ್ಯಾಭಿಷೇಕಕ್ಕೆ ಅಡ್ಡಿಮಾಡಿದಳು. ಭರತನಿಗೆ ರಾಜ್ಯವನ್ನು ಕೊಡುವಂತೆಯೂ ರಾಮನನ್ನು ಕಾಡಿಗಟ್ಟುವಂತೆಯೂ ಹಠಹಿಡಿದು ದಶರಥನನ್ನು ಬಲಾತ್ಕರಿಸಿದಳು. ಆದರೆ ದಶರಥನು ಕೈಕೇಯಿಯ ಮಾತನ್ನೊಪ್ಪಲಿಲ್ಲ.

೧೦೮. ಆಗ ರಾಮನು ತಂದೆಯ ಮಾತನ್ನು ಸತ್ಯವಾಗಿ ಮಾಡಲು ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ ತಾನೇ ಕಾಡಿಗೆ ತೆರಳಿದನು.

೧೦೯-೧೧೧. ಸತ್ಪುರುಷರ ಮನಸ್ಸು ಪರಿಶುದ್ಧವಾದುದು. ರಾಜ್ಯಲೋಭಾದಿಗಳು ಅವರಿಗಿಲ್ಲ. ಅದರಂತೆ ರಾಮನು ರಾಜ್ಯವನ್ನಪೇಕ್ಷಿಸದೆ ಲಕ್ಷ್ಮಣ ಸೀತೆಯರೊಡನೆ ಕಾಡಿಗೆ ಹೋದನು. ಇತ್ತ ದಶರಥನು ಪುತ್ರಶೋಕದಿಂದ ಬಳಲಿ ಹಿಂದಿನ ಬ್ರಾಹ್ಮಣಶಾಪವನ್ನು ನೆನೆದು ಮರುಗಿ ರಾಮ ಲಕ್ಷ್ಮಣ ಗುಣವತಿಯಾದ ಸೀತೆ ಇವರನ್ನು ಸದಾ ಚಿಂತಿಸುತ್ತಾ ದುಃಖದಿಂದ ಪ್ರಾಣಗಳನ್ನು ಬಿಟ್ಟನು.

ಕೃತಕರ್ಮವಿಪಾಕೇನ ರಾಜಾ ನೀತೋ ಯಮಾನುಗೈಃ ।
ತಸ್ಮೈ ರಾಜ್ಞೇ ಮಹಾಪ್ರಾಜ್ಞ ಯಾವತ್ಸ್ಥಾವರಜಂಗಮೇ ॥ ೧೧೨ ॥

ಯಮಸದ್ಮನ್ಯನೇಕಾನಿ ತಾಮಿಸ್ರಾದೀನಿ ನಾರದ ।
ನರಕಾಣ್ಯಥ ಘೋರಾಣಿ ಭೀಷಣಾನಿ ಬಹೂನಿ ಚ ॥ ೧೧೩ ॥

ತತ್ರ ಕ್ಷಿಪ್ತಸ್ತದಾ ರಾಜಾ ನರಕೇಷು ಪೃಥಕ್ಪೃಥಕ್ ।
ಪಚ್ಯತೇ ಛಿದ್ಯತೇ ರಾಜಾ ಪಿಷ್ಯತೇ ಚೂರ್ಣ್ಯತೇ ತಥಾ ॥ ೧೧೪ ॥

ಶೋಷ್ಯತೇ ದಶ್ಯತೇ ಭೂಯೋ ದಹ್ಯತೇ ಚ ನಿಮಜ್ಜ್ಯತೇ ।
ಏವಮಾದಿಷು ಘೋರೇಷು ನರಕೇಷು ಸ ಪಚ್ಯತೇ ॥ ೧೧೫ ॥

ರಾಮೋಽಪಿ ಗಚ್ಛನ್ನಧ್ವಾನಂ ಚಿತ್ರಕೂಟಮಥಾಗತಂ ।
ತತ್ರೈವ ತ್ರೀಣಿ ವರ್ಷಾಣಿ ವ್ಯತೀತಾನಿ ಮಹಾಮತೇ ॥ ೧೧೬ ॥

ಪುನಃ ಸ ದಕ್ಷಿಣಾಮಾಶಾಮಾಕ್ರಾಮದ್ದಂಡಕಂ ವನಂ ।
ವಿಖ್ಯಾತಂ ತ್ರಿಷು ಲೋಕೇಷು ದೇಶಾನಾಂ ತದ್ಧಿ ಪುಣ್ಯದಂ ॥ ೧೧೭ ॥

೧೧೨-೧೧೩. ಬ್ರಹ್ಮಹತ್ಯೆಯ ಪಾಪದಿಂದ ದಶರಥನನ್ನು ಯಮದೂತರು ತಾಮಿಸ್ರ ಮೊದಲಾದ ಅನೇಕ ಘೋರ ನರಕಗಳಲ್ಲಿ ಶಿಕ್ಷಿಸಿದರು.

೧೧೪-೧೧೫. ಯಮದೂತರು ನರಕಗಳಲ್ಲಿ ದಶರಥನನ್ನು ಬೇಯಿಸುವರು, ಒಂದುಕಡೆ ಕತ್ತರಿಸುವರು, ಮತ್ತೊಂದೆಡೆಮರ್ದಿಸುವರು, ಚೂರುಚೂರಾಗಿ ಮಾಡುವರು, ಎಣ್ಣೆಯಲ್ಲಿ ಕರಿಯುವರು, ಕ್ರೂರಪ್ರಾಣಿಗಳಿಂದ ಕಚ್ಚಿಸುವರು, ಬೆಂಕಿಯಲ್ಲಿ ಸುಡುವರು, ನೀರಿನಲ್ಲಿ ಮುಳುಗಿಸುವರು. ಇವೇ ಮೊದಲಾದ ನರಕ ಯಾತನೆಗಳನ್ನು ದಶರಥರಾಜನು ಅನುಭವಿಸುತ್ತಿದ್ದನು.

೧೧೬. ಅತ್ತ ರಾಮನು ಅರಣ್ಯದಲ್ಲಿ ಸಂಚರಿಸುತ್ತಾ ಚಿತ್ರಕೂಟಕ್ಕೆ ಬಂದನು. ಅಲ್ಲಿ ಮೂರು ವರ್ಷಗಳ ವರೆಗೆ ವಾಸಮಾಡಿದನು.

೧೧೭. ಆಮೇಲೆ ದಕ್ಷಿಣದಿಕ್ಕಿಗೆ ಪ್ರಯಾಣಬೆಳಸಿ ದಂಡಕಾರಣ್ಯಕ್ಕೆ ಬಂದನು. ದಂಡಕಾರಣ್ಯವು ಮಹಾ ಪವಿತ್ರವಾದ ಕ್ಷೇತ್ರಶ್ರೇಷ್ಠವು.

ಪ್ರಾವಿಶತ್ತನ್ಮಹಾರಣ್ಯಂ ಭೀಷಣಂ ದೈತ್ಯಸೇವಿತಂ ।
ತದ್ಭಯಾದೃಷಿಭಿಸ್ತ್ಯಕ್ತಂ ಹತ್ವಾ ದೈತ್ಯಾಂಸ್ತು ರಾಕ್ಷಸಾನ್ ॥ ೧೧೮ ॥

ವಿಚರನ್ದಂಡಕಾರಣ್ಯೇ ಋಷಿಸೇವ್ಯಮಥಾಕರೋತ್ ।
ತತ್ರೇದಂ ವೃತ್ತಮಾಖ್ಯಾಸ್ಯೇ ಶೃಣು ನಾರದ ಯತ್ನತಃ ॥ ೧೧೯ ॥

ತಾವಚ್ಛನೈಸ್ತ್ವಗಾದ್ರಾಮೋ ಯಾವದ್ಯೋಜನಪಂಚಕಂ ।
ಗೌತಮೀಂ ಸಮನುಪ್ರಾಪ್ತೋ ರಾಜಾಪಿ ನರಕೇ ಸ್ಥಿತಃ ॥ ೧೨೦ ॥

ಯಮಃ ಸ್ವಕಿಂಕರಾನಾಹ ರಾಮೋ ದಶರಥಾತ್ಮಜಃ ।
ಗೌತಮೀಮಭಿತೋ ಯಾತಿ ಪಿತರಂ ತಸ್ಯ ಧೀಮತಃ ॥ ೧೨೧ ॥

ಆಕರ್ಷಂತ್ವಥ ರಾಜಾನಂ ನರಕಾನ್ನಾತ್ರ ಸಂಶಯಃ ।
ಉತ್ತೀರ್ಯ ಗೌತಮೀಂ ಯಾತಿ ಯಾವದ್ಯೋಜನಪಂಚಕಂ ॥ ೧೨೨ ॥

---

೧೧೮. ದಂಡಕಾರಣ್ಯದಲ್ಲಿ ಅನೇಕ ಘೋರರಾಕ್ಷಸರು ವಾಸವಾಗಿದ್ದರು. ರಾಕ್ಷಸರ ಭಯದಿಂದ ಋಷಿಗಳು ಆ ಅರಣ್ಯವನ್ನು ತ್ಯಜಿಸಿದ್ದರು. ಇಂತಹ ಅರಣ್ಯದಲ್ಲಿ ಸಂಚರಿಸುತ್ತಾ ರಾಮನು ಅಲ್ಲಿದ್ದ ರಾಕ್ಷಸರನ್ನು ಕೊಂದು ಋಷಿಗಳು ನೆಲಸುವಂತೆ ಮಾಡಿದನು.

೧೧೯-೧೨೦. ಆಗ ಅಲ್ಲಿ ನಡೆದ ಒಂದು ವೃತ್ತಾಂತವನ್ನು ಹೇಳುವೆನು. ಓ ನಾರದ, ಶ್ರದ್ಧೆಯಿಂದ ಕೇಳು. ದಂಡಕಾರಣ್ಯದಲ್ಲಿ ರಾಮನು ಸಂಚರಿಸುತ್ತಾ ಐದುಯೋಜನದವರೆಗೆ ಹೋಗಿ ಗೌತಮೀನದಿಯ ತೀರಕ್ಕೆ ಬಂದನು. ಆಗಲೂ ಅತ್ತ ದಶರಥನು ನರಕದಲ್ಲಿ ಕೊಳೆಯುತ್ತಿದ್ದನು.

೧೨೧. ಆಗ ಯಮನು ತನ್ನ ದೂತರಿಗೆ ಹೀಗೆ ಹೇಳಿದನು—ದಶರಥನ ಮಗನಾದ ರಾಮನು ಗೌತಮೀತೀರಕ್ಕೆ ಬರುತ್ತಲಿರುವನು. ಅವನ ತಂದೆಯಾದ ದಶರಥನನ್ನು ಈ ಕೂಡಲೇ ನರಕದಿಂದ ಮೇಲಕ್ಕೆತ್ತಿರಿ.

೧೨೨. ಐದು ಯೋಜನಗಳನ್ನು ದಾಟಿ ರಾಮನು ಗೌತಮೀನದಿಯನ್ನು ಸೇರುವುದರೊಳಗಾಗಿ ದಶರಥನನ್ನು ನರಕದಿಂದ ಮೇಲಕ್ಕೆತ್ತಿರಿ.

ರಾಮಸ್ತಾವತ್ತಸ್ಯ ಪಿತಾ ನರಕೇ ನೈವ ಪಚ್ಯತಾಂ ।
ಯದೇತನ್ಮದ್ವಚಃ ಪುಣ್ಯಂ ನ ಕುರ್ಯುರ್ಯದಿ ದೂತಕಾಃ ॥ ೧೨೩ ॥

ತತಶ್ಚ ನರಕೇ ಘೋರೇ ಯೂಯಂ ಸರ್ವೇ ನಿಮಜ್ಜಥ ।
ಯಾ ಕಾಪ್ಯುಕ್ತಾ ಪರಾ ಶಕ್ತಿಃ ಶಿವಸ್ಯ ಸಮವಾಯಿನೀ ॥ ೧೨೪ ॥

ತಾಮೇವ ಗೌತಮೀಂ ಸಂತೋ ವದಂತ್ಯಂಭಃಸ್ವರೂಪಿಣೀಂ ।
ಹರಿಬ್ರಹ್ಮಮಹೇಶಾನಾಂ ಮಾನ್ಯಾ ವಂದ್ಯಾ ಚ ಸೈವ ಯತ್ ॥ ೧೨೫ ॥

ನಿಸ್ತೀರ್ಯತೇ ನ ಕೇನಾಪಿ ತದತಿಕ್ರಮಜಂ ತ್ವಘಂ ।
ಪಾಪಿನೋಽಪ್ಯಾತ್ಮಜಃ ಕಶ್ಚಿದ್ಯಶ್ಚ ಗಂಗಾಮನುಸ್ಮರೇತ್ ॥ ೧೨೬ ॥

ಸೋಽನೇಕದುರ್ಗನಿರಯಾನ್ನಿರ್ಗತೋ ಮುಕ್ತತಾಂ ವ್ರಜೇತ್ ।
ಕಿಂ ಪುನಸ್ತಾದೃಶಃ ಪುತ್ರೋ ಗೌತಮೀನಿಕಟೇ ಸ್ಥಿತಃ ॥ ೧೨೭ ॥

---

೧೨೩. ಹಿತಕರವಾದ ನನ್ನ ಈ ಮಾತು ನಡೆಸದಿದ್ದರೆ ನೀವೂ ಘೋರ ನರಕದಲ್ಲಿ ಬೀಳುವಿರಿ.

೧೨೪–೧೨೫, ಜಲರೂಪಳಾದ ಗೌತಮಿಯು ಶಿವನ ಒಡನಾಡಿಯಾದ ಆದಿಶಕ್ತಿಯು. ಹರಿಬ್ರಹ್ಮಶಿವರು ಇವಳನ್ನು ಗೌರವಿಸುವರು. ಜಗದ್ವಂದ್ಯಳವಳು.

೧೨೬. ಗೌತಮಿಯಲ್ಲಿ ಸ್ನಾನಮಾಡಿದ ಯಾವನ ಪಾಪವುತಾನೇ ನಾಶವಾಗುವುದಿಲ್ಲ. ಪಾಪಿಯಾಗಿದ್ದರೂ ಸಹ ಅವನ ಮಗನು ಗಂಗೆಯನ್ನು ಸ್ಮರಿಸಿದರೆ ಪಾಪಗಳೆಲ್ಲವೂ ನಾಶವಾಗಿ ಮುಕ್ತಿಯನ್ನು ಪಡೆಯುವನು.

೧೨೭. ಹೀಗಿರಲು ದಶರಥನ ಪುತ್ರನು, ಗೌತಮೀತೀರದಲ್ಲಿರುವನು. ಇಂತಹವನ ತಂದೆಯನ್ನು ನರಕದಲ್ಲಿ ಶಿಕ್ಷಿಸಲು ಯಾರೂ ಸಮರ್ಥರಲ್ಲ ಎಂದನು.

ಯಸ್ಯಾಸೌ ನರಕೇ ಪಕ್ತುಂ ನ ಕೈರಪಿ ಹಿ ಶಕ್ಯತೇ ।
ದಕ್ಷಿಣಾಶಾಪತೇರ್ವಾಕ್ಯಂ ನಿಶಮ್ಯ ಯಮಕಿಂಕರಾಃ ॥ ೧೨೮ ॥

ನರಕೇ ಪಚ್ಯಮಾನಂ ತಮಯೋಧ್ಯಾಪತಿಂ ನೃಪಂ ।
ಉತ್ತಾರ್ಯ ಘೋರನರಕಾತ್ಸ್ವಚನಂ ಚೇದಮಬ್ರುವನ್ ॥ ೧೨೯ ॥

॥ ಯಮಕಿಂಕರಾ ಊಚುಃ ॥

ಧನ್ಯೋಽಸಿ ನೃಪಶಾರ್ದೂಲ ಯಸ್ಯ ಪುತ್ರಃ ಸ ತಾದೃಶಃ ।
ಇಹ ಚಾಮುತ್ರ ವಿಶ್ರಾಂತಿಃ ಸುಪುತ್ರಃ ಕೇನ ಲಭ್ಯತೇ ॥ ೧೩೦ ॥

॥ ಬ್ರಹ್ಮೋವಾಚ ॥

ಸ ವಿಶ್ರಾಂತಃ ಶನೈ ರಾಜಾ ಕಿಂಕರಾನ್ವಾಕ್ಯಮಬ್ರವೀತ್ ॥ ೧೩೧ ॥

॥ ರಾಜೋವಾಚ ॥

ನರಕೇಷ್ವಥ ಘೋರೇಷು ಪಚ್ಯಮಾನಃ ಪುನಃ ಪುನಃ ।
ಕಥಂ ತ್ವಾಕರ್ಷಿತಃ ಶೀಘ್ರಂ ತನ್ಮೇ ವಕ್ತುಮಿಹಾರ್ಹಥ ॥ ೧೩೨ ॥

॥ ಬ್ರಹ್ಮೋವಾಚ ॥

ತತ್ರ ಕಶ್ಚಿಚ್ಛಾಂತಮನಾ ರಾಜಾನಮಿದಮಬ್ರವೀತ್ ॥ ೧೩೩ ॥

೧೨೮-೧೨೯. ಯಮನ ಆ ಮಾತನ್ನು ಕೇಳಿ ಯಮದೂತರು ನರಕದಲ್ಲಿ ಕೊಳಯುತ್ತಿದ್ದ ಅಯೋಧ್ಯಾಧಿಪತಿಯಾದ ದಶರಥನನ್ನು ಮೇಲಕ್ಕೆತ್ತಿ

೧೩೦. ಎಲೈ ದಶರಥರಾಜ, ರಾಮನಂತಹ ಮಗನನ್ನು ಪಡೆದ ನೀನು ಧನ್ಯನು. ಪಿತನಿಗೆ ಇಹಪರಗಳಲ್ಲಿ ಸುಖವನ್ನುಂಟುಮಾಡುವ ಪುತ್ರರು ಲಭಿಸುವುದು ಬಹುವಿರಳ ಎಂದರು.

೧೩೧-೧೩೨. ದಶರಥನು ವಿಶ್ರಾಂತಿಗೊಂಡು ಎಲೈ ಯಮದೂತರೇ, ಘೋರನರಕಯಾತನೆಗಳನ್ನನುಭವಿಸುತ್ತಲಿದ್ದ ನನ್ನನ್ನು ಹೀಗೆ ಅಕಸ್ಮಾತ್ತಾಗಿ ಮೇಲಕ್ಕೆತ್ತಲು ಕಾರಣವೇನು ? ಎನ್ನಲು,

೧೩೩-೧೩೪. ಆಗ ಓರ್ವ ಯಮದೂತನು ಸಮಾಧಾನದಿಂದ ರಾಜನನ್ನು ಕುರಿತು ಎಲೈ ರಾಜ, ವೇದಶಾಸ್ತ್ರಪುರಾಣಗಳಲ್ಲಿ ಈ ವಿಷಯವು ರಹಸ್ಯ

॥ ಯಮದೂತ ಉವಾಚ ॥

ವೇದಶಾಸ್ತ್ರಪುರಾಣಾದಾವೇತದ್ಗೋಪ್ಯಂ ಪ್ರಯತ್ನತಃ ।
ಪ್ರಕಾಶ್ಯತೇ ತದಪಿ ತೇ ಸಾಮರ್ಥ್ಯಂ ಪುತ್ರತೀರ್ಥಯೋಃ ॥ ೧೩೪ ॥

ರಾಮಸ್ತವ ಸುತಃ ಶ್ರೀಮಾನ್ಗೌತಮೀತೀರಮಾಗತಃ ।
ತಸ್ಮಾತ್ತ್ವಂ ನರಕಾದ್ಘೋರಾದಾಕೃಷ್ಟೋಽಸಿ ನರೋತ್ತಮ ॥ ೧೩೫ ॥

ಯದಿ ತ್ವಾಂ ತತ್ರ ಗೌತಮ್ಯಾಂ ಸ್ಮರೇದ್ರಾಮಃ ಸಲಕ್ಷ್ಮಣಃ ।
ಸ್ನಾನಂ ಕೃತ್ವಾಥ ಪಿಂಡಾದಿ ತೇ ದದ್ಯಾತ್ಸ ನೃಪೋತ್ತಮ ।
ತತಸ್ತ್ವಂ ಸರ್ವಪಾಪೇಭ್ಯೋ ಮುಕ್ತೋ ಯಾಸಿ ತ್ರಿವಿಷ್ಟಪಂ ॥ ೧೩೬ ॥

॥ ರಾಜೋವಾಚ ॥

ತತ್ರ ಗತ್ವಾ ಭವದ್ವಾಕ್ಯಮಾಖ್ಯಾಸ್ಯೇ ಸ್ವಸುತೌ ಪ್ರತಿ ।
ಭವಂತ ಏವ ಶರಣಮನುಜ್ಞಾಂ ದಾತುಮರ್ಹಥ ॥ ೧೩೭ ॥

॥ ಬ್ರಹ್ಮೋವಾಚ ॥

ತದ್ರಾಜವಚನಂ ಶ್ರುತ್ವಾ ಕೃಪಯಾ ಯಮಕಿಂಕರಾಃ ।
ಆಜ್ಞಾಂ ಚ ಪ್ರದದುಸ್ತಸ್ಮೈ ರಾಜಾ ಪ್ರಾಗಾತ್ಸುತೌ ಪ್ರತಿ ॥ ೧೩೮ ॥

ವಾಗಿದೆ. ಆದರೂ ನಿನಗದನ್ನು ಹೇಳಿ ನಿನ್ನ ಪುತ್ರನ ಮತ್ತು ಗೌತಮೀತೀರ್ಥದ ಮಹಿಮೆಯನ್ನು ಹೇಳುವೆನು.

೧೩೫. ಮಹಾಮಹಿಮನಾದ ನಿನ್ನ ಪುತ್ರ ರಾಮನು ಗೌತಮೀತೀರಕ್ಕೆ ಬಂದಿರುವನು. ಆದುದರಿಂದ ನಿನ್ನನ್ನು ನರಕದಿಂದ ಮೇಲಕ್ಕೆತ್ತಿರುವೆವು.

೧೩೬. ಗೌತಮೀತೀರದಲ್ಲಿ ರಾಮನು ಲಕ್ಷ್ಮಣನೊಡನೆ ನಿನ್ನನ್ನು ಸ್ಮರಿಸಿ ಸ್ನಾನಮಾಡಿ ಪಿಂಡಪ್ರದಾನಮಾಡಿದರೆ ನೀನು ಪಾಪಗಳೆಲ್ಲವನ್ನೂ ಕಳೆದುಕೊಂಡು ಸ್ವರ್ಗವನ್ನು ಪಡೆಯುವೆ ಎಂದನು.

೧೩೭. ಅದಕ್ಕೆ ರಾಜನು ಎಲೈ ದೂತರೆ, ಅಲ್ಲಿಗೆ ಹೋಗಿ ಈ ವಿಷಯವನ್ನು ನನ್ನ ಮಕ್ಕಳಿಗೆ ಹೇಳುವೆನು. ನೀವೇ ನನಗೆ ಶರಣು. ನನಗೆ ಅನುಜ್ಞೆಯನ್ನು ಕೊಡಿ ಎಂದನು.

೧೩೮. ದಶರಥನ ಮಾತನ್ನು ಕೇಳಿ ಯಮದೂತರು ಕೃಪೆಯಿಂದ ಅನುಮತಿಯನ್ನು ಕೊಟ್ಟರು. ರಾಜನು ಮಕ್ಕಳೆಡೆಗೆ ಹೋದನು.

ಭೀಷಣಂ ಯಾತನಾದೇಹಮಾಪನ್ನೋ ನಿಃಶ್ವಸನ್ಮುಹುಃ ।
ನಿರೀಕ್ಷ್ಯ ಸ್ವಂ ಲಜ್ಜಮಾನಃ ಕೃತಂ ಕರ್ಮ ಚ ಸಂಸ್ಮರನ್ ॥ ೧೩೯ ॥

ಸ್ವೇಚ್ಛಯಾ ವಿಹರನ್ಗಂಗಾಮಾಸಸಾದ ಚ ರಾಘವಃ ।
ಗೌತಮ್ಯಾಸ್ತಟಮಾಶ್ರಿತ್ಯ ರಾಮೋ ಲಕ್ಷ್ಮಣ ಏವ ಚ ॥ ೧೪೦ ॥

ಸೀತಯಾ ಸಹ ವೈದೇಹ್ಯಾ ಸಸ್ನೌ ಚೈವ ಯಥಾವಿಧಿ ।
ನೈವ ತತ್ರಾಭವದ್ಭೋಜ್ಯಂ ಭಕ್ಷ್ಯಂ ವಾ ಗೌತಮೀತಟೇ ॥ ೧೪೧ ॥

ತದ್ದಿನೇ ತತ್ರ ವಸತಾಂ ಗೌತಮೀತೀರವಾಸಿನಾಂ ।
ತದ್ದೃಷ್ಟ್ವಾ ದುಃಖಿತೋ ಭ್ರಾತಾ ಲಕ್ಷ್ಮಣೋ ರಾಮಮಬ್ರವೀತ್ ॥ ೧೪೨ ॥

॥ ಲಕ್ಷ್ಮಣ ಉವಾಚ ॥

ಪುತ್ರೌ ದಶರಥಸ್ಯಾವಾಂ ತವಾಪಿ ಬಲಮೀದೃಶಂ ।
ನಾಸ್ತಿ ಭೋಜ್ಯಮಥಾಸ್ಮಾಕಂ ಗಂಗಾತೀರನಿವಾಸಿನಾಂ ॥ ೧೪೩ ॥

॥ ರಾಮ ಉವಾಚ ॥

ಭ್ರಾತರ್ಯದ್ವಿಹಿತಂ ಕರ್ಮ ನೈವ ತಚ್ಚಾನ್ಯಥಾ ಭವೇತ್ ।
ಪೃಥಿವ್ಯಾಮನ್ನಪೂರ್ಣಾಯಾಂ ವಯಮನ್ನಾಭಿಲಾಷಿಣಃ ॥ ೧೪೪ ॥

---

೧೩೯. ಭಯಂಕರವಾದ ಯಾತನಾಶರೀರದಿಂದಿದ್ದ ದಶರಥನು ತನ್ನ ದುರವಸ್ಥೆಗೆ ಲಜ್ಜೆಪಡುತ್ತಾ ವ್ಯಸನದಿಂದ ಅಲ್ಲಿಗೆ ಹೋದನು.

೧೪೦. ಅತ್ತ ರಾಮನು ವಿಹರಿಸುತ್ತಾ ಗಂಗಾತೀರಕ್ಕೆ ಬಂದನು. ಆ ನದಿಯಲ್ಲಿ ಲಕ್ಷ್ಮಣಸೀತೆಯರೊಡನೆ ವಿಧಿವತ್ತಾಗಿ ಸ್ನಾನಮಾಡಿದನು.

೧೪೧. ಆದಿನ ಗೌತಮೀತೀರದಲ್ಲಿ ಆ ರಾಮಲಕ್ಷ್ಮಣಸೀತೆಯರು ವಾಸಿಸಿದರು. ಅವರಿಗಲ್ಲಿ ಆದಿನ ಯಾವ ಬಗೆಯ ಆಹಾರವೂ ಲಭಿಸಲಿಲ್ಲ.

೧೪೨-೧೪೩. ಅದನ್ನು ನೋಡಿ ದುಃಖಿತನಾಗಿ ಲಕ್ಷ್ಮಣನು ರಾಮನೊಡನೆ ಓ ಅಣ್ಣ, ನಾವೀರ್ವರೂ ದಶರಥನ ಮಕ್ಕಳು. ನೀನೋ ಮಹಾಪರಾಕ್ರಮಿ. ಹೀಗಿದ್ದೂ ಇಂದು ನಮಗೆ ಆಹಾರವು ಲಭಿಸಲಿಲ್ಲವಲ್ಲಾ ಎನ್ನಲು,

೧೪೪. ಓ ಸಹೋದರ, ಮಾಡಿದ ಕರ್ಮಕ್ಕೆ ತಕ್ಕ ಫಲವು ಲಭಿಸಿಯೇ ಲಭಿಸುವುದು. ಅನ್ನಪೂರ್ಣವಾದ ಭೂಮಿಯಲ್ಲಿ ನಾವು ಅನ್ನವನನ್ನಪೇಕ್ಷಿಸುವೆವು.

ಸೌಮಿತ್ರೇ ನೂನಮಸ್ಮಾಭಿರ್ನ ಬ್ರಾಹ್ಮಣಮುಖೇ ಹುತಂ ।
ಅವಜ್ಞಯಾ ಮಹೀದೇವಾಂಸ್ತರ್ಪಯಂತ್ಯರ್ಚಯಂತಿ ನ ॥ ೧೪೫ ॥

ತೇ ಯೇ ಲಕ್ಷ್ಮಣ ಜಾಯಂತೇ ಸರ್ವದೈವ ಬುಭುಕ್ಷಿತಾಃ ।
ಸ್ನಾತ್ವಾ ದೇವಾನಥಾಭ್ಯರ್ಚ್ಯ ಹೋತವ್ಯಶ್ಚ ಹುತಾಶನಃ ।
ತತಃ ಸ್ವಸಮಯೇ ದೇವೋ ವಿಧಾಸ್ಯತ್ಯಶನಂ ತು ನೌ ॥ ೧೪೬ ॥

॥ ಬ್ರಹ್ಮೋವಾಚ ॥

ಭ್ರಾತ್ರೋಃ ಸಂಜಲ್ಪತೋರೇವಂ ಪಶ್ಯತೋಃ ಕರ್ಮಣೋ ಗತಿಂ ।
ಶನೈರ್ದಶರಥೋ ರಾಜಾ ತಂ ದೇಶಮುಪಜಗ್ಮಿವಾನ್ ॥ ೧೪೭ ॥

ತಂ ದೃಷ್ಟ್ವಾ ಲಕ್ಷ್ಮಣಃ ಶೀಘ್ರಂ ತಿಷ್ಠ ತಿಷ್ಠೇತಿ ಚಾಬ್ರವೀತ್ ।
ಧನುರಾಕೃಷ್ಯ ಕೋಪೇನ ರಕ್ಷಸ್ತ್ವಂ ದಾನವೋಽಥವಾ ॥ ೧೪೮ ॥

---

೧೪೫. ಎಲೈ ಲಕ್ಷ್ಮಣ, ನಾವು ಹಿಂದಿನ ಜನ್ಮದಲ್ಲಿ ನಿಜವಾಗಿ ಬ್ರಾಹ್ಮಣಮುಖದಲ್ಲಿ ಅನ್ನದಾನಮಾಡಿಲ್ಲ. ಬ್ರಾಹ್ಮಣರನ್ನು ಅನಾದರಿಸಿ ತೃಪ್ತಿಪಡಿಸದೆ ಅರ್ಚಿಸದೇ ಇರುವವರು ಮುಂದೆ ಬಡವರಾಗಿ ತಿನ್ನುವುದಕ್ಕಿಲ್ಲದೇ ಹಸಿವಿನಿಂದ ಬಳಲುವರು.

೧೪೬. ಸ್ನಾನಮಾಡಿ ದೇವರನ್ನರ್ಚಿಸಿ ಅಗ್ನಿಯಲ್ಲಿ ಹೋಮ ಮಾಡೋಣ. ಆಮೇಲೆ ದೇವರು ನಮಗೆ ಆಹಾರವನ್ನು ಒದಗಿಸುವನು ಎಂದನು.

೧೪೭. ಬ್ರಹ್ಮನು ಹೇಳಿದನು—ಹೀಗೆ ಆ ಸಹೋದರರು ಕರ್ಮಗತಿಯನ್ನು ಚಿಂತಿಸುತ್ತಾ ಮಾತನಾಡುತ್ತಿರಲು ದಶರಥರಾಜನು ಮೆಲ್ಲಮೆಲ್ಲನೆ ಆ ಪ್ರದೇಶಕ್ಕೆ ಬಂದನು.

೧೪೮. ಆ ದಶರಥನನ್ನು ನೋಡಿ ಲಕ್ಷ್ಮಣನು ಕೋಪಗೊಂಡು ನಿಲ್ಲು ನಿಲ್ಲು. ನೀನಾರು? ರಾಕ್ಷಸನೋ ದಾನವನೋ ಬೇಗ ಹೇಳು.

ಆಸನ್ನಂ ಚ ಪುನರ್ದೃಷ್ಟ್ವಾ ಯಾಹಿ ಯಾ ಹ್ಯತ್ರ ಪುಣ್ಯಭಾಕ್ ।
ರಾಮೋ ದಾಶರಥೀ ರಾಜಾ ಧರ್ಮಭಾಕ್ಪ್ರಶ್ಯ ವರ್ತತೇ ॥ ೧೪೯ ॥

ಗುರುಭಕ್ತಃ ಸತ್ಯಸಂಘೋ ದೇವಬ್ರಾಹ್ಮಣಸೇವಕಃ ।
ತ್ರೈಲೋಕ್ಯರಕ್ಷಾದಕ್ಷೋಽಸೌ ವರ್ತತೇ ಯತ್ರ ರಾಘವಃ ॥ ೧೫೦ ॥

ನ ತತ್ರ ತ್ವಾದೃಶಾಮಸ್ತಿ ಪ್ರವೇಶಃ ಪಾಪಕರ್ಮಣಾಂ ।
ಯದಿ ಪ್ರವಿಶಸೇ ಪಾಪ ತತೋ ವಧಮವಾಪ್ಸ್ಯಸಿ ॥ ೧೫೧ ॥

ತತ್ಪುತ್ರವಚನಂ ಶ್ರುತ್ವಾ ಶನೈರಾಹೂಯ ವಾಚಯಾ ।
ಉವಾಚಾಧೋಮುಖೋ ಭೂತ್ವಾ ಸ್ನುಷಾಂ ಪುತ್ರೌ ಕೃತಾಂಜಲಿಃ ।
ಮುಹುರಂತರ್ವಿನಿಧ್ಯಾಯನ್ಗತಿಂ ದುಷ್ಕೃತಕರ್ಮಣಃ ॥ ೧೫೨ ॥

॥ ರಾಜೋವಾಚ ॥

ಅಹಂ ದಶರಥೋ ರಾಜಾ ಪುತ್ರೌ ಮೇ ಶೃಣುತಂ ವಚಃ ।
ತಿಸೃಭಿರ್ಬ್ರಹ್ಮಹತ್ಯಾಭಿರ್ವೃತೋಽಹಂ ದುಃಖಮಾಗತಃ ।
ಛಿನ್ನಂ ಪಶ್ಯತ ಮೇ ದೇಹಂ ನರಕೇಷು ಚ ಪಾತಿತಂ ॥ ೧೫೩ ॥

---

೧೪೯. ನೋಡು, ಪುಣ್ಯವಂತನಾದ ರಾಮನು ಅಲ್ಲಿ ಬರುತ್ತಿರುವನು. ದಶರಥಪುತ್ರನಾದ ಅವನು ಮಹಾ ಧರ್ಮನಿಷ್ಠನು.

೧೫೦-೧೫೧. ಆ ರಾಘವನು ಪಿತೃಭಕ್ತನು, ಸತ್ಯಸಂಧನು, ದೇವ ಬ್ರಾಹ್ಮಣಸೇವಕನು. ಮೂರು ಲೋಕಗಳನ್ನೂ ರಕ್ಷಿಸಬಲ್ಲ ಸಮರ್ಥನು. ಇಂತಹ ರಾಮನಿದ್ದಲ್ಲಿ ನಿಮ್ಮಂತಹ ಪಾಪಿಗಳಿಗೆ ಪ್ರವೇಶವಿಲ್ಲವು. ಬಲಾತ್ಕಾರದಿಂದ ಪ್ರವೇಶಿಸಿದರೆ ನಿನ್ನನ್ನು ವಧಿಸುವೆನು ಎಂದನು.

೧೫೨. ಪುತ್ರನಾದ ಲಕ್ಷ್ಮಣನು ಹೀಗೆ ಹೇಳಲು ದಶರಥನು ಅವ ಮಾನದಿಂದ ಮುಖವನ್ನು ಕೆಳತಗ್ಗಿಸಿ ಮೆಲ್ಲಗೆ ಪುತ್ರರನ್ನೂ ಸೊಸೆಯನ್ನೂ ಕರೆದು ತನ್ನ ದುರದೃಷ್ಟವನ್ನು ನೆನೆಯುತ್ತಾ ಇಂತೆಂದನು.

೧೫೩. ಎಲೈ ಕುಮಾರರೇ, ನಾನು ನಿಮ್ಮ ತಂದೆಯಾದ ದಶರಥನು. ಮೂರು ಬ್ರಹ್ಮಹತ್ಯಾಪಾಪಗಳಿಂದ ನನಗೆ ಇಂತಹ ದುಃಖವೊದಗಿ ಯಾತನಾ

॥ ಬ್ರಹ್ಮೋವಾಚ ॥
ತತಃ ಕೃತಾಂಜಲೀ ರಾಮಃ ಸೀತಯಾ ಲಕ್ಷ್ಮಣೇನ ಚ ।
ಭೂಮೌ ಪ್ರಣೇಮುಸ್ತೇ ಸರ್ವೇ ವಚನಂ ಚೈತದಬ್ರುವನ್ ॥ ೧೫೪ ॥

॥ ಸೀತಾರಾಮಲಕ್ಷ್ಮಣಾ ಊಚುಃ ॥
ಕಸ್ಯೇದಂ ಕರ್ಮಣಸ್ತಾತ ಫಲಂ ನೃಪತಿಸತ್ತಮ ॥ ೧೫೫ ॥

॥ ಬ್ರಹ್ಮೋವಾಚ ॥
ಸ ಚ ಪ್ರಾಹ ಯಥಾವೃತ್ತಂ ಬ್ರಹ್ಮಹತ್ಯಾತ್ರಯಂ ತಥಾ ॥ ೧೫೬ ॥

॥ ರಾಜೋವಾಚ ॥
ನಿಷ್ಕೃತಿರ್ಬ್ರಹ್ಮಹಂತ್ಯಾಣಾಂ ಪುತ್ರಾ ಕ್ವಾಪಿ ನ ವಿದ್ಯತೇ ॥ ೧೫೭ ॥

॥ ಬ್ರಹ್ಮೋವಾಚ ॥
ತತೋ ದುಃಖೇನ ಮಹತಾವೃತಾಃ ಸರ್ವೇ ಭುವಂ ಗತಾಃ ।
ರಾಜಾನಂ ವನವಾಸಂ ಚ ಮಾತರಂ ಪಿತರಂ ತಥಾ ॥ ೧೫೮ ॥

ರೂಪವುಂಟಾಗಿದೆ. ನರಕದಲ್ಲಿ ಹಿಂಸಿಸಿ ಕತ್ತರಿಸಿ ಚೂರುಚೂರಾದ ನನ್ನ ದೇಹವನ್ನು ನೋಡಿ ಎಂದನು.

೧೫೪-೧೫೫. ಆಗ ಸೀತಾರಾಮಲಕ್ಷ್ಮಣರು ದಶರಥನನ್ನು ನಮಸ್ಕರಿಸಿ ಅಂಜಲಿಯನ್ನು ಧರಿಸಿ ಓ ತಂದೆಯೇ ನಿನ್ನ ಈ ದುರವಸ್ಥೆಯು ಯಾವ ಪಾಪಕರ್ಮದಿಂದ ಉಂಟಾಯಿತು ? ಎಂದು ಬೆಸಗೊಳ್ಳಲು

೧೫೬. ಆಗ ದಶರಥನು ತಾನು ಮಾಡಿದ ಮೂರು ಬ್ರಹ್ಮಹತ್ಯೆಗಳನ್ನು ಹೇಳಿದನು. (ಎಂದರೆ ಬ್ರಾಹ್ಮಣ ಕುಮಾರ ಮತ್ತು ಅವನ ತಂದೆ ತಾಯಿಗಳು ದಶರಥನ ದೆಸೆಯಿಂದಲೇ ಸತ್ತುದರಿಂದ ಮೂರು ಬ್ರಹ್ಮಹತ್ಯೆಯು ಬಂದಿತೆಂದು ತಾತ್ಪರ್ಯವು.)

೧೫೭. ಎಲೈ . ಮಕ್ಕಳೇ, ಈ ಬ್ರಹ್ಮಹತ್ಯೆಗಳಿಗೆ ಇಂದಿನವರೆಗೂ ಪ್ರಾಯಶ್ಚಿತ್ತವು ಎಲ್ಲಿಯೂ ಲಭಿಸಲಿಲ್ಲ. ಅದಕ್ಕಾಗಿ ಈ ನರಕದುಃಖವನ್ನು ನಾನು ಅನುಭವಿಸಬೇಕಾಗಿದೆ ಎಂದನು.

೧೫೮-೧೫೯. ದಶರಥನ ಮಾತನ್ನು ಕೇಳಿ ಎಲ್ಲರೂ ದುಃಖಗೊಂಡರು. ರಾಮನಂತೂ ತನ್ನ ಹಿಂದಿನ ರಾಜ್ಯಾಭಿಷೇಕ ನಿಶ್ಚಯವನ್ನೂ ತನ್ನ ವನವಾಸ

ದುಃಖಾಗಮಂ ಕರ್ಮಗತಿಂ ನರಕೇ ಪಾತನಂ ತಥಾ ।
ಏವಮಾದ್ಯಥ ಸಂಸ್ಮೃತ್ಯ ಮುಮೋಹ ನೃಪತೇಃ ಸುತಃ ।
ವಿಸಂಜ್ಞಂ ನೃಪತಿಂ ದೃಷ್ಟ್ವಾ ಸೀತಾ ವಾಕ್ಯಮಥಾಬ್ರವೀತ್ ॥ ೧೫೯ ॥

॥ ಸೀತೋವಾಚ ॥

ನ ಶೋಚಂತಿ ಮಹಾತ್ಮಾನಸ್ತ್ವಾದೃಶಾ ವ್ಯಸನಾಗಮೇ ।
ಚಿಂತಯಂತಿ ಪ್ರತೀಕಾರಂ ದೈವಸ್ಯಾಪ್ಯಥ ಮಾನುಷಂ ॥ ೧೬೦ ॥

ಶೋಚದ್ಭಿರ್ಯುಗಸಾಹಸ್ರಂ ವಿಪತ್ತಿರ್ನೈವ ತೀರ್ಯತೇ ।
ವ್ಯಾಮೋಹಮಾಪ್ನುವಂತೀಹ ನ ಕದಾಚಿದ್ವಿಚಕ್ಷಣಾಃ ॥ ೧೬೧ ॥

ಕಿಮನೇನಾತ್ರ ದುಃಖೇನ ನಿಷ್ಫಲೇನ ಜನೇಶ್ವರ ।
ದೇಹಿ ಹತ್ಯಾಂ ಪ್ರಥಮತೋ ಯಾ ಜಾತಾ ಹ್ಯತಿಭೀಷಣಾ ॥ ೧೬೨ ॥

ವನ್ನೂ ಮಾತೆಯ ಶೋಕವನ್ನೂ ಪಿತೃಮರಣವನ್ನೂ ಪಾಪವಶಾತ್ ತಂದೆಯು ನರಕದಲ್ಲಿ ಕಷ್ಟಪಡುವುದನ್ನೂ ಚಿಂತಿಸಿ ಮೋಹಗೊಂಡನು. ದುಃಖದಿಂದ ಎಚ್ಚ ರತಪ್ಪಿದನು. ರಾಮನು ಹೀಗೆ ಮೋಹಗೊಂಡುದನ್ನು ನೋಡಿ ಸಮಾಧಾನ ಗೊಳಿಸಿ ಸೀತೆಯು,

೧೬೦. ಓ ಆರ್ಯಪುತ್ರ, ನಿನ್ನಂತಹ ಮಹಾತ್ಮರು ಎಂತಹ ದುಃಖ ಬಂದರೂ ದುಃಖಿಸುವುದಿಲ್ಲ. ದೈವಪ್ರಯತ್ನವನ್ನಾಗಲೀ ಮನುಷ್ಯಪ್ರಯತ್ನ ವನ್ನಾಗಲೀ ಮಾಡಲು ಉದ್ಯುಕ್ತರಾಗುವರು.

೧೬೧. ಸಾವಿರಯುಗಗಳ ವರೆಗೆ ದುಃಖಿಸಿದರೂ ವಿಪತ್ತು ಹೋಗ ಲಾರದು. ತಿಳಿವಳಿಕೆಯುಳ್ಳವರು ಎಂದಿಗೂ ಮೋಹಗೊಳ್ಳುವುದಿಲ್ಲ.

೧೬೨. ಸುಮ್ಮನೆ ದುಃಖಿಸಿ ಪ್ರಯೋಜನವಿಲ್ಲ. ದಶರಥರಾಜನ ಮೊದ ಲನೆಯ ಬ್ರಹ್ಮಹತ್ಯೆಯನ್ನು ನಾನು ಧರಿಸುವಂತೆ ಅನುಮತಿಯನ್ನು ಕೊಡು.

ಪಿತೃಭಕ್ತಃ ಪುಣ್ಯಶೀಲೋ ವೇದವೇದಾಂಗಪಾರಗಃ ।
ಅನಾಗಾ ಯೋ ಹತೋ ವಿಪ್ರಸ್ತತ್ಪಾಪಸ್ಯಾತ್ರ ನಿಷ್ಕೃತಿಂ ॥ ೧೬೩ ॥

ಆಚರಾಮಿ ಯಥಾಶಾಸ್ತ್ರಂ ಮಾ ಶೋಕಂ ಕುರುತಂ ಯುವಾಂ ।
ದ್ವಿತೀಯಾಂ ಲಕ್ಷ್ಮಣೋ ಹತ್ಯಾಂ ಗೃಹ್ಣಾತು ತ್ವಪರಾಂ ಭವಾನ್ ॥ ೧೬೪ ॥

॥ ಬ್ರಹ್ಮೋವಾಚ ॥

ಏತದ್ಧರ್ಮಯುತಂ ವಾಕ್ಯಂ ಸೀತಯಾ ಭಾಷಿತಂ ದೃಢಂ ।
ತಥೇತಿ ಚಾಹತುರುಭೌ ತತೋ ದಶರಥೋಽಬ್ರವೀತ್ ॥ ೧೬೫ ॥

॥ ದಶರಥ ಉವಾಚ ॥

ತ್ವಂ ಹಿ ಬ್ರಹ್ಮವಿದಃ ಕನ್ಯಾ ಜನಕಸ್ಯ ತ್ವಯೋನಿಜಾ ।
ಭಾರ್ಯಾ ರಾಮಸ್ಯ ಕಿಂ ಚಿತ್ರಂ ಯದ್ಯುಕ್ತಮನುಭಾಷಸೇ ॥ ೧೬೬ ॥

ಸ ಕೋಽಪಿ ಭವತಾಂ ಕಿಂತು ಶ್ರಮಃ ಸ್ವಲ್ಪೋಽಪಿ ವಿದ್ಯತೇ ।
ಗೌತಮ್ಯಾಂ ಸ್ನಾನದಾನೇನ ಪಿಂಡನಿರ್ವಪಣೇನ ಚ ॥ ೧೬೭ ॥

೧೬೩-೧೬೪. ಪಿತೃಭಕ್ತನೂ ಪುಣ್ಯಾತ್ಮನೂ ವೇದವೇದಾಂಗಗಳಲ್ಲಿ ಪಂಡಿತನೂ ನಿರಪರಾಧಿಯೂ ಆದ ಬ್ರಾಹ್ಮಣಕುಮಾರನನ್ನು ವಧಿಸಿದ ಮೊದಲನೆಯ ಬ್ರಹ್ಮಹತ್ಯೆಗೆ ಪ್ರಾಯಶ್ಚಿತ್ತವನ್ನು ನಾನು ಈ ಗೌತಮೀತೀರದಲ್ಲಿ ಆಚರಿಸುವೆನು. ನೀವು ದುಃಖಿಸಬೇಡಿ. ಎರಡನೆಯ ಬ್ರಹ್ಮಹತ್ಯೆಯನ್ನು ಲಕ್ಷ್ಮಣನು ಪರಿಹರಿಸಲಿ. ಮೂರನೆಯದನ್ನು ನೀನು ಪರಿಹರಿಸು ಎಂದಳು.

೧೬೫. ಸೀತೆಯ ಧರ್ಮಯುತವಾದೀಮಾತನ್ನು ಕೇಳಿ ರಾಮಲಕ್ಷ್ಮಣರೀರ್ವರೂ ಅದರಂತೆ ಒಪ್ಪಿಕೊಂಡರು. ಆಗ ದಶರಥನು,

೧೬೬. ಎಲೌ ಸೀತೆ, ನೀನು ಮಹಾಜ್ಞಾನಿಯಾದ ಜನಕನ ಮಗಳು. ಅಲ್ಲದೆ ನೀನು ಅಯೋನಿಜೆಯು. ಪುಣ್ಯಾತ್ಮನಾದ ರಾಮನ ಮಡದಿಯು. ಆದುದರಿಂದಲೇ ಇಂತಹ ಧರ್ಮಯುಕ್ತವಾದ ಮಾತನ್ನಾಡಿರುವೆ.

೧೬೭. ಆದರೆ ನೀವಾರೂ ಅಷ್ಟು ಶ್ರಮಪಡಬೇಕಾಗಿಲ್ಲ. ಈ ಗೌತಮೀನದಿಯಲ್ಲಿ ಸ್ನಾನದಾನಗಳನ್ನೂ ಪಿಂಡಪ್ರದಾನವನ್ನೂ ಮಾಡಿದರೆ ನನ್ನ ಮೂರು ಬ್ರಹ್ಮಹತ್ಯೆಗಳೂ ಹೋಗುವುವು. ನನಗೆ ಸ್ಥಿರವಾಗಿ ಸ್ವರ್ಗವು ಲಭಿಸುವುದು.

ತಿಸೃಭಿರ್ಬ್ರಹ್ಮಹತ್ಯಾಭಿರ್ಮುಕ್ತೋ ಯಾಮಿ ತ್ರಿವಿಷ್ಟಪಂ ।
ತ್ವಯಾ ಜನಕಸಂಭೂತೇ ಸ್ವಕುಲೋಚಿತಮೀರಿತಂ ॥ ೧೬೮ ॥

ಪ್ರಾಪಯಂತಿ ಪರಂ ಪಾರಂ ಭವಾಬ್ಧೇಃ ಕುಲಯೋಷಿತಃ ।
ಗೋದಾವರ್ಯಾಃ ಪ್ರಸಾದೇನ ಕಿಂ ನಾಮಾಸ್ತ್ಯತ್ರ ದುರ್ಲಭಂ ॥ ೧೬೯ ॥

॥ ಬ್ರಹ್ಮೋವಾಚ ॥

ತಥೇತಿ ಕ್ರಿಯಮಾಣೇ ತು ಪಿಂಡದಾನಾಯ ಶತ್ರುಹಾ ।
ನೈವಾಪಶ್ಯದ್ಭಕ್ಷ್ಯಭೋಜ್ಯಂ ತತೋ ಲಕ್ಷ್ಮಣಮಬ್ರವೀತ್ ॥ ೧೭೦ ॥

ಲಕ್ಷ್ಮಣಃ ಪ್ರಾಹ ವಿನಯಾದಿಂಗುದ್ಯಾಶ್ಚ ಫಲಾನಿ ಚ ।
ಸಂತಿ ತೇಷಾಂ ಚ ಪಿಣ್ಯಾಕಮಾನೀತಂ ತತ್ಕ್ಷಣಾದಿವ ॥ ೧೭೧ ॥

ಪಿಣ್ಯಾಕೇನಾಥ ಗಂಗಾಯಾಂ ಪಿಂಡಂ ದಾತುಂ ತಥಾ ಪಿತುಃ ।
ಮನಃ ಕುರ್ವಂಸ್ತತೋ ರಾಮೋ ಮಂದೋಽಭೂದ್ದುಃಖಿತಸ್ತದಾ ೧೭೨ ॥

೧೬೮-೧೬೯. ಎಲೌ ಜನಕಸಂವಿಸಿ, ನೀನು ನಿನ್ನ ಕುಲಕ್ಕುಚಿತವಾದಂತಹ ಮಾತನ್ನಾಡಿರುವೆ. ನಿನ್ನಂತಹ ಕುಲಸ್ತ್ರೀಯರ ಸಹಾಯದಿಂದಲೇ ಪುರುಷನು ಸಂಸಾರಸಾಗರವನ್ನು ದಾಟಬಹುದು. ಇಲ್ಲಿ ಗೋದಾವರೀನದಿಯ ಮಹಿಮೆಯಿಂದ ದುರ್ಲಭವಾದಂತಹ ವಸ್ತುವು ಯಾವುದೂ ಇಲ್ಲ ಎಂದನು.

೧೭೦. ಬ್ರಹ್ಮನು ಹೇಳಿದನು—ಆಮೇಲೆ ರಾಮನು ಪಿಂಡಪ್ರದಾನ ಮಾಡಲು ಸಿದ್ಧನಾದನು. ಆದರೆ ತಕ್ಕ ಭಕ್ಷ್ಯಭೋಜ್ಯಗಳು ಲಭಿಸಲಿಲ್ಲ. ಆಗ ರಾಮನು ಲಕ್ಷ್ಮಣನಿಗೆ ಬೇಕಾದ ಸಾಮಗ್ರಿಯನ್ನು ತರುವಂತೆ ಹೇಳಿದನು.

೧೭೧. ಆಗ ಲಕ್ಷ್ಮಣನು ಇಂಗುದೀಮರದ ಫಲಗಳನ್ನೂ ಪಿಣ್ಯಾಕವನ್ನೂ ಆ ಕೂಡಲೇ ತಂದೊಪ್ಪಿಸಿ ವಿನಯದಿಂದ ಇವೇ ಭಕ್ಷಭೋಜ್ಯಗಳು ಇನ್ನಾವುದೂ ಲಭಿಸಲಿಲ್ಲ ಎಂದು ಹೇಳಿದನು.

೧೭೨. ಆ ಇಂಗುದೀಪಿಣ್ಯಾಕದಿಂದ ತಂದೆಗೆ ಪಿಂಡದಾನಮಾಡುವಂತಹ ಸ್ಥಿತಿಯೊದಗಿದುದನ್ನು ನೋಡಿ ರಾಮನು ತುಂಬಾ ವ್ಯಥೆಪಟ್ಟನು.

ದೈವೀ ವಾಗಭವತ್ತತ್ರ ದುಃಖಂ ತ್ಯಜ ನೃಪಾತ್ಮಜ ।
ರಾಜ್ಯಭ್ರಷ್ಟೋ ವನಂ ಪ್ರಾಪ್ತಃ ಕಿಂ ವೈ ನಿಷ್ಕಿಂಚನೋ ಭವಾನ್ ॥ ೧೭೩ ॥

ಅಶಠೋ ಧರ್ಮನಿರತೋ ನ ಶೋಚಿತುಮಿಹಾರ್ಹಸಿ ।
ವಿತ್ತಶಾಠ್ಯೇನ ಯೋ ಧರ್ಮಂ ಕರೋತಿ ಸ ತು ಪಾತಕೀ ॥ ೧೭೪ ॥

ಶ್ರೂಯತೇ ಸರ್ವಶಾಸ್ತ್ರೇಷು ಯದ್ರಾಮ ಶೃಣು ಯತ್ನತಃ ।
ಯದನ್ನಃ ಪುರುಷೋ ರಾಜಂಸ್ತದನ್ನಾಸ್ತಸ್ಯ ದೇವತಾಃ ॥ ೧೭೫ ॥

ಪಿಂಡೇ ನಿಪತಿತೇ ಭೂಮೌ ನಾಪಶ್ಯತ್ಪಿತರಂ ತದಾ ।
ಶವಂ ಚ ಪತಿತಂ ಯತ್ರ ಶವತೀರ್ಥಮನುತ್ತಮಂ ॥ ೧೭೬ ॥

ಮಹಾಪಾತಕಸಂಘಾತವಿಘಾತಕೃದನುಸ್ಮೃತಿಃ ।
ತತ್ರಾಗಚ್ಛಂಲ್ಲೋಕಪಾಲಾ ರುದ್ರಾದಿತ್ಯಾಸ್ತಥಾಶ್ವಿನೌ ॥ ೧೭೭ ॥

---

೧೭೩. ಆಗ ಆಕಾಶವಾಣಿಯು ಹೀಗೆ ಕೇಳಿಸಿತು—ಎಲೈ ರಾಜಪುತ್ರ, ದುಃಖವನ್ನು ಬಿಡು. ನೀನು ರಾಜ್ಯವನ್ನು ಬಿಟ್ಟು ಕಾಡಿಗೆ ಬಂದಿರುವೆ. ಇಲ್ಲಿ ನಿನಗೆ ಪಿಣ್ಯಾಕದಹೊರತು ಇನ್ನೇನೂ ಲಭಿಸಲಾರದು.

೧೭೪. ಧನವಿದ್ದೂ ನೀನು ಜಿಪುಣನಂತೆ ಪಿಣ್ಯಾಕಪಿಂಡವನ್ನು ಕೊಡುತ್ತಿಲ್ಲ. ಧರ್ಮನಿಷ್ಠನಾದ ನೀನು ದುಃಖಿಸಬೇಕಾಗಿಲ್ಲ. ಧನವಿದ್ದೂ ಜಿಪುಣತೆಯಿಂದ ಧರ್ಮವನ್ನು ಆಚರಿಸುವವನು ಪಾಪಿಯಾಗುವನು. ನೀನು ಹಾಗಲ್ಲ.

೧೭೫. ಮನುಷ್ಯರು ತಾವು ಸೇವಿಸುವ ಆಹಾರವನ್ನೇ ದೇವತೆಗಳಿಗೆ ನಿವೇದಿಸಬೇಕು ಎಂದು ಶಾಸ್ತ್ರಗಳಲ್ಲಿ ಹೇಳಿದೆ. ಅದರಂತೆಯೇ ನೀನೂ ಮಾಡು ಎಂದು ಅಶರೀರವಾಣಿಯು ಕೇಳಿಸಿತು.

೧೭೬. ಆಶರೀರವಾಣಿಯಂತೆ ರಾಮನು ಪಿಂಡಪ್ರದಾನವನ್ನು ಮಾಡಿದನು. ಆ ಕೂಡಲೇ ದಶರಥನ ಶವಶರೀರವು ಬಿದ್ದುಹೋಯಿತು. ಆ ಶವವು ಬಿದ್ದ ಸ್ಥಳವು ಶವತೀರ್ಥವೆಂದು ಪ್ರಸಿದ್ಧವಾಯಿತು.

೧೭೭. ಆ ಶವತೀರ್ಥವನ್ನು ಸ್ಮರಿಸಿದರೇ ಮಹಾಪಾಪಗಳೆಲ್ಲವೂ ನಾಶವಾಗುವುವು. ಆಗ ಆ ತೀರ್ಥಕ್ಕೆ ಲೋಕಪಾಲಕರು ರುದ್ರರು ಆದಿತ್ಯರು ಅಶ್ವಿನೀ ದೇವತೆಗಳು ಎಲ್ಲರೂ ವಿಮಾನವನ್ನೇರಿ ಬಂದರು.

ಸ್ವಂ ಸ್ವಂ ವಿಮಾನಮಾರೂಢಾಸ್ತೇಷಾಂ ಮಧ್ಯೇಽತಿದೀಪ್ತಿಮಾನ್ ।
ವಿಮಾನವರಮಾರೂಢಃ ಸ್ತೂಯಮಾನಶ್ಚ ಕಿಂನರೈಃ ॥ ೧೭೮ ॥

ಆದಿತ್ಯಸದೃಶಾಕಾರಸ್ತೇಷಾಂ ಮಧ್ಯೇ ಬಭೌ ಪಿತಾ ।
ತಮದೃಷ್ಟ್ವಾ ಸ್ವಪಿತರಂ ದೇವಾನ್ದೃಷ್ಟ್ವಾ ವಿಮಾನಿನಃ ॥ ೧೭೯ ॥

ಕೃತಾಂಜಲಿಪುಟೋ ರಾಮಃ ಪಿತಾ ಮೇ ಕ್ವೇತ್ಯಭಾಷತ ।
ತತೋ ದಿವ್ಯಾಭವದ್ವಾಣೀ ರಾಮಂ ಸಂಬೋಧ್ಯ ಸೀತಯಾ ॥ ೧೮೦ ॥

ತಿಸೃಭಿರ್ಬ್ರಹ್ಮಹತ್ಯಾಭಿರ್ಮುಕ್ತೋ ದಶರಥೋ ನೃಪಃ ।
ವೃತಂ ಪಶ್ಯ ಸುರೈಸ್ತಾತ ದೇವಾ ಅಪ್ಯೂಚಿರೇ ಚ ತಂ ॥ ೧೮೧ ॥

॥ ದೇವಾ ಊಚುಃ ॥

ಧನ್ಯೋಽಸಿ ಕೃತಕೃತ್ಯೋಽಸಿ ರಾಮ ಸ್ವರ್ಗಂ ಗತಃ ಪಿತಾ ।
ನಾನಾನಿರಯಸಂಘಾತಾತ್ಪೂರ್ವಜಾನುದ್ಧರೇತ್ತು ಯಃ ॥ ೧೮೨ ॥

---

೧೭೮. ಆ ದೇವತೆಗಳ ಮಧ್ಯದಲ್ಲಿ ದಶರಥನು ವಿಮಾನವನ್ನೇರಿ ಕಿನ್ನರರಿಂದ ಸ್ತುತಿಸಲ್ಪಡುತ್ತಾ ಸೂರ್ಯನಂತೆ ಬೆಳಗುತ್ತಿದ್ದನು.

೧೭೯. ಹಿಂದೆ ಶವರೂಪದಲ್ಲಿದ್ದ ತನ್ನ ತಂದೆಯನ್ನು ಅಲ್ಲಿ ಕಾಣದೆ ರಾಮನು ವಿಮಾನದಲ್ಲಿದ್ದ ದೇವತೆಗಳನ್ನು ನೋಡಿ ಅಂಜಲಿಯನ್ನು ಧರಿಸಿ ನನ್ನ ತಂದೆಯೆಲ್ಲಿ? ಎಂದು ಕೇಳಿದನು.

೧೮೦-೧೮೧. ಆಗ ದಿವ್ಯವಾಣಿಯು—ಎಲೈ ರಾಮ, ದಶರಥನು ಬ್ರಹ್ಮಹತ್ಯೆಗಳೆಲ್ಲವನ್ನೂ ಕಳೆದುಕೊಂಡು ದಿವ್ಯರೂಪವುಳ್ಳವನಾಗಿ ದೇವತೆಗಳೊಡನೆ ಇರುವನು, ಅತ್ತನೋಡು. ಎಂದು ಹೇಳಿತು. ದೇವತೆಗಳೂ ರಾಮನನ್ನು ಕುರಿತು,

೧೮೨. ಎಲೈ ರಾಮ, ನಿನ್ನ ತಂದೆಯು ಸ್ವರ್ಗವನ್ನು ಪಡೆದನು. ನೀನು ಧನ್ಯನೂ ಕೃತಕೃತ್ಯನೂ ಆಗಿರುವೆ. ಪಿತೃಗಳನ್ನು ನರಕದಿಂದುದ್ಧರಿಸುವ ಪುತ್ರನೇ ಧನ್ಯನು. ಅವನು ಮೂರುಲೋಕಗಳಿಗೂ ಅಲಂಕಾರಪ್ರಾಯನು.

ಸ ಧನ್ಯೋಽಲಂಕೃತಂ ತೇನ ಕೃತಿನಾ ಭುವನತ್ರಯಂ ।
ಏನಂ ಪಶ್ಯ ಮಹಾಬಾಹೋ ಮುಕ್ತಪಾಪಂ ರವಿಪ್ರಭಂ ॥ ೧೮೩ ॥

ಸರ್ವಸಂಪತ್ತಿಯುಕ್ತೋಽಪಿ ಪಾಪೀ ದಗ್ಧದ್ರುಮೋಪಮಃ ।
ನಿಷ್ಕಿಂಚನೋಽಪಿ ಸುಕೃತೀ ದೃಶ್ಯತೇ ಚಂದ್ರಮೌಲಿವತ್ ॥ ೧೮೪ ॥

॥ ಬ್ರಹ್ಮೋವಾಚ ॥

ದೃಷ್ಟ್ವಾಬ್ರವೀತ್ಸುತಂ ರಾಜಾ ಆಶೀರ್ಭಿರಭಿನಂದ್ಯ ಚ ॥ ೧೮೫ ॥

॥ ರಾಜೋವಾಚ ॥

ಕೃತಕೃತ್ಯೋಽಸಿ ಭದ್ರಂ ತೇ ತಾರಿತೋಽಹಂ ತ್ವಯಾನಘ ।
ಧನ್ಯಃ ಸ ಪುತ್ರೋ ಲೋಕೇಽಸ್ಮಿನ್ಪಿತೄಣಾಂ ಯಸ್ತು ತಾರಕಃ ॥ ೧೮೬ ॥

॥ ಬ್ರಹ್ಮೋವಾಚ ॥

ತತಃ ಸುರಗಣಾಃ ಪ್ರೋಚುರ್ದೇವಾನಾಂ ಕಾರ್ಯಸಿದ್ಧಯೇ ।
ರಾಮಂ ಚ ಪುರುಷಶ್ರೇಷ್ಠಂ ಗಚ್ಛ ತಾತ ಯಥಾಸುಖಂ ।
ತತಸ್ತದ್ವಚನಂ ಶ್ರುತ್ವಾ ರಾಮಸ್ತಾನಬ್ರವೀತ್ಸುರಾನ್ ॥ ೧೮೭ ॥

೧೮೩-೧೮೪. ಎಲೈ ರಾಮಚಂದ್ರ, ಇವನನ್ನು ನೋಡು. ಈ ದಶರಥನು ಹಿಂದೆ ಸಕಲೈಶ್ವರ್ಯಗಳುಳ್ಳವನಾದರೂ ಪಾಪದೋಷದಿಂದ ಸುಟ್ಟ ಮರದಂತೆ ಕಾಣುತ್ತಿದ್ದವನು. ಈಗ ಪಾಪಗಳನ್ನು ಕಳೆದುಕೊಂಡು ದರಿದ್ರನಾಗಿದ್ದರೂ ಪರಶಿವನಂತೆ ಸೂರ್ಯನಿಗೆ ಸಮನಾದ ತೇಜಸ್ಸಿನಿಂದ ಬೆಳಗುತ್ತಿರುವನು ಎಂದರು.

೧೮೫-೧೮೬. ಅಗ ದಶರಥನು ರಾಮನನ್ನು ನೋಡಿ ಆಶೀರ್ವದಿಸಿ ಎಲೈ ರಾಮ, ನೀನು ಕೃತಕೃತ್ಯನಾದೆ. ನಿನಗೆ ಮಂಗಳವಾಗಲಿ. ನಿನ್ನಿಂದ ನಾನು ಉದ್ಧರಿಸಲ್ಪಟ್ಟೆನು. ಲೋಕದಲ್ಲಿ ಪಿತೃಗಳನ್ನುದ್ಧರಿಸುವ ಪುತ್ರನೇ ಧನ್ಯನು ಎಂದನು.

೧೮೭. ಆಗ ದೇವತೆಗಳು ಪುರುಷೋತ್ತಮನಾದ ರಾಮನನ್ನು ಕುರಿತು ಎಲೈ ರಾಮ, ಇನ್ನು ತೆರಳು. ದೇವಕಾರ್ಯವನ್ನು ಸಾಧಿಸು ಎಂದರು. ಅದಕ್ಕೆ ರಾಮನು,

॥ ರಾಮ ಉವಾಚ ॥

ಗುರೌ ಪಿತರಿ ಮೇ ದೇವಾಃ ಕಿಂ ಕೃತ್ಯಮವಶಿಷ್ಯತೇ ॥ ೧೮೮ ॥

॥ ದೇವಾ ಊಚುಃ ॥

ನದೀ ನ ಗಂಗಯಾ ತುಲ್ಯಾ ನ ತ್ವಯಾ ಸದೃಶಃ ಸುತಃ ।
ನ ಶಿವೇನ ಸಮೋ ದೇವೋ ನ ತಾರೇಣ ಸಮೋ ಮನುಃ ॥ ೧೮೯ ॥

ತ್ವಯಾ ರಾಮ ಗುರೂಣಾಂ ಚ ಕಾರ್ಯಂ ಸರ್ವಮನುಷ್ಠಿತಂ ।
ತಾರಿತಾಃ ಪಿತರೋ ರಾಮ ತ್ವಯಾ ಪುತ್ರೇಣ ಮಾನದ ।
ಗಚ್ಛಂತು ಸರ್ವೇ ಸ್ವಸ್ಥಾನಂ ತ್ವಂ ಚ ಗಚ್ಛ ಯಥಾಸುಖಂ ॥ ೧೯೦ ॥

॥ ಬ್ರಹ್ಮೋವಾಚ ॥

ತದ್ದೇವವಚನಾದ್ಧೃಷ್ಟಃ ಸೀತಯಾ ಲಕ್ಷ್ಮಣಾಗ್ರಜಃ ।
ತದ್ದೃಷ್ಟ್ವಾ ಗಂಗಾಮಾಹಾತ್ಮ್ಯಂ ವಿಸ್ಮಿತೋ ವಾಕ್ಯಮಬ್ರವೀತ್ ॥ ೧೯೧ ॥

---

೧೮೮. ಓ ದೇವತೆಗಳೇ, ನನ್ನ ತಂದೆಯ ವಿಷಯದಲ್ಲಿ ನಾನು ಮಾಡಬೇಕಾದುದು ಇನ್ನಾವ ಕರ್ತವ್ಯವಿರುವುದು ? ಎಂದು ಕೇಳಲು,

೧೮೯. ದೇವತೆಗಳು ಹೇಳಿದರು—ಎಲೈ ರಾಮ, ಗಂಗೆಗೆ ಸಮನಾದ ನದಿಯಿಲ್ಲ. ನಿನ್ನಂತಹ ಪುತ್ರನಿಲ್ಲ. ಶಿವನಿಗೆ ಸಮನಾದ ದೇವರಿಲ್ಲ. ರಾಮತಾರಕ ಮಂತ್ರಕ್ಕೆ ಸದೃಶವಾದ ಮಂತ್ರವು ಬೇರೊಂದಿಲ್ಲ.

೧೯೦. ಎಲೈ ರಾಮ, ನೀನು ನಿನ್ನ ಪಿತೃಗಳ ಕಾರ್ಯವೆಲ್ಲವನ್ನೂ ಮಾಡಿರುವೆ. ನಿನ್ನ ಪಿತೃಗಳೆಲ್ಲರೂ ಉತ್ತಮಗತಿಯನ್ನು ಪಡೆದರು. ಇಲ್ಲಿ ಸೇರಿದ ಎಲ್ಲರೂ ತಮ್ಮತಮ್ಮ ಸ್ಥಾನಗಳಿಗೆ ತೆರಳಲಿ. ನೀನೂ ನಿನ್ನಿಷ್ಟಬಂದಂತೆ ತೆರಳು ಎಂದರು.

೧೯೧. ದೇವತೆಗಳ ಆ ಮಾತನ್ನು ಕೇಳಿ ಸಂತಸಗೊಂಡು ರಾಮನು ಗಂಗಾನದಿಯ ಆ ಮಾಹಾತ್ಮ್ಯವನ್ನು ನೋಡಿ ಆಶ್ಚರ್ಯದಿಂದ

॥ ರಾಮ ಉವಾಚ ॥

ಅಹೋ ಗಂಗಾಪ್ರಭಾವೋಽಯಂ ತ್ರೈಲೋಕ್ಯೇ ನೋಪಮೀಯತೇ ।
ವಯಂ ಧನ್ಯಾ ಯತೋ ಗಂಗಾ ದೃಷ್ಟಾಸ್ಮಾಭಿಸ್ತ್ರಿಪಾವನೀ ॥ ೧೯೨ ॥

॥ ಬ್ರಹ್ಮೋವಾಚ ॥

ಹರ್ಷೇಣ ಮಹತಾ ಯುಕ್ತೋ ದೇವಂ ಸ್ಥಾಪ್ಯ ಮಹೇಶ್ವರಂ ।
ತಂ ಷೋಡಶಭಿರೀಶಾನಮುಪಚಾರೈಃ ಪ್ರಯತ್ನತಃ ॥ ೧೯೩ ॥

ಸಂಪೂಜ್ಯಾವರಣೈರ್ಯುಕ್ತಂ ಷಟ್ತ್ರಿಂಶತ್ಕಲಮೀಶ್ವರಂ ।
ಕೃತಾಂಜಲಿಪುಟೋ ಭೂತ್ವಾ ರಾಮಸ್ತುಷ್ಟಾವ ಶಂಕರಂ ॥ ೧೯೪ ॥

॥ ರಾಮ ಉವಾಚ ॥

ನಮಾಮಿ ಶಂಭುಂ ಪುರುಷಂ ಪುರಾಣಂ
ನಮಾಮಿ ಸರ್ವಜ್ಞಮಪಾರಭಾವಂ ।
ನಮಾಮಿ ರುದ್ರಂ ಪ್ರಭುಮಕ್ಷಯಂ ತಂ
ನಮಾಮಿ ಶರ್ವಂ ಶಿರಸಾ ನಮಾಮಿ ॥ ೧೯೫ ॥

---

೧೯೨. ಗಂಗೆಯ ಮಹಿಮೆಯು ಮೂರುಲೋಕದಲ್ಲಿಯೂ ಅಸದೃಶ ವಾಗಿದೆ. ಮಹಾಪವಿತ್ರವದು. ಇಂತಹ ಗಂಗೆಯನ್ನು ನೋಡಿದ ನಾವೇ ಧನ್ಯರು ಎಂದನು.

೧೯೩–೧೯೪. ಆಮೇಲೆ ರಾಮನು ಆ ಗಂಗಾತೀರದಲ್ಲಿ ಸಂತಸದಿಂದ ಶಿವನನ್ನು ಪ್ರತಿಷ್ಠಿಸಿ ಷೋಡಶೋಪಚಾರಗಳಿಂದ ಆ ದೇವನನ್ನು ಅರ್ಚಿಸಿ ಆವರಣದೇವತೆಗಳನ್ನೂ ಅರ್ಚಿಸಿ ಮೂವತ್ತಾರು ಕಲೆಗಳುಳ್ಳ ಆ ಪರಶಿವನನ್ನು ಭಕ್ತಿಯಿಂದ ಅಂಜಲಿಯನ್ನು ಧರಿಸಿ ಸ್ತುತಿಸಿದನು.

೧೯೫. ಪುರಾಣಪುರುಷನಾದ ಶಂಭುವನ್ನು ನಮಸ್ಕರಿಸುವೆನು. ನಿತ್ಯ ನಾದ ರುದ್ರನನ್ನು ನಮಸ್ಕರಿಸುವೆನು. ಸರ್ವಜ್ಞನಾದ ಶಿವನನ್ನು ನಮಿಸುವೆನು. ಮಹಾಮಹಿಮನಾದ ಶಿವನನ್ನು ನಮಿಸುವೆನು. ದುಃಖನಾಶಕನಾದ ಹರನನ್ನು ತಲೆಬಾಗಿ ನಮಸ್ಕರಿಸುವೆನು.

ನಮಾಮಿ ದೇವಂ ಪರಮವ್ಯಯಂ ತ-
ಮುಮಾಪತಿಂ ಲೋಕಗುರುಂ ನಮಾಮಿ ।
ನಮಾಮಿ ದಾರಿದ್ರ್ಯವಿದಾರಣಂ ತಂ
ನಮಾಮಿ ರೋಗಾಪಹರಂ ನಮಾಮಿ ॥ ೧೯೬ ॥

ನಮಾಮಿ ಕಲ್ಯಾಣಮಚಿಂತ್ಯರೂಪಂ
ನಮಾಮಿ ವಿಶ್ವೋದ್ಭವಬೀಜರೂಪಂ ।
ನಮಾಮಿ ವಿಶ್ವಸ್ಥಿತಿಕಾರಣಂ ತಂ
ನಮಾಮಿ ಸಂಹಾರಕರಂ ನಮಾಮಿ ॥ ೧೯೭ ॥

ನಮಾಮಿ ಗೌರೀಪ್ರಿಯಮವ್ಯಯಂ ತಂ
ನಮಾಮಿ ನಿತ್ಯಂ ಕ್ಷರಮಕ್ಷರಂ ತಂ ।
ನಮಾಮಿ ಚಿದ್ರೂಪಮಮೇಯಭಾವಂ
ತ್ರಿಲೋಚನಂ ತಂ ಶಿರಸಾ ನಮಾಮಿ ॥ ೧೯೮ ॥

---

೧೯೬. ಪರಮಾತ್ಮನೂ ಜ್ಞಾನಜ್ಯೋತಿಸ್ವರೂಪನೂ ಆದ ಶಿವನನ್ನು ನಮಸ್ಕರಿಸುವೆನು. ಲೋಕಗುರುವಾದ ಉಮಾಪತಿಯನ್ನು ನಮಿಸುವೆನು ದಾರಿದ್ರ್ಯವನ್ನು ಹೋಗಲಾಡಿಸುವ ಶಿವನನ್ನು ನಮಿಸುವೆನು. ರೋಗನಾಶಕನಾದ ಹರನನ್ನು ನಮಸ್ಕರಿಸುವೆನು.

೧೯೭. ಮಂಗಳರೂಪನೂ ಚಿಂತಿಸಲಸಾಧ್ಯವಾದ ಸ್ವರೂಪವುಳ್ಳವನೂ ಆದ ಶಿವನನ್ನು ನಮಸ್ಕರಿಸುವೆನು. ಜಗತ್ಕರ್ತನೂ ಜಗತ್ಪಾಲಕನೂ ಜಗತ್ಸಂಹಾರಕನೂ ಆದ ಪರಮೇಶ್ವರನನ್ನು ನಮಸ್ಕರಿಸುವೆನು.

೧೯೮. ಗೌರೀಪತಿಯೂ, ಜನ್ಮ ಮೊದಲಾದ ವಿಕಾರಗಳಿಲ್ಲದವನೂ ಆದ ಶಿವನನ್ನು ನಮಸ್ಕರಿಸುವೆನು. ಸ್ಥಿರಚರಾತ್ಮಕನಾದ ಮತ್ತು ನಿತ್ಯನಾದ ಹರನನ್ನು ನಮಸ್ಕರಿಸುವೆನು. ಜ್ಞಾನಸ್ವರೂಪನೂ ಮಹಾಮಹಿಮನೂ ಆದ ತ್ರಿಲೋಚನನ್ನು ನಮಸ್ಕರಿಸುವೆನು.

ನಮಾಮಿ ಕಾರುಣ್ಯಕರಂ ಭವಸ್ಯ
ಭಯಂಕರಂ ವಾಪಿ ಸದಾ ನಮಾಮಿ ।
ನಮಾಮಿ ದಾತಾರಮಭೀಪ್ಸಿತಾನಾಂ
ನಮಾಮಿ ಸೋಮೇಶಮುಮೇಶಮಾದೌ ॥ ೧೯೯ ॥

ನಮಾಮಿ ವೇದತ್ರಯಲೋಚನಂ ತಂ
ನಮಾಮಿ ಮೂರ್ತಿತ್ರಯವರ್ಜಿತಂ ತಂ ।
ನಮಾಮಿ ಪುಣ್ಯಂ ಸದಸದ್ವ್ಯತೀತಂ
ನಮಾಮಿ ತಂ ಪಾಪಹರಂ ನಮಾಮಿ ॥ ೨೦೦ ॥

ನಮಾಮಿ ವಿಶ್ವಸ್ಯ ಹಿತೇ ರತಂ ತಂ
ನಮಾಮಿ ರೂಪಾಣಿ ಬಹೂನಿ ಧತ್ತೇ ।
ಯೋ ವಿಶ್ವಗೋಪ್ತಾ ಸದಸತ್ಪ್ರಣೇತಾ
ನಮಾಮಿ ತಂ ವಿಶ್ವಪತಿಂ ನಮಾಮಿ ॥ ೨೦೧ ॥

---

೧೯೯. ಸಜ್ಜನರಿಗೆ ಕೃಪೆದೋರುವವನೂ ದುಷ್ಟರಿಗೆ ಭಯದೋರುವವನೂ ಆದ ಶಿವನನ್ನು ನಮಸ್ಕರಿಸುವೆನು. ಇಷ್ಟಾರ್ಥಗಳೆಲ್ಲವನ್ನೂ ಕೊಡುವ ಚಂದ್ರಶೇಖರನೂ ಗೌರೀಕಾಂತನೂ ಆದ ಶಿವನಿಗೆ ನಮಸ್ಕಾರವು.

೨೦೦. ಶಿವನಿಗೆ ಮೂರು ವೇದಗಳೇ ಕಣ್ಣು. ಬ್ರಹ್ಮವಿಷ್ಣುರುದ್ರರಿಗಿಂತಲೂ ಉತ್ಕೃಷ್ಟವಾದ ಪರಮಾತ್ಮಸ್ವರೂಪನವನು. ಜಡಜಗತ್ತಿಗಿಂತಲೂ ಭಿನ್ನನಾದವನು, ಪಾಪನಾಶಕನು. ಇಂತಹ ಹರನನ್ನು ನಮಸ್ಕರಿಸುವೆನು.

೨೦೧. ಜಗತ್ತನ್ನು ರಕ್ಷಿಸಲು ನಾನಾ ರೂಪಗಳನ್ನು ಧರಿಸುವ ಶಿವನಿಗೆ ನಮಸ್ಕಾರವು. ಜಗತ್ತನ್ನು ಸೃಷ್ಟಿಸುವವನೂ ರಕ್ಷಿಸುವವನೂ ಆದ ಪರಮೇಶ್ವರನಿಗೆ ನಮಸ್ಕಾರವು.

ಯಜ್ಞೇಶ್ವರಂ ಸಂಪ್ರತಿ ಹವ್ಯಕವ್ಯಂ
ತಥಾ ಗತಿಂ ಲೋಕಸದಾಶಿವೋ ಯಃ ।
ಆರಾಧಿತೋ ಯಶ್ಚ ದದಾತಿ ಸರ್ವಂ
ನಮಾಮಿ ದಾನಪ್ರಿಯಮಿಷ್ಟದೇವಂ ॥ ೨೦೨ ॥

ನಮಾಮಿ ಸೋಮೇಶ್ವರಮಸ್ವತಂತ್ರ-
ಮುಮಾಪತಿಂ ತಂ ವಿಜಯಂ ನಮಾಮಿ ।
ನಮಾಮಿ ವಿಘ್ನೇಶ್ವರನಂದಿನಾಥಂ
ಪುತ್ರಪ್ರಿಯಂ ತಂ ಶಿರಸಾ ನಮಾಮಿ ॥ ೨೦೩ ॥

ನಮಾಮಿ ದೇವಂ ಭವದುಃಖಶೋಕ-
ವಿನಾಶನಂ ಚಂದ್ರಧರಂ ನಮಾಮಿ ।
ನಮಾಮಿ ಗಂಗಾಧರಮೀಶಮೀಡ್ಯ-
ಮುಮಾಧವಂ ದೇವವರಂ ನಮಾಮಿ ॥ ೨೦೪ ॥

---

೨೦೨. ಶಿವನು ಯಜ್ಞದ ಹವಿಸ್ಸ್ವರೂಪನು. ಜೀವಿಗಳ ಗತಿಯು. ಅವನನ್ನು ಆರಾಧಿಸಿದರೆ ಇಷ್ಟಾರ್ಥಗಳೆಲ್ಲವೂ ಸಿದ್ಧಿಸುವುವು. ಇಂತಹ ದಾನಶೀಲನಾದ ಸದಾಶಿವನನ್ನು ನಮಸ್ಕರಿಸುವೆನು.

೨೦೩. ಭಕ್ತಪರಾಧೀನನೂ ಚಂದ್ರಶೇಖರನೂ ಆದ ಉಮಾಪತಿಯನ್ನು ನಮಸ್ಕರಿಸುವೆನು. ಜಯಶಾಲಿಯೂ ಗಣೇಶನಂದಿಕೇಶ್ವರರ ಸ್ವಾಮಿಯೂ ಪುತ್ರವತ್ಸಲನೂ ಆದ ಪರಮೇಶ್ವರನನ್ನು ನಮಸ್ಕರಿಸುವೆನು.

೨೦೪. ಸಂಸಾರದ ದುಃಖಶೋಕಗಳನ್ನು ಹೋಗಲಾಡಿಸುವ ಚಂದ್ರಮೌಳಿಯನ್ನು ನಮಸ್ಕರಿಸುವೆನು. ಸರ್ವೋತ್ತಮನೂ ಗಂಗಾಧರನೂ ಮಹಾದೇವನೂ ಪಾರ್ವತೀಪ್ರಿಯನೂ ಆದ ಮಹೇಶ್ವರನನ್ನು ನಮಸ್ಕರಿಸುವೆನು.

ನಮಾಮ್ಯಜಾದೀಶಪುರಂದರಾದಿ-
ಸುರಾಸುರೈರರ್ಚಿತಪಾದಪದ್ಮಂ ।
ನಮಾಮಿ ದೇವೀಮುಖವಾದನಾನಾ-
ಮೀಕ್ಷಾರ್ಥಮಕ್ಷಿತ್ರಿತಯಂ ಯ ಐಚ್ಛತ್ ॥ ೨೦೫ ॥

ಪಂಚಾಮೃತೈರ್ಗಂಧಸುಧೂಪದೀಪೈ-
ರ್ವಿಚಿತ್ರಪುಷ್ಪೈರ್ವಿವಿಧೈಶ್ಚ ಮಂತ್ರೈಃ ।
ಅನ್ನಪ್ರಕಾರೈಃ ಸಕಲೋಪಚಾರೈಃ
ಸಂಪೂಜಿತಂ ಸೋಮಮಹಂ ನಮಾಮಿ ॥ ೨೦೬ ॥

॥ ಬ್ರಹ್ಮೋವಾಚ ॥

ತತಃ ಸ ಭಗವಾನಾಹ ರಾಮಂ ಶಂಭುಃ ಸಲಕ್ಷ್ಮಣಂ ।
ವರಾನ್ವೃಣೀಷ್ವ ಭದ್ರಂ ತೇ ರಾಮಃ ಪ್ರಾಹ ವೃಷಧ್ವಜಂ ॥ ೨೦೭ ॥

॥ ರಾಮ ಉವಾಚ ॥

ಸ್ತೋತ್ರೇಣಾನೇನ ಯೇ ಭಕ್ತ್ಯಾ ತೋಷ್ಯಂತಿ ತ್ವಾಂ ಸುರೋತ್ತಮ ।
ತೇಷಾಂ ಸರ್ವಾಣಿ ಕಾರ್ಯಾಣಿ ಸಿದ್ಧಿಂ ಯಾಂತು ಮಹೇಶ್ವರ ॥ ೨೦೮ ॥

---

೨೦೫. ಬ್ರಹ್ಮ ಇಂದ್ರ ಮೊದಲಾದ ದೇವಾಸುರರಿಂದ ಸೇವಿಸಲ್ಪಡುವ ಶಿವನನ್ನು ನಮಸ್ಕರಿಸುವೆನು. ಪಾರ್ವತೀದೇವಿಯ ಸುಂದರಮುಖದ ಸೌಂದರ್ಯವನ್ನು ನೋಡಲೋಸುಗವೇ ಮೂರು ಕಣ್ಣುಗಳನ್ನು ಪಡೆದಿರುವ ಶಿವನಿಗೆ ನಮಸ್ಕಾರವು.

೨೦೬. ಪಂಚಾಮೃತ ಗಂಧ ಧೂಪ ದೀಪ ಪುಷ್ಪ ನೈವೇದ್ಯ ಇವೇ ಮೊದಲಾದ ನಾನಾ ಉಪಚಾರಗಳಿಂದ ಪೂಜಿಸಲ್ಪಟ್ಟ ಚಂದ್ರಶೇಖರನನ್ನು ಭಕ್ತಿಯಿಂದ ನಮಸ್ಕರಿಸುವೆನು ಎಂದು ಬಹುವಿಧವಾಗಿ ಸ್ತೋತ್ರಮಾಡಿದನು.

೨೦೭. ಆಗ ಭಗವಾನ್ ಶಂಕರನು ಪ್ರಸನ್ನನಾಗಿ ಎಲೈ ರಾಮ, ನಿನಗೆ ಮಂಗಳವಾಗಲಿ. ಬೇಕಾದ ವರಗಳನ್ನು ಕೇಳು ಎಂದನು. ಆಗ ರಾಮನು,

೨೦೮. ಓ ಮಹಾದೇವ, ನಾನು ಮಾಡಿದ ಈ ನಿನ್ನ ಸ್ತೋತ್ರದಿಂದ ಯಾರು ನಿನ್ನನ್ನು ಸ್ತುತಿಸುವರೋ ಅವರ ಕಾರ್ಯಗಳೆಲ್ಲವೂ ಸಿದ್ಧಿಸಲಿ.

ಯೇಷಾಂ ಚ ಪಿತರಃ ಶಂಭೋ ಪತಿತಾ ನರಕಾರ್ಣವೇ ।
ತೇಷಾಂ ಪಿಂಡಾಪಿದಾನೇನ ಪ್ರೂತಾ ಯಾಂತು ತ್ರಿವಿಷ್ಟಪಂ ॥ ೨೦೯ ॥

ಜನ್ಮಪ್ರಭೃತಿ ಪಾಪಾನಿ ಮನೋವಾಕ್ಕಾಯಿಕಂ ತ್ವಘಂ ।
ಅತ್ರ ತು ಸ್ನಾನಮಾತ್ರೇಣ ತತ್ಸದ್ಯೋ ನಾಶಮಾಪ್ನುಯಾತ್ ॥ ೨೧೦ ॥

ಅತ್ರ ಯೋ ಭಕ್ತಿತಃ ಶಂಭೋ ದದತ್ಯರ್ಥಿಭ್ಯ ಅಣ್ವಪಿ ।
ಸರ್ವಂ ತದಕ್ಷಯಂ ಶಂಭೋ ದಾತೄಣಾಂ ಫಲಕೃದ್ಭವೇತ್ ॥ ೨೧೧ ॥

॥ ಬ್ರಹ್ಮೋವಾಚ ॥

ಏವಮಸ್ತ್ವಿತಿ ತಂ ರಾಮಂ ಶಂಕರೋ ಹೃಷಿತೋಽಬ್ರವೀತ್ ।
ಗತೇ ತಸ್ಮಿನ್ಸುರಶ್ರೇಷ್ಠೇ ರಾಮೋಽಪ್ಯನುಚರೈಃ ಸಹ ॥ ೨೧೨ ॥

ಗೌತಮೀ ಯತ್ರ ಚೋತ್ಪನ್ನಾ ಶನೈಸ್ತಂ ದೇಶಮಭ್ಯಗಾತ್ ।
ತತಃ ಪ್ರಭೃತಿ ತತ್ತೀರ್ಥಂ ರಾಮತೀರ್ಥಮುದಾಹೃತಂ ॥ ೨೧೩ ॥

---

೨೦೯. ಈ ತೀರ್ಥದಲ್ಲಿ ಪಿಂಡಪ್ರದಾನವನ್ನು ಮಾಡಿದವರ ಪಿತೃಗಳೆಲ್ಲರೂ ನರಕದಿಂದ ಉದ್ಧೃತರಾಗಿ ಪವಿತ್ರರಾಗಿ ಸ್ವರ್ಗವನ್ನು ಪಡೆಯಲಿ.

೨೧೦. ಜನ್ಮಪ್ರಭೃತಿ ಮಾಡಿದ ಮಾನಸಿಕವಾಚಿಕಕಾಯಕವೆಂಬ ಮೂರುವಿಧವಾದ ಪಾಪಗಳೆಲ್ಲವೂ ಈ ತೀರ್ಥದಲ್ಲಿ ಸ್ನಾನಮಾಡಿದ ಮಾತ್ರದಿಂದ ನಾಶವಾಗಲಿ.

೨೧೧. ಈ ತೀರ್ಥದಲ್ಲಿ ಯಾಚಕರಿಗೆ ದಾನಕೊಟ್ಟರೆ ಅಕ್ಷಯವಾದಂತಹ ಫಲವು ಲಭಿಸಲಿ. ಈ ರೀತಿಯಾದ ವರಗಳನ್ನು ಅನುಗ್ರಹಿಸಬೇಕೆಂದು ಕೇಳಿಕೊಂಡನು.

೨೧೨. ಹಾಗೆಯೇ ಆಗಲೆಂದು ಅನುಗ್ರಹಿಸಿ ಶಂಕರನು ಅಂತರ್ಧಾನನಾದನು. ಆಮೇಲೆ ರಾಮನು ಸೀತಾಲಕ್ಷ್ಮಣರೊಡನೆ ಗೌತಮೀನದಿಯ ಉತ್ಪತ್ತಿಸ್ಥಾನಕ್ಕೆ ತೆರಳಿದನು.

೨೧೩-೨೧೪. ಅದುಮೊದಲುಗೊಂಡು ಆ ತೀರ್ಥವು ರಾಮತೀರ್ಥವೆಂದು ಹೆಸರಾಯಿತು. ದಯಾಳುವಾದ ಲಕ್ಷ್ಮಣನ ಕೈಯಿಂದ ಬಾಣವು ಬಿದ್ದ

ದಯಾಲೋಽಪತತ್ತತ್ರ ಲಕ್ಷ್ಮಣಸ್ಯ ಕರಾಚ್ಛರಃ ।
ತದ್ಬಾಣತೀರ್ಥಮಭವತ್ಸರ್ವಾಪದ್ವಿನಿವಾರಣಂ ॥ ೨೧೪ ॥

ಯತ್ರ ಸೌಮಿತ್ರಿಣಾ ಸ್ನಾನಂ ಶಂಕರಸ್ಯಾರ್ಚನಂ ಕೃತಂ ।
ತತ್ತೀರ್ಥಂ ಲಕ್ಷ್ಮಣಂ ಜಾತಂ ತಥಾ ಸೀತಾಸಮುದ್ಭವಂ ॥ ೨೧೫ ॥

ನಾನಾವಿಧಾಶೇಷಪಾಪಸಂಘನಿರ್ಮೂಲನಕ್ಷಮಂ ।
ಯದಂಘ್ರಿಸಂಗಾದಭವದ್ಗಂಗಾ ತ್ರೈಲೋಕ್ಯಪಾವನೀ ॥ ೨೧೬ ॥

ಸ ಯತ್ರ ಸ್ನಾನಮಕರೋತ್ತದ್ವೈಶಿಷ್ಟ್ಯಂ ಕಿಮುಚ್ಯತೇ ।
ತದ್ರಾಮತೀರ್ಥಸದೃಶಂ ತೀರ್ಥಂ ಕ್ವಾಪಿ ನ ವಿದ್ಯತೇ ॥ ೨೧೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ರಾಮತೀರ್ಥಾದಿತೀರ್ಥವರ್ಣನಂ ನಾಮ
ತ್ರಯೋವಿಂಶಾಧಿಕಶತತಮೋಽಧ್ಯಾಯಃ

ಸ್ಥಳವು ಬಾಣತೀರ್ಥವೆಂದು ಪ್ರಸಿದ್ಧವಾಯಿತು. ಆ ತೀರ್ಥದಲ್ಲಿ ಸ್ನಾನಮಾಡಿದರೆ ಆಪತ್ತುಗಳೆಲ್ಲವೂ ನಾಶವಾಗುವುವು.

೨೧೫. ಲಕ್ಷ್ಮಣನು ಸ್ನಾನಮಾಡಿ ಶಂಕರನನ್ನರ್ಚಿಸಿದ ತೀರ್ಥವು ಲಕ್ಷ್ಮಣತೀರ್ಥವೆಂದೂ, ಸೀತೆಯು ಸ್ನಾನಮಾಡಿ ಅರ್ಚಿಸಿದ ತೀರ್ಥವು ಸೀತಾ ತೀರ್ಥವೆಂದೂ ಪ್ರಸಿದ್ಧವಾದುವು. ಆ ತೀರ್ಥಗಳಲ್ಲಿ ಸ್ನಾನಮಾಡಿದರೆ ಪಾಪ ಗಳೆಲ್ಲವೂ ಸಂಪೂರ್ಣವಾಗಿ ನಾಶವಾಗುವುವು.

೨೧೬-೨೧೭. ನಾರಾಯಣಸ್ವರೂಪಿಯಾದ ರಾಮನ ಪಾದಗಳ ಸಂಬಂಧದಿಂದಲೇ ಗಂಗಾನದಿಯು ಲೋಕಪವಿತ್ರಳಾದಳು. ಇಂತಹ ರಾಮನು ಸ್ನಾನ ಮಾಡಿದ ರಾಮತೀರ್ಥದ ಮಹಿಮೆಯನ್ನು ಮತ್ತೆ ಹೇಳಬೇಕಾಗಿಲ್ಲ. ರಾಮ ತೀರ್ಥದಂತಹ ತೀರ್ಥವು ಎಲ್ಲಿಯೂ ಇಲ್ಲ.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ರಾಮತೀರ್ಥವೇ ಮೊದಲಾದ ಅನೇಕ ತೀರ್ಥಗಳ ವರ್ಣನವೆಂಬ ನೂರಿಪ್ಪತ್ತಮೂರನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಐವತ್ತನಾಲ್ಕನೆಯ ಅಧ್ಯಾಯವು

ಬ್ರಹ್ಮಪುರಾಣದಲ್ಲಿ ಮೂರನೆಯಭಾಗವು ಮುಗಿದುದು

ಮಂಗಳಂ